ವಸಂತ ಸಂಚಿಕೆ

ಕಸ್ತೂರಿ

ಏಪ್ರಿಲ್ ೧೯೭೩





B. Dattaram/GSF-6A-KAN

ಕಸ್ತೂರಿ

ಪ್ರಕಟನೆ :
ಪ್ರತಿ ತಿಂಗಳ ೧ ನೇ ದಿನಾಂಕ

ಸಂಪಾದಕರು :
ರಂಗನಾಥ ದಿವಾಕರ

ಸಹಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್ ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಚಿತ್ರ :
ಬಾದಾಮಿ ಮೇಣಬಸ್ತಿಯ
'ಗಂಧರ್ವ'ರನ್ನು ಅನುಸರಿಸಿ...
ಕೆ. ಬಿ. ಕುಲಕರ್ಣಿ

ಚಂದಾ ದರ

೩ ವರ್ಷ (ಅಂಚೆ ಸೇರಿ)		ರೂ. ೨೮-೦೦
೨ ವರ್ಷ	,,	ರೂ. ೨೦-೦೦
೧ ವರ್ಷ	,,	ರೂ. ೧೧-೦೦
ಅರ್ಧ ವರ್ಷ	,,	ರೂ. ೬-೦೦

KASTURI April 1973

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಬಗ್ಗೆ ಬೇಗ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯವಾದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. "ಇದುವೇ ಜೀವ" ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು ಅಥವಾ ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ, "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ, ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ "ಕಸ್ತೂರಿ" ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಸಹಚಿಂತನ

ನಿಮ್ಮ ಇತ್ತೀಚಿನ ಸಂಚಿಕೆಗಳಲ್ಲಿ 'ಕಿರಿಯರ ಕಸ್ತೂರಿ' ಕೈಬಿಟ್ಟುಹೋಗಿರುವುದು ಕಂಡುಬರುತ್ತದೆ. ಅದೇ ಈ ವಿಭಾಗವನ್ನು ಮತ್ತೆ ಪ್ರಾರಂಭಿಸಿ ಆಬಾಲವೃದ್ಧರು ಓದಿ ನಲಿಯಲು ಏಕೆ ಅವಕಾಶ ಮಾಡಿಕೊಡಬಾರದು ?

ಕಂಪ್ಲಿ--ಕೋಟೆ --**ಕೃಷ್ಣಮೂರ್ತಿ ಪುರೋಹಿತ**

ಮಂಗಳನಲ್ಲಿ ಏನಿಲ್ಲ ? ಎರಡನೆಯ ಪೃಥ್ವಿಯೇ ಅವನು. ಪೃಥ್ವಿಯ ಇತಿಹಾಸದ ಮಹಾಶೋಧನೆಗೆ ಬೇಕಾದ ಸಕಲ ಸಲಕರಣೆಗಳೂ ಅವನಲ್ಲಿವೆ. ಈ ವಿಷಯ ಮಾರ್ಚ್ ಸಂಚಿಕೆಯಲ್ಲಿ ಶ್ರೀ ಶ್ರೀಕಾಂತರಿಂದ ಕುತೂಹಲಕಾರಿಯಾಗಿ ಉಲ್ಲೇಖವಾಗಿದೆ. ಅಂಗಾರಕನಲ್ಲಿ ಅಂಗಾರಾಮ್ಲವೇ ಹೆಚ್ಚು ಪ್ರಮಾಣದಲ್ಲಿರುವ ಪ್ರಯುಕ್ತ ಪ್ರೊ. ಕಾರ್ಲ್ ಸಗಾನ್‌ರ 'ಫೋಟೋಸಿಂಥೆಸಿಸ್' ಕ್ರಿಯೆಯನ್ನು ['ಕಸ್ತೂರಿ', ನವಂಬರ್ ೭೧] ಈಗಲೇ ಮಂಗಳನಲ್ಲಿ ಅಳವಡಿಸುವುದರಿಂದ ಮನುಷ್ಯ ಮಂಗಳನಲ್ಲಿ ವಾಸಿಸಲು ಕೆಲವೇ ಶತಕಗಳನ್ನು ಕಾಯಬೇಕಾದೀತು.

ಅಂದ ಹಾಗೆ, ದ್ವಿತೀಯ ಶತಕವನ್ನು ದಾಟುತ್ತಿರುವ 'ಕಸ್ತೂರಿ'ಗೆ ಶುಭ ಕೋರುತ್ತೇನೆ. 'ಕಸ್ತೂರಿ' ಸರ್ವಗ್ರಾಹಿಯಾಗಲಿ.

ಕೂಡ್ಲಿಗಿ —**ಯು. ಅನಂತೇಶರಾವ್**

[ಮಂಗಳನಲ್ಲಿ ಅಂಗಾರಾಮ್ಲ ಇದೆಯಾದರೂ ಫೋಟೋಸಿಂಥೆಸಿಸ್ಸಿನಿಂದ ಅದರಲ್ಲಿರುವ ಆಮ್ಲಜನಕವನ್ನು ಬಿಡುಗಡೆ ಮಾಡಿದರೆ ಅದು ಮನುಷ್ಯನಿಗೆ ಉಸಿರಾಡಲು ಸಾಲುವುದು ಕಷ್ಟ. —ಸಂ.]

ಮಾರ್ಚ್ 'ಕಸ್ತೂರಿ'ಯಲ್ಲಿ ಶ್ರೀ ಶ್ರೀನಿವಾಸ ಹಾವನೂರರ ಸಂಗ್ರಹ 'ಪತ್ನೀಪರೀಕ್ಷೆ' ಹೃದಯಂಗಮವಾಗಿದೆ. ಅದೇ ಸಂಚಿಕೆಯಲ್ಲಿಯ ಕೀಥ್ ಡಿಗ್ಲ್‌ರ ಅನುಭವ 'ಮಗು...ಮಗು...ಮಗು' ಕೂಡ ಮನನೀಯವಾಗಿದೆ.

ಬೆಳಗಾಂವಿ —**ರಾಘವೇಂದ್ರ ಮುರಗೋಡ**

ಗರ್ಭಪಾತ ಸಮಸ್ಯೆಗಳ ಬಗ್ಗೆ ಪೂರ್ಣ ಮಾಹಿತಿ ಕೊಟ್ಟ ಡಾ. ಶ್ರೀಮತಿ ಎಸ್. ಎಂ. ಕಲ್ಯಾಣಪುರರಿಗೆ ಧನ್ಯವಾದಗಳು. 'ಪತ್ನೀಪರೀಕ್ಷೆ'ಯಂತಹ ಸವಕಲು ಶೈಲಿಯ, ನೀರಸ ಪುಸ್ತಕ ವಿಭಾಗದಿಂದ ಕೂಡಿದ್ದರೂ ಮಾರ್ಚ್ 'ಕಸ್ತೂರಿ' ಶ್ರೀ ಬದರೀನಾಥರ ಲೇಖನ 'ಲೈಫ್ ಕಣ್ಣು ಮುಚ್ಚಿತು' ಹಾಗೂ 'ಅಭಯ' ಕಥೆಗಳಿಂದ ತನ್ನ ಮಟ್ಟವನ್ನು ಳಿಸಿಕೊಂಡಿದೆ.

ಬೆಂಗಳೂರು—೨ —**ಬಾಸೂರು ಶ್ರೀ. ವೆಂಕಟೇಶರಾವ್**

'ಕಸ್ತೂರಿಯ' ಫೆಬ್ರುವರಿ ಸಂಚಿಕೆಯಲ್ಲಿ ಸುಲೋಚನಾ ಕೋಟೂರರವರು ಶ್ರೀ ತಲಗೇರಿ ವೆಂಕಟರಾಯರ ಬಗ್ಗೆ ಬರೆದ ಲೇಖನವನ್ನು ಓದಿ ಬಹಳ ಮೆಚ್ಚಿದೆನು. ಆದರೆ ಆ ಲೇಖದಲ್ಲು ಳಿದ ಒಂದೆರಡು ತಪ್ಪುಗಳಿವು: (೧) ಶ್ರೀ ತಲಗೇರಿ ಕೆಲಸಕ್ಕಿದ್ದ ಕಂಪನಿಯ ಹೆಸರು ಕಿಲ್ಲಿಕ್ ನಿಕ್ಸನ್ ಶಿಪ್ಪಿಂಗ್ ಕೋರ್ಪೊರೇಶನ್ ಅಲ್ಲ, ಕಿಲ್ಲಿಕ್—ನಿಕ್ಸನ್ ಎಂಡ್ ಕಂಪನಿ ಲಿಮಿಟೆಡ್-ರವರ ಶಿಪ್ಪಿಂಗ್ ವಿಭಾಗ. (೨) ಅವರು ಬರೆದ ಕೊಂಕಣಿ ನಾಟಕ 'ಪ್ರೀತಿಹಿ ಪೂರ್ವಜನ್ಮಾಚಿ' ಅಂತ ಓದಬೇಕು.

ಮುಂಬಯಿ-೬೨ —**ಅಂಬಾದಾಸ ಎಂ. ಚಕ್ರಮನೆ**

'ಶಿಕ್ಷಣವನ್ನು ಶಿಕ್ಷಕನಿಗೇ ಬಿಡಿ ಲೇಖನದ' ವಿಚಾರದಲ್ಲಿ ಮಾರ್ಚ್ 'ಕಸ್ತೂರಿ'ಯಲ್ಲಿ ಬಂದ ಸಂದೇಹಗಳ ಕುರಿತು :

ಸಂವಿಧಾನದ ಪ್ರಕಾರ ಕಲಿಯುವ ಮತ್ತು ಕಲಿಸುವ ಹಕ್ಕು ಮೂಲಭೂತವಾದದ್ದಾದರೂ ಕಡ್ಡಾಯ ಶಿಕ್ಷಣದ ಅವಧಿಯಲ್ಲಿದನ್ನು ಮೊಟಕುಗೊಳಿಸಲಾಗಿದೆ. ೭ರಿಂದ ೧೧ರ ವರೆಗಿನ ವಯಸ್ಸಿನ ಪ್ರತಿ ಮಗುವನ್ನು ಸರಕಾರದ ಅಥವಾ ಅದರ ಮನ್ನಣೆ ಪಡೆದ ಶಾಲೆಗೇ ಕಳಿಸಬೇಕು. ೧೧ ಮಿಕ್ಕಿದ ಮಗುವಿಗೆ ಮಾತ್ರ ಯಾರೂ, ಹೇಗೂ, ಏನೂ, ಎಲ್ಲಿಯೂ ಕಲಿಸಬಹುದು. ಸರಕಾರಮನ್ನಿತ ಶಾಲೆಗಳಲ್ಲಿ ಕಲಿತು SSLCಗೆ ಕಟ್ಟುವ ವಿದ್ಯಾರ್ಥಿ ಸಾಮಾನ್ಯತಃ ೧೫—೧೬ ವರ್ಷದವನಿರುತ್ತಾನೆ. ಆದರೆ ಖಾಸಗಿಯಾಗಿ

ಕಲಿತ ವಿದ್ಯಾರ್ಥಿ ೧೮ ತುಂಬಿದ ನಂತರವೇ ಈ ಪರೀಕ್ಷೆಗೆ ಅರ್ಹನಾಗುತ್ತಾನೆ. ಶಿಕ್ಷಕನಿಗೆ ಮನ್ನಣೆ ಕೊಡುವುದರಿಂದ ಈ ಅಸಮಾನತೆ ದೂರವಾಗಿ ಸ್ವತಂತ್ರ ಶಿಕ್ಷಣ ಮತ್ತು ಸ್ವಾತಂತ್ರ್ಯಕ್ಕಾಗಿ ಶಿಕ್ಷಣ ಆಕರ್ಷಕವಾಗುವುದು.

ಶಿಕ್ಷಣದಲ್ಲಿ ಏಕರೂಪತೆ ಅಂದರೇನು? ಸ್ವಾತಂತ್ರ್ಯ ಹೆಚ್ಚಾದಷ್ಟೂ ವೈವಿಧ್ಯ ಅನಿವಾರ್ಯ; ಏಕರೂಪತೆ ಹೆಚ್ಚಾದಷ್ಟೂ ಸ್ವಾತಂತ್ರ್ಯಕ್ಕೆ ಗ್ರಹಣ ಹೆಚ್ಚು. ವಿಷಯ ಜ್ಞಾನದ ಮಟ್ಟದಲ್ಲಿ ಏಕರೂಪತೆಯೆಂದಾದರೆ ಮನ್ನಣೆ ಪಡೆದ ಪರೀಕ್ಷೆಗಳು ಅದನ್ನು ಸಾಧಿಸಲು ಸಮರ್ಥವಿವೆ. ಈ ಸಾಮರ್ಥ್ಯವನ್ನು ಹೆಚ್ಚಿಸಲು ಮೌಲ್ಯಮಾಪನ ವಿಧಿವಿಧಾನಗಳಲ್ಲಿ ಸಂಶೋಧನೆ, ಪ್ರಯೋಗ ನಡೆಯಬೇಕು.

ಒಬ್ಬನೇ ಶಿಕ್ಷಕ ಮಾಧ್ಯಮಿಕ ಶಿಕ್ಷಣದ ಪರೀಕ್ಷೆಯ ಎಲ್ಲ ವಿಷಯಗಳನ್ನು ಕಲಿಸಲಿಕ್ಕಾಗದೆಂಬ ವಿಚಾರ: ಮಾಧ್ಯಮಿಕ ಶಿಕ್ಷಣದ ಬೌದ್ಧಿಕ ಗುರಿಯನ್ನು, (೧) ದಿನಪತ್ರಿಕೆಯನ್ನೋದಿ ಬಹು ಮಟ್ಟಿಗೆ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ, ಮತ್ತು (೨) ಕೆಲವೇ ವಿಷಯಗಳಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಅರ್ಹತೆ ಸಂಪಾದಿಸುವುದು ಎಂದು ಹೇಳಬಹುದು. ಈಗ ಹತ್ತು ವರ್ಷಗಳ ಶಿಕ್ಷಣವು ಮೊದಲ ಗುರಿಯನ್ನು ಸಾಧಿಸಲೆತ್ನಿಸುತ್ತಿದ್ದರೆ ಜ್ಯೂನಿಯರ್ ಕಾಲೇಜುಗಳು ಎರಡನೆಯದನ್ನು ಸಾಧಿಸಲು ಪ್ರಯತ್ನಿಸುತ್ತಿವೆ. ಸಾಮಾನ್ಯ ಜ್ಞಾನವಿರುವವರಿಗೇ ಶಿಕ್ಷಕರೆಂದು ಮನ್ನಣೆ ದೊರೆಯುವುದರಿಂದಲೂ ಶಿಕ್ಷಕರೂ ಸಹಕರಿಸುವುದರಿಂದಲೂ ಈ ಭೀತಿ ಶಾಂತವಾಗಬೇಕು.

ಶುಲ್ಕ ಕೊಡಲಾರದವರಿಗೆ ಸರಕಾರದಿಂದ ಪರಮಾವಧಿ ಸವಲತ್ತುಗಳಿರುವ ಶಾಲೆಗಳಿದ್ದೇ ಇವೆ. ಸ್ವತಂತ್ರವಾಗಿ ಕಲಿಸಬೇಕೆಂಬುವವರಲ್ಲಿ ಕೆಲವರಾದರೂ ಆತ್ಮತೃಪ್ತಿಗಾಗಿ ಕಲಿಸುವವರಿರುತ್ತಾರೆ. ಅವರು ಶುಲ್ಕದ ಕಡೆ ಗಮನವೀಯದೇ ಉತ್ತಮ ಶಿಷ್ಯವರ್ಗ ಪಡೆಯಲು, ನಿರ್ಮಿಸಲು ಯತ್ನಿಸುವರು.

ಸ್ವಾತಂತ್ರ್ಯದ ರಕ್ಷಣೆ ಮತ್ತು ಪೋಷಣೆ ಮಾಡಬಲ್ಲ ಈ ಯೋಜನೆಯನ್ನು 'ರಾಮರಾಜ್ಯ'ದಂತೆ ಕನಸಿನ ಮಂಡಿಗೆ ಆಗಗೊಡದಿರುವುದು ತತ್ತ್ವನಿಷ್ಠ ಶಿಕ್ಷಕರಿಗೊಂದು ಆಹ್ವಾನ. ಅದನ್ನವರು ಸ್ವೀಕರಿಸಬೇಕು; ಸ್ವೀಕರಿಸುವರು—ಅನಿವಾರ್ಯವಾಗಿ; ಜಯಿಸುವರು—ಸಮಾಜದ ಪೋಷಣೆಯಿಂದ.

ಬೌದ್ಧಿಕವಾಗಿಯೂ ದೈಹಿಕವಾಗಿಯೂ ಸಮಾನರಾದ ಶಿಷ್ಯರು ದುರ್ಲಭ. ವಿಚಾರ ಮಂಥನವು ಉತ್ತಮ ಶಿಕ್ಷಣದ ಅನಿವಾರ್ಯ ಅಂಗ. ಇದು ಫಲಪ್ರದವಾಗಬೇಕಾದರೆ ತಕ್ಕ ಮಟ್ಟಿಗೆ ಅಸಮಾನತೆಯಿರುವ ಹತ್ತಿಪ್ಪತ್ತು ಜನರ ಮೇಳ ಒಳ್ಳೆಯದೆಂದು ಈ ವಿಚಾರದಲ್ಲಿ ಸಂಶೋಧನೆ ನಡೆಸಿದ ಮನೋವೈಜ್ಞಾನಿಕರ ಮತವಿದೆ.

ಈ ಅಸಮಾನತೆಯನ್ನು ಪ್ರಯತ್ನಪೂರ್ವಕ ತರಬೇಕೆಂಬುದನ್ನು 'ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ। ಪಾದಂ ಸಬ್ರಹ್ಮಚಾರಿಭ್ಯಃ ಪಾದಂ ಕಾಲಕ್ರಮೇಣ ಚ॥' ಎಂಬ ಸುಭಾಷಿತವು ಚೆನ್ನಾಗಿ ಸಂಗ್ರಹಿಸಿದೆ. ಶಿಷ್ಯಮೇಳದಲ್ಲಿ ಯಾವುದೊಂದು ಕಾಲಕ್ಕೆ, ಕೆಲವರು ಆಚಾರ್ಯರಿಂದಲೂ, ಕೆಲವರು ತಮ್ಮಷ್ಟಕ್ಕೆ, ಮತ್ತೆ ಕೆಲವರು ವಿಚಾರಮಂಥನದಿಂದ (ಸಬ್ರಹ್ಮಚಾರಿಭ್ಯಃ) ಕಲಿಯುತ್ತಿರುವರೆಂದು ಗ್ರಹಿಸಿದರೆ ಸುಮಾರು ೨೦ ಜನ ಶಿಷ್ಯರ ತಕ್ಕ ಮಟ್ಟಿಗೆ ಅಸಮಾನತೆಯಿರುವ ಮೇಳವು ಹದವಾದದ್ದೆಂದು ಗ್ರಹಿಸಲಾಗಿದೆ.

ವಿದ್ಯಾರ್ಥಿಗಳ ಇತರ ಪ್ರತಿಭೆಗಳಿಗೆ ರೂಪು ಕೊಡುವ ಕಾರ್ಯ ಇಂದಾದರೂ ಶಾಲೆಗಳಲ್ಲಿ ಸಮರ್ಪಕವಾಗಿ ನಡೆಯುತ್ತಿಲ್ಲ. ಶಿಕ್ಷಣಶಾಸ್ತ್ರ ಬಲ್ಲ, ಹವ್ಯಾಸಗಳಲ್ಲಿ ಆಸಕ್ತಿಯಿರುವ ಶಿಕ್ಷಕರು ಈ ಕಾರ್ಯವನ್ನು ಈಗಿನಕಿಂತ ದಕ್ಷವಾಗಿ ಮಾಡುವರೆಂದು ನಂಬಬಹುದು.

ಮುರೂರು —ನರಸಿಂಹ ಗುಡಿ

ತಿದ್ದುಪಡಿ: ಮಾರ್ಚ್ ಸಂಚಿಕೆಯಲ್ಲಿ ಬಂದ 'ದೊಡ್ಡವರ ಸಣ್ಣ ಕತೆ'ಗಳನ್ನು ಸಂಗ್ರಹಿಸಿದವರು ವಿ. ಎಸ್. ಜೋಶಿ ಎಂದಾಗಿದೆ. ಇದು ವಿ. ಏ. ಜೋಶಿ ಎಂದಿರಬೇಕಿತ್ತು. —ಸಂ.

ಸಂಚಿಕೆ : ೪ ವರ್ಷ : ೧೭



ಕಸ್ತೂರಿ

ಎಪ್ರಿಲ್ ೧೯೭೪

ಎಲ್ಲ ಇರುವುದು ಮನಸ್ಸಿನಲ್ಲಿ

ನಾವಿರುವುದು, ಆಡುವುದು, ಮಾಡುವುದು ಪ್ರತಿಯೊಂದಕ್ಕೂ ನಮ್ಮ ವಿಚಾರಗಳೇ ತಳಹದಿ. ಮನುಷ್ಯ ಅನಿಷ್ಟವನ್ನಾಡಿದರೆ, ಮಾಡಿದರೆ ಇಲ್ಲವೆ ಯೋಚಿಸಿದರೆ ಎತ್ತಿನ ಕಾಲ ಹಿಂದೆಯೋ ಉರುಳಿಬರುವ ಬಂಡಿಯ ಗಾಲಿಯಂತೆ ದುಃಖ ಬೆನ್ನ ಹಿಂದೆಯೆ ಬರುತ್ತದೆ.

ಅದರಂತೆಯೆ ಒಳಿತನ್ನು ನಾವು ನುಡಿದರೆ, ಯೋಚಿಸಿದರೆ; ನಾವು ಪರಿಶುದ್ಧ ಮನಸ್ಕರಾಗಿದ್ದರೆ ಆನಂದ ತಂತಾನೇ ಹಿಂಬಾಲಿಸುತ್ತದೆ.

"ಅವನು ನನ್ನನ್ನು ಬೈದ, ಹೊಡೆದ, ಸೋಲಿಸಿದ, ಸುಲಿದ,"— ಇಂಥ ಯೋಚನೆಗಳನ್ನು ತಲೆಯಲ್ಲಿ ತುಂಬಿಕೊಂಡವನ ಮನಸ್ಸು ದ್ವೇಷ ಭಾವನೆಯಿಂದ ತುಳುಕುತ್ತಿರುತ್ತದೆ. ಇಂಥ ಯೋಚನೆಗಳನ್ನು ತ್ಯಜಿಸಿದವನ ಮನಸ್ಸು ಪ್ರೇಮಕ್ಕೆ ಪಕ್ವವಾಗುತ್ತದೆ.

—ಧಮ್ಮಪದ

ಕಲ್ಯಾಣರಾಜ್ಯ ಕಲ್ಯಾಣ ತಂದೀತೇ?

ವಿಚಾರಿ

ಭಾರತ ಸಮಾಜವಾದವನ್ನು ರಾಷ್ಟ್ರದ ರಾಜಕೀಯ ಆರ್ಥಿಕ ಧ್ಯೇಯವನ್ನಾಗಿ ಸ್ವೀಕರಿಸಿದೆ. ಇದರಲ್ಲಿ ಅಪೂರ್ವವಾದದ್ದೇನೂ ಇಲ್ಲ. ಬಡತನದಲ್ಲಿ ನರಳುವ ಅಧಿಕಾರಾಂಶ ದೇಶಗಳಲ್ಲಿ ಜನತೆ ಸಮಾಜವಾದದ ಕಡೆ ಹೆಚ್ಚು ಆಕರ್ಷಿತರಾಗಿರುವುದು ಸಾಮಾನ್ಯವಾದ ಒಲವು.

ಆದರೆ ಇದು ಒಂದು ವಿರೋಧಾಭಾಸವೂ ಹೌದು. ಸಂಪತ್ತು ಧಾರಾಳವಾಗಿದ್ದು ಅದು ಕೆಲವೇ ಜನರ ಅಥವಾ ಕೆಲವೇ ವರ್ಗಗಳ ಕೈಯಲ್ಲಿ ಕೇಂದ್ರಿತವಾಗಿರಬಹುದಾದ ದೇಶಗಳಿಗಾಗಿ ನಿಜವಾಗಿ ಸಮಾಜವಾದ ತಲೆಯೆತ್ತಿದ್ದು. ಹೆಚ್ಚು ಸಮನಾಗಿ ಸಂಪತ್ತಿನ ಹಂಚಿಕೆಯಾದರೆ ಅದು ಬಹುಜನರನ್ನು ಸುಖಿಗಳನ್ನಾಗಿ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಸಂಪತ್ತು— ಅಂದರೆ ಉತ್ಪಾದನೆ— ಕಡಿಮೆಯಾಗಿರುವ ದೇಶಗಳಲ್ಲಿ ಸಮಾನವಾದ ಹಂಚಿಕೆಯೆಂದರೆ ಬಡತನವನ್ನು ಹಂಚಿದಂತೆಯೇ ಎಂಬುದನ್ನು ಹಿಂದಿನ ಪ್ರಧಾನಿ ಜವಾಹರಲಾಲ ನೆಹರು ಅವರೇ ಒಪ್ಪಿದ್ದರು. ಆದರೂ ಬಡದೇಶಗಳಲ್ಲಿ ತೀರ ದಾರಿದ್ರ್ಯದಲ್ಲಿರುವ ಅಧಿಕತರ ಜನರು ಶ್ರೀಮಂತಿಕೆಯಲ್ಲಿ ಲೋಲಾಡುವ ಅಲ್ಪಸಂಖ್ಯಾಕರನ್ನು ಕಂಡು ಉರಿದೇಳುವ ಸಂಭವ ತಕ್ಕಮಟ್ಟಿನ ಸುಖಜೀವನ ಮಾಡುವ ಅಧಿಕತರ ಜನರುಳ್ಳ ಸಂಪನ್ನ ದೇಶಗಳಲ್ಲಿ ಶ್ರೀಮಂತರ ಮೇಲೆ ಕಿಚ್ಚೇಳುವ ಸಂಭವಕ್ಕಿಂತಲೂ ಜಾಸ್ತಿ. ಆ ಬಡದೇಶದಲ್ಲಿ ಪ್ರಜಾಸತ್ತಾತ್ಮಕ- ಚುನಾಯಿತ- ಆಡಳಿತವಿದ್ದ ಪಕ್ಷದಲ್ಲಿ ಅಲ್ಲಿ ಸಮಾಜವಾದವನ್ನು ರಾಜಕೀಯಾರ್ಥಿಕ ಧ್ಯೇಯವನ್ನಾಗಿ ಸ್ವೀಕರಿಸುವುದು ರಾಜಕಾರಣಿಗಳಿಗೆ ಅಪರಿಹಾರ್ಯವಾಗಿ ಪರಿಣಮಿಸುತ್ತದೆ. ಭಾರತದಲ್ಲಿ ಆಗುತ್ತಿರುವುದು ಇದೇ, ಚುನಾವಣೆಗಳಲ್ಲಿ ಮತ ಗಳಿಸುವ ಸುಲಭೋಪಾಯ ಅದಾಗಿರುವುದರಿಂದ ಸಮಾಜವಾದವೆಂದರೇನೆಂದು ಅರಿಯದವರು ಕೂಡ ಈ ದೇಶದಲ್ಲಿ ಸಮಾಜವಾದಕ್ಕೆ ಬೆಂಬಲ ಕೊಡುತ್ತಾರೆ.

ಸಮಾಜವಾದದ ಸಿದ್ಧಾಂತಕ್ಕೆ ವಿಶೇಷ ನಿಗದಿತವಾಗಿರದಿದ್ದರೂ ಪ್ರಜಾಸತ್ತಾತ್ಮಕ ದೇಶಗಳಲ್ಲಿ ಅದರೊಡನೆ ಹೆಣೆಯಲ್ಪಟ್ಟಿರುವ ಕಲ್ಪನೆಯೆಂದರೆ ಕಲ್ಯಾಣರಾಜ್ಯದ್ದು. ಜನಸಾಮಾನ್ಯರ ಹಿತವನ್ನು ಸರಕಾರಗಳು ಸಾಧಿಸಬೇಕೆಂಬುದು ಸಾರ್ವತ್ರಿಕ ಸಿದ್ಧಾಂತವಾದರೂ ಕಲ್ಯಾಣರಾಜ್ಯದಲ್ಲಿ ಬಡವರ ಹೊಟ್ಟೆ ನೆತ್ತಿ ಬಟ್ಟೆಗಳ ಚಿಂತೆಯನ್ನಲ್ಲದೆ ಇತರ ಕಲ್ಯಾಣಕಾರ್ಯಗಳನ್ನೂ ಸರಕಾರ ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ. ಇದೂ ಬಡ ಪ್ರಜಾಸತ್ತಾತ್ಮಕ ದೇಶಗಳಲ್ಲಿ ರಾಜಕೀಯ ಅನಿವಾರ್ಯತೆಯೇ ಆಗಿದೆ. ಏಕೆಂದರೆ ಬಡವರಾದ ಜನಸಾಮಾನ್ಯರು ಸಮಾಜವಾದದ ಸಿದ್ಧಾಂತದ ತಾಂತ್ರಿಕತೆಯನ್ನು ಅರ್ಥಮಾಡಿಕೊಳ್ಳಲಾರರು. ಅವರು ಸಮಾಜವಾದದಿಂದ ತಮ್ಮ ದಿನ ನಿತ್ಯದ ಕಷ್ಟ ಕಾರ್ಪಣ್ಯಗಳು ಎಷ್ಟು ಪರಿಹಾರ ಹೊಂದುವವೆಂಬುದರಿಂದಲೇ ಅದರ ತೂಕ-ಒರಕ ಮಾಡುತ್ತಾರೆ.

ಆದರೂ ಈ ಕಲ್ಯಾಣಾತ್ಮಕ ಸಮಾಜವಾದಿ ಪ್ರಜಾಸತ್ತೆ ನಿಜವಾಗಿ ಎಷ್ಟು ಮಟ್ಟಿಗೆ ನಮ್ಮ ಹಿತವನ್ನು ಸಾಧಿಸಬಲ್ಲದು ? ಈ ಪ್ರಶ್ನೆಯನ್ನು ಹೆಚ್ಚು ಮಟ್ಟಿಗೆ ಯಾರೂ ಯೋಚಿಸಿದಂತಿಲ್ಲ; ಭಾರತವಿರಲಿ ಇನ್ನಾವ ದೇಶವೇ ಇರಲಿ, ಕೊನೆಗೆ ಜನಸಾಮಾನ್ಯರು ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಬೇಕಷ್ಟೇ. ಸ್ವಪ್ರಯತ್ನದಿಂದಲೇ ವ್ಯಕ್ತಿ ಉತ್ಕರ್ಷವನ್ನು ಸಾಧಿಸಬಲ್ಲ. ಧೈರ್ಯ, ಸಾಹಸ, ಸತತೋದ್ಯೋಗ, ಶ್ರಮ ಇವು ಕೊನೆಯಲ್ಲಿ ವ್ಯಕ್ತಿಯ ನಿಜವಾದ ಬಂಡವಾಳವಾಗಿವೆ. ಸ್ವಪ್ರತ್ಯಯದಿಂದ ಕೆಲಸ ಮಾಡುವುದು ಮಾತ್ರವೇ ಸಂಪತ್ತನ್ನು ಹುಟ್ಟಿಸಬಲ್ಲದು; ವ್ಯಕ್ತಿಯಿಂದ ಸಾಮೂಹಿಕ ಮಟ್ಟಕ್ಕೆ ಬರು

ವಾಗ ಮುಂದಾಳ್ತನದ ಅಗತ್ಯವುಂಟಾಗುತ್ತದೆ; ಆದರೂ ಮುಂದಾಳ್ತನ ಎಷ್ಟು ಚೆನ್ನಾಗಿದ್ದರೂ ಸ್ವಪ್ರತ್ಯಯ, ಶ್ರಮಪ್ರವೃತ್ತಿ ಇಲ್ಲದ ಜನರ ಮೇಲೆ ಮುಂದಾಳ್ತನ ಬೋರ್ಕಲ್ಲ ಮೇಲಿನ ಮಳೆಯಾಗಿ ಪರಿಣಮಿಸುತ್ತದೆ. ಇಂದು ಭಾರತದ ಉದ್ಧಾರಕ್ಕೆ ನಿಜವಾಗಿ ಬೇಕಾಗಿರುವುದು ಸ್ವಪ್ರೇರಣೆಯಿಂದ ಮೈಮುರಿಯ ದುಡಿಯುವುದು.

ಆದರೆ ಕಲ್ಯಾಣರಾಜ್ಯದ ನೆರಳಿನಲ್ಲಿ ಸ್ವಪ್ರೇರಣೆ— ದುಡಿತ ಇವೆರಡಕ್ಕೂ ಉತ್ಸಾಹ ಹುಟ್ಟುವುದು ಕಷ್ಟ. ಮೊದಲೇ ಶತಮಾನಗಳ ನಿರ್ವೀರ್ಯತೆಯಿಂದ ನಮ್ಮ ಜನ ಸ್ವಪ್ರತ್ಯಯ ಕಳೆದುಕೊಂಡವರು; ಮಾನಸಿಕ— ಶಾರೀರಿಕ ಆಲಸ್ಯವನ್ನು ಬೆಳೆಸಿಕೊಂಡವರು. ಕಲ್ಯಾಣ ರಾಜ್ಯದ ಕಲ್ಪನೆಯ ಪ್ರಚಾರದ ಫಲವಾಗಿ ತಮ್ಮ (ಜನತೆಯ) ಕಲ್ಯಾಣವನ್ನು ಮಾಡುವುದು ಸರಕಾರದ ಕೆಲಸ ಎಂಬ ಭಾವನೆ ಹಬ್ಬುತ್ತದೆ. ನಾವು ಕಲ್ಯಾಣದ ಕಡೆ ನಡೆದುಹೋಗುವ ಬದಲು ಅದೇ ನಮ್ಮ ಕಡೆ ನಡೆದುಬರಬೇಕೆಂದು ನಿರೀಕ್ಷಿಸುತ್ತೇವೆ.

ಈ ವ್ಯವಸ್ಥೆಯಲ್ಲಿ ಬಡವರು ದುರ್ಬಲ ವರ್ಗದವರು ಎನಿಸುವವರು ತಮ್ಮ ಬಡತನ, ದೌರ್ಬಲ್ಯಗಳ ದೆಸೆಯಿಂದಲೇ ತಮಗೆ ಕೆಲ ಹಕ್ಕು ಬಾಧ್ಯತೆಗಳು ಪ್ರಾಪ್ತವಾಗುತ್ತವೆಂದು ಭಾವಿಸುತ್ತಾರೆ. ನೌಕರಿಗಳಿಂದ ಹಿಡಿದು ಶಾಲಾ ಕಾಲೇಜು ಪರೀಕ್ಷೆಗಳವರೆಗೆ ಎಲ್ಲದರಲ್ಲಿಯೂ ತಮಗೆ ಹೆಚ್ಚಿನ ರಕ್ಷಣೆ ಬೇಕೆನ್ನುತ್ತಾರೆ. ತಮ್ಮ ಉದ್ಧಾರದಲ್ಲಿ ತಮ್ಮ ಕರ್ತವ್ಯವೇ ಮುಖ್ಯಾಂಶ ಎಂಬ ಸಂಗತಿ ಕಣ್ಮರೆಯಾಗುತ್ತದೆ. ನಮ್ಮ ದೇಶದಲ್ಲಿ ಹಿಂದಿನ ಕಾಲದಲ್ಲಿ ಭಿಕ್ಷುಕರು ಭಿಕ್ಷೆಯನ್ನು ಪಡೆಯುವ ಜನ್ಮಸಿದ್ಧ ಹಕ್ಕು ತಮಗಿದೆಯೆಂದು ಭಾವಿಸುತ್ತಿದ್ದರು. ಇಂದು ಕಲ್ಯಾಣರಾಜ್ಯದ ಕಲ್ಪನೆ ಈ ಭಾವನೆಯನ್ನು ಇಡೀ ಸಮಾಜಕ್ಕೇ ಹಬ್ಬಿಸುತ್ತಿಲ್ಲವೇ? ಇಲ್ಲದಿದ್ದರೆ ಸಾಹಿತಿಗಳಿಂದ ಹಿಡಿದು ರಾಜಕೀಯ ಸಂತ್ರಸ್ತರ ವರೆಗೆ ಎಲ್ಲರೂ ಸರಕಾರೀ ಕೃಪಾ ಛತ್ರವನ್ನು ಅಪೇಕ್ಷಿಸುವುದರ ಅರ್ಥವೇನು?

ಇದರ ಕೆಲ ಪರಿಣಾಮಗಳು ಈಗಾಗಲೇ ಸ್ಪಷ್ಟವಾಗಿ ವ್ಯಕ್ತವಾಗುತ್ತಿವೆ. ಸರಕಾರ ಎಲ್ಲವನ್ನೂ ಮಾಡಬೇಕೆಂದಮೇಲೆ ಅದು ಹೆಚ್ಚು ಹೆಚ್ಚು ಹಣವನ್ನು ಕರ ಕಂದಾಯಗಳ ಮೂಲಕ ಎತ್ತಬೇಕಾಗುತ್ತದೆ; ಹೆಚ್ಚು ಹೆಚ್ಚು ಅಧಿಕಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಸಮಾಜವಾದದ ಸಿದ್ಧಾಂತಗಳು ಅನುಕೂಲವನ್ನೊದಗಿಸುತ್ತವೆ. ಜನರು ಸರಕಾರದಿಂದ ಹೆಚ್ಚು ನಿರೀಕ್ಷಿಸಿದಷ್ಟೂ ಅದಕ್ಕೆ ಹೆಚ್ಚು ಅಧಿಕಾರವನ್ನು ಬಿಟ್ಟುಕೊಡಬೇಕಾಗುತ್ತದೆ. ಅಂದರೆ ಜನರ ಜೀವನದ ಎಲ್ಲಾ ಅಂಗಗಳ ಮೇಲೆ ಸರಕಾರದ ಹಿಡಿತ ಹೆಚ್ಚಾಗುತ್ತದೆ. ಸರಕಾರದ ಅಧಿಕಾರ ವೆಂದರೆ ರಾಜಕಾರಣಿಗಳ ಅಧಿಕಾರ, ಸರಕಾರಿ ನೌಕರರ ಅಧಿಕಾರ. ರಾಜಕಾರಣಿಗಳೇ ಇರಲಿ, ಸರಕಾರಿ ನೌಕರರೇ ಇರಲಿ, ಅಥವಾ ಇತರ "ಸೇವಕರೇ" ಇರಲಿ, ತಮ್ಮ ಪಾಲನ್ನು ತೆಗೆದುಕೊಳ್ಳದೆ ದೀರ್ಘಕಾಲ ಇಷ್ಟೆಲ್ಲ ಅಧಿಕಾರವನ್ನು ನಡೆಸಲಾರರು. ಈಗ ಆಗುತ್ತಿರುವುದೂ ಅದೇ.

ಈ ವರ್ಗ ತನ್ನ ಅಸ್ತಿತ್ವವನ್ನು ಅನಿವಾರ್ಯವಾಗಿ ಮಾಡಿಕೊಳ್ಳುವುದಕ್ಕಾಗಿ ಒಂದು ಜೇಡನ ಬಲೆಯನ್ನೇ ಹೆಣೆಯುತ್ತದೆ. ಜನರ ಸ್ವಪ್ರತ್ಯಯ ಕುಗ್ಗುವುದರಿಂದಲೇ ಈ ಸೇವಕವರ್ಗದ ಸ್ಥಾನ ಭದ್ರವಾಗುವುದರಿಂದ ಅದಕ್ಕೆ ಬೇಕಾಗುವುದನ್ನೆಲ್ಲಾ ಅವರು ಮಾಡುತ್ತಾರೆ. ನಾವು "ಪುನರ್ದರಿದ್ರಃ ಪುನರೇವ ಪಾಪೀ" ಆಗುತ್ತೇವೆ. ಜನರ ವಿಶಾಲವಾದ ಪರಿಶ್ರಮವಿಲ್ಲದೆ ನಿಜವಾಗಿ ಜನಕಲ್ಯಾಣ ಸಾಧ್ಯವಿಲ್ಲವಾದ್ದರಿಂದ "ಕಲ್ಯಾಣ" ಯೋಜನೆಗಳು ವ್ಯರ್ಥವಾಗುತ್ತವೆ. ಆದರೆ ನಮ್ಮ "ಸೇವಕರು" ಇದರಿಂದ ಹೆದರುವುದಿಲ್ಲ. ತಪ್ಪಿಗೆ ಯಾವುದಾದರೂ ಮುದಿ ಬಕರಾಗಳನ್ನು ಬಲಿ ಕೊಟ್ಟು ಸಮಾಜವಾದಿ ಕಲ್ಯಾಣರಾಜ್ಯವನ್ನು ಮುಂದುವರಿಸುತ್ತಾರೆ.

ಕಲ್ಯಾಣರಾಜ್ಯ ಸಮಾಜವಾದಗಳ ಈ ಫಲಗಳ ಬಗ್ಗೆ ಚಿಂತಿಸಬೇಕಾದ ಕಾಲ ಬಂದಿದೆ. ಈಗಾಗಲೇ ಈ ಕಲ್ಪನೆಗಳ ಹಿಂದೆ ಬಲವಾದ ಪಟ್ಟಭದ್ರ ಹಿತಾಸಕ್ತಿ ಬೆಳೆದುಬಿಟ್ಟಿದೆ. ಅದು ವಟವೃಕ್ಷವಾಗುವ ಮೊದಲು ಜನರಿಗೆ ಕಲ್ಯಾಣ ರಾಜ್ಯದ ಇತಿಮಿತಿಗಳ ಬಗ್ಗೆ ಸತ್ಯ ಹೇಳಲು ನಾವು ಸಿದ್ಧರಾಗಬೇಕಾಗಿದೆ. ಇಲ್ಲದಿದ್ದರೆ ಭಾರತದ ಜನತೆಯೆಂಬುದು ಆಂಬುಲನ್ಸನ್ನು ನಿರೀಕ್ಷಿಸುತ್ತಿರುವ ರೋಗಿಯಾಗಬಹುದು. ✲

ಆಂಧ್ರದಲ್ಲಿ ನಡೆದಿರುವುದೇನು?

ಮುರಲೀಧರ

ಸ್ವತಂತ್ರ ಭಾರತದಲ್ಲಿ ಆದ ರಾಜಕೀಯ ಚಳವಳಿಗಳೇ ಅನೇಕ ವೇಳೆ ತುಂಬಾ ವಿಚಿತ್ರವಾಗಿವೆ. ಅದರಲ್ಲಿಯೂ ಕಳೆದ ವರ್ಷಾಂತ್ಯದಿಂದ ಸತತವಾಗಿ ನಾಲ್ಕು ತಿಂಗಳು ಆಂಧ್ರ ಪ್ರದೇಶದಲ್ಲಿ ನಡೆದ ಮುಲ್ಕಿ ವಿರೋಧಿ ಮತ್ತು ಪ್ರತ್ಯೇಕಾಂಧ್ರ ಆಂದೋಲನ ಅರ್ಥವಾಗದಷ್ಟು ವಿಚಿತ್ರ ಮತ್ತು ಜಟಿಲವಾಗಿದೆ, ಇದರಲ್ಲಿ ಪ್ರಚಂಡ ಬಹುಮತದೊಡನೆ ಆರಿಸಿ ಬಂದ ಪಕ್ಷದಿಂದ ಸ್ಥಾಪಿಸಲ್ಪಟ್ಟ ಅಭೇದ್ಯವೆನಿಸಿದಂಥ ಒಂದು ಮಂತ್ರಿಮಂಡಲ ತಲೆ ಕೆಳಗಾಯಿತು; ರಕ್ತ ತರ್ಪಣ ಕೊಟ್ಟು ಅಸ್ತಿತ್ವಕ್ಕೆ ಬಂದಂಥಾ ಒಂದು ಭಾಷಾ ರಾಜ್ಯ ಒಡೆಯುವುದು ಅನಿವಾರ್ಯವೆನಿಸು ವಂಥ ಪರಿಸ್ಥಿತಿ ತಲೆಯೆತ್ತಿತು; ಈ ರಾಜಕೀಯ ಚಳವಳಿಯಲ್ಲಿ ಎನ್. ಜಿ. ಓ. ಗಳಿಂದಾರಂಭಿಸಿ ಗೆಜೆಟೆಡ್ ಅಧಿಕಾರಿಗಳು, ಆಸ್ಪತ್ರೆ ಡಾಕ್ಟರು ಗಳು, ವಿದ್ಯುತ್ ಸಂಸ್ಥೆ, ಮತ್ತು ಕಡೆಕಡೆಗೆ ನ್ಯಾಯಾಧೀಶರು ಕೂಡ ಸಂಪು ಹೂಡಿದ ಅಭೂತಪೂರ್ವ ಉದಾಹರಣೆಯೊಂದನ್ನು ಕಾಣುವಂತಾಯಿತು. ಆಂಧ್ರ ಪ್ರದೇಶದಲ್ಲಿ ಸಾರಿಗೆಯಿಂದಾರಂಭಿಸಿ ಸರಕಾರಿ ಕೆಲಸದ ವರೆಗೆ ಎಲ್ಲ ಸಾರ್ವಜನಿಕ ಸೇವೆಗಳೂ ಅಕ್ಷರಶಃ ನಿಂತುಹೋದವು. ಕಾನೂನು ಸುವ್ಯವಸ್ಥೆಗಳನ್ನು ಕಾಪಾಡುವ ರಾಜ್ಯಮಟ್ಟದ ವ್ಯವಸ್ಥೆ ಕುಸಿದು



ಬಿದ್ದು ಕೇಂದ್ರದ ಪೋಲೀಸ್ ಮತ್ತು ಮುಂದೆ ಸೈನ್ಯದ ನೆರವು ಬರಬೇಕಾಯಿತು. ಗಲಭೆಗಳಲ್ಲಿ ಡಜನ್‌ಗಟ್ಟಳೆ ಜನ ಪ್ರಾಣ ಕಳೆದುಕೊಂಡರು; ಅದಕ್ಕೂ ಹೆಚ್ಚು ಜನ ಗಾಯಗೊಂಡರು. ಆದ ಒಟ್ಟು ಆರ್ಥಿಕ ಹಾನಿ ಎಷ್ಟೆಂದು ಇನ್ನು ಅಂದಾಜು ಮಾಡಬೇಕಷ್ಟೇ. ಆದರೂ ಇಷ್ಟೆಲ್ಲ ಆದದ್ದೇಕೆ ಎಂದು ಆಂಧ್ರದ ಹೊರಗೆ ಹೆಚ್ಚು ಜನರಿಗೆ ಅರ್ಥವೇ ಆಗಿಲ್ಲ.

ಆಂಧ್ರದಲ್ಲಿ ನಡೆದದ್ದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅಲ್ಲಿನ ರಾಜಕೀಯ ಬಲಾಬಲಗಳನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ತೆಲುಗರು ಭಾಷೆಯ ಅಭಿಮಾನದಲ್ಲಿ ತಮಿಳರಷ್ಟು ಅತಿರೇಕದವರಲ್ಲದಿದ್ದರೂ ತಮ್ಮತನದ ಅರಿವುಳ್ಳವರು; ತಮಿಳರಷ್ಟಲ್ಲದಿದ್ದರೂ ಒಟ್ಟು ವಿಸ್ತರಣಶೀಲ ಇತಿಹಾಸವುಳ್ಳವರು; ಸಾಮಾನ್ಯವಾಗಿ ಧಾರ್ಮಿಕ ಮತ್ತು ಪರಭಾಷಾ ಸಹಿಷ್ಣುತೆಯ ಇತಿಹಾಸವುಳ್ಳದಾದರೂ ತೆಲುಗು ಸಮಾಜದಲ್ಲಿ ಬಲವಾದ ಜಾತಿಕಟ್ಟಿನ ಪರಂಪರೆ ಇದೆ. ಪ್ರಮುಖ ಜಾತಿ ರೆಡ್ಡಿಗಳದು. ಇವರು ಪ್ರಧಾನವಾಗಿ ರೈತರು. ಅನಂತರ ಪ್ರಬಲರಾದವರು ಕಮ್ಮೆಗಳು. ಇವರು, ವಿಶೇಷವಾಗಿ ಆಂಧ್ರದ ಕರಾವಳಿ (ಸರ್ಕಾರ) ಜಿಲ್ಲೆಗಳಲ್ಲಿ, ಪ್ರಬಲರಾದ ರೈತರು ಮತ್ತು ಈಗ ವ್ಯಾಪಾರೋದ್ಯಮಗಳಲ್ಲಿಯೂ ಮುಂದುವರಿದವರು. ಇವೆರಡೂ ಸಮಾಜಗಳು ಸಂಖ್ಯಾಬಲದಲ್ಲಿಯೂ ಧನಬಲದಲ್ಲಿಯೂ ಹೆಚ್ಚಳ ಹೊಂದಿದವಾಗಿದ್ದು ರಾಜಕಾರಣದ ಅನೇಕ ಪ್ರಶ್ನೆಗಳು ಈ ಜಾತಿಗಳೊಳಗಿನ ಸ್ಪರ್ಧೆಯಾಗಿ ಪರಿಣಮಿಸುವುದುಂಟು.


ಹಿನ್ನೆಲೆ

ಭಾರತದಲ್ಲಿ ಭಾಷಾರಾಜ್ಯಗಳ ಕಲ್ಪನೆ ಮೊದಲು ಹುಟ್ಟಿದ್ದೇ ತೆಲುಗರಲ್ಲಿ. ೧೯೧೧ ರಲ್ಲಿ ಪ್ರಥಮತಃ ಮೂಡಿದ ಈ ಕಲ್ಪನೆಗೆ ಬೇಗನೆ ರೆಕ್ಕೆ ಮೂಡಿ ಗುಂಟೂರಿನ ರಾಷ್ಟ್ರೀಯ ಚಳವಳಿಯ ನಾಯಕ ಕೊಂಡಾ ವೆಂಕಟಪ್ಪಯ್ಯನವರ ನೇತೃತ್ವದಲ್ಲಿ ಪ್ರತ್ಯೇಕ ತೆಲುಗು ಪ್ರಾಂತದ ಚಳವಳಿ ಬಲಗೊಂಡಿತು. ೧೯೧೭ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ತೆಲುಗು ಭಾಷಿಕ ಆಂಧ್ರ ಪ್ರಾಂತಕ್ಕೆ ತನ್ನ ಆಶೀರ್ವಾದವಿತ್ತಿತು.

ಆಗ ತೆಲುಗು ಮಾತಾಡುವ ಅಧಿಕಾಂಶ ಪ್ರದೇಶಗಳು ತಮಿಳು, ಮಲೆಯಾಳ, ಕನ್ನಡ

ಜಿಲ್ಲೆಗಳಿಂದ ಕೂಡಿದ ಮದ್ರಾಸ್ ಅಧಿಪತ್ಯಕ್ಕೆ ಸೇರಿದ್ದವು. ಆಂಧ್ರ ಪ್ರಾಂತ ಬೇರೆಯಾಗಬೇಕೆಂಬ ಚಳವಳಿಗೆ ಬೇಗ ಬಲ ಬಂದದ್ದು ಮದ್ರಾಸ್ ಅಧಿಪತ್ಯದ ಪೂರ್ವ ಕರಾವಳಿ ಜಿಲ್ಲೆಗಳಲ್ಲಿ. ಬ್ರಿಟಿಶ್ ಕಾಲದಲ್ಲಿ ಇಲ್ಲಿನ ಜನ ಸಾಕಷ್ಟು ವಿದ್ಯೆಯನ್ನು ಸಂಪಾದಿಸಿದ್ದರು. ಗೋದಾವರಿ, ಕೃಷ್ಣಾ, ಪೆನ್ನಾರ್ ನದಿಗಳ ಮುಖ ಪ್ರದೇಶಗಳು ಈ ಜಿಲ್ಲೆಗಳನ್ನು ಭತ್ತದ ಕಣಜವನ್ನಾಗಿಯೂ ಅಲ್ಲಿನ ರೈತರನ್ನು ನೀರಾವರಿ ಕೃಷಿಯಲ್ಲಿ ನಿಸ್ಸೀಮರನ್ನಾಗಿಯೂ ಮಾಡಿದ್ದವು. ಆದರೆ ಅವರಿಗಿಂತಲೂ ವಿದ್ಯೆಯಲ್ಲಿ ಮುಂದುವರಿದಿದ್ದ ತಮಿಳರು ಆಗಲೇ ಮದ್ರಾಸ್ ಆಡಳಿತದ ಮೇಲೆ ಹಿಡಿತವನ್ನು ಸಂಪಾದಿಸಿದುದರಿಂದ ಆಂಧ್ರದವರಿಗೆ ಹೋಳಿಗೆಯ ಪಾಲು ಸಾಕಷ್ಟು ಸಿಕ್ಕುತ್ತಿರಲಿಲ್ಲ. ಪ್ರತ್ಯೇಕ ಆಂಧ್ರಪ್ರಾಂತದ ಬೇಡಿಕೆಗೆ ಸುಶಿಕ್ಷಿತರಲ್ಲಿ ಬಲ ಬರಲು ಇದೂ ಕಾರಣವಾಗಿತ್ತು.

ಆಂಧ್ರವೈಭವವನ್ನು ಹೆಚ್ಚಿಸುವ ಆದರ್ಶ ಎಲ್ಲ ತೆಲುಗರಿಗೂ ಪ್ರಿಯವಾಗಿದ್ದರೂ ಸರ್ಕಾರ ಆಂಧ್ರರಿಗೆ ಇದರಲ್ಲಿದ್ದಷ್ಟು ಉತ್ಸಾಹ ಮದ್ರಾಸ್ ಅಧಿಪತ್ಯದ್ದೇ ತೆಲುಗು ಜಿಲ್ಲೆಗಳಾದ, "ರಾಯಲ ಸೀಮಾ" (ರಾಯರ ಸೀಮೆ—ಹಿಂದೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಮದ್ರಾಸ್ ಒಳನಾಡಿನ ಅನಂತಪುರ, ಕಡಪಾ, ಕರ್ನೂಲು, ಚಿತ್ತೂರು ಜಿಲ್ಲೆಗಳು) ಇದರಲ್ಲಿರಲಿಲ್ಲ. ಬರಗಾಲ ಪ್ರದೇಶವೂ ಶಿಕ್ಷಣದಲ್ಲಿ ಹಿಂದುಳಿದದ್ದೂ ಆದ ರಾಯಲಸೀಮೆಯಲ್ಲಿನ ಜನರು ಪ್ರತ್ಯೇಕ ಆಂಧ್ರ ಪ್ರಾಂತ ತಲೆಯೆತ್ತಿದಲ್ಲಿ ಕರಾವಳಿಯ ಆಂಧ್ರರು ತಮ್ಮನ್ನು ಶೋಷಿಸಬಹುದೆಂದು ಭಯಪಡುತ್ತಿದ್ದರು. ಬ್ರಿಟಿಶರ ಕಾಲದಲ್ಲಿ ಅವರು ಯಾವಾಗಲೂ ಅಲಕ್ಷಿಸಲ್ಪಡುತ್ತಿದ್ದು ಪ್ರತ್ಯೇಕಾಂಧ್ರದಲ್ಲಿ ತಮ್ಮ ಸ್ಥಿತಿ ಇನ್ನೂ ಕೆಡಬಹುದೆಂಬುದು ಅವರ ಶಂಕೆಯಾಗಿತ್ತು. ಈ ಭಯನಿವಾರಣೆಗೆ ೧೯೩೭ ರಲ್ಲಿ ರಾಯಲ ಸೀಮಾ ಜಿಲ್ಲೆಗಳಿಗೆ ಕೆಲವೊಂದು ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸೌಲಭ್ಯಗಳನ್ನು ಕೊಡುವ ಒಪ್ಪಂದವೊಂದು ರಾಯಲಸೀಮಾ ಮತ್ತು ಕರಾವಳಿ ಆಂಧ್ರ ನಾಯಕರ ನಡುವೆ ಆಯಿತು. ಹೀಗೆ ಮದ್ರಾಸ್ ಅಧಿಪತ್ಯದಲ್ಲಿ ಸುಮಾರಾಗಿ ಒಮ್ಮತದ ಪ್ರತ್ಯೇಕ ಪ್ರಾಂತದ ಬೇಡಿಕೆ ರೂಪುಗೊಂಡಿತು.



ಬ್ರಹ್ಮಾರೆಡ್ಡಿ


ಸ್ವಾತಂತ್ರ್ಯಾನಂತರ ನನೆಗುದಿಗೆ ಬಿದ್ದ ಪ್ರತ್ಯೇಕಾಂಧ್ರ ಬೇಡಿಕೆಯನ್ನು ಸಾಧಿಸಲು ಪೊಟ್ಟಿ ಶ್ರೀರಾಮುಲು ಅವರು ಉಪವಾಸ ಮಾಡಿ ಪ್ರಾಣಾರ್ಪಣ ಮಾಡಿದ ಮೇಲೆ ಬಹಳ ರಕ್ತಪಾತವಾಗಿ ೧೯೫೩ ರಲ್ಲಿ ಆಂಧ್ರ ರಾಜ್ಯ ಅಸ್ತಿತ್ವದಲ್ಲಿ ಬಂತು. ಆಗಲೂ ರಾಯಲಸೀಮೆಯವರ ಭಯ ಹಿಂಗಿರಲಿಲ್ಲ. ರಾಯಲಸೀಮೆಯವರಿಗೆ ೧೯೩೭ ರ ಒಪ್ಪಂದ ಪ್ರಕಾರ ವಿಶೇಷ ಆಶ್ವಾಸನಗಳನ್ನು ಪುನರುಜ್ಜೀವಿಸಿದ್ದಲ್ಲದೆ ರಾಯಲಸೀಮೆಯಲ್ಲಿನ ಕರ್ನೂಲನ್ನು ರಾಜಧಾನಿಯಾಗಿ ಮಾಡಿ ಅವರನ್ನು ಸಮಾಧಾನಪಡಿಸಿದ್ದಾಯಿತು. ಜಿಲ್ಲಾ ಸ್ಥಳವಾದ ಕರ್ನೂಲಿಗೆ ರಾಜಧಾನಿಯಾಗುವ ಅರ್ಹತೆ ಇದ್ದಿಲ್ಲ; ಆಗಲೇ ದೊಡ್ಡ ನಗರವಾಗಿದ್ದ ವಿಜಯವಾಡವೇ ರಾಜಧಾನಿಯಾಗಬೇಕಿತ್ತು. ಆಗಲೇ ಅನೇಕ ಕರಾವಳಿ ಆಂಧ್ರರು ಕರ್ನೂಲು ರಾಜಧಾನಿಯಾಗುವುದನ್ನು ವಿರೋಧಿಸಿದ್ದರು. ಈಗಂತೂ ಅವರು ವಿಜಯವಾಡವೇ ರಾಜಧಾನಿಯಾಗಬೇಕೆಂದು ಆಗ ಪಟ್ಟುಹಿಡಿಯದ್ದು ದೊಡ್ಡ ತಪ್ಪಾಯಿತೆಂದು ಗೋಳಾಡುತ್ತಾರೆ.

ತೆಲಂಗಾಣಾ

ಅಂತೂ ಮದ್ರಾಸ್ ರಾಜ್ಯದ ತೆಲುಗು ಪ್ರದೇಶಗಳನ್ನೊಳಗೊಂಡ ಆಂಧ್ರರಾಜ್ಯ ತಲೆಯೆತ್ತಿತು. ರಾಯಲಸೀಮೆ ಮತ್ತು ಕರಾವಳಿ ಜಿಲ್ಲೆಗಳ ಹಿತಸಂಬಂಧಗಳಲ್ಲಿ ಎಂಥ ತಾಕಲಾಟ ಬರಬಹುದಾಗಿತ್ತು, ಒಪ್ಪಂದಗಳು ತೃಪ್ತಿಕರವಾಗಿ ಆಚರಿಸಲ್ಪಡಬಹುದಿತ್ತೇ ಎಂಬ ಪ್ರಶ್ನೆಗಳಿಗೆ ಇತಿಹಾಸದ ಉತ್ತರ ದೊರಕುವ ಮೊದಲೇ ದೇಶೀಯ ಸಂಸ್ಥಾನಗಳ ಪೂರ್ತಿ ಬರ್ಖಾಸ್ತಿನ ರಾಜಕೀಯ ನಿರ್ಣಯವಾದ್ದರಿಂದ ಹೈದರಾಬಾದ ರಾಜ್ಯವನ್ನು ವಿಭಜಿಸಿ ಅದರ ಎಂಟು ತೆಲುಗು ಭಾಷಿಕ ಜಿಲ್ಲೆಗಳನ್ನು ಆಂಧ್ರಕ್ಕೆ ಕೊಡಲಾಯಿತು. ಹೈದರಾಬಾದ ರಾಜ್ಯಕ್ಕೆ ಆಗಲೇ ರಾಜಧಾನಿಯಾಗಿದ್ದ ಹೈದರಾಬಾದ್ ಮತ್ತು ಅದರ ಅವಳಿ ನಗರವಾದ ಸಿಕಂದರಾಬಾದ್ ಈಗ "ವಿಶಾಲಾಂಧ್ರ"ಕ್ಕೆ ಸಿಕ್ಕಿ ಅದೇ ರಾಜಧಾನಿಯಾಗಿ ಕರ್ನೂಲು ಪುನಃ ತನ್ನ ತೂಕಡಿಸುವ ಜಿಲ್ಲಾ ಕೇಂದ್ರದ ಸ್ಥಾನಮಾನಕ್ಕೆ ಮರಳಿತು. ವಿಜಯವಾಡ ತನ್ನ ಛಾನ್ಸನ್ನು ಶಾಶ್ವತವಾಗಿ ಕಳೆದುಕೊಂಡಿತು.

"ತೆಲಂಗಾಣಾ" ಎಂದು ನಿಜಾಮರು ಕರೆಯುತ್ತಿದ್ದ ಹೈದರಾಬಾದಿನ ಈ ಎಂಟು ತೆಲುಗು ಜಿಲ್ಲೆಗಳು ರಾಯಲಸೀಮೆಗಿಂತಲೂ ಎಲ್ಲ ವಿಷಯಗಳಲ್ಲಿ ಹಿಂದುಳಿದ ಜಿಲ್ಲೆಗಳಾಗಿದ್ದವು. ಶಿಕ್ಷಣದಲ್ಲಿ ಬಹಳ ಹಿಂದೆ, ಸದಾ ಬರಗಾಲದ ಬವಣೆ. ಮುಂದುವರಿದ ಕರಾವಳಿ ಆಂಧ್ರರು ತಮ್ಮನ್ನು ಶೋಷಿಸಬಹುದೆಂಬ ಭಯ ಅವರಿಗೆ ರಾಯಲಸೀಮೆಯವರಿಗಿಂತಲೂ ಹೆಚ್ಚಾಗಿತ್ತು. ಆದರೆ ಕರಾವಳಿ ಆಂಧ್ರರು ಭಯ ನಿವಾರಣೆಯ ಆಶ್ವಾಸನವಿತ್ತರು. ತೆಲಂಗಾಣಾದ ವಿಶೇಷ ಆಗತ್ಯಗಳನ್ನು ಗಮನಿಸಿ ಕ್ರಮ ಕೈಕೊಳ್ಳಲು ಪ್ರಾದೇಶಿಕ ಸಮಿತಿ ರಚಿಸುವುದಾಗಿ "ಜಂಟಲ್‌ಮನ್" ಒಪ್ಪಂದವಾಯಿತು. ತೆಲಂಗಾಣಾದ ಜನರಿಗೆ ಹಲವು ವಿಶೇಷ ಸವಲತ್ತುಗಳನ್ನು ಕೊಡಲೊಪ್ಪಿದ್ದಾಯಿತು. ಹೀಗೆ ೧೯೫೬ರಲ್ಲಿ ವಿಶಾಲಾಂಧ್ರ ರಾಜ್ಯ ದ್ರಾವಿಡ ಭಾರತದ ಅತಿ ವಿಸ್ತಾರ ಮತ್ತು ಅತ್ಯಧಿಕ ಜನಸಂಖ್ಯೆಯ ರಾಜ್ಯವಾಗಿ ಅಸ್ತಿತ್ವಕ್ಕೆ ಬಂತು.

ತ್ರಿಲೋಕಗಳಲ್ಲಿರುವ ಸದಾಶಯಗಳನ್ನೆಲ್ಲ ಕೂಡಿಸಿದರೂ ಆರ್ಥಿಕ ಮತ್ತು ರಾಜಕೀಯ ತಥ್ಯಗಳನ್ನು ಅವು ಸರಿದೂಗಿಸಲಾರವೆಂದು ವಿಶಾಲಾಂಧ್ರದ ಚರಿತ್ರೆಯಿಂದ ನಾವು ಕಲಿಯಬಹುದು. ತೆಲಂಗಾಣಾದವರಿಗೆ "ಜಂಟಲ್‌ಮನ್ ಒಪ್ಪಂದ"ದ ಮೂಲಕ ಆಂಧ್ರರಿತ್ತಿದ್ದ ಆಶ್ವಾಸನಗಳು ಮಾತಿನಲ್ಲೇ ಉಳಿದುವು. ಒಪ್ಪಂದದ ಪ್ರಕಾರ ಮುಖ್ಯಮಂತ್ರಿ ಆಂಧ್ರದ (ತೆಲಂಗಾಣಾ ಹೊರತುಪಡಿಸಿದ ಪ್ರದೇಶಕ್ಕೆ ಆಂಧ್ರ ಎಂದು ಸಂಕೇತ)ವನಾದರೆ ಉಪಮುಖ್ಯಮಂತ್ರಿ ತೆಲಂಗಾಣಾದವನಾಗಿರಬೇಕಿತ್ತು. ಆದರೆ ವಿಶಾಲಾಂಧ್ರದ ಪ್ರಥಮ ಮುಖ್ಯಮಂತ್ರಿ ಸಂಜೀವರೆಡ್ಡಿ ಉಪಮುಖ್ಯಮಂತ್ರಿಯನ್ನೇ ನೇಮಿಸಲಿಲ್ಲ. ತೆಲಂಗಾಣಾ ಪ್ರದೇಶದಲ್ಲಿನ ಸರಕಾರಿ ನೌಕರಿಗಳಲ್ಲಿ ಬಹು ಭಾಗವನ್ನು ಆ ಪ್ರದೇಶದವರಿಗೇ ಕೊಡಬೇಕೆಂಬುದೂ ಪುಸ್ತಕದ ಬದನೇಕಾಯಿಯೇ ಆಗಿ ಉಳಿಯಿತು. ("ಮುಲ್ಕಿ" ನಿಯಮಗಳೆಂದರೆ ಇವುಗಳೇ.) ಲಂಚ, ವಶೀಲಿಗಳಿಂದ ಸುಳ್ಳು ಮುಲ್ಕಿ ಸರ್ಟಿಫಿಕೇಟುಗಳನ್ನು ಪಡೆಯುವುದು ಆಂಧ್ರದವರಿಗೆ ಕಷ್ಟವಾಗಲಿಲ್ಲ. ರಾಜಧಾನಿಯಲ್ಲಿಯೂ ಇತರ ತೆಲಂಗಾಣಾ ಪ್ರದೇಶದಲ್ಲಿಯೂ ಶ್ರೀಮಂತ ಕರಾವಳಿ ಆಂಧ್ರರು ಅಗ್ಗವಾಗಿ ಭೂಮಿ ಕೊಂಡು



ನರಸಿಂಗರಾವ್

ಇಡೀ ಪ್ರದೇಶವನ್ನೇ ತಮ್ಮ ವಸಾಹತನ್ನಾಗಿ ಮಾಡಿಕೊಳ್ಳಲಾರಂಭಿಸಿದರು. ತೆಲಂಗಾಣಾದ ಜನಸಂಖ್ಯೆ ಉಳಿದ ಆಂಧ್ರಕ್ಕಿಂತ ಅರ್ಧವೇ ಇದ್ದುದರಿಂದ ತಮ್ಮ ದೂರುಗಳನ್ನು ಬಲವತ್ತರವಾಗಿ ಒತ್ತಲು ಅವರಿಗೆ ಮಾರ್ಗವಿರಲಿಲ್ಲ. ಆಂಧ್ರ ಕಡೆಯವರೂ ಹೆಚ್ಚಿನವರು ರೆಡ್ಡಿಗಳೇ; ತೆಲಂಗಾಣಾದವರೂ ಅವರೇ. ಆದರೂ ಇವರನ್ನವರು ಶೋಷಿಸಲು ಅದು ಅಡ್ಡಿಯಾಗಲಿಲ್ಲ.

ಪರಿಣಾಮವಾಗಿ ೧೩ ವರ್ಷಗಳ ನಂತರ ೧೯೬೯ರಲ್ಲಿ ತೆಲಂಗಾಣಾದವರು ಉಗ್ರವಾಗಿ ಸಿಡಿದೆದ್ದರು. ಆಂಧ್ರದಿಂದ ತೆಲಂಗಾಣಾವನ್ನು ಪ್ರತ್ಯೇಕಿಸಿ ಸ್ವತಂತ್ರರಾಜ್ಯವಾಗಿ ಮಾಡಬೇಕೆಂಬ ಬೇಡಿಕೆಯೊಡನೆ ನಡೆದ ಈ ಆಂದೋಲನದಲ್ಲಿ ಸುಮಾರು ೩೦೦ ಜನ ಪ್ರಾಣ ತೆತ್ತಮೇಲೆ ರಾಜಿಯಾಗಿ ತೆಲಂಗಾಣಾಕ್ಕೆ ವಿಶೇಷ ಆಶ್ವಾಸನಗಳನ್ನು ಆಂಧ್ರರು ಮತ್ತೊಮ್ಮೆ ನೀಡಿದ ಮೇಲೆ ಪ್ರತ್ಯೇಕ ತೆಲಂಗಾಣಾ ಚಳವಳಿ ಶಾಂತವಾಯಿತು.

ಆದರೆ ಆ ಆಂಧ್ರರೇ ಈಗ ತೆಲಂಗಾಣಾವನ್ನು ಬಿಟ್ಟು ಪ್ರತ್ಯೇಕಾಂಧ್ರ ರಾಜ್ಯವನ್ನು ಮಾಡಿಕೊಡಿರಿ ಎಂದು ಇತಿಹಾಸದಲ್ಲೇ ಅಪ್ರತಿಮವಾದ ಚಳವಳಿಯನ್ನು ಹೂಡಿದ್ದಾರೆನ್ನುವುದು ಆಶ್ಚರ್ಯಕರವಾಗಿ ಕಾಣಿಸುತ್ತದೆ.



ಸುಬ್ಬಾರೆಡ್ಡಿ

ಮುಲ್ಕಿ

ಈ ಕೋಲಾಹಲದಲ್ಲಿ ಜಾತೀಯ, ರಾಜಕೀಯ, ಆರ್ಥಿಕ, ನಾಯಕರ ವೈಯಕ್ತಿಕ ಸ್ವಹಿತಗಳ ಕಲಸುಮೇಲೋಗರ ಇದೆ. ಇವುಗಳಲ್ಲಿ ಯಾವುದು ಎಷ್ಟು ಪ್ರಭಾವ ಬೀರಿತೆಂದು ಹೇಳುವುದು ಸುಲಭವಲ್ಲವಾದರೂ ಅವೆಲ್ಲವೂ ಸೇರಿ ಈ ವಿಚಿತ್ರ ರೂಪುಗೊಂಡಿತೆಂಬುದು ನಿಸ್ಸಂಶಯ.

ಚಳವಳಿಗೆ ಚಾಲನೆ ಕೊಟ್ಟದ್ದು ವರಿಷ್ಠ ನ್ಯಾಯಾಲಯವಿತ್ತ ಒಂದು ತೀರ್ಪು. ೧೯೬೯ರ ರಾಜೀ ಸೂತ್ರದನ್ವಯ ತೆಲಂಗಾಣ ಪ್ರದೇಶದಲ್ಲಿ "ಮುಲ್ಕಿ"ಗಳಿಗೆ (ಅಂದರೆ ತೆಲಂಗಾಣ) ಪ್ರದೇಶದವರಿಗೆ ನೌಕರಿಗಳನ್ನು ಮೀಸಲಿಡಲಾಗಿತ್ತಲ್ಲವೇ. ಇದು ಕಾನೂನಿನ ದೃಷ್ಟಿಯಲ್ಲಿ ಸರಿಯಲ್ಲ ಎಂದು ವಾದಿಸಿ ಒಂದು ವ್ಯಾಜ್ಯ ಹೈಕೋರ್ಟಿಗೆ ಹೋಯಿತು. ಆಂಧ್ರ ಹೈಕೋರ್ಟು ಮುಲ್ಕಿ ನಿಯಮಗಳು ಆಂಧ್ರ ಆಂಧ್ರರಲ್ಲಿ ಭೇದವೆಣಿಸುವುದರಿಂದ ನ್ಯಾಯಬದ್ಧವಲ್ಲವೆಂದು ತೀರ್ಪು ಕೊಟ್ಟಿತು. ಆಂಧ್ರ ಸರಕಾರ ಈ ತೀರ್ಪಿನ ವಿರುದ್ಧ ವರಿಷ್ಠ ನ್ಯಾಯಾಲಯಕ್ಕೆ ಅಪೀಲು ಮಾಡಿತು. ವರಿಷ್ಠ ನ್ಯಾಯಾಲಯ ಹೈಕೋರ್ಟಿನ ತೀರ್ಪನ್ನು ಬದಿಗೆ ಸರಿಸಿ ಮುಲ್ಕಿ ನಿಯಮಗಳು ಕ್ರಮಬದ್ಧವೆಂದು (ಅಕ್ಟೋಬರ ೩, ೧೯೭೨) ಸಾರಿತು.

ಇದರಿಂದ ತೆಲಂಗಾಣೇತರ ಆಂಧ್ರದ ಸುಶಿಕ್ಷಿತರಿಗೆ ರಾಜ್ಯದಲ್ಲಿ ಎಲ್ಲಿ ಬೇಕಾದಲ್ಲಿ ನೌಕರಿ ಸಂಪಾದಿಸುವ ಹಕ್ಕು ಇಲ್ಲದಂತಾಗಿದೆ; ಆದ್ದರಿಂದ ಮುಲ್ಕಿ ಕಾನೂನನ್ನೇ ರದ್ದುಪಡಿಸಬೇಕೆಂದು ಚಳವಳಿ ಸುರುವಾಯಿತು. ಆದರೆ ಚಳವಳಿ ಇಷ್ಟು ಉಗ್ರವಾಗಿ ಸಿಡಿದೇಳಬಹುದೆಂದು ಕೇಂದ್ರ, ರಾಜ್ಯ ಸರಕಾರಗಳಾಗಲಿ ಕೊನೆಗೆ ಚಳುವಳಿಯ ಬೆಂಬಲಿಗರೇ ಆಗಲಿ ಮೊದಲು ನಿರೀಕ್ಷಿಸಿರಲಿಲ್ಲ. ಆಂಧ್ರರು ಇದಕ್ಕಾಗಿ ಇಷ್ಟೇಕೆ ಸಿಡಿದೇಳಬೇಕಾಗಿತ್ತೆಂದೂ ಸುಲಭವಾಗಿ ಅರ್ಥವಾಗುವುದಿಲ್ಲ. ಮುಲ್ಕೀ ಕಾನೂನು ನಿಜಾಮರ ಕಾಲದಿಂದ—೧೯೧೮ರಿಂದಲೂ—ಇತ್ತು. ೧೯೬೯ರ ಮುಲ್ಕೀ ಚಳುವಳಿಯ ನಂತರ ತೆಲಂಗಾಣಾದವರಿಗೆ "ಆಂಧ್ರ"

ಪ್ರದೇಶಗಳ ನಾಯಕರು ಈ ಬಗ್ಗೆ ಆಶ್ವಾಸನ ಕೊಟ್ಟಿದ್ದರು. ಅದಕ್ಕೊಂದು ಕಾನೂನೂ ಆಗಿತ್ತು. ಆಂಧ್ರ ಪ್ರದೇಶದಿಂದ ಯಾವ ಗೊಣಗಾಟವೂ ಆಗ ಕೇಳಿ ಬರಲಿಲ್ಲ. ಮೇಲಾಗಿ ತೆಲಂಗಾಣಾ ಪ್ರದೇಶದಲ್ಲಿ ತಾನೆ ತೆಲಂಗಾಣಾದವರಿಗೆ ನೌಕರಿಗಳಲ್ಲಿ ಪ್ರಾಶಸ್ತ್ಯ ಕೊಡುವುದು ? ಇದರಲ್ಲಿ ಇತರ ಆಂಧ್ರರಿಗೆ ಆಕ್ಷೇಪವೇಕಿರಬೇಕು ? ನಿರಂತರವಾಗಿ ತೆಲಂಗಾಣಾದವರನ್ನು ಶೋಷಿಸುವ ಹಕ್ಕನ್ನು ಇವರು ಬೇಡುತ್ತಿದ್ದಾರೋ ಹೇಗೆ ?

ವಿಷಯ ನಿಜವಾಗಿ ಇಷ್ಟು ಸರಳವಿಲ್ಲ. ಸುಶಿಕ್ಷಿತ ನಿರುದ್ಯೋಗದ ಸಮಸ್ಯೆ ಬೆಳೆಯುತ್ತ ಇರುವಾಗ ತುಂಬಾ ವಿವೇಕದಿಂದ ವರ್ತಿಸುವುದು ಮೊದಲೇ ಬಿಸಿ ನೆತ್ತರಿಗಾಗಿ ಪ್ರಸಿದ್ಧರಾದ ಆಂಧ್ರದ ತರುಣರಿಂದ ನಿರೀಕ್ಷಿಸತಕ್ಕ ಮಾತಲ್ಲ. ಆಂಧ್ರರ ನಿಲುವನ್ನು ಟೀಕಿಸುವವರು ಒಂದು ಮುಖ್ಯಾಂಶವನ್ನು ಗಮನಿಸುವುದಿಲ್ಲ. ರಾಜಧಾನಿ ಹೈದರಾಬಾದು ತೆಲಂಗಾಣಾ ಪ್ರದೇಶದಲ್ಲಿದೆ ಮುಲ್ಕಿ ಕಾನೂನು ಊರ್ಜಿತದಲ್ಲಿ ಉಳಿದರೆ ರಾಜಧಾನಿಯಲ್ಲಿ ಉದ್ಭವಿಸುವ ಸಹಸ್ರ ಸಹಸ್ರ ನೌಕರಿಗಳು ತೆಲಂಗಾಣೇತರ ಆಂಧ್ರರಿಗೆ ಸಿಗಲಾರವು. ಇದು ನಿಜವಾಗಿ ಅನ್ಯಾಯವೇ ಸೈ. ಆಂಧ್ರದಲ್ಲಿ ಚಳುವಳಿ ಕೈ ಮೀರುತ್ತಿರುವುದನ್ನು ನೋಡಿ ಶ್ರೀಮತಿ ಇಂದಿರಾ ಗಾಂಧಿಯವರು ಒಂದು ರಾಜೀ ತೀರ್ಮಾನವನ್ನು ಕೊಟ್ಟು ಮುಲ್ಕಿ ನಿಯಮಗಳು ಶಾಶ್ವತವಾಗಿ ಜಾರಿಯಲ್ಲಿರುವುದಿಲ್ಲೆಂದು ಸಾರಿದರು. ಇದಕ್ಕೆ ಕಾನೂನು ಸ್ವರೂಪವನ್ನು ಕೊಟ್ಟು ಸಂಸತ್ತು ೧೯೮೦ರ ವರೆಗಷ್ಟೇ ಮುಲ್ಕಿ ನಿಯಮಗಳು ಜಾರಿಯಲ್ಲಿರುವಂತೆ ನಿಗದಿ ಮಾಡಿತು. ಆದರೆ ರಾಜಧಾನಿಯಲ್ಲಿನ ನೌಕರಿಗಳ ವಿಷಯದಲ್ಲಿ ಅದೇನೂ ಹೇಳಲಿಲ್ಲ. ಇಂದಿರಾ ಸೂತ್ರವನ್ನು ತಿರಸ್ಕರಿಸಿ ಮುಲ್ಕಿ ವಿರೋಧಿ ಚಳವಳಿಯ ನಾಯಕರು ಆಂದೋಲನವನ್ನು ಮತ್ತಷ್ಟು ಉಗ್ರಗೊಳಿಸಿದ ಮೇಲೆ ರಾಜಧಾನಿಯಲ್ಲಿನ ನೌಕರಿಗಳನ್ನು ಮುಲ್ಕಿ ನಿಯಮಗಳಿಂದ ಹೊರಗಿಡುವ ಆಶ್ವಾಸನವನ್ನು ಕೇಂದ್ರ ಸರಕಾರ ಕೊಡಲು ಸಿದ್ಧವಾಯಿತು. ಆದರೆ ಅಷ್ಟರಲ್ಲೇ ಆಂಧ್ರರು ಹಿಂದಿರುಗಲಾರದಷ್ಟು ದೂರ ಹೋಗಿದ್ದರು. ತಮಗೆ ತೆಲಂಗಾಣಾವೇ ಬೇಡ, ಅದನ್ನು ಬಿಟ್ಟು ಪ್ರತ್ಯೇಕಾಂಧ್ರ ನಿರ್ಮಾಣ ಮಾಡಿರಿ ಎಂದವರು ಕೂಗಲಾರಂಭಿಸಿದ್ದರು. ಇದಕ್ಕಿರಬಹುದಾದ ಒಂದು ಕಾರಣವೆಂದರೆ ವಾಸ್ತವದಲ್ಲಿ ಕೆಲ ಗುಂಪುಗಳಿಗೆ ಅಥವಾ ಪ್ರದೇಶಗಳಿಗೆ ಒಮ್ಮೆ ಇಂಥ ಸವಲತ್ತುಗಳನ್ನು ಕೊಟ್ಟರೆ ಅವುಗಳಿಗೆ ಯಾವುದೇ ಸಮಯ ನಿರ್ಬಂಧವಿದ್ದರೂ ಅವುಗಳನ್ನು ಶಾಶ್ವತಗೊಳಿಸಲು ಪ್ರಯತ್ನ ನಡೆದೇ ನಡೆಯುತ್ತದೆಂಬುದು. ಇದಕ್ಕೆ ಅಮಿತ ಜನ ಬೆಂಬಲ ಪ್ರಕಟವಾಗಿತ್ತು. ಆಂಧ್ರ ಭಾಗದ ನಾಯಕರು ಪ್ರತ್ಯೇಕ ರಾಜ್ಯವಾದರೆ ತಮಗೆ ಸಿಗಬಹುದಾದ ಅಧಿಕಾರ ಸ್ಥಾನಗಳ ಕನಸುಗಳನ್ನೂ ಈಗ ಕಾಣುತ್ತಿದ್ದರು. ಕೇಂದ್ರದ ಸಂಧಾನ ವ್ಯರ್ಥವಾಯಿತು.

ಇಂದಿರಾ ನೀತಿ

ಚಳುವಳಿ ಇಷ್ಟು ಅತಿರೇಕ ಮಾರ್ಗ ಹಿಡಿಯುವುದಕ್ಕೆ ಅನೇಕ ಕಾರಣಗಳು ಸಹಾಯ ಮಾಡಿದವು. ಅವು ಈ ದೇಶದಲ್ಲಿ ಜಾತಿ ಪಂಥ ಮುಕ್ತವಾದ, ಶೀಘ್ರ ಸಾಮಾಜಿಕಾರ್ಥಿಕ ಬದಲಾವಣೆಯನ್ನು ತರುವೆವೆಂದು ಹುಮ್ಮಸ ಪಡುವವರಿಗೆ ಪಾಠ ಕಲಿಸುವಂತಿವೆ.

ರಾಜ್ಯಗಳಲ್ಲಿ ಬೇರು ಬಿಟ್ಟ ಪ್ರಬಲ ಜಾತಿಗಳ ಕೈಯಿಂದ ಅಧಿಕಾರವನ್ನು ಬಿಡಿಸುವುದು ಇಂದಿರಾ ಗಾಂಧಿಯವರ ನೀತಿಯಾಗಿತ್ತು. ಈ ನೀತಿಗನುಸಾರವಾಗಿ ಹೆಚ್ಚಿನ ರಾಜ್ಯಗಳಲ್ಲಿ ಅಲ್ಪಸಂಖ್ಯಾಕ ಜಾತಿಗಳಿಂದ ಮುಖ್ಯಮಂತ್ರಿಗಳನ್ನಾರಿಸಲಾಯಿತು. ಹೀಗೆ ಆಂಧ್ರದ ಮುಖ್ಯಮಂತ್ರಿಪದವನ್ನು ರೆಡ್ಡಿ ಜಾತಿಯ ಬ್ರಹ್ಮಾನಂದರಿಂದ ಕಸಿದು ಬ್ರಾಹ್ಮಣರಾದ ಪಿ. ವಿ. ನರಸಿಂಗರಾಯರಿಗೆ ಕೊಡಲಾಯಿತು. ಅವರು ಒಳ್ಳೆಯವರಾದರೂ ಅಧಿಕಾರ ನಡೆಸಲು ಆಧಾರವಾದ ವಿಶಾಲವಾದ ಬೆಂಬಲಿಗ ಜನವರ್ಗಗಳು ಬ್ರಹ್ಮಾನಂದರಂತೆ ಅವರಿಗಿದ್ದಿಲ್ಲ. ಆಂಧ್ರ ರಾಜ್ಯ ಆದಂದಿನಿಂದಲೂ ಹೆಚ್ಚಿನ ಕಾಲವೆಲ್ಲ ಮುಖ್ಯಮಂತ್ರಿಪದವನ್ನು ರೆಡ್ಡಿಗಳೇ ಅಲಂಕರಿಸಿದ್ದು ಈಗ ಆ ಸ್ಥಾನಗೌರವ ತಪ್ಪಿದ್ದನ್ನು ಅವರು ಮೆಚ್ಚಿಕೊಳ್ಳಲಿಲ್ಲ.

ನರಸಿಂಗರಾಯರು ತಮ್ಮ ಈ ದೌರ್ಬಲ

ವನ್ನು ಕಂಡುಕೊಂಡು ಎಚ್ಚರದಿಂದ ಹೆಜ್ಜೆಯಿತ್ತಿದ್ದರೆ ಪರಿಸ್ಥಿತಿ ಕಾಲಾಂತರದಲ್ಲಿ ಅವರಿಗೆ ಅನುಕೂಲವಾಗಬಹುದಿತ್ತೇನೊ. ಆಂಧ್ರದಲ್ಲಿ ಬ್ರಾಹ್ಮಣವಿರೋಧಿ ಭಾವನೆ ಅಷ್ಟೇನೂ ತೀವ್ರವಾಗಿಲ್ಲ. ತಮ್ಮ ಮಂತ್ರಿಮಂಡಲದ ಸದಸ್ಯರನ್ನು ಆಗಾಗ್ಗೆ ವಿಶ್ವಾಸದಲ್ಲಿ ತೆಗೆದುಕೊಂಡಿದ್ದರ ಅವರಿಗೇ ಹಿತವಿತ್ತು. ಆದರೆ ಇಂದಿರಾ ಕೃಪೆಯಿಂದ ಅಧಿಕಾರಕ್ಕೇರಿದ ಅವರು ಪ್ರತಿಯೊಂದು ನಿರ್ಣಯಕ್ಕೂ ತಮ್ಮ ಸಹೋದ್ಯೋಗಿಗಳನ್ನು ಕೇಳುವ ಬದಲು ದಿಲ್ಲಿಗೆ ಓಡಿದರು. ಹೀಗೆ ತಮ್ಮ ಮಂತ್ರಿಗಳ ಸಂಗಡವೇ ಅವರ ಸಂಪರ್ಕ ತಪ್ಪಿ ಹೋಯಿತು. ಮಂತ್ರಿಗಳೂ ಒಳಗೊಳಗೆ ಕುದಿಯತೊಡಗಿದರು. ಮುಲ್ಕಿ ನಿಯಮಗಳನ್ನು ಆಂಧ್ರ ಹೈಕೋರ್ಟು ಕಿತ್ತು ಹಾಕಿದಾಗ ಅದರ ವಿರುದ್ಧ ಅಪೀಲು ಮಾಡುವ ನಿರ್ಣಯವನ್ನು ನರಸಿಂಗರಾಯರು ಸಹೋದ್ಯೋಗಿಗಳನ್ನು ಕೇಳದೇನೇ ಕೈಕೊಂಡದ್ದು ಇನ್ನಷ್ಟು ಕೇಡಾಯಿತು.

ಇಂದಿರಾ ಕಾಂಗ್ರೆಸ್ಸಿನ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ನರಸಿಂಗರಾಯರು ಅತ್ಯುತ್ಸಾಹವನ್ನು ಪ್ರದರ್ಶಿಸಿದರು. ಸಂಪನ್ನ ಭೂಮಾಲಿಕರ ರಾಜ್ಯವಾದ ಆಂಧ್ರದಲ್ಲಿ ಭೂಮಿತಿಯನ್ನು ಇಳಿಸುವ ಕಾನೂನನ್ನು ಪಾಸುಮಾಡುವಲ್ಲಿ ಇಡೀ ದೇಶದಲ್ಲೇ ಆಂಧ್ರ ಮುಖ್ಯ ಮಂತ್ರಿಗಳು ಮೊದಲಿಗರಾಗಿದ್ದರು. ಚುನಾವಣಾ ಘೋಷಣ ಪತ್ರಗಳನ್ನು ಗಂಭೀರವಾಗಿ ಗಣಿಸದಿರಲು ಅಭ್ಯಸ್ತರಾದ ಆಂಧ್ರದ ಶ್ರೀಮಂತ ರೆಡ್ಡಿ-ಕಮ್ಮ ಎರಡೂ ಜಾತಿಗಳ ಭೂಮಾಲಿಕರಿಗೆ ನರಸಿಂಗರಾಯರ ಈ ಕ್ರಮ ಆಘಾತವನ್ನುಂಟು ಮಾಡಿತು. ಜಮೀನಿನ ಬೇನಾಮಿ ಹಸ್ತಾಂತರವನ್ನು ತಡೆಯಲು ಸುಗ್ರೀವಾಜ್ಞೆಗಳನ್ನು ಮುಖ್ಯಮಂತ್ರಿಗಳು ಮೊದಲೇ ಹೊರಡಿಸಿದ್ದರಿಂದ ಭೂಮಾಲಿಕರಿಗೆ ಮಿಸುಕುವುದೂ ಕಷ್ಟವಾಗಿತ್ತು. ಬಹಳ ವರ್ಷಗಳಿಂದ ತಮ್ಮವರ ಅಧಿಕಾರ ಕಾಲದಲ್ಲಿ ಬಹುತೇಕ ಜಿಲ್ಲಾ ಪರಿಷತ್ತು ಮತ್ತು ಪಂಚಾಯತಿಗಳ ಅಧ್ಯಕ್ಷ ಪದಗಳನ್ನು ಶ್ರೀಮಂತ ರೆಡ್ಡಿಗಳು ವಶಪಡಿಸಿಕೊಂಡಿದ್ದರು. ಭೂಮಾಲಿಕರ (ಮತ್ತು ರೆಡ್ಡಿಗಳ) ಅಧಿಕಾರದ ಮೂಲ ಸ್ರೋತಗಳಾದ ಈ ಸ್ಥಾನಿಕ ಸಂಸ್ಥೆಗಳ ಅಧಿಕಾರಗಳನ್ನು ನರಸಿಂಗರಾಯರು ಮೊಟಕುಗೊಳಿಸಿದ್ದಲ್ಲದೆ ಸ್ಥಾನಿಕ ಸಂಸ್ಥೆಗಳನ್ನೇ ರದ್ದುಪಡಿಸುವುದಾಗಿ ಹೇಳಿದರು. ಇದನ್ನು ನೋಡಿ ರೆಡ್ಡಿಗಳಿಗಲ್ಲದೆ ಅವರ ಪ್ರತಿಸ್ಪರ್ಧಿಗಳಾದ ಕಮ್ಮಗಳಿಗೆ ಕೂಡ ರೋಷವೆದ್ದುದು ಅಸ್ವಾಭಾವಿಕವಲ್ಲ. ಕಮ್ಮಗಳು ಭೂಮಾಲಿಕರು ಮಾತ್ರವಲ್ಲದೆ ವ್ಯಾಪಾರದಲ್ಲಿಯೂ ಪ್ರಬಲರಾಗಿದ್ದಾರೆ. ಈ ಅಧಿಕಾರಮೂಲಗಳನ್ನು ಧ್ವಂಸ ಮಾಡುವುದು ಯಾವುದೇ ಸಾಮಾಜಿಕ ಬದಲಾವಣೆಗೆ ಅಗತ್ಯವಾಗಿದೆ-ನಿಜ. ಆದರೆ ಸ್ವತಃ ಯಾವುದೇ ಅಧಿಕಾರ ಮೂಲಗಳನ್ನು ನಿರ್ಮಿಸಿಕೊಳ್ಳದಿದ್ದ ನರಸಿಂಗರಾಯರು ತಮ್ಮೀ ಕ್ರಮಗಳಿಂದ ಆತ್ಮರಕ್ಷಣೆಯ ಮಾರ್ಗ ನೋಡಿಕೊಳ್ಳದೆ ಶತ್ರುಗಳನ್ನು ಕೆಣಕಿದಂತಾಯಿತು. ಹಿಂದಿನ ಮುಖ್ಯಮಂತ್ರಿ ಬ್ರಹ್ಮಾನಂದರೆಡ್ಡಿಯವರನ್ನೂ ತೆಲಂಗಾಣದಲ್ಲಿ ಪ್ರಬಲರಾಗಿದ್ದ ಡಾ. ಚೆನ್ನಾರೆಡ್ಡಿಯವರನ್ನೂ ಒಲಿಸಿಕೊಂಡಿದ್ದರೆ ಈ ಬಿಕ್ಕಟ್ಟಿನಿಂದ ನರಸಿಂಗರಾಯರು ತಪ್ಪಿಸಿಕೊಳ್ಳಬಹುದಾಗಿತ್ತೇನೋ. ಅವರು ಹಾಗೆ ಮಾಡಲಿಲ್ಲ.

ಈ ನಡುವೆ ವರಿಷ್ಠ ನ್ಯಾಯಾಲಯದ ತೀರ್ಪು ಬಂತು. ಇದರಿಂದ ಜನರಲ್ಲಿ ಎದ್ದ ಅಸಂತೋಷವನ್ನು ಈ ಎಲ್ಲ ವರ್ಗಗಳೂ ದೇವರೇ ಒದಗಿಸಿದ ಸಂದರ್ಭವೆಂದು ಭಾವಿಸಿದುವು. ಪ್ರಥಮತಃ ಗಲಾಟೆ ಎಬ್ಬಿಸಿದವರು ಅವರೆ. ಅವರು ಕರ ನಿರಾಕರಣವನ್ನು ಸಾರಿದರು. ಇದರಲ್ಲಿ ಎನ್. ಜಿ. ಓ. ಗಳು ಸೇರಿದ ಮೇಲಂತೂ ಚಳವಳಿಗೆ ಸಾಮೂಹಿಕ ಸ್ವರೂಪ ಬಂತು. ವ್ಯಾಪಾರಿ ಸಂಸ್ಥೆಗಳೂ ಗೆಜೆಟೆಡ್ ಅಧಿಕಾರಿಗಳೂ ಅವರನ್ನು ಕೂಡಿಕೊಂಡರು. ಹೀಗೆ ಕರಾವಳಿ ಆಂಧ್ರದಲ್ಲಿ ಪರಿಸ್ಥಿತಿ ಬಿಸಿಯೇರುತ್ತಿದ್ದಾಗ ಅತ್ತ ತೆಲಂಗಾಣಾದಲ್ಲಿಯೂ ಪ್ರತ್ಯೇಕತೆಯ ಚಳವಳಿಗೆ ಪುನಃ ಜೀವ ಬಂತು. ಇಡೀ ಆಂಧ್ರದ ಆಡಳಿತವೇ ಮುಷ್ಕರ ಹರತಾಳ ಬಂದ್‌ಗಳಿಂದ ಸ್ಥಗಿತವಾಗಿ ಹೋಯಿತು.

ಕಾಣದ ಕೈ

ಪ್ರತ್ಯೇಕಾಂಧ್ರ ಚಳವಳಿಯ ನಾಯಕರು ಇದನ್ನು ಅಪಪ್ರಚಾರವೆಂದು ಖಂಡಿಸಿದರೂ ಈ

ಚಳವಳಿಯ ಹಿಂದೆ ಭೂಮಾಲಿಕರ ಮತ್ತು ವ್ಯಾಪಾರಸ್ಥರ ಬಲವಾದ ಕೈವಾಡ ಇದೆಯೆಂಬಲ್ಲಿ ಸಂಶಯವಿಲ್ಲ. ತಿಂಗಳುಗಟ್ಟಲೆ ಸಂಬಳವಿಲ್ಲದೆ ಲಕ್ಷಾಂತರ ನೌಕರರು ಮುಷ್ಕರ ಹೂಡುವುದು ಆರ್ಥಿಕ ಬೆಂಬಲವಿಲ್ಲದೆ ನೀಗುವ ಕಾರ್ಯವಲ್ಲ. ಮುಷ್ಕರ ಹೂಡಿದ ಪ್ರತಿಯೊಬ್ಬ ಎನ್. ಜಿ. ಓ. ನ ಮನೆಗೆ ಬೇಕಾಗುವ ಅಕ್ಕಿಯನ್ನು ಕಾಣದ ಕೈಗಳು ಒದಗಿಸುತ್ತಿದ್ದವೆಂದು ಹೇಳಲಾಗಿದೆ. ಕರಾವಳಿ ಆಂಧ್ರದ ಕೇಂದ್ರ ವಣಿಕ್ಸಂಘ ಮಾತ್ರವಲ್ಲದೆ ಜಿಲ್ಲಾ ವಣಿಕ್ ಸಂಘಗಳೂ ಬಹಿರಂಗವಾಗಿಯೇ ಚಳವಳಿಗೆ ಬೆಂಬಲ ಕೊಟ್ಟಿವೆ. ಆಂಧ್ರ ಇಬ್ಭಾಗವಾಗಿ ಹೋದರೆ ಅಧಿಕಾರಸ್ಥಾನಗಳನ್ನು ಪುನಃ ಆಕ್ರಮಿಸಿ ತಮ್ಮ ಹಿತಕ್ಕೆ ಬಂದ ಗಂಡಾಂತರವನ್ನು ದೂರ ಮಾಡಬಹುದೆಂಬುದು ಅವುಗಳ ನಿರೀಕ್ಷೆಯಾಗಿದೆ.

ಈ ಸಂದರ್ಭದಲ್ಲಿ ರಾಜಕೀಯ ಜನರ ವರ್ತನೆ ಬಹಳ ಸ್ವಾರಸ್ಯವಾಗಿದೆ. ಚಳವಳಿಗೆ ಜನಸಂಘ, ಸಂಸ್ಥಾ ಕಾಂಗ್ರೆಸ್ ಮತ್ತು ಸ್ವತಂತ್ರ ಪಕ್ಷಗಳು ಮೊದಲಿಂದಲೂ ಬೆಂಬಲ ಕೊಟ್ಟದ್ದು ಆಶ್ಚರ್ಯವಲ್ಲ. ಅವರು ಇಂದಿರಾ ಗಾಂಧಿಯವರ ರಾಜಕೀಯ ಕಷ್ಟಗಳನ್ನು ಹೆಚ್ಚಿಸಬಯಸುವುದು ಸ್ವಾಭಾವಿಕ. ಅವರು ಪ್ರತಿನಿಧಿಸುವುದೂ ಅನುಕೂಲವಂತ ರೈತ ಮತ್ತ ವ್ಯಾಪಾರಿವರ್ಗವನ್ನೇ. ಆದರೆ ಇಂದಿರಾ ಗಾಂಧಿಯವರ ಕಾಂಗ್ರೆಸ್ಸೇ ಈ ಆಂದೋಲನದಲ್ಲಿ ಮೇಲಿಂದ ಕೆಳಗಿನ ವರೆಗೆ ಇಬ್ಭಾಗವಾಗಿರುವುದು ಸೋಜಿಗ. ಪಿ. ವಿ. ನರಸಿಂಗರಾಯರ ಸಂಪುಟದ ಮಂತ್ರಿಗಳು ಮತ್ತು ಕಾಂಗ್ರೆಸ್ ಶಾಸಕರು ಬೇಕಾದ್ದು ಬಂದರೂ ತಾವು ಪಕ್ಷಕ್ಕೂ ಪಕ್ಷ ನಾಯಕರಿಗೂ ನಿಷ್ಠರಾಗಿರುವುದಾಗಿ ಪ್ರತಿಜ್ಞೆ ಮಾಡಿದ್ದರು. ಇದಾಗಿ ಕೆಲವೇ ದಿನಗಳಲ್ಲಿ, ಚಳವಳಿ ಸರಕಾರದ ಹಿಡಿತ ಮೀರುತ್ತಿದ್ದಂತೆಯೇ ತೆಲಂಗಾಣೇತರ ಕಾಂಗ್ರೆಸ್ ಶಾಸಕರಲ್ಲಿ ಹೆಚ್ಚಿನವರು ಸಭೆಗೂಡಿ ಪ್ರತ್ಯೇಕಾಂಧ್ರವನ್ನು ಸಮರ್ಥಿಸಿದರು. ಉಪಮುಖ್ಯಮಂತ್ರಿಗಳಾಗಿದ್ದ ಸುಬ್ಬಾರೆಡ್ಡಿಯವರೂ ಇತರ ಸಹೋದ್ಯೋಗಿಗಳೂ ರಾಜೀನಾಮೆ ಕೊಟ್ಟು ತಮ್ಮ ಪ್ರತಿಜ್ಞೆ ಮುರಿದರು. ಇವರಿಂದ ನರಸಿಂಗರಾಯರನ್ನು ಈ ವರೆಗೆ ರಕ್ಷಿಸಿದ್ದ ಇಂದಿರಾ ಗಾಂಧಿಯವರಿಗೆ ಅವರಿಂದ ರಾಜೀನಾಮೆ ಕೊಡಿಸಿ ರಾಷ್ಟ್ರಪತಿ ಆಳಿಕೆಯನ್ನು ಜಾರಿ ಮಾಡದೆ ಗತ್ಯಂತರವೇ ಉಳಿಯಲಿಲ್ಲ. ಉಪಮುಖ್ಯಮಂತ್ರಿಗಳಾಗಿದ್ದ ಸುಬ್ಬಾರೆಡ್ಡಿಯವರೇ ಇಂದು ಪ್ರತ್ಯೇಕಾಂಧ್ರ ಚಳವಳಿಯ ಬಾಯಿ (ಮತ್ತು ಬಹುಶಃ ತಲೆ) ಆಗಿದ್ದಾರೆ. ಅವರ ಧ್ಯೇಯಸಿದ್ಧಿಸಿದರೆ ಪ್ರತ್ಯೇಕಾಂಧ್ರಕ್ಕೆ ಅವರೇ ಮುಖ್ಯಮಂತ್ರಿಯಾಗಬಹುದು. ಕಾಂಗ್ರೆಸ್ಸಿನಲ್ಲಿ ಐಕ್ಯ ಆಂಧ್ರವಾದಿಗಳಾದವರು ಈಗ ತಲೆಮರೆಸಿಕೊಳ್ಳುವಷ್ಟು ಜನಪ್ರಿಯತೆಯನ್ನು ಕಳೆದುಕೊಂಡಿದ್ದಾರೆ.

ಆಂಧ್ರ ಕೊನೆಗೂ ಇಬ್ಭಾಗವಾಗುವುದೇ? ಯಾವೊಂದು ಅಘಟಿತ ಘಟನೆಯಾಗದಿದ್ದರೆ ಇದು ಅನಿವಾರ್ಯವೆಂದು ಈಗಂತೂ ಕಾಣುತ್ತದೆ. ಇಂದಿರಾ ಗಾಂಧಿಯವರ ಸಂಪುಟದ ಯಾವ ಮಂತ್ರಿಯೂ ಆಂಧ್ರಕ್ಕೆ ಹೋಗಿ ರಾಜಿ ಮಾಡಿಸುವ ಹೊಣೆಯನ್ನು ಹೊರಲೊಪ್ಪುವುದಿಲ್ಲ ಎಂಬುದರಿಂದಲೇ ಗಾಳಿಯ ದಿಕ್ಕು ತಿಳಿಯುತ್ತದೆ. ಪ್ರಧಾನಮಂತ್ರಿಗಳೂ ಪ್ರತ್ಯೇಕಾಂಧ್ರ ಅಸಾಧ್ಯವೆಂದು ಬಹಿರಂಗವಾಗಿ ಹೇಳಿ ಆಂಧ್ರ ಜನತೆಯನ್ನು ಎದುರು ಹಾಕಿಕೊಳ್ಳಲು ಸಿದ್ಧರಿಲ್ಲ. ಅವರು ಬಹು ಜಾಗರೂಕತೆಯಿಂದ ಮಾತಾಡುತ್ತಾರೆ. ಪೂರ್ತಿ ಶಾಂತಿ ಸ್ಥಾಪಿತವಾಗದೇ ನಿರ್ಣಯ ಸಾಧ್ಯವಿಲ್ಲವೆಂದು ಒತ್ತಿ ಹೇಳುತ್ತಿದ್ದಾರೆ. ಆದರೆ ಎಲ್ಲರಿಗೂ ಗೊತ್ತಿರುವಂತೆ ಶಾಂತಿಯುತ ಚಳವಳಿಯನ್ನು ಯಾರೂ ಗಮನಿಸುವುದಿಲ್ಲ. ಇದನ್ನು ಆಂಧ್ರರು ಮರೆಯುವ ಲಕ್ಷಣವಿಲ್ಲ.

ಆಂಧ್ರವನ್ನು ಒಡೆಯುವುದಕ್ಕೆ ಇಂದಿರಾ ಗಾಂಧಿಯವರು ಹಿಂಜರಿಯಲು ಕಾರಣವಿದೆ. ಆಂಧ್ರದ ವಿಭಜನೆ ಇತರ ರಾಜ್ಯಗಳಲ್ಲಿ ಇದೇ ತರಹದ ಬೇಡಿಕೆಗಳಿಗೆ ಪ್ರೋತ್ಸಾಹ ಕೊಡುವುದು ಖಂಡಿತ. ವಿದರ್ಭದಲ್ಲಿ ಮಹಾರಾಷ್ಟ್ರದಿಂದ ಪ್ರತ್ಯೇಕವಾಗಬೇಕೆಂಬ ಚಳವಳಿಯೊಂದು ಇದ್ದೇ ಇದೆ. ಬಿಹಾರದಲ್ಲಿ ಕೆಲ ಪ್ರದೇಶಗಳು ಪ್ರತ್ಯೇಕ ರಾಜ್ಯ ಕೇಳುತ್ತಿವೆ. ಪ್ರಧಾನಮಂತ್ರಿಗಳ ಹುಟ್ಟು ರಾಜ್ಯವೂ ರಾಷ್ಟ್ರದ ರಾಜಕಾರಣದ ಅತ್ಯಂತ ಪ್ರಬಲವಾದ ಘಟಕವೂ ಆದ ಉತ್ತರ ಪ್ರದೇಶ ಎರಡಲ್ಲ ಮೂರಾಗಿ ಒಡೆಯಬೇಕಾ

ದೀತು. ರಾಜಕೀಯ ಅಸಂತುಷ್ಟರು ಕರ್ನಾಟಕದಲ್ಲಿ ಇಂಥ ಚಳವಳಿಯನ್ನು ಪ್ರಾರಂಭಿಸುವುದು ಸತ್ಯಕ್ಕೆ ದೂರವಾಗಿ ಕಂಡರೂ ಅದು ಅಸಂಭವವಲ್ಲ. ಶ್ರೀಮತಿ ಗಾಂಧಿಯವರು ಹೀಗೆ ಮುಂದಿನ ಅನೇಕ ವರ್ಷಗಳಲ್ಲಿ ಪಕ್ಷದ ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳನ್ನು ಕೈ ಬಿಟ್ಟು ಇದನ್ನೇ ಮಾಡುತ್ತ ಹೋಗಬೇಕಾದೀತು. ಈಗ ದುರ್ಬಲ ವರ್ಗಗಳಿಂದ ಅವರಿಗಿರುವ ಬೆಂಬಲ ಅಷ್ಟರಲ್ಲಿ ಕುಂದಿ ಹೋಗಬಹುದು— ಅಥವಾ ಅವರ ವಿರೋಧಿಗಳು ಅದನ್ನೇ ಹಾರೈಸುತ್ತಿದ್ದಾರೋ?

ಆಂಧ್ರ ಒಡೆದರೆ........

ಆಂಧ್ರ ಒಡೆದರೆ ಏನು? ಅದೂ ಹೊಸ ಸಮಸ್ಯೆಗಳನ್ನು ಎಬ್ಬಿಸದೆ ಬಿಡದು. ತೆಲಂಗಾಣಾ ಎಂಟೇ ಜಿಲ್ಲೆಗಳಿಂದ ಕೂಡಿದ ಹಿಂದುಳಿದ ರಾಜ್ಯವಾಗುತ್ತದೆ. ಅದು ಅನೇಕ ವರ್ಷಗಳವರೆಗೆ ಕೇಂದ್ರ ಸರಕಾರಕ್ಕೆ ಭಾರವಾಗಿ ಪರಿಣಮಿಸುವುದು. ವಿಭಜನೆಯ ವಿವರಗಳೇ ಹೊಸ ಜಗಳಗಳನ್ನು ತರಬಹುದು. ಉದಾಹರಣೆಗೆ, ತೆಲಂಗಾಣಾ–ಆಂಧ್ರಗಳ ಗಡಿಯಲ್ಲಿರುವ ನಾಗಾರ್ಜುನ ಸಾಗರ ಅಣೆಕಟ್ಟಿನ ನಿಯಂತ್ರಣ ಯಾರ ಕೈಲಿರಬೇಕು? ಕೃಷ್ಣಾ ನೀರಿನ ವಿವಾದ ಆಗ ಕರ್ನಾಟಕ-ತೆಲಂಗಾಣಾ ವಿವಾದವಾಗಬಹುದು. ತೆಲಂಗಾಣಾ ಬೇರೆಯಾದ ಮೇಲೆ ಆಂಧ್ರದಲ್ಲಿ ಇನ್ನೂ ಹಿಂದುಳಿದ ಸ್ಥಿತಿಯಲ್ಲಿರುವ ನಾಲ್ಕು ರಾಯಲಸೀಮಾ ಜಿಲ್ಲೆಗಳಲ್ಲಿ ಕೋಲಾಹಲವೇಳಲೂಬಹುದು. ಜಾತೀಯ ದೃಷ್ಟಿಯಲ್ಲಿ ರೆಡ್ಡಿ—ಕಮ್ಮಾ ಸ್ಪರ್ಧೆ ಬಿರುಸಾಗಬಹುದು.

ಅದು ಹೇಗೇ ಇರಲಿ, ಆಂಧ್ರದ ಚಳವಳಿಯ ಸ್ವರೂಪ ನಮಗೆ ಅನೇಕ ರಾಜಕೀಯ ಪಾಠಗಳನ್ನು ಕಲಿಸುತ್ತದೆ. ಒಂದು, ಕೇಂದ್ರದಲ್ಲಿ ಅಧಿಕಾರ ನಡೆಸುವ ಪ್ರಧಾನಮಂತ್ರಿಗಳೆಷ್ಟೇ ಜನಪ್ರಿಯರಾಗಿದ್ದರೂ ರಾಜ್ಯಗಳಲ್ಲಿ ಸ್ವತಂತ್ರವಾದ ವಿಶಾಲವಾದ ಶಕ್ತಿಮೂಲಗಳು ಇಲ್ಲದ ಅಲ್ಪಸಂಖ್ಯೆ ಜಾತಿಯವರನ್ನು ಮುಖ್ಯಮಂತ್ರಿಯಾಗಿ ಪ್ರಧಾನಮಂತ್ರಿಗಳು ಹೇರಿದರೆ ಅವರು ತಾಳುವುದು ದುಷ್ಕರ. ಇದಕ್ಕೆ ನರಸಿಂಗರಾಯರ ಬಲಿ ಮೊದಲನೇ ಉದಾಹರಣೆಯಾದರೆ ಒಡಿಸ್ಸಾದಲ್ಲಿ ನಂದಿನಿ ಸತ್ಪತಿಯವರ ಸೋಲು ಎರಡನೇ ಉದಾಹರಣೆಯಾಗಿದೆ. ಮೈಸೂರಿನಲ್ಲಿಯೂ ಸಂಖ್ಯಾಬಲ ಅಲ್ಪವಾಗಿರುವ ಜಾತಿಯವರು ಮುಖ್ಯಮಂತ್ರಿಯಾಗಿದ್ದಾರೆ. ಈ ದೇಶದಲ್ಲಿ ಜಾತಿಯ ಪ್ರಭಾವವನ್ನು ಅಲಕ್ಷಿಸಲಳವಲ್ಲ. ಎರಡು, ಮತಾಧಿಕಾರ ಸಕಲ ಪ್ರಜೆಗಳಿಗೂ ಇರುವುದರಿಂದ ಅನುಕೂಲವಂತರನ್ನು ಮೆಟ್ಟಿ ಬಡವರನ್ನು ಉದ್ಧರಿಸುವ ಕಾರ್ಯಕ್ರಮ ಚುನಾವಣೆಗಳಲ್ಲಿ ಗೆಲವು ತರುತ್ತದೆ. ಏಕೆಂದರೆ ಈ ದೇಶದಲ್ಲಿ ಬಡವರೇ ಹೆಚ್ಚು. ಆದರೆ ಈ ಕಾರ್ಯಕ್ರಮವನ್ನು ರಭಸದಿಂದ ಜಾರಿಗೆ ತರಲು ಪ್ರಾರಂಭಿಸುವವನು ಮೂರ್ಖನೆನಿಸುತ್ತಾನೆ. ಏಕೆಂದರೆ ಹಣವಂತರು ತಮ್ಮ ಬಲಪ್ರದರ್ಶನ ಮಾಡುವುದಕ್ಕೆ ಅನೇಕ ಶಿಖಂಡಿ ಉಪಾಯಗಳನ್ನು ಬಲ್ಲರು. ಬಡವರು ತೀರ ಅಜ್ಞಾನಿಗಳೂ ಅಸಂಘಟಿತರೂ ಆಗಿರುವುದರಿಂದ ಅವರ ಹಿತ ಅವರಿಗೆ ಕಾಣಿಸದು. ಮೂರನೆಯದಾಗಿ, ನಿಹಿತ ಸ್ವಾರ್ಥಗಳಿಗೆ ಪೆಟ್ಟು ಬೀಳುವಂತಿದ್ದರೆ ಭಾಷಾಬಾಂಧವ್ಯ ಅದನ್ನು ತಪ್ಪಿಸಲಾರದು. ದೇಶಭಕ್ತಿ ಕೂಡ ಅದನ್ನು ತಪ್ಪಿಸಲಾರದೋ ಅನಿಸುತ್ತದೆ. ಪ್ರತ್ಯೇಕಾಂಧ್ರಕ್ಕೆ ಒಪ್ಪದಿದ್ದರೆ ಭಾರತದಿಂದ ಸಿಡಿದುಹೋಗುವ ಮಾತನ್ನು ಕೂಡ ಕೆಲವರು ಆಡುತ್ತಿದ್ದಾರೆ!

ಶ್ರೀಮತಿ ಇಂದಿರಾ ಗಾಂಧಿಯವರಿಗೆ–ಅಥವಾ ಈ ದೇಶದಲ್ಲಿ ಸಾಮಾಜಿಕ–ಆರ್ಥಿಕ ಶೋಷಣೆಯನ್ನು ತಪ್ಪಿಸಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಬೇಕೆನ್ನುವವರಿಗೆ– ಈಚಿನ ಆಂಧ್ರ ಹಾಗು ಒಡಿಸ್ಸಾ ಘಟನೆಗಳು ಒಂದು ಸ್ಪಷ್ಟವಾದ ಪಾಠವನ್ನು ಕಲಿಸುತ್ತವೆ. ಪ್ರಜಾಸತ್ತಾತ್ಮಕ ಕ್ರಮದಿಂದ ಅಧಿಕಾರ ಸಂಪಾದಿಸುವ ಹಂಬಲದಲ್ಲಿ ಈಗಾಗಲೇ ಬೇರುಬಿಟ್ಟ ನಿಹಿತ ಸ್ವಾರ್ಥದ ಪ್ರತಿನಿಧಿಗಳನ್ನು ತಮ್ಮ ಪಕ್ಷದಲ್ಲಿ ಸೇರಿಸಿಕೊಂಡರೆ ಅವರು ಎಂದೂ ಈ ಧ್ಯೇಯಗಳು ಕಾರ್ಯಗತವಾಗಲು ನೆರವಾಗುವುದಿಲ್ಲ. ಸಿಕ್ಕ ಸಮಯದಲ್ಲಿ ಕೈ ಬಿಡುತ್ತಾರೆ. ಸಾಮಾಜಿಕ ಪರಿವರ್ತನೆಯನ್ನು ಬಯಸುವವರು ಪ್ರತ್ಯೇಕವಾಗಿಯೇ ಸಂಘಟನೆಯನ್ನು ಮಾಡಿಕೊಳ್ಳಬೇಕು. ಗಾಳಿ ಬೀಸಿದತ್ತ ಪಕ್ಷಾಂತರ ಮಾಡುವವರನ್ನು ನಂಬಿದರೆ ಯಾವ ಮಹತ್ಕಾರ್ಯವೂ ಆಗದು. ಈ

ವಸಂತ ನೀಡಿದನೆ ರಸದೌತಣ

ಜಾನಪದ ಚಿತ್ರಕಥೆ

ಕಥೆಗೆ ಮುಂದಿನ ಪುಟ ನೋಡಿರಿ →



"ಮುದದಿ ನಿನ್ನ ಚೆಲುವಿಗೊಂದು ನೆನಪ ಹಿಡಿದಿಡುವೆ.

ವಸಂತ ನೀಡಿದನೆ ರಸದೌತಣ

ಎಚ್. ಜಿ. ರಾಧಾದೇವಿ

ವಸಂತ ಮಾಸದ ಒಂದು ರಮ್ಯ ನಸುಕು. ಹೊಸದಾಗಿ ವಿವಾಹಿತನಾದ ಹಳ್ಳಿಗನೊಬ್ಬ ತನ್ನ ಮಡದಿಯೊಂದಿಗೆ ಪ್ರಕೃತಿಯ ಸೊಬಗನ್ನು ಸವಿಯಲು ಕಾಡಿಗೆ ಬಂದಿದ್ದಾನೆ. ಅವನಾಕೆ ಬಲು ಚೆಲುವೆ. ಹಳ್ಳಿಗ, ಚೆಲುವೆ ಇಬ್ಬರೂ ತುಂಬು ಕುಟುಂಬದವರು.

ಮನೆಯಲ್ಲಿ ತಂದೆ ತಾಯಿ, ಅಣ್ಣ ಅತ್ತಿಗೆಯರು, ತಮ್ಮಂದಿರು, ತಂಗಿಯರು, ಇವರೆಲ್ಲ ತುಂಬಿರುವಾಗ ಮಡದಿಯನ್ನು ಮನಃಪೂರ್ತಿ ನೋಡಲು ಸಹ ಹಳ್ಳಿಗನಿಗೆ ಸಾಧ್ಯವಿಲ್ಲ.

ದೇವರ ಪೂಜೆಗೆ ಹೂ ಪತ್ರೆ ತರಲು ಹೋಗುವೆನೆಂದು ಹಳ್ಳಿಗ ತಂದೆಯ ಅಪ್ಪಣೆ ಪಡೆದು ಕಾಡಿಗೆ ಬರುತ್ತಾನೆ. ನೀರಿಗೆ ಹೋಗುವೆನೆಂದು ಅತ್ತೆಯ ಅಪ್ಪಣೆ ಪಡೆದು ಚೆಲುವೆ ಮನೆಯಿಂದ ಹೊರಬಂದಿದ್ದಾಳೆ.

ಇಬ್ಬರೂ ಕಾಡಿನ ಏಕಾಂತ ಪ್ರದೇಶ ಸೇರಿದರು. ಹಳ್ಳಿಗ ಹೂವಿನ ಬುಟ್ಟಿಯನ್ನತ್ತ ಎಸೆದ. ಚೆಲುವೆ ನೀರಿನ ಕೊಡವನ್ನತ್ತ ಬಿಸುಟಳು. ಪ್ರಕೃತಿಯ ರಮ್ಯ ಸಿರಿಯಲ್ಲಿ ಇಬ್ಬರೂ ವಿಹರಿಸಿದ್ದೆ ವಿಹರಿಸಿದ್ದು.

ಆದರೆ ನಿಯಮಿತ ವೇಳೆಗೆ ಇಬ್ಬರೂ ಮನೆಗೆ ಬರಲೇಬೇಕಲ್ಲ. ಏಕೆಂದರೆ, ಹಿರಿಯರನ್ನು ಮೀರಿ ಹೋಗಲು ಇಬ್ಬರಿಗೂ ಭಯ. ಆದರೆ ಆ ದಿನವೇ ಹಳ್ಳಿಗ ಮಡದಿಯನ್ನು ಕಣ್ತುಂಬ ನೋಡಿದ್ದು. ಮಡದಿ ಅಪರಿಮಿತ ಚೆಲುವೆ. ಆ ಚೆಲುವಿನ ನೆನಪು ತನ್ನ ಮನದಲ್ಲಿ ಸ್ಥಿರವಾಗಿ ಉಳಿಯಲಿಕ್ಕೆ ಹಳ್ಳಿಗ ಚಡಪಡಿಸುತ್ತಾನೆ.

ಏಕೆಂದರೆ, ದಿನವೂ ಮಡದಿಯನ್ನು ನೋಡಲು ಹಗಲಿನಲ್ಲಿ ಆ ತುಂಬು ಕುಟುಂಬದಲ್ಲಿ ಸಾಧ್ಯವೇ ಇಲ್ಲ. ಆ ದಿನ ಹಿರಿಯರ ಕಣ್ತಪ್ಪಿಸಿ ಹೊರ ಬಂದಂತೆ ದಿನವೂ ಬರಲು ಸಹ ಸಾಧ್ಯವಿಲ್ಲ. ಬೆಳಗಿನ ಜಾವ ನಾಲ್ಕು ಗಂಟೆಗೆ ಪತಿಯ ಪಾದಕ್ಕೆ ನಮಿಸಿ ಚೆಲುವೆ ಹೊರಬಿದ್ದಳೆಂದರೆ ಕುಟುಂಬದ ಜನರೊಂದಿಗೆ ವಿವಿಧ ಕೆಲಸಗಳಲ್ಲಿ ತೊಡಗಿದ



"ಕಾಡಿನ ದೇವತೆಯು ಕೋಪದಿಂದ ಹಾಗಾಗಿದೆ...ಚಿನ್ನದ ಮೊಸಳೆ ಹಾಗು ಚಿನ್ನದ ಹುಲಿ ಮಾಡಿಸಿ ಬ್ರಾಹ್ಮಣರಿಗೆ ದಾನ ಮಾಡಬೇಕು."

ಆಕೆಯನ್ನು ಹಳ್ಳಿಗ ಮತ್ತೆ ನೋಡಲು ಸಾಧ್ಯವಿರಲಿಲ್ಲ. ಅವನು ಅಣ್ಣಂದಿರೊಂದಿಗೆ ಎತ್ತುಗಳನ್ನಟ್ಟಿಕೊಂಡು ಬೇಸಾಯಕ್ಕೆ ಹೊರಡುತ್ತಿದ್ದ. ಮಧ್ಯಾಹ್ನ ಆಳು ಮಕ್ಕಳಿಗೂ ಬುತ್ತಿ ಹೊತ್ತು ತರುತ್ತಿದ್ದವಳು ತಾಯಿ. ಮತ್ತೆ ಸಂಜೆ ಬಂದು ಉಂಡು ಹರಟೆ ಹೊಡೆದು ಹಳ್ಳಿಗ ಕೋಣೆ ಸೇರಿ ಸೀಮೆ ಎಣ್ಣೆ ಮಿಣಕು ದೀಪದ ಬೆಳಕಿನಲ್ಲಿ ಮಡದಿಗಾಗಿ ಕಾಯುತ್ತ ತಪಸ್ಸು ಮಾಡುತ್ತಿದ್ದ. ಹಾಲು ಹೈನಿನ ಕೆಲಸ ಮುಗಿಸಿ, ಅತ್ತೆ ಓರಗಿತ್ತಿಯರೊಂದಿಗೆ ಪಾತ್ರೆ ಪಡಗ ತೊಳೆದು, ಕಸ ಮುಸುರೆ ಮುಗಿಸಿ, ದನಗಳಿಗೆ ಹುಲ್ಲು ಹಾಕಿ, ಹಾಲಿಗೆ ಹೆಪ್ಪಿಟ್ಟು ಎಲ್ಲ ಕೆಲಸ ಮುಗಿಸಿ ಚೆಲುವೆ ಕೋಣೆಗೆ ಬರುತ್ತಿದ್ದದ್ದು ಹನ್ನೆರಡು ಗಂಟೆಗೆ.

ಹಿರಿಯರು ತುಂಬಿದ ಮನೆಯಲ್ಲಿ ಆ ವೇಳೆಯಲ್ಲಿ ಪಿಸು ಮಾತಾಡಲು ಸಹ ಭಯ. ಕೋಣೆಯ ಮಿಣುಕು ದೀಪವನ್ನು ಮಡದಿ ಬಂದೊಡನೆ ಆರಿಸುತ್ತಿದ್ದಳು. ಅಣ್ಣ ಅತ್ತಿಗೆಯರು, ತಂದೆ ತಾಯಿ, ಹಳ್ಳಿಯ ಜನಸಾಮಾನ್ಯರೆಲ್ಲರ ಜೀವನ ಆಗಿನ ಕಾಲದಲ್ಲಿ ಹಾಗೇ ಇತ್ತು.

ಆದರೆ ರಸಿಕನಾದ ನಮ್ಮ ಹಳ್ಳಿಗನಿಗೆ ಮಾತ್ರ ಮಡದಿಯನ್ನು ಮನತುಂಬ ನೋಡಲು, ಅವಳೊಂದಿಗೆ ಮನದಣಿಯ ಮಾತಾಡಲು ಆಸೆ. ಎಂಟು ವರ್ಷದ ಓಂದೆ ಹಸೆ ಮೇಲೆ ಕೂತಾಗ ಮಡದಿಯನ್ನು ಗಂಟೆಗಟ್ಟಲೆ ನೋಡಿದ್ದ. ನಾಲ್ಕು ವರ್ಷದಿಂದಲೂ ತನ್ನೊಂದಿಗೆ ಸಂಸಾರ ಮಾಡುತ್ತ ಇರುವಾಕೆ. (ಮದುವೆಯಲ್ಲಿ ಚೆಲುವೆಗೆ ಎಂಟು ವರ್ಷ.)

ಈಗ ಚೆಲುವೆಗೆ ಹದಿನಾರರ ಹರೆಯ. ಹಳ್ಳಿಯ ಸಿರಿಯುಂಡು ಬೆಳೆದ ಹಾಲುಗಲ್ಲದ ಚೆಲುವೆ. ಮನೆಗೆ ಹೋಗಬೇಕೆಂದು ಚೆಲುವೆ ಆತುರದಿಂದ ಎದ್ದಾಗ, ಹಳ್ಳಿಗ– "ಮಡದಿ ನಿನ್ನ ಚೆಲುವಿಗೊಂದೊಂದು ನೆನಪ ಹಿಡಿದಿಡುವೆ." ಎಂದು ಒಂದು ಕ್ಷಣ ಅವಳನ್ನು ತಡೆಯುತ್ತಾನೆ. ಕುಹೂ...ಕುಹೂ...ಎಂದು ಕೋಗಿಲೆ ಕೂಗಿದಾಗ ಮಡದಿಯ ಕಂಠ ಸ್ವರದ ನೆನಪು ಕೋಗಿಲೆ ಗಾನದಂತೆ ಇರುವುದೆಂದು ನೆನೆಯುತ್ತಾನೆ. ಮಾವಿನ ಚಿಗುರು ಕಂಡಾಗ ತನ್ನಾಕೆಯ ಕೋಮಲ ಹಸ್ತಗಳಂತಿವೆಯೆಂದು ನೆನೆಸಿಕೊಳ್ಳುತ್ತಾನೆ. ದಾಳಿಂಬೆ ಹೂವಿನಂತೆಂದು ಮಡದಿಯ ಕೋಮಲ ಅಧರಗಳನ್ನು ನೆನೆಸುತ್ತಾನೆ. ಹೀಗೆ ವನಸಿರಿಯ ಸೊಬಗಿಗೆಲ್ಲ ಮಡದಿಯ ಚೆಲುವು ನೆನಪಿಟ್ಟುಕೊಂಡು ಹಳ್ಳಿಗ ಮನೆ ಸೇರುತ್ತಾನೆ.

ಹೂಬುಟ್ಟಿ ಎಲ್ಲೆಂದು ತಂದೆ ಕೇಳಿದಾಗ ಹಳ್ಳಿಗ ಚಡಪಡಿಸಿ ಕಾಡಿನಲ್ಲಿ ಹುಲಿಯೊಂದು ಅಡ್ಡಗಟ್ಟಿದ್ದರಿಂದ ಬುಟ್ಟಿ ಎಸೆದು ಹೋರಾಡಿ ಬಂದೆನೆಂದು ಹೇಳುತ್ತಾನೆ. ತಡವಾಗಿ ಬಂದ ತಮ್ಮನನ್ನು ಅಣ್ಣಂದಿರು ತರಾಟೆಗೆ ತೆಗೆದುಕೊಳ್ಳಬೇಕೆಂದಿದ್ದವರು, ಹುಲಿಯೊಡನೆ ಹೋರಾಡಿ ಬಂದವನೆಂದು ಮೈಗೆ ಎಣ್ಣೆಯೊತ್ತಿ ನೀರೆರೆದರು. ಇತ್ತ ಹೆಂಗಳೆಯರ ನಡುವೆ ಕೊಡ ಮರೆತು ಬಂದ ಚೆಲುವೆ ವಿಚಾರಣೆಗೀಡಾಗುತ್ತಾಳೆ. ಚೆಲುವೆ ಬೆದರುತ್ತ–ನದಿಯಲ್ಲಿ ಕೊಡ ಮುಳುಗಿಸಿದಾಗ ಮೊಸಳೆ ಹಾಯ್ದು ಕೊಡ ನುಂಗಿತು, ನಾನು ತಪ್ಪಿಸಿಕೊಂಡು ಓಡಿ ಬಂದೆ ಎನ್ನುತ್ತಾಳೆ.

ಮುಖ ಕೆಂಬಣ್ಣವಾಗಿದೆ. ಉಗುರಿನ ಗುರ್ತಿದೆ, ಕೂದಲು ಕೆದರಿದೆ, ನದಿಯ ನೀರಿನ ಅಲೆಗಳು ಹೊಡೆದು ಸೀರೆ ತೊಯ್ದಿದೆ. ಹಣೆಯಲ್ಲಿ ಕುಂಕುಮ ಕೆದರಿದೆ. ಕೊಡ ಹೋದರೆ ಹೋಗಲಿ ಹುಡುಗಿ ಉಳಿದಳೆಂದು ಅವಳಿಗೆ ಮಂತ್ರತಂತ್ರ ಹಾಕಿಸಿ ರಕ್ಷೆ ಇಡುತ್ತಾರೆ. ಮೊಸಳೆ ಕಚ್ಚಿ, ಪರಚಿ ರಕ್ತ ಒಸರಿದ ಕಡೆ ಹಸಿರು ಅರೆಸಿ ಮದ್ದು ಹಾಕಿಸುತ್ತಾರೆ.

ಹುಲಿಯಿಂದ ತಪ್ಪಿಸಿಕೊಂಡು ಬಂದ ಮಗ, ಮೊಸಳೆಯಿಂದ ತಪ್ಪಿಸಿಕೊಂಡು ಬಂದ ಸೊಸೆ–ಆಪತ್ತು ಪರಿಹಾರ ಮಾಡಿದ ದೇವರಿಗೆ ಏನು ಮಾಡಬೇಕೆಂದು (ಸೇವೆ) ಜಮೀನುದಾರ ಜೋಯಿಸರನ್ನು ಕರೆಸಿ ಕೇಳುತ್ತಾನೆ.

ಕಾಡಿನ ದೇವತೆಯ ಕೋಪದಿಂದ ಹಾಗಾಗಿದೆ.



"ಒಂದು ತಿಂಗಳು ಕಾಡಿನಲ್ಲೇ ಏಕಾಂತದಲ್ಲಿದ್ದು ವನದೇವತೆಯನ್ನು ಪೂಜಿಸಬೇಕಂತೆ... ನನ್ನ ಮಡದಿ ಸಹ ನನ್ನ ಜೊತೆ ಇಲ್ಲಿದ್ದು ಆರಾಧಿಸಬೇಕಂತೆ."

ಏಳು ದಿನ ವನದೇವತೆಗೆ ಉತ್ಸವ ನಡಿಸಿ ಊರವರಿಗೆ ಔತಣ ಏರ್ಪಡಿಸಬೇಕೆಂದು, ಚಿನ್ನದ ಮೊಸಳೆ, ಹಾಗು ಚಿನ್ನದ ಹುಲಿ ಮಾಡಿಸಿ ಬ್ರಾಹ್ಮಣರಿಗೆ ದಾನ ಮಾಡಬೇಕೆಂದು ಹೇಳುತ್ತಾರೆ ಆ ಜೋಯಿಸರು.

ಜಮೀನುದಾರ ಊರ ಹೊರಗಿನ ವನದಲ್ಲಿ ಬಿಡಾರ ಹಾಕಿಸಿ ಕುಟುಂಬದೊಂದಿಗೆ ಏಳು ದಿನ ಅಲ್ಲಿ ನೆಲಸುತ್ತಾನೆ. ಬ್ರಾಹ್ಮಣರು ಬಂದು ವನದೇವತೆಗೆ ಪೂಜೆ ಪುರಸ್ಕಾರ ಆರಂಭಿಸುತ್ತಾರೆ. ಆದರೆ ಆ ವನದಲ್ಲಿ ತಿರುಗಾಡುವಾಗ ಹಳ್ಳಿಗನಿಗೆ ಮಡದಿಯದೆ ಚಿಂತೆ. ಕೋಗಿಲೆಯ ಕೂಗಾನ ಕೇಳಿದಾಗ ಅವಳ ದನಿ ಹೀಗೆ ಇತ್ತು ಎಂದುಕೊಳ್ಳುತ್ತಾನೆ. ಹೀಗೆಯೆ ದಾಳಿಂಬೆ ಚಿಗುರು ಹೂ ಕಂಡಾಗ ಅವಳ ತುಟಿ ಹೀಗೆ ಇತ್ತು ಎಂದು ಭ್ರಮಿಸುತ್ತಾನೆ. ಜಿಂಕೆ ನೆಗೆಯುತ್ತ ಬಂದಾಗ ಮಡದಿಯ ಚಂಚಲ ನೇತ್ರಗಳ ನೆನಪು ತಂದುಕೊಳ್ಳುತ್ತಾನೆ.

ಹೀಗೆಯೆ ವನಸಿರಿಯ ಸೊಬಗಲ್ಲಿ ಮಡದಿಯ ಚೆಲುವು ನೆನೆಸಿಕೊಂಡು ಹಳ್ಳಿಗ ತಾಸುಗಟ್ಟಲೆ ಮೈಮರೆಯುತ್ತಿರುತ್ತಾನೆ. ಅಣ್ಣಂದಿರಾಡಿಸಿದ ಮಾತುಗಳ ಕಡೆ ಗಮನವಿಲ್ಲ, ಉತ್ಸವದ ಕೆಲಸ ಕಾರ್ಯಗಳ ಕಡೆ ಚುರುಕಿಲ್ಲ. ಹುಲಿಯೊಡನೆ ಹೋರಾಡಿದ್ದರಿಂದ ತಮ್ಮನಿಗೆ ಭೀತಿಯ ಭೂತ ಬಡಿದಿದೆಯೆಂದು ಅಣ್ಣಂದಿರು ಊಹಿಸಿದರು. ವನದೇವತೆಗೆ ಉತ್ಸವ, ಊರವರಿಗೆಲ್ಲ ಸಮಾರಾಧನೆ, ಬ್ರಾಹ್ಮಣರಿಗೆಲ್ಲ ಚಿನ್ನದ ಹುಲಿ, ಮೊಸಳೆ ದಾನ ಎಲ್ಲ ನಡೆಸಿದರೂ ತಮ್ಮ ಮಂಕಾಗಿಯೆ ಇದ್ದಾನಲ್ಲ ಎಂದು ಅಣ್ಣಂದಿರಿಗೆ, ತಂದೆಗೆ ಚಿಂತೆಯಾಯಿತು.

ಮಂತ್ರವಾದಿಗಳನ್ನು ಕರೆಸಿ ತಮ್ಮನಿಗೆ ಮಂತ್ರ ಹಾಕಿಸಬೇಕೆಂದು ಅಣ್ಣಂದಿರು ಯೋಚಿಸಿದರು. ಆದರೆ ಉಪಾಯಗಾರ ತಮ್ಮ ಮಾರನೆ ದಿನ ಅಣ್ಣಂದಿರು ಹಾಗು ತಂದೆಯನ್ನು ಕರೆದು—

“ಅಪ್ಪಾ, ನನಗೊಂದು ಸ್ವಪ್ನ ಬಿದ್ದಿತು, ನಾನು ಹೋರಾಡಿ ಗಾಯಗೊಳಿಸಿದ ಹುಲಿ ವಸಂತ ಮಾಸದ ವನದೇವತೆಯ ಪುತ್ರನಂತೆ. ಒಂದು ತಿಂಗಳು ಕಾಡಿನಲ್ಲೇ ಏಕಾಂತದಲ್ಲಿದ್ದು ನಾನು ವನದೇವತೆಯನ್ನು ಪೂಜಿಸಬೇಕಂತೆ; ಆಗ ವನದೇವತೆ ಪ್ರಸನ್ನಳಾಗುತ್ತಾಳಂತೆ. ಅಲ್ಲದೆ ನನ್ನ ಮಡದಿ ಗಾಯಗೊಳಿಸಿದ ಮೊಸಳೆ ಸಹ ವನದೇವತೆಯ ಸೋದರಿ ನದೀದೇವತೆಯ ಮಗುವಂತೆ. ಅವಳೂ ನನ್ನ ಜೊತೆ ಇಲ್ಲಿದ್ದು ಆರಾಧಿಸಬೇಕಂತೆ. ವನದೇವತೆ ನನಗೊಂದು ಮಂತ್ರ ಸಹ ರಹಸ್ಯವಾಗಿ ಉಪದೇಶಿಸಿದ್ದಾಳೆ,” ಎಂದನು.

“ಹಾಗೆ ಮಾಡದಿದ್ದರೆ ‘ನಿಮ್ಮಿಬ್ಬರಿಗು ಹುಚ್ಚು ಹಿಡಿಸಿ ನಿಮ್ಮ ವಂಶ ನಾಶ ಮಾಡುತ್ತೇನೆ’ ಎಂದಳು...” ಎಂದು ಸಹ ಸೇರಿಸಿದನು. ಮಂಕು ಹಿಡಿದ ಮಗ ಸೊಸೆ ಸರಿಹೋದರೆ ಸಾಕೆಂದು ಜಮೀನುದಾರ ಕುಟುಂಬದವರು ನಿಶ್ಚೈಸಿದರು. ಅಲ್ಲದೆ ವನದೇವತೆಯ ಆಜ್ಞೆ ಮೀರುವ ಧೈರ್ಯವುಂಟೆ.

ಅದೇ ರೀತಿ ಮಗ ಸೊಸೆಯರನ್ನು ಬಿಡಾರದಲ್ಲಿರಿಸಿ ಅವರೆಲ್ಲ ಊರಿಗೆ ತೆರಳಿದರು. ಧೂರ್ತ ಹಳ್ಳಿಗ ತನ್ನ ಚೆಲುವೆ ಮಡದಿಯೊಡನೆ ತಿಂಗಳುದ್ದಕ್ಕೂ ಅಲ್ಲೇ ನೆಲೆಸಿದ. ವಸಂತಮಾಸದ ಪ್ರಕೃತಿ ಸಿರಿಯ ರಮ್ಯತೆಯಲ್ಲಿ ಮನದಣಿಯ ವಿಹರಿಸಿದ. ಅಷ್ಟೆ ಅಲ್ಲ ಮಾವಿನ ಚಿಗುರಿನ ರಸದಲ್ಲಿ ಮಡದಿಯ ಚಿತ್ರ ಸಹ ರಚಿಸಿದ–ಮರದ ತೆಳುವಾದ ತೊಗಟೆಯ ಮೇಲೆ. ಅದನ್ನು ಗುಪ್ತವಾಗಿ ಎತ್ತಿಟ್ಟುಕೊಂಡ. ಅವನ ಆಸೆ ಕೊಂಚ ಮಟ್ಟಿಗೆ ತಣಿಯಿತು. ತಿಂಗಳು ಮುಗಿದ ಮೇಲೆ ಊರಿಗೆ ಹಿಂತಿರುಗಿದ. ಈಗಿನಂತೆ ಹನಿಮೂನ್, ಭಾವಚಿತ್ರ, ಮಡದಿಯರೊಡನೆ ವಾಕಿಂಗ್, ಚಲನಚಿತ್ರ ಯಾವುದೊಂದು ಸೌಲಭ್ಯ ಇಲ್ಲದ ಹಳೆಗಾಲದ ಕಥೆ ಇದು. ✿



ಮಾವಿನ ಚಿಗುರಿನ ರಸದಲ್ಲಿ ಮಡದಿಯ ಚಿತ್ರ ರಚಿಸಿದ, ಮರದ ತೆಳುವಾದ ತೊಗಟೆಯ ಮೇಲೆ.

ಜೀವನ ಸಂಗೀತ

ಜೀವನವೊಂದು ಆಹ್ವಾನ; ಆದ್ದರಿಂದ ಇದಕ್ಕೆ ಓಗೊಡಿರಿ.
ಜೀವನವೊಂದು ಹೋರಾಟ; ಆದ್ದರಿಂದ ಇದಕ್ಕೆ ಸಿದ್ಧರಾಗಿರಿ.
ಜೀವನವೊಂದು ದುಃಖ; ಆದ್ದರಿಂದ ಇದನ್ನು ಹಿಮ್ಮೆಟ್ಟಿರಿ.
ಜೀವನವೊಂದು ದುರಂತ; ಆದ್ದರಿಂದ ಇದಕ್ಕೆ ಭಯಪಡಬೇಡಿ.
ಜೀವನವೊಂದು ಕರ್ತವ್ಯ; ಆದ್ದರಿಂದ ಇದನ್ನು ಪೂರೈಸಿರಿ.
ಜೀವನವೊಂದು ಆಟ; ಆದ್ದರಿಂದ ಇದನ್ನು ಆಡಲು ಕಲಿಯಿರಿ.
ಜೀವನವೊಂದು ಗೂಢ; ಆದ್ದರಿಂದ ಇದನ್ನು ಅರಿತುಕೊಳ್ಳಿರಿ.
ಜೀವನವೊಂದು ಸಂಗೀತ; ಆದ್ದರಿಂದ ಇದನ್ನು ಮಧುರವಾಗಿ
ಹಾಡಲು ಕಲಿಯಿರಿ.
ಜೀವನವೊಂದು ಆನಂದ; ಆದ್ದರಿಂದ ಇದನ್ನು ಸವಿಯಿರಿ.
ಜೀವನವೊಂದು ಸುಸಂಧಿ; ಆದ್ದರಿಂದ ಇದನ್ನು ಸರಿಯಾಗಿ
ಉಪಯೋಗಿಸಿರಿ.
ಜೀವನವೊಂದು ಕನಸು; ಆದ್ದರಿಂದ ಇದನ್ನು ನೆಚ್ಚಬೇಡಿ.
ಜೀವನವೊಂದು ಪ್ರವಾಸ; ಆದ್ದರಿಂದ ಇದನ್ನು ಮುಗಿಸಿರಿ.
ಜೀವನವೊಂದು ಭರವಸೆ; ಆದ್ದರಿಂದ ಇದನ್ನು ಈಡೇರಿಸಿರಿ.
ಜೀವನವೆಂದರೆ ಸೌಂದರ್ಯ; ಆದ್ದರಿಂದ ಇದನ್ನು ಉಂಟಲು
ಕಲಿಯಿರಿ.
ಜೀವನವೆಂದರೆ ಪ್ರೀತಿ; ಆದ್ದರಿಂದ ಪ್ರೀತಿಸಲು ಕಲಿಯಿರಿ.

ರಮೇಶ ಗುಡಗುಂಟಿ

1973
ಏಪ್ರಿಲ್

ಸರ್ವಜ್ಞ ಕವಿ

ಮುಚ್ಚಿಟ್ಟ ಮುಗ್ಗು ನಾರುವ ಒಳಬಾಳ ಬಿಚ್ಚಿ
ಬಿಸಿಲಿಗೆ, ಹಂಗು-ಹಾತೆಗಳ ಕೊಡವಿ, ಬರಿನೆತ್ತಿ
ಹೊರಟ ಜಗದಿ ಸ್ವತಂತ್ರ. ಸಂದಿ-ಗೊಂದಿಯ ಸುತ್ತಿ
ಹೊಲಸು-ಕೊಳೆ-ಕಸಕೆ ಬೆಂಕಿ ಹಚ್ಚಿ, ಒಳಿತನು ಮೆಚ್ಚಿ
ತೆರೆಯ ಮೇಲಿಟ್ಟ. ಡಾಂಭಿಕರನೆತ್ತೆತ್ತಿ ಒಗೆದ.
ನಕ್ಕು ನಗಿಸಿದ ಸ್ವರ್ಗಕ್ಕೆ ಕಿಚ್ಚು ಹಚ್ಚುವುದ
ಕಲಿಸಿ. ಕೆಟ್ಟ ರಕ್ತದ ಕುರುವೊಡೆದು ಲೇಪಿಸಿದ
ಗಂಧ. ತನಗು ಜಗಕೂ ನಡುವೆ ತಕ್ಕ ತ್ರಿಪದಿಯ
ಬಂಧ; ಬದುಕು-ಬಂಗಾರಕ್ಕೆ ಒರೆ ಹಚ್ಚಿದ.
ಮನೆಯಿಲ್ಲ, ಮಠವಿಲ್ಲ: ಊರೆಲ್ಲ ನೆಂಟರು.
ಎಲ್ಲಿ, ಯಾರಿವನ ಕಣ್ಣು ತಪ್ಪಿಸಿದ ಬಂಟರು ?
ಬಳ್ಳಿಗುರುಡರಿಗೊಳ್ಳೆ ಗುರುವಾಗಿ ಕೈಹಿಡಿದ.
ಋಷಿಯಲ್ಲ ? ಋಜುಬಾಳ ಋಷಿ. ನಿಜವ ಪರಿಭಾವಿಸಿ-
ಇವನ ಕನ್ನಡಿಯಿರದೆ ನಮ್ಮ ಮುಖವೆಲ್ಲ ಮಸಿ.

— ಚೆನ್ನವೀರ ಕಣವಿ

ಬೆಂಗಳೂರಲ್ಲಿ ವಾಸಿಸುತ್ತಿರುವ ಕನ್ನಡೇತರರು ಕನ್ನಡಿಗರನ್ನು ಎಂತು ಕಂಡಿದ್ದಾರೆ, ಕನ್ನಡಿಗರ ಬಗ್ಗೆ ಯಾವ ಅಭಿಪ್ರಾಯ ಅವರ ಮನದಲ್ಲಿ ಮೂಡಿನಿಂತಿದೆಯೆಂಬುದನ್ನು ನೀವು ತಿಳಿಯಬೇಕಿದೆಯೆ? ಇಲ್ಲಿ ಓದಿ ನೋಡಿ . . . . . .

ಕಿಂಡಿ ನೋಟದಲ್ಲಿ ಕಂಡ ಕನ್ನಡಿಗರು

ಗೋವಿಂದಮೂರ್ತಿ ದೇಸಾಯಿ

ಲಂಡನ್ ವಿಮಾನ ನಿಲ್ದಾಣವೇ ಇರಲಿ ಅಥವಾ ಲೋಂಡಾದ ರೇಲುಮನೆಯೇ ಇರಲಿ, ಅಪರಿಚಿತ ಪಂಜಾಬೀ ಶೀಖರ ಗಡ್ಡಗಳೆರಡು ಒಂದನ್ನೊಂದು ಕಂಡರೆ ಅಥವಾ ಮದ್ರಾಸೀ ಭಸ್ಮಭೂಷಿತ ಕುಂಭಕೋಣದ ಅಯ್ಯರರಿಬ್ಬರ ಜುಟ್ಟುಗಳು ಒಂದೆಡೆ ಸೇರಿದರೆ ಅಥವಾ ಅರ್ಧ ತೋಳಿನಂಗಿಯ ಕೇರಳದ ಕಾಕಾಗಳಿಬ್ಬರ ಲುಂಗಿಗಳ ಚುಂಗುಗಳೆರಡು ಒಂದೆಡೆ ಹಾರಾಡಿದರೆ ಕಂಡುಬರುವ ಸಾಜಾ ಸಾಮರಸ್ಯಕ್ಕೂ, ರಾಜಸ್ಥಾನೀ ವೇಷ-ಭೂಷಣಗಳನ್ನು ಧರಿಸಿ ಹಣೆಗೆ ಕುಂಕುಮ ಹಚ್ಚಿಕೊಂಡು, 'ದೇಶ'ಕ್ಕೆ ಹೊರಟು ನಿಂತ ಸ್ನೇಹಿತನನ್ನು ಅಪ್ಪಿಕೊಂಡು ಬೀಳ್ಕೊಡಲು ರೇಲುಮನೆಗೆ ಬಂದು ಕಣ್ಣಂಚಿನಲ್ಲಿ ನೀರನ್ನು ತಂದು ಶುಭ ಕೋರುವ ಮಾರವಾಡಿಗಳ ಖೋಟಾ ಆತ್ಮೀಯತೆಗೂ ಅಜಗಜಾಂತರ! ಮಾರವಾಡಿಗಳದು ಬಾಡಿಗೆಯ ಆತ್ಮೀಯತೆ. ಮಾರವಾಡಿಗಳ ಆತ್ಮೀಯತೆಯನ್ನೇ ನಾವು ಪರಪ್ರಾಂತದಲ್ಲಿ ಆಕಸ್ಮಿಕವಾಗಿ ಭೆಟ್ಟಿಯಾದ ಕನ್ನಡಿಗರಲ್ಲಿಯೂ ಕಾಣಬಹುದು.

ನಾನೊಮ್ಮೆ ಮದ್ರಾಸಿನಿಂದ ಪುಣೆಗೆ ಹೊರಟಿದ್ದೆ. ಸುಪ್ರಸಿದ್ಧ ಇಡ್ಲಿ-ವಡೆಗಳ ರೇಲುಮನೆಯಾದ ಗುತ್ತಿ ಬರುವ ಪೂರ್ವದಲ್ಲಿಯೇ ನನ್ನ ಸಹಪ್ರಯಾಣಿಕರೊಬ್ಬರು ಮೈಸೂರಿನವರೆಂದು ತಿಳಿಯಿತು. ಆಮೇಲೆ ಮಾತು ಇಂಗ್ಲೀಷಿನಿಂದ ಕನ್ನಡಕ್ಕಿಳಿಯಿತು. ಕೂಡಲೇ ಅವರು. "ಓ... ನೀವು ಧಾರವಾಡದ ಕಡೆಯವರೆಂದು ಕಾಣುತ್ತೆ. ಅಂತಲೇ ಬೆಳಿಗ್ಗೆ ಅನ್ನುವಲ್ಲಿ ಮುಂಜಾನೆ ಅಂದುಬಿಟ್ಟಿರಿ!" ಎಂದು, ನಾನು ಮಹಾಪರಾಧ ಮಾಡಿದ ರೀತಿಯಲ್ಲಿ ಮಾತನಾಡಿದರು. ಇಬ್ಬರೂ ರೇಲಿನಿಂದಿಳಿದು ಒಂದೆಡೆ ನಿಂತೇ ತೀರ್ಥಪ್ರಸಾದ ಸ್ವೀಕರಿಸಿದೆವು. ನಾನು ಇಬ್ಬರ ಹಣವನ್ನೂ ಕೊಡಲು ಮುಂದೆ ಹೋದಾಗ, "ಛೀ...ಛೀ... ನೀವೇಕೆ ಕೊಡುತ್ತಿರಿ?" ಎಂದವರೇ ತಮ್ಮ ಕಿಸೆಯಿಂದ ಹಣ ತೆಗೆದು ಬಿಲ್ಲು ಕೊಟ್ಟರು. ಆದರೆ ಅವರು ಕೊಟ್ಟದ್ದು ತಮ್ಮದಷ್ಟೇ ಹಣ. ಆಮೇಲೆ ನಾನು ಪುನಃ ನನ್ನ ಹಣವನ್ನಿತ್ತು ಗಾಡಿ ಹತ್ತಿದೆ. ಮೇಲಕ್ಕೆ ಬಂದಮೇಲೆ ಮಾತು ಮೌನಕ್ಕೆ ತಿರುಗಿತು. ಅಲ್ಲಿಗೇ ನಮ್ಮ ಸಂಬಂಧ ಕಡಿದಂತಾಯಿತು. ಪ್ರಾಯಶಃ ನಾನು ಧಾರವಾಡದ ಕನ್ನಡಿಗನಾದುದರಿಂದ ಅವರಿಗೆ ಅಪಥ್ಯವೆನಿಸಿತೇನೋ!

ಅದನ್ನು ಬಿಡಿರಿ. ನೀವು ಬೆಂಗಳೂರಲ್ಲಿ ರಾಜಾಜಿನಗರಕ್ಕೆ ಬಂದರೆ ಒಂದೊಂದು ಗುಂಪು ಕಟ್ಟಿಕೊಂಡು, ಒಂದೊಂದು ದಿಕ್ಕಿಗೆ ಮುಖ ಮಾಡಿಕೊಂಡು, ತಂತಮ್ಮ ಪ್ರದೇಶಕ್ಕಷ್ಟೇ ಸೀಮಿತವಾದ ಸಮಸ್ಯೆಗಳನ್ನೇ ಚರ್ಚಿಸುವ



ಕನ್ನಡಿಗರನ್ನು ನೋಡಿದಾಗ ಮುಂಬಯಿ ಭಾಗದಿಂದ ಬಂದವರು; ಇವರು ಹೈದ್ರಾಬಾದಿನಿಂದ ಬಂದವರು; ಇವರು ಮದ್ರಾಸ್ ಆಡಳಿತೆಯಿಂದ ಬಂದವರು; ಇವರು ಕಾಸರಗೋಡು ಕಡೆಯಿಂದ ಬಂದವರು; ಇವರು ಕೊಡಗಿನವರು; ಇವರು ಮಾಜೀ ಮೈಸೂರು ಸಂಸ್ಥಾನದಲ್ಲಿಯೇ ಹುಟ್ಟಿ ಬೆಳೆದವರು ಎಂದು ಸಹಜವಾಗಿ ಗುರುತಿಸಬಹುದು. ಕರ್ನಾಟಕವೇನೋ ಒಂದಾದರೂ ಇವರ ಪಾಲಿಗೆ ಮಾತ್ರ ಒಂದೇ ಕರ್ನಾಟಕವಾಗಿಲ್ಲ. ಈ ಕನ್ನಡಿಗರಲ್ಲಿರುವ ಭಾವನಾವೈಷಮ್ಯವನ್ನು ಹೆಚ್ಚು ಚೆನ್ನಾಗಿ ನೋಡಬೇಕಾದರೆ ರಾಜಾಜಿನಗರದಿಂದ ವಿಧಾನಸೌಧಕ್ಕೆ ನೇರವಾಗಿ ಹೋಗುವ ಬಸ್ಸಿನಲ್ಲಿ ಪ್ರಯಾಣ ಮಾಡಬೇಕು. ಇಲ್ಲವೇ ವಸಂತನಗರದಲ್ಲಿರುವ ವಿಧಾನಸೌಧದ ಅಧಿಕಾರಿಗಳ ಮಧ್ಯದಲ್ಲಿ ಕೆಲ ಕಾಲ ವಾಸಿಸಬೇಕು. ಹದಿನೇಳು ವರ್ಷಗಳಿಂದಲೂ ಇವರೆಲ್ಲರೂ ಒಂದೇ ವಿಧಾನಸೌಧದ ನೆರಳಿನಲ್ಲಿ ಒಂದೇ ಮೈಸೂರು ಸಿವಿಲ್ ಸರ್ವೀಸ್ ರೂಲ್ಸಿನ ಚೌಕಟ್ಟಿನಲ್ಲಿ ನೌಕರಿ ಮಾಡುತ್ತ ಬಂದಿದ್ದರೂ, ತಮ್ಮ ಪುರಾತನ ಕಾನೂನುಗಳ ಸಂದಿಗೊಂದಿಗಳಲ್ಲಿ ಸಿಲುಕಿದ ಲೋಪದೋಷಗಳಿಗೆ ರಾವುಗನ್ನಡಿ ಹಿಡಿದು, ವಿಧಾನಸೌಧದೆದುರೇ ಇರುವ ನ್ಯಾಯಾಲಯದ ಕಟ್ಟೆ ಹತ್ತಿ, ಮೇಲಿನವರನ್ನು ಕೆಳಕ್ಕೆ ದಬ್ಬುವ ಮತ್ತು ಕೆಳಗಿನವರನ್ನು ಮೇಲಕ್ಕೆ ದೂಡುವ ಮಹಾಯಜ್ಞಕ್ಕೆ ಒಂದೇ ಸಮನೆ ಆಜ್ಯವನ್ನು ಸುರಿಯುತ್ತಲೇ ಬಂದಿದ್ದಾರೆ. ಹಾಗೆ ನೋಡಿದರೆ, ಇವರೆಲ್ಲರೂ ವಿಶೇಷತಃ ವಾಸಿಸುವುದು ರಾಜಾಜಿನಗರದ ಒಂದೇ ಬಡಾವಣೆಯಲ್ಲಿ, ನೌಕರಿ ಮಾಡುವುದು ಒಂದೇ ಸ್ಥಳದಲ್ಲಿ, ಹೋಗುವುದು ಒಂದೇ ಕ್ಯಾಂಟೀನಿಗೆ. ಆದರೂ ಅವರಲ್ಲುಂಟಾಗಿರಬಹುದಾದ ಭಾವೈಕ್ಯದ ಮಾತು ಬಂತೋ, ಒಬ್ಬರಿಗೊಬ್ಬರು ಮೈಲು ಮೈಲು ದೂರದಂತರದಲ್ಲಿ ನಡೆಯುತ್ತಾರೆ. ಹದಿನೇಳು ವರುಷಗಳ ಸಹಜೀವನ ಇವರಲ್ಲಿ ಇನ್ನೂ

ಸಹನಗುಣವನ್ನು ಮೂಡಿಸಲು ಸಮರ್ಥವಾಗಿಲ್ಲ!

ಎಲ್ಲೆಲ್ಲಿಯೂ ಇರುವಂತೆ ಇಲ್ಲಿಯೂ ಮೊದಲು ರಕ್ತಸಂಬಂಧ, ಆ ಮೇಲೆ ಜಾತಿ, ಆ ಮೇಲೆ ಭಾಷೆ ಹಲವಾರು ರಂಗಗಳಲ್ಲಿ ತಮ್ಮ ತಮ್ಮ ಪ್ರಭಾವೀ ಪಾತ್ರಗಳನ್ನು ಆಡುತ್ತವೆ. ಇಲ್ಲಿ ಕಂಡುಬರುವ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರಾದೇಶಿಕ ಭಾವನೆ. ಹತ್ತಾರು ಕನ್ನಡಿಗರು ಒಂದೆಡೆ ಸೇರಿದಾಗ, ಇಬ್ಬರು ದಕ್ಷಿಣ ಕನ್ನಡ ಜಿಲ್ಲೆಯವರೋ ಅಥವಾ ಇಬ್ಬರು ಉತ್ತರ ಕನ್ನಡ ಜಿಲ್ಲೆಯವರೋ ಅಥವಾ ಇಬ್ಬರು ಕೊಡಗಿನವರೋ ಸಂಧಿಸಿದರೆ ತಮ್ಮ ತಮ್ಮಲ್ಲಿ ತುಳುವನ್ನೋ, ಕೊಂಕಣಿಯನ್ನೋ ಅಥವಾ ಕೊಡಗಿನ ಭಾಷೆಯನ್ನೋ ಮಾತನಾಡುತ್ತಾರೆ. ಆ ಭಾಷೆ ಮಾತನಾಡಿದಾಗ ಅವರಿಗಾಗುವ ಅನಿರ್ವಚನೀಯ ಆನಂದವೇ ಬೇರೆ. ಅದರ ಪರಿಣಾಮ, ಅವರಿಬ್ಬರೂ ಮೂರನೇ ಕನ್ನಡಿಗನಿಗಿಂತ ಹೆಚ್ಚು ಸಮೀಪ ಬರುತ್ತಾರೆ.

ವಿಜ್ಞಾನವೆಷ್ಟೇ ಮುಂದುವರೆದಿದ್ದರೂ, ನಮ್ಮ ಬೆನ್ನನ್ನೇ ನಮಗೆ ತೋರಿಸುವಂತಹ ದರ್ಪಣವನ್ನು ಶೋಧಿಸಲು ಯಾವ ವಿಜ್ಞಾನಿಗೂ ಈಗಲೂ ಸಾಧ್ಯವಾಗಿಲ್ಲ. ಆದರೆ ನಮ್ಮ ಮಧ್ಯದಲ್ಲಿ ಕೆಲ ಕಾಲ ತಂಗಿ, ನಮ್ಮ ಹೆಜ್ಜೆಯ ಜಾಡಿನಲ್ಲಿ ಕೆಲ ಕಾಲ ನಡೆದಾಡಿ ನಮ್ಮ ಬೆನ್ನನ್ನು ನಮಗೆ ತೋರಿಸುವಂತಹ ಒಂದು ಚಿಕ್ಕ ದರ್ಪಣವನ್ನು ಕೆಲ ಅನ್ಯಭಾಷಿಕರು ಸಿದ್ಧಪಡಿಸಿದ್ದಾರೆ. ಅವರು ನಮ್ಮನ್ನೆಷ್ಟೇ ಸಮೀಪದಿಂದ ನೋಡಿದ್ದರೂ ನಾವವರಿಗೆ ಕಂಡದ್ದು ಕೇವಲ ಕಿಂಡಿಯಲ್ಲಿ ಮಾತ್ರ ಎಂದು ನೆನೆದು ಇದನ್ನೋದಿರಿ!

ಆಲಸಿಗರು

ಶ್ರೀಮತಿ ಗೀತಾ—ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಎಮ್. ಎ. ಪದವೀಧರರು. ಮದ್ರಾಸು ಅವರ ಹುಟ್ಟೂರು, ಮನೆಮಾತು ತಮಿಳು. ಮದ್ರಾಸ್, ದಿಲ್ಲಿ, ನಾಗಪುರ, ಬೆಂಗಳೂರುಗಳಲ್ಲಿ ಅಭ್ಯಾಸ ಮಾಡಿ ಕೋಯಿಮತ್ತೂರಲ್ಲಿ ಪದವೀಧರರಾಗಿದ್ದಾರೆ. ಅವರ ಅಜ್ಜಂದಿರ ಊರು ಬೆಂಗಳೂರು. ಅವರ ಮಾತಿನಲ್ಲಿಯೇ ಹೇಳಬೇಕಾದರೆ, "ಬೆಂಗಳೂರಲ್ಲಿರುವ ಹಿತಕರವಾದ ತಂಪು ವಾತಾವರಣವು ಯಾವಾಗಲೂ ಬೆಂಗಳೂರಿಗೆ ಹಬ್ಬದ ಬಣ್ಣವನ್ನೇ ಬಳಿದಿರುತ್ತದೆ. ಬೇಸತ್ತು ಬೇಸಿಗೆಯ ತಾಪ ಕಳೆದುಕೊಳ್ಳಲು ಗಿರಿಧಾಮಕ್ಕೆ ಹೋದವರು ಆಲಸಿಗರಾಗುವಂತೆ ಬೆಂಗಳೂರಿನ ಆಲ್ಹಾದಕರ ವಾತಾವರಣಕ್ಕೋ ಏನೊ ಇಲ್ಲಿಯ ಕೆಲಸಿಗರು ನನಗೆ ಆಲಸಿಗರಾಗಿ ಕಾಣುತ್ತಾರೆ. ಮೈಮುರಿದು ದುಡಿಯುವುದು ಇವರಿಗೆ ಬೇಡ. ತಿನ್ನುಣ್ಣುವುದರಲ್ಲಿ ಮೈಸೂರಿಗರು ವೈವಿಧ್ಯಪ್ರಿಯರು. ತಮಿಳರಂತೆ ಮುಂಜಾನೆ ಒಂದನ್ನ ಮತ್ತು ಸೊಪ್ಪು ಹಾಕಿದ ಒಂದು ಕೊಳಂಬನ್ನು ಮಾಡಿದರೆ ಸಂಜೆಯ ವರೆಗೆ ಅದನ್ನೇ ತಿಂದು ತೇಗುವಲ್ಲಿ ತೃಪ್ತಿಪಡುವುದಿಲ್ಲ. ಆದರೂ ಇಲ್ಲಿಯವರು, ಮನೆಯಲ್ಲಿ ಮಾಡಿದ್ದು ಸಾಲದೇ, ಗುಂಪು ಗುಂಪಾಗಿ ಹೋಟಲ್ಲಿಗೂ ಹೋಗಿ ತಿನ್ನುತ್ತಾರೆ. ಇವರನ್ನು ಭಕ್ಷ್ಯಪ್ರಿಯರೆಂದರೂ ಸಲ್ಲುತ್ತದೆ... ಬೆಂಗಳೂರಲ್ಲಿ ಭಾಷೆ ನನಗೆಂದೂ ಸಮಸ್ಯೆಯನ್ನೇ ಒಡ್ಡಿಲ್ಲ. ಇಲ್ಲಿ ಎಲ್ಲರಿಗೂ ತಮಿಳು ಬಂದೇ ಬರುತ್ತದೆ." ನಾನು ಮಧ್ಯದಲ್ಲಿ ಬಾಯಿ ಹಾಕಿ "ಶಿವಾಜಿನಗರ ಬಸ್ ಸ್ಟ್ಯಾಂಡಿನಿಂದ ಲಾಲ್‌ಬಾಗಿನ ವರೆಗೆ ಒಂದು ಗೆರೆ ಕೊರೆದು ಬೆಂಗಳೂರನ್ನು ಇಬ್ಭಾಗಿಸಿ, ದಕ್ಷಿಣ ಬೆಂಗಳೂರಿನ ಕ್ಯಾಂಟೋನ್‌ಮೆಂಟ್ ರೈಲ್ವೆ ಸ್ಟೇಶನ್, ಅಲಸೂರು, ಇಂದಿರಾನಗರಗಳಿಗೆ ಹೋದರೆ ನನಗೂ ಮದ್ರಾಸಿನಲ್ಲಿಯೇ ಇದ್ದಂತೆ ಭಾಸವಾಗುತ್ತದೆ. ಅಲ್ಲಿ ಕಿವಿಗೆ ಬೀಳುವುದು ತಮಿಳು, ತಮಿಳು ತಪ್ಪಿದರೆ ಮಲೆಯಾಳಿ," ಎಂದು ನಾನು ಹೇಳಿದಾಗ ಅವರು ನಕ್ಕರು. ಪ್ರಾಯಶಃ ಆ ನಗೆ ನನ್ನ ಮಾತಿಗೆ ಬೆಂಬಲವಾಗಿರಬಹುದು. ಅವರು ಮುಂದುವರೆದು, "ಆದರೆ ಬೆಂಗಳೂರಲ್ಲಿರುವವರು ನೆರೆಮನೆಯಲ್ಲಿ ಯಾರಿದ್ದಾರೆ ಎಂದು ಪರಿಚಯ ಮಾಡಿಕೊಳ್ಳುವ ಗೋಜಿಗೇ ಹೋಗುವುದಿಲ್ಲ. ಹೀಗಾಗಿ ಅಪರಿಚಿತ ಸ್ಥಳದಲ್ಲಿ ಪರಿಚಿತರ ಮನೆ ಹುಡುಕುವುದೆಂದರೆ ಒಂದು ಸಮಸ್ಯೆಯೇ ಆಗುತ್ತದೆ. ಯಾರನ್ನು ಕೇಳಿದರೂ ತನಗೆ ಗೊತ್ತಿಲ್ಲವೆನ್ನುತ್ತಾರೆ. ಈಗೆರಡು ವರುಷಗಳಿಂದಲೂ ಮದ್ರಾಸಿನ ಭಾಷಾಂಧತೆಯ ಗಾಳಿ ಬೆಂಗಳೂರ ಮೇಲೂ ಬೀಸಿ ವಿಷಪೂರಿತ

ಧೂಳಿಯನ್ನೆಬ್ಬಿಸಹತ್ತಿದೆ ಎಂದು ನನ್ನ ಅನಿಸಿಕೆ. ಇಲ್ಲಿಯವರನ್ನು ಸೂಕ್ಷ್ಮವಾಗಿ ನೋಡಿದರೆ ಪ್ರಬಲ ಕೋಮುಗಳವರು ತಮ್ಮ ಪ್ರಭಾವದಿಂದ ಸರಕಾರಿ ಮತ್ತು ಅರೆ-ಸರಕಾರಿ ನೌಕರಿಗಳನ್ನು ದೊರಕಿಸಿಕೊಂಡು ಬುದ್ಧಿಜೀವಿಗಳ ಪ್ರಾಮಾಣಿಕ ಪ್ರಪಂಚದಲ್ಲಿ ಅಪ್ರಾಮಾಣಿಕತೆಯನ್ನು ಬಿತ್ತಹತ್ತಿದ್ದಾರೆಂದು ಕಂಡುಬರುತ್ತಿದೆ. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ವಿಶಿಷ್ಟ ಕೋಮಿನವರೇ ತುಂಬಿದ್ದಾರೆಂದು ನಾನು ಪತ್ರಿಕೆಗಳಲ್ಲಿ ಆಗಾಗ ಓದುತ್ತಿರುತ್ತೇನೆ. ಇಂತಹ ಪರಿಸ್ಥಿತಿ ತಮಿಳುನಾಡಿನಲ್ಲಿ ಇನ್ನೂ ಬಂದಿಲ್ಲ.

"ಮೈಸೂರಿನ ಒಳಪ್ರಾಂತದ ಪರಿಚಯ ನನಗಿಲ್ಲ. ಆದರೆ ಬೆಂಗಳೂರಿನ ಮಟ್ಟಿಗೆ ಹೇಳುವದಾದರೆ ಹೊಸ ಚಿತ್ರ ಬಿಡುಗಡೆಯಾದ ದಿವಸವೇ ನೋಡಬೇಕೆಂದು ಚಲಚ್ಚಿತ್ರಮಂದಿರದೆದುರು ಚಲಚ್ಚಿತ್ರಪ್ರಿಯರು ಸಾಲುಸಾಲಾಗಿ ನಿಲ್ಲುವುದನ್ನು ನೋಡಿದರೆ, ಅದು ಅವರು ಚಿತ್ರಕ್ಕೆ ತೋರಿಸುವ ಪ್ರೋತ್ಸಾಹವೋ ಅಥವಾ ಎಲ್ಲರಿಗಿಂತಲೂ ನಾವು ಮೊದಲು ನೋಡಿದೆವೆಂದು ಹೇಳುವ ಉತ್ಸಾಹವೋ ನನಗರ್ಥವಾಗುವದಿಲ್ಲ! ಬೆಂಗಳೂರವರು ಸೌಮ್ಯ ಪ್ರಕೃತಿಯವರು. ಆಟೋರಿಕ್ಷಾದವರು ತಮ್ಮ ನಡೆನುಡಿಯಲ್ಲಿ ಸೌಜನ್ಯ ಮತ್ತು ಸಹಕಾರ ತೋರಿಸಿದರೆ ಕನ್ನಡಿಗರ ಸಜ್ಜನಿಕೆಗೆ ಇನ್ನಷ್ಟು ಶೋಭೆ ಬರುವುದೆಂದು ನನಗನಿಸುತ್ತದೆ. ಬೆಂಗಳೂರು ಫ್ಯಾಶನ್ ನಗರ. ಮದ್ರಾಸಿನವಳಾದ ನನಗೆ, ಮದ್ರಾಸಿನಲ್ಲಿ ಆರ್ಕಿಟೆಕ್ಟ್ ಆಗಿರುವ ನನ್ನ ಪತಿಯೊಡನೆ ಬೆಂಗಳೂರಿನಲ್ಲಿಯೇ ನೆಲಸಲು ಇಷ್ಟ. ಅಷ್ಟು ಸೊಗಸಾದ ನಗರ ಬೆಂಗಳೂರು, ಅಷ್ಟು ಒಳ್ಳೆಯವರು ಕನ್ನಡಿಗರು!" ಎಂದು ಹೇಳಿದರು.

ಎರವಲು ಸೌಂದರ್ಯ

ನಾನು ಸಂದರ್ಶಿಸಿದವರಲ್ಲಿ ಇನ್ನೊಬ್ಬರು ಆಂಧ್ರದ ಶ್ರೀಮತಿ ಸಬಿತಾ ಪವಾರ್. ಶ್ರೀಮತಿ ಪವಾರರವರು ಎಮ್. ಎ. ಪದವೀಧರರು. ಹೊಣೆಗಾರಿಕೆಯ ಹುದ್ದೆಯಲ್ಲಿ ನೌಕರಿ ಮಾಡುತ್ತಿರುವ ಅವರು ಮದ್ರಾಸಿನಿಂದ ವರ್ಗವಾಗಿ ಬೆಂಗಳೂರಿಗೆ ಬಂದಿದ್ದಾರೆ. ನೆಲ್ಲೂರಲ್ಲಿ ಹುಟ್ಟಿ, ಅಲ್ಲಿಯೇ ಮಾಧ್ಯಮಿಕ ಶಿಕ್ಷಣ ಪೂರೈಸಿ ಮದ್ರಾಸಿನಲ್ಲಿ ಕಾಲೇಜ್ ಶಿಕ್ಷಣವನ್ನು ಮುಗಿಸಿದ್ದಾರೆ. ಅವರು ಹೇಳುವಂತೆ, "ಮದ್ರಾಸಿನಲ್ಲಿಯೂ ನಾನು ಪರಭಾಷಿಯಾಗಿದ್ದೆ, ಇಲ್ಲಿಯೂ ಪರಭಾಷಿಯೇ ಆಗಿದ್ದೇನೆ. ಬೆಂಗಳೂರು ಮಹಾನಗರವಾಗಿರುವುದರಿಂದ ಭಾಷೆಯ ತೊಂದರೆ ನನಗನಿಸುವುದೇ ಇಲ್ಲ. ನನ್ನ ಅನುಭವವೆಂದರೆ ನನ್ನ ನೆರೆಹೊರೆಯವರು ನನ್ನೊಡನೆ ಬೆರೆಯುತ್ತಾರೆ. ಇಲ್ಲಿಯ ಜನರು ಸರಳ ಸ್ವಭಾವದವರಾಗಿ ಕಾಣುತ್ತಾರೆ. ಆಂಧ್ರದವರಾದ ನಾವು ನಮ್ಮ ಮದುವೆಗಳಲ್ಲಿ ಬಂಗಾರ ಕೊಳ್ಳುವಲ್ಲಿ ಸಾಕಷ್ಟು ಹಣವನ್ನು ವ್ಯಯಿಸುತ್ತೇವೆ. ತಮಿಳರು ಬಹುಪಾಲು ಹಣವನ್ನು ವಧುವಿಗೆ ಕೊಡುವ ಪಾತ್ರೆಗಳಿಗೆ ವೆಚ್ಚ ಮಾಡುತ್ತಾರೆ. ಆದರೆ ಇಲ್ಲಿಯವರು ವಿವಾಹಭೋಜನಕ್ಕಾಗಿ ಅಪಾರ ಹಣ ವ್ಯಯಿಸುತ್ತಾರೆ. ಭಾಷಾಂಧತೆಯ ವಿಕಟರೂಪ ಮುಂಬಯಿ ಮತ್ತು ಮದ್ರಾಸುಗಳ ನಂತರ ಈಗ ಬೆಂಗಳೂರಲ್ಲಿ ಕಂಡುಬರಹತ್ತಿದೆ. ಮೈಸೂರವರ ಸಂಗೀತ ನನಗೆ ತುಂಬಾ ಹಿಡಿಸುತ್ತದೆ. ಹಾಗೆ ನೋಡಿದರೆ ಬೆಂಗಳೂರು ಶಾಂತ ನಗರ. ಈಗಿಲ್ಲಿ ನಡೆಯುತ್ತಿರುವ ಈ ಚಳವಳಿ ದೇಶದ ದೃಷ್ಟಿಯಿಂದ ಹಿತಕರವಲ್ಲ. ಆದರೆ ಮಹಾನಗರಗಳಿಗೆ ಸೋಂಕುತ್ತಿರುವ ಈ ಸಂಕು ರೋಗವನ್ನು ಎದುರಿಸುವುದು ಅನಿವಾರ್ಯವಾಗಿದೆ," ಎಂದು ನಿಟ್ಟುಸಿರುಬಿಟ್ಟರು. ಕ್ಷಣ ಹೊತ್ತು ನಿಂತು, "ಪೊಟ್ಟಿ ಶ್ರೀರಾಮುಲು ಸತ್ತು ನಮಗೆ ನಮ್ಮ ಆಂಧ್ರ ಪ್ರದೇಶವನ್ನು ಕೊಡಿಸಿದರು. ಅದೇ ಎಲ್ಲ ಭಾಷಾವಾರು ಪ್ರಾಂತಗಳಿಗೆ ಮೂಲ ಬೀಜವಾಯಿತು. ಆದರೀಗ ಅಲ್ಲಿ ಏನು ನಡೆಯುತ್ತಿದೆ ನೋಡಿರಿ. ಒಂದೇ ಮನೆಯ ಮಧ್ಯದಲ್ಲಿ ಗೋಡೆ ಏರುತ್ತಿದೆ. ಒಬ್ಬರನ್ನೊಬ್ಬರು ಕಂಡರೆ ಸೇರದಾಗಿದ್ದಾರೆ. ದೇಶ ಹೀಗೆ ರಾಜಕಾರಣಿಗಳ ಕೈಯಲ್ಲಿ ಸಿಕ್ಕು ಛಿದ್ರವಿಚ್ಛಿದ್ರವಾಗುತ್ತ ನಡೆದಿದೆ," ಎಂದು ಬಿಸುಸುಯ್ದರು. ಅವರು ಹೃದಯದಾಳದಿಂದ ಬಂದ ಸತ್ಯವನ್ನೇ ನುಡಿದಿದ್ದರು.

"ಹೈದ್ರಾಬಾದಿನ ಪರಿಸ್ಥಿತಿ ಬೆಂಗಳೂರಿಗೂ

ಒಮ್ಮೆ ಬಂದಿತ್ತು. ದೇವರ ದಯದಿಂದ ಆ ಅಪಸ್ವರದ ಮಾತು ಈಗಿಲ್ಲಿ ಕೇಳಿಬರುತ್ತಿಲ್ಲ. ಬೆಂಗಳೂರು ಹೈದ್ರಾಬಾದಿಗಿಂತಲೂ ಸುಂದರ ನಗರ ಮತ್ತು ಬೆಂಗಳೂರವರು ಹೆಚ್ಚು ಬೆಡಗಿನ ಬಟ್ಟೆಗಳನ್ನು ಧರಿಸುವವರು; ಅಲ್ಲವೆ?" ಎಂದು ನಾನು ಕೇಳಿದೆ.

"ನಿಜ. ಮುಂಬಯಿ ಬಿಟ್ಟರೆ ಬೆಂಗಳೂರಲ್ಲೇ ಹೆಚ್ಚು ಫ್ಯಾಶನ್ ಇದೆ. ಆದರೆ ಈ ಫ್ಯಾಶನ್ ಮಾಡುವ ಲಲನಾಮಣಿಯರಲ್ಲಿ ಅಥವಾ ಯುವಕರಲ್ಲಿ ನನಗೆ ಹೊರಗಿನಿಂದ ಬಂದು ನೆಲೆಸಿದ ಮುಖಗಳೇ ಹೆಚ್ಚಾಗಿ ಕಾಣುತ್ತಿವೆ," ಎಂದರು. ಅವರ ಮಾತು ನೂರು ಪೈಸೇ ಸತ್ಯ. ಸ್ಥಾನಿಕರು ಬರಬರುತ್ತ ಗಟ್ಟಿ ಅಂಗಿಯ ಬದಲು ಹರಕು ಚಿಂದೆಯನ್ನು ಹಾಕಿಕೊಳ್ಳುವಂತಾದರೆ ಸಿಂಧಿಗಳೋ, ಗುಜರಾತಿಗಳೋ, ತಮಿಳರೋ ದಿನದಿನವೂ ಉಬ್ಬುತ್ತ ಅತ್ಯಾಧುನಿಕ ಬಟ್ಟೆಗಳನ್ನು ಧರಿಸಿ ಬೆಂಗಳೂರ ಸೌಂದರ್ಯವನ್ನು ಮಂದಿಯ ಕಣ್ಣಲ್ಲಿ ಕುಕ್ಕುವಂತೆ ಮಾಡುತ್ತಾರೆ. ಸ್ಥಾನಿಕರನ್ನೂ ಮಲಗಿದ ಹಾಸಿಗೆಯನ್ನೇ ಬಿಟ್ಟು ಏಳುವ ಸ್ಥಿತಿಯಲ್ಲಿಲ್ಲ.

ಸೌಮ್ಯ ಪ್ರಕೃತಿಯವರು

ನಾನು ಸಂದರ್ಶಿಸಿದ ಮೂರನೆಯವರು ಕುಮಾರಿ ಗೀತಾ ಚಾಕೋವ್. ಹೆಸರು ಕೇಳಿದರೇ ಕೇರಳದವರೆಂದು ಸಹಜವಾಗಿ ಹೇಳಬಹುದು. ತಂದೆ ಮಿಲಿಟರಿಯಲ್ಲಿ ದೊಡ್ಡ ಹುದ್ದೆಯಲ್ಲಿರುವರು; ಮಗಳು ಕೂಡ ಸ್ಟೇಟ್ ಬ್ಯಾಂಕಿನ ಆಫೀಸರ್ ಹುದ್ದೆಯಲ್ಲಿರುವರು. ತಂದೆ ಊರೂರು ಅಲೆದಾಡಿದ್ದರಿಂದ ಮಗಳೂ ಹತ್ತಾರು ಊರುಗಳಲ್ಲಿ ಶಿಕ್ಷಣವನ್ನು ಪಡೆಯಬೇಕಾಯಿತು. ದಿಲ್ಲಿಯ ಲೇಡಿ ಶ್ರೀರಾಮ ಕಾಲೇಜಿನಿಂದ ಪದವಿಯನ್ನು ಮುಗಿಸಿದರೆ ಬೆಂಗಳೂರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಸ್ನಾತಕೋತ್ತರ ಅಭ್ಯಾಸ ಮಾಡಿದ್ದಾರೆ. ಕೇರಳದ ಹೊರಗೆ ಹತ್ತಾರು ವರ್ಷಗಳನ್ನು ಕಳೆದಿದ್ದರೂ ಕೇರಳದ ಕೆಚ್ಚನ್ನು ಅಚ್ಚಳಿಯದೇ ಉಳಿಸಿಕೊಂಡು ಬಂದಿದ್ದಾರೆ. ಕನ್ನಡಿಗರ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ, "ಮೈಸೂರಿನ ಯುವತಿಯರಲ್ಲಿ ನೌಕರಿ ಮಾಡುವ ಹವ್ಯಾಸ ಇಲ್ಲವೇ ಇಲ್ಲ. ಸೆಂಟ್ರಲ್ ಕಾಲೇಜಿನಲ್ಲಿ ನನ್ನ ಸಹಪಾಠಿಯೊಬ್ಬಳಿದ್ದಳು. ಅವಳು ಮೈಸೂರವಳು, ಒಳ್ಳೇ ಪ್ರತಿಭಾವಂತ ವಿದ್ಯಾರ್ಥಿನಿ. ನೋಡಲೂ ಅಷ್ಟೇ ಚೆಲುವೆ. ಪ್ರಥಮ ರ್‍ಯಾಂಕ್ ಪಡೆದ ಅವಳು ಪ್ರಯತ್ನಿಸಿದ್ದರೆ ಅವಳಿಗೆ ಒಳ್ಳೇ ಉದ್ಯೋಗವೂ ದೊರೆಯುತ್ತಿತ್ತು. ಆದರೆ...imagine...she just submitted..." ಎಂದು ಆಶ್ಚರ್ಯ ವ್ಯಕ್ತಪಡಿಸುತ್ತ, "ತಂದೆ ತಾಯಿ ಗೊತ್ತುಪಡಿಸಿದ ವರನೊಡನೆ ವಿವಾಹವಾಗಿಬಿಟ್ಟಳು! ನಾನಾಗಿದ್ದರೆ...ಛಿ...ಆ...ರೀತಿ submit ಆಗುತ್ತಿರಲಿಲ್ಲ," ಎಂದು ನಕ್ಕರು. ಅಂತಹ ಪ್ರತಿಭಾವಂತ ವಿದ್ಯಾರ್ಥಿನಿ ನೌಕರಿ ಮಾಡದೇ ಹೋದರೆ ಇನ್ನಾರು ನೌಕರಿ ಮಾಡಬೇಕೆಂಬುದೇ ಕುಮಾರಿ ಗೀತಾ ಚಾಕೋವ್ ಅವರ ಅಭಿಪ್ರಾಯವಾಗಿತ್ತು.

ಅವರು ತಮ್ಮ ಮಾತು ಮುಂದುವರಿಸುತ್ತ, "ಇಲ್ಲಿಯ ಕಾರ್ಮಿಕರು ಮೈಗಳ್ಳರು. ತಮಗೆ ನೌಕರಿ ಕೊಟ್ಟ ಕಾಂಟ್ರ್ಯಾಕ್ಟರನಲ್ಲಿ ಅವರಿಗೆ ಎಳ್ಳಷ್ಟೂ ಸ್ವಾಮಿನಿಷ್ಠೆ ಇಲ್ಲ. ಅವನು ಮರೆಯಾದರೆ ಕೆಲಸ ತಪ್ಪಿಸಿ ಹರಟೆ ಹೊಡೆಯುತ್ತಾರೆ. ಅದನ್ನು ಬಿಡಿ. ಇಂದಿರಾನಗರದ ರಸ್ತೆಯಲ್ಲಿ ಒಂದೇ ಬ್ರಿಜ್ಜನ್ನು ಮೂರು ತಿಂಗಳಲ್ಲಿ ಮೂರು ಸಲ ರಿಪೇರಿ ಮಾಡಿದರು. ಅದೆಂತಹ ರಿಪೇರಿಯೋ ದೇವರೇ ಬಲ್ಲ! ಈ ರೀತಿ ಕಾರ್ಪೊರೇಷನ್ನಿಗೆ ಮೋಸಮಾಡಲು ಪ್ರಯತ್ನಿಸಿದರೆ ಕೇರಳದಲ್ಲಿ ಜನರೇ ಗುಲ್ಲೆಬ್ಬಿಸುತ್ತಾರೆ. ಮೈಸೂರಿಗರು ಸೌಮ್ಯ ಪ್ರಕೃತಿಯವರು. ಬೇರೆಯವರ ಜೊತೆ ಒಳ್ಳೇ ಸಾಮರಸ್ಯದಿಂದ ಇರುತ್ತಾರೆ. ಮೈಸೂರಿಗರು ಸಂಪ್ರದಾಯಬದ್ಧರು. ಇಲ್ಲಿ ನಡೆಯುವ ಮದುವೆಗೆ ಅವರ ಎಲ್ಲ ಸಂಬಂಧಿಕರೂ ಬರಲೇಬೇಕು. ಸಾವಿರಾರು ಮೈಲುಗಳಿಂದ ಬಂದು ಮದುವೆಯನ್ನು ನೋಡುವ ಸಂಪ್ರದಾಯ ಕೇರಳದಲ್ಲಿ ಇಲ್ಲ. ಬೇರಾವ ಮಹಾನಗರಗಳಿಗೂ ಇರದ ಒಳ್ಳೇ ಹವೆ ಬೆಂಗಳೂರಿಗಿದೆ. ಅದೇಕೆ ಒಳನಾಡಿನ ಮೈಸೂರು ಬಿಸಿಲು ಪ್ರಾಂತದವರಂತೆ ಬೆವರನ್ನು ಸುರಿಸಬೇಕಿಲ್ಲ. ಇತ್ತೀಚೆಗೆ ಕಂಡುಬರುತ್ತಿರುವ ಈ ಕನ್ನಡ ಮತ್ತು ಕನ್ನಡೇತರ ಚಳವಳಿಯೊಂದನ್ನು ಬಿಟ್ಟರೆ

ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಬೆಂಗಳೂರು ಮಾದರಿಯ ಮಹಾನಗರ," ಎಂದು ತಮ್ಮ ಮಾತನ್ನು ಮುಗಿಸಿದರು.

"ನೀವಿನ್ನೂ ಮಲಗಿದ್ದೀರಿ"

ಕೊನೆಯಲ್ಲಿ, ನಾನು ಸಂಧಿಸಿದವರು ಒಬ್ಬ ಸಿಂಧೀ ಯುವತಿ. ತಮ್ಮ ಹೆಸರನ್ನಿಲ್ಲಿ ಬರೆಯಬಾರದೆಂದು ನನಗವರು ಎಚ್ಚರಿಸಿ ಹೇಳಿದ್ದಾರೆ. ಹೋದೊಡನೆಯೇ ನಾನವರಿಗೆ, "ಬೆಂಗಳೂರು ನಿಮಗೆ ಹೇಗೆನಿಸುತ್ತದೆ?" ಅಂದೆ. ತಮ್ಮ ಗುಲಾಬಿ ನಗೆಯಿಂದ ಅವರು, "ಬೆಂಗಳೂರು ನನಗಂತೂ ನಮ್ಮೂರಂತೆಯೇ ಅನಿಸುತ್ತದೆ. ಸಿಂಧೀ ಮಂದಿಗೆ ತಮ್ಮದೆನ್ನುವ ರಾಜ್ಯವಿದ್ದರೆ ತಾನೇ ತಮ್ಮೂರಿನ ಪ್ರಶ್ನೆ! ದೇಶವು ಇಬ್ಭಾಗವಾದಾಗಲೇ ಸಿಂಧಿಗಳು ಇಡೀ ದೇಶವನ್ನೇ ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ! ನಿಮ್ಮವರಂತೆ ನಾವು ಹತ್ತು ಮೈಲಂತರದ ಊರಿಗೆ ಹೋಗಲು ಹಿಂಜರಿಯುವವರಲ್ಲ. ನೌಕರಿಗಾಗಿ ಸರಕಾರಕ್ಕೆ ಅರ್ಜಿ ಹಾಕಿ ವರ್ಷಗಟ್ಟಲೆ ಕಾಯುತ್ತ... ಹಚ್ಚಲು ನಾವು ಹತ್ತಾರು ಮೇಲಧಿಕಾರಿಗಳ ಹಾಗು ಮಂತ್ರಿಗಳ ಬಾಗಿಲು ಬಡಿಯುವುದಿಲ್ಲ.... ಕೇಳಿ ನಿಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿರಿ," ಎಂದರು. ಅವರಾಡಿದ ಮಾತು ಸತ್ಯಕ್ಕೆ ಸಮೀಪವಿತ್ತು, ವಾಸ್ತವತೆಯ ಅಸ್ತಿಭಾರದ ಮೇಲೆ ನಿಂತಿತ್ತು.

"ಸುಂದರ ನಗರವಾದ ಬೆಂಗಳೂರು ಮತ್ತಷ್ಟು ಫ್ಯಾಶನೇಬಲ್ ಆಗಲು ವರ್ಣವರ್ಣದ ವೈವಿಧ್ಯಮಯ ಆಧುನಿಕ ವೇಷಭೂಷಣ ಧರಿಸುವ ಸಿಂಧೀ ಹುಡುಗಿಯರೇ ಕಾರಣರೆಂದು ಅನ್ನುತ್ತಾರಲ್ಲ?" ಎಂದು ನಾನು ಕೇಳಿದೆ.

"ಅಹುದು, ಆಧುನಿಕತೆಯಲ್ಲಿ ದೃಷ್ಟಿಯನ್ನಿಟ್ಟ ನಾವು, ಇಂದು ಪ್ರಪಂಚದಲ್ಲಿ ನಡೆಯುತ್ತಿರುವುದನ್ನು ಅರಿತು ನಡೆಯುವವರಾಗಿದ್ದೇವೆ. ಸಿನಿಮಾ ನೋಡಲು ಮತ್ತೊಬ್ಬರ ಪ್ರೇರಣೆ ಬೇಕಿಲ್ಲ. ಹಾಗೆಯೇ ಈ ಫ್ಯಾಶನ್! ಸಿಂಧಿ ಜನರು ತಮ್ಮಲ್ಲಿ ಇರುವ ಹಣದಿಂದಲೊ, ರೂಪದಿಂದಲೋ ಅಥವಾ ಅತ್ಯಾಧುನಿಕ ದೃಷ್ಟಿಯಿಂದಲೋ......ನನಗೆ...ತಿಳಿಯಲೊಲ್ಲದು... ನಾವು ವರ್ಣಮಯ ವೇಷಭೂಷಣಗಳನ್ನು ಧರಿಸುತ್ತೇವೆ. ನಿಮ್ಮವರಲ್ಲಿ ಕೂಡ ಹಲವರು ಈ ವೇಷಭೂಷಣಗಳಿಗೆ ಈಗ ಮಾರು ಹೋಗಿದ್ದಾರೆ. ಆದರೆ ನಮ್ಮಲ್ಲಿರುವ ವೈಶಿಷ್ಟ್ಯವೆಂದರೆ ನಾವು ೧೦೦ ಪೈಸೇ ಗಳಿಸಿ, ಐವತ್ತನ್ನು ಐಷಾರಾಮಕ್ಕೆ ವ್ಯಯಿಸುತ್ತೇವೆಯೇ ವಿನಾ ನಿಮ್ಮಂತೆ ಐವತ್ತು ಗಳಿಸಿ ಎಪ್ಪತ್ತೈದನ್ನು ವೆಚ್ಚ ಮಾಡುವ ಸಾಹಸವನ್ನು ಮಾಡುವುದಿಲ್ಲ," ಎಂದು ನಕ್ಕರು. ನನ್ನ ಬೆರಳನ್ನೇ ನನ್ನ ಕಣ್ಣಲ್ಲಿಟ್ಟರು. ಸಿಂಧೀ ಜನರ ವ್ಯವಹಾರಚತುರತೆಯನ್ನು ನಾನು ಮೆಚ್ಚಿದೆ.

"ಕನ್ನಡಿಗರ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದೆ. ಅವರು ಉತ್ತರೀಯವನ್ನು ಸರಿಪಡಿಸುತ್ತ, "ನಮಗೆಲ್ಲಾ ಆಶ್ರಯವನ್ನಿತ್ತ ನಿಮಗೆ ಕೆಟ್ಟ ಅಂದರೆ ತಿಂದುಪ್ಪಿಗೆ ಎರಡು ಬಗೆದಂತಾದೀತು. ಬೆಂಗಳೂರಿಗರು ಅದೇಕೆ ಕನ್ನಡ ಮಾತನಾಡುವವರು ಶಾಂತಿಪ್ರಿಯರು. ಬೇರೆಯವರೊಡನೆ ಸಾಮರಸ್ಯದಿಂದಿರುವವರು. ಆದರೆ ನೀವಿನ್ನೂ ಮಲಗಿದ್ದೀರಿ. ಎಚ್ಚರಗೊಂಡು ನಿಮ್ಮ ಮನೆಯ ಸುತ್ತಲೂ ಊರ ಸುತ್ತಲೂ ಏನು ನಡೆದಿದೆ ಎಂಬುದನ್ನು ನೋಡಬೇಕು," ಎಂದು ಹೇಳಿದರು. ಅವರ ಮಾತುಗಳನ್ನೇ ಮೆಲಕು ಹಾಕುತ್ತ ನಾನು ಮನೆಗೆ ಬಂದೆ. ಅವರಾಡಿದ ಮಾತುಗಳು ವ್ಯಾವಹಾರಿಕ ಮಾತುಗಳಾಗಿದ್ದವು. ಮಾತು ನಾಲ್ಕೇ ಆಗಿದ್ದರೂ ಮೌಲಿಕವಾಗಿದ್ದವು.

ನಮ್ಮನ್ನು ನೋಡಿದವರು ಕಿಂಡಿಯಿಂದ ನೋಡಿದ್ದರೂ, ಕಿಂಡಿಯಿಂದಲೇ ಸಿನಿಮಾ ಪ್ರದರ್ಶಿಸಿ ವಿಶ್ವದ ಬೃಹತ್ ರೂಪವನ್ನು ತೋರಿಸುವಂತೆ ನಮ್ಮ ಸ್ವರೂಪವನ್ನು ತೋರಿಸಿದರು! ✡

ಭಾಷಾಂತರ

ಅಳಿದುಹೋದೊಂದು ಭಾಷೆಯಲ್ಲಿ
ಕೂತೆ ನಾನೊಮ್ಮೆ ಪರೀಕ್ಷೆಗೆ.
ಅದರಲ್ಲಿ ನನ್ನ ನಾ ಭಾಷಾಂತರಿಸಿಕೊಳ್ಳ
ಬೇಕಿತ್ತು
ನರನಿಂದ ವಾನರನಿಗೆ.

ಮೊದಲು ಧೈರ್ಯವಾಗೇ
ಅರಣ್ಯದಿಂದೊಂದು ಸಲೀಸಾದ
ಪರಿಚ್ಛೇದವನ್ನು
ಭಾಷಾಂತರಿಸಿ ಮುಗಿಸಿದೆ.

ಆದರೆ ನನಗೆ ನಾ ಹತ್ತಿರ ಬಂದಂತೆ
ಬಿಗಿಯಾಗುತ್ತ ಬಂತು ಭಾಷಾಂತರ.

ಅಂತೂ ಇಂತೂ ಹುಡುಕಿ ತೆಗೆದೆ
ಕಾಲುಗುರುಗಳಿಗೂ ಕೂದಲಿಗೂ
ತೃಪ್ತಿಕರವೆನಿಸುವ ಸಮಾನ ಪದಗಳನ್ನು.

ಮೊಳಕಾಲಿಗೆ ಬಂದಾಗ ಮಾತ್ರ
ನಾಲಿಗೆ ತಡವರಿಸತೊಡಗಿತು.
ಹೃದಯ ಪ್ರದೇಶದಲ್ಲಂತೂ
ಕೈಯೇ ನಡುಗತೊಡಗಿ
ಹಾಳೆಯ ಮೇಲೆ ಬಿತ್ತು ಬೆಳಕಿನ ಚಿತ್ತು.

ಆದರೂ ಎದೆಯ ಕೂದಲಿಂದ
ಅದನ್ನು ಹೇಗೋ ಮುಚ್ಚಿದೆ;
ಆತ್ಮಸ್ಥಾನದಲ್ಲಿ ಮಾತ್ರ
ಪೂರಾ ಸೋತು ಕೈ ಚೆಲ್ಲಿದೆ.

—ರುಮೇನಿಯದ ಕವಿ
ಮೂರಿನ್ ಸೊರೆಸ್ಕು

ಗಡಿಯಾರ

ಗಡಿಯಾರಕ್ಕೆ ಹನ್ನೆರಡು ಮುಖಗಳು
ಹನ್ನೆರಡು ದುಃಖಗಳು.

ಹನ್ನೆರಡು ಹೃದಯಗಳಲ್ಲಿ
ಟಿಕ್ ಟಿಕ್ಕೆಂದು ತೊಟ್ಟಿಕ್ಕಿ ತಿವಿಯುತ್ತದೆ
ಶತಮಾನಗಳಾಚೆಯ ಗೋಳು.

ಘಳಿಗೆಗಳ ಬಿಕ್ಕಳಿಕೆ
ನಿಮಿಷಗಳ ನಿಟ್ಟುಸಿರು
ಸಿಡಿದು ಸ್ಫೋಟಗೊಂಡರೆ ಗಡಿಯಾರ
ಲೋಕ ತುಸು ನಿದ್ರಿಸಬಹುದು
ಕನಸುಗಳ ಕಾಮನಬಿಲ್ಲು
ಹೊದ್ದುಕೊಂಡು.

ಚೆಲ್ಲಾಪಿಲ್ಲಿಯಾಗುವ ಕಾಲವೆಲ್ಲೋ
ಚದುರಿ
ಸಂಜೆ ಗುಡ್ಡಗಳಾಚೆ ಮುಗ್ಗರಿಸಿ
ಕಣಿವೆಗಳಲ್ಲಿ
ರಾಸಿಯಾಗಬಹುದು.

ಕಾಲದ ಕೋಳ ಕಳಚಿದರೊಂದಿಷ್ಟು
ನೆಮ್ಮದಿ ನಮಗೆ.
ಅದು ಸರಿ,
ದುರಭ್ಯಾಸಕ್ಕೆ ಗುಲಾಮರಾಗಿರುವ
ದರಿದ್ರ
ಸೂರ್ಯ ಚಂದ್ರರನ್ನೆಲ್ಲಿ
ಹೂಳಬೇಕು ?

—ಅಬ್ದುಲ್ ಮಜೀದ್ ಖಾನ್

ನನ್ನ ಯಜಮಾನರ ಸೋದರಮಾವನ ಕಂಪೆನಿಗೆ ಒಂದು ಸಲ ಅಮೇರಿಕನ್ ಮಿತ್ರರೊಬ್ಬರು ಬಂದಿದ್ದರು. ನವವಿವಾಹಿತರಾದ ಅವರು ಸಪತ್ನೀಕರಾಗಿಯೆ ಬಂದಿದ್ದರು. ಆ ತರುಣನಿಗೆ ತನ್ನ ಮಡದಿಯು 'ಭಾರತೀಯ ಸೀರೆ'ಯಲ್ಲಿ ಹೇಗೆ ಕಾಣುತ್ತಾಳೆಂದು ನೋಡಬೇಕೆಂಬ ಆಸೆ ಆ ಆಸೆಯನ್ನು ಪೂರೈಸುವುದಕ್ಕೆ ಹೆಂಡತಿಯೂ ಉತ್ಸುಕಳಾಗಿದ್ದಳು.

ಅಂಗಡಿಗೆ ಹೋಗಿ ಎಷ್ಟೋ ಹೊತ್ತು ಹುಡುಕಾಡಿ ಒಳ್ಳೆಯ ಸೀರೆಯೊಂದನ್ನು ಕೊಂಡುಕೊಂಡ ದಂಪತಿಗಳು ಸೋದರಮಾವನ ಮನೆಗೆ ಆಗಮಿಸಿದರು. "ದಯವಿಟ್ಟು, ಸೀರೆ ಉಟ್ಟುಕೊಳ್ಳುವ ಪದ್ಧತಿಯನ್ನು ಕಲಿಸುತ್ತೀರಾ?" ಎಂಬ ಅವರ ವಿನಮ್ರ ಕೇಳಿಕೆಯನ್ನು - ನಮ್ಮ ಸೋದರತ್ತೆ ಊರಲ್ಲಿ ಇಲ್ಲದೇ ಹೋದರೂ - ಸೋದರಮಾವ ನಿರಾಕರಿಸದಾದರು.

ಇವರ ಕಲಿಸುವಿಕೆ, ಅವರ ಕಲಿಯುವಿಕೆ, ಬಿಸಿಲಿನ ತಾಪ, ಕಲಿಯುವ ಉತ್ಸುಕತೆಯಲ್ಲಿ ಬೆಳಗ್ಗೆಯಿಂದಲೂ ಹಸಿದ ಹೊಟ್ಟೆ, ಇದೆಲ್ಲದರಿಂದ ೪-೫ ತಾಸುಗಳ ವರೆಗಿನ ಅವರೆಲ್ಲರ ಪ್ರಯತ್ನ ವ್ಯರ್ಥವಾಯಿತು. ಕೊನೆಗೆ ಆ ಮಹಿಳೆ ಸೋತು ಹೊಸ ಉಪಾಯವೊಂದನ್ನು ಹುಡುಕಿಯೇ ಬಿಟ್ಟಳು. "ಹೋಗಲಿ ಬಿಡಿ, ನಾನು 'ರೆಡೀಮೇಡ್ ಸೀರೆ'ಯನ್ನೇ ಕೊಳ್ಳುತ್ತೇನೆ." — ಭಾರತಿ ತೊರಗಲ್ಲ

ನಾನು ಮೈಸೂರಿಗೆ ಹೋಗಿದ್ದಾಗ ನನ್ನ ಸ್ನೇಹಿತನ ಮನೆಯಲ್ಲಿ ಇಳಿದುಕೊಂಡಿದ್ದೆ. ಒಂದು ದಿನ ಅವರ ತಂದೆ ಬೆಳಗ್ಗೆ ಏಳು ಗಂಟೆಗೇ ಆಫೀಸಿನ ಕೆಲಸಕ್ಕೆಂದು ಹೊರಟಿದ್ದರು. ಅವರು ಮನೆಯಿಂದ ಹೊರಡುತ್ತಿದ್ದಾಗ ಅಲ್ಲೇ ಇದ್ದ ನನ್ನ ಸ್ನೇಹಿತನ ಐದು ವರ್ಷದ ತಮ್ಮ, "ಅಪ್ಪಾ ಎಲ್ಲಿಗೆ ಹೋಗುತ್ತಿದ್ದೀಯಪಾ?" ಎಂದು ಕೇಳಿದ. ಅವರಿಗೆ ಮೊದಲೇ ಕೋಪ ಜಾಸ್ತಿ. ಅದರಲ್ಲೂ ಈ ಹುಡುಗ, ತಾವು ಹೊರನಡೆದಾಗ ಎಲ್ಲಿ ಹೋಗುತ್ತೀಯೆಂದು ಕೇಳಿಬಿಟ್ಟನಲ್ಲ ಎಂದು ಇನ್ನೂ ಕಿಡಿಕಿಡಿಯಾದರು ತಟ್ಟನೆ, "ಹೊಟ್ಟೆ ಪಾಡಿಗೆ ಹೋಗುತ್ತೇನೆ," ಎಂದು ಹೇಳಿ ಹೊರಟು ಹೋದರು. ಇದಾದ ಸ್ವಲ್ಪ ಹೊತ್ತಿನ ಮೇಲೆ ಅವರ ಸ್ನೇಹಿತರೊಬ್ಬರು ಬಂದರು. ಬಾಗಿಲಲ್ಲೇ ಆಡುತ್ತಿದ್ದ ಹುಡುಗ ಅವರನ್ನು ಕಂಡೊಡನೆ, "ಅಪ್ಪ ಮನೆಯಲ್ಲಿಲ್ಲ, ಹೊಟ್ಟೆ ಪಾಡಿಗೆ ಹೋಗಿದ್ದಾರೆ," ಎಂದು ಹೇಳಿಬಿಟ್ಟ. — ಎಸ್. ಕುಮಾರ

ನನ್ನ ಸ್ನೇಹಿತರೊಬ್ಬರು ವಿದ್ಯಾರ್ಥಿಯಾಗಿದ್ದಾಗ ಮೈಸೂರಲ್ಲಿ ಊಟ, ವಸತಿಗೆ ನಗರದ ಉಚಿತ ವಿದ್ಯಾರ್ಥಿನಿಲಯವನ್ನು ಆಶ್ರಯಿಸಿದ್ದರು. ಅವರು ಹೇಳಿದ ಘಟನೆಯಿದು: ನಿಲಯದ ಸಂಚಾಲಕರಾಗಿದ್ದ ಶ್ರೀಮಾನ್... ರವರು ಗಣ್ಯವ್ಯಕ್ತಿ, ವಯೋವೃದ್ಧರು. ದೇಶ ಮತ್ತು ದೇಶೀಯ ಭಾಷೆಯಲ್ಲಿ ಇವರಿಗೆ ಅಭಿಮಾನವಿತ್ತಾದರೂ ಇಂಗ್ಲೀಷಿನ ಹಲವು ರೂಢಿಯ ಪದಗಳನ್ನು ಮಾತಿನಲ್ಲಿ ಬಳಸುವುದು ಇವರ ಕ್ರಮವಾಗಿದ್ದಿತು. ನಿಲಯದ ವಿದ್ಯಾರ್ಥಿಗಳ ಯೋಗಕ್ಷೇಮ, ಓದಿನಲ್ಲಿ ಪ್ರಗತಿ ಹಾಗೂ ಇತರ ವಿಷಯಗಳನ್ನು ವಿಚಾರಿಸುತ್ತಿದ್ದರವರು. ಪರೀಕ್ಷೆಯ ಫಲಿತಾಂಶ ಹೊರಬಿದ್ದು ಅಂಕಗಳ ಪಟ್ಟಿ (marks card) ಹಂಚಿಕೆಯಾದ ದಿನಗಳಲ್ಲಿ ಒಬ್ಬೊಬ್ಬ ವಿದ್ಯಾರ್ಥಿಯನ್ನೂ ವಿಚಾರಿಸಿ ಸೂಕ್ತ ರೀತಿಯಲ್ಲಿ ಪ್ರೋತ್ಸಾಹದ ಮಾತನ್ನೋ, ಅಸಮಾಧಾನವನ್ನೋ ಅಥವಾ ಬೈಗಳ ಸುರಿಮಳೆಯನ್ನೋ ಸುರಿಸುತ್ತಿದ್ದರು.

ಒಂದು ಸಲ ಒಬ್ಬ ವಿದ್ಯಾರ್ಥಿ ತನಗೆ ಗಣಿತದಲ್ಲಿ ನೂರಕ್ಕೆ ೬೦ ಅಂಕಗಳೆಂದು ತಿಳಿಸಿದ. ಹಿರಿಯರು ಸಂತೋಷಿಸಲಿಲ್ಲ; ಮೌನವಾಗಿದ್ದು ತಮ್ಮ ಅಸಮಾಧಾನವನ್ನು

ತೋರಿಸಿದರು. ಇನ್ನೊಬ್ಬನಿಗೆ ನೂರಕ್ಕೆ ೪೦ ಅಂಕಗಳು. ಇವನು ಕೇವಲ ವಿನೋದಕ್ಕಾಗಿ ತನ್ನ ಅಂಕಗಳು '40 ಪರ್‌ಸೆಂಟ್' ಎಂದು ತಿಳಿಸಿದ. ಹಿರಿಯರು ಒಂದು ಕ್ಷಣ ಸುಮ್ಮನೆ ಇದ್ದು ಕೂಡಲೆ ಮೆಚ್ಚುಗೆಯ ಮಾತನ್ನು ಆಡಿದರು: "ಭೇಷ್, ಪರ್‌ಸೆಂಟ್ ಪಡೆದಿದ್ದೀಯಲ್ಲಾ, ಸಂತೋಷ." ಬಳಿಕ ಮೊದಲಿನವನನ್ನು ಕರೆದು ಮುಂದಿನ ಪರೀಕ್ಷೆಯಲ್ಲಾದರೂ ಪರ್‌ಸೆಂಟ್‌ಗಾಗಿ ಪ್ರಯತ್ನಿಸಬೇಕೆಂದೂ ಚೆನ್ನಾಗಿ ಅಭ್ಯಾಸ ಮಾಡಬೇಕೆಂದೂ ಬುದ್ಧಿ ಹೇಳಿದರು.

—ಕೆ. ಪದ್ಮಾವತಿ

ಪ್ರತಿನಿತ್ಯವೂ ತರಗತಿಯನ್ನು ಪ್ರವೇಶಿಸುತ್ತಿದ್ದಂತೆಯೇ ನಮ್ಮ ಉಪಾಧ್ಯಾಯಿನಿಯ ಮೊದಲ ಕೆಲಸ, ಹಾಜರಾತಿ ಪುಸ್ತಕದಲ್ಲಿನ ವಿದ್ಯಾರ್ಥಿನಿಯರ ಹೆಸರುಗಳನ್ನು ಕೂಗುವುದು. 'ಎ' ಅಕ್ಷರದಿಂದ ಪ್ರಾರಂಭವಾಗುವ ನಾಮಧೇಯವನ್ನು ಉಳ್ಳ ವಿದ್ಯಾರ್ಥಿನಿ ನಮ್ಮ ತರಗತಿಯಲ್ಲಿಲ್ಲದ ಕಾರಣ, ಅಟೆಂಡೆನ್ಸ್ ಪುಸ್ತಕದಲ್ಲಿ ಬಾಲನಾಗಮ್ಮನದೇ ಮೊದಲ ಹೆಸರು.

ಅದೊಂದು ದಿನ ಎಂದಿನಂತೆ ಅಟೆಂಡೆನ್ಸ್ ಪುಸ್ತಕವನ್ನು ಹಿಡಿದೇ ತರಗತಿಯೊಳಗೆ ಬಂದ ಉಪಾಧ್ಯಾಯಿನಿಯ ಗಮನ ಅದೇಕೋ ಕೋಣೆಯ ತೆರೆದ ಬಾಗಿಲ ಕಡೆ ಹರಿಯಿತು. ಅವರು ಅಟೆಂಡೆನ್ಸ್ ಪುಸ್ತಕದ ಹಾಳೆಗಳನ್ನು ತಿರುವುತ್ತಾ ಮುಂದಿನ ಸಾಲಿನ ವಿದ್ಯಾರ್ಥಿನಿಗೆ, "ಬಾಗಿಲ ಹಾಕಮ್ಮಾ," ಅಂತ ಅಪ್ಪಣೆ ನೀಡುತ್ತಿದ್ದಂತೆಯೆ, ಬಾಲನಾಗಮ್ಮ ದಡಕ್ಕನೆದ್ದು ನಿಂತು, "ಪ್ರೆಸೆಂಟ್ ಮಿಸ್," ಎಂದು ಹೇಳಿ ಕುಳಿತುಕೊಂಡುಬಿಡುವುದೇ! ವಿದ್ಯಾರ್ಥಿನಿಯರ ಜತೆ ಉಪಾಧ್ಯಾಯಿನಿಯೂ ಗೊಳ್ಳೆಂದು ನಕ್ಕಾಗ ಪೆಚ್ಚಾಗಿ ನಿಂತ ಬಾಲನಾಗಮ್ಮನಿಗೆ ನಾವು ಸಂದರ್ಭ ವಿವರಿಸಿದಾಗ ಅವಳ ಮುಖದಲ್ಲೂ ನಗು ಮಿನುಗಿತು.

—ಬಿ. ಎಸ್. ವೆಂಕಟಲಕ್ಷ್ಮಿ





ಮಧ್ಯಯುಗದ

ಇಂದಿನ ಉಡಿಗೆ-ತೊಡಿಗೆಗಳ ಫ್ಯಾಶನ್ನುಗಳು ಹೆಚ್ಚಾಗಿ ಚಲಚ್ಚಿತ್ರಗಳ ಮಾದರಿಯೋ, ಪಾಶ್ಚಾತ್ಯರ ಅನುಕರಣೆಯೋ ಅಥವಾ ಬಟ್ಟೆಬರೆಯ ಉತ್ಪಾದಕರ ಜಾಹಿರಾತುಗಳ ಪ್ರತಿರೂಪವೋ ಎಂದು ಅನಿಸುವುದು. ಮಾಟವಾದ ಮೈಕಟ್ಟಿನ ಮಾಡೆಲ್ಲುಗಳಿಗೆ ತೊಡಿಸಿದ ಬಟ್ಟೆಬರೆಗಳನ್ನು ಇತರರು ಅನುಕರಿಸಿದಾಗ ವ್ಯಕ್ತಿತ್ವ ಸ್ಫುಟವಾಗಿ ತೋರುವುದಕ್ಕಿಂತ ಅವರ ದೇಹದ ಕೊರತೆಗಳೇ ಎದ್ದು ಕಾಣಿಸುವವು ! ಬೋಳುತಲೆಯವರು ಕಪೋಲಕೇಶ (side burns) ಬೆಳೆಸುವುದು, ಅಥವಾ ಇದ್ದ ನಾಲ್ಕೇ ಕೂದಲನ್ನು ಉದ್ದ ಬೆಳೆಸುವುದು, ಬೊಜ್ಜು ಮೈಯವ ಬಿಗಿ ಪ್ಯಾಂಟ್ ಧರಿಸುವುದು, ಬಿಲ್ಲುಕಾಲಿನವಳು (bow-legged) ಚೂಡಿದಾರ ತೊಡುವುದು, ಕದಳೀಸ್ತಂಭದ ಕಾಲಿನವಳು 'ಬೆಲ್-ಬಾಟ್ಸ್' ಹಾಕುವುದು, ಸ್ತನಗಳಲ್ಲಿ ಜೋಲು ಬಿದ್ದಿದ್ದವರು ಕಿರಿ ರವಿಕೆ ಹಾಕುವುದು, ಜೋಲು ಹೊಟ್ಟೆಯವರು ನಾಭಿಯ ಕೆಳಗೆ ಸೀರೆ ಉಡುವುದು ದೈನಂದಿನ ದೃಶ್ಯಗಳಾಗಿವೆ. "ಊಟ ತನಗಾಗಿ, ಉಡಿಗೆ ಪರರಿಗಾಗಿ" ಎಂಬುದು ಈಗಿನ ಫ್ಯಾಶನ್ನು ಯುಗಕ್ಕಂತೂ ಅನ್ವಯಿಸುವುದಿಲ್ಲ !

← ಪಾರ್ವತಿ: ಐಹೊಳೆಯ ಶಿಲ್ಪ: ಸೀರೆಯುಟ್ಟ ಕ್ರಮ ನೋಡಿರಿ. ಚಿತ್ರ : ಕೆ. ಬಿ. ಕೆ.

ಕನ್ನಡಿಗರ ಫ್ಯಾಶನ್ನುಗಳು


—ಜ್ಯೋತ್ಸ್ನಾ ಕಾಮತ—

ಹತ್ತರಿಂದ ಹದಿನೈದನೆಯ ಶತಮಾನದವರೆಗಿನ ಕನ್ನಡಿಗರು ತಮ್ಮ ವೈಶಿಷ್ಟ್ಯಪೂರ್ಣ ಉಡುಪು-ತೊಡಪುಗಳಿಂದ ದೂರದವರ ಲಕ್ಷ್ಯವನ್ನು ಆಕರ್ಷಿಸಿದ್ದರು. ಹನ್ನೆರಡನೆಯ ಶತಮಾನದಲ್ಲಿ ಕಾಶ್ಮೀರವನ್ನು ಆಳಿದ ಹರ್ಷ ದೊರೆ 'ಕರ್ನಾಟಕ' ವೇಷ-ಭೂಷಣಗಳಿಗೆ ಮನಸೋತು ಅವನ್ನು ತನ್ನ ದೇಶದಲ್ಲಿ ಪ್ರಚಾರಕ್ಕೆ ತಂದನೆಂದು ಕಲ್ಹಣನ 'ರಾಜತರಂಗಿಣಿ' ಹೇಳುತ್ತದೆ. ನಂತರದ ಶತಕಗಳಲ್ಲಿ ಆದ ಉಡುಪಿನ ಬದಲಾವಣೆಗೆ ವಿದೇಶಿಯರ, ಮುಖ್ಯತಃ ಮುಸಲ್ಮಾನರ ದಾಳಿಗಳು ಕಾರಣವಾಗಿ, ಆಕರ್ಷಕ ಅಲಂಕಾರಗಳ ಬಳಕೆ ಕಡಿಮೆಯಾಯಿತು. ಹೆಚ್ಚಾಗಿ ಮೈಮುಚ್ಚುವ ಬಟ್ಟೆಗಳು ಆಗಲೇ ಪ್ರಚಾರದಲ್ಲಿ ಬಂದಿರಬೇಕು.

ಮಧ್ಯಮಯುಗದ ಬಟ್ಟೆಬರೆಗಳ ವಿವರ ನೀಡುವ ಅಧಿಕೃತ ಗ್ರಂಥವಾವುದೂ ಇಲ್ಲದ್ದರಿಂದ ಸಾಹಿತ್ಯದಲ್ಲಿ ಬರುವ ವರ್ಣನೆ, ಶಿಲಾಶಾಸನಗಳಲ್ಲಿ ದೊರಕುವ ಅಲ್ಪಸ್ವಲ್ಪ ಮಾಹಿತಿ, ಆ ಕಾಲದಲ್ಲಿ ಕಟೆಯಲಾಗಿದ್ದ ಜನಜೀವನವನ್ನು ತೋರಿಸುವ ಶಿಲ್ಪ ಚಿತ್ರಗಳನ್ನು ಆಧಾರವಾಗಿಟ್ಟುಕೊಂಡು ಈ ಲೇಖನ ಬರೆಯಲಾಗಿದೆ. ಇದಕ್ಕೆ ಬೇಕಾದ ಛಾಯಾಚಿತ್ರ ಮತ್ತು ರೇಖಾ-ಚಿತ್ರಗಳನ್ನು ಬೇಲೂರು, ಹಳೇಬೀಡು, ಸೋಮನಾಥಪುರ, ಲಕ್ಷ್ಮೇಶ್ವರ, ಗದಗ, ಲಕ್ಕುಂಡಿ, ಹಂಪಿಗಳ ದೇವಾಲಯಗಳ ಶಿಲ್ಪಗಳಿಂದ ಹಾಗೂ ಲೇಪಾಕ್ಷಿಯ ಭಿತ್ತಿಚಿತ್ರಗಳಿಂದ ದೊರಕಿಸಿದ್ದಾಗಿದೆ.

ಸ್ಯೂತ ವಸ್ತ್ರ ಹೊಸದೆ?


ಕರ್ನಾಟಕದ ಮೇಲೆ ವಿದೇಶೀಯರ ಪ್ರಭಾವ ಹೆಚ್ಚಾದಂದಿನಿಂದ ನಮ್ಮಲ್ಲಿ ಹೊಲಿದ ಉಡುಪುಗಳು ಜಾರಿಯಲ್ಲಿ ಬಂದವು ಎಂದು ಸಾಮಾನ್ಯ




ಗ್ರಹಿಕೆಯಿದೆ. ಆದರೆ ಮಧ್ಯಯುಗದಲ್ಲಿ ಆಗಲೇ ಹೊಲಿದ ಬಟ್ಟೆಗಳು ಸಾಕಷ್ಟು ರೂಢಿಯಲ್ಲಿದ್ದವು. ಕರ್ನಾಟಕದಲ್ಲಿಯೇ ಬೆಳೆದ ಹತ್ತಿಯಿಂದ ನಯವಾದ ಬಟ್ಟೆಗಳನ್ನು ನೇಯ್ದು ಗಿಡ-ಮೂಲಿಕೆಗಳ ರಸಗಳಿಂದ ಅವಕ್ಕೆ ಕೆಂಪು, ಹಳದಿ, ಹಸಿರು, ನೀಲಿ, ಕಪ್ಪು ಬಣ್ಣಗಳನ್ನು ಕೊಡುತ್ತಿದ್ದರು. ಉದ್ದ ಅಡ್ಡ ಗೀಟುಗಳುಳ್ಳ, ಚೌಕಡಿಯ



೨



೩



೪

ಬೇರೆ ಬೇರೆ ಪ್ರಕಾರದ ಬಟ್ಟೆಗಳನ್ನು ನೇಯು ತ್ತಿದ್ದರು. ಹೂ, ಪ್ರಾಣಿಗಳ ಚಿತ್ರಗಳನ್ನು ವಿವಿಧ ಆಕೃತಿ, ಬಣ್ಣಗಳಲ್ಲಿ ಮುದ್ರಿಸುವುದು ಪ್ರಚಾರದಲ್ಲಿತ್ತು. "ಮಹಾಚೀನಿಯೆನಿಪ ವಸ್ತ್ರಾವಳಿಯು, ಲತಾವಳಿಯು, ಪುಷ್ಪಾವಳಿಯು, ನೇತ್ರಾವಳಿಯು, ಗಜಾವಳಿಯು, ಸಿಂಹಾವಳಿಯು, ಚಿತ್ರಾವಳಿಯು, ಸುರಾವಳಿಯು, ಹಂಸಾವಳಿಯು" ಬಟ್ಟೆಗಳುಳ್ಳಬಟ್ಟೆಗಳನ್ನು ಹರಿಹರಕವಿ (ಕ್ರಿ. ಶ. ಸು. ೧೧೯೦) ವರ್ಣಿಸಿದ್ದರಿಂದ ಅಂದಿನ ಕನ್ನಡಿಗರಿಗೆ ಇವು ಸುಪರಿಚಿತವಿರಬೇಕು.

ಇವಲ್ಲದೇ ದೇಶವಿದೇಶಗಳಿಂದ ಬಟ್ಟೆ ಕರ್ನಾಟಕಕ್ಕೆ ಬರುತ್ತಿತ್ತು. ಚೀನದಿಂದ ರೇಶಿಮೆಯ ಜಿನುಗಾದ ಬಟ್ಟೆ, ವಾರಾಣಸಿಯಿಂದ ಪಟ್ಟೆ ರೇಶಿಮೆ, ಸಿಂಹಳ, ಗುಜರಾಥ (ಅನಹಿಲವಾಡ), ಮುಲ್ತಾನ (ಮೂಲಸ್ಥಾನ), ತಮಿಳುನಾಡು (ತೊಂಡಮಂಡಲ), ಕೋಸಲ, ಕಲಿಂಗ, ವಂಗಗಳಿಂದ ನೂಲು ಮತ್ತು ರೇಶಿಮೆಯ ವಿಶಿಷ್ಟ ಬಟ್ಟೆಗಳು ಬರುತ್ತಿದ್ದವು. ಹದಿಮೂರನೆಯ ಶತಮಾನದಲ್ಲಿ ಪ್ರಸಿದ್ಧ ವಾಣಿಜ್ಯಕೇಂದ್ರವಾಗಿದ್ದ ಬೆಳಗಾಂವಿಯ (ವೇಣುಗ್ರಾಮ) ಶಾಸನವೊಂದರಲ್ಲಿ ಬೇರೆ ನಾಡುಗಳಿಂದ ('ಪೊರಗಣಿಂದ ಬಂದ') ಬರುತ್ತಿದ್ದ ಚಿನ್ನದ ನಕ್ಷೆಯಿದ್ದ, ಮತ್ತು ಇಲ್ಲದ ಸೀರೆಗಳ ಉಲ್ಲೇಖವಿದೆ.

ಗಂಡಸರಿಗೂ ಸೀರೆ !

ಇಂಥ ಬಗೆ ಬಗೆಯ ಸೀರೆಗಳನ್ನು ಅಂದಿನ ನಾಗರಿಕರು ಸಂದರ್ಭೋಚಿತವಾಗಿ ಉಡುತ್ತಿದ್ದರು. ಉತ್ತರ ಭಾರತದಲ್ಲಿ ಸೀರೆ ಮತ್ತು ಪಂಚೆಗಳಿಗೆ 'ಧೋತಿ' ಎಂಬ ಒಂದೇ ಶಬ್ದ ಬಳಸುವರು. ಮಧ್ಯಯುಗದ ಸಾಹಿತ್ಯ-ಶಾಸನಗಳಲ್ಲಿ 'ಸೀರೆ' ಶಬ್ದವನ್ನು ಈ ಅರ್ಥದಲ್ಲಿಯೇ ಬಳಸಲಾಗಿದೆ. ಇಂದಿಗೂ ರಾಜಸ್ಥಾನದಲ್ಲಿ ಸ್ತ್ರೀಯರ ಸೀರೆಗೂ ಗಂಡಸರ ರುಮಾಲಿಗೂ ವಿಶೇಷ ಅಂತರವಿಲ್ಲ. ಕನ್ನಡದ ವೀರರು ಬಣ್ಣದ 'ಸೀರೆ' ಬಿಟ್ಟು ಕೇವಲ ಬಿಳಿಯದನ್ನು ಉಡಲಾರಂಭಿಸಿದ ಮೇಲೆ 'ಧೋತರ' ಶಬ್ದ ಬಳಕೆಯಲ್ಲಿ ಬಂದಿರಬೇಕು. ಈ 'ಸೀರೆ'ಗಳನ್ನು ಶುಭ್ರವಾಗಿ ಒಗೆಯಲು ಅಗಸರಿದ್ದರು. ಒಗೆದ ಬಟ್ಟೆಗಳಿಗೆ ತಿಳಿಯಾದ ಗಂಜಿ ಹಾಕಿ, ಮಡಕೆ ಮಾಡಿ ಇಸ್ತ್ರಿ ಮಾಡಿ [illegible] ಒದಗಿಸುತ್ತಿದ್ದರು. [illegible] ಆಲೌಕಿಕ ಅಗಸನೊಬ್ಬನ ವರ್ಣನೆ ಹೀಗಿದೆ:

ಪಾಶವೆಂಬ ಮಲಿನ ಮನದ

ಸೀರೆಯಂ ತೆರಳ್ಚಿ ಕಟ್ಟಿ

...ಏಕನಿಷ್ಠೆಯಿಂದ ತಿರುಗಿ

ಮುರುಹಿ ಹಿಳಿದು ಹಿಂಡಿ ಮತ್ತೆ

ಸಕನೆಭವನೆಂಬ ದಿಟದ
ಬಿಸಿಲೊಳೊಣಗಿಸುತ್ತ ಮತ್ತೆ
ಪುರಹರಪ್ರಸಾದದಿಂದ
ರಂಜಿಸಲ್ಕೆ ಗಂಜಿಯಿಟ್ಟು
ಶರಣಸಂಗದಿಂದೆ ಘಟ್ಟಿಸುತ್ತೆ
ಹೊಳಹನೊಪ್ಪವಿಟ್ಟು
ಪರಮಸಂಘಿಗಳಿಗೆ ಇಚ್ಛೆಯಂತೆ
ಮಡಿಸಿ ಗಳಿಗೆ ಮಾಡಿ—

ಇಂಥ ಬಟ್ಟೆಗಳ ಮಡಿಕೆಗಳಲ್ಲಿ ಜಾಜಿ, ಮಲ್ಲಿಗೆ, ಸಂಪಿಗೆಗಳಂತಹ ಹೂಗಳನ್ನು ಇಟ್ಟು ಸುವಾಸಿತಗೊಳಿಸುತ್ತಿದ್ದರು.

"ನವಪುಷ್ಪನಿಕರದಿಂ ಪೊದೆದು ಪರಿಮಳಂಪುಂ ಮಘಮಘಿಪ ವಸ್ತ್ರಂ"ಗಳನ್ನು ಜನರು ಮೆಚ್ಚಿಕೊಂಡಿದ್ದರು.


ಗಂಡು ಹೆಣ್ಣು ಒಂದೇ ವಿಧದಲ್ಲಿ ಅಲಂಕರಿಸಿಕೊಳ್ಳುವುದು (unisex) ಅತ್ಯಾಧುನಿಕ ರೀತಿ ಎಂದು ಇತ್ತೀಚೆಗೆ ಕೂದಲು ಬೆಳೆಸಿ, ಬಣ್ಣ-ಬಣ್ಣದ ಲುಂಗಿ ತೊಟ್ಟು, ಬಳೆಗಳನ್ನೂ ಹಾರಗಳನ್ನೂ ಹಾಕಿಕೊಳ್ಳುವ ನವಯುವಕರು ನಂಬಿದರೂ ಈ ಪದ್ಧತಿ ತುಂಬ ಹಿಂದೆ ಪ್ರಚಾರದಲ್ಲಿತ್ತು. ಗಂಡಸರೂ ಉದ್ದ ಕೂದಲು ಬೆಳೆಸಿ ಬಗೆಬಗೆಯ ತುರುಬು ಹಾಕಿಕೊಳ್ಳುತ್ತಿದ್ದರು. (ಚಿತ್ರ ೨). ಬಗೆಬಗೆಯ ಆಭರಣ ತೊಟ್ಟು 'ಕುಪ್ಪಸ' (ಜೆಕೆಟ್) ಹಾಕಿಕೊಳ್ಳುತ್ತಿದ್ದರು. ನಡುವಿಗೆ ಕಾಂಚೀದಾಮ ಧರಿಸುತ್ತಿದ್ದರು.

ಚಿಪ್ಪಿಗರ ಕೌಶಲ್ಯ

ರವಕೆ, ಕಂಚುಕ, ಕಂಚುಳಿಕೆ, ಕುಪ್ಪಸ, ಚಲ್ಲಣ, ಪವಕಂಚುಕ, ಕುಲಾಯಿ ಮೊದಲಾದವನ್ನು ಹೊಲಿಯುವ 'ಚಿಪ್ಪಿಗ'(ಸಿಂಪಿಗ)ರು ಇದ್ದರು. ಹನ್ನೆರಡನೆಯ ಶತಮಾನದ ಅರಸೀಕೆರೆಯ ಶಾಸನವೊಂದು ಚಿಪ್ಪಿಗರ ಗೊತ್ತಳಿ (guild)ಯನ್ನು ಬಣ್ಣಿಸುತ್ತದೆ. "ತರವಾಗೆ ಕತ್ತರಿಸಿ ಚಲ್ಲಣಂಗಳಂ, ಕಂಚುಳಿಕೆಗಳಂ ಮಾಡಿ ಅಳಂಕರಿಸಿದ" ಈ ಚಿಪ್ಪಿಗರು "ವಸ್ತ್ರಖಂಡಿತ ಶೃಂಗಾರ ಚಿತ್ರೋದ್ಭವ"ರೆಂದು ಹೆಸರು ಪಡೆದಿದ್ದರು. ಚಲ್ಲಣಗಳನ್ನು ಹೊಲಿಯುವಾಗ ಕೌಶಲ್ಯದಿಂದ ಬಟ್ಟೆಗಳನ್ನು ಕತ್ತರಿಸಿ ಉಳಿದ ತುಂಡುಗಳಿಂದ ಬೇರೆ ಬೇರೆ ನಕ್ಷೆ ಬರುವಂತೆ ಜೋಡಿಸಿ ಕುಪ್ಪಸಗಳನ್ನು ಹೊಲಿಯುವುದರಲ್ಲಿ ಈ ಚಿಪ್ಪಿಗರದು ಎತ್ತಿದ ಕೈ ಎಂದಾಯಿತು. ಒಂದು ಕಾಲಕ್ಕೆ ಇಂಥ 'ದುಪ್ಪಟಿಕುಪ್ಪಸ'ಗಳ ಫ್ಯಾಶನ್ ತುಂಬ ಜನಪ್ರಿಯವಿದ್ದಿರಬೇಕು!

ರವಕೆಯನ್ನು ಬಾಲಿಕೆಯರು ಮತ್ತು ಮುದುಕಿಯರು ತೊಡುತ್ತಿದ್ದರೆ ಜವ್ವನೆಯರು ಅರೆ ತೋಳು, ಸ್ತನ ಭಾಗವನ್ನು ಮುಚ್ಚುವ ಕಿರಿದಾದ ಕಂಚುಳಿಕೆಯನ್ನು ತೊಡುತ್ತಿದ್ದರು. ಇದೇ ಫ್ಯಾಶನ್ನು ಕಾಶ್ಮೀರದಲ್ಲಿ ಪ್ರಚಾರದಲ್ಲಿ ಬಂದಿತು. ಕೆಲ ತರುಣಿಯರು ಆಧುನಿಕವೆಂದು ತೋರುವ ತೋಳಿಲ್ಲದ 'ಕಂಚುಕ' (ಚಿತ್ರ ೪) ಹಾಕಿಕೊಂಡರೆ, ಬೇಟೆಗೆ ಹೊರಟ ರಮಣಿಯರು

೫





೬

ಅಂಗಾಂಗಗಳ ಚಲನವಲನಕ್ಕೆ ಆತಂಕ ಬರದಂತೆ 'ಕುಚವಸ್ತ್ರ'ವನ್ನು ಬಿಗಿದುಕೊಳ್ಳುತ್ತಿದ್ದರು; ಅಮೇರಿಕನ್ 'ಬಿಕಿನಿ'ಯನ್ನು ಹೋಲುವ ಕಿರಿ ಚಡ್ಡಿ ಧರಿಸುತ್ತಿದ್ದರು. ಹೊರ ಬಟ್ಟೆಯನ್ನು (hood) ಧರಿಸುವದೂ ಅಂದು ಪ್ರಚಾರದಲ್ಲಿತ್ತು (ಚಿತ್ರ ೪). ಕುಪ್ಪಸದೊಂದಿಗೆ ತುಂಬ ನಿರಿಗೆ ಬಿಟ್ಟು ಸೀರೆಯುಟ್ಟು ತಲೆ ಮುಚ್ಚದಂತೆ ಸೆರಗು ಹೊದೆಯುವುದೂ ಕಾಶ್ಮೀರಕ್ಕೆ ಕರ್ನಾಟಕವಿತ್ತ ಕೊಡುಗೆಯಾಯಿತು. ಕರ್ನಾಟಕದಲ್ಲಿ ಮುಸುಕು ಹಾಕುವ ಪದ್ಧತಿಯಿದ್ದರೂ ಮೈ, ಮುಖ ಮುಚ್ಚುವುದು ಅವರ ಉದ್ದೇಶವಿರಲಿಲ್ಲ. "ತೊಡಿಸಿದ ಆಭರಣಮುಮಂ ಮುಡಿಸಿದ ಪೊಸ ಪುವ್ವಂ ನಸುದೋರ್ಪ ಸಪುರದುಕೂಲಮುಂ ಮುಸುಕಿಟ್ಟು" ತರುಣಿಯರು ಹೊರಗೆ ಹೊರಡುತ್ತಿದ್ದರು. ಕಂಡೂ ಕಾಣದಂತೆ ಉಡುವುದು ಹೆಚ್ಚು ಆಕರ್ಷಕವೆಂಬ ತಥ್ಯವನ್ನು ಅವರು ಮನಗಂಡವರಾಗಿದ್ದರು. ಕಸರತ್ತು ಮಾಡುವ ಹೆಂಗಳೆಯರು ತೀರ ಕಿರಿದಾದ ಬಟ್ಟೆ ಧರಿಸುತ್ತಿದ್ದರು. (ಚಿತ್ರ ೧).

ಸಾಮಾನ್ಯವಾಗಿ ಸ್ತ್ರೀಯರು ವಿವಿಧ ಬಣ್ಣದ ನಕ್ಷೆಯ ಸೀರೆಗಳನ್ನು ಉಡುತ್ತಿದ್ದರು. (ಚಿತ್ರ ೫). ಮೈಗೆ ಅಂಟಿಕೊಳ್ಳುವಂತೆ ಬಿಗಿಯಾಗಿ ಸೀರೆ ಉಟ್ಟುಕೊಳ್ಳುವ ಪದ್ಧತಿಯೂ ಪ್ರಚಾರದಲ್ಲಿತ್ತು (ಚಿತ್ರ ೭).

ಸೆರಗು ಹೊದೆಯುವುದು

ಆ ಯುಗದಲ್ಲಿ ಸಾಮಾನ್ಯ ಉಡುಪಾದ ಸೀರೆಯ ಉದ್ದಳತೆ ಎಷ್ಟು ಇತ್ತು ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಸೇವಕ ಸೇವಕಿಯರು ಕಿರಿಯಳತೆಯ ಸೀರೆ ಉಟ್ಟರೆ, ಅಶ್ವಾರೋಹಣ ಮಾಡುವವರು, ನೃತ್ಯ ಮತ್ತಿತರ ಅಂಗವಿನ್ಯಾಸದಲ್ಲಿ ತೊಡಗುವವರು ವೀರಗಚ್ಚೆ ಹಾಕಿ ಉಡುತ್ತಿದ್ದರು. 'ರಾಜತರಂಗಿಣಿ'ಯಲ್ಲಿಯ ಉಲ್ಲೇಖಿದ ಪ್ರಕಾರ ಓಲಗದಲ್ಲಿ ವಿರಮಿಸುವವರು ತುಂಬ ನಿರಿಗೆ ಬಿಟ್ಟು ನಿರಿಗೆಯ ತುದಿಗಳು ನೆಲವನ್ನು ಮುಟ್ಟುವಂತೆ ಉಡುತ್ತಿದ್ದರು. ಮಹಿಳೆಯರು ಸೀರೆಯ ಒಳಗಡೆ ಲಂಗ ಧರಿಸುವುದು ಅರ್ವಾಚೀನ ಪದ್ಧತಿ.



ಆಸ್ಥಾನಕ್ಕೆ ಆಮಂತ್ರಿತರಾಗಿ ಬಂದ ಬೇರೆ ಬೇರೆ ಪ್ರದೇಶದ ಮಹಿಳೆಯರ ಉಡುಪಿನ ವರ್ಣನೆ ಪ್ರಾಸಂಗಿಕವಾಗಿ 'ಮಾನಸೋಲ್ಲಾಸ'ದಲ್ಲಿ ಬರುತ್ತದೆ. ದುರ್ದೈವದಿಂದ ಕರ್ನಾಟಕದ ಮಹಿಳೆಯ ವರ್ಣನೆಯೇ ಅದರಲ್ಲಿಲ್ಲ ತನ್ನ ಪ್ರದೇಶದವರ ತೀರ ಪರಿಚಿತ ಉಡುಪನ್ನು ವರ್ಣಿಸುವ ಅವಶ್ಯಕತೆಯನ್ನು ಅದನ್ನು ಬರೆದ ಕನ್ನಡಿಗ ಕಂಡಿರಲಿಕ್ಕಿಲ್ಲ. ದ್ರಾವಿಡದೇಶದ ಮಹಿಳೆಯರು ಎದೆಯನ್ನು ಮುಚ್ಚುತ್ತಿದ್ದಿಲ್ಲ. ಗುರ್ಜರ ದೇಶದವರು ಕೈತನಕ ಮುಚ್ಚುವ ಕುಪ್ಪುಸ ಶಾಲಿಯಾದ ಮರಾಠಾ ಸಂಸ್ಕೃತಿಯ ಸೋಂಕಿನಿಂದ ಬಳಕೆಯಲ್ಲಿ ಬಂದಿರಬಹುದಾಗಿದೆ.

"ಸಪುರವುಂ ಅಂಬರಮುಂ ಬಿಗಿದುಡಿಸಿ," "ಕೃಶೋದರ ನಿಜಿಡ ನಿಬದ್ಧಪಟ್ಟರುಂ ಆಗಿ" ಎಂದು ಬಿಗಿಯಾಗಿ ಉಡುಪು ತೊಡುವ ಪದ್ಧತಿಯನ್ನು ಬಣ್ಣಿಸಲಾಗಿದೆ. ಇಂದಿನ ಟೆನಿಸ್ ಆಟಗಾತಿಯರಂತೆ ಅಂದಿನ ಕೋಲಾಟಗಾತಿಯರು ನಿರಿಗೆಯ ಕಿರಿ ಲಂಗ ತೊಟ್ಟರೆ, ಸುಂದರ ಕಾಲುಳ್ಳವಳು ಕಿರಿ ಸೀರೆ (mini sari)ಯನ್ನು ಉಡುತ್ತಿದ್ದಳು (ಚಿತ್ರ ೬). ನರ್ತಕಿಯರು ಬಿಗಿ

೯

(ಅಪಾಣಿಕೃತಕಂಚುಕಾಃ) ಧರಿಸುತ್ತಿದ್ದರಲ್ಲದೇ, ಆಂಧ್ರದವರಂತೆ ಬಲ ಭಾಗ ಮುಚ್ಚಿ ಎಡ ತೋಳು ಕಾಣುವಂತೆ 'ಅಪಸವ್ಯ'ವಾಗಿ ಸೆರಗು ಹೊದೆಯುತ್ತಿದ್ದರಂತೆ. ತಲೆ ಮುಚ್ಚುವಂತೆ ಸೆರಗು ಹೊದೆಯುವ ಪದ್ಧತಿ ಉತ್ತರಕರ್ನಾಟಕದಲ್ಲಿ, ನಂತರದ ಯುಗದಲ್ಲಿ ವಿಜಾಪುರ, ಬೀದರಗಳಲ್ಲಿ ಮುಸಲ್ಮಾನ ಆಳಿಕೆಯ ಮತ್ತು ಉತ್ತರದಂತೆ ಡೆಕ್ಕನ್ ಪ್ರದೇಶದಲ್ಲಿ ತುಂಬ ಪ್ರಭಾವ



೧೦

ದಾದ ಚಡ್ಡಿಯನ್ನೂ (ಚಿತ್ರ ೮) ಇನ್ನೂ ಕೆಲವರು ಕಿರಿಚಡ್ಡಿಯನ್ನೂ (ಚಿತ್ರ ೯) ತೊಟ್ಟುಕೊಳ್ಳುತ್ತಿದ್ದರು.

ಕುಲಾಯಿ

[illegible] ಕಾಲದಲ್ಲಿ ಜನಪ್ರಿಯವಾದ ಕುಲಾಯಿ ತುಂಬ ಎತ್ತರವಾದ ಟೊಪ್ಪಿಗೆ. ಅದನ್ನು ಗಂಡಸರೂ ಮಹಿಳೆಯರೂ ಕೂಡಿಯೇ ಧರಿಸು[illegible] ವಿದೇಶೀಯರ ವರ್ಣನೆಯಿಂದ ತಿಳಿಯುತ್ತದೆ:



೧೨

ಲೇಪಾಕ್ಷಿ ದೇವಸ್ಥಾನದ ವರ್ಣಚಿತ್ರಗಳಿಂದ ಈ ಕುಲಾಯಿಗಳ ಕಲ್ಪನೆ ಕೆಲ ಮಟ್ಟಿಗೆ ಬರುವಂತಿದೆ (ಚಿತ್ರ ೧೨). ಅರಮನೆಯಲ್ಲಿರುವ ಕೃಷ್ಣದೇವರಾಯನ ಕಂಚಿನ ವಿಗ್ರಹ, ಮತ್ತು ಮಧುರೆಯ ನಾಯಕರ ವಿಗ್ರಹಗಳು ಈ ಎತ್ತರ ಟೋಪಿಯನ್ನು ಧರಿಸಿದ್ದನ್ನು ನೋಡಬಹುದು. ಬಾರ್ಬೋಸ ಬರೆದಂತೆ, "ಇಂಥ ಟೊಪ್ಪಿಗೆಗಳನ್ನು ಧರಿಸುವ ಪದ್ಧತಿ ಭಾರತದಲ್ಲಿ ಚೀನದಿಂದ ಬಂದಿದೆ. ಇದೊಂದು ಮೇಲಿನ ವರ್ಗದವರ ಅಂತಸ್ತಿನ ಗುರುತಾಗಿದೆ (ಚಿತ್ರ ೧೧). ಇಂಥ ಟೊಪ್ಪಿಗೆ ಆರರಿಂದ ಎಂಟು ಅಂಗುಲ ಎತ್ತರವಿದ್ದು, ಸುತ್ತಳತೆಯು ತುತ್ತತುದಿ ಹದಿನೈದು ಅಂಗುಲವಿರುತ್ತದೆ. ಇಂಥ ಟೊಪ್ಪಿಗೆ ಧರಿಸಿದ ಸವಾರನು ಕುದುರೆಯನ್ನು ನಾಗಾಲೋಟದಿಂದ ಓಡಿಸಿದರೂ ಅದು ಬೀಳುವುದಿಲ್ಲ. ಬಿಸಿಲು ಕಿಂಚಿತ್ತೂ ಹತ್ತುವುದಿಲ್ಲ... ದರಬಾರದಲ್ಲಿ ನೆರೆಯುವ ಸರದಾರರು ಮೂಲತಃ ಸುಂದರಕಾಯದವರಿದ್ದು ಇವನ್ನು ಹಾಕಿಕೊಂಡಾಗ ಓಲಗದ ಒಡ್ಡು ಎದ್ದು ಕಾಣಿಸುತ್ತದೆ."

ಪುರುಷರು ರುಮಾಲು ಸುತ್ತಿಕೊಳ್ಳುವ ಪರಿಪಾಠವೂ ಇತ್ತು. (ಚಿತ್ರ ೧೫). ಪುರುಷರು ಎದೆಯ ಭಾಗವನ್ನು ಮರೆಮಾಡಲು ವಿಶೇಷ ಪ್ರಯತ್ನಿಸದಿದ್ದರೂ ಕಸೆಬಂಡಿ (ಚಿತ್ರ ೧೧), ಒಗಲುಬಂಡಿ, ಜಾಕೀಟು, ಉದ್ದ ತೋಳಿನ ಕೋಟು (ಚಿತ್ರ ೧೩)ಗಳಂತಹ ಹೊಲಿದ ಬಟ್ಟೆಗಳನ್ನು ಧಾರಾಳವಾಗಿ ತೊಡುತ್ತಿದ್ದಂತೆ ಶಿಲ್ಪಗಳಿಂದ ತಿಳಿಯುತ್ತದೆ. ಚಾಲುಕ್ಯರ ಆಸ್ಥಾನದಲ್ಲಿ ಉದ್ದ ತೋಳಿನ (ದೀರ್ಘ ಬಾಹುವಿನಿರ್ಮಿತ) ಅಂಗಿಗಳನ್ನು (ಅಂಗಿಕಾ), ಉಷ್ಣೀಷ(ರುಮಾಲು) ಧರಿಸುವುದು ಕಡ್ಡಾಯವಾಗಿತ್ತು. ಶಾಲನ್ನು ನಡುವಿನವರೆಗೆ (ಚಿತ್ರ ೧೫) ಇಲ್ಲವೇ ಪಾದಗಳವರೆಗೆ (ಚಿತ್ರ ೧೩) ಒರುವಂತೆ ಇಳಿಬಿಡುತ್ತಿದ್ದರು. ಮೊಣಕಾಲವರೆಗೆ ಬರುವ ಬಣ್ಣಬಣ್ಣದ ನಕ್ಷೆಯ 'ಸೀರೆ' ಉಡುತ್ತಿದ್ದರು (ಚಿತ್ರ ೧೦). ನೆಲ ಚುಂಬಿಸುವ ನಿರಿಗೆಗಳ ಧೋತರ ಉಡುವುದೂ ಕಾಶ್ಮೀರದಲ್ಲಿ ಜನಪ್ರಿಯವಾದ ಕರ್ನಾಟಕದ ಉಡಿಗೆಯಾಗಿತ್ತು ಎಂದು 'ರಾಜತರಂಗಿಣಿ' ಹೇಳುತ್ತದೆ. ವಿಜಯನಗರದ ಕಾಲದಲ್ಲಿ ಉದ್ದ ಕಾಲಿನ ಚಲ್ಲಣಗಳನ್ನು ತೊಡುತ್ತಿದ್ದರು. ಚಾಲುಕ್ಯರ ಕಾಲದಲ್ಲಿಯೂ 'ದ್ವಿಪದಿ'ಗಳ ಉಲ್ಲೇಖವಿದ್ದು ಬೇಟೆಯ ಕಾಲಕ್ಕೆ ಹಸಿರು 'ದ್ವಿಪದಿ'ಗಳನ್ನು ತೊಡುತ್ತಿದ್ದರು.

ರಸಿಕತೆ

ಸ್ತ್ರೀ-ಪುರುಷರು ತಮ್ಮ ಕೂದಲನ್ನು ಪ್ರತಿದಿನ ಧೂಪ ಸಂಸ್ಕಾರದಿಂದ ಸುವಾಸಿತಗೊಳಿಸಿ, ಸುಗಂಧದೆಣ್ಣೆ ಹಚ್ಚಿ, ಬಾಚಿ ವಿವಿಧ ರೀತಿಗಳಲ್ಲಿ ಅಲಂಕರಿಸಿಕೊಳ್ಳುತ್ತಿದ್ದರು. ಗಂಡಸರು ಕೃತಕ ಗುಂಗುರುಗೂದಲು ('ಸುಳಿಗುರುಳೋಳಿ') ಮಾಡಿಕೊಂಡರೆ (ಚಿತ್ರ ೧೬) ಹೆಂಗಳೆಯರು 'ಅಳಿಪಟ್ಟ ಕುರುಳ'ನ್ನು 'ಸೋಮರ್ಮುಡಿ' 'ವಿಸ್ತಾರದ ತುರುಂಬು'ಗಳಲ್ಲಿ ಕಟ್ಟಿಕೊಳ್ಳುತ್ತಿದ್ದರು. 'ವೇಣಿಯನ್ನು ಅಳಂಕೆಗೆ' ಸೇರಿಸಿ



೧೩



೧೪

ಅನೇಕ ಕೇಶಾಲಂಕಾರಗಳನ್ನು ಮಾಡಿಕೊಳ್ಳು-ತ್ತಿದ್ದರು. ವಿಜಯನಗರ ಕಾಲದಲ್ಲಿ ಕೃತಕ ಚವರಿಗಳು ತುಂಬ ಜನಪ್ರಿಯವಿದ್ದವೆಂದು ನಿಕೋಲೊ ಕೊಂಟ್ಯಾ ಹೇಳುತ್ತಾನೆ. ಇದ್ದ ಕೂದಲು ಇನ್ನೂ ಹೆಚ್ಚಾಗಿ ತೋರುವಂತೆ ಒಗೆ ಬಗೆಯ ಕೂದಲಿನ ಉಂಡೆ (hair-buns) ಅಂದು ಉಪಯೋಗಿಸುತ್ತಿದ್ದರು ಬಳ್ಳಿಗಾವಿಯ ತ್ರಿಪುರಾಂತಕ ದೇವಸ್ಥಾನದಲ್ಲಿ 'ಸಾಧನಾ ಕಟ್' ಕೇಶಾಲಂಕಾರದ ಶಿಲಾಬಾಲಿಕೆಯ ವಿಗ್ರಹವಿದೆ. ಸ್ತ್ರೀಯರೂ ರಸಿಕ ಗಂಡಸರೂ ಜಾಜಿ, ಮಲ್ಲಿಗೆ, ಕೇದಿಗೆಗಳಂತಹ ಸುಗಂಧದ ಹೂಗಳನ್ನು ಮುಡಿಯುತ್ತಿದ್ದರು (ಚಿತ್ರ ೧೬).

ಹುಬ್ಬುಗಳನ್ನು ತಿದ್ದಿ ತೀಡಿಕೊಳ್ಳುವುದು ಆಧುನಿಕರ ಸೊತ್ತಲ್ಲ. ಪಂಪ ಕವಿ. '[illegible]'ಗಳ ಬಗ್ಗೆ ಹೇಳುತ್ತಾನೆ. [illegible]ದಲ್ಲಿ ಅವನ್ನು [illegible] ಹೊಳಪು ([illegible]) ಕೊಡುತ್ತಿದ್ದರು. [illegible], [illegible]ಗಳಿಗೆ ಕಾಡಿಗೆ [illegible] ಹಚ್ಚಿಕೊಳ್ಳುತ್ತಿದ್ದರು. ಕರ್ಪೂರದ ಚೂರ್ಣ, ಚಂದನಾದಿ ಸುಗಂಧಗಳನ್ನು ಕ್ರಮಬದ್ಧವಾಗಿ ಬೆರೆಸಿ ತಯಾರಿಸಿದ '[illegible]' (ಫೇಸ್ ಪೌಡರ್) ವನ್ನು ಮುಖಕ್ಕೆ ಲೇಪಿಸಿಕೊಳ್ಳು-ತ್ತಿದ್ದರು. ಸ್ತ್ರೀಯರು ಕಸ್ತೂರಿ, ಕೇಸರಿ, ಚಂದನಾದಿಗಳಿಂದ, ಕಪೋಲ, ಕತ್ತು ಎದೆಯ ಮೇಲ್ಭಾಗಗಳಿಗೆ ಸುಂದರವಾಗಿ 'ಮಕರಿಕಾ ಪತ್ರ-ಚಯ'ವನ್ನು ಬರೆದುಕೊಳ್ಳುತ್ತಿದ್ದರು. ತುಟಿಗೆ ರಂಗೇರಿಸಲು ವಿವಿಧ ಸಾಮಗ್ರಿಗಳಿಂದ ತಯಾರಿಸಿದ ತಾಂಬೂಲವನ್ನು ಸವಿಯುತ್ತಿದ್ದರು. ಬಟ್ಟೆ ಬರೆಗಳ ಬಣ್ಣಕ್ಕೆ ಸರಿಹೋಗುವ ಸುಗಂಧ ಮತ್ತು ಬಗೆಬಗೆಯ ಆಕಾರದ ತಿಲಕ (ತಿಲಕೈಃ ವಿವಿಧೈಃ ಭವ್ಯೈಃ ನಾನಾವಿಧಮನೋಹರೈಃ) ಗಳ ಬಗ್ಗೆ 'ಮಾನಸೋಲ್ಲಾಸ'ದಲ್ಲಿ ಹೇಳಿದೆ.

ಆಧುನಿಕ ಪುರುಷರಿಗಿಂತ ಅಂದಿನವರು ಹೆಚ್ಚು ಅಲಂಕಾರ ಪ್ರಿಯರಿದ್ದರೆಂದರೆ ಅತಿಶಯೋಕ್ತಿ-ಯಾಗಲಾರದು. ಪುಲಿಗೆರೆ ಊರನ್ನು ಸುತ್ತಿ

೧೫



ಬರಲೆಂದು ಆದಯ್ಯನು ಹೊರಟಾಗ ತೊಟ್ಟ ವೇಷಭೂಷಣಗಳು ಹೀಗಿದ್ದವು:

ತೋರ ಹಾರದ ಜಳಪಟಿಗೆಯು
ಪದಕದ ಬಾಹು
ಪೂರಯುದ ತೋಳತೊಳಗುವಾ
ಮಾಣಿಕದ ಕರ್ಣ
ಪೂರದ, ಮಹಾ ಮುದ್ರಿಕೆಗಳ
ಮಣಿ ಮಯೂರ ಕಟಕ
ಮೆರೆವ ಸರ್ವಾಭರಣದ, ಸೌರಭ್ಯ
ಚಂದನೋದ್ವರ್ತದಿಂ ವಕ್ಷದೊಳು
ಸಾರೈಸಿ, ಅಚ್ಚಸಾದನು ತೀಡಿ, ಒಳಿಕ
ಕಿವಿದಾರಿ ಮುಸುಕಿಂದ ಮೃಗಮದದ
ಸೊಬಗನು......
ಇಟ್ಟ ಕತ್ತುರಿಯ ತಿಲಕದ,
ಕಪೋಲದೊಳು ಜವು
ಗಿಟ್ಟೊಸರುವಂತೊಟ್ಟ
ಕೊಂಡಪುಣುಗಿನ,
ಕಂಪ
ನೊಟ್ಟೈಸಿ ತುರುಬಿದ
ಕದಂಬ ಕುಸುಮ
ಕ್ಕೆರಗಿ ಮುಂಡಳಿಪ
ಮುರಿದು ಬಿಯ
ಉಟ್ಟ ಧವಳಾಂಬರದ
ಹಡಪಿಗನ ಕೈಯೊಳ-
ಳವಟ್ಟ ವೀಳೆಯದ...

ಕೊರಳಿಗೆ ದಪ್ಪ ಹಾರ, ಪದಕ, ತೋಳಿಗೆ ಬಾಹುಪೂರ, ಕಿವಿಗೆ ಮಾಣಿಕದ 'ಕರ್ಣಪೂರ', ಕೈಗೆ ರತ್ನ ಖಚಿತ ಕಡಗ, ಬೆರಳಿಗೆ ಮುದ್ರಿಕೆ, ಎದೆಯ ಮೇಲೆ ಚಂದನದ ಉದ್ವರ್ತನ, ಮೈಗೆ ಅಚ್ಚ ಸುಗಂಧ, ಕಿವಿಯಲ್ಲಿ ಸುಗಂಧ(ದ ಹತ್ತಿ ?), ಹಣೆಗೆ ಕಸ್ತೂರಿಯ ತಿಲಕ, ಕಪೋಲದಲ್ಲಿ ಒಸರುವಂತೆ ಹಾಕಿಕೊಂಡ ಪುನುಗಿನ ಸುಗಂಧ, ಕೂದಲಲ್ಲಿ ಕದಂಬದ ಹೂವಿನ ಹಾರ, ಬಿಳಿಯ ಬಟ್ಟೆ, ವೀಳ್ಯಗಳಿಂದ ತಯಾರಾಗಿ ಅಂದಿನ ರಸಿಕರು ಯುವತಿಯರ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದರು.

ಪ್ರವಾಸಕ್ಕೆ, ವಿಹಾರಕ್ಕೆ ಹೊರಟಾಗ ಅನೇಕ ಶೃಂಗಾರ ಸಾಧನಗಳನ್ನು ಒಯ್ಯುವ ಪರಿಪಾಠವಿತ್ತೆಂದು ಪದ್ಮರಾಜಪುರಾಣದಿಂದ ತಿಳಿಯುತ್ತದೆ. ಹಡಪ, ಹೊನ್ನಗಿಂಡಿ, ಮೊಗದುಕೂಲ (ಮುಖವಸ್ತ್ರ, ಟಾವೆಲ್ಲು), ಕನ್ನಡಿ, ಸುವರ್ಣದ ನಕ್ಷೆಯ ಅಡಪಗೆ, ಪನ್ನೀರ ಕುಪ್ಪಿಗೆ, ಪುಡಿಗಸ್ತೂರಿಯ ತಟ್ಟೆ, ಸಾದಿನ ಭರಣಿ, ಕುಂಕುಮ ಜವಾದಿಯ ಮಂಕಿ, ಗಂಧದ ಶಿಂಪು, ಕರ್ಪೂರದ ನಾಳಿ ಮೊದಲಾದ ಸಲಕರಣೆಗಳು ಅವುಗಳಲ್ಲಿ ಸೇರ್ಪಡೆಯಾಗಿದ್ದವು. ಅಂದಿನ ರಸಿಕ ಜನಾಂಗಕ್ಕೆ ಬೇಕಾದ ವಿವಿಧ ಸುಗಂಧ ದ್ರವ್ಯಗಳ ಸಾಮಗ್ರಿಗಳು ಬೇರೆ ಬೇರೆ ದೇಶಗಳಿಂದ ಬರುತ್ತಿದ್ದವು.




೧೬ ↑ ೧೭ ↓



ಪಾದರಕ್ಷೆ


ಪಾದರಕ್ಷೆಗಳನ್ನು ಬಳಸುವ ಪರಿಪಾಠ ಮಧ್ಯಯುಗದಲ್ಲಿ ಇದ್ದುದರಿಂದ ಸಮ್ಮಗಾರರು, ಮಾದಿಗರು ಮುಂತಾದವರಿಗೆ ತುಂಬ ಕೆಲಸವಿರುತ್ತಿತ್ತು. ಪಚ್ಚೆ ಮಂತಪ, ಚಿನ್ನದ ನಕ್ಷೆಯ, ರೇಶಿಮೆಯ ಕಸೂತಿಯ, ಮೃದುವಾದ ಚರ್ಮದ ಬಗೆ ಬಗೆಯ ಪಾದರಕ್ಷೆಗಳು ಜನಪ್ರಿಯವಾಗಿದ್ದವು. ಗಟ್ಟಿಯಾದ ಅಟ್ಟೆಯ, ಅನೆರೆ ಹಗುರವಾದ, ನವಿಲುಗರಿಗಳನ್ನು ಸುಂದರವಾಗಿ



೧೮



೧೯



೨೦

ಜೋಡಿಸಿದ, ನಡೆಯುವಾಗ ಸುಮಧುರವಾಗಿ ಸಪ್ಪಳಮಾಡುವ ಕಿರಿಗೆಜ್ಜೆಗಳನ್ನು ಜೋಡಿಸಿದ ಪಾದರಕ್ಷೆಗಳನ್ನು ಸೋಮೇಶ್ವರ ದೊರೆ ಬಣ್ಣಿಸಿದ್ದಾನೆ. ಸಾಧುಗಳು, ಮಡಿವಂತರು ಪಾದುಕೆಗಳನ್ನು ಧರಿಸಿದರೆ ಜನಸಾಮಾನ್ಯರು ಮೆಟ್ಟು, ತಪ್ಪಡಿಗಳನ್ನು ಮೆಟ್ಟುತ್ತಿದ್ದರು. ಕಾಡು ದಾರಿ ತುಳಿಯುವ ಬೇಡ ಎಕ್ಕಡಗಳನ್ನು ತೊಡುತ್ತಿದ್ದ. ಡೊಮಿಂಗೊ ಪೀಸ್ ಹೇಳಿದ ಪ್ರಕಾರ ಚೂಪಾದ ತುದಿಯ ಷೂಗಳು ವಿಜಯನಗರ ಕಾಲದಲ್ಲಿ ಪ್ರಚಲಿತವಿದ್ದವು. ಕುದುರೆಸವಾರರು ಗಮ್‌ಬೂಟುಗಳನ್ನು ಹೋಲುವಂಥ ಬೂಟುಗಳನ್ನು ಧರಿಸುತ್ತಿದ್ದರು. ಮಾದರ ದೂಳಯ್ಯನ ಒಂದು ವಚನದಿಂದ ಅಂದಿನ ಜನಸಾಮಾನ್ಯರು ಬಳಸುತ್ತಿದ್ದ 'ತಪ್ಪಡಿ'ಯ ವಿವರ ದೊರೆಯುತ್ತದೆ.

ಕಟ್ಟಿದೆ ಘಟಪಟ್ಟೆಯ ಹೊಲಿದು ಇದಕ್ಕೆ
  ಚತುರ್ವಿಧದ ನಾಲ್ಕಂಗುಟದ ಬಲಿದು
ಗೂಂಟದ ದ್ವಾರದಲ್ಲಿ ಉಭಯ ಸಂಚದ
  ಭಾರ ತೆಗೆದು ತೊಡಕ್ಕು ಬಂಧವನಿಕ್ಕಿ
ಅಡಿಯ ಬಿಡದಂತೆ ಹಿಂದಣ ಮಡ,
ಮುಂದಣ ಉಂಗುಷ್ಠಕ್ಕೆ ಬಂದನ್ನೊಂದು
  ಜಾರದಂತೆ ಬಂಧಿಸಿ
ಸಕಲೇಂದ್ರಿಯವೆಂಬ ಉಭಯದ
  ಸಂಧಿಸಿ ಕಣಿಕೆಯನಿಕ್ಕಿ...

ಈ ರೀತಿ ಭವ್ಯವಾಗಿ ಮಾಡಿದ ತಪ್ಪಡಿ ಅದೆಷ್ಟು ಕಾಲ ತಾಳುತ್ತಿರಬೇಕು !

ಇವುಗಳ ಹೊರತಾಗಿ ಸ್ತ್ರೀಪುರುಷರು ವಿಪುಲವಾದ ಆಭರಣಗಳನ್ನು ಧರಿಸುವ ಪರಿಪಾಠವೂ ಬೆಳೆದು ಬಂದಿತ್ತು. ಕಿವಿಯ ಆಭರಣಗಳಲ್ಲದೇ ಕೊರಳಿಗೆ ಏಕಾವಳಿ, ಬ್ರಹ್ಮಸೂತ್ರ, ದಂಡಕ, ಸರಕ, ಪದಕಗಳು; ಭುಜ, ತೋಳು, ಮುಂಗೈಗಳಿಗೂ ಆಭರಣಗಳಿದ್ದವು. ಪುರುಷರು ತಮ್ಮ ನಡುವಿಗೆ ಭಾರವಾದ ಕಾಂಚೀದಾಮ (ಚಿತ್ರ ೧೮) ತೊಟ್ಟರೆ ಹೆಂಗಳೆಯರು ಬಡನಡುವಿನ ಸೌಂದರ್ಯ ಎದ್ದು ತೋರುವಂತೆ ಹಗುರಾದ ಕಾಂಚೀದಾಮ (ಚಿತ್ರ ೨೦) ತೊಡುತ್ತಿದ್ದರು. ಕಾಲಂದುಗೆಗಳನ್ನು ಗಂಡಸರೂ ಹೆಂಗಸರೂ ಕೂಡಿಯೇ ಬಳಸುತ್ತಿದ್ದರು.

ಜನರೆಲ್ಲರೂ ಒಂದೇ ಬಗೆಯ ಉಡುಪು ತೊಡದೇ ವೃತ್ತಿಗೆ ತಕ್ಕಂತೆ ತೊಡುತ್ತಿದ್ದರು. ಸೈನಿಕರು (ಚಿತ್ರ ೨೨) ಸೇವಕರು (ಚಿತ್ರ ೨೩) ಕಡಿಮೆ ಬಟ್ಟೆ,ಲೋಹದ ಆಭರಣಗಳನ್ನು ತೊಟ್ಟರೆ ಬೈರಾಗಿಗಳು ಕಪನಿ (ಚಿತ್ರ ೨೪) ಧರಿಸುತ್ತಿದ್ದರು. ಪೈಲವಾನರಲ್ಲಿ ಹನುಮಾನ್ ಚಡ್ಡಿ ಪ್ರಚಲಿತ



೨೧

ವಿತ್ತು. ಮಕ್ಕಳಿಗಾಗಿ ನಡುಸೀರೆ, ಅರಳೆಲೆ, ಮಾಗಾಯಿ, ಮಣಿಸರಗಳಿದ್ದವು.

ತನ್ನ ಊನಗಳು ಎದ್ದು ಕಾಣದಂತೆ ಎಚ್ಚರಿಕೆಯಿಂದ ಅಲಂಕಾರ ಮಾಡಿಕೊಂಡ, ಕವಿ ರಾಘವಾಂಕನು ಚಿತ್ರಿಸಿದ ಮುದಿಯಳ ವರ್ಣನೆ ಇಂದಿನವರೂ ತಲೆದೂಗುವಂತಿದೆ:

ಮುಸಿಗಪ್ಪಡವನಡಸಿ ತುರುಬಿಟ್ಟು
ನರೆದಲೆಗೆ
ಮುಸುಕಿಟ್ಟು ಬಿದ್ದ ಪೆರ್ಮೊಲೆಗಳಿಗೆ
ರವಕೆಯುಂ
ಸಸಿಗೆ ಬಿಗಿದೆವೆಯುದಿರ್ದ ಕಣ್ಗೆ
ಕಾಡಿಗೆಯುಂಚ್ಚು
ಸದೆ ಸೊಕ್ಸನಣೆಲೊಳಡಿಸಿ
ಮುಸುಡುಂಗಾಣದ ತೆರದಿ ಹಿಂದೆ
ಸೊಡರಿಟ್ಟು—

ನರೆಗೂದಲು ಕಾಣದಂತೆ 'ಮುಸಿಗಪ್ಪಡ' ಉಪಯೋಗಿಸಿ, ಸರಿಯಾಗಿ ಮುಸುಕು ಹಾಕಿ, ಜೋಲು ಬಿದ್ದ ಸ್ತನಗಳು ಸರಿಯಾಗಿ ನಿಲ್ಲುವಂತೆ ಬಿಗಿಯಾದ ರವಕೆ ಧರಿಸಿ, ಎವೆ ಉದುರಿದ ಕಣ್ಣುಗಳಿಗೆ ಕಾಡಿಗೆ ತೀಡಿಕೊಂಡು, ಮುಖದಲ್ಲಿ




೨೨



೨೩



೨೪




ವೃದ್ಧಾಪ್ಯದ ಗೆರೆಗಳು ಕಾಣದಂತೆ ಹಿಂಬದಿಗೆ ದೀಪವಿಟ್ಟುಕೊಂಡು ರಸಿಕರಿಗಾಗಿ ಕಾಯುವ ವೃದ್ಧೆಗೆ ಕೂಡ ಅಲಂಕಾರದ ಕಲ್ಪನೆ ಎಷ್ಟೊಂದು ಇದ್ದಿರಬೇಕು! ನಮ್ಮ ಊನಗಳನ್ನು ಸರಿಯಾಗಿ ಮರೆಮಾಚಿಕೊಂಡು, ದೇವದತ್ತ ಸೌಂದರ್ಯ ಮತ್ತು ಬೆಳೆಸಿಕೊಂಡ ಅಂಗಸೌಷ್ಠವ ಎದ್ದು ಕಾಣುವಂತೆ ಬಟ್ಟೆಬರೆ ಧರಿಸುವುದರಲ್ಲಿ, ತೊಡಿಗೆ ತೊಡುವುದರಲ್ಲಿ ಹಿಂದಿನವರಿಂದ ನಾವು ಕಲಿಯುವುದು ಸಾಕಷ್ಟಿದೆಯಲ್ಲವೇ ?

ಚಿತ್ರಗಳ ವರ್ಣನೆ

೧ ಕಿರುಬಟ್ಟೆ ಧರಿಸಿದ ಕಸರತ್ತು ಮಾಡುವ ಡೊಂಬತಿಯರು (ಹಂಪಿ)
೨ ಪುರುಷರ ತುರುಬು (ಹಳೆಬೀಡು)
೩ ಎತ್ತಿ ಕಟ್ಟಿದ ವಿಸ್ತಾರದ ತುರುಬು (ಹಳೆಬೀಡು)
೪ ತೋಳಿಲ್ಲದ ಕುಪ್ಪಸ, ಹೊರಬಟ್ಟೆ (hood) ಧರಿಸಿದ ಯುವತಿ (ಹಳೆಬೀಡು)
೫ ನಕ್ಷೆಯ ಸೀರೆ (ಹಳೆಬೀಡು)
೬ ಕಿರಿ ಸೀರೆ (mini-sari) (ಬೇಲೂರು)
೭ ಮೈಗೆ ಅಂಟಿದಂತೆ ಉಟ್ಟ ಸೀರೆ (ಹಂಪಿ)
೮ ಬಿಗಿಯಾದ ಸ್ತ್ರೀಯರ ಚಡ್ಡಿ (ಹಳೆಬೀಡು)
೯ ಕಿರಿ ಚಡ್ಡಿ (bikini) (ಬೇಲೂರು)
೧೦ ಪುರುಷರ ಅರ್ಧ ಸೀರೆ (ಬಳ್ಳಿಗಾವಿ)
೧೧ ಎತ್ತರದ ಕುಲಾಯಿ, ಕಸೆಯ ಅಂಗಿ (ಹಂಪಿ)
೧೨ ಕುಲಾವಿ ಮತ್ತು ಚೌಕಡಿ ಮತ್ತು ಬಿಳಿ ಸೀರೆ, ಗಂಡಸರು (ಲೇಪಾಕ್ಷಿ)
೧೩ ಪಾದದ ವರೆಗೆ ಬರುವ ಶಾಲು, ನಿಲುವಂಗಿ (ಸೋಮನಾಥಪುರ)
೧೪ ಪೈಲವಾನರ ಹನುಮಾನ ಚಡ್ಡಿ (ಸೋಮನಾಥಪುರ)
೧೫ ತಲೆಗೆ ರುಮಾಲು ಭುಜದ ಮೇಲೆ ಶಾಲು (ಸೋಮನಾಥಪುರ)
೧೬ ಗಂಡಸರ ಕೃತಕ ಉಂಗುರುಗೂದಲು ಕೇಶಾಲಂಕಾರ (ಬೇಲೂರು)
೧೭ ಹೂ ಮುಡಿದ ಕೇಶಾಲಂಕಾರ (ಹಳೆಬೀಡು)
೧೮ ಪುರುಷರ ಕಾಂಚೀದಾಮ (ಬೇಲೂರು)
೧೯ ಗಂಡಸಿನ ನಡುವಿನ ಆಭರಣ (ಬೇಲೂರು)
೨೦ ಹಗುರವಾದ ಸ್ತ್ರೀಯರ ಕಾಂಚೀದಾಮ (ಬೇಲೂರು)
೨೧ ಕುದುರೆ ಸವಾರರ ಎತ್ತರದ ಬೂಟು (ಸೋಮನಾಥಪುರ)
೨೨ ಸೈನಿಕನ ವೇಷಭೂಷಣ (ಲಕ್ಕುಂಡಿ)
೨೩ ಸೇವಕಿಯ ಉಡಿಗೆ (ಲಕ್ಕುಂಡಿ)
೨೪ ಸಂನ್ಯಾಸಿಯ ಕಫನಿ (ಹಳೆಬೀಡು)

ಚಿತ್ರಗಳು : ಕೃಷ್ಣಾನಂದ ಕಾಮತ್




ಪಾರ್ಲೆ ಗ್ಲುಕೋ ಬಿಸ್ಕಿಟ್‌ಗಳು



ವಿಟಮಿನ್ಸ್, ಕ್ಯಾಲ್ಸಿಯಂ ಮತ್ತು ಪ್ರೋಟೀನ್ಸ್—
ಇವುಗಳನ್ನೊದಗಿಸುವ ಹಾಲು, ಗೋದಿ, ಸಕ್ಕರೆ
ಮತ್ತು ಗ್ಲುಕೋಸ್‌ಗಳ ಉತ್ತಮಿಕೆಯೆಲ್ಲ
ಈ ಬಿಸ್ಕಿಟ್‌ಗಳಲ್ಲಿವೆ— ನಿಮ್ಮ ಮಗುವಿನ
ಬೆಳವಣಿಗೆಗೆ ಸಹಾಯ ಮಾಡುವುದಕ್ಕಾಗಿ!

ಕೈಯಿಂದ ಮುಟ್ಟದೇನೇ ಆರೋಗ್ಯಶಾಸ್ತ್ರರೀತ್ಯಾ
ತಯಾರಿಸಲ್ಪಡುವ ಪಾರ್ಲೆ ಗ್ಲುಕೋ ಬಿಸ್ಕಿಟ್‌ಗಳು ಕಚ್ಚಾ
ಮತ್ತು ಸಿದ್ಧವಾದ ಮಾಲು ಈ ಎರಡೂ ಹಂತಗಳಲ್ಲಿ
ಕಟ್ಟುನಿಟ್ಟಾದ ಗುಣನಿಯಂತ್ರಣಕ್ಕೆ ಒಳಗಾಗುತ್ತವೆ...
ಅವು ಸುಲಭವಾಗಿ ಜೀರ್ಣವಾಗುವಂತೆ ಮತ್ತು
ವಿಶೇಷವಾಗಿ ನಿಮ್ಮ ಮಗುವಿಗೆ ಉತ್ತಮವಾಗುವಂತೆ
[illegible]ಪ್ರದವಾಗಿ! ಅಲ್ಲದೆ, ಅವು ಎಷ್ಟೊಂದು ರುಚಿಕರ!
ನೀವೂ ಅವುಗಳಿಗೆ ಮಾರುಹೋಗುವಿರಿ!



ಭಾರತದ ಎಲ್ಲಕ್ಕಿಂತ ಹೆಚ್ಚು
ಮಾರಾಟವಾಗುವ ಬಿಸ್ಕಿಟ್‌ಗಳು.
ಜೆನಿವಾದಲ್ಲಿ 1972ರ
ವಿಶ್ವ-ಆಯ್ಕೆ ಸ್ಪರ್ಧೆಯಲ್ಲಿ
ಬಹುಮಾನವನ್ನು ಗೆದ್ದ ಬಿಸ್ಕಿಟ್

ಶಾಂತಿನಾಥ ದೇಸಾಯಿ

ತನ್ನ ಹಿಂದೆ ಬಿಟ್ಟು ಹೋಗಿದ್ದಾಳೆ

"ಪಾರ್ವತಮ್ಮ, ನಂದಿನಿ ಇನ್ನೂ ಬಂದಿಲ್ಲೇನು ಕಾಲೇಜಿನಿಂದ?" ಪ್ರಶ್ನೆಯನ್ನು ಅಡಿಗೆ ಮನೆಯತ್ತ ಚೆಲ್ಲಿ ಸದಾಶಿವಯ್ಯ ಮಲಗುವ ಕೋಣೆಯಿಂದ ಹೊರಗಿನ ಕೋಣೆಯತ್ತ ನಡೆದರು. ಆಫೀಸಿನಿಂದ ಮನೆಗೆ ಬಂದ ಕೂಡಲೇ ಮಗಳು ಕಣ್ಣಿಗೆ ಬೀಳದಿದ್ದರೆ ಅವರಿಗೆ ಏನೋ ತಪ್ಪಿದಂತನಿಸುತ್ತಿತ್ತು.

"ಅಪ್ಪಾ, ಅಪ್ಪಾ-- ಅಕ್ಕಾ ಆ ರಾಮೂನ ಅಂಗಡಿಗೆ ಹೋಗ್ಯಾಳ ಕಾಯಿಪಲ್ಲೆ ತರಾಕ," ಒಳಗಿನ ಕೋಣೆಯಿಂದ ಹೊರಬಂದ ಮಹೇಶ ಅಪ್ಪನ ಕೈ ಹಿಡಿದ.

"ಮತ್ತ ನೀ ಯಾಕ ಹೋಗಿಲ್ಲೋ ಮಹೇಶಾ, ಅವಳ ಕೂಡ?"

"ನನಗ ಇಲ್ಲೇ ಇರು, ಈಗ ಐದ ಮಿನೀಟ ನ್ಯಾಗ ಬರ್‍ತೇನಿ ಅಂತ ಹೇಳಿದಳು. ನನಗ ಕ್ಯಾಡ್‌ಬರಿ ತಗೊಂಡಬರ್‍ತೇನಿ ಅಂತ ಹೇಳ್ಯಾಳ."

"ಒಳಗೆ ಹೋಗಿ ಪಾರ್ವತಮ್ಮಗ ಚಹಾ ಮಾಡಾಕ ಹೇಳು."

"ಈವತ್ತ ಅಜ್ಜಿ ಬಂದಿಲ್ಲ, ಅಪ್ಪಾ, ಅವಳ ಮಗಳು ಬಂದಾಳ ಅಡಿಗೀ ಮಾಡಾಕ. ಅವಳಿಗೆ ಹೇಳಿ ಬರ್‍ಲೀ?"

"ಹೂಂ, ಹೇಳಲ್ಲ."

ಮಹೇಶ ಗಿಡ್ಡ ಚಡ್ಡೀ ಮೇಲಕ್ಕೇರಿಸುತ್ತ ಒಳಗೆ ಓಡಿದ. ಮಹೇಶನ ಉತ್ಸಾಹ ನೋಡಿದಾಗೆಲ್ಲ ಸದಾಶಿವಯ್ಯನವರಿಗೆ ಪಾಪವೆನಿಸುತ್ತಿತ್ತು. ತಾಯಿಯಿಲ್ಲದ ತಬ್ಬಲಿ!

ಸದಾಶಿವಯ್ಯನವರು ಬೂಟು ಬಿಚ್ಚಿ, ಕಾಲ ಚೀಲ ತೆಗೆದು, ಉಶ್ಶೆಂದು ನಿಟ್ಟುಸಿರು ಬಿಟ್ಟು ಖುರ್ಚಿಯಲ್ಲಿ ಕೈಚೆಲ್ಲಿ ಕುಳಿತರು. ಹೂಂ, ಈ ಮಕ್ಕಳಿದ್ದಾರೆಂದೇ ಮನೀ ಅನಬೇಕು. ಇಲ್ಲದಿದ್ದರ— ಮಸಣಾ! ಅದರಲ್ಲೂ ನಂದಿನಿ ಮನ್ಯಾಗ ಯಾತಕ್ಕೂ ಕಡಿಮೆ ಮಾಡೋದಿಲ್ಲ. ಒಂದು ದೃಷ್ಟಿಯಿಂದ, ಸುನಂದಾ ಇದ್ದಾಗಿನ ಕಿಂತಲೂ ಮನ್ಯಾಗ ವ್ಯವಸ್ಥಾ ಬಹಳ, ಅಚ್ಚುಕಟ್ಟುತನ ಬಹಳ...ಆದರೇನು ಸುನಂದಾನs ಇಲ್ಲಲ್ಲ! ಅವಳಿದ್ದಾಗ ಅವಳಿಗೆ ಅಷ್ಟೊಂದು ಸುಖಾ ಕೊಡಲಿಲ್ಲ ನಾನು. ಪಾಪ, ಅವಳಿಗೆ ತ್ರಾಸs ಬಹಳ ಕೊಟ್ಟೆ. ಆದರೆ ನನಗೇನು ಗೊತ್ತು ಅವಳು ಹೀಂಗ ಒಮ್ಮಿಂದೊಮ್ಮೆಲೇ ಡಿಲಿವ್ಹರಿಯಲ್ಲೇ ಸತ್ತುಹೋಗಬಹುದೆಂದು. ಅವಳ ಮ್ಯಾಲ ಸಿಕ್ಕಾಪಟ್ಟೆ ಸಿಟ್ಟಿಗೇಳತಿದ್ದೆ, ಒಮ್ಮೊಮ್ಮೆ ಬಡೀತಿದ್ದೆ. ಆದರ ಅವಳು ಅಳೋ ಮುಂದ ಒಳಗ ಏನೋ ತುಂಬಿ ಬಂಧಾಂಗ ಅನಿಸುತ್ತಿತ್ತು— ಆಗ ನನಗ ತಡೀಲಿಕ್ಕೇ ಆಗ್ತಿದ್ದಿಲ್ಲ. ಅವಳನ್ನು ರಮಿಸಿ, ಸಂತೈಸಿ—ಕಡೀಕ ಕುಸ್ತೀ ಯಾಡಿ ನಗಿಸೋದಂದರೆ ಒಂದು ನಮೂನೆ ಮೋಜs ಆಗ್ತಿತ್ತು. ಆದರೆ ಕಡೀಕಡೀಕ ಮೋಜೆಲ್ಲಾ ಮರ್‍ತು ಬರೇ ಸಿಟ್ಟಿಗೇಳೋದೇ ಹೆಚ್ಚಾಗ್ತಿತ್ತು. ಮಾತಾಡೋದು, ನಗೋದು, ಹರಟೀ ಹೊಡೆಯೋದು—ಎಲ್ಲಾ ಬರೇ ನಂದಿನೀ ಕೂಡs! ಪಾಪ, ಅವಳು ಹೀಂಗ ಹೋಗ್ತಾಳಂತ ಗೊತ್ತಿದ್ದರ ಅವಳ್ನ ಹೂವಿನ್ಹಾಂಗ ಪ್ರೀತಿಯಿಂದ ನೋಡಿಕೋತಿದ್ದೆ. ನಾ ದನ—ಖರೇ ಅಂದರೂನೂ ನಾ ಒಂದು ದನ...

"ಅಲ್ಲರಿ, ಚಹಾದ ಕೂಡ ಏನಾದ್ರೂ ಮಾಡಲೇನ್ರಿ?" ಒಳಗಿನ ಬಾಗಿಲ ಮರೆಯಿಂದ ಸಣ್ಣ ದನಿಯಲ್ಲಿ ಒಂದು ಪ್ರಶ್ನೆ ಬಂತು. ಓಹ್, ಇವಳೇ ಆ ಪಾರ್ವತಮ್ಮನ ಮಗಳಿರಬೇಕು. 'ಸಾಹೇಬರ, ನಿಮ್ಮ ಆಫೀಸಿನ್ಯಾಗ ಯಾರಾದ್ರೂ ಸಿಗ್ತಾರೇನ ನೋಡ್ರಿ ನಮ್ಮ ಮಗಳಿಗೆ ವರ?' ಎಂದು ಪಾರ್ವತಮ್ಮ ನಾಲ್ಕಾರು ಸಾರೆ ಕೇಳಿದ್ದರ ನೆನಪಾಯಿತು.

"ಆಂ? ಯಾರು? ಪಾರ್ವತಮ್ಮನ ಮಗಳಲ್ಲ?" ಕುತೂಹಲ ಹತ್ತಿಕ್ಕಿ ಸದಾಶಿವಯ್ಯ ಸೆಟೆದು ಕೂತು ಮೂಗಿನ ತುದಿಯನ್ನು ಚೂಪು ಮಾಡಿದರು.

"ಹೌದ್ರಿ. ನನ್ನ ಹೆಸರು ಗಿರಿಜಾರಿ. ಚಹಾದ ಕೂಡ ಏನಾದ್ರೂ ತಿನಲಿಕ್ಕೆ ಮಾಡಲೇನ್ರಿ?"

"ನನಗಂತೂ ಏನೂ ಬ್ಯಾಡ. ಮಹೇಶಗs ಕೇಳು. ಅವ ಏನೂ ತಿಂದಿಲ್ಲೇನು ಇನ್ನೂತನಕ? ನಂದಿನಿ?"

"ಮಹೇಶ ಬ್ರೆಡ್ ತಿಂದಾನ್ರಿ. ನಂದಿನಿಬಾಯರು ಇನ್ನೂ ಏನೂ ತಿಂದಿಲ್ರಿ. ಈಗ ಬರ್‍ತೇನಿ ಅಂತ ಹೇಳಿ ಹೋಗ್ಯಾರ್ರಿ— ಬ್ರೆಡ್ಡು, ಕಾಯಿಪಲ್ಯ ಮತ್ತೇನೇನೋ ತರಬೇಕು ಅಂತ ಹೇಳ್ತಿದ್ದರ್ರಿ. ಇಂದು ಊಟಕ್ಕೇನು ಮಾಡಬೇಕ್ರಿ—ಚಪಾತೀನೋ ರೊಟ್ಟೀನೋ?"

ಸದಾಶಿವಯ್ಯನವರನ್ನು ಸುನಂದೆಯ ನೆನಪು ಒಮ್ಮೆಲೇ ಶಲ್ಯದಂತೆ ಚುಚ್ಚಿತು. ಅವಳೂ ಹೀಗೇ ಚಪಾತೀನೋ ರೊಟ್ಟಿನೋ ಎಂದು ಕೇಳ್ತಿದ್ಲು. ನನಗ ಚಪಾತಿ ಬೇಕಂದ್ರ ರೊಟ್ಟೀ ತಿನ್ರೆಲ್ಲ ಅಂತಿದ್ಲು—ರೊಟ್ಟಿ ಪಚನಕ್ಕ ಭಾಳ ಹಗುರ ಅಂತಿದ್ಲು. ಅಪ್ಪಿತಪ್ಪಿ ರೊಟ್ಟೀ ಮಾಡು

ಅಂತಂದರ ಯಾಕ ಈವತ್ತ ನನ್ನ ಸಮಾಧಾನಕ್ಕಾಗಿ ರೊಟ್ಟೀ ಅಂತೀರೇನು? ಬೇಕಾದರ ಚಹಾ ತೀನ್ನಽ ಮಾಡ್ತೀನಿ ಅಂತ ಅಂತಿದ್ಲು...ಮಜಾ ಅಂದರ, ಅವಳ ಮನಸ್ಸಿಗೆ ಬರೋ ಯಾವ ಕೆಲ್ಸಾ ಮಾಡಿದರೂ, ಯಾವ ಮಾತು ಆಡಿದ್ರೂ, ಅವರಾಗ ಅವಳಿಗೆ ವಿಶ್ವಾಸ ಇರ್ತಿರಲಿಲ್ಲ. ಅದರಲ್ಲೇನೋ ಗತ್ತದ ಅಥವಾ ತಂದ್ಯಽ ಎಲ್ಲ್ಯೋ ತಪ್ಪೇದ ಅಂತ ಸಂಶಯಪಡತಿದ್ಲು. ಅವಳ ಮನಸ್ಸಿನ ವಿರುದ್ಧ ಹೇಳಿವ್ರನ್ಯಽ ಅವಳಿಗೆ ನಂಬಿಗಿ, ಸಮಾಧಾನ—

"ನಂದಿನಿಗೆ ಕೇಳಿ ಅವಳು ಹೇಳಿದಂತೆ ಮಾಡ್ಬೇಕು." ಈಗ ಮನೆಯಲ್ಲಿ ನಂದಿನಿಯನ್ನು ಕೇಳದೆ ಯಾವ ಮಾತೂ ನಡೆಯೋದಿಲ್ಲ. ಹೆಂಡತಿಯಿದ್ದಾಗ ಯಾವಾಗಲೂ ಹರಿಹಾಯುವ ಸದಾಶಿವಯ್ಯ ಮಗಳ ಮುಂದೆ ಸಂಪೂರ್ಣ ಶರಣಾಗತ.

"ಹೂನ್ರಿ. ಈಗ ಚಹಾ ಮಾಡಿ ತರ್ತೀನಿ."

ಎಲಾ ಇವನ, ಇವಳ ಅಪ್ಪಗ ಏನಾಗೇತಿ ಅಂತ ಕೇಳಲೇ ಇಲ್ಲಲ್ಲ. ಸುನಂದಾ ಹೋದಾಗಿನಿಂದ ಮಂದೀ ಬಗ್ಗೆ ಕುತೂಹಲ, ಆಸ್ಥೆ ಎಲ್ಲಾ ಮಟಾಮಾಯವಾಗಿ ಬಿಟ್ಟೇದ; ಆಫೀಸಾಯಿತು, ಮನೆಯಾಯಿತು— ಮುಸ್ಯಾಗ ಎಲ್ಲಾ ನೋಡಿಕೊಳ್ಳಾಕಿ ನಂದಿನಿ, ಅಡಿಗೀ ಮಾಡಾಕ ಪಾರ್ವತಮ್ಮ. ನನ್ನ ಮನಸ್ಸೆಲ್ಲ ಸಂಪೂರ್ಣ ಬಧಿರಾಗಿಬಿಟ್ಟೇದ. ನಂದಿನಿಯಲ್ಲಿ ಮಾತ್ರ ವಿಲಕ್ಷಣ ಬದಲಾಗೇದ—ಅಂತ ಎಲ್ಲಾರೂ ಅಂತಾರ. ಅವಳಿದ್ದಾಗ ಅವಳದೂ ಇವಳದೂ ಒಂದ ದಿನಾನೂ ಚೆನ್ನಾಗಿ ಕೂಡಿ ನಡೀತಿರಲಿಲ್ಲ. ದಿನಾಲು ಜಗಳಾನ್ಯಽ ತಾಯಿ ಮಗಳದು. ತಾಯೀ ಮಾತು ಒಂದ ಚೂರು ಕೇಳಿದ್ರ, ಅಣಿ! ಆದರ ಈಗ ಈ ಹುಡುಗಿಯಲ್ಲಿ ಎಷ್ಟೊಂದು ತಿಳುವಳಿಕಿ, ಎಷ್ಟೊಂದು ಜವಾಬ್ದಾರಿತನ, ಎಷ್ಟೊಂದು ಚೈತನ್ಯ! ಇವಳಿರದಿದ್ದರೆ ನಾ ನನ್ನ ದುಃಖದ ಕತ್ತಲದಾಗ ಸತ್ತೇಹೋಗ್ತಿದ್ದೆನೋ ಏನೋ! ಮರಣ ಅಂದರ ಮನಸಾ ಎಷ್ಟ ಶಾಂತ



ಆಗ್ತಾನ, ಎಷ್ಟ ಶಾಣ್ಯಾ ಆಗ್ತಾನ; ಪ್ರೀತಿ, ಸಹಾನುಭೂತಿ, ದಯಾ, ಮಾಯಾ ಇಂಥಾವೆಲ್ಲಾ ಎಷ್ಟು ಬೆಳೀತಾವ...ಛೀ, ಹೋಗಿ ಗಿರಿಜಾಗ ಕೇಳಬೇಕು! ಪಾರ್ವತಮ್ಮನಿಗೆ ಏನಾಗಿದೆಯೆಂದು.

ಸದಾಶಿವಯ್ಯ ಕುರ್ಚಿಯಿಂದ ಎದ್ದು ಒಳಗೆ ಅಡಿಗೆ ಮನೆಯತ್ತ ಹೋಗಿ ಬಾಗಿಲಲ್ಲಿ ನಿಂತು, "ಗಿರಿ—ಗಿರಿಜಾ, ಅಲ್ಲಾ ಪಾರ್ವತಮ್ಮಗೆ ಏನಾಗೇತಿ? ನಾ ಕೇಳೋದೇ ಮರ್ತೆ," ಎಂದು ಗಡಬಡಿಸಿ ಕೇಳಿದರು.

ಗಿರಿಜೆ ಒಮ್ಮೆಲೆ ಬೆಚ್ಚಿಬಿದ್ದಳು. "ಆಂ?" ಎಂದು ಎದೆಯ ಮೇಲಿನ ಸೆರಗನ್ನು ಸರಿಪಡಿಸುತ್ತಲೇ ಹಿಂದಿರುಗಿ ನೋಡಿದಳು.

ಇವಳ ಕಣ್ಣು ಎಷ್ಟು ದುಂಡಗಿವೆ—ದೊಡ್ಡವಿವೆ. ಬೊಗಸೆಗಣ್ಣು. ಹಾಗೆ ಬೀಸಾಗಿ ಚೆನ್ನಾಗಿದ್ದಾಳೆ. ಇವಳ ಮದುವೆ ಯಾಕಾಗಿಲ್ಲೋ ಇನ್ನೂ ತನಕ?

ಗಿರಿಜೆ ಚಹಾ ಇಳಿಸಲೆಂದು ಕಟ್ಟೆಯತ್ತ ಮುಖ ತಿರುವಿದಳು. ಸದಾಶಿವಯ್ಯನವರ ಕಣ್ಣು ಅವಳ ದುಂಡು ದುಂಡಾದ ನಿತಂಬದ ಮೇಲೆ—

"ಅವ್ವಗ ಮೈಯಾಗ ಚೂರು ಉರಿ ಬಂದಾವರಿ. ನಾ ಬರೋ ಮುಂದ ಮೈ ಸುಡಾಕ ಹತ್ತಿತ್ತರಿ. ಅದಕ್ಕ—"

"ಡಾಕ್ಟರಿಗೆ ಯಾರಿಗಾದರೂ ತೋರಿಸಿಲ್ಲೇನು?"

"ಇಲ್ಲರಿ. ನಮ್ಮವ್ವಗ ಡಾಕ್ಟರ ಮ್ಯಾಲ ವಿಶ್ವಾಸಽ ಇದ್ದಾಂಗಿಲ್ಲರಿ. ಬಂದ ಜ್ವರ ತನ್ನಿಂದ ತಾನಽ ಹೋಗಬೇಕು ಅಂತ ಅವಳ ಹಟಾರಿ..." ಚಹಾ ಸೋಸಿಯಾಗಿತ್ತು; ಕಪ್ಪು—ಬಸಿ ತೆಗೆದುಕೊಳ್ಳಲಿಕ್ಕೆ ಗಿರಿಜೆ ಕಪಾಟಿನತ್ತ ಹೋದಳು.

"ಡಬ್ಬ್ಯಾಗ ಏನಾದರೂ ಬ್ರೆಡ್ಡಿನ ತುಕಡೀ ಅದ ಏನು ನೋಡು ಸ್ವಲ್ಪ," ಎಂದು ಸದಾಶಿವಯ್ಯ ಹೊಸ್ತಿಲನ್ನು ದಾಟಿ ಅಡಿಗೆ ಮನೆಯಲ್ಲಿ ಕಾಲಿಟರು.

"ಇವೇ ಈಗ ಇಲ್ಲೇ ಬ್ರೆಡ್ಡಿನ ಡಬ್ಬಿ ಇತ್ತಲ್ಲ... ಮಹೇಶ ಎಲ್ಲಿ ಒಯ್ದು ಇಟ್ಟಾನೋ ಏನೋ?" ಎಂದು ಸ್ವಲ್ಪ ಗಡಬಡಿಸಿ ಅತ್ತಿತ್ತ ಹುಡುಕಹತ್ತಿದಳು.

ಅವಳ ಮೈಯ ಚಲನವಲನ ಸದಾಶಿವಯ್ಯನವರ ಮನಸ್ಸನ್ನು ವ್ಯಗ್ರಗೊಳಿಸಿತು. "ಬ್ಯಾಡ ಬಿಡು. ಚಹಾ ಅಷ್ಟಽ ಸಾಕು," ಎಂದು ಅಂದವರೆ ದುರುದುರು ಹೋಗಿ ಕಟ್ಟೆಯ ಮೇಲಿನ ಕಪ್ಪು—ಬಸಿ ತೆಗೆದುಕೊಂಡು ಹೊರಗೆ ಹೊರಟರು.

ಬಾಗಿಲಲ್ಲೇ ನಂದಿನಿ. "ಅಪ್ಪಾ, ನಾಽ ತಂದು ಕೊಡ್ತಿದ್ನೆಲ್ಲಾ ಚಹಾ. ಗಿರಿಜಾ, ಏನು ಹುಡುಕಲಿಕ್ಕೆ ಹತ್ತೀದಿ?" ಎಂದು ಸ್ವಲ್ಪ ಗಡುಸಾಗಿಯೇ ಕೇಳಿದಳು.

ಸದಾಶಿವಯ್ಯ ಚಹಾದ ಕಪ್ಪನ್ನು ನಂದಿನಿಯು ಚಾಚಿದ ಕೈಯಲ್ಲಿಟ್ಟು, ಏನೋ ತಪ್ಪು ಮಾಡಿದವರಂತೆ, ತಪ್ಪು ಮಾಡುವಾಗ ಸಿಕ್ಕಂತೆ, ಮುಖ ಗಂಟು ಹಾಕಿ ಹೊರಗೆ ಹೊರಟರು. ಹೋಗುವಾಗ, ಒಮ್ಮೆಲೆ ತಂದೆಯಾಗಿ, "ನಂದಿನಿ, ಎಲ್ಲಿ ಹೋಗಿದ್ದಿ ಇಷ್ಟೊತ್ತು? ನೀನಿನ್ನೂ ಏನೂ ತಿಂದಿಲ್ಲಂತ... ಮಹೇಶಗ ಕ್ಯಾಡ್‌ಬರಿ ತಂದಿಹೌದಲ್ಲೋ? ಅವ ಅದರದಽ ಹಾದಿ ಕಾಯ್ತಾ ಕೂತಾನ," ಎಂದು ಏನೇನೋ ಮಾತನಾಡಲು ಯತ್ನಿಸಿದರು. "ಅಲ್ಲಾ, ಗಿರಿಜಾಳ ಕಡಿಂದ ಎಲ್ಲಾ ಸಾಮಾನ ತರಿಸಬಹುದಾಗಿತ್ತಲ್ಲ—ನೀನಽ ಸ್ವತಃ ಹೋಗಿ ತರೋದಕಿಂತ. ಇಲ್ಲಿದ್ರ ಸಂಜೀ ಮುಂದ ನಾನೂ ನೀನೂ ಇಬ್ಬರೂ ಹೋಗಿ—" ಎಂದು ಜೋಡಿಸುತ್ತಿರುವಾಗ ನಡುವೆಯೇ ನಂದಿನಿ ನುಡಿದಳು.

"ಪಾಪ. ಅವಳಿಗೆ ಅದೆಲ್ಲಾ ಹ್ಯಾಂಗ ಗೊತ್ತಾಗಬೇಕು. ಮಹೇಶಾ, ಮಹೇಶಾ—"

ನಂದಿನಿಯ ಧ್ವನಿಯಲ್ಲಿಯ ಕಾಠಿಣ್ಯ ಸದಾಶಿವಯ್ಯನವರಿಗೆ ಹೊಸದೆನಿಸಿತು. ಹಾಗೆ ಅದು ಬಹಳ ಹಳೆಯದಿತ್ತು. ಅವ್ವನ ಕೂಡ ಜಗಳಾ

ಕ್ಯಂತಲೂ ಕರ್ಕಶವಾದ—ಕಾಠಿಣ್ಯ ಬಂದಿರು-ತ್ತಿತ್ತು—ಎಂದು ನೆನೆಸುತ್ತ ಸದಾಶಿವಯ್ಯ ಅಡಿಗೆಯ ಮನೆಯ ಹೊರಗೆ ಊಟದ ಕೊಣೆ-ಯಲ್ಲಿ ಕುಳಿತರು.

"ಈ ಮಹೇಶ, ಬರೇ ಆಟ ಆಟ ಅಂತಾನ ನೋಡಪ್ಪ. ಇವನ ಕಡಿಂದ ಅಭ್ಯಾಸ ಮಾಡಿಸಿ ಕೊಳ್ಳೋದಂದ್ರ ಸಾಕುಬೇಕಾಗಿ ಹೋಗ್ತದ," ಅಪ್ಪನ ಮುಂದೆ ಚಹಾ ಇಡುತ್ತಾ ನಂದಿನಿ ಹೇಳಿದಳು.

"ಬೇಕಾದರ ಒಬ್ಬ ಮಾಸ್ತರನ ಟ್ಯೂಶನ್ ಹಚ್ಚೋಣು. ನಂದಿನಿ, ನಿಂದೂ ಪರೀಕ್ಷಾ ಸಮೀಪ ಬಂದದ..."

"ಇರಲಿ ಬಿಡಿರಿ. ಎರಡನೆ ಯತ್ತೆಯ ಅಭ್ಯಾಸಕ್ಕೆ ಟ್ಯೂಶನ್ ಅಂದರ ಮಂದಿ ನಕ್ಕಾರು. ನೀವೇನೂ ಕಾಳಜೀ ಮಾಡಬ್ಯಾಡ್ರಿ. ನಾ ಎಲ್ಲಾ ಸರಿಯಾಗಿ ನೋಡ್ಕೋತೀನಿ," ಎಂದು ನಂದಿನಿ ಅಡಿಗೆ ಮನೆಯಲ್ಲಿ ಹೋದಳು.

ಸದಾಶಿವಯ್ಯನವರ ಲಕ್ಷ್ಯವೆಲ್ಲ ಅಡಿಗೆ ಮನೆಯತ್ತ ಹರಿಯಿತು.

"ಗಿರಿಜಾ, ಇಂದೇನೇನ ಮಾಡ್ತಿ? ಪರಮೀ ಪಲ್ಲೇ ಮಾಡು ಮತ್ತು ಬಟಗಡ್ಲೀ ಉಸುಳೀ ಮಾಡು, ಚಪಾತಿ ಮಾಡು. ಅಪ್ಪಾವರಿಗೆ ಚಪಾತೀನs ಬಹಳ ಸೇರ್ತಾವ."

ನಂದಿನಿಗೆ ನನಗೇನು ಸೇರ್ತದ ಏನು ಬಿಡ್ತದ ಅನ್ನೋದರ ಸಂಪೂರ್ಣ ಪರಿಚಯ ಅದ. ಆದರೂ ಈವತ್ತು ಉಸುಳೀ ಕೂಡ ಬಿಸಿ ಬಿಸಿ ರೊಟ್ಟಿ ಇದ್ದರ ರುಚಿಯಾಗಬಹುದಿತ್ತು. ಆದರೆ ಹಾಗೆ ಹೇಳಲು ಸದಾಶಿವಯ್ಯವರ ನಾಲಿಗೆ ಏಳಲಿಲ್ಲ.

"ಮಾಡ್ತೀನ್ರಿ."

"ಬಟಗಡ್ಲೀ ಉಸುಳೀ ಮಾಡಾಕ ಬರ್ತದಿಲ್ಲೋ ಹೆಂತ?"

"ಬರ್ತದ್ರಿ. ಬರಲಿಲ್ಲಾಂದ್ರ ನಿಮಗs ಕೇಳ್ತಿನ್ರಿ." ಗಿರಿಜೆಯ ಧ್ವನಿಯಲ್ಲಿಯ ಕೊಂಕು ಸದಾಶಿವಯ್ಯನವರಿಗೆ ಮೋಜೆನಿಸಿತು.

"ಹಾಂ.ಅಲ್ಲಿದೆ ನೋಡ್ರಿ ಬ್ರೆಡ್ಡಿನ ಡಬ್ಬಿ: ಅಪ್ಪಾ ಅವರಿಗೆ ಬ್ರೆಡ್ಡು ಬೇಕಾಗಿತ್ತು."

"ಹಿಂಗೇನು? ಆಗ ; ಹೇಳಬಾರದಿತ್ತೇನು? ನಾ ಇದೇ ಈಗ ತಾಜಾ ಬ್ರೆಡ್ಡು ತಂದೀನಿ. ಅಪ್ಪಾ, ಅಪ್ಪಾ. ತಡಿರಿ, ಚಹಾ ಮುಗಿಸ-ಬ್ಯಾಡ್ರಿ. ಬ್ರೆಡ್ಡು ತರ್ತೀನಿ— ತಾಜಾ ಬ್ರೆಡ್ಡು. ಜೆಣ್ಣೀ ಬೇಕೆನ್ರಿ?" ಎಂದು ನಂದಿನಿ ಕೂಗಿ ಕೇಳಿದಳು.

*

'ಅಪ್ಪಾ, ನೀನೇಕೆ ನನ್ನನ್ನೆಲ್ಲ ದುಃಖಸಾಗರದಲ್ಲಿ ಮುಳುಗಿಸಿ ಹೋಗಿಬಿಟ್ಟೆ?

ಅಪ್ಪಾ, ನೀನು ಹೋದದ್ದಾದರೂ ಎಲ್ಲಿಗೆ?...

ಈ ಸಂಸಾರದ ಭಾರವನ್ನೆಲ್ಲ ನನ್ನ ಚಿಕ್ಕ ಹೆಗಲ ಮೇಲೆ ಹೇರಿ ಪಾರಾಗಿಬಿಟ್ಟೆಯಾ?

ನನ್ನ ಹೊಣೆಗಾರಿಕೆಯ ಬಗ್ಗೆ ಎಲ್ಲರೂ ಪ್ರಶಂಸೆಯ ಮಾತುಗಳನ್ನೇ ಆಡುತ್ತಾರೆ.

ಅಪ್ಪಾ, ನಿನ್ನ ಮಗಳು ನಿನ್ನ ಮನಸ್ಸಿಗೆ, ನಿನ್ನ ಆತ್ಮಕ್ಕೆ ಸಮಾಧಾನ ಸಿಗುವಂತೆ ಮನೆಯನ್ನು ನಡೆಸುತ್ತಿದ್ದಾಳಲ್ಲವೇ?

ಆದರೆ ಒಂದು ಭಯಂಕರ ದೊಡ್ಡ ಆಪತ್ತು ಬಂದೊದಗಿದೆ.

ಈ ಸರ್ಪ! ಈ ದೆವ್ವ!! ಈ ಮೊಸಳೆ!!!

ಈ ಹೆಣ್ಣು ನಮ್ಮ ಮನೆ ಹೊಕ್ಕು ಎಲ್ಲವನ್ನೂ ವಿಧ್ವಂಸಗೊಳಿಸುತ್ತಿದೆ.

ಅಪ್ಪಾ ಅವರಿಗೆ ತಿಳಿಯೇ ಇಲ್ಲ. ಅವರು ಆ ಮೊಸಳೆಯ ಬಾಯಿಯಲ್ಲಿ ಬೀಳುತ್ತಿದ್ದಾರೆ. ಅವರಿಗೆ ಅವ್ವನ ಮರವಾಗುತ್ತಿದೆ.

ಏನು ಮಾಡಲಿ ದೇವರೇ?'

ನಂದಿನಿಯ ಈ ದಿನಚರಿ ಓದಿ ಸದಾಶಿವಯ್ಯ-ನವರಿಗೆ ನಗು ಬಂತು—

ಸದಾಶಿವಯ್ಯನವರು ಇಂದು ತಲೆ ನೋಯು-ತ್ತದೆಂದು ಮನೆಗೆ ಬೇಗನೆ ಬಂದಿದ್ದಾರೆ. ಬಂದರೆ ಮನೆಗೆ ಕೀಲಿ. ನೆರೆಮನೆಯವರ ಮನೆಯಿಂದ ಕೀಲಿಕೈ ಇಸಗೊಂಡು ಕದ ತೆರೆದು ನೋಡಿದರೆ

ಸುತ್ತಲೂ ಏನೋ ಒಂದು ರೀತಿಯ ಮಸಣದ ಛಾಯೆ. ಅಡಿಗೆ ಮನೆಗೆ ಹೋಗಿ ಚಹಾ ಮಾಡಿಕೊಳ್ಳಬೇಕೆಂದರೆ ಅತ್ತ ಕಾಲೇ ಏತ್ತಲಿಲ್ಲ. ಬೂಟು ಬಿಚ್ಚಿ, ಉಸ್ಸೆಂದು ನಿಟ್ಟುಸಿರು ಬಿಟ್ಟು ಕೈಚಲ್ಲಿ ಕೂತು, ನಂತರ ಒಮ್ಮೆಲೆ ಎದ್ದು ನಂದಿನಿಯ ರೂಮಿಗೆ ಹೋಗಿ ಅವಳ ಅಭ್ಯಾಸದ ಟೇಬಲ್ ಮುಂದೆ ಅವಳ ಕುರ್ಚಿಯ ಮೇಲೆ ಕುಳಿತರು. ಆಗಲೇ ಅವಳ ದಿನಚರಿಯ ಪುಸ್ತಕ ತೆರೆದು ನೋಡಿದರು—

ಜಮಾಖರ್ಚನ್ನು ಅತ್ಯಂತ ಚೊಕ್ಕಟವಾಗಿ ಬರೆಯುವ ಈ ಹುಡುಗಿ ತನ್ನ ಭಾವನೆಗಳನ್ನು ವ್ಯಕ್ತಮಾಡುವಾಗ ಎಷ್ಟೊಂದು ಅಸ್ತವ್ಯಸ್ತವಾಗಿ ಬರೆಯುತ್ತಾಳಲ್ಲ. ಇವಳಿಗೆ ಭಾಷೆಯನ್ನು ಚೆನ್ನಾಗಿ ಕಲಿಸಬೇಕು. ಇರಲಿ, ಇವಳಿಗೇನೋ ವಿಪರೀತವಾದ ಸಂಶಯ ಬಂದಂತಿದೆ. ಮೊನ್ನೆ ನಾನು ಗಿರಿಜೆಯ ಕೈ ಹಿಡಿದದ್ದನ್ನು ಇವಳೆಲ್ಲಿಯಾದರೂ ನೋಡಿದ್ದಾಳೆಯೋ? ಅಥವಾ ಗಿರಿಜೆಯೇ ಅವಳಿಗೆ ಏನಾದರೂ ಹೇಳಿದ್ದಾಳೆಯೇ? ಈ ಗಿರಿಜೆಯೆಂದರೆ ಒಂದು ಕೆಟ್ಟ ಒಗಟಾಗಿದ್ದಾಳೆ ಒಗಟು; ಇತ್ತ ನನ್ನನ್ನು ಮೆಚ್ಚಿಸಲು ಯಾವಾಗಲೂ ಪ್ರಯತ್ನಿಸುತ್ತಿರುತ್ತಾಳೆ, ಅತ್ತ ನಾನು ಅವಳ ಹತ್ತಿರ ಸುಳಿದರೆ ದೂರ ಸರಿಯುತ್ತಾಳೆ. ಮೊನ್ನೆ ಕೈ ಹಿಡಿದಾಗ ಅತ್ತಿತ್ತ ಕಣ್ಣು ಗರಗರ ತಿರುಗಿಸಿ ನೋಡಿ ಜಾರಿಕೊಂಡು ಹೋಗಿ ದೂರ ನಿಂತಳು. ಛೇ, ಇವಳೇಕೆ ಪೀಡಾ ನಮ್ಮ ಮನೆ ಹೊಕ್ಕಿದ್ದಾಳೋ ಏನೋ— ಈ ಸರ್ಪ! ಈ ದೆವ್ವ!! ಈ ಮೊಸಳೆ!!! ಹಾಹಾ...ಪಾರ್ವತಮ್ಮನನ್ನು ಡಾಕ್ಟರರ ಕಡೆಗೆ ಕಳಿಸಿ ಬೇಗನೆ ಗುಣಪಡಿಸಿ ತರಬೇಕು...

ಮಹೇಶ ಗುರವ ಅವರ ಮನೀಗೆ ಹೋಗ್ಯಾನ–ಅವ ಹೋಗಿರದಿದ್ದರ ಅವನ ಕೂಡ ಗಿರಿಜಾ ಮನ್ಯಾಗs ಇರ್ತಿದ್ಲು. ಈ ಗೆಳ್ಯಾರ ಸಹಾನುಭೂತಿಯಿಂದ್ರ ಅದೂ ಒಂದು ಭಾರಾನs ಆಗಿಬಿಟ್ಟೈದ: 'ಅಲ್ಲೋ ಸದಾಶಿವ, ನೀ ಬಂದು ನಾಲ್ಕು ದಿನ ಇರು ನಮ್ಮನ್ಯಾಗ...ನಾಲ್ಕೆಂಟು ದಿನ ಒಂದು ಟ್ರಿಪ್ಪು ಹೊಡೆದು ಬರೋಣ ನಡಿ.. ನಂದಿನಿ, ಪಾಪ, ದುಡುದೂ ದುಡುದೂ ಸಣ್ಣಾಗಲಿಕ್ಕೆ ಹತ್ಯಾಳ. ಅವಳಿಗಾದರೂ ನಮ್ಮ ಮನಿಗೆ ನಾಲ್ಕು ದಿನ ಕಳಿಸಿಕೊಡು.' ಅಂದ ಹಾಗೆ, ನಂದಿನೀನ್ನ ಮೂರು–ನಾಲ್ಕು ದಿನ ಗುರವ ಅವರ ಮನೀಗೆ ಕಳಿಸಿದರೆ ಹ್ಯಾಂಗ? ಮಹೇಶನೂ ಅವಳ ಕೂಡ ಹೋಗುವ. ನಂತರ ಮನೆಯಲ್ಲಿ—ಹಾ ಹಾ...

ಛೇ, ಇಂಥಾ ವಿಚಾರ ಮಾಡಬಾರ್ದು. ಮದುವೀ ಮಾಡಿಕೊಳ್ಳೋದಾದರೂ ಇನ್ನೂ ಎರಡು–ಮೂರು ವರ್ಷಾದರೂ ಹೋಗಬೇಕು. ಒಬ್ಬ ಒಳ್ಳೆಯ ಮನೆತನಸ್ಥ ಹುಡುಗಿನ್ನ ಹುಡುಕಬೇಕು—ಈ ಸಾರೆ ಸೌಂದರ್ಯದ ಬನ್ನು ಹತ್ತಬಾರ್ದು—ಪ್ರಕೃತಿ ನೆಟ್ಟಗಿದ್ದಂಥ—ಗಿರಿಜಾಳಂತೆ ದುಂಡಗಿನ ಮೈಯಿದ್ದಂಥ–ಬಿ. ಎ., ಎಮ್. ಎ ಕಲಿತಂಥ ಹುಡುಗೀ ಹುಡುಕಬೇಕು. ಈಗ ಎರಡನೇ ಹೆಂಡತಿ ಅಂದ್ರ ಸ್ವಲ್ಪ ತಿಳುವಳಿಕೆಯಿದ್ದವಳಿರಬೇಕು—ಜಾಣಳಿರಬೇಕು— ನಂದಿನಿಯಂತೆ...ಈ ಸಾರೆ ಸ್ವಲ್ಪ ವಯಸ್ಸಾದವಳನ್ನು ಲಗ್ನವಾಗಬೇಕು—ಲಗ್ನದ ಸಲುವಾಗಿ ಆಯೆಂದು ಬಾಯಿ ಬಿಟ್ಟು ಕುಳಿತಂಥ ಹುಡುಗಿಯಿದ್ದರೆ ಅವಳನ್ನ ಖುಶ್ ಮಾಡೋದು ಅತ್ಯಂತ ಸುಲಭವಾದ ಮಾತು—ಅಂಥವಳು ತನ್ನನ್ನು ಉದ್ಧಾರ ಮಾಡಿದ ಗಂಡನ ಆಳಾಗಿ, ಅವನ ನಾಯಿಯಾಗಿ, ಅವನ ಕತ್ತೆಯಾಗಿ—ಥೂ...

ತಮ್ಮ ವಿಚಾರಸರಣಿಗೂ ನಂದಿನಿಯ ದಿನಚರಿಯ ಶೈಲಿಗೂ ಎಲ್ಲಿಯೋ ಸಾಮ್ಯ ಕಂಡುಬಂದದ್ದರಿಂದ ಆ ವಿಚಾರ ಅಲ್ಲಿಯೇ ಚಿವುಟಿ ಒಗೆದು ಗಕ್ಕನೆ ಎದ್ದು ನಿಂತರು. ತಮ್ಮ ವಿಚಾರಗಳಿಗೆ ತಾವೇ ನಾಚಿದರು. ಹೊರಗಿನ ಕೋಣೆಯಲ್ಲಿ ತೂಗಹಾಕಿದ ಸುನಂದೆಯ ಫೋಟೋದ ಮುಂದೆ, ಸಿನೇಮದಲ್ಲಿ ನಿಲ್ಲುವಂತೆ ನಿಂತು—'ಕ್ಷಮಿಸಬೇಕು, ಸುನಂದಾ, ನನಗೇನೋ ಹುಚ್ಚು ಹಿಡಿಯುತ್ತಿದೆ. ನಿನ್ನ ಸ್ಮೃತಿಯ ಪವಿತ್ರತೆಗೆ ಕಲಂಕ ಹತ್ತಬಾರದು...ಸದ್ಯ ನೀನು ನಮ್ಮ ಮಕ್ಕಳಲ್ಲಿ—



ನನ್ನ ಹೃದಯದಲ್ಲಿ—ಜೀವಿಸುತ್ತಿರುವಿ. ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡುವದೇ ನನ್ನ ಆದ್ಯಕರ್ತವ್ಯ...ಇಷ್ಟೊಂದು ಕಾರ್ಯಕ್ಷಮತೆಯುಳ್ಳ ಜಾಣ ಮಗಳು, ಹೇಳಿದಂತೆ ಕೇಳುವ ನಿರುಪದ್ರವಿ ಮಗ—ಇವರಿದ್ದ ಮೇಲೆ-ಜೊತೆಗೆ ನಿನ್ನ ಜ್ವಲಂತ ಸ್ಮೃತಿಯಿದ್ದ ಮೇಲೆ-ಸಂಸಾರ ಒಂದು ರೀತಿಯಿಂದ (ಅಪೂರ್ಣವಿದ್ದರೂ) ಪೂರ್ಣವೆನ್ನಬೇಕು.' ಎಂದು ಹೇಳುತ್ತಿದ್ದಾಗ ಹೊರಗಿನ ಬೆಲ್ಲು ಬಾರಿಸಿತು. ನಂದಿನಿ ಇಷ್ಟು ಬೇಗ ಹೇಗೆ ಬಂದಿರಬೇಕು ಎಂದು ಆಶ್ಚರ್ಯವಾಯಿತು. ಹೋಗಿ ಬಾಗಿಲು ತೆರೆದು ನೋಡಿದರೆ ಗಿರಿಜೆ. ಹೃದಯ ಝಲ್ಲೆಂದಿತು.

"ನೀವು ಬಹಳ ಲಗೂನೇ ಬಂದುಬಿಟ್ಟಿದ್ದೀರಲ್ಲ ಇಂದು. ನಾನೂ ನೆನಪಿನಿಂದ ಕೀಲೀಕೈ ನೆರೆಮನೆಯವರಲ್ಲಿ ಇಟ್ಟುಹೋಗಿದ್ದೆ ಅಂತ ಛಲೋ ಆತು. ಇಲ್ಲಿದ್ರ ಫಜೀತೀನೇ ಆಗ್ತಿತ್ತು." ಗಿರಿಜೆಯ ಧ್ವನಿಯಲ್ಲಿ ಯಾವದೇ ತರದ ನಡುಕವಿದ್ದಿಲ್ಲ, ಅಸ್ವಸ್ಥತೆಯಿದ್ದಿಲ್ಲ.

"ನೀ ಹ್ಯಾಂಗ ಬಂದಿ ಇಷ್ಟು ಲಗೂ ?"

"ನಂದಿನೀಬಾಯಿಯವರು ಇಂದು ಸಂಜೀಮುಂದs ಬರಲಿಕ್ಕೆ ಹೇಳಿದ್ದರು. ಅವರಿಗೇನೋ ಒಂದು ಪಾರ್ಟಿಗೆ ಹೋಗೋದ ಅದ, ಕಾಲೇಜಿಂದ ಅತ್ಲಾಗs ಅಂತ ಹೇಳಿದ್ದರು...ಆದರ ಯಾಕೋ

ಮನ್ಯಾಗ ವ್ಯಾಳ್ಯಾ ಹೋಗವಲ್ದಾಗಿತ್ತು. ಇಲ್ಲೇ ಏನಾದರೂ ಕಾಳಕಡಿ ಹಸನ ಮಾಡುತ್ತಾ ಕೂತರಾತು ಅಂತ ಬಂದೆ. ಅವ್ವನೂ ಹೋಗು ಅಂದ್ಲು."

"ಪಾರ್ವತಮ್ಮನಿಗೆ ಹ್ಯಾಂಗ ಅದ ಈಗ ? "

"ಈಗೇನೋ ಸ್ವಲ್ಪ ಆರಾಮಾಗ್ಯಾಳ್ರಿ. ಆದರ ಇನ್ನೂ ಬಹಳ ಅಶಕ್ತತಾ ಅದರಿ."

ಅವಳು ಹೊರಗಿನ ಬಾಗಿಲನ್ನು ಮುಚ್ಚಿ ಒಳಗಿನಿಂದ ಬೋಲ್ಟು ಹಾಕಿ ಅಡಿಗೆ ಮನೆಯತ್ತ ನಡೆದಳು.

"ಚಹಾ ಮಾಡಿ ಕೊಡ್ಲೇನ್ರೀ ?" ಹಿಂದಿರುಗಿ ನೋಡಿ ಗಿರಿಜೆ ನಸು ನಕ್ಕಳು.

ಸದಾಶಿವಯ್ಯನವರ ಕಣ್ಣಿಗೆ ಕತ್ತಲೆ ಬಂದಂತಾಯಿತು. ಕಾಲು ನಿಸ್ಸತ್ವವಾಗಿ ನಡುಗಿದವು. ಕಿವಿ ಕಿಡಿಕಿಡಿ ಬೆಂಕಿಯಾದವು. ಎದೆ ಡಬ್‌ಡಬ್ಬೆಂದು ಹೊಡೆದುಕೊಂಡಿತು. ಒಂದು ದೀರ್ಘ ನಿಟ್ಟುಸಿರು ಬಿಟ್ಟು, "ಗಿರಿಜಾ," ಎಂದು ಸದಾಶಿವಯ್ಯನವರು ಅವಳ ಬೆನ್ನ ಹಿಂದೆ ಒಳಗೆ ಹೋದರು.

*

"ಯಾಕ ನಂದಿನೀ, ಇಂದ— ಇಂದ ನೀನs ಅಡಿಗೀ ಮಾಡಲಿಕ್ಕೆ ಹತ್ತೀದಿ?" ಸದಾಶಿವಯ್ಯನವರು ಅತ್ಯಂತ ದಕ್ಷತೆಯಿಂದ ಗಿರಿಜೆಯ ಹೆಸರನ್ನು ಉಚ್ಚರಿಸಲಿಲ್ಲ.

"ಅಪ್ಪಾ, ಇನ್ನಮ್ಯಾಲ ನಾನs ಎಲ್ಲಾ ಮಾಡ್ತೀನಿ."

"ಯಾಕ? ಏನಾತು? ಗಿರಿಜಾನ ಅಡಿಗೀ ಸೇರಲಿಲ್ಲೇನು ನಿನಗ?"

"ಇನ್‌ಮ್ಯಾಲೆ ಗಿರಿಜಾನೂ ಬ್ಯಾಡ, ಅವಳ ಅವ್ವನೂ ಬ್ಯಾಡ. ಭಾಳ ದಿಮಾಕು ಬಂದೈತಿ ಅವರಿಗೆ."

"ಯಾಕ? ಏನಾತು?" ಸದಾಶಿವಯ್ಯನವರ ಧ್ವನಿಯಲ್ಲಿ ಅಧೀರತೆ ಬಂತು.

"ಇಂದ ನನ್ನ ಇನ್ಸಲ್ಟ್ ಮಾಡಿದಳು ಆ ಗಿರಿಜಾ."

"ಇನ್ಸಲ್ಟ್?"

"ಹೂಂ. ನಾನೇನೊ ಸ್ವಲ್ಪ ಅಡಿಗೀ ಮನ್ಯಾಗಿನ ಕಸಾ ತಗೀಲಿಕ್ಕೆ ಹೇಳ್ದೆ— ಬಹಳ ಹೊಲಸು ಕಾಣಿಸುತ್ತಿತ್ತು. ಏನಂತಾಳ ಗೊತ್ತೈತ್ರಿ, ಅಪ್ಪಾ? 'ನಾನಂದರ ನಿಮ್ಮ ಮುಸುರೀ ತಿಕ್ಕೋ ಕೆಲಸದಾಕಿ ಅಂತ ತಿಳಿದೀರೇನು?' ನನಗೂ ಸಿಟ್ಟು ಬಂತು. 'ಹಾಗಾದರ ನಿನಗ ಅಷ್ಟು ಧಿಮಾಕಿದ್ದರ, ನಮ್ಮನೀಗ ಬರೋದs ಬ್ಯಾಡ. ನಿಮ್ಮವ್ವನೂ ಬರೋದು ಬ್ಯಾಡ,' ಅಂತ ಹೇಳಿಬಿಟ್ಟೆ. ಅವಳ ಪಗಾರನೂ ಅವಳ ಮಾರೀಮ್ಯಾಲ ಒಗೆದು, 'ಮನಿಗೆ ಹೋಗಿಬಿಡು. ಇನ್ನ ತಿರುಗಿ ಈ ಹೊಸ್ತಿಲಾ ದಾಟಿ ಬಂದರ ನೋಡು,' ಎಂದು ಅವಳ್ನ ಅಟ್ಟಿಬಿಟ್ಟೆ."

ನಂದಿನಿಯ ಸಿಟ್ಟನ್ನು ಸ್ವಲ್ಪವೂ ತಡವಬಾರದೆಂದು ಸದಾಶಿವಯ್ಯನವರು ಕೂಡಲೇ ನಿರ್ಧರಿಸಿದರು.

"ಗುಡ್, ಅದೆಲ್ಲಾ ಛಲೋ ಆತು. ಆದರ ಮತ್ತೊಬ್ಬರ್ನ ಹ್ಯಾಂಗ ಹುಡುಕಿ ತರಬೇಕೀಗ?... ಮತ್ತ, ಇವಳು ಸೀಕಿದ್ದಾಗ— ಆ ಮ್ಯಾಲೆ—ಪಾರ್ವತಮ್ಮನ ಉಪಯೋಗ ಎಷ್ಟಾಯ್ತನ್ನೋದು ಗೊತ್ತs ಅದ ಅಲ್ಲೇನು? ಮೇಲಾಗಿ, ಈಗ ಬಡತನ ಇದ್ದರೇನು ಮೊದಲು ಛಲೋ ಮನೆತನದವರs ಅವರು." ಸದಾಶಿವಯ್ಯನವರಿಗೆ ತಮ್ಮ ವಕೀಲಿ ತಮಗೇ ಸೇರಿತು.

"ಯಾರೂ ಬ್ಯಾಡ್ರಿ, ಅಪ್ಪಾ. ಇವರೆಲ್ಲಾ ಬಹಾಳ ಬದ್ಮಾಷ್ ಇರ್ತಾರ. ನಾನs ಎಲ್ಲಾ ಮಾಡ್ತೀನಿ."

"ಮತ್ತ ನಿನ್ನ ಕಾಲೇಜು—ನಿನ್ನ ಅಭ್ಯಾಸ?"

"ನಾ ಎಲ್ಲಾ ನೋಡ್ಕೋತೀನ್ರಿ. ಬಿ. ಎ. ದ ಫರ್ಸ್ಟ್ ಇಯರ್ ಅಂದರ ಅಭ್ಯಾಸ ಅಷ್ಟೇನೂ ಇರೋದಿಲ್ಲರಿ...ನೀವು ಯಾತರದೂ ಕಾಳಜೀ ಮಾಡಬ್ಯಾಡ್ರಿ."

ಸದಾಶಿವಯ್ಯನವರಿಗೆ ಒಂದು ಕಡೆ ಸಮಾಧಾನ, ಇನ್ನೊಂದು ಕಡೆ ಅಸಮಾಧಾನ. ನಂದಿನಿಗೆ ವಿಶೇಷ ಏನೂ ಗೊತ್ತಾಗಿಲ್ಲ ಅಂತ ಸಮಾಧಾನ; ಇನ್ನು ಮೇಲೆ ಗಿರಿಜೆ ತನ್ನ ಕೈಯೊಳಗಿಂದ ತಪ್ಪಿ

ಹೋದಳೆಂದು ಅಸಮಾಧಾನ.

ಧಪ್ ಧಪ್ಪೆಂದು ರೊಟ್ಟಿ ಬಡಿಯುವ ನಂದಿನಿ ಒಮ್ಮೆಲೇ ದೊಡ್ಡವಳಾದಂತೆನಿಸಿತು. ಇವಳ ಲಗ್ನ ಆದಷ್ಟು ಬೇಗನೇ ಮಾಡಬೇಕು.

"ನಂದಿನೀ, ನಿನ್ನ ಗಂಡನ ನಶೀಬಾನೇ ನಶೀಬ ನೋಡು. ನೀ ಈಗ ಇಷ್ಟು ಎಫಿಶಿಯಂಟ್ ಹೌಸ್ ವೈಫ್ ಆಗೀಯಲ್ಲ—"

"ಇಲ್ಲರಿ, ಅಪ್ಪಾ. ನಾ ಲಗ್ನಾನs ಮಾಡಿಕೊಳ್ಳೋದಿಲ್ಲ. ಮಹೇಶ ದೊಡ್ಡವನಾಗಿ ಅವ ತನ್ನ ಕಾಲ ಮ್ಯಾಲ ತಾ ನಿಲ್ಲೋತನಕ ನಾ ಮದಿವೀನs ಮಾಡಿಕೊಳ್ಳೋದಿಲ್ಲ."

"ಅವನನ್ನ ನೋಡಿಕೊಳ್ಳಲಿಕ್ಕೆ ನಾ ಇದ್ದೇನಲ್ಲ."

"ನೀವs? ನೀವ್ ಹೆಂಗ ಎಲ್ಲಾ ನೋಡೋದು ಶಕ್ಯ?"

"ಅಲ್ಲ, ನಂದಿನಿ. ಹಂಗs ನಾ ಒಂದ ಮಾತು ಕೇಳಬೇಕಂತ ಮಾಡೀನಿ. ತಪ್ಪು ತಿಳಿಕೋಬಾರ್ದು ಅಥವಾ ನಿಮ್ಮವ್ವನ ಮರ್ತೆ ಅಂತ ತಿಳಕೋಬಾರ್ದು. ಮಹೇಶನ ಸಲುವಾಗಿಯಾದರೂ ನಾನು ಇನ್ನೊಂದು ಲಗ್ನ—"

ನಂದಿನಿ ಅಪ್ಪನತ್ತ ದುರುಗುಟ್ಟಿ ನೋಡಿದಳು. "ನೀವೂ ಅಂಥವರೆಂದು ನನಗ ಗೊತ್ತಿರಲಿಲ್ಲ. ನಿಮ್ಮ ತಲ್ಯಾಗ ಇಷ್ಟ ಲಗೂ ಲಗ್ನದ ವಿಚಾರ ಬಂತಾದರೂ ಹ್ಯಾಂಗ?"

ಸದಾಶಿವಯ್ಯ ಮಗಳ ಪ್ರಶ್ನೆಗೆ ಬೆದರಿದರು, ಒಳಗೊಳಗೇ ಸಿಡಿಮಿಡಿಗೊಂಡರು. "ಹಾಂಗಲ್ಲ, ನಂದಿನಿ, ಸ್ವಲ್ಪ ಶಾಂತರೀತಿಯಿಂದ, ಸಾರಾಸಾರ ವಿಚಾರ ಮಾಡು, ರ್ಯಾಶ್‌ನಲಿ, ವಿಚಾರ ಮಾಡಿ ನೋಡು... ನಿಂದೂ ಲಗ್ನಾ ಆಗಬೇಕು— ಇನ್ನೊಂದೆರಡು ವರ್ಷದಾಗ."

"ಇಲ್ಲಾ, ಇಲ್ಲಾ, ಇಲ್ಲಾ. ನಾ ಲಗ್ನಾನs ಆಗೋದಿಲ್ಲ ಅಂತ ಹೇಳಿಲ್ಲೇನು? ನೀವು ಅವ್ವನ್ನ ಮರೆತರೂ ನಾ ಎಂದೂ ಮರೆಯೋದು ಸಾಧ್ಯವಿಲ್ಲ, ಮಹೇಶನನ್ನು ಮತ್ತೊಬ್ಬ ಹೆಂಗಸಿನ ಕೈಯಲ್ಲಿ— ಮಲತಾಯಿಯ ಕ್ರೂರ ಕೈಯಲ್ಲಿ ನಾ ಕೊಟ್ಟೆ ಅಂದರ, ಅವ್ವ ಏನಂದಾಳು? ಈಗ ಸುಮ್ನ ಮಾತು ಬಂದ್ ಮಾಡ್ರಿ, ನೋಡೋಣ."

ಅವಳ ರಾವು ನೋಡಿ ಸದಾಶಿವಯ್ಯನವರಿಗೆ ಸ್ವಲ್ಪ ಜುಗುಪ್ಸೆ ಹುಟ್ಟಿತು, ಸಿಟ್ಟೂ ಬಂತು. "ನಮ್ಮ ಸಲುವಾಗಿ ಇಷ್ಟು ತ್ಯಾಗ ಮಾಡೋದು ಬೇಡ ನಂದಿನಿ. ದೊಡ್ಡವರು ಸಣ್ಣವರ ಸಲುವಾಗಿ ತ್ಯಾಗ ಮಾಡಬೇಕು. ಮಕ್ಕಳು ದೊಡ್ಡವರ ಸಲುವಾಗಿ ಅಲ್ಲ-"

"ಅಂದರ, ನಿಮಗ ಇನ್ನೊಂದು ಲಗ್ನ ಆಗಬೇಕಂತ ಅನಿಸ್ತದ ಹೌದಲ್ಲೋ? ನನಗ ಗೊತ್ತs ಇತ್ತು... ಮುಖ್ಯ ಅದಕ್ಕs ಆ ಸುಟ್ಟು ಮಾರಿ ಗಿರಿಜಾನ್ನ ಮನೀಗೆ ಕಳಿಸ್ದೆ. ನನಗೇನೂ ಗೊತ್ತಿಲ್ಲ ಅಂತ ತಿಳಕೊಂಡ್ರೇನು—ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡೀತೆಂದು? ನನಗ ಯಾವಾಗೋ ಗೊತ್ತಾಗೇತಿ, ಆ ಶಟವೀ ಗತ್ತೆಲ್ಲ. ಪಾರ್ವತಮ್ಮಂದೂ ಇದರಾಗ ಕೈ ಐತಿ. ಖರೇ ಅಂದರ ಆ ಮುದುಕಿಗೆ ಏನೂ ಆಗಿದ್ದಿಲ್ಲ— ಜ್ವರಾನೂ ಇಲ್ಲ ಪರಾನೂ ಇಲ್ಲ..."

ಸದಾಶಿವಯ್ಯ ಒಂದು ರೀತಿಯ ಅಸ್ವಸ್ಥತೆಯಿಂದ, ಒಂದು ರೀತಿಯ ಭೀತಿಯಿಂದ ನಂದಿನಿಯತ್ತ ನೋಡಿ ಬದಿಯ ಸ್ಟೂಲ್ ಮೇಲೆ ಮೈ ಜೋತು ಬಿಟ್ಟು ಕುಳಿತರು.

"ನಂದಿನೀ, ನೀನಿನ್ನೂ ಸಣ್ಣ ಹುಡುಗಿ. ಹುಡುಗಿಯರಿಗೆ ಕಲ್ಪನಾಶಕ್ತಿ ಬಹಳ."

"ಅಪ್ಪಾ, ನೀವು ಸುಳ್ಳು ಹೇಳುವ ಅಗತ್ಯವೇನೂ ಇಲ್ಲ. ಆದದ್ದಾತೀಗ... ಊಟಕ್ಕ ಬರ್ತಿರೇನು ಹೇಳ್ರಿ." ಅವಳ ಧ್ವನಿಯಲ್ಲಿ ವಿಜಯೋನ್ಮಾದದ ಕಾವಿತ್ತು.

"ಇಷ್ಟ ಲಗೂ?"

"ಲಗೂನ ಊಟ ಆದರ ಎಲ್ಲಾರಿಗೂ ಛಲೋ. ಮಹೇಶನ ಅಭ್ಯಾಸ ನೋಡಲಿಕ್ಕಾಗ್ತದ. ನಂದೂ ಅಭ್ಯಾಸ ಅಗ್ತದ... ಮಹೇಶಾ, ಮಹೇಶಾ! ಬರೇ ಪಾಟೀಲರ ಮನ್ಯಾಗs ಇವನ ವಾಸ್ತವ್ಯ. ಅವಗ ಮನಿ ಅಂದರ ಬರೇ

ಹಾಟೇಲಾಗೇದ..."

ಸುನಂದೆ ಹೀಂಗ ಒಮ್ಮೆಯೂ ಮಾತಾಡಿರಲಿಲ್ಲ. ಅವಳು, ಪಾಪ, ಖರೆ ಅಂದ್ರೂಸು ಸಾಧು, ಆಕಳಿನಂಥ ಪ್ರಾಣಿ. ನಂದಿನಿಯ ಬಿರುಸು ಮಾತು ಕೇಳಿ ಸದಾಶಿವಯ್ಯನವರ ಹೃದಯ ಹಿಂಡಿದಂತಾಯಿತು. ಇವಳ ಕೈಯಿಂದ ತನ್ನನ್ನೂ ಮಹೇಶನನ್ನೂ ಆದಷ್ಟು ಬೇಗನೆ ಮುಕ್ತಗೊಳಿಸಬೇಕು. ಅದಕ್ಕೊಂದೇ ಉಪಾಯ, ಗಿರಿಜೆಯ ಕೂಡ ಬೇಗನೆ ಲಗ್ನ. ಅದಕ್ಕಿಂತ ಮೊದಲು ನಂದಿನಿಗೆ ಗುರವ ಅವರ ಕಡೆಯಿಂದ ಉಪದೇಶ ಹೇಳಿಸಬೇಕು. ಇಲ್ಲದಿದ್ದರೆ ಇವಳ ಹುಚ್ಚು ಅತಿರೇಕಕ್ಕೆ ಹೋಗಬಹುದು.

"ನಂದಿನಿ, ಇಂದ ನನಗ ಊಟ ಬ್ಯಾಡ."

"ಯಾಕರಿ, ಅಪ್ಪಾ ? ಏನಾತು? "

"ಯಾಕೋ, ಊಟಾನ್ನ ಮಾಡಬಾರ್ದು ಅಂತ ಅನಿಸಲಿಕ್ಕೆ ಹತ್ತೇದ."

"ಗಿರಿಜಾನ ಅಡಿಗಿ ಇಂದಿಲ್ಲಲ್ಲ?" ನಂದಿನಿ ನಗಲು ಪ್ರಯತ್ನಿಸಿದಳು.

"ನಂದಿನಿ !"

"ನಾನೂ ಊಟಾ ಮಾಡೋದಿಲ್ಲ—ನೀವು ಊಟಾ ಮಾಡದಿದ್ರ."

"ಹುಂ, ಮಹೇಶನ್ನ ಕರಿ— ನಾವೆಲ್ಲಾ ಕೂಡೇ ಹೊಟ್ಟ್ಯಾಗ ಹೋದಷ್ಟು ತುರುಕೋಣು; ಆತಿಲ್ಲೊ?"

*


ಇಂದು ಸುನಂದೆಯ ತಿಥಿ.

ಮುಂಜಾನೆಯ ಮಂಜು ಬೇಗನೆ ಕರಗಿರಲಿಲ್ಲ. ಹೊರಗಿನ ಮಂಜೆಲ್ಲ ಸಾವಕಾಶವಾಗಿ ತಮ್ಮ ಮನಸ್ಸನ್ನೇ ಆವರಿಸಿದಂತೆ ಸದಾಶಿವಯ್ಯನವರಿಗೆ ಅನಿಸಹತ್ತಿದೆ. ಆ ಮಂಜಿನಲ್ಲಿ ಏನೇನೋ ಕೋಲಾಹಲ: ಒಂದು ರೀತಿಯ ನಾಚಿಕೆ, ಅಪರಾಧ ಭಾವ ನಿಜವಾದ ದುಃಖದೊಡನೆ ಯುದ್ಧ ಮಾಡುತ್ತಿದೆ; ಮಗಳ ಬಗ್ಗೆ ಮೆಚ್ಚಿಗೆ–ಪ್ರೀತಿಯ ಜೊತೆಗೆ ಒಂದು ವಿಚಿತ್ರ ರೀತಿಯ ದ್ವೇಷ ಯುದ್ಧ ಮಾಡುತ್ತಿದೆ; ಗಿರಿಜೆಯ ಮೈಯ ಬಿಸಿಯಲ್ಲಿ ದೊರೆತ ವಿಚಿತ್ರ ಸಮಾಧಾನದ ಸ್ಮೃತಿ ಶಲ್ಯದಂತೆ ಚುಚ್ಚುತ್ತಿದೆ. ಮೊನ್ನೆ ಪಾರ್ವತಮ್ಮ ಬಂದು, 'ನೋಡ್ರಿ, ನನ್ನ ಮಗಳಿಗೆ ಏನಾದರೂ ಆದರೆ ನೀವೇ ಜವಾಬ್ದಾರರು. ಪಾಪ, ಸಣ್ಣ ಹುಡುಗಿ–ನಿಮ್ಮ ಮಗಳಿಗೆ ಸಮಾನ. ತಿಳೀಬಾರ್ದೇನು ಇಷ್ಟು ದೊಡ್ಡವರಾಗಿ?' ಎಂದು ಹಾಕಿದ ಬೆದರಿಕೆಯ ಮೂಲಕ ಒಂದು ರೀತಿಯ ಭೀತಿ ಮನಸ್ಸನ್ನು ತೀಕ್ಷ್ಣವಾಗಿ ಕೊರೆಯುತ್ತಿದೆ...

ಪೂಜೆ–ಊಟ ಆದ ನಂತರ ಸದಾಶಿವಯ್ಯನವರಿಗೆ ಮನೆ ಬಿಟ್ಟು ಎಲ್ಲಿಯಾದರೂ ದೂರ ಒಬ್ಬರೇ ಹೋಗಬೇಕೆಂಬ ಬಲವಾದ ಇಚ್ಛೆಯಾಯಿತು. ಆದರೆ ಹೋಗಬೇಕಾದರೂ ಎಲ್ಲಿಗೆ? ಹಾಸಿಗೆಯಲ್ಲಿ ಸುಮ್ಮನೆ ಬಿದ್ದುಕೊಂಡರು.

"ಅಪ್ಪಾ, ಯಾಕ ಭಾಳ ಚಿಂತೀಯೊಳಗ ಇದ್ದಾಂಗ ಅದೀರಿ?" ನಂದಿನಿ ಒಳಗೆ ಬಂದು ಹಾಸಿಗೆಯ ಮೇಲೆ ಕುಳಿತು ಕೇಳಿದಳು.

ನಂದಿನಿಯ ಕಣ್ಣು–ತುಟಿ—ಗದ್ದ ಎಲ್ಲ



ಸುನಂದೆಯವೇ. ಸುನಂದೆ ಹೊಸದಾಗಿ ಲಗ್ನವಾಗಿ ಬಂದಾಗ ಬೀಗಳ ಹತ್ತಿರ ಬಂದು ಕುಳಿತು—

ಸದಾಶಿವಯ್ಯ ನಂದಿನಿಯ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು— "ನಂದಿನೀ, ನಿನಗ ನಾ ಭಾಳ ತೊಂದರೆ ಕೊಟ್ಟೆ. ನಿನ್ನ ಮನಸ್ಸಿಗೆ ದುಃಖವಾಗುವಂತೆ ನಡೆದುಕೊಂಡೆ...ನಿನಗೂ ಇಂದು ಆಯಾಸ ಆಗೇತಿ. ಬಾ ನೀನೂ ಇಲ್ಲೇ ಮಲಗಿಕೋ ಬಾ."

ನಂದಿನಿ ಅಲ್ಲೇ ಅಪ್ಪನ ಮಗ್ಗುಲಲ್ಲಿ ಮಲಗಿದಳು.

"ನಂದಿನೀ!"

"ಊಂ?"

"ಪಾರ್ವತಮ್ಮ ನಿನಗೆ ಭೆಟ್ಟಿಯಾಗಿದ್ದಳೇನು?"

"ಇಲ್ಲ."

"ಮೊನ್ನೆ ನೀನಿಲ್ಲದಾಗ ಬಂದು ಬೆದರಿಕೆ ಹಾಕಿ ಹೋಗ್ಯಾಳ."

"ಬೆದರಿಕೆ? ಏನೆಂದು?"

"ಹಾಂಗೇನು ಹೆದರೋ ಕಾರಣಿಲ್ಲ. ಗಿರಿಜಾಗೆ ಏನಾದರೂ ಆದರೆ—"

"ಅಂದರೆ?"

ಸದಾಶಿವಯ್ಯನವರಿಗೆ ಏನು ಹೇಳಬೇಕೋ ತಿಳಿಯಲಿಲ್ಲ. "ಪಾಪದ ಫಲ!" ಎಂದು ಸಂಸ್ಕೃತದ ಮುಸುಕನ್ನು ಎಳೆದು ಹೇಳಿದರು.

"ಅವಳಿಗೆ ಏನಾದರೂ ಆದರ— ನಾನ್ಽ ಜವಾಬ್ದಾರನಂತೆ—ಮತ್ತು ಅವಳ್ನ ನಾ ಲಗ್ನಾ ಆಗಬೇಕಂತೆ..."

"ಅಂಥಾ ಮೊಲಸು ಹುಡುಗೀನ್ನಽ? ಅದು ಎಂದೂ ಶಕ್ಯವಿಲ್ಲ—ಎಂದೂ ಶಕ್ಯವಿಲ್ಲ, ಅಪ್ಪಾ."

ಸದಾಶಿವಯ್ಯ ಶೂನ್ಯದೃಷ್ಟಿಯಿಂದ ಮೇಲೆ ಚತ್ತಿನತ್ತ ನೋಡತೊಡಗಿದರು.

"ಅಪ್ಪಾ, ಅವ್ವ ಇದ್ದಿದ್ದರ, ನಿಮ್ಮ ಮ್ಯಾಲ ಇಂಥಾ ಸಂಶಯ ಬಂದಿದ್ದರೆ ಅವಳೇನು ಮಾಡಬಹುದಿತ್ತು?"

"ಅವಳಿದ್ದಿದ್ದರೆ ಇಂಥಾ ಸಂಕಟ ಬರತಿದ್ದೇ ಇಲ್ಲ."

"ಆದರೂ ಒಂದು ವ್ಯಾಳ್ಯಾ ಬಂದಿದ್ದರ— ಏನೋ ತಪ್ಪಿ, ಜೋಲಿ ಹೋಗಿ. ಅಚಾನಕವಾಗಿ—"

"ಯಾರಿಗ್ಗೊತ್ತು ಏನ್ ಮಾಡ್ತಿದ್ದಳ-ನ್ನೋದು."

"ನಾ ಹೇಳ್ಲೇ?"

"ಆಂ?"

"ನಿಮ್ಮ ಕೂಡ ಆಕೀ ಲಗ್ನಾ ಮಾಡಿಬಿಡ್ತಿದ್ಲು...ಅದಽ ಛಲೋ ಆಗ್ತಿತ್ತಲ್ಲರಿ?"

ಸದಾಶಿವಯ್ಯ ನಕ್ಕರು. "ಯಾರಿಗ್ಗೊತ್ತು?"

ನಂದಿನಿ ತನ್ನ ಬಲಕ್ಕೆ ಹೊರಳಿ ತಂದೆಯ ಎದೆಯ ಮೇಲೆ ಕೈಯಿಟ್ಟಳು. "ಅಪ್ಪಾ, ನೀವೇನ ಮಾಡಬೇಕಂತೀರಿ?"

"ನ್ಯಾನಽ? ಹಾಂಗೇನಾದರೂ ಪ್ರಸಂಗ ಬಂದರ—ಡಾಕ್ಟರರ ಕಡೆಗೆ ಕರಕೊಂಡು ಹೋಗಿ ಬಿಡ್ತೇನಿ..." ವ್ಯಾವಹಾರಿಕ ಮನುಷ್ಯನ ಮುಖವಾಡದೊಳಗಿಂದ ಮಾತನಾಡಿದರು.

"ಅಪ್ಪಾ, ಅದು ಕೊಲೆ! ಹೊಣೆಗೇಡಿತನದ ಮಾತು! ಮನುಷ್ಯ ತನ್ನ ಪಾಪದ ಜವಾಬ್ದಾರಿ ತಾನೇ ಹೊರಬೇಕು..."

"ಅದೂ ಖರೇನಽ! ಹೋಗಲಿಬಿಡು ಆ ಮಾತು. ಈಗ ಒಣಾ ಊಹಾ ಯಾಕ? ನಂದಿನಿ, ನಿನಗೇನನಸ್ತದ ಹೇಳು."

"ನಾನಿನ್ನೂ ವಿಚಾರ ಮಾಡ್ಬೇಕು."

ಇಬ್ಬರೂ ಮೇಲೆ ಚತ್ತಿನತ್ತ ನೋಡುತ್ತ ಮಲಗಿದರು.

ಹತ್ತು ನಿಮಿಷಗಳಲ್ಲಿ ಸದಾಶಿವಯ್ಯನವರಿಗೆ ನಿದ್ದೆ ಹತ್ತಿತು. ಗೊರಕೆಯೂ ಸುರುವಾಯಿತು.

ಎಚ್ಚರವಾದಾಗ ಏನೋ ಒಂದು ಕನಸಿನಲ್ಲಿದ್ದಂತೆ—ಕನಸಿನಲ್ಲಿ ಸುನಂದೆ ಅವನ ಜೊತೆಗೆ ನಡೆದಂತೆ—ನಂದಿನಿ ಮುಂದಿನಿಂದ ಕುಣಿಯುತ್ತ ಬಂದಂತೆ—ಗಿರಿಜೆಯ ದೇಹ ಗಿಡಕ್ಕೆ ಜೋತು ಬಿದ್ದಂತೆ—ಸುನಂದೆ ಚೀರಿದಂತೆ...ಸದಾಶಿವಯ್ಯ

ನವರು ಅತ್ತಿತ್ತ ಕಣ್ಣು ಹೊರಳಿಸಿ ನೋಡಿದರು. ಬದಿಗೆ ನಂದಿನಿ ಕಣ್ಣು ತೆರೆದೇ ಮಲಗಿದ್ದಾಳೆ. ಸದಾಶಿವಯ್ಯನವರಿಗೆ ಒಮ್ಮೆಲೆ ಅತ್ಯಂತ ಸೂಕ್ಷ್ಮವಾದ, ಕೋಮಲವಾದ ಪ್ರೀತಿ ಉಕ್ಕಿ ಬಂದು, ಅವಳನ್ನು ಸಮೀಪ ಎಳೆದು ಎದೆಗವಚಿಕೊಂಡರು.

"ನಂದಿನೀ, ಇನ್ನೂ ವಿಚಾರ ನಡಿಸಿಯೇನು-ಹುಚ್ಚೀ ?"

"ಹೂಂ."

"ಸುಮ್ನು ಮಲಕೋ ಸ್ವಲ್ಪ."

"ಅಪ್ಪಾ, ಒಂದು ಮಾತು ಖಂಡಿತ."

"ಏನು ?"

"ನೀವು ಗಿರಿಜೆಯನ್ನ ಎಂದೂ ಲಗ್ನವಾಗಬಾರ್ದು. ನೀವು ಅವಳನ್ನ ಲಗ್ನವಾದರ— ಅವಳನ್ನು ನಾನು ಕೊಂದೇಬಿಡುವೆ."

"ಆಂ ?" ಸದಾಶಿವಯ್ಯನವರ ಹೃದಯ ಭೀತಿಯಿಂದ ನಡುಗಿತು.

"ಹುಂ...ಮತ್ತ ಹಾಂಗೇನಾದರೂ ಅಬದ್ಧ ಆಗಿದ್ದರ—ಅದರ ವಿಚಾರ ನನಗ ಬಿಟ್ಟುಬಿಡ್ರಿ... ನಾನೇನಾದರೂ ಮಾಡಿ ಅವನ್ನ ಬಗೀಹರಿಸ್ತೀನಿ...ನಾನs ಅವಳ್ನ ಡಾಕ್ಟರರ ಕಡೆಗೆ ಕರಕೊಂಡು ಹೋಗ್ತೀನಿ."

"ನೀನು ?"

"ಹುಂ." ನಂದಿನಿ ಎದ್ದು ಕುಳಿತು ಬದಿಯ ಕಿಡಕಿಯ ಹೊರಗೆ ಶೂನ್ಯದೃಷ್ಟಿಯಿಂದ ನೋಡತೊಡಗಿದಳು. ಇದ್ದಕ್ಕಿದ್ದಂತೆ ಅವಳ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿದವು.

"ಅಪ್ಪಾ ಏನ್ರಿ, ನಿಮಗೆ ನಿಜವಾಗಿಯೂ ಅವಳೊಡನೆ—ನಿಮಗೆ ಅವಳ ಮೇಲೆ ಪ್ರೀತಿಯಿದ್ದರೆ—ನಾನೇಕೆ ಅಡ್ಡ ಬರಬೇಕು. ಹಾಗಿದ್ದರೆ ಹೇಳಿಬಿಡ್ರಿ—ನಾನೂ ಪಿಟ್ಟೆನ್ನದೆ ಇಂದೇ ಮಹೇಶನನ್ನ ಕರಕೊಂಡು ಅಜ್ಜನ ಮನೆಗೆ ಹೋಗಿಬಿಡುವೆ. ಹೇಳಿರಿ, ನಿಮಗೆ ಅವಳ ಬಗ್ಗೆ ನಿಜವಾಗಿಯೂ ಏನಾದರೂ ಅನಿಸುವದೇ ?"

"ಇಲ್ಲ," ಸದಾಶಿವಯ್ಯನವರಿಗೆ ಇಲ್ಲೆನ್ನದೆ ಗತ್ಯಂತರವಿರಲಿಲ್ಲ.

ಇಲ್ಲವೆನ್ನುವದೇ ತಡ, ಸದಾಶಿವಯ್ಯನವರಿಗೆ ತಮ್ಮ ಮೈಯಲ್ಲಿಯ ಸತ್ವವೆಲ್ಲ ಸೋರಿ ಹೋದಂತಾಗಿ ನಿರ್ವೀರ್ಯರಾಗಿ ಕೈಕಾಲು ಚೆಲ್ಲಿ ಬಿದ್ದುಕೊಂಡರು. ತಾವು ಹಿಂದೆ ತಮ್ಮ ತಾರುಣ್ಯವನ್ನು ಕಾಪಾಡಿಕೊಳ್ಳಲು ಆಸನಗಳನ್ನು ಮಾಡುತ್ತಿದ್ದಾಗ ಶವಾಸನ ಹಾಕುತ್ತಿದ್ದುದರ ನೆನಪಾಯಿತು. ಮೇಲೆ ಚತ್ತಿನತ್ತ ನೋಡುತ್ತ ಸಾವಕಾಶವಾಗಿ ಕಣ್ಣು ಮುಚ್ಚಿದರು.

ಕಣ್ಣು ತೆರೆದಾಗ ಬದಿಯ ಗೋಡೆಯ ಮೇಲೆ ಸುನಂದೆ ಕಟ್ಟಿಗೆಯ ಚೌಕಟ್ಟಿನೊಳಗಿಂದ ಹಣಿಕಿ ಹಾಕಿ ನಗುತ್ತಿದ್ದಳು! ☆



ಅಮೇರಿಕದ ಬಹುಚರ್ಚಿತ ಕಾದಂಬರಿಕಾರ ನಾರ್ಮನ್ ಮೇಲರ್ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ "ನಿಕ್ಸನ್ ಮತ್ತು ಸ್ತ್ರೀ-ವಿಮೋಚನೆ"ಯ ಬಗ್ಗೆ ಬೀಭತ್ಸ ಮತ್ತು ಅಪ್ರಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ. ಕೆಲವರು ಅವನ ವಿರುದ್ಧ ಕೂಗಿದರು. ಭಾಷಣ ಮುಗಿದ ಮೇಲೆ ಆತ, "ಈಗ ಸ್ತ್ರೀ-ವಿಮೋಚನಾವಾದಿಗಳಾದ ಸ್ತ್ರೀಯರೆಲ್ಲ ಒಟ್ಟಾಗಿ ಶ್—ಎಂದು ಶಬ್ದ ಮಾಡಿರಿ," ಎಂದ. ಸಾಕಷ್ಟು ತರುಣಿಯರು ಶ್—ಎಂದು ಸಾಕಷ್ಟು ಹೊತ್ತು ಶಬ್ದ ಮಾಡಿದ ಮೇಲೆ ಆತ ಹೇಳಿದ: "ಇವರು ನೋಡಿ, ಅತ್ಯಂತ ವಿಧೇಯ ಹಾದರಗಿತ್ತಿಯರು!" —ಟೈಮ್

ಕೆ. ಪಿ. ಪೂರ್ಣಚಂದ್ರ ತೇಜಸ್ವಿ

ಕುಬಿ ಮತ್ತು ಇಯಾಲ

"ನಾನು ಎಲ್ಲ ಹೇಳಿದ್ದೇನೆ. ನೀನು ಏನೂ ಹೇಳೋದು ಬೇಡ ಸುಮ್ಮನೆ ಔಷಧಿ ಸೀಸೆಯನ್ನು ಒಂದು ಸಾರಿ ಅವರ ಕೈಗೆ ಕೊಟ್ಟು ಏನು ಹೇಳುತ್ತಾರೋ ಕೇಳಿಕೊಂಡು ಬಾ," ಎಂದು ಬಾಯಮ್ಮ ಅವಳ ಮಗಳು ಇಯಾಲಳಿಗೆ ಸಮಜಾಯಿಷಿ ಕೊಟ್ಟು ಸಂತೈಸುತ್ತಿದ್ದಳು. "ಔಷಧಿಯನ್ನು ಅಪ್ಪ ಹಾಸನದಿಂದ ಡಾಕ್ಟರು ಕೊಟ್ಟ ಚೀಟಿಯ ಮೇರೆಗೆ ತಂದಿದ್ದಾನೆ. ಅಂಥದರಲ್ಲಿ ಮತ್ತೊಮ್ಮೆ ಏಕೆ ಡಾಕ್ಟರಿಗೆ ತೋರಿಸಬೇಕು?" ಎಂಬುದೇ ಇಯಾಲಳ ವಾದವಾಗಿತ್ತು. ಅವಳೊಡನೆ ಮಾತಾಡಿ ಆಡಿ ಸಾಕಾಗಿ ಬಾಯಮ್ಮ ಕೊನೆಗೆ, "ಹುಚ್ಚು ಮುಂಡೆ; ಕುಬಿ ಡಾಕ್ಟರು ಸಾಕ್ಷಾತ್ ದೇವ

ಕೈಯಿಂದ ಕೊಟ್ಟರೆ ನಿನ್ನ ಎಲ್ಲಾ ರೋಗಾನೂ ಗುಣಾಗ್ತದೆ. ಯಾಕೆ ಹೀಗಾಡ್ತಿ? ಹೋಗು ಹೋಗು," ಎಂದು ಹೇಳಿದಳು.

ಇಯಾಲ ಭೈರಾಪುರಕ್ಕೆ ಹೊರಟಳು. ಒಂದು ಕೈಯಲ್ಲಿ ಹಾಲು ತುಂಬಿದ ಕ್ಯಾನು, ಇನ್ನೊಂದು ಕೈಯ್ಯಲ್ಲಿ ಡಾಕ್ಟರಿಗೆ ತೋರಿಸಬೇಕಿದ್ದ ಔಷಧಿ ಸೀಸೆ.

ಇಯಾಲಳ ತಂದೆ ಓಬ್ರಿನ್ ವಿಠಲರಾಯರ ತೋಟದಲ್ಲಿ ರೈಟರಾಗಿದ್ದ. ಜೊತೆಗೆ ಅವನು ಮೇಲೆ ಖರ್ಚಿಗೆ ಕಾಸು ಮಾಡಿಕೊಳ್ಳಲು ಕೆಲವು ದನ ಎಮ್ಮೆಗಳನ್ನು ಸಾಕಿದ್ದರಿಂದ ಅವರ ಹಾಲನ್ನು ಇಯಾಲ ದಿನವೂ ಒಯ್ದು ಸಮೀಪದ ಭೈರಾಪುರದ ಸುಬ್ಬಾಭಟ್ಟರ ಹೋಟೆಲಿಗೆ ಕೊಟ್ಟು ಬರುತ್ತಿದ್ದಳು. ಇವತ್ತು ಇದರೊಡನೆಯೇ ಭೈರಾಪುರದ ಆಸ್ಪತ್ರೆಯ ವೈದ್ಯ ಡಾಕ್ಟರ್ ಕುಬೇರ ಅಥವಾ ಕುಬಿ ಡಾಕ್ಟರನ್ನು ನೋಡಿ ಔಷಧಿಯನ್ನು ತೋರಿಸಿ ಅವರಿಂದ ಸಲಹೆ ಪಡೆದು ಬರಬೇಕಿತ್ತು ಅವಳು.

ಆ ಔಷಧಿಯ ಕಾರಣ ಮಾತ್ರ ಇಯಾಲ ವಿಪರೀತ ನಾಚಿಗೆಪಡುವಂಥ ಕಾರಣವೇ ಆಗಿತ್ತು. ಮೊನ್ನೆ ತಾನೇ ಅವಳು ದೊಡ್ಡವಳಾಗಿದ್ದುದರಿಂದ ವಿಪರೀತ ಹೊಟ್ಟೆ ನೋವು ಸೊಂಟದ ನೋವಿನಲ್ಲಿ ಆಕೆ ಬಾಧೆಪಡುತ್ತಿದ್ದಳು. ಅವಳೇ ಹೋಗಿ ಡಾಕ್ಟರಿಗೆ ಎಲ್ಲ ವಿವರಿಸಿ ಔಷಧಿ ತರಬೇಕಿದ್ದರೆ ಅವಳು ಖಂಡಿತವಾಗಿಯೂ ಹೋಗುತ್ತಿರಲಿಲ್ಲ. ಅದ್ದರಿಂದಲೇ ಅವಳ ತಾಯಿ ನಾನು ಎಲ್ಲ ಹೇಳಿದ್ದೇನೆ. ನೀನು ಹೇಳುವ ಅಗತ್ಯ ಏನೂ ಇಲ್ಲ ಎಂದು ಅವಳಿಗೆ ಧೈರ್ಯ ಕೊಡುತ್ತಿದ್ದಳು. ಆದರೂ ಇಯಾಲಳಿಗೆ ಭೈರಾಪುರದ ದಾರಿಯುದ್ದಕ್ಕೂ ಕಾಡಿದ ಪ್ರಶ್ನೆ ಎಂದರೆ ಎಲ್ಲಾದರೂ ಡಾಕ್ಟರು ಎಲ್ಲವನ್ನೂ ಮರೆತುಕೊಂಡು ನಿನಗೇನಾಗಿದೆ ಎಂದು ಕೇಳಿದರೆ ಏನು ಮಾಡುವುದಪ್ಪಾ? ಎಂಬುದು.

ಭೈರಾಪುರದ ಹೋಟೆಲು ಸುಬ್ಬಾಭಟ್ಟರು, "ಏನೇ ಯಾಲ (ಇಯಾಲ ಅನ್ನುವ ಬದಲು) ಔಷಧಿ?" ಎಂದು ಕೇಳಿದಾಗ ಇಯಾಲ, "ಅಮ್ಮನಿಗೆ ಮೈ ಸರಿ ಇಲ್ಲಂತ," ಎಂದು ಸುಳ್ಳು ಹೇಳಿದಳು. ಆದರೂ ಅವಳು ನಾಚಿದ ಬಗೆಯನ್ನು ನೋಡಿ ಭಟ್ಟರು ಚಕಿತರಾಗಿದ್ದರು. ಇಯಾಲ ಪಾತ್ರೆ ಖಾಲಿ ಮಾಡಿ ಆಸ್ಪತ್ರೆಗೆ ಹೋದಳು.

ಆಸ್ಪತ್ರೆಯೊಳಗಿಂದ ಅದಕ್ಕೇ ವಿಶಿಷ್ಟವಾದ ಡೆಟ್ಟಾಲ್, ಫಿನಾಲ್, ಸ್ಪಿರಿಟುಗಳ ಮಿಶ್ರ ವಾಸನೆಯೊಂದು ಹೊಮ್ಮುತ್ತಿತ್ತು. ಬೆಂಚಿನ ಮೇಲೆ ಅನೇಕರು ಕುಳಿತಿದ್ದರು. ಕೆಲವರು ಕೆಮ್ಮುತ್ತಿದ್ದರು. ಕೆಲವರು ತಮ್ಮ ರೋಗದ ಕಾರಣವನ್ನೂ ಅದರ ಗುಣ ಲಕ್ಷಣವನ್ನೂ ಇತರರಿಗೆ ವಿವರಿಸುತ್ತಿದ್ದರು. ಜ್ವರ ಪೀಡಿತರಾದ ಮುದುಕರೊಬ್ಬರು ಅಸ್ ಉಸ್ ಎಂದು ಉಸಿರು ಬಿಡುತ್ತಾ ಆಗಾಗ್ಗೆ 'ಸಂಕ್ಟಾ' 'ಸಂಕ್ಟಾ' ಎಂದು ಗೊಣಗುತ್ತಿದ್ದರು. ಅವರ ಮೊಮ್ಮಗನೊಬ್ಬ ಅವರ ಕೋಲನ್ನು ತೆಗೆದುಕೊಂಡು ಕೈ ಮೇಲೆ ನೆಟ್ಟಗೆ ನಿಲ್ಲಿಸುವ ಸರ್ಕಸ್ ಮಾಡುತ್ತಿದ್ದ. ಪ್ರತಿ ಸಾರಿ ಸೋತು ಕೋಲು ಕೆಳಕ್ಕೆ ಬಿದ್ದಾಗಲೂ 'ಈಗ ನೋಡಿ ತಾತಾ' ಎಂದು ತನ್ನ ಸರ್ಕಸ್ಸನ್ನು ಪುನರಾರಂಭಿಸುತ್ತಿದ್ದ. ಅಲ್ಲಿಯೇ ಎದುರಿಗೆ ಒಂದು ಕೋಣೆಯಲ್ಲಿ ಡಾಕ್ಟರು ತಮ್ಮ ರೋಗ ಪರೀಕ್ಷೆಯನ್ನು ನಡೆಸಿದ್ದರು. ಏನಾದರೂ ಬಟ್ಟೆ ಬಿಚ್ಚಿಸಿ ಪರೀಕ್ಷೆ ಮಾಡಬೇಕೆಂದಾದರೆ ಮಾತ್ರ ಒಳಗೆಲ್ಲೋ ಕರೆದುಕೊಂಡು ಹೋಗುತ್ತಿದ್ದರು.

ಇಯಾಲ ಸುಮ್ಮನೆ ಬೆಂಚಿನ ಮೂಲೆಯೊಂದರಲ್ಲಿ ಹೋಗಿ ಕುಳಿತುಕೊಂಡಳು. ಯಾರೋ ಒಬ್ಬನನ್ನು ಡಾಕ್ಟರು ಪರೀಕ್ಷಿಸುತ್ತಿದ್ದರು. 'ಆ' ಎನ್ನೋ ಎಂದಾಗ ಅವನು ನೀರಾನೆಯಂತೆ ಆ ಎಂದು ಬಾಯಿ ಕಳೆದ. 'ಇ' ಎನ್ನು ಎಂದಾಗ ಹಲ್ಲು ಚಿಲಿದು ದಂತಪಂಕ್ತಿಗಳನ್ನು ತೋರಿಸಿದ. ಸ್ಟೆತಾಸ್ಕೋಪು ಎದೆ ಮೇಲಿಟ್ಟು ಉಸಿರಾಡು ಗಟ್ಟಿಯಾಗಿ ಎಂದಾಗ ಹೆಬ್ಬಾವಿನಂತೆ ಬುಸ್ ಬುಸ್ ಎಂದು ಗಟ್ಟಿಯಾಗಿ ಶ್ವಾಸಕೋಶದ ತಿದಿಯೊತ್ತಿದ. ಅವನ ಬಾಯಿಯ ದುರ್ಗಂಧಕ್ಕೆ ಕೊಂಚ ದೂರವೇ ತಲೆ ಇಟ್ಟುಕೊಂಡು ಅವನ ಬಾಯಿಯ ಪಾತಾಳಕ್ಕೆ ಇಣುಕಿದರು, ಅನಂತರ ಅವನ ಬೆನ್ನಿನ ಮೇಲೆ ಕೈ ಇಟ್ಟುಕೊಂಡು ಡೋಲಿನಂತೆ ಡುಬು ಡುಬು ಕುಟ್ಟಿದರು ಡಾಕ್ಟರು.

ಕುಬಿ ಡಾಕ್ಟರಿಗೆ ಇದೊಂದು ದೈನಂದಿನ ವೃತ್ತ

ವಾಗಿಹೋಗಿತ್ತು. ಆ ಡಾಕ್ಟರರ ಸ್ಟೆತಾಸ್ಕೊಪ್ ಹಾರ, ಕನ್ನಡಕದೊಳಗಿನ ಪ್ರಶಾಂತ ಕಣ್ಣುಗಳು, ಅವರು ಗಂಭೀರವಾಗಿ ಇತರರಿಗೆ ಕೊಡುತ್ತಿದ್ದ ಸಂದೇಶಗಳು ಇವುಗಳು ಇಯಾಲಳ ಕಣ್ಣುಗಳಿಗೆ ಅಸಾಮಾನ್ಯ ತೇಜಸ್ಸಿನಿಂದ ರಾರಾಜಿಸಿದುವು. ಹೆಚ್ಚೇನು, ಕುಬಿ ಡಾಕ್ಟರು ಅವಳ ಅಮ್ಮನ ಹೇಳಿಕೆಯಂತೆ ದೇವರಂಥ ಮನುಷ್ಯನಾಗಿ ಕಾಣದೆ ಸಾಕ್ಷಾತ್ ಏಸು ಕ್ರಿಸ್ತನಂತೆಯೇ ಕಂಡ!

ಈ ನಡುವೆ ಡಾಕ್ಟರು ಮುದುಕರನ್ನು ಪರೀಕ್ಷೆ ಮಾಡಲು ಒಳಗೆ ಬನ್ನಿರಿ ಎಂದು ಕರೆದರು. ಆ ಮುದುಕರು ಎದ್ದು ನಿಂತು, "ಲೋ ಎಲ್ಲಿ ಹೋದನೋ ಅವನು ಮುಂಡೇ ಗಂಡ. ತಾರೊ ಇಲ್ಲಿ ನನ್ನ ಕೋಲನ್ನು," ಎಂದು ಮೊಮ್ಮಗನನ್ನು ಹುಡುಕಿ ಕೂಗಿದರು. ಹುಡುಗ ಅಂಗೈ ಮೇಲೆ ಕೋಲನ್ನು ಬ್ಯಾಲೆನ್ಸ್ ಮಾಡುವ ಭರದಲ್ಲಿ ಹಿಂದೆ ಮುಂದೆ ಕೈ ತೂಗಿಸುತ್ತಾ ಆಸ್ಪತ್ರೆಯ ಗೇಟಾಚೆಗೆ ಸಾಗಿದ್ದ. ಅದನ್ನು ನೋಡುವ ಪ್ರೇಕ್ಷಕಗಣ ಇದೆಯೋ ಇಲ್ಲವೋ ಎಂಬುದನ್ನು ಗಮನಿಸದೆ ತನ್ನ ಅಂಗೈ ಮೇಲಿನ ಕೋಲನ್ನೂ ಅದು ಓಲುವ ದಿಕ್ಕನ್ನೂ ಏಕಾಗ್ರತೆಯಿಂದ ಗಮನಿಸುತ್ತಿದ್ದ. ಮುದುಕರು ಮೊಮ್ಮಗನನ್ನು ಚೆನ್ನಾಗಿ ಬಯ್ದು ನಿನ್ನನ್ನು ಆಸ್ಪತ್ರೆಗೆ ಕರೆತರಲೇಬಾರದೆಂದು ಶಪಥ ಹಾಕಿ ಕೋಲು ಕಿತ್ತುಕೊಂಡು ಪರೀಕ್ಷೆ ರೂಮಿನತ್ತ ಕಾಲು ಹಾಕಿದರು. ಡಾಕ್ಟರು ಮೌನವಾಗಿ ನಸುನಗುತ್ತ ತಾಳ್ಮೆಯಿಂದ ಕಾಯುತ್ತಿದ್ದರು.

ಒಬ್ಬರಾದ ಮೇಲೊಬ್ಬರಂತೆ ಡಾಕ್ಟರು ನೋಡಿ ನೋಡಿ ಕಳಿಸತೊಡಗಿದರು. ಸಣ್ಣಪುಟ್ಟ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು, ಗಾಯ ಮಾಡಿಕೊಂಡವರು, ಕೆಮ್ಮುವವರು, ಸಿಂಬಳ ಸುರಿಸುವವರು, ಹೀಗೇ ಸುಮಾರು ಎರಡು ಗಂಟೆಗಳವರೆಗೆ ಅವ್ಯಾಹತವಾಗಿ ಕುಬಿ ಡಾಕ್ಟರ್ ಪರೀಕ್ಷೆ ನಡೆಯಿತು. ಡಾಕ್ಟರ ಮುಖದಲ್ಲಿ ಆಯಾಸವಾಗಲೀ ಅಸಹನೆಯಾಗಲೀ ಕಾಣಲಿಲ್ಲ. ಅಲ್ಲಿಯೇ ಎಡಗಡೆ ರೂಮಿನಲ್ಲಿ ರಾಮರಾಯ ಮಾತ್ರ ಡಾಕ್ಟರು ತಿಳಿಸಿದ ಔಷಧಿಯನ್ನು ಮಾಡಿ ಕೊಡುತ್ತಾ ರೋಗಿಗಳೊಡನೆ ಏನನ್ನೋ ಹರಟುತ್ತಿದ್ದ. ಔಷಧೀ ಸೀಸೆ ತರದೆ ಬಂದವರಿಗೆ ಬಯ್ಯುತ್ತಾ ಇಲ್ಲೇ ಬಂದು ಒಂದೊಂದು ಹೊತ್ತು ಕುಡಿದು ಹೋಗಿ ಎಂದು ಹೇಳಿ ಬಣ್ಣಬಣ್ಣದ ನೀರನ್ನು ಅವರ ಬಾವಿಯಂಥ ಬಾಯಿಗೆ ಹುಯ್ದು ಮಾತ್ರೆಗಳನ್ನು ಬುಟ್ಟಿಗೆ ಕಸ ಎಸೆದಂತೆ ಎಸೆಯುತ್ತಿದ್ದ. ಔಷಧಿ ಕುಡಿಯುವಾಗ ಮುಖ ಹಿಂಜಿಕೊಂಡ ಒಬ್ಬನಿಗೆ, "ಏನು ಭಟ್ಟಿ ಶರಾಬು ಅಂತ ತಿಳಿದುಕೊಂಡೆಯೇನೋ ಹೋಗು ಹೋಗು," ಎಂದು ಹಿಯ್ಯಾಳಿಸಿದ.

ಇಯಾಲ ಸುಮ್ಮನೆ ನಿಂತಿದ್ದಳು. ಅವಳ ಅನಂತರ ಬಂದವರದೂ ಎಲ್ಲ ಸರದಿ ಮುಗಿಯಿತು. ಆದರೂ ಇಯಾಲ ಸುಮ್ಮನೆ ನಿಂತಿದ್ದಳು. ಅವಳಿಗೆ ಸಾಜಿಗೆಯ ದೆಸೆಯಿಂದ ಜನ ಒಬ್ಬೊಬ್ಬರೇ ಖಾಲಿಯಾಗುತ್ತ ಬಂದಂತೆ ಎದೆ ಡವಡವ ಹೊಡೆದುಕೊಳ್ಳತೊಡಗಿತು. ಕಾಂಪೌಂಡರ್ ರಾಮರಾಯನೂ ತೊಲಗಿದ್ದರೆ ಆಕೆಗೆ ಒಳ್ಳೆಯದಿತ್ತು. ಎಲ್ಲರೂ ಮುಗಿದ ನಂತರ ಡಾಕ್ಟರು ಇಣುಕಿ ನೋಡಿದರು. ರೂಮು ಖಾಲಿಯಾಗಿತ್ತು. ಮೂಲೆಯಲ್ಲಿ ಇಯಾಲ ಒಬ್ಬಳೇ ಕುಳಿತಿದ್ದಳು. ಕಿಟಕಿಯಿಂದ ಇಳಿಯುತ್ತಿದ್ದ ಬಿಸಿಲಿನಲ್ಲಿ ಅವಳ ಮುಂಗುರುಳು ಥಳಥಳ ಹೊಳೆಯುತ್ತಿದ್ದಿತು. ಕುಬಿ ಡಾಕ್ಟರು ಬಾ ಎನ್ನುವಂತೆ ನೋಡಿದರು. ರಾಮರಾಯ ಔಷಧಿ ಕೊಡುವ ಕಿಟಕಿ ಕಂಡಿಯೊಳಗಿನಿಂದ ಇಣಿಕಿ "ಯಾರಮ್ಮ ಅದೂ? ಓ ಬಾಯಮ್ಮನ ಮಗಳು ಯಾಲೀಸೋ! ಏನಾಗಿದೇ ಹೇಳಿ ಔಷಧಿ ತಗೋಬಾರದೇ?" ಎಂದು ಅವಸರ, ಅಸಹನೆಯಿಂದ ಉದ್ಗರಿಸಿದ. ಇಯಾಲಳಿಗೆ ಜಂಘಾಬಲವೇ ಇಳಿದುಹೋಯ್ತು. ಅಮ್ಮ ಎಲ್ಲಾ ಹೇಳಿದ್ದೇನೆ ಎಂದು ಹೇಳಿ ಮೋಸ ಮಾಡಿದಳು ಎಂದು ಚಿಂತೆ ಆರಂಭವಾಯ್ತು.

ಇಯಾಲ ಅಂಜುತ್ತ ಡಾಕ್ಟರ್ ರೂಮಿಗೆ ಹೋದಳು.

"ನಿನ್ನದೇನಮ್ಮ ಔಷಧಿ ?" ಎಂದು ಕುಬಿ ಕೇಳಿದ.

"ಹೌದು."

"ನಿನ್ನೆ ಬರೆದುಕೊಟ್ಟಿದ್ದೆ!"

"ಅಪ್ಪ ತಂದಿದ್ದಾರೆ."

"ಇಲ್ಲಿಯೇ ಸಿಕ್ಕಿತಂತೋ?"

"ಇಲ್ಲ, ಹಾಸನದಿಂದ ತಂದರು."

"ಆ ಔಷಧಿಯನ್ನು ದಿನಕ್ಕೆ ಮೂರು ಹೊತ್ತು ಒಂದೊಂದು ಚಮಚೆ ತೆಗೆದುಕೋ. ಎಲ್ಲಾ ಸರಿ ಹೋಗುತ್ತದೆ."

"ನೀವು ಒಂದು ಸಾರಿ ನೋಡಿ ಕೊಡಬೇಕಂತೆ."

"ನೋಡಿದೆ, ಅದೇ ಔಷಧಿ ಹೋಗು."

"ನೋಡಿ ನಿಮ್ಮ ಕಯ್ಯಿಂದ ಕೊಡಬೇಕಂತೆ."

ಕುಬಿ ಕೊಂಚ ಸಪ್ಪಗಾದ. ಈ ರೀತಿ ಆಗಾಗ್ಗೆ ಅವನಿಗೆ ಆಗುತ್ತಲೇ ಇತ್ತು. ಈ ಕುರುಡು ನಂಬಿಕೆ ವಿರುದ್ಧ ಅವನು ಒಂದೇ ಸಮ ಸೆಣೆಸುತ್ತಲೇ ಇದ್ದ. ಇದಕ್ಕೆ ಕಂಪೌಂಡರ್ ರಾಮರಾಯನ ಪ್ರಚಾರವೂ ಒಂದು ರೀತಿಯಿಂದ ಕಾರಣವಾಗಿತ್ತು. ಕುಬೇರನ ಜ್ಞಾನ, ಪ್ರತಿಭೆ, ಏಕಾಗ್ರತೆ, ಹಸ್ತಚಳಕ ಒಂದನ್ನೂ ಗಮನಿಸದೆ ಕುಬಿಯ ಹಸ್ತಗುಣವನ್ನೂ ಅವನ ಅಶರೀರ ಶಕ್ತಿಗಳನ್ನೂ ಹೊಗಳುತ್ತಿದ್ದ. ಕುಬೇರ ಮಹಾವೈದ್ಯನೆಂದು ಹೆಸರುವಾಸಿಯಾಗುವುದರ ಬದಲು ಭಾರಿ ವರ್ಚಸ್ವಿಯಾದ ಪಂಜುರ್ಲಿಯೋ ಜಟ್ಟಿ



ಗನೋ ಆಗುತ್ತಿದ್ದ! ಇಯಾಲ ಹೀಗೆನ್ನಲು ಸಪ್ಪಗಾದ ಕುಬಿ ಇಯಾಲಳನ್ನು ಹತ್ತಿರ ಕರೆದು, "ಇಯಾಲ, ನಾನು ಮುಟ್ಟಲಿ ಮುಟ್ಟದಿರಲಿ, ಔಷಧಿ ಒಳ್ಳೇದಿದ್ದರೆ ಕೆಲಸ ಮಾಡುತ್ತದಮ್ಮಾ. ಈ ಔಷಧಿ ಈಗಾಗಲೇ ಎಷ್ಟು ಜನ ಮುಟ್ಟಿದ್ದಾರೆ. ಯಾರು ಮುಟ್ಟಿದರೂ ಒಂದೇ,"— ಎಂದು ಬಹಳ ತಾಳ್ಮೆಯಿಂದ ಆತ್ಮೀಯವಾಗಿ ತಿಳಿಸಿದ. ಹರೆಯದ ಹುಡಿಗೆಯರ ಬಳಿ ಕುಬಿ ಬಹಳ ಹುಷಾರಾಗಿ ವ್ಯವಹರಿಸುತ್ತಿದ್ದ. ಏಕೆಂದರೆ ಡಾಕ್ಟರ ಬಳಿ ಸಾಧಾರಣವಾಗಿ ಒಂದು ಬಗೆಯ ಶರಣಾಗತ ಭಾವದಲ್ಲಿ ಅವರು ಬರುತ್ತಿದ್ದರು. ಕೊಂಚ ಮೃದುವಾಗಿ ಆತ್ಮೀಯವಾಗಿ ಮಾತನಾಡಿದರೆ ಸಾಕು, ಅದಕ್ಕೆ ಅನೇಕ ಅರ್ಥ [illegible]

ಬರುವಂತೆ ಚಟುವಟಿಕೆಗಳಿಗೆ ಆರಂಭಿಸುತ್ತಿದ್ದರು. ಆದರೆ ಇವತ್ತು ಅದೇನೋ ಇಯಾಲಳ ಕುರುಡು ನಂಬಿಕೆಗೆ ರೋಸಿದ ಕುಬಿ ಪುಟ್ಟ ಸುಂದರಿಯನ್ನು ಹತ್ತಿರ ಕರೆದು ಬಹಳ ಆತ್ಮೀಯವಾಗಿ ಮನವಿ ಮಾಡಿಕೊಂಡಿದ್ದ.

ತಾಳಲಾರದ ನಾಚಿಗೆ ಒಂದು ಕಡೆ, ಇನ್ನೊಂದು ಕಡೆ ಡಾಕ್ಟರು ಅದನ್ನು ಮುಟ್ಟಿ ತಮ್ಮ ಕೈಯಿಂದ ಕೊಡಲಿಲ್ಲವೆಂಬ ಅವಮಾನ. ಹೀಗಾಗಿ ಇಯಾಲ ಏನೂ ಮಾತಾಡಲಿಲ್ಲ. ಮುಖ ಪೆಚ್ಚಾಯ್ತು. ಹೊರಟು ಹೋಗಲು ಆ ಕಡೆ ತಿರುಗಿದಳು. ಕಣ್ಣಿನಲ್ಲಿ ನೀರು ತುಂಬಿಕೊಳ್ಳ ತೊಡಗಿತು.

ರಾಮರಾಯ ಔಷಧಿ ಕೊಡುವ ಕಿಟಕಿಯೊಳಗಿಂದ ನೋಡುತ್ತಿದ್ದವನು, "ಏನೋ ನಿಮ್ಮ ಕೈಯ್ಯಿಂದ ಕೊಟ್ಟರೆ ಗುಣವಾಗ್ತದೆ ಅಂತ ಒಂದು ನಂಬಿಕೆ ಸಾರ್! ಮುಟ್ಟಿಕೊಡಿ ಸಾರ್! ಏನು ಕೈ ಸವೆದು ಹೋಗುತ್ತದೆಯೇ. ಪಾಪ, ಹುಡಿಗಿ ಬೇಸರ ಮಾಡಿಕೊಳ್ಳುತ್ತಾಳೆ," ಎಂದ.

"ರಾಮರಾವ್, ನಿಮಗೆ ಎಷ್ಟು ದಿನದಿಂದ ಹೇಳ್ತಿದ್ದೀನಿ, ಈ ತರ ಮಾತನಾಡಬೇಡಿ ಅಂತ. ರೋಗ ಗುಣ ಆಗೋದು ಔಷಧಿಯಿಂದ. ಯಾವನು ಮುಟ್ಟಿದರೂ ಒಂದೇ. ಈ ತರ ಹಳ್ಳಿ ಜನಗಳಿಗೆ ಹೇಳಿದರೆ ಹಾಳುಮಾಡಿದಂತೆ. ನಾಸಿರೋದು ಸಂಬಳ ತಗೊಂಡು ಸುಳ್ಳು ಸುದ್ದಿ ಹಬ್ಬಿಸಲಿಕ್ಕಲ್ಲ," ಎಂದು ರಭಸವಾಗಿ ಹೇಳಿದ.

"ನೀವು ಏನೇ ಹೇಳಿ ಸಾರ್! ವೈದ್ಯನ ಮೇಲೂ ಬಹಳ ಅವಲಂಬಿಸಿರತ್ತೆ. ಕಾಳಪ್ಪಾಂತ ಒಬ್ಬ ಡಾಕ್ಟರು ಬಂದಿದ್ದರು. ಪುಣ್ಯಾತ್ಮ ಏನೇನು ಔಷಧಿ ಕೊಡಲಿ, ಒಂದೇ ಒಂದು ಕೇಸು ಉಳೀತಿರಲಿಲ್ಲ. ಬರೀ ಔಷಧಿಯಿಂದ ಎಲ್ಲಾ ಆಗುವಂತಿದ್ದರೆ ಎಲ್ಲಾ ಕೊಡ್ತಿದ್ದರು. ತಾವು ಹೇಳಬಹುದು, ತಮ್ಮ ಕೈಯಲ್ಲಿ ಏನೂ ಇಲ್ಲ ಅಂತ. ಅದು ತಮ್ಮ ದೊಡ್ಡ ಗುಣ ಅಷ್ಟೇ. ಆದರೆ ನಮಗೆ ಗೊತ್ತಾಗೊಲ್ಲವೇ?" ಎಂದು ಬಡಲುವಾದ ಹೂಡಿದ.

ಕುಬಿಗೆ ರಾಮರಾಯನ ತರ್ಕ ನೋಡಿ ಇನ್ನೂ ಬೇಸರವಾಯ್ತು. ಆದರೆ ತನ್ನ ನಂಬುಗೆಗಳ ಬೆನ್ನು ಹತ್ತಿ ಕ್ರೂರವಾಗಲು ಅವನು ತಯ್ಯಾರಿರಲಿಲ್ಲ. ಇಯಾಲಳನ್ನು ಕರೆದ. ಇಯಾಲ ತಿರುಗಿದಳು. ದುಃಖದಿಂದ ಇಯಾಲಳಿಗೆ ಕಣ್ಣಿನಲ್ಲಿ ನೀರಿಳಿಯುತ್ತಿದ್ದಿತು.

"ಇಯಾಲ, ಬಾ ಇಲ್ಲಿ. ಇವತ್ತು ನನ್ನ ಕೈಯಿಂದ ಔಷಧಿ ಮುಟ್ಟಿಕೊಡುತ್ತೇನೆ. ಆದರೆ ಬಾಯಿಂದ ಹೇಳುತ್ತೇನೆ ಕೊಂಚ ಕೇಳಿಕೋ. ಯಾರು ಮುಟ್ಟಲಿ, ಎಲ್ಲ ಒಂದೇ. ಏನು ಔಷಧಿ ಕೊಟ್ಟ ಅನ್ನೋದೊಂದೇ ಮುಖ್ಯ. ನನ್ನ ಮಾತಿನಲ್ಲಿ ನಂಬಿಕೆ ಇಡು," ಎಂದು ಹೇಳುತ್ತಾ ಔಷಧಿ ಸೀಸೆ ತೆಗೆದುಕೊಂಡು ಮುಟ್ಟಿ ಕೊಟ್ಟ. ತಾನೇ ನಂಬದಿರುವ, ತನಗೆ ಶ್ರದ್ಧೆ ಇಲ್ಲದಿರುವ ಒಂದನ್ನು ಮಾಡಲು ಅವನಿಗೆ ವಿಪರೀತ ಮುಜುಗರವಾಯ್ತು. ದುಃಖವೂ ಆಯ್ತು. ಇಯಾಲ ತಲೆ ತಗ್ಗಿಸಿಕೊಂಡು ಔಷಧಿ ಸೀಸೆಯನ್ನು ಸ್ವೀಕರಿಸಿ ಹೋದಳು.

ರಾಮರಾಯ ಇದನ್ನೊಂದು ಪೂಜಾ ಕರ್ಮವೋ ಎನ್ನುವಂತೆ ಭಕ್ತಿ ಶ್ರದ್ಧೆಗಳಿಂದ ವೀಕ್ಷಿಸುತ್ತಿದ್ದ.

೨

ಡಾಕ್ಟರ್ ಕುಬಿಯ ಪೂರ್ತಿ ಹೆಸರು ಡಾಕ್ಟರ್ ವಿ. ಎಸ್. ಕುಬೇರನಾಥ ಎಂದು. ಭೈರಾಪುರವೆಂಬ ಕೊಂಪೆಯ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯನಾಗಿದ್ದ. ಭೈರಾಪುರ ತಾಲೂಕಿನ ಮುಖ್ಯ ಹಳ್ಳಿಯಾಗಿದ್ದರೂ ಅದರ ಸಂಚಾರಸೌಲಭ್ಯಗಳಾಗಲೀ ಆಚಾರ ವ್ಯವಹಾರಗಳಾಗಲೀ ಶಿಲಾಯುಗದ ಸರಿ ಸಮಾನವಾಗಿದ್ದವು. ಡಾಕ್ಟರ್ ಕುಬಿ ಅಲ್ಲಿಗೆ ಬಂದಾಗ ಎದುರಿಸಬೇಕಾಗಿ ಬಂದುದು ಕೇವಲ ರೋಗಗಳನ್ನು ಮಾತ್ರವೇ ಅಲ್ಲ, ಇನ್ನೂ ಅನೇಕವನ್ನು.

ಡಾಕ್ಟರ್ ಕುಬಿ ಒಬ್ಬ ನಿಷ್ಣಾತ ವೈದ್ಯ, ಹೆಚ್ಚು ಕಡಿಮೆ ಒಬ್ಬ ಅಮೋಘ ಶಸ್ತ್ರಚಿಕಿತ್ಸಕನಾಗಿದ್ದ. ಅಂಥವನು ಇಂಥ ಕೊಂಪೆಗೆ ಬರಲು ವಿಶಿಷ್ಟ ಕಾರಣಗಳಿದ್ದುವು. ಯುದ್ಧ ಆರಂಭವಾದಾಗ ದೇಶಸೇವೆಗೆಂದು ಕುಬಿ ಸೈನ್ಯಕ್ಕೆ ವೈದ್ಯವೃತ್ತಿಗಾಗಿ ಸೇರಿದ. ಆದರೆ ಆತ ಸೈನ್ಯಕ್ಕೆ ಸೇರಿ ಆ ಬಗೆಯ ವೈದ್ಯದಲ್ಲಿ ತರಪೇತು ಪಡೆಯುವುದರೊಳಗಾಗಿ ಯುದ್ಧ ನಿಂತು ಶಾಂತಿ ಒಪ್ಪಂದ

ಏರ್ಪಟ್ಟಿತ್ತು. ಇದು ಕುಬಿಗೂ ಸಂತೋಷ ತಂದಿತ್ತು. ಆದರೆ ಕೆಲವೇ ದಿನಗಳಲ್ಲಿ ಕುಬಿ ಸೈನ್ಯದ ಹುದ್ದೆ ತ್ಯಜಿಸಲು ಆಲೋಚನೆ ಮಾಡಬೇಕಾಯ್ತು. ಇದಕ್ಕೆ ಮುಖ್ಯ ಕಾರಣ ಕುಬೇರನಿಗೆ ತಕ್ಕಷ್ಟು ಕೆಲಸ ಅಲ್ಲಿ ಇರಲೇ ಇಲ್ಲ. ಶಸ್ತ್ರವೈದ್ಯದಲ್ಲಿ ನಿಷ್ಣಾತನೆನ್ನಿಸುವಂಥ ಪವಾಡಸದೃಶ ಕೈಗಳಿದ್ದ ಆತನಿಗೆ ಸವಾಲೆನ್ನಿಸುವಂಥ ಒಂದೇ ಒಂದು ಕೇಸೂ ಬರುತ್ತಿರಲಿಲ್ಲ. ಸೈನಿಕರೇ ಹಾಗೆ! ಸಾಧಾರಣವಾಗಿ ದೃಢಕಾಯರನ್ನೇ ಸೇರಿಸಿಕೊಳ್ಳುವುದರಿಂದ ಅವರಿಗೆ ಹೆಚ್ಚೆಂದರೆ ಕೆಮ್ಮು, ನೆಗಡಿ, ಇನ್ನೂ ಹೆಚ್ಚೆಂದರೆ ಕುರುವೋ ಮೊಡವೆಯೋ! ಸಾಮಾನ್ಯವಾಗಿ ಕವಾಯ್ತು ತಪ್ಪಿಸಿಕೊಳ್ಳಲು ರೋಗದ ಕಳ್ಳ ನೆವ ಹೇಳಿಕೊಂಡು ಬರುವವರೇ ಹೆಚ್ಚು ಮಂದಿ. ಹೀಗಾಗಿ ಕುಬಿ ಅನಿವಾರ್ಯವಾಗಿ ಸೈನ್ಯದ ಸೇವೆಯನ್ನು ತ್ಯಜಿಸಿ ನಾಗರಿಕ ಸೇವೆಗೆ ಹಿಂದಿರುಗಲು ನಿರ್ಧರಿಸಬೇಕಾಯ್ತು. ಹಲವರು ಸೈನ್ಯದ ಶಿಸ್ತಿಗೂ ಪ್ರಾಣಾಪಾಯಕ್ಕೂ ಹೆದರಿ ಬಿಡುತ್ತಿದ್ದಾನೆಂದುಕೊಂಡರು...

ಕುಬಿ ಸರ್ವೀಸ್ ತೊರೆದು ಹಿಂದಿರುಗಿದಾಗ ದೇಶದ ಸಾರ್ವಜನಿಕ ರಂಗದ ಪರಿಸ್ಥಿತಿಯೇ ಬೇರೆಯಾಗಿತ್ತು. ಸಾವಿರಾರು ವೈದ್ಯ ಪದವೀಧರರು ಕೆಲಸವಿಲ್ಲದೆ ಕುಳಿತಿದ್ದರು. ನಿರುದ್ಯೋಗ ಸಮಸ್ಯೆ ದೇಶವನ್ನು ತಿನ್ನುತ್ತಿತ್ತು. ಕುಬಿ ಸೈನ್ಯದಲ್ಲಿ ಸೇವೆ ಸಲ್ಲಿಸಿದವನೆಂಬ ಒಂದೇ ಒಂದು ಕಾರಣದಿಂದ ಒಂದು ಕೆಲಸ ಕೊಡಲಾಯ್ತು. ಅದು ಸಿಕ್ಕಿದ್ದೂ ಯಾವನೂ ಹೋಗಲು ಇಷ್ಟಪಡದ ವರ್ಷಕ್ಕೆ ಮುನ್ನೂರು ಇಂಚಿಗೂ ಹೆಚ್ಚು ಮಳೆಯಾಗುವ ಭಯಾನಕ ಕೊಂಪೆ ಭೈರಾಪುರಕ್ಕೆ.

ಅಲ್ಲಿಗೆ ಮುಂಚೆ ವರ್ಗಮಾಡಿದ ಒಬ್ಬನೇ ಒಬ್ಬ ಡಾಕ್ಟರೂ ಅಲ್ಲಿಗೆ ಹೋಗಿರಲಿಲ್ಲ. ಹೀಗಾಗಿ ಅಲ್ಲಿನ ಕಂಪೌಂಡರ್ ಒಬ್ಬ ವೈದ್ಯನಾಗಿದ್ದ. ವಿದೇಶಗಳಿಂದ ಕೊಡುಗೆಯಾಗಿ ಬಂದಿದ್ದ ಎಲ್ಲಾ ಶಸ್ತ್ರಚಿಕಿತ್ಸೆಯ ಉಪಕರಣಗಳನ್ನೂ ಔಷಧ ಮಾತ್ರೆಗಳನ್ನೂ ಸಾರ್ವಜನಿಕರ ಮೇಲೆ ಮನಬಂದಂತೆ ಪ್ರಯೋಗಿಸಿದ್ದ. ಕುಬಿ ಆ ಊರಿಗೆ ಹೋದಾಗ ಸೈಕಲ್ ಶಾಪು, ಅಕ್ಕಸಾಲಿ ಮಳಿಗೆ, ಹಜಾಮನ ಅಂಗಡಿ ಮುಂತಾದೆಲ್ಲ ಕಡೆಗಳಿಂದಲೂ ಅನೇಕ ಉಪಕರಣಗಳನ್ನು ಸಂಗ್ರಹಿಸಬೇಕಾಯಿತು.

ಆರಂಭದಲ್ಲಿ ಕುಬಿಗೂ ಕಂಪೌಂಡರಾಗಿದ್ದ ರಾಮರಾಯನಿಗೂ ಉಗ್ರವಾದ ಚಕಮಕಿಯಾಗುತ್ತಿದ್ದಿತು. ನೀರಿನಲ್ಲಿ ಕಾಯಿಸದೆ ಇಂಜೆಕ್ಷನ್ ಸಿರಿಂಜ್ ಸಿದ್ಧಪಡಿಸುವುದು, ಡಾಕ್ಟರನ್ನು ಕೇಳದೆ ರೋಗಿ ಬಯಸಿದಂಥ ಔಷಧಿಯನ್ನು ಕೊಡುವುದು, ಡಾಕ್ಟರ್ ಕುಬಿಯ ಮೇಲೆ ಸೂಕ್ಷ್ಮವಾಗಿಯೂ ಪರೋಕ್ಷವಾಗಿಯೂ ಅಪಪ್ರಚಾರ ಮಾಡುವುದು, ಕೊಂಚ ಗಂಭೀರತರದ ಖಾಯಿಲೆಯಾದರೆ ಹಾಸನಕ್ಕೇ ಹೋಗಿರೆಂದು ಡಾಕ್ಟರಿಗೆ ಕಾಣದಂತೆ ತಿಳಿಸಿಬಿಡುವುದು ಮುಂತಾದ ದುಷ್ಟ ಕೆಲಸಗಳನ್ನು ಆರಂಭಿಸಿದ್ದ. ನೀರಿನಲ್ಲಿ ಶಸ್ತ್ರಚಿಕಿತ್ಸೆಯ ಹತ್ಯಾರುಗಳನ್ನು ಕಾಯಿಸಿ ಸ್ಟೆರಿಲೈಸ್ ಮಾಡುವುದಂತೂ ಅವನು ಟ್ರೈನಿಂಗಿನಲ್ಲಿ ಮಾತ್ರ ನೋಡಿದ್ದ ಅಷ್ಟೇ. ಅವನು ಆಸ್ಪತ್ರೆಯಲ್ಲಿ ನೀರು ಕಾಯಿಸುತ್ತಿದ್ದುದು ಟೀ ಮಾಡಲು ಮಾತ್ರ. ಈ ಬಗೆಯ ನಂಜಾಗದಂಥ ಮುನ್ನೆಚ್ಚರಿಕೆ ಉಪಚಾರಗಳೆಲ್ಲಾ ವೈದ್ಯರ ಮೂಢ ನಂಬಿಕೆಗಳೆಂದು ಅವನು ದೃಢವಾಗಿ ನಂಬಿದ್ದನು. ಹಿಂದೆ ಎಲ್ಲೋ ಒಂದೆರಡು ವಾರಗಳಿಗೆ ಬಂದಿದ್ದ ಹಲವು ವೈದ್ಯರೂ ಕೂಡ ಕೇವಲ ಡಿಸ್ಟಿಲ್ ನೀರನ್ನೇ ಚುಚ್ಚಿ ದುಡ್ಡು ಸುಲಿದಿದ್ದರು. ಹಲವರಿಗೆ ಅದರಿಂದಲೇ ಗುಣವೂ ಆಗಿತ್ತು!

ಕುಬಿ ಆಸ್ಪತ್ರೆಯ ಚಾರ್ಜ್ ತೆಗೆದುಕೊಂಡಾಗ ಕಂಪೌಂಡರ್ ರಾಮರಾಯ ಭಯಂಕರ ಸವಾಲಾದ. ಒಂದು ಸಾರಿಯಂತೂ ಕುಬಿ ಆಸ್ಪತ್ರೆಗೆ ಬರುವುದಕ್ಕೆ ಮುಂಚೆಯೇ ಒಬ್ಬ ಮುದುಕಿಯ ಹಲ್ಲುಗಳೇಳೆಂಟನ್ನು ಕಟಕಟ ಕಿತ್ತು ಒಗೆದಿದ್ದ. ಡಯಾಬಿಟಿಸ್ ಮುಂತಾದುದು ಇದ್ದ ಆ ಮುದುಕಿ ವಿಪರೀತ ರಕ್ತಸ್ರಾವದಿಂದ ಅರೆಜೀವವಾಗಿ ಅವಳನ್ನು ಬದುಕಿಸಬೇಕಾದರೆ ಕುಬಿಗೆ ಕಲಿತ ವಿದ್ಯೆ ಎಲ್ಲ ಖರ್ಚಾಗಿ ಹೋಯ್ತು. ಕುಬೇರ ತನ್ನ ಸೈನಿಕ ತರಬೇತಿಯ ಶಿಸ್ತು ಸಂಯಮಗಳಿಂದ ಮಾತ್ರವೇ ಅವನನ್ನು ದಂಡಿಸದೆ ಇದ್ದುದೆಂದು ತೋರುತ್ತದೆ.

ಇಂಥ ರಾಮರಾಯ ಒಂದು ದಿನ ಇದ್ದಕ್ಕಿ-

ದ್ದಂತೆ ಬದಲಾದುದು ಒಂದು ವಿಶೇಷ ಘಟನೆಯೇ ಸರಿ. ಆ ದಿನ ರಾಮರಾಯನಿಗೆ ವಿಪರೀತ ತಲೆನೋವಾಗಿ ಡಾಕ್ಟರನ್ನು ಕೇಳದೆ ಯಾವುದೋ ಒಂದು ತಲೆನೋವಿನ ಮಾತ್ರೆಯನ್ನು ನುಂಗಿದ. ಕೆಲವಾರು ನಿಮಿಷಗಳೊಳಗೆ ಅವನ ತುಟಿ ಮುಖ ಎಲ್ಲಾ ಬಾತುಕೊಂಡು ಏದುಸಿರು ಬಿಡುತ್ತಾ ದೊಪ್ಪನೆ ಬಿದ್ದ. ಬಹುಶಃ ಆ ಮಾತ್ರೆಯಲ್ಲಿ ಅವನ ಮೈಗಾಗದ ಅಲರ್ಜಿ ಇರಬಹುದೇನೋ. ಆಮೇಲೆ ಸುಮಾರು ಹೊತ್ತು ಜ್ಞಾನವಿಲ್ಲದೆ ಜೀವನ ಮರಣಗಳ ಉಯ್ಯಾಲಾಟದಲ್ಲಿ ತೂಗುತ್ತಿದ್ದ. ಕುಬಿ ಅಲ್ಲದೆ ಇನ್ನಾರಾದರೂ ವೈದ್ಯರಾಗಿದ್ದರೆ ಅವನು ಖಂಡಿತ ಪರಂಧಾಮನ್ನೈದುತ್ತಿದ್ದ. ಅಂತೂ ಕುಬಿ ಹಗಲು ರಾತ್ರಿ ಶ್ರಮಿಸಿ ಅವನನ್ನು ಉಳಿಸಿದನು. ಈ ಪ್ರಕರಣದ ನಂತರ ಅವನಿಗೆ ಕುಬಿಯ ಮೇಲೆ ಅಪಾರ ಗೌರವ ನಂಬುಗೆಗಳು ಬಂದುವು. ಆತ ಅತ್ಯಂತ ವಿನೀತನೂ ನಿಷ್ಠಾವಂತನೂ ಆದ.

ನಿಧಾನವಾಗಿ ಕುಬೇರನ ಹೆಸರು ಜನಜನಿತವಾಗತೊಡಗಿತು. ಇದರೊಡನೆ ಕುಬೇರ ಭೈರಾಪುರಕ್ಕೆ ಬಂದ ಹೊಸದರಲ್ಲಿ ಬಹಳ ಯತ್ನಿಸಿ ರಸ್ತೆ ರಿಪೇರಿಗೆ ತಾಲ್ಲೂಕು ಬೋರ್ಡಿನಿಂದ ಹಣವನ್ನು ಮಂಜೂರು ಮಾಡಿಸಿದ್ದ.

ಕುಬಿಯ ಹಸ್ತಚಳಕ ಶ್ರದ್ಧೆಗಳು ಅವನ ಕೀರ್ತಿ ಸಂಸರ ವ್ಯಾಪಿಸುವಂತೆ ಮಾಡಿದವು. ಕುಬಿ ತನ್ನ ಚಳಕವನ್ನು ಎಂದೂ ಅತಿಮಾನುಷವೆಂದಾಗಲೀ ಅಮಾನುಷವೆಂದಾಗಲೀ ನಂಬಿರಲಿಲ್ಲ. ಅವನು ನಂಬುವುದಿರಲಿ, ನಂಬಿದವರನ್ನು ಕಂಡರೆ ಆಗುತ್ತಲೂ ಇರಲಿಲ್ಲ. ಈ ಬಗೆಯ ಶ್ರದ್ಧೆ ನಂಬುಗೆಗಳಿಂದ ಆಗುವ ಭೀಕರ ಅನಾಹುತಗಳನ್ನು ವೈದ್ಯನಾಗಿ ದಿನವೂ ಅವನು ನೋಡುತ್ತಿದ್ದ. ಅಷ್ಟೇ ಅಲ್ಲದೆ ಕಾರ್ಯಕಾರಣ ಬದ್ಧವಲ್ಲದ ಆ ಮೂಢ ಪ್ರಪಂಚವು ಅವನಿಗೆ ನಿಜಕ್ಕೂ ನರಕಸದೃಶವಾಗಿತ್ತು. ರೋಗದ ವಿರುದ್ಧ ಹೋರಾಡುವುದು ಎಂದರೆ ಅದಕ್ಕೆ ಕಾರಣವಾದ ಅಜ್ಞಾನ, ಹಿಂದುಳಿದಿರುವಿಕೆ, ಅದಕ್ಕೆ ಪೂರಕವಾದ ಅವರ ಮೂಢ ನಂಬುಗೆಗಳು, ಹಾಗೂ ಇವೆಲ್ಲಕ್ಕೂ ಕಾರಣವಾದ ಅವರ ಜಡತನ ಈ ಎಲ್ಲವರ ವಿರುದ್ಧ ಹೋರಾಡುವುದು ಎಂದು ಕುಬಿಗೆ ನಿಧಾನವಾಗಿ ಅರಿವಾಗತೊಡಗಿತು.

ಕುಬಿ ಇವುಗಳನ್ನು ನಿವಾರಿಸಲು ಯತ್ನಿಸಿದಂತೆ, ಆತನ ನಿಃಸ್ವಾರ್ಥ ಪ್ರಯತ್ನದಿಂದ ಒಳ್ಳೆಯ ಹೆಸರೂ ಆ ಹೆಸರಿನೊಂದಿಗೇ ನಂಬಿಕೆಯೂ ಆ ನಂಬಿಕೆಯೊಂದಿಗೆ ಕುರುಡು ಬುದ್ಧಿಯೂ ಒಂದರೊಡನೊಂದು ಸಮ್ಮಿಳಿತವಾಗಿ ಉಲ್ಬಣಿಸುತ್ತಿದ್ದುವು. ಜ್ಞಾನ ತನ್ನೊಡನೆ ಅಜ್ಞಾನವನ್ನೂ ಒಯ್ಯುವುದು ಅದರ ಆನುವಂಶಿಕ ಗುಣವೋ ಯಾರು ಬಲ್ಲರು !

ತಾನು ಅರ್ಧಪ್ರಜ್ಞಾವಸ್ಥೆಯಲ್ಲಿದ್ದಾಗ ಆರೈಕೆ ಮಾಡುತ್ತಿದ್ದ ಕುಬೇರನ ಕೈಯಲ್ಲಿ ಸಾಕ್ಷಾತ್ ಕೃಷ್ಣ ಪರಮಾತ್ಮನೇ ಇದ್ದುದನ್ನು ಕಂಡೆನೆಂದು ರಾಮರಾಯ ಊರು ತುಂಬಾ ಪ್ರಚಾರ ಮಾಡತೊಡಗಿದ್ದನು ಕುಬೇರ ಗದರಿಸಿದಾಗ ತಾನು ಸುಳ್ಳು ಹೇಳುತ್ತಿಲ್ಲವೆಂದೂ ಖಂಡಿತವಾಗಿಯೂ ಕಂಡೆನೆಂದೂ, ಇಲ್ಲದಿದ್ದರೆ ಎರಡು ಹಗಲು ಎರಡು ರಾತ್ರಿ ನಿರ್ಜೀವನಾಗಿ ಬಿದ್ದಿದ್ದ ತನ್ನನ್ನು ಸಾಮಾನ್ಯರಿಗೆ ಬದುಕಿಸಲು ಸಾಧ್ಯವಿಲ್ಲೆಂದೂ ಹೇಳಿದ. ಕೊನೆಗೆ, "ನೀವು ಏನು ಬೇಕಾದರೂ ಹೇಳಿ ಸಾರ್. ನನಗೆ ಸತ್ಯ ಏನೆಂದು ಗೊತ್ತಿರುವಾಗ ಏಕೆ ನನಗೆ ಚಿಂತೆ!" ಎಂದುಬಿಟ್ಟನು.

ಈ ಮೂಢ ವಾರ್ತೆಗಳು ಯಾವ ತರಹ ಇದ್ದವೆಂದರೆ ಅನೇಕ ಬಾರಿ ಕುಬೇರನಿಗೆ ರೋಗ ವಾಸಿಯಾದುದು ತನ್ನ ಔಷಧಿಯಿಂದಲೋ ಅವರ ನಂಬುಗೆಯಿಂದಲೋ ಎಂದು ಗುಮಾನಿಯಾಗುತ್ತಿತ್ತು. ಸಾಮಾನ್ಯ ವೈದ್ಯರಾಗಿದ್ದರೆ ನಿಜವಾಗಿಯೂ ಕಂಗೆಡುತ್ತಿದ್ದರು. ಕುಬಿ ವೈದ್ಯ ವಿಜ್ಞಾನಕ್ಕೆ ದ್ರೋಹ ಬಗೆಯದೆ ಕಾರ್ಯಕಾರಣ ಬದ್ಧ ಭೌತಪ್ರಪಂಚ ಒಂದೇ ವಾಸ್ತವವೆಂದು ನಿಷ್ಠೆಯಿಂದಿದ್ದನು.

ಆದರೆ ರಾಮರಾಯನ ದ್ವೇಷ ಯಾವ ರೀತಿ ತೊಂದರೆ ಕೊಡುತ್ತಿತ್ತೋ ರಾಮರಾಯನ ವಿಶ್ವಾಸ ನಿಷ್ಠೆಗಳೂ ಅದೇ ಬಗೆಯ ತೊಂದರೆ ಕೊಡುವ ರೀತಿಯಾಯ್ತು. ಆಗ ರಾಮರಾಯ ಕುಬೇರನ ಬಗ್ಗೆ ಇಟ್ಟಿದ್ದ ದ್ವೇಷ ಈಗ ನಿಷ್ಠೆಯಾಗಿತ್ತಷ್ಟೇ!

ಕುಬಿಯ ಕೀರ್ತಿ ಗೌರವಗಳು ಬೆಳೆದಂತೆ ರೋಗ ರುಜಿನಗಳು ಕಡಿಮೆಯಾದುವಾದರೂ



ಮೋಹದ ಬಟ್ಟೆ? ಮಹದೇವ್ ಬಟ್ಟೆ!

ಮಹದೇವ್ ಮಿಲ್ಲಿನ ಪ್ರಿಂಟೆಡ್ ಬಟ್ಟೆ, ಕೇಂಬ್ರಿಕ್, ವಾಯಿಲ್, ಸೀರೆ—ಎಲ್ಲವೂ ನಿಮ್ಮ ವ್ಯಕ್ತಿತ್ವಕ್ಕೆ ಮೆರುಗು ಕೊಡುತ್ತವೆ. ವೈವಿಧ್ಯಮಯ ಮಹದೇವ್ ಬಟ್ಟೆಗಳನ್ನು ಉಪಯೋಗಿಸಿ ಮೋಹಕತೆಯಿಂದ ಮೆರೆಯಿರಿ.

MTM ಮಹದೇವ್ ಟೆಕ್ಸ್‌ಟೈಲ್ ಮಿಲ್ಸ್
ಹುಬ್ಬಳ್ಳಿ

achana-MTM-5 Kan

ಮೈಸೂರು ರಾಜ್ಯಕ್ಕೆ ಏಜಂಟರು
ಎಮ್ಮೆಕ್ಸ ಏಜೆನ್ಸೀಜ, ಬೆಳಗಾವಿಗಲ್ಲಿ, ಹುಬ್ಬಳ್ಳಿ.

ಮೂಢ ನಂಬುಗೆಗಳೂ ಕುರುಡು ಬುದ್ಧಿಯೂ ಗುಪ್ತವಾಗಿಯೂ ಅಗೋಚರವಾಗಿಯೂ ಸಮಾನ ಸ್ಪರ್ಧೆಯಿಂದ ಬೆಳೆಯುತ್ತಿದ್ದವು.

ಇಯಾಲ ಔಷಧಿಯನ್ನು ಕೈಯಿಂದ ಕೊಡಿ ಎಂದು ಕೇಳಿದಾಗ ಡಾಕ್ಟರ್ ಕುಬೇರನಿಗೆ ಒಳಗೊಳಗೇ ವ್ಯಸನವಾದುದು ಇದಕ್ಕೇ.

೩

ಸಾಯಂಕಾಲ ಕುಬಿ ಆಸ್ಪತ್ರೆಗೆ ಬಂದಾಗ ಎರಡು ಕೇಸುಗಳಿದ್ದವು. ಒಬ್ಬ ಉಮ್ಮತ್ತೂರಿನ ಕಾಫೀ ತೋಟದ ಆಳು. ತನ್ನ ಮಗನಿಗೆ ಉಸಿರಾಡಲು ಆಗುತ್ತಿಲ್ಲೆಂದೂ ಮೂಗಿನೊಳಗೆ ಏನೋ ಚಾಪು ಎದ್ದಿದೆ ಎಂದೂ ಶಂಕಿಸಿದ. ಮೊದಲು ಏನೇನು ಚಿಕಿತ್ಸೆ ಮಾಡಿದ್ದೀ ಎಂದು ಕೇಳಿದಾಗ "ಒತ್ತುಗ" ಎನ್ನುವ ದೆವ್ವದ ತೊಂದರೆ ಎಂದು ಹರಕೆ ಹೊತ್ತೆ ಎಂದು ಮಾತ್ರ ಹೇಳಿದ.

ಕುಬಿ ಜಾಗರೂಕತೆಯಿಂದ ಪರಿಶೀಲಿಸಿದಾಗ ಮೂಗಿನೊಳಗಿಂದ ಇಲಿ ಸತ್ತು ಕೊಳೆತ ವಾಸನೆ ಬರುತ್ತಿದ್ದಿತು. ಡೆಟ್ಟಾಲ್‌ನಿಂದ ಮೂಗಿನ ಅಂತರಾಳಗಳನ್ನೆಲ್ಲಾ ಚೆನ್ನಾಗಿ ತೊಳೆದಾಗ ನೊಣದ ಸಣ್ಣ ಸಣ್ಣ ಮರಿ ಹುಳುಗಳು ಬೆಳ್ಳಗೆ ಕೆಳಕ್ಕೆ ಉದುರಿದವು. ಭೈರಾಪುರ ಎಂದರೆ ಸರ್ವರೋಗಗಳ ಸಂಗ್ರಹಾಲಯದಂತಿತ್ತು. ಕುಬಿ ಅವನ ಮೂಗನ್ನು ಶುದ್ಧಮಾಡಿ ನಂಜು ನಿರೋಧಕ ಔಷಧಿ ಕೊಟ್ಟು ಕಳಿಸಿದ. ಕುಬಿಗೆ ಆಶ್ಚರ್ಯವಾಗಿತ್ತು ಮೂಗಿನೊಳಗೆ ನೊಣದ ಮರಿಗಳಾದುದು ಹೇಗೆ? ಎಂದು. ರಾಮರಾಯ, "ಅದೆಲ್ಲಾ ಕರ್ಮ ಸಾರ್! ಮೂಗಿನೊಳಗೆ ಎಲ್ಲಾದರೂ ಹುಳವಾಗೋದನ್ನು ನೋಡಿದ್ದೀರ!" ಅತ್ತಿಹಣ್ಣಿನೊಳಗೂ ಹುಳುವಿರುವುದಕ್ಕೂ ದೈವಲೀಲೆಯೇ ಕಾರಣವೆಂದೂ ಅವನ ಮಿತ್ರನೊಬ್ಬ ಒಂದು ಹೂವನ್ನು ಮೂಸಿದುದಕ್ಕೆ ಅವನ ಮೂಗನ್ನು ಹುಳು ತಿಂದುಬಿಟ್ಟಿತೆಂದೂ ಏನೇನೋ ಅಸಂಬದ್ಧಗಳನ್ನೆಲ್ಲಾ ಹೇಳುತ್ತಾ ಕುಬಿಯ ಏಕಾಗ್ರತೆ ಕೆಡಿಸಲು ಯತ್ನಿಸುತ್ತಿದ್ದನು. ತುಂಬಾ ಹೊತ್ತು ಆಲೋಚನೆ ಮಾಡಿ ಕುಬಿ ಒಂದು ತೀರ್ಮಾನಕ್ಕೆ ಬಂದನು. "ನೋಡಿ ರಾಮರಾವ್, ಕರ್ಮಗಿರ್ಮ ಎಲ್ಲ ನಿಮ್ಮ ಬೊಗಳೆ. ಬಹುಶಃ ಹೀಗಿರಬಹುದು. ಆ ಹುಡುಗ ಸಿಂಬಳಬುರುಕ. ಎಲ್ಲೋ ಮೂಗಿನಿಂದ ಸಿಂಬಳ ಇಳಿದಾಗ ಮುತ್ತುತ್ತಿದ್ದ ನೊಣದಲ್ಲಿ ಒಂದು ಅದರ ಮೇಲೆ ಮೊಟ್ಟೆ ಇಟ್ಟಿದೆ. ಆ ಮೇಲೆ ಹುಡುಗ ಸಿಂಬಳ ಒಳಗೆ ಎಳೆದುಕೊಂಡಿದ್ದಾನೆ. ಸಿಂಬಳದೊಡನೆ ನೊಣದ ಮೊಟ್ಟೆಗಳೂ ಮೂಗಿನೊಳಕ್ಕೆ ರವಾನೆಯಾಗಿವೆ. ದೇಹದ ಉಷ್ಣತೆಯಲ್ಲೇ ಮರಿಯಾಗಿವೆ." ಅವನ ವಿವರಣೆ ರಾಮರಾಯನಿಗೆ ಎಷ್ಟೊಂದು ಸಮಂಜಸವಾಗಿ ತೋರಿತೆಂದರೆ ಕುಬಿ ಒಬ್ಬ ತ್ರಿಕಾಲ ಜ್ಞಾನಿಯಾಗಿರಬಹುದೇ ಎಂದು ಶಂಕಿಸತೊಡಗಿದ!

ಈ ಬಗ್ಗೆ ಕುಬಿ ಗಾಢವಾದ ಆಲೋಚನೆಯಲ್ಲಿ ತಲ್ಲೀನನಾಗಿರಬೇಕಾದರೆ ಬಾಯಮ್ಮ ಬಂದು ರಾಮರಾಯನ ಬಳಿ ಇಯಾಲ ಬಂದಿದ್ದಳೇ? ಎಂದು ಕೇಳಿದಳು. ಏಕೆಂದರೆ ಇನ್ನೂ ಮನೆಗೆ ಬಂದಿಲ್ಲೆಂದು ಹೇಳಿ ಭಟ್ಟರ ಹೋಟೆಲಿನ ಕಡೆಗೆ ಹೋದಳು. ಯಾರೂ ಅದನ್ನು ಅಷ್ಟಾಗಿ ಗಮನಿಸಲಿಲ್ಲ.

ಬಾಯಮ್ಮ ಅತ್ತ ಹೋದ ಕೂಡಲೇ ಹಮಾಲಿಗಳಿಬ್ಬರು, ರಹಮಾನ್ ಹಾಗೂ ರಂಗ, ಹಲ್ಲು ಕಿರಿದುಕೊಂಡು ಒಳಗೆ ಬಂದರು. ಹಿಂದಿನ ದಿನ ಪೋಲೀಸರು ಯಾವುದೋ ಕಳುವಿನ ತನಿಖೆ ಮೇಲೆ ಚರ್ಮ ಸುಲಿಯುವವರೆಗೂ ಹೊಡೆದು ಬಿಟ್ಟಿದ್ದರು. ಪೋಲೀಸಿನವರಿಗೂ ಗೊತ್ತಿದ್ದಿತು, ಇವರು ಕಳ್ಳರೇ ಅಲ್ಲವೆಂದು. ಆದರೆ ಯಾರಿಗೊ ಹೊಡೆದು ತಾವು ಭಾರಿ ತನಿಖೆ ನಡೆಸುತ್ತಿದ್ದೇವೆಂದು ತೋರಿಸುವ ಅಗತ್ಯ ಅವರಿಗಿತ್ತು.

ಇದನ್ನು ಸಹಿಸದೆ ಕುಬಿ ಇನ್‌ಸ್ಪೆಕ್ಟರ್ ಅಪ್ಪರ್ ಬಳಿಗೆ ಹೋಗಿ, "ಈ ರೀತಿ ನಿರ್ದೋಷಿಗಳನ್ನೇಕೆ ದಂಡಿಸುತ್ತೀರಿ?" ಎಂದು ಕೇಳಿದಾಗ, "ಏನು ಮಾಡೋದು ಡಾಕ್ಟರೆ, ದೊಡ್ಡದೊಡ್ಡ ಪಾರ್ಟಿಗಳು ಕಂಪ್ಲೇಟು ಲಾಂಚು ಮಾಡಿರುತ್ತಾರೆ. ಸುಮ್ಮನೆ ಕೂರೋ ಹಾಗಿಲ್ಲ ನಾವು. ಏನಾರೂ ಪ್ರೋಗ್ರೆಸ್ ತೋರಿಸಬೇಕು ನೋಡಿ," ಎಂದು ಏನೇನೋ ಅಸಂಬದ್ಧ ಮಾತಾಡಿದ್ದ. ಆದರೆ ಇನ್‌ಸ್ಪೆಕ್ಟರ್ ದಂಡನೆಯಿಂದ ಅವರು ಬೆನ್ನಿನ ಮೇಲೆ ಚೀಲ ಹೊರಲೂ

ಕಷ್ಟವೆಂದೂ ಕದಿಯುವುದನ್ನು ಅವರಿಗೆ ಅನಿವಾರ್ಯ ಮಾಡುತ್ತಿದ್ದೀರೆಂದೂ ಕುಬಿ ಹೇಳಿದ. "ಡಾಕ್ಟರೇ, ನಿಮ್ಮ ಕಷ್ಟ ನಿಮಗೆ. ನನ್ನ ಕಷ್ಟ ನನಗೆ. ಅವರು ಹೊಟ್ಟೇಪಾಡಿಗೆ ತೊಂದರೆ ಅಂತ ನಾಲ್ಕು ಜನಕ್ಕೆ ಹೇಳಿಕೊಂಡು ತಿರುಗಿದರೆ ನಾನೂ ಒಬ್ಬ ಇನ್‌ಸ್ಪೆಕ್ಟರೂ ಅಂತ ಇದ್ದೀನಿ ಅಂದುಕೊಳ್ಳುತ್ತಾರೆ ಜನ," ಎಂದು ಅಸ್ಫರ್ ಹೇಳಿದ.

ಕುಬಿಗೆ ಹಮಾಲಿಗಳ ಅವಸ್ಥೆ ನೋಡಿ ತುಂಬಾ ಖೇದವಾಯ್ತು. ಅವರ ಬ್ಯಾಂಡೇಜುಗಳನ್ನೆಲ್ಲಾ ಬಿಚ್ಚಿ ಬೆಲ್ಟಿನಿಂದ ಹೊಡೆದ ಗಾಯಗಳನ್ನೆಲ್ಲ ನೋಡುತ್ತಾ ಚಿಂತೆಯಿಂದ ನಡೆದುದರ ಬಗ್ಗೆ ಕೇಳಿದ. "ಏನೂ ಕಳ್ಳತನ ನಡೆದಿಲ್ಲ ಸ್ವಾಮಿ, ನೂರಾರು ಮೂಟೆ ನಾವು ಹೊತ್ತು ಸಾಗಿಸೋದಾದರೂ ಎಲ್ಲಿಗೆ? ಎಲ್ಲಾ ಸೊಸೈಟಿಯ ಡೈರೆಕ್ಟರುಗಳೂ ಕಾರ್ಯದರ್ಶಿಗಳೂ ಸೇರಿ ತಿಂದು ಹಾಕಿದ್ದಾರೆ. ಜನದ ಕಣ್ಣಿಗೆ ಮಣ್ಣೆರಚುವುದಕ್ಕೆ ಕಂಪ್ಲೇಂಟು ಕೊಟ್ಟು ನಮಗೆ ಹೊಡೆಸುತ್ತಿದ್ದಾರೆ. ಭೈರಾಪುರದಲ್ಲಿ ಯಾವಾಗ ಕಳ್ಳತನ ಆಗಲಿ, ನಮ್ಮನ್ನು ಕರೆದು ಚಮಡ ಸುಲಿಯುತ್ತಾರೆ ಸ್ವಾಮಿ. ನಾವು ಲಂಚಗಿಂಚ ಕೊಟ್ಟು ಪೋಲೀಸರನ್ನು ಸಾಕುವಷ್ಟು ಸಾವುಕಾರರಲ್ಲ ಸ್ವಾಮಿ," ಎಂದು ಅತ್ತುಕೊಂಡರು.

ಕುಬಿಯ ತಾಳ್ಮೆ ತನ್ನ ಕೊನೆಯ ಹಂತ ಮುಟ್ಟುತ್ತಿದ್ದಿತು. ಕೇವಲ ತಾನು ತನ್ನ ವೃತ್ತಿ ಮಟ್ಟಿಗೆ ಸೀಮಿತವಾಗಿರಬೇಕೆಂದು ಎಷ್ಟೆಷ್ಟು ಪ್ರಯತ್ನಪಟ್ಟರೂ ಅವನಿಂದ ಅದು ಸಾಧ್ಯವಾಗದೆ ಹೋಗುತ್ತಿತ್ತು. ಆದುದರಿಂದ ಅವರ ಮೇಲೆ ಆದ ದೌರ್ಜನ್ಯದ ರಿಪೋರ್ಟೊಂದನ್ನು ತಯಾರು ಮಾಡಿ ಕೊಡುತ್ತೇನೆ; ಮೇಲಧಿಕಾರಿಗಳಿಗೆ ಕಳಿಸಿರಿ ಎಂದು ಹಮಾಲರಿಗೆ ಹೇಳಿದ. "ಬೇಡಿ ಸ್ವಾಮಿ, ಹಳೇ ಕೇಡಿಗಳು ಅಂತ ನಮ್ಮನ್ನು ಪಟ್ಟಿ ಮಾಡಿದ್ದಾರಂತೆ. ಇನ್ನಷ್ಟು ಕರೆಸಿ ಹೊಡೀತಾರೆ ಸ್ವಾಮಿ. ಏನಾರ ಒಳ್ಳೇ ಔಷಧಿ ಹಾಕಿ ಕೊಂಚ ಬೇಗ ವಾಸಿಯಾಗೋ ಹಾಗೆ ಮಾಡಿರಿ ಸಾಕು. ನಿಮ್ಮ ಹೊಟ್ಟೆ ತಣ್ಣಗಿರಲಿ," ಎಂದು ಹೇಳಿಕೊಂಡರು.

ಕುಬಿಗೆ ಭೈರಾಪುರದ ರಾಜಕಾರಣದ ಹೃದಯ ವಿದ್ರಾವಕ ಸ್ವರೂಪ ನಿಧಾನವಾಗಿ ಅನುಭವ ಗಮ್ಯವಾಗುತ್ತಿದ್ದಿತು. ಪ್ರತಿಯೊಂದು ಕೂಡ ಈ ಪುಢಾರಿ ರಾಜಕಾರಣದ ಪ್ರಭಾವವಲಯಕ್ಕೆ ಸಿಕ್ಕಿದೊಡನೆಯೇ ಅದರ ಸತ್ಯ ನ್ಯಾಯ ವಾಸ್ತವಗಳೆಲ್ಲಾ ತಲೆಕೆಳಗಾಗಿ ಹೋಗುತ್ತಿದ್ದವು. ಕೊಲೆ ಒಂದು ಕರುಣೆಯಾಗಿ, ಕಳ್ಳತನ ಒಂದು ಉತ್ತಮ ಕರ್ತವ್ಯವಾಗಿ, ಅಸತ್ಯವೆ ಸತ್ಯವಾಗಿ ಹೋಗುತ್ತಿತ್ತು. ಒಕ್ಕಲಿಗರದೊಂದು ಲಿಂಗಾಯತರದೊಂದು ಗುಂಪು ಇತ್ತು. ಸೊಸೈಟಿಯಲ್ಲಿ ಸಹಕಾರಿ ಬ್ಯಾಂಕುಗಳಲ್ಲಿ ತಾಲ್ಲೂಕು ಬೋರ್ಡಿನಲ್ಲಿ ಎಲ್ಲೆಂದರಲ್ಲಿ ಇವರ ತಾಕಲಾಟದ ಉಪಟಳ. ಹಲವು ಜನ ಪ್ರತಿಷ್ಠಿತ ಮುಸಲ್ಮಾನರೂ ಬ್ರಾಹ್ಮಣರೂ ಕುಯುಕ್ತಿಯಿಂದ ಯಾವ ಯಾವ ಎತ್ತು ಗೆಲ್ಲುತ್ತದೆಯೋ ಅದರದರ ಬಾಲವನ್ನು ಹಿಡಿಯುತ್ತಾ ಕಾಲ ಕಳೆಯುತ್ತಿದ್ದರು.

ಕುಬೇರ ಗಾಯಗಳಿಗೆಲ್ಲಾ ಇಲಾಜು ಮಾಡಿ ಅವು ಒಣಗುತ್ತಾ ಬಂದಿದ್ದರಿಂದ ಬ್ಯಾಂಡೇಜು ಬೇಡವೆಂದು ಹಾಗೇ ಹಮಾಲರನ್ನು ಕಳಿಸಿದ.

ರಾಮರಾಯ, "ಯಾರೂ ಬರೋವಟ್ಟಿಗೆ ಕಾಣೊಲ್ಲ. ಅತ್ಲಾಗಿ ಬಾಗಿಲು ಬಂದ್ ಮಾಡಿ ಕೊಂಡು ಹೋಗೋಣವೇ ಸಾರ್?" ಎಂದು ಕೇಳಿದ.

ಕುಬೇರ ಆಳವಾದ ಆಲೋಚನೆಯಲ್ಲಿ ಮಗ್ನನಾಗಿದ್ದ. ರಾಮರಾಯ ಮಾತನಾಡಿದ್ದು ಅಷ್ಟಾಗಿ ಕೇಳಿಸಲಿಲ್ಲ.

ಹಮಾಲಿಗಳ ಮೇಲೆ ನಿತ್ಯ ನಡೆಯುತ್ತಿದ್ದ ದೌರ್ಜನ್ಯಕ್ಕೆ ಏನು ಮಾಡುವುದು ಎಂದು ಆಳವಾಗಿ ಆಲೋಚಿಸುತ್ತಿದ್ದ.

ಚೂಕ್‌ಮಲ್ ಬ್ಯಾಂಕಿಗೆ ಮೋಸ ಮಾಡಲು ಅಂಗಡಿಗೆ ಬೆಂಕಿ ಕೊಟ್ಟಾಗಲೂ ಕುಬೇರ ಈ ಹಮಾಲಿಗಳ ಹಾಗೂ ಸಂತೆಮಾಳದಲ್ಲಿ ಗುಡಾರ ಹಾಕಿದ್ದ ನಾಲ್ಕಾರು ಭಿಕ್ಷುಕರ ಬೆನ್ನಿಗೂ ಇಲಾಜು ಮಾಡಿದ್ದ.

ಮಾರೇಗೌಡ ತನ್ನ ಹೆಂಡತಿಯನ್ನು ತಾನೇ ಹೊಡೆದು ಆಕಸ್ಮಾತ್ತಾಗಿ ಪ್ರಾಣ ಹೋದಾಗ ಒಯ್ದು ಕಾಡಿನಲ್ಲಿ ಹೆಣ ಬಿಸುಟು ಬಂದಾಗಲೂ ಕುಬೇರ ಈ ಹಮಾಲಿಗಳ ಹಾಗು ಮಾರೇಗೌಡನ ಹೆಂಡತಿಯ ಪ್ರಿಯಕರನೆಂದು ಶಂಕಿಸಿದ ಟೈಲರ್

ರಾಮಯ್ಯನ ಬೆನ್ನಿಗೆ ಇಲಾಜು ಮಾಡಿದ್ದ.

ಯಾವುಯಾವುವೋ ಗುಹ್ಯಾತ್ ಗುಹ್ಯ ರೋಗಗಳ ಜಾಡು ಹಿಡಿದು ಚಿಕಿತ್ಸೆ ಮಾಡು-ತ್ತಿದ್ದ ಈ ಮಹಾವೈದ್ಯನ ತಲೆ ಈ ವಿಷಯದಲ್ಲಿ ದಿಂಙ್ಮೂಢವಾದಂತಿತ್ತು.

ರಾಮರಾಯ ಇನ್ನೂ ಕೊಂಚ ಗಟ್ಟಿಯಾಗಿ 'ಸ್ಸಾರ್' ಎಂದಾಗ ಬೆಚ್ಚಿದಂತೆ ಕುಬೇರ ಎಚ್ಚೆತ್ತ. ರಾಮರಾಯ ಆಗಲೇ ಆಸ್ಪತ್ರೆ ಕಿಟಕಿ ಗಳನ್ನು ಮುಚ್ಚಿದ್ದ.

೪

ಬೆಳಗಿನ ಝಾವ ಕುಬೇರನಾಥ ಎದ್ದು ಆಸ್ಪತ್ರೆಗೆ ಹೊರಡಲು ಸಿದ್ಧನಾಗಬೇಕಾದರೆ ಒಂದು ಭೀಕರ ವಾರ್ತೆ ಕಾದಿತ್ತು. ಭಟ್ಟರ ಹೋಟೆಲಿನ ಮಾಣಿ ಓಡಿ ಬಂದು, "ಡಾಕ್ಟರೆ, ಡಾಕ್ಟರೆ, ಇಯಾಲೀನ ಯಾರೋ ಕಡಿದು ಹಾಕಿದ್ದಾರಂತೆ. ರಾಮರಾಯರು ಬಾಯಮ್ಮ ಎಲ್ಲ ನಿಮಗೆ ಹೇಳಲಿಕ್ಕೆ ಹೇಳಿ ಈಗ ತಾನೆ ಹೋದರು," ಎಂದು ಒಂದೇ ಉಸುರಿಗೆ ಹೇಳಿದ.

ಒಂದು ಲಘು ಮಾನಸಿಕ ಆಘಾತವಾದಂತೆ ಕುಬಿಯ ಮುಖ ಆಶ್ಚರ್ಯದಿಂದ ತುಂಬಿತು. ಕುಬಿ ಸಾವು ನೋವುಗಳಿಗೆ ಅಷ್ಟೊಂದು ವಿಚಲಿತ ನಾಗುತ್ತಿರಲಿಲ್ಲ. ಏಕೆಂದರೆ ವೈದ್ಯವಿಜ್ಞಾನದ ಮೊದಲನೆಯ ಶಿಸ್ತು ಗಾಬರಿ ಗಲಿಬಿಲಿಗಳ ನಡುವೆಯೂ ತಾಳ್ಮೆ ಸಂಯಮದಿಂದಿರುವುದೇ ಆಗಿತ್ತು. ಕುಬಿ ಕಠೋರ ತಪಸ್ಯೆಯಿಂದ ಈ ಸಿದ್ಧಿಯನ್ನು ಪಡೆದುಕೊಂಡಿದ್ದನು. ಒಂದು ಕ್ಷಣದ ನಂತರ ಮೊದಲಿನ ತಾಳ್ಮೆಯಿಂದಲೇ, "ಎಲ್ಲಿ ಇದು ಆಗಿರೋದು?" ಎಂದು ಮಾಣಿಯನ್ನು ಕೇಳಿದನು. "ಧೂಪದ ಮರದ. ತಿರುವಿನ ಹತ್ತಿರ ಬಂಡೆ ಇದೆಯಲ್ಲ ಅಲ್ಲಿ," ಎಂದು ಹೇಳಿ, "ಬೇಕಾದರೆ ಬಂದು ತೋರಿಸು-ತ್ತೇನೆ," ಎಂದ ಮಾಣಿ. ಆ ಬಂಡೆ ಕೆಲವು ಕಾರಣಗಳಿಗಾಗಿ ಚೆನ್ನಾಗಿ ಗೊತ್ತಿದ್ದುದ ರಿಂದ, "ಬೇಡ ನಾನೇ ಹೋಗುತ್ತೇನೆ," ಎಂದ ಕುಬಿ. ಡಾಕ್ಟರು ಕರೆದರೆ ಹೋಟಲು ಚಾಕರಿ ಯಿಂದ ಒಂದು ಗಳಿಗೆ ವಿರಾಮ ದೊರೆತೀತೆಂದು ಯೋಚಿಸಿದ್ದ ಮಾಣಿ ನಿರಾಶನಾಗಿ ಹಿಂದಿರುಗಿದ.

ಕುಬಿ ಆ ಸ್ಥಳವನ್ನು ತಲುಪಿದಾಗ ಅಲ್ಲೊಂದು ಜನದ ಸಂತೆಯೇ ನೆರೆದಿತ್ತು. ಬಾಯಮ್ಮ ಮತ್ತು ಓಬ್ರಿನ್ ಗೋಳೋ ಎಂದು ಬಾಯಿ ಬಡಿದುಕೊಳ್ಳುತ್ತಿದ್ದರು. ಒಂದು ಬಸ್ಸು ಅಲ್ಲೇ ಕೊಂಚ ದೂರದಲ್ಲಿ ಪಕ್ಕಕ್ಕೆ ಓಲಿಕೊಂಡು ಬದಿ ಯಲ್ಲಿ ನಿಂತಿತ್ತು. ಆ ರಸ್ತೆಯಲ್ಲಿನ ದೊಡ್ಡ ಕೊರ ಕಲ್ಲೊಂದಕ್ಕೆ ಅದರ ಚಕ್ರ ಧುಮುಕಿದ್ದ ರಿಂದ ಅದರ ಮುಂದುಗಡೆಯ ಆಕ್ಸಿಲ್ ಆಟದ ಸಾಮಾನಿನೋಪಾದಿಯಲ್ಲಿ ಮುರಿದು ಹೋಗಿತ್ತು. ಸರಿಯಾದ ಜಾಗದಲ್ಲಿಯೇ ಬಸ್ ನಿಂತಿದ್ದರಿಂದ ಬಾಯಮ್ಮನ ಬಾಯಿಗೆ ಒಳ್ಳೆಯ ಪ್ರೇಕ್ಷಕವರ್ಗ ದೊರೆತಿತ್ತು.

ಡಾಕ್ಟರು ದೂರದಲ್ಲಿ ಗಂಭೀರವಾಗಿ ಬರುತ್ತಿ ರುವುದನ್ನು ಕಂಡಕೂಡಲೇ ಮಾತು ನಿಧಾನ ಕಡಿಮೆಯಾಗತೊಡಗಿತು. ಒಬ್ಬ ಇನ್ನೊಬ್ಬನ ಕಿವಿಯಲ್ಲಿ, "ಇವರೇ ಅಂತೆ ಕಣೋ ಕುಬಿ ಡಾಕ್ಟರು! ಇವರ ಕೈಗುಣಾಂದರೆ ಸತ್ತೋರು ಮೇಲೆದ್ದು ಬರ್ತಾರಂತೆ. ಹೂವಪ್ಪನ ಸೊಸೆ ಹೊಟ್ಟೆ ನೋವು ತಡೆಯಲಾರದೆ ಭಾವಿ ಹಾರ-ಲಿಕ್ಕೆ ಹೋಗಿದ್ದಳಂತೆ. ಈ ಪುಣ್ಯಾತ್ಮನ ಔಷಧಿ ಒಂದೇ ಒಂದು ಹೊತ್ತು ತಗೊಂಡಿದ್ದೇ ಗುಣಾ ಯ್ತಂತೆ," ಎಂದು ಇನ್ನೊಬ್ಬನಿಗೆ ಗುಸುಗುಸು ಹೇಳಿದ. ಅವಕ್ಕೆ ಮತ್ತೊಬ್ಬ, "ಅದೇನೇ ಇದ್ದರೂ ಈ ಹುಡುಗೀ ಪ್ರಾಣ ಹಿಂದಕ್ಕೆ ಬರೋಲ್ಲ. ಈ ಮಾಲು ಹೋದ ಹಂಗೇ. ಕುತ್ತಿಗೆ ನಳಿಗೇನೇ ಕೊಯ್ದು ತುಂಡು ಮಾಡಿ ದ್ದಾರೆ. ಬ್ರಮ್ಮ ಬಂದರೂ ಆಗೊಲ್ಲ," ಎಂದ.

ಡಾಕ್ಟರು ಗುಂಪಿನಲ್ಲಿ ದಾರಿ ಬಿಡಿಸಿಕೊಂಡು ಸರಸರ ಬಳಿ ಸಾರಿದರು. ಹಿಂದಿನ ದಿನ ನಡೆದ ಖೂನಿ ಇರಬೇಕು. ನೊಣಗಳು ಗುಯ್ಯೆಂದು ರಕ್ತದ ವಾಸನೆಗೆ ಮುತ್ತಿದ್ದವು. ಒಂದು ತೊಡೆಯ ಮೂಳೆ ಮುರಿದಿತ್ತು. ಕಾಲು ಭಾಗ ಕುತ್ತಿಗೆಯನ್ನು ಕೈಯಿಂದ ಕುಯ್ದಿದ್ದರು. ತೊಡೆ ಎಲ್ಲಾ ರಕ್ತದ ಕಲೆ, ಲಂಗವೆಲ್ಲಾ ರಕ್ತ. ಅತ್ಯಾಚಾರದ ಪ್ರಕರಣದಂತಿತ್ತು. ಡಾಕ್ಟರು ಹೆಚ್ಚು ಮಾತಾಡದೆ ಏನೇನಾಗಿದೆ ಎಂದು ಪರಿ-ಶೀಲಿಸಿ ರಾಮರಾಯನ ಬಳಿ ಏನನ್ನೊ ಹೇಳಿ ಸರಸರ ಒಂದು ನೋಟ್ ಪುಸ್ತಕ ತೆಗೆದು

ಗುರುತು ಹಾಕಿಕೊಳ್ಳತೊಡಗಿದರು. ಕುಬಿ ಮುಖದಲ್ಲಿ ಒಂದು ಬಗೆಯ ಅಮಾನುಷ ಶಾಂತತೆ ಇತ್ತು. ಏನೋ ಚಿಕಿತ್ಸೆಯನ್ನೊ ಪವಾಡವನ್ನೊ ಎದುರು ನೋಡುತ್ತಿದ್ದ ಜನ ಕುಬಿ ಸುಮ್ಮನೆ ಗುರುತು ಹಾಕಿಕೊಳ್ಳತೊಡಗಿದುದನ್ನು ನೋಡಿ ಉದಾಸೀನದಿಂದ ಮತ್ತೆ ಮಾತಿಗೆ ತೊಡಗಿದರು. ಕಂಡಕ್ಟರು ಬಸ್ ಬಳಿ ಬಂದವನು, "ಅಲ್ಲೋ ಡ್ರೈವರಣ್ಣಾ, ಸೊಲ್ಪ ನೋಡೀ ಮಾಡೀ ಬಿಡಬಾರದೇನೋ, ಮಾರಾಯ. ಒಳ್ಳೆ ಹೆಣಾ ಕಾಯೋ ಯೋಗ ತಂದಿಟ್ಟೆಯಲ್ಲಾ ನನಗೆ," ಎಂದು ಗೊಣಗಿದ.

"ಹೆಣಾ ಬೇಕಾದರೆ ನೀನು ಕಾದುಕೋ. ಈ ಊರಿಗೆ ಬಸ್ಸು ಓಡಿಸೋದು ಮಾತ್ರ ಇನ್ನು ನನ್ನಿಂದ ಸಾಧ್ಯವಿಲ್ಲ. ಈ ಆಕ್ಸಲ್ ಮುರಿದಿರೋದು ನಾಲ್ಕನೇ ಸಾರಿ! ಕಂತ್ರಿ ನನ ಮಕ್ಕಳು ಈ ಚಂದಕ್ಕೆ ರೋಡು ರಿಪೇರಿ ಶಾಸ್ತ್ರ ಬೇರೆ ಮಾಡಿದ್ದಾರೆ. ನಮ್ಮ ಸಾವುಕಾರರ ಮುಖ ಹೆಂಗೆ ನೋಡಲೋ ಶಂಕರ. ಬಸ್ಸು ಹೀಗೆ ತಿಂಗಳಿಗೆ ಒಂದು ಆಕ್ಸಲ್ ವಾರಕ್ಕೆ ಒಂದು ಟಯರ್ರು ಹೋಗುತ್ತಿದ್ದರೆ ಅವರಾದರೂ ಎಲ್ಲಿಂದ ಸಂಬಳ ಕೊಡುತ್ತಾರೆ. ಈ ಹಾಳೂರಿಗೆ ರಸ್ತೆ ಯಾಕೆ? ಬಸ್ಸು ಯಾಕೆ? ಕಳ್ಳ ನನ ಮಕ್ಕಳ ಈ ಕೊಂಪೆಗೆ ಬೆಂಕಿ ಹಾಕಬೇಕು," ಎಂದು ಖೂನಿಯಾದ ಮಗಳಿಗೆ ಹಲುಬುತ್ತಿದ್ದ ಬಾಯಮ್ಮನಂತೆಯೇ ಹಲುಬತೊಡಗಿದನು. ಹಲವರು ಬಸ್ ಹಾಳಾದುದಕ್ಕೆ ಸಂತಾಪ ಸೂಚಿಸಿದರು. ಒಬ್ಬ, "ಆ ಸತ್ತಾರ್ ಸಾಬು ಕಂತ್ರಾಟು ಮಾಡ್ತೀರಂತ ಹನ್ನೆರಡು ಸಾವಿರ ತಿಂದಿದ್ದಾನೆ ಸೂಳೇ ಮಗ. ಏನು ಸತ್ತನೋ ಬಸರೀರಿಗೆ ಹೆರಿಗೆ ಆಗುತ್ತೆ ಇಲ್ಲಿ ಒಯ್ದರೆ," ಎಂದು ದಾರಿ ಕಂಟ್ರಾಕ್ಟು ಮಾಡಿದ ಸತ್ತಾರ್ ಸಾಬುಗೆ ಬಯ್ಯತೊಡಗಿದ. "ಸೈ ಸೈ, ಎಲ್ಲಾ ಇಂತಾ ಕುತ್ತಿಗೆ ಕುಯ್ಯೋ ಸೂಳೇ ಮಕ್ಕಳೆ," ಎಂದು ಇನ್ನೊಬ್ಬ ಉತ್ತರಿಸಿದ.

ಆ ರಸ್ತೆಗೆ ಒಂದು ಹಿನ್ನೆಲೆಯೂ ಒಂದು ಚರಿತ್ರೆಯೂ ಇತ್ತು. ಊರವರು ಸತ್ತಾರ್ ಸಾಬಿಯನ್ನು ಬಯ್ದಂತೆಯೇ ಸತ್ತಾರ ಸಾಬಿ ಊರವರನ್ನು ಹೀನಾಮಾನಾ ಬಯ್ಯುತ್ತಿದ್ದ. ಏಕೆಂದರೆ ಆ ರಸ್ತೆಗೆ ಮಂಜೂರಾಗಿದ್ದ ಹನ್ನೆರಡು ಸಾವಿರ ರೂಪಾಯಿಗಳಲ್ಲಿ ಎರಡು ಸಾವಿರ ರೂಪಾಯಿಗಳು ಅನಧಿಕೃತವಾಗಿ ಇನ್ನೂ ಊರವರಿಂದ ಬರಬೇಕಿತ್ತು. ಸತ್ತಾರ್ ಸಾಬು ಊರವರಿಂದ ಹಣ ಸಂದಿದೆ ಎಂದು ಹೇಳಿ ತಾಲ್ಲೂಕು



ಬೋರ್ಡಿನಿಂದ ಮಂಜೂರಾದ ಹಣ ಪಾವತಿ ಮಾಡಿಸಿಕೊಂಡಿದ್ದ. ಇತ್ತ ಊರವರೆಲ್ಲ ಕುಯಿಲಾಗಲಿ ಹಣದ ಬದಲು ಭತ್ತವನ್ನೇ ಕೊಡುತ್ತೇವೆ ಎಂದೂ, ಕುಯಿಲಾದ ನಂತರ ಮಾರಿ ಹಣವನ್ನೇ ಕೊಡುತ್ತೇವೆಂದೂ ಸಬೂಬು ಹೇಳಿ ತಪ್ಪಿಸಿಕೊಂಡು ಸತ್ತಾರ್ ಸಾಬೂಗೆ ತಾಲ್ಲೂಕು ಬೋರ್ಡಿಂದ ಹಣ ಪಾವತಿಯಾಗಲು ರಸ್ತೆ ಕೆಲಸ ಸಂಪೂರ್ಣ ಆಗಿದೆ ಎಂದು ಬರೆದುಕೊಟ್ಟರು. ಕೊನೆಗೆ ಊರಿನವರ ಪಾಲು ಬರದೇ ಹೋದಾಗ ಸತ್ತಾರ್ ಸಾಬು ಗಲಾಟೆ ಮಾಡಿದುದಕ್ಕೆ ರಸ್ತೆ ಕೆಲಸ ಸರಿಯಾಗಲಿಲ್ಲ, ನಾವು ತಾಲ್ಲೂಕು ಬೋರ್ಡಿಗೆ ತಕರಾರು ಹಾಕುತ್ತೇವೆ ಎಂದು ಗಲಾಟೆ ಮಾಡಿದರು. ಹೀಗಾಗಿ ಸತ್ತಾರ್ ಸಾಬು ಧೂಪದ ಮರದ ತಿರುವಿನಲ್ಲಿ ಚರಂಡಿಗೆ ಅಡ್ಡಲಾಗಿದ್ದ ಭಾರಿ ಬಂಡೆಯೊಂದನ್ನು ತೆಗೆಯದೆ ಹಾಗೇ ಬಿಟ್ಟುಬಿಟ್ಟ. ಅದು ನೆಲದೊಳಗೂ ಬಹಳ ಆಳವಾಗಿ ಇದ್ದುದರಿಂದ ಅದನ್ನು ಡೈನಮೈಟು ಹಾಕಿ ಒಡೆದೇ ತೆಗೆಯಬೇಕಿತ್ತು. ಕುಬಿ ಬಹಳ ಹೊಡೆದಾಡಿ ತಾಲ್ಲೂಕು ಬೋರ್ಡಿನಲ್ಲಿ ಆ ಬಂಡೆ ತೆಗೆಸಲು ಏರ್ಪಾಡು ಮಾಡಿದ್ದ; ಕುಬಿಯ ಮನಸ್ಸಿನಲ್ಲಿ ಆ ಬಂಡೆಯು ಇಡೀ ಊರಿನ ಹಿಂದುಳಿದಿರುವಿಕೆಗೆ ಒಂದು ಪ್ರತೀಕವಾದಂತೆ ಇತ್ತು.

ಊರವರಿಗೆ ಆ ಬಂಡೆ ತೆಗೆಸುವ ಇಷ್ಟವೇ ಇದ್ದಂತಿರಲಿಲ್ಲ. ಆ ಬಂಡೆಯ ಮೇಲೆ ಒಂದು ರಣ ಕೂರುತ್ತದಂತೆ ಇತ್ಯಾದಿ ಕಲ್ಪನೆಗಳನ್ನು ಸೃಷ್ಟಿಸಿದ್ದರು.

ಭೈರಾಪುರದ ಜನರಿಗೆ ಒಂದು ಬಗೆಯ ಗೂಢ ದ್ವೇಷ ಆ ಬಂಡೆಯ ಮೇಲೆ ಮೂಡತೊಡಗಿತ್ತು. ಆ ರಸ್ತೆಯಾದ ಮೇಲೆ ಹಾಸನದಿಂದ ಲೇವಿ ಭತ್ತ, ಸಾಲ ಮುಂತಾದುವುಗಳ ವಸೂಲಿಗೆ ಡೆಪ್ಯೂಟಿ ಕಮೀಷನರ್ ಮುಂತಾದವರು ಬರತೊಡಗಿದ್ದರು. ಯಾವುಯಾವುವೋ ನಿಧಿಗಳಿಗೆ ವಂತಿಗೆ ಕೂಡಿಸುವವರೂ ಒಳ್ಳೆಯ ರಸ್ತೆ ನೋಡಿ ದಿಕ್ಕು ಬದಲಾಯಿಸಿ ಇತ್ತ ಬರತೊಡಗಿದರು. ನೆಂಟರಿಷ್ಟರ ಓಡಾಟವೂ ಹೆಚ್ಚತೊಡಗಿತು. ಕಾಫಿ ಹಾಲು ಇತ್ಯಾದಿಗಳೂ ಎಲ್ಲರ ಮನೆಯಲ್ಲಿ ಹೆಚ್ಚು ಖರ್ಚಾಗತೊಡಗಿತು. ಆಗಿಂದಾಗ್ಗೆ ಶರಾಬು ಕಂಟ್ರಾಕ್ಟರ್ ವೆಂಕಟಸೆಟ್ಟಿಯ ಕಡೆಯ ಎಕ್ಸೈಸ್ ಪೋಲೀಸಿನವರೂ ಗುಂಡಾಗಳೂ ಗುಮಾನಿ ಇದ್ದ ಮನೆಗಳ ಮೇಲೆಲ್ಲಾ ದಾಳಿ ಮಾಡತೊಡಗಿದರು. ಕಳ್ಳಭಟ್ಟಿ ಉಪಕರಣಗಳ ಜೊತೆಗೆ ಸಿಕ್ಕಿದ್ದನ್ನೆಲ್ಲಾ ದೋಚತೊಡಗಿದರು. ಕಾಫಿ ಕಳ್ಳ ಸಾಗಾಣಿಕೆ ಹಿಡಿಯುವವರು ಸಹ ವಕ್ಕರಿಸಿ ಹಿತ್ತಿಲಲ್ಲಿದ್ದ ಮೂಟೆ ಬಿಚ್ಚಿಸತೊಡಗಿದರು- ಇವುಗಳೆಲ್ಲದರ ದೆಸೆಯಿಂದ ಅಪ್ರಜ್ಞಾಪೂರ್ವಕವಾಗಿ ಭೈರಾಪುರದ ಜನ ಆ ಹೊಸ ರಿಪೇರಿಯಾದ ರಸ್ತೆಯನ್ನು ದ್ವೇಷಿಸತೊಡಗಿದರು.

ಮಳೆಗಾಲ ಈ ನಡುವೆ ಆರಂಭವಾಗಿ ಮಳೆ ನೀರಿನ ಭಾರೀ ಪ್ರವಾಹ ಎದುರು ಬಂಡೆಗೆ ಅಪ್ಪಳಿಸಿ ಅಡ್ಡ ತಿರುಗಿ ರಸ್ತೆಯ ಮೇಲೆಲ್ಲಾ ಹರಿಯತೊಡಗಿತ್ತು. ರಸ್ತೆಗೆ ಹಾಕಿದ್ದ ಬೇಬಿಜಲ್ಲಿ ಎಲ್ಲಾ ಪಕ್ಕಕ್ಕೆ ಜರುಗಿ ಜರುಗಿ ಉರುಳಿ ಚರಂಡಿ ಸೇರಿತು. ಎತ್ತಿನ ಗಾಡಿಗಳು ತಿರುಗಾಡಿದುವು. ಉಕ್ಕಿನ ಹಳಿ ಕಟ್ಟಿಸಿದ್ದ ಅವುಗಳ ಚಕ್ರದ ಜಾಡಿನಲ್ಲಿ ನೀರು ಹರಿದೂ ಹರಿದೂ ಭಾರೀ ಕೊರಕಲಾಗಿ ಅಲ್ಪ ಕಾಲದಲ್ಲೇ ಕಾರು ಜೀಪುಗಳ ಸಂಚಾರಕ್ಕೆ ರಸ್ತೆ ಅಯೋಗ್ಯವಾಗಿ ಹೋಯ್ತು. ಲೈನು ಬಸ್ಸು ಟ್ರಿಪ್ಪಿಗೆ ಒಂದು ಸಾರಿಯಂತೆ ಗ್ಯಾರೇಜಿಗೆ ಹೋಗಿ ಬರತೊಡಗಿತ್ತು. ಸತ್ತಾರ್ ಸಾಬು ಕಣ್‌ಕಟ್ಟಿಗೆ ಕತ್ತರಿಸಿದ್ದ ಈಚಲು ಗುತ್ತಿಯ ಬಡ್ಡೆಗಳು ಚಿಗುರಿ ರಸ್ತೆಯ ಮಧ್ಯೆ ರಾರಾಜಿಸತೊಡಗಿದುವು. ರಸ್ತೆಯುದ್ದಕ್ಕೂ ಗಾಡಿಗಳು ಹಿಂದಕ್ಕೆ ಹೋಗದಂತೆ ಚಕ್ರಕ್ಕೆ ಕೊಟ್ಟ ದೊಡ್ಡ ದೊಡ್ಡ ಕಲ್ಲುಗಳು ಬೇರೆ ಬಿದ್ದಿದ್ದುವು. ಕುಬೇರ ಈ ಬಂಡೆ ತೆಗೆಸದಿದ್ದರೆ ಉದ್ಧಾರವೇ ಇಲ್ಲೆಂದು ಇಂಜಿನಿಯರುಗಳನ್ನೂ ತಾಲ್ಲೂಕು ಮಂಡಳಿಯ ಅಧ್ಯಕ್ಷರನ್ನೂ ಕಂಡು ಯತ್ನಿಸತೊಡಗಿದನು.

ಭೈರಾಪುರದವರಿಗೆ ಯಾರಿಗೂ ಆ ಬಂಡೆ ತೆಗೆಸುವುದು ಇಷ್ಟವೇ ಇರಲಿಲ್ಲ. ಆದರೂ ಯಾರೂ ಬಾಯಿಬಿಟ್ಟು ಕುಬಿ ಡಾಕ್ಟರ ಬಳಿ ಹೇಳಲಿಲ್ಲ. ಒಳಗಿಂದೊಳಗೇ, "ನಮಗೇನು ಕಾರೋ ಜೀಪೋ! ನಮಗೊಂದು ಎತ್ತಿನ ಗಾಡಿಗೆ ಹಾದಿಯಾದರೆ ಸಾಕು ಅಂತ ಇಟ್ಟುಕೊಳ್ಳಿ," ಎಂದೆನ್ನುತ್ತಿದ್ದರು.

ಈ ಎಲ್ಲಾ ಚರಿತ್ರೆಯ ದೆಸೆಯಿಂದಲೇ

ಧೂಪದ ಮರದ ತಿರುವಿನ ಬಂಡೆ ಕುಬಿಗೆ ನಿರಾಯಾಸವಾಗಿ ಯಾವ ಜಾಗವೆಂದು ಗೊತ್ತಾದುದು.

ಕುಬಿ ಎಷ್ಟೋ ಕೊಲೆ ಖೂನಿ ವಿಷಪ್ರಾಶನಗಳನ್ನು ನೋಡಿದ್ದ. ಪ್ರತಿ ಬಾರಿಯೂ ಅದಷ್ಟು ನಿರ್ಭಾವದಿಂದ ಇವುಗಳನ್ನು ವೀಕ್ಷಿಸಿ ಅದಷ್ಟು ವಸ್ತುನಿಷ್ಠನಾಗಿ ತನ್ನ ವರದಿಯನ್ನು ತಯ್ಯಾರು ಮಾಡಿ ಕಳಿಸುತ್ತಿದ್ದ. ಕೋರ್ಟಿನಲ್ಲೂ ಕೂಡ ಜಡ್ಜರು ಲಾಯರುಗಳು ಕುಬಿಯ ಮಾತುಗಳನ್ನು ಬಹಳ ಗೌರವಿಸುತ್ತಿದ್ದರು. ಕುಬಿ ಸ್ಥೂಲವಾಗಿ ಶವಪರೀಕ್ಷೆ ಮಾಡಿ ಪೋಲೀಸ್ ಮಹಜರಿನ ನಂತರ ವಿವರ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳಿಸಿರೆಂದು ರಾಮರಾಯನಿಗೆ ತಿಳಿಸಿ ಆಸ್ಪತ್ರೆಯ ದಾರಿ ಹಿಡಿದ. ಬಸ್ ಕೆಟ್ಟುದರಿಂದ ಭೈರಾಪುರದ ಹಲವು ಬಸ್ ಪ್ರಯಾಣಿಕರೂ ಹಲವು ದಾರಿಹೋಕರೂ ಡಾಕ್ಟರೊಡನೆ ಊರಿನ ದಾರಿ ಹಿಡಿದರು. ಅವರಲ್ಲೊಬ್ಬ ತನಗೆ ಖೂನಿ ಬಗ್ಗೆ ಗೊತ್ತಿದ್ದುದಷ್ಟನ್ನು ಎಲ್ಲರಿಗೂ ವಿವರಿಸತೊಡಗಿದ. ಇಯಾಲ ಎಷ್ಟು ಹೊತ್ತಾದರೂ ಮನೆಗೆ ಬಾರದುದನ್ನು ಕಂಡು ಬಾಯಮ್ಮ ಊರೆಲ್ಲಾ ಹುಡುಕಿ ಕೊನೆಗೆ ಪಕ್ಕದ ಗುಬ್ಬಿಗದ್ದೆಯೆಂಬ ಊರಿನಲ್ಲಿದ್ದ ತಂಗಿಯ ಮನೆಗೇನಾದರೂ ಹೋಗಿರಬಹುದೇ ಎಂದು ಅಲ್ಲಿಗೆ ಹೋದಳಂತೆ. ಈ ನಡುವೆ ದಾರಿಯಲ್ಲಿ ಗಾಡಿ ಹೊಡೆದುಕೊಂಡು ಬರುತ್ತಿದ್ದ ಅರವರ ಸೇಸನಿಗೆ ಇಯಾಲಳ ಹಾಲಿನ ಕ್ಯಾನಿನ ಮುಚ್ಚಳ ಸಿಕ್ಕಿತಂತೆ. ಆತ ಅದು ಇಯಾಲಳದೇ ಎಂದು ಗುರುತಿಸಿ ಒಯ್ದು ಓಬ್ರಿನ್‌ಗೆ ಕೊಟ್ಟನಂತೆ. ಅಲ್ಲಿಂದ ಅವಳ ತಂದೆ ಓಬ್ರಿನ್ ಗಾಡಿ ಸೇಸ ಹಾಗೂ ಇನ್ನಿಬ್ಬರೂ ಸೇರಿ ಇಯಾಲಳ ಖೂನಿಯನ್ನು ಪತ್ತೆ ಮಾಡಿದ್ದರಂತೆ. ಬುಡುಬುಡುಕೆಯಂತೆ ಗೊಣಗುತ್ತಿದ್ದ ಇವನ ಮಾತಿನ ಮೇಲೆ ಕುಬಿ ಹೆಚ್ಚಿಗೆ ಗಮನ ಕೊಡಲಿಲ್ಲ. ಸದ್ಯಕ್ಕೆ ಅವನಿಗೆ ಇಯಾಲಳ ಸಾವು ಖೂನಿಯೋ ಅತ್ಯಾಚಾರವೋ ಎಂಬ ಸಮಸ್ಯೆಯಾಗಿತ್ತು. ಏಕೆಂದರೆ ಅವಳಿಗೆ ವಿಪರೀತ ಹೊಟ್ಟೆ ಸೊಂಟ ನೋವೂ ರಕ್ತಸ್ರಾವವೂ ಇತ್ತೆಂದು ಬಾಯಮ್ಮ ಹೇಳಿದ್ದಳು. ಹೀಗಾಗಿ ಇದೊಂದು ಒಗಟಿನಂತೆ ತೋರುತ್ತಿತ್ತು; ಪೋಸ್ಟ್‌ಮಾರ್ಟಮಿಗೆ ಕಳಿಸಿದಾಗ ಆಲೋಚಿಸೋಣೆಂದು ತನ್ನ ವೃತ್ತಿಯ ಪರಿಧಿಯೊಳಗೇ ಅದಷ್ಟು ಪತ್ತೆ ಮಾಡಬೇಕೆಂದು ಅಂದುಕೊಂಡನು.

೫

ಕುಬಿಗೆ ಪತ್ತೇದಾರಿ ಕೆಲಸ ಖಂಡಿತಾ ಇಷ್ಟವಿಲ್ಲದ್ದು. ಆದರೆ ಆ ದಿಕ್ಕಿನಲ್ಲಿಯೂ ಕುಬಿಯು ಪ್ರಜ್ಞೆ ಕೆಲಸ ಮಾಡಬಲ್ಲುದಾಗಿತ್ತು. ಏಕೆಂದರೆ ಅವನು ಬಯಸಲಿ ಬಿಡಲಿ, ಕುಬಿಯದು ಒಂದು ಬಗೆಯ ಪತ್ತೇದಾರಿ ಕೆಲಸವೇ. ರೋಗದ ಸ್ವರೂಪ, ಲಕ್ಷಣ, ದೇಹದಲ್ಲಿ ಅದು ಅಭಿವ್ಯಕ್ತವಾಗುವ ಬಗೆ, ರೋಗಿಯ ಚರಿತ್ರೆ ಇತ್ಯಾದಿಗಳನ್ನೆಲ್ಲಾ ಅರಿತು ಸಾಮರಸ್ಯಗೊಳಿಸಿ ಒಂದು ಕಾರಣ ಪತ್ತೆ ಮಾಡಿ ಔಷಧಿ ಕೊಡುವುದು ಪತ್ತೇದಾರೀ ಕೆಲಸವಲ್ಲವೇ! ಆದರೆ ವೈದ್ಯನಿಗೂ ಪತ್ತೇದಾರನಿಗೂ ಇರುವ ಒಂದು ವಿಶೇಷ ವ್ಯತ್ಯಾಸ ಮಾತ್ರ ಕುಬಿಯಲ್ಲಿತ್ತು. ಕೊಲೆಪಾತಕನನ್ನೋ ಕೇಡಿಯನ್ನೋ ಪತ್ತೆ ಮಾಡಿ ನೇಣುಗಂಬಕ್ಕೆ ಹತ್ತಿಸಬೇಕೆಂಬ ವಿಶಿಷ್ಟ ಛಲ ಕುಬೇರನಲ್ಲಿ ಇರಲಿಲ್ಲ. ಅವನ ವೈದ್ಯಕೀಯ ಚರಿತ್ರೆಯ ದಿನಚರಿಯಲ್ಲಿ ಯಾವುದೇ ಮನುಷ್ಯನೂ ಕಾರಣನಲ್ಲದ ಅನೇಕ ಸಾವನ್ನೂ ನೋವನ್ನೂ ಕಂಡಿದ್ದ. ಭೀಕರ ರೋಗ ರುಜಿನಗಳಿಗೆ ತುತ್ತಾಗಿ ಕುಬಿಯ ನಿತಾಂತ ಪ್ರಯತ್ನವನ್ನೂ ಮೀರಿ ಸಾವನ್ನಪ್ಪಬೇಕಾದವರನೇಕರನ್ನು ಕಂಡಿದ್ದ. ವಿಚಾರಣೆಯೇ ಇಲ್ಲದ ಈ ಶಿಕ್ಷಾಕ್ರಮದೆದುರು ಯಾರೋ ಒಬ್ಬನನ್ನು ಕೊಂದ ಯಾವನೋ ಒಬ್ಬನನ್ನು ಬೆನ್ನು ಹತ್ತಿ ಪತ್ತೆ ಮಾಡಿ ಗಲ್ಲಿಗೇರಿಸುವುದು ಒಂದು ಭಾರೀ ಶೌರ್ಯದಂತೆ ಕಂಡಿರಲಿಲ್ಲ ಕುಬೇರನಿಗೆ.

ಆದರೂ ಕುಬಿ ಇಯಾಲಳ ಕೊಲೆಯ ಬಗ್ಗೆ ತನ್ನದೇ ಆದ ರೀತಿಯಲ್ಲಿ ಆಲೋಚಿಸುತ್ತಿದ್ದ, ಈ ಜಗತ್ತನ್ನು ಇನ್ನೊಂದು ಹೆಜ್ಜೆ ಹೆಚ್ಚಾಗಿ ಅರಿತುಕೊಳ್ಳಲು ಸಾಧ್ಯವೇ ಎಂದು. ಸಾಯಂಕಾಲದ ಹೊತ್ತಿಗೆ ಕಂಪೌಂಡರ್ ರಾಮರಾಯ ಸುಸ್ತಾಗಿ ಭಾರವಾದ ಹೆಜ್ಜೆಗಳನ್ನು ಹಾಕುತ್ತ ಆಸ್ಪತ್ರೆ ಕಡೆಗೆ ಬಂದ. ಇಯಾಲಳ ಕೊಲೆ ನಡೆದ ಸ್ಥಳ ರಾಮಣ್ಣಗೌಡ ಎಂಬವನ ತೋಟದೊಳಗಿತ್ತು. "ಅವನೂ ಓಬ್ರಿನ್ ತೋಟದ ಮೇನೇಜರು ವಿಠ್ಠಲರಾಯನೂ ಹಾಸನದ ಪೋಲೀಸ್

ಸುಪರಿಂಟೆಂಡೆಂಟ್‌ರೂ ಎಲ್ಲಾ ಬಂದಿದ್ದರು. ಅಲ್ಲಿ ಇದ್ದೋರದ್ದು ಹೋದವರದ್ದು ಬಂದವರದ್ದು ಎಲ್ಲಾ ಹೆಸರು ವಿಳಾಸ ತಗೊಳ್ಳುತ್ತ ಇದ್ದರು. ಯಾರ್‍ಯಾರಿಗೆ ಏನೇನು ಗ್ರಹಚಾರ ಕಾದಿದೆಯೋ. ಥುತ್ ನಾನು ಬೇಜಾರಾಗಿ ಹೇಳಿದೆ. ಡಾಕ್ಟರು ಪರೀಕ್ಷೆ ಮಾಡೋದೆಲ್ಲ ಮಾಡಿಯಾಗಿದೆ. ಇನ್ನು ಹೊಟ್ಟೆ ಕುಯ್ದು ನೋಡಲಿಕ್ಕೆ ಇದೇನು ಪಾಯ್ಸನ್ ಕೇಸಲ್ಲವಲ್ಲ; ಡಿಟೇಲ್ ಪೋಸ್ಟ್ ಮಾರ್ಟಮ್ ಯಾಕೆ, ಅಂತ. ಥೂ ಆ ಗೋಳು ಆ ರಂಪ ಯಾರಿಗೆ ಬೇಕು ಸಾರ್. ನನ್ನ ವೈರೀಗೂ ಬೇಡ ಆ ಹಣೇಬರಹ. ಅದ್ಯಾವ ಮುಂಡೇಮಗ ಸಾರ್ ಈ ಕೆಲಸ ಮಾಡಿದೋನು. ಬಂಗಾರದಂಥ ಹುಡುಗಿ. ಒಟ್ಟಿನಲ್ಲಿ ಇದೇನು ಕೇಸು ಅಂತ ಸಾರ್ ನಿಮ್ಮ ಅಭಿಪ್ರಾಯ ?" ಎಂದು ಡಾಕ್ಟರತ್ತ ತಿರುಗಿದ.

"ರಾಮರಾವ್, ಡಿಟೇಲ್ ಪೊಸ್ಟ್ ಮಾರ್ಟಂ ಮಾಡಬೇಕು ಅಂತ ನಿಮಗೆ ಹೇಳಿ ತಗೊಂಡು ಬನ್ನಿ ಬಾಡಿಯನ್ನ ಅಂತ ಹೇಳಿರಲಿಲ್ಲವೆ? ನಾಳೆ ಕೋರ್ಟಿನಲ್ಲಿ ಕೇಸು ಪರೀಕ್ಷೆ ಮಾಡ್ತ ಉತ್ತರ ಹೇಳೋವನು ನೀವೋ ನಾನೋ? ನೀವು ಏನೂ ಬೇಡ ಎಂದರೆ ಆ ಪೋಲೀಸಿನವರು ಇನ್ನೂ ಅಲಕ್ಷ ಮಾಡುತ್ತಾರೆ," ಎಂದು ಕುಬಿ ರಾಮರಾಯನ ಮೇಲೆ ಒಮ್ಮೆಲೇ ರೇಗಿದ.

"ಇಲ್ಲಾ ಸಾರ್, ಅಲಕ್ಷ ಮಾಡುವಂತೆ ಕಾಣಲಿಲ್ಲ. ಪೋಲೀಸು ನಾಯಿ ತಗೊಂಡು ಬರ್‍ತಾರಂತೆ. ಭೈರಾಪುರಕ್ಕೆ ಸ್ಪೆಷಲ್ ಸಿ ಐ ಡಿ ಸ್ಕ್ವಾಡನ್ನು ಕಳಿಸುತ್ತಾರಂತೆ. ಆದ್ದರಿಂದ ಡಿಟೇಲ್ ಪೋಸ್ಟ್‌ಮಾರ್ಟಂಗೆ ಕಳಿಸುತ್ತಾರೆಂದು ತೋರುತ್ತದೆ," ಎಂದು ಸಬೂಬು ಹೇಳುವ ಧಾಟಿಯಲ್ಲಿ ಹೇಳಿ ರಾಮರಾಯ ಬೀಸುವ ದೊಣ್ಣೆ ತಪ್ಪಿಸಿಕೊಳ್ಳುವಂತೆ ನುಸುಳಿಕೊಂಡ.

ಆದರೆ ಕೊನೆಗೆ ನಿಜವಾದುದು ಕುಬೇರನ ಸಂಶಯವೇ. ಡಾಕ್ಟರು ಈಗಾಗಲೇ ಪರೀಕ್ಷೆ ಮಾಡಿದ್ದಾರಲ್ಲ ಇನ್ನು ಪರೀಕ್ಷೆ ಮಾಡಿ ಅವರೇನು ತಾನೆ ಹೇಳಿಯಾರು ಇನ್ನು ಇರೋದೆಲ್ಲಾ ನಮ್ಮ ಮೇಲೆ, ಎಂದು ಪೋಲೀಸ್ ಇನ್‌ಸ್ಪೆಕ್ಟರ್ ಅಸ್ಗರ್ ಹೇಳಿದ. ಏಕೆಂದರೆ ಆದಷ್ಟು ಡಾಕ್ಟರ ತನಿಖೆ ಕಡಿಮೆ ಇದ್ದಷ್ಟೂ ಕೂಡ ತಮ ಕಿತಾಪತಿಗೆ ಸುಲಭ. ಇದರೊಡನೆ, "ಅಯ್ಯೋ ಪಾಪ, ಜೀವದಾಗಿದ್ದಾಗಿನ ಹಿಂಸೆ ಅನುಭೋಗಿಸಿದ್ದೇ ಸಾಕು. ಇನ್ನು ಸತ್ತು ಸ್ವಾಮೀ ಪಾದ ಸೇರಿದ ಮೇಲೂ ಯಾಕೆ ನಾವು ತೊಂದರೆ ಕೋಡೋಣ. ಅತ್ತಲಾಗಿ ಹೆಣ ಕೊಟ್ಟುಬಿಡಿ ಇನ್‌ಸ್ಪೆಕ್ಟರೇ," ಎಂದು ರಾಮಣ್ಣಗೌಡ ಬೇರೆ ಭಾರೀ ಉಪಕಾರ ಮಾಡುವವನ ಧಾಟಿಯಲ್ಲಿ ಹೇಳಿದ. ಪಾಪ ತಂದೆ ತಾಯಿಯ ಕರುಳು ಚುರ್ ಎಂದಿತು ಈ ಧಾಟಿಯ ಉದ್ಗಾರಗಳಿಂದ. ಅವರಿಗೆ ಇಯಾಲಳ ಹೆಣವನ್ನು ಕುಯ್ದು ವಿರೂಪಗೊಳಿಸಿ ಮಾಂಸದ ಮೂಟೆ ಕೊಡುತ್ತಾರೆಂದು ಬೇಸರವಾಗಿತ್ತು. ಹೀಗಾಗಿ ಓಬ್ರಿನ್ ವಿಠ್ಠಲರಾಯನ ಮುಖಾಂತರ ಇನ್‌ಸ್ಪೆಕ್ಟರಿಗೆ ಹೇಳಿಸಿ ಶವ ಸುಪರ್ದಿಗೆ ತೆಗೆದುಕೊಂಡ. ಕ್ರಿಶ್ಚಿಯನರ ರೀತ್ಯ ಆಕೆಗೆ ಶವಸಂಸ್ಕಾರವೂ ಆಯ್ತು. ಪುಟ್ಟ ಸುಂದರಿ ಇಯಾಲಳ ಜೀವಜ್ಯೋತಿ ಗತಕಾಲಕ್ಕೆ ಸೇರಿಹೋಯ್ತು.

ಈ ಘಟನೆಯ ನಂತರ ಕುಬೇರನ ಮನಸ್ಸು ಯಾವುದೋ ಒಂದು ಅವ್ಯಕ್ತ ಆಂದೋಳನಕ್ಕೆ ಸಿಕ್ಕಿಕೊಂಡಿತು. ತನ್ನ ಧ್ಯೇಯ ವೃತ್ತಿಗಳಿಂದ ಆಚೀಚೆಗೆ ತುಯ್ಯದಂತೆ ಮನಸ್ಸು ನಿಲ್ಲಿಸಲು ಹೋರಾಡುತ್ತಿದ್ದ ಆತ. ರಾಮರಾಯ ಎಷ್ಟೊ ಸಾರಿ ಇಯಾಲಳ ಕೊಲೆಯ ಬಗ್ಗೆ ವ್ಯಕ್ತಪಡಿಸಿದ ಸಂದೇಹ, ಶಂಕೆ, ವಾದಗಳಲ್ಲೆಲ್ಲ ಭಾಗವಹಿಸಿ ಚರ್ಚಿಸುತ್ತಿದ್ದ. ಮೊದಲು ರಾಮರಾಯ ದನ ಕಾಯುವವರು ಎಂದು ವಾದಿಸಿದ. ಆದರೆ ದನ ಕಾಯುವವರಾರೂ ಆ ಕಡೆಗೆ ದನ ಮೇಯಿಸಲು ಹೋಗುತ್ತಿರಲಿಲ್ಲ. ಎರಡನೆಯದು ದನ ಕಾಯುವ ಹುಡುಗರಲ್ಲಿ ಯಾರೂ ಕೂಡ ದೊಡ್ಡವರಿರಲಿಲ್ಲ. ಎಲ್ಲಾ ಚಿಕ್ಕ ಹುಡುಗರು. ಲೈಂಗಿಕ ಅತ್ಯಾಚಾರಗಳಿಗೆ ಎಳಸುವಂಥ ವಯಸ್ಸು ಅವರದಾಗಿರಲಿಲ್ಲ. ಅತ್ಯಾಚಾರದ ವಿಷಯ ಬಂದಾಗಲೆಲ್ಲಾ ತಾನು ಶವವನ್ನು ಸವಿವರವಾಗಿ ಪರೀಕ್ಷಿಸದಿದ್ದುದು ಅಪರಾಧವಾಯ್ತೆಂದು ಮಿಸುಗಾಡುತ್ತಿದ್ದ ಕುಬಿ.

ಸಂತೆಮಾಳದಲ್ಲಿ ಮೂರು ನಾಲ್ಕು ಜನ ಹುಚ್ಚರಿದ್ದರು. ಇವರು ಇಡೀ ಭೈರಾಪುರಕ್ಕೆ ಚಿರಪರಿಚಿತರಾದವರಾಗಿದ್ದರು. ಆದರೆ ಇವರ ಬಳಿ ಯಾವುದೇ

ಆಯುಧಗಳನ್ನು ಯಾರೂ ಎಂದೂ ನೋಡಿರಲಿಲ್ಲ. ಜೊತೆಗೆ ಉಪದ್ರವಕಾರಿ ಬುದ್ಧಿಯೇ ಆಗಲಿ ಹಿಂಸಾಪ್ರವೃತ್ತಿಯೇ ಆಗಲಿ ಇವರಲ್ಲಿ ಅಷ್ಟೊಂದು ಕಂಡುಬರುತ್ತಿರಲಿಲ್ಲ. ಕುಬಿ ಆದರೂ ಸಂಶಯ ವ್ಯಕ್ತಪಡಿಸಿ ಇವರಿಂದ ಅತ್ಯಾಚಾರ ಕಾಮವಿಕಾರಗಳು ಸಾಧ್ಯವೆಂದೂ ಏಕೆಂದರೆ ಸ್ತ್ರೀಸಂಪರ್ಕವಿಲ್ಲದೆ ಲೈಂಗಿಕಾಸಕ್ತಿ ವಿಪರೀತವಾಗಿರಬಹುದೆಂದೂ ತಲೆ ಕೆಟ್ಟಿದ್ದರೂ ಸಹ ದೇಹ ಕೆಟ್ಟಿರುವುದಿಲ್ಲೆಂದೂ ಹೇಳಿದ. ರಾಮರಾಯ ಇವರ ಮೇಲೆ ಜನ ಬಿಟ್ಟು ಇವರ ಚರ್ಯೆ ಗಮನಿಸಬೇಕು ಎಂದು ಹೇಳಿದ. ರಾಮರಾಯನ ಚಿಂತನೆ ಆಲೋಚನೆ ಉತ್ಸಾಹಗಳಿಗೆ ತನ್ನದೊಂದು ಹೊಸ ತಿರುವು ದೃಷ್ಟಿಕೋನ ಕೊಡುತ್ತಿದ್ದ ಕುಬಿ.

ಪೋಲೀಸರು ಮೊದಲು ತೀರಾ ನಿರಾಸಕ್ತರಾಗಿ ಹೆಣವನ್ನು ಕುಯ್ಯಿಸದೆ ಕೊಟ್ಟಿದ್ದಕ್ಕಾಗಿ ಹದಿನೈದು ರೂಪಾಯಿ ಲಂಚ ತೆಗೆದುಕೊಂಡು ಅರ್ಥಾತ್ ಸಂಬಂಧವಿಲ್ಲದವರನ್ನು ಕರೆದು ಛಳಿ ಸುತ್ತಾ ಕಾಲ ಕಳೆಯುತ್ತಿದ್ದರು.

ಈ ನಡುವೆ ಭೈರಾಪುರದ ಜಮೀನು ಅಡಮಾನ ಬ್ಯಾಂಕಿನ ಚುನಾವಣೆ ಆಯ್ತು. ಪ್ಲಾಂಟರ್ ಪಿಂಟೋ, ಸತ್ತಾರ್ ಬಾಬು, ಶಿವಣ್ಣ, ವೀರಪ್ಪ, ಬಸವಯ್ಯ, ಗುರುರಾಯ ಇತ್ಯಾದಿ ಲಿಂಗಾಯತರ ಗುಂಪಿನಲ್ಲಿ ಒಬ್ಬನೇ ಒಬ್ಬನೂ ಚುನಾಯಿತನಾಗದಂತೆ ಒಕ್ಕಲಿಗರು ನೋಡಿಕೊಂಡರು. ಅನೇಕ ಓಟುದಾರರನ್ನು ತಮ್ಮ ಕಡೆಗೆ ಹಣ ಕೊಟ್ಟು ಒಲಿಸಿಕೊಂಡು ಇನ್ನು ಕೆಲವರನ್ನು ದೇಶಾಂತರ ಕರೆದೊಯ್ದು ಚುನಾವಣೆಯ ಅನಂತರವೇ ಹಿಂದಿರುಗಿಸಿದರು. ಸರಿ, ಮತ್ತೆ ದ್ವೇಷ ಹೊತ್ತಿ ಉರಿಯಿತು.

ಶಿವಣ್ಣ, ಗುರುರಾಯ, ಬಸವಯ್ಯ ಎಲ್ಲಾ ಪ್ಲಾಂಟರ್ ಪಿಂಟೋ ಸಹಾಯದಿಂದ ಓಬ್ರಿನ್ ಬಳಿಗೆ ಬಂದರು. ಇಬ್ಬರೂ ಕ್ರಿಶ್ಚಿಯನ್ನರೆಂಬುದನ್ನು ಅರಿತ ಅವರು ಅದಕ್ಕಾಗಿಯೇ ಪಿಂಟೋನನ್ನು ಕರೆತಂದಿದ್ದು. ಪಿಂಟೋ ಓಬ್ರಿನ್‌ಗೆ, "ಎಂತಿದ್ದರೂ ನಿನ್ನ ಮಗಳು ಹೋದವಳು ಹೋದಳು. ಅದನ್ನು ಕಟ್ಟಿಕೊಂಡು ಗೋಳಾಡುತ್ತಿದ್ದರೆ ಏನೂ ಪ್ರಯೋಜನವಿಲ್ಲ. ಈಗ ಈ ಗೌಡರಿಗೆ ಬುದ್ಧಿ ಕಲಿಸಲು ಏನಾದರೂ ಸಹಾಯ ಮಾಡು. ನಿನ್ನ ಮಗಳಿಗೂ ರಾಮಣ್ಣಗೌಡನಿಗೂ ಸಂಬಂಧ ಇತ್ತೆಂದು ಹೇಳು. ಆ ಊಳಿಗಕ್ಕಿದ್ದ ಗೌಡ ಎಷ್ಟೊಂದು ಸೊಕ್ಕಿದ್ದಾನೆ," ಎಂದು ಹೇಳಿದ. ಹಾಗೆ ಹೇಳಿಕೆ ನೀಡಬೇಕೆಂದು ಬಲಾತ್ಕರಿಸಿ ಚರ್ಚಿಗೆ ಪ್ರಮಾಣ ಮಾಡಲು ಕರೆದೊಯ್ದರಂತೆ. ಆದರೆ ಹಣದಾಸೆಗೆ ಓಬ್ರಿನ್ ಈ ರೀತಿ ಮಾಡುವುದು ಬಾಯಮ್ಮನಿಗೆ ಸರಿ ಕಾಣಲಿಲ್ಲ. ಸತ್ತ ತನ್ನ ಪುಟ್ಟ ಮಗಳ ಮೇಲೆ ಈ ರೀತಿ ಅಪಕೀರ್ತಿ ತರುವುದಂತೂ ಹೆಂಗಸಾದ ಅವಳಿಗೆ ಸಹಿಸದ ವಿಷಯವಾಯ್ತು. ಅವಳು ಅಂದೇ ಸಾಯಂಕಾಲ ರಾಮಣ್ಣಗೌಡನ ಹೆಂಡತಿ ಲಕ್ಷ್ಮೀದೇವಮ್ಮನಿಗೆ ಇವರ ವ್ಯೂಹವನ್ನು ತಿಳಿಸಿದಳು.

ರಾಮಣ್ಣಗೌಡ ಪೇಚಿಗೆ ಸಿಕ್ಕ. ಇನ್‌ಸ್ಪೆಕ್ಟರ್ ಅಸ್ಗರ್‌ನನ್ನು ಸತ್ತಾರ್ ಸಾಬು ಮುಖಾಂತರ ಆ ಗುಂಪಿನವರು ಒಳಗೆ ಹಾಕಿಕೊಂಡಿದ್ದರು. ಆದ್ದರಿಂದ ಈ ಕೇಸಿನಲ್ಲಿ ಉಳಿದವರೆಂದರೆ ಡಾಕ್ಟರ್ ಕುಬೇರ ಒಬ್ಬರೇ.

೬

ರಾಮಣ್ಣಗೌಡ ಬಹಳ ಕಾಯಿಲೆ ಎಂದೂ ಎದ್ದು ಬರುವಂತಿಲ್ಲವೆಂದೂ ಅರ್ಜಂಟಾಗಿ ಬರಬೇಕೆಂದೂ ಕುಬಿ ಡಾಕ್ಟರಿಗೆ ಹೇಳಿ ಕಳಿಸಿದ. ಕುಬಿ ಸ್ಟೆತಾಸ್ಕೋಪು ಚರ್ಮದ ಚೀಲ ಹಿಡಿದು ರಾಮರಾಯನಿಗೆ ಈಗ ಬರುತ್ತೇನೆಂದು ಹೇಳಿ ಹೊರಟ.


ದಾರಿಯಲ್ಲಿ ಬಂಡೆಯ ಬಳಿ ಯಾರೊ ಇಬ್ಬರು ಕುಳಿತಿದ್ದುದನ್ನು ನೋಡಿದ. ಒಬ್ಬ ಸಣ್ಣ ಹುಡುಗ; ಇನ್ನೊಬ್ಬನು ವಯಸ್ಸಾದವ, ಸಣಕಲ, ಬೀಡಿ ಸೇದುತ್ತಿದ್ದ. ಇಬ್ಬರೂ ಮಿಕಿ ಮಿಕಿ ಡಾಕ್ಟರನ್ನು ನೋಡಿದರು. ಅವರ ಗುರುತು ಡಾಕ್ಟರಿಗೂ ಹತ್ತಲಿಲ್ಲ. ಅವರ ಮುಖ ತೀರ ಅಪರಿಚಿತವಾಗಿ ಕಂಡಿತು.


ಕುಬಿ ರಾಮಣ್ಣಗೌಡನ ಮನೆಗೆ ಬಂದಾಗ ಆಗ ತಾನೇ ಸ್ನಾನ ಮಾಡಿಕೊಂಡು ರಾಮಣ್ಣಗೌಡ ಹೊರಬಂದಿದ್ದ. ಅವನ ಮುಖದ ಮೇಲೆ ಯಾವುದೇ ರೋಗದ ಲವಲೇಶವೂ ಇರಲಿಲ್ಲ.

ಕುಬಿಗೆ ಆಶ್ಚರ್ಯವಾಯ್ತು!

"ಡಾಕ್ಟರೆ, ನಿಮ್ಮಿಂದ ಒಂದು ಉಪಕಾರ ಆಗಬೇಕಿತ್ತು. ಅದಕ್ಕೇ ಕರೆಸಿ ತೊಂದರೆ ಕೊಟ್ಟೆ. ನಾನೇ ಬರುತ್ತಿದ್ದೆ. ಆದರೆ ನಾವು ಈಗ ಏನು ಮಾಡಿದರೂ ಸಹ ಅದಕ್ಕೆಲ್ಲಾ ಒಂದೊಂದು ಅರ್ಥ ಕಟ್ಟುತ್ತಾರೆ. ಅದಕ್ಕೇ ನಿಮ್ಮನ್ನು ಬರಲು ಹೇಳಿ ಕಳಿಸಿದ್ದು," ಎಂದ.

"ಏನಾಗಬೇಕು?" ನೇರವಾಗಿ ಕುಬಿ ಪ್ರಶ್ನೆ ಕೇಳಿದ. ಅವನು ಮಾತನಾಡುವ ರೀತಿಯಲ್ಲೇ ಇದಕ್ಕೂ ಇಯಾಲಳ ಕೊಲೆಗೂ ಏನೊ ಸಂಬಂಧ





ಇರಬೇಕೆಂದು ಅನುಮಾನ ಬಂದಿತ್ತು. ಏನು ಗೂಢವಾದುದಿದ್ದರೂ ಅದಕ್ಕೂ ಇಯಾಲಳಿಗೂ ಏನೋ ಸಂಬಂಧವೇರ್ಪಡುತ್ತಿದ್ದಿತು.

"ನೋಡಿ, ಸೂಳೇಮಕ್ಕಳು ನಮ್ಮ ಎದುರು ಪಾರ್ಟಿಯವರು ನನಗೂ ಬಾಯಮ್ಮನ ಮಗಳಿಗೂ ಏನೋ ಸಂಬಂಧ ಇತ್ತೆಂದೂ ಅದು ಹೊರ ಬರಬಾರದು ಅಂತ ನಾನು ಖೂನಿ ಮಾಡಿಸಿದೆ ಅಂತಲೂ ಓಬ್ರಿನ್ ಪತ್ತಿರ ಕಂಪ್ಲೇಂಟು ಕೊಡಿಸಲು ಓಡಾಡುತ್ತಿದ್ದಾರೆ. ಆ ಹಸುಗೂಸಿನ ಹತ್ತಿರ ಚಕ್ಕಂದ ಆಡೋದಕ್ಕೆ ನಾನೂ ಮನುಷ್ಯ ಅಲ್ಲವೇ? ಹುಡುಗಿ ದೊಡ್ಡವಳಾಗಿರಲಿ ಬಿಡಲಿ, ನೀವು ಅವಳಿನ್ನೂ ದೊಡ್ಡೋಳೇ ಆಗಿರಲಿಲ್ಲ ಅಂತ ರಿಪೋರ್ಟು ಮಾಡಿಬಿಡಿ.

ಮಿಕ್ಕಿದ್ದನ್ನು ನಾನು ನೋಡಿಕೊಳ್ತೇನೆ. ಈವತ್ತು ನಮ್ಮ ಎಂ ಎಲ್ ಎ ಕರಕೊಂಡು ಐ ಜಿ ಪಿ ಹತ್ತಿರ ಹೋಗಲಿಕ್ಕೆ ನೋಡ್ತೇನೆ," ಎಂದು ಒಂದೇ ಉಸುರಿಗೆ ಹೇಳಿದ.

ಕುಬಿಗೆ ವಿಪರೀತ ಬೇಸರ ಬಂದಿತ್ತು. ಈ ಹೊಲಸು ರಾಜಕಾರಣದ ದೆಸೆಯಿಂದ ಕೊಲೆಪಾತಕಿಯೂ ಸಿಗದೆ ಎಲ್ಲರೂ ದಿಕ್ಕು ತಪ್ಪುತ್ತಿದ್ದಾರೆಂದು.

"ರಾಮಣ್ಣಗೌಡರೆ, ನೀವು ಇಯಾಲಳನ್ನು ಖೂನಿ ಮಾಡಿದಿರಾ?" ಎಂದು ಒಂದು ಪ್ರಶ್ನೆ ಕೇಳಿದ.

"ಇದೇನು ಡಾಕ್ಟರೆ ಹೀಗೆ ಕೇಳ್ತೀರಿ! ನಿಮಗೂ ಹಾಗಾದರೆ ನನ್ನ ಮೇಲೆ ಗುಮಾನಿ ಇದೆಯೆ? ಆ ಲಿಂಗಾಯತರ ಮಾತಿಗೆ ಸಿಕ್ಕಿಬಿದ್ದಂತೆ ತೋರುತ್ತದೆ. ಮುಖ್ಯ ನಮಗೆ ಒಳ್ಳೆ ಕಾಲ ಇದಲ್ಲ," ಎಂದ ರಾಮಣ್ಣಗೌಡ.

"ನಾನು ಕೇಳಿದ್ದಕ್ಕೆ ಉತ್ತರಿಸಿ. ನೀವು ಆಕೆಯನ್ನು ಖೂನಿ ಮಾಡಿಸಿದರೋ?" ಗಂಭೀರವಾಗಿ ಕೇಳಿದ ಕುಬಿ. ಅವನ ಮಾತಿನ ನಿಷ್ಠುರತೆಗೆ ಅವಾಕ್ಕಾದ ರಾಮಣ್ಣಗೌಡ.

"ಛೇ, ನನಗೂ ಇದಕ್ಕೂ ಏನೂ ಸಂಬಂಧ ಇಲ್ಲಪ್ಪಾ. ನೀವೂ ಗುಮಾನಿ ಇಟ್ಟರೆ ನಾನೇನು ಮಾಡಲಿ ಹೇಳಿರಿ!" ಎಂದು ರಾಮಣ್ಣಗೌಡ ಚಿಂತಾಕ್ರಾಂತನಾದ.

"ನಿಮಗೂ ಅದಕ್ಕೂ ಸಂಬಂಧವಿಲ್ಲ ತಾನೆ! ಹಾಗಾದರೆ ಸುಮ್ಮನಿರಿ, ತಣ್ಣಗೆ. ನೀವಿಲ್ಲದ ಮೇಲೆ ಮುಗಿಯಿತು. ನೀವ್ಯಾಕೆ ಪರದಾಟ ಮಾಡುತ್ತೀರಿ? ಸುಳ್ಳು ಹೇಳಿ ಕೇಸ್ ಮಾಡುವುದು ಬಹಳ ಸುಲಭವೇನಲ್ಲ," ಎಂದ ಕುಬಿ.

"ಅಯ್ಯೋ ಡಾಕ್ಟರೆ, ನಿಮಗೆ ಗೊತ್ತಿಲ್ಲ ಇವರ ಮರ್ಮ, ನಾನು ಮುಂದಿನ ತಾಲ್ಲೂಕು ಬೋರ್ಡ್ ಚುನಾವಣೆಗೆ ನಿಲ್ಲಬೇಕಂತ ಮಾಡಿದ್ದೇನೆ. ಸುಮ್ಮನೆ ನನ್ನ ಹೆಸರಿಗೆ ಮಸಿ ಬಳಿಯಲು ಇವರ ಉಪಾಯ. ಮತ್ತೆ ನನ್ನ ಮೇಲೆ ಕೇಸ್ ಮಾಡಿ ನನಗೆ ಕೋಳ ಹಾಕಿಸಲು ಇವರ ಅಜ್ಜಂದಿರು ಬಂದರೂ ಆಗೋದಿಲ್ಲ! ಇಂಥ ಖೂನಿ ಎಷ್ಟೋ ಮಾಡಿಸಿಯೇ ನಿಭಾಯಿಸಿಯೇನು! ಇವೆಲ್ಲಾ ನಮಗೆ ಈಡಲ್ಲ. ಮುಖ್ಯ ಇದು ರಾಜಕೀಯದ ವಿಷಯ."

ಕುಬಿಗೆ ಬಹಳ ಬೇಜಾರಾಯ್ತು. "ಬರ್‍ತೀನಿ ಗೌಡರೆ. ನಾನು ರಾಜಕೀಯದವ ಅಲ್ಲ. ಆಸ್ಪತ್ರೆಯಲ್ಲಿ ತುಂಬಾ ಕೇಸುಗಳಿದ್ದಾವೆ. ಅಟೆಂಡ್ ಮಾಡಬೇಕು," ಎಂದು ಹೇಳುತ್ತಾ ಸ್ಟೆತಾಸ್ಕೋಪು ಚರ್ಮದ ಚೀಲ ಕೈಗೆತ್ತಿಕೊಂಡ.

"ತುಂಬಾ ತೊಂದರೆ ಕೊಟ್ಟೆ ಡಾಕ್ಟರೆ. ನೋಡಿ ಈ ಲಿಂಗಾಯತರಿಗೆ ನಮ್ಮ ಮೇಲೆ ಹೊಟ್ಟೆ ಉರಿ. ಊಳಿಗಕ್ಕಿದ್ದವರು ಇವರು, ಈಗ ತಲೆ ಎತ್ತಿಕೊಂಡು ತಿರುಗಾಡುತ್ತಿದ್ದಾರೆ ಅಂತ. ನಿಮಗೆ ಇವೆಲ್ಲಾ ಗೊತ್ತಾಗೋಲ್ಲ. ಮುಖ್ಯ ನೀವು ರಾಜಕೀಯದ ಮನುಷ್ಯರಲ್ಲ ನೋಡಿರಿ," ಎಂದು ರಾಮಣ್ಣಗೌಡ ಹೇಳಿದ. ಕುಬಿಯನ್ನೂ ತನ್ನ ಅಂತರಂಗಕ್ಕೆ ತೆಗೆದುಕೊಂಡು ಸ್ಥಳೀಯ ರಾಜಕಾರಣದ ವಿಷವರ್ತುಲಕ್ಕೆ ಎಳೆಯುವ ಅವನ ಹಂಚಿಕೆ ಸಫಲವಾಗಲಿಲ್ಲ.

ಕುಬಿ ಇಳಿದು ಬರುತ್ತಾ, "ಗೌಡರೆ, ಅವರು ಗುಮಾನಿ ಹುಟ್ಟಿಸಲೆತ್ನಿಸುತ್ತಿದ್ದಾರೆ ಅಂತ ನೀವು ಓಡಾಟ ಪರದಾಟ ಮಾಡಿದರೆ ಅದರಿಂದಲೂ ಗುಮಾನಿ ಬರುತ್ತದಲ್ಲವೆ, ಕೊಂಚ ಯೋಚಿಸಿ ನೋಡಿರಿ," ಎಂದು ಹೇಳಿ ಚಕಚಕ ಇಳಿದು ನಡೆದ.

ಬಂಡೆಯ ಬಳಿ ಇದ್ದವರಿಬ್ಬರೂ ಕಾಣಲಿಲ್ಲ.

ಇವರು ಬಹುಶಃ ಪೋಲೀಸ್ ಸಿ ಐ ಡಿ ಗಳಿರಬಹುದೆ ಎಂದು ಯೋಚಿಸಿದ. ಆದರೆ ಕೊಲೆಗೂ ಈ ವ್ಯಕ್ತಿಗಳಿಗೂ ಯಾವುದೇ ಬಾದರಾಯಣ ಸಂಬಂಧವೂ ಅವನಿಗೆ ಹೊಳೆಯಲಿಲ್ಲ.

ಆಸ್ಪತ್ರೆಗೆ ಬಂದಾಗ ರಾಮರಾಯ ಹುಚ್ಚರ ಇತ್ಯೋಪರಿಗಳು ಕೊಂಚ ಬೆಳಕಿಗೆ ಬಂದಿವೆ ಎಂದೂ ಅವರು ನಿಜವಾದ ಹುಚ್ಚರಲ್ಲೆಂದೂ ಅವರಿಗೆ ಎಲ್ಲ ಹೆಂಡಿರು ಮಕ್ಕಳು ಇದ್ದಾರೆಂದೂ ಭಿಕ್ಷಾಟನೆಗಾಗಿ ಅವರು ಆ ರೀತಿ ಮಾಡುತ್ತಿದ್ದಾರೆಂದೂ ಹೇಳಿದ.

೭

ಪುಟ್ಟ ಸುಂದರಿ ಇಯಾಲಳ ಕೊಲೆ ಭೈರಾಪುರದ ಜನರಿಗೆ ನಿಧಾನವಾಗಿ ಅನುಭವಗಮ್ಯ

ವಾಗತೊಡಗಿತು. ಇಯಾಲ, ಭೈರಾಪುರದ ಕ್ಷುದ್ರ ರಾಜಕಾರಣದ ಯಾವ ಪ್ರಬಲ ಗುಂಪಿಗೂ ಸೇರಿರದ ಜಾತಿಯಾದ ಕಾರಣ ಮೊದಮೊದಲು ಯಾರಿಗೂ ಸಂಬಂಧವಿರದ ಯಾವುದೋ ಬೇರೆ ಊರಿನ ವಾರ್ತೆಯಂತೆ ಕೊಲೆಯಾಗಿಹೋದಳು. ಆದರೆ ನಿಧಾನವಾಗಿ ಪಿಂಟೋ ಪ್ಲಾಂಟರು, ಸತ್ತಾರ್ ಸಾಬು, ಶಿವಣ್ಣ, ರಾಮಣ್ಣಗೌಡ, ಚಂದ್ರೇಗೌಡ ಮುಂತಾದವರೆಲ್ಲಾ ಇದರೊಳಗೆ ಸೇರಿಕೊಂಡು ಹಕೀಕತ್ತು ನಡೆಸತೊಡಗಿದ್ದಾರೆ ಎಂದಕೂಡಲೇ ಹೆಜ್ಜೆ ಹೆಜ್ಜೆಯಾಗಿ ಊರವರಿಗೂ ಇದಕ್ಕೂ ಸಂಬಂಧವೇರ್ಪಡತೊಡಗಿತು.

ಇದರೊಡನೆ ಪೋಲೀಸು ನಾಯಿಯನ್ನು ತರುತ್ತಾರೆಂಬ ವದಂತಿ ವಿಳಿತವಾಯ್ತು. ಅದನ್ನು ಯಾವುದೋ ದೇಶದಿಂದ ತಂದಿದ್ದಂತೆ—ಕಳ್ಳತನ ಖೂನಿ ಮಾಡಿದವರು ಒಂದೇ ಕ್ಷಣಕ್ಕೆ ಪತ್ತೆಯಾಗುತ್ತಾರಂತೆ—ಯಾವನೇ ಕಳ್ಳ ಕಾಣಲಿ, ಓಡಿಸಿಕೊಂಡು ಹೋಗಿ ಕಚ್ಚಿಬಿಡುತ್ತದಂತೆ—ಈ ಬಗೆಯ ಅಸಂಬದ್ಧವಾರ್ತೆಗಳು ಅನೇಕವು ಹಬ್ಬಿದುವು. ಎಲ್ಲರಿಗೂ ಒಂದಿಲ್ಲೊಂದು ತರದಿಂದ ಗಾಬರಿಯಾಗತೊಡಗಿತು. ಭಟ್ಟರ ಹೋಟೆಲಿನಲ್ಲಿ ಕುಳಿತುಕೊಂಡು ಒಂದಷ್ಟು ಜನ, "ಅಲ್ಲಾ, ನಾಯಿ ಬುದ್ಧಿ ಹೀಗೇಂತ ಹೇಳೋದಿಕ್ಕೆ ಆಗೋದಿಲ್ಲ ಮಾರಾಯ. ಖೂನಿ, ಕಳ್ಳಭಟ್ಟಿ ಎಲ್ಲ ಒಂದೇ ತರ ಕಂಡುಬಿಟ್ಟು ಇಲ್ಲಿ ಎಲ್ಲರ ಮನೆಗೂ ನುಗ್ಗಿದರೆ ಏನು ಗತಿ ಮಾರಾಯಾ? ಪೋಲೀಸಿನವರು ಹಬ್ಬ ಹುಡಿ ಹಾರಿಸುತ್ತಾರೆ"–"ನಾನಂತೂ ನಾಯಿ ಬರೋ ದಿನ ಮರ್ಯಾದೆಯಾಗಿ ಭೈರಾಪುರ ಬಿಟ್ಟು ಅತ್ತಲಾಗಿಗಟ್ಟ ಇಳಿದುಬಿಡುತ್ತೇನೆ! ಹಾಳಾಗಿ ಹೋಗಲಿ!"—"ಅದಕ್ಕೆ ಹ್ಯಾಂಗೆ ಗೊತ್ತಾಗ್ತದೆ ಹೇಳು ಇಂತಾವನೆ ಸಾಬ್ಕಸ್ತ, ಇಂತಾವನೆ ಕಳ್ಳಾಂತ?" ಎಂದು ಅನೇಕ ತರ ಮಾತನಾಡಿಕೊಂಡರು. ಒಂದು ಸಂಜೆ ಯಾವುದೋ ಅಪರಿಚಿತ ನಾಯಿಯೊಂದು ಕೆಂಗಣ್ಣು ಮಾಡಿಕೊಂಡು ಒಂದು ಗುಂಪಿನ ಕಡೆಗೆ ಓಡಿ ಬಂದಾಗ ಅಲ್ಲಿದ್ದವರೆಲ್ಲಾ ಹೋ ಹೋ ಎಂದು ಕೂಗಿಕೊಂಡು ದಿಕ್ಕಾಪಾಲಾಗಿ ಓಡಿದರು. ಕೊನೆಗೆ ನೋಡುವಲ್ಲಿ ಅದನ್ನು ಇನ್ನೊಂದು ನಾಯಿ ಓಡಿಸಿಕೊಂಡು ಬಂದುದೇ ಕಾರಣವಾಗಿತ್ತು, ಆ ನಾಯಿ ಗುಂಪಿನ ಕಡೆಗೆ ನುಗ್ಗಲು.

"ಗಾಡಿ ಹೊಡೆಯುವ ಅರವರ ಸೇಸ ತಲೆ ತಪ್ಪಿಸಿಕೊಂಡಿದ್ದಾನೆ. ಪೋಲೀಸರು ಹುಡುಕುತ್ತಿದ್ದಾರೆ!" ಎಂಬ ವಾರ್ತೆ ಹಬ್ಬಿತು. ಎಲ್ಲರೂ ಚಕಿತರಾದರು. "ಎಲಾ ಲೌಡೀಮಗನೆ, ಮದುವೆಯಾದೋರಿಗೆ ಈ ತೆವಲು ದುರ್ಬುದ್ಧಿ ಬರಬಾರದಿತ್ತು," ಎಂದು ಹಲವರು ಇವನೇ ಖೂನಿ ಮಾಡಿದವನಿರಬಹುದೆಂದು ಮಾತನಾಡಿದರು.

ಕುಬಿಗೆ ಗಾಡಿ ಸೇಸ ಪರಾರಿಯಾದುದೇಕೆಂದು ತಿಳಿಯಲಿಲ್ಲ. ಯಾರಾದರೂ ಅವನಿಗೆ ಹಣ ಕೊಟ್ಟು ಖೂನಿ ಮಾಡಿಸಿದ್ದರೇ ಅಥವಾ ಪೋಲೀಸರಿಗೆ ಹೆದರಿ ಓಡಿಹೋದನೊ? ಎಂದು ಆಲೋಚಿಸಿದ. ಗಾಡಿ ನಿಂಗನ ಬಗ್ಗೆ ಭರದಿಂದ ಹುಡುಕಾಟ ನಡೆಯುತ್ತಿತ್ತು.

ಕಂಪೌಂಡರ್ ರಾಮರಾಯ ಕುಬಿ ಹತ್ತಿರ, "ಏನೇನೋ ವದಂತಿ ಶುರುವಾಗಿ ಬಿಟ್ಟಿದೆ ಸಾರ್. ಅರವರ ಸೇಸನ ಹೆಂಡತಿ ಬುಳ್ಳಿ ಪೋಲೀಸಿನವರೇ ತನ್ನ ಗಂಡನ್ನ ಒಯ್ದು ಏನೋ ಮಾಡಿದ್ದಾರೆ ಅಂತ ಊರು ತುಂಬಾ ಅತ್ತುಕೊಂಡು ಹೇಳಿದ್ದಾಳಂತೆ ಸಾರ್. ಜನಕ್ಕೂ ಗುಮಾನಿ ಬಂದಿದೆ ಸಾರ್. ಆದರೆ ಬಾಯಿ ಬಿಡೋದಕ್ಕೆ ಹೆದರುತ್ತಾರೆ ಸಾರ್. ಆ ಅರವರ ಕೇರಿಯವರು ಸೂಳೇಮಕ್ಕಳು ಮೃಗಗಳಿದ್ದಂತೆ. ಯಾರು ತಪ್ಪು ಮಾಡಿದ್ದಾರೆ? ಏನು? ಒಂದನ್ನೂ ಪರಿಗಣಿಸದೆ ಊರೆಲ್ಲಾ ದೊಂಬಿ ಎಬ್ಬಿಸಿ ಸಿಕ್ಕಿದವರ ಮನೆಗೆಲ್ಲಾ ಧಾಳಿ ಮಾಡುತ್ತಾರೆ. ಇಯಾಲಳ ತಂದೆ ಓಬ್ರಿನ್ ಕೂಡಾ ಇಲ್ಲಂತೆ! ಎಲ್ಲ ಹೇಳ್ತಾರೆ ರಾಮಣ್ಣಗೌಡನೂ ವಿಠ್ಠಲ ರಾಯನೂ ಅವನನ್ನು ಕರೆದುಕೊಂಡು ಹೋಗಿ ಕೇರಳದಲ್ಲಿ ಇಟ್ಟುಬಿಟ್ಟಿದ್ದಾರೆ ಅಂತ! ಒಟ್ಟಿನಲ್ಲಿ ಇವರಿಗೆಲ್ಲಾ ಏನೋ ಕೇಡುಗಾಲ ಬಂದಿದೆ ಎಂದು ಕಾಣಿಸುತ್ತದೆ," ಎಂದ ಮಾತಾಡುತ್ತಿದ್ದವನು ಹಠಾತ್ ಮಾತು ನಿಲ್ಲಿಸಿದ. ಏಕೆಂದರೆ ಒಂದು ಬಿರುಸಿನ ಆಸ್ಫೋಟನೆಯ ಸದ್ದು ನೆಲವೆಲ್ಲಾ ನಡುಗುವಂತೆ ಕೇಳಿತು.

ಕುಬೇರ ಇದೇನೆಂದು ಪ್ರಶ್ನಾರ್ಥಕವಾಗಿ

ರಾಮುರಾಯನ ಕಡೆಗೆ ನೋಡಿದ. ರಾಮುರಾಯ ಆಶ್ಚರ್ಯಸೂಚಕವಾಗಿ ಪೇಶಂಟುಗಳ ಕಡೆಗೆ ನೋಡಿದ. ಆದರೆ ಯಾರಿಗೂ ಏನೂ ಹೊಳೆಯಲಿಲ್ಲ. ಯಾವನೊ ಒಬ್ಬ, "ಭೂಕಂಪ ಇರಬೇಕು," ಎಂದು ಮಾತ್ರ ಗೊಣಗಿದ್ದು ಕೇಳಿತು. ಕುಬೇರ ಯಥಾಪ್ರಕಾರ ಬಾಯಿ ಕಳೆಸುತ್ತ ಹಲ್ಲು ಕಿರಿಸುತ್ತ ಹೊಟ್ಟೆ ಒತ್ತುತ್ತ ಬೆನ್ನಿನ ಡೋಲು ಬಡಿಯುತ್ತ ತನ್ನ ಕೆಲಸದಲ್ಲಿ ತಾನು ಲೀನನಾದ.

ಸಾಯಂಕಾಲವಾಗುತ್ತ ಬಂದಾಗ ಯಾರೊ ಔಷಧಿಗೆ ಬಂದವರು ಡೈನಮೈಟು ಮದ್ದು ಹಾಕುವವರು ಇಬ್ಬರು ಬಂದಿದ್ದಾರೆಂದೂ ಘೂಪದ ಮರದ ಬಳಿಯ ಬಂಡೆಗೆ ಬೆಳಿಗ್ಗೆ ಡೈನಾಮೈಟು ಹಾಕಿದರೆಂದೂ ಒಂದು ಪಾರ್ಶ್ವ ಒಡೆದಿದೆಯೆಂದೂ ಆದರೂ ಆ ಭಾರಿ ಬಂಡೆ ಬಡಸೆಟ್ಟಿಗೆ ಬಗ್ಗುವಂತೆ ಕಾಣುವುದಿಲ್ಲೆಂದೂ ಹೇಳಿದರು.

ಬೆಳಿಗ್ಗೆ ರಾಮಣ್ಣಗೌಡನ ಮನೆಗೆ ಹೋಗುತ್ತಾ ಬಂಡೆಯ ಬಳಿ ಕಂಡ ಹೊಸಬರಿಬ್ಬರೂ ಡೈನಮೈಟು ಹಾಕುವವರೇ ಎಂದು ಕುಬಿ ಅಂದಾಜು ಮಾಡಿದ. ಅಂತೂ ಆ ಕಲ್ಲಿಗೆ ಕೊನೆಗಾಲ ಬಂದಿತಲ್ಲ ಎಂದು ಕುಬಿಗೆ ಸಂತೋಷವಾಯ್ತು.

೮

ಕುಬಿ ಬೆಳಿಗ್ಗೆ ಆಸ್ಪತ್ರೆಗೆ ಹೋದಾಗ ಯಾರ ಮುಖಗಳನ್ನು ನೋಡಲು ಇಷ್ಟಪಟ್ಟಿರಲಿಲ್ಲವೋ ಅವರೇ ರೋಗಿಗಳ ಗುಂಪಿನಲ್ಲಿ ಮೊದಲು ಕಂಡರು—ಹಮಾಲರ ರಹಮಾನ್ ಮತ್ತು ರಂಗ. ಒಂದು ರೀತಿಯಲ್ಲಿ ಅವರು ಕುಬಿಯ ಧರ್ಮಪ್ರಜ್ಞೆಯನ್ನು ಕುಟುಕುತ್ತಿದ್ದರು.

"ನಿಮ್ಮ ಗಾಯದ ಕಟ್ಟುಗಳನ್ನೆಲ್ಲಾ ಬಿಚ್ಚಿದ್ದೇನಲ್ಲ, ಇನ್ನೇಕೆ ಬಂದಿರೊ? ಅವು ಹಾಗೇ ವಾಸಿಯಾಗುತ್ತವೆ; ಔಷಧಿ ಏನೂ ಬೇಡ," ಎಂದು ಅವರನ್ನೇ ಮೊದಲು ವಿಚಾರಿಸಿದ.

"ಇಲ್ಲಾ ಸ್ವಾಮಿ, ತಮ್ಮಿಂದ ಈಗ ಒಂದು ಉಪಕಾರ ಆಗಬೇಕು ಸ್ವಾಮಿ," ಎಂದು ಕುಬಿಯೊಡನೆ ಆಸ್ಪತ್ರೆ ಪರೀಕ್ಷೆ ರೂಮಿನತ್ತ ಬರುತ್ತ ಅವರು ಹೇಳಿದರು. ಕುಬಿಗೆ ಈ ಊರಿಗೆ ಒಂದು ಭೀಕರ ಸಾಂಕ್ರಾಮಿಕ ಬಂದು ಇವರೆಲ್ಲರೂ ತಮ್ಮೆಲ್ಲಾ ಸಮಸ್ಯೆಗಳನ್ನೂ ಮರೆಯಬಾರದೇ ಎಂದೆನ್ನಿಸಿತು.

"ಈವತ್ತು ಮತ್ತೆ ಬರ ಹೇಳಿವ್ದಾರೆ ಸ್ವಾಮಿ ಟೇಸನ್ನಿಗೆ. ಆ ಖೂನಿಯಾದ ಹುಡುಗಿಗೂ ನಮಗೂ ಏನು ಸಂಬಂಧ ಇದೆ ಸ್ವಾಮಿ ನೀವೇ ಹೇಳಿ?" ಎಂದು ರಹಮಾನ್ ಹೇಳಿದ. ಏನು ಸಂಬಂಧವೋ ಏನೋ ಇದೊಂದು ದೊಡ್ಡ ಆಧ್ಯಾತ್ಮಿಕ ಒಗಟಿನಂತಾಗಿತ್ತು ಕುಬಿಗೆ. ಕುಬಿ ಇನ್ನೂ ಪೋಸ್ಟ್ ಮಾರ್ಟಂ ರಿಪೋರ್ಟನ್ನು ಸಹ ಬರೆದಿರಲಿಲ್ಲ.

"ನಾನೇನು ಮಾಡಲಿ ರಹಮಾನ್, ಯಾರು ಯಾರಿಗೆ ಯಾವ ಯಾವ ತರದ ಸಂಬಂಧವೋ ನನಗೆ ಗೊತ್ತಿಲ್ಲ. ನಿಮಗೆ ಹೊಡೆಯೋದು ಜನರನ್ನು ಹೆದರಿಸಲಿಕ್ಕಂತೆ. ನಿಮಗೆ ಹೊಡೆದರೆ ಅವರಿಗೆ ಸಂಬಳ. ನಾನೇನು ಉಪಕಾರ ಮಾಡಬಲ್ಲೆ ಹೇಳು. ನಿನ್ನ ಚರ್ಮ ಹೊಲಿದು ಔಷಧಿ ಹಾಕಿ ಗಾಯ ವಾಸಿ ಮಾಡುತ್ತೇನೆ ಅಷ್ಟೇ," ಎಂದು ತನ್ನ ನಿಸ್ಸಹಾಯತೆಯನ್ನು ತನ್ನನ್ನು ತಾನೇ ಹೀಯಾಳಿಸಿಕೊಳ್ಳುವ ಮಾತುಗಳಲ್ಲಿ ಕುಬಿ ಅವರಿಗೆ ವಿವರಿಸುತ್ತಿದ್ದ. ಅಷ್ಟರಲ್ಲಿ ನಿನ್ನೆ ಕೇಳಿದಂಥದೇ ಒಂದು ಭಯಂಕರ ಸ್ಫೋಟ ಶಬ್ದ ಕೇಳಿತು. ಈ ಬಾರಿ ಅದೇನೆಂದು ತಿಳಿದಿದ್ದುದರಿಂದ ಡಾಕ್ಟರರಾಗಲಿ ಹಮಾಲರಾಗಲಿ ಅಪ್ರತಿಭರಾಗಲಿಲ್ಲ.

ಹಮಾಲರು ದೈನ್ಯದಿಂದ ಡಾಕ್ಟರ ಕಡೆಗೆ ನೋಡುತ್ತಾ, "ಸ್ವಾಮಿ, ಒಂದು ಕೊನೇ ಉಪಕಾರ ಮಾಡ್ರಿ ಸ್ವಾಮಿ. ನೀವು ನಮಗೆ ಪ್ರಾಣ ಕೊಟ್ಟ ದೇವರಿದ್ದಂಗೆ. ಇನ್‌ಸ್ಪೆಕ್ಟರಿಗೆ ಹೇಳಿ, ಬೇಕಾದರೆ ಅವರು ನಮ್ಮ ಚಮ್ಡ ಸುಲಿಯಲಿ. ಆದರೆ ಬೆನ್ನು ಬಿಟ್ಟು ಬೇರೆಲ್ಲಾದರೂ ಹೊಡೆಯಲಿ ಅಂತ ಹೇಳಿ ಸ್ವಾಮಿ," ಎಂದು ಹೇಳಿದರು. ಅವರಿಗೆ ದುಃಖದಿಂದ ಕಣ್ಣೀರು ಬಂದಿತ್ತು.

ಕುಬೇರ ತತ್ತರಿಸುವಂತಹ ಆಂದೋಲನಕ್ಕೆ ಸಿಕ್ಕಿಹಾಕಿಕೊಂಡ. ವೈದ್ಯಕೀಯ ತಾಳ್ಮೆ ಶಿಸ್ತು ಸಂಯಮ ಎಲ್ಲಾ ಭೀಕರ ಅಲ್ಲೋಲ ಕಲ್ಲೋಲದಲ್ಲಿ ಇತ್ತು. ಅಷ್ಟರಲ್ಲಿ ಅವನಿಗೆ ಒದಗಿದ

ಸಹಾಯವೋ ಎಂಬಂತೆ ರಸ್ತೆಯಲ್ಲಿ ಕೆಲವರು ಗಟ್ಟಿಯಾಗಿ ಕೂಗುತ್ತಿದ್ದುದೂ ಹಲವರು ಓಡುತ್ತಿದ್ದುದೂ ಕಾಣಿಸಿತು. ಕುಬಿಗೆ ಬಾಯಲ್ಲಿದ್ದ ಮಾತು ಅಲ್ಲಿಯೇ ನಿಂತಿತು. ಮದ್ದು ಹಾಕಿ ಸಿಡಿಸುವವರಿಬ್ಬರಿಗೂ ಮದ್ದು ಸಿಡಿದು ಹೊಡೆತ ಬಿದ್ದಿದೆಯೆಂದು ಓಡಿಬಂದವನೊಬ್ಬ ಹೇಳಿದ. ಇದ್ದಕ್ಕಿದ್ದಂತೆ ಏನಂತೆ? ಏನಂತೆ? ಎಂದು ಆಸ್ಪತ್ರೆಯೊಳಗೆಲ್ಲಾ ಗಲಿಬಿಲಿ ಆರಂಭವಾಯ್ತು. ಈ ತುಮುಲದಲ್ಲಿ ತಮ್ಮ ಗೋಳನ್ನೇ ಮುಂದುವರಿಸುವುದು ಹಮಾಲರಿಗೆ ಸರಿತೋರಲಿಲ್ಲ. ಸ್ಟೇಷನನ್ನು ನೆನೆದು ಭಯದಿಂದ ನಡುಗುತ್ತಾ ಅವರು ಅತ್ತ ಹೋದರು. ಪೇಶಂಟುಗಳಿಗೆ ಇಲ್ಲೊಂದು ಎಮರ್ಜೆನ್ಸಿ ಇದೆ, ನೋಡಿ ಬರುತ್ತೇನೆಂದು ಪೆಟ್ಟಿಗೆಗೆ ಸಾಮಾನು ತುಂಬಿಕೊಂಡ ಕುಬಿ.

ಕುಬಿ ಘಟನೆ ನಡೆದ್ದಸ್ಥಳಕ್ಕೆ ಹೋದಾಗ ಸನ್ನಿವೇಶದ ಕಠೋರತೆ ಅರಿವಾಯ್ತು. ಬೆಣಚುಕಲ್ಲಿನ ಚಕ್ಕೆಯೊಂದು ಕತ್ತಿಯಂತೆ ಹಾರಿ ಸಣ್ಣವನ ಒಂದು ಕೈ ತುಂಡಾಗಿತ್ತು. ಕತ್ತರಿಸಿದ ಜಾಗದಲ್ಲಿ ರಕ್ತಸ್ರಾವವಾಗದಂತೆ ಕುಬಿ ಇಲಾಜು ಮಾಡುತ್ತಿರಬೇಕಾದರೆ ಆ ವ್ಯಕ್ತಿ ಅಪ್ರಜ್ಞಾವಸ್ಥೆಯಲ್ಲಿಯೇ ಕೊನೆಯುಸಿರನ್ನೆಳೆದ. ಚಕಿತನಾಗಿ ಕುಬಿ ತನಿಖೆ ಮಾಡಲಾಗಿ ಒಂದು ಕಲ್ಲಿನ ಚೂರು ತಲೆಯನ್ನು ಸೀಳಿಕೊಂಡು ಅವನ ಮಿದುಳಿನೊಳಕ್ಕೆ ಹೋಗಿತ್ತು. ಉದ್ದವಾಗಿ ಬಿಟ್ಟಿದ್ದ ಅವನ ಕೇಶರಾಶಿಯಲ್ಲಿ ಅದು ಗೊತ್ತಾಗಿರಲಿಲ್ಲ.

ಇನ್ನೊಬ್ಬನಿಗೆ ನೋಟಕ್ಕೆ ಏನೂ ಆದಂತೆ ತೋರುತ್ತಿರಲಿಲ್ಲ. ಆದರೆ ಮೈಯ ಮುಕ್ಕಾಲು ಭಾಗ ಬೆಂಕಿಯಲ್ಲಿ ಬೆಂದಂತಿತ್ತು. ಕುಬಿ ಸ್ಥಳಕ್ಕೆ ಹೋದಾಗ ಪ್ರಜ್ಞೆ ತಪ್ಪಿದ್ದ ಅವನಿಗೆ ನಿಧಾನವಾಗಿ ಪ್ರಜ್ಞೆ ಬರತೊಡಗಿತ್ತು. ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಆಸ್ಪತ್ರೆಯಲ್ಲಿದ್ದ ರೋಗಿಗಳೆಲ್ಲಾ ತಮ್ಮ ಖಾಯಿಲೆಗಳನ್ನು ಮರೆತೇಬಿಟ್ಟರು ಇವನ ಸ್ಥಿತಿಯನ್ನು ನೋಡಿ.

ಆದರೆ ಅವನ ಮುಖ ನೋಡಿದರೆ ಅವನು ಏನೂ ಆದವನಂತೆ ಕಾಣುತ್ತಿರಲಿಲ್ಲ. ರಾಮುರಾಯನಿಗೆ ಅವನಿಂದ ಅಪಘಾತದ ಹಲವಾರು ವಿವರಗಳು ದೊರೆತವು. ನಿನ್ನೆ ಎರಡು ರಂಧ್ರಗಳನ್ನು ಹೊಡೆದು ಒಂದಕ್ಕೆ ಬೆಂಕಿ ಕೊಟ್ಟು ಸಿಡಿಸಿದರಂತೆ. ಇನ್ನೊಂದಕ್ಕೆ ಬೆಂಕಿ ಕೊಟ್ಟು ಎಷ್ಟು ಹೊತ್ತು ಕಾದರೂ ಅದು ಸಿಡಿಯಲೇ ಇಲ್ಲವಂತೆ. ಅದರ ಬೆಂಕಿ ನಂದಿ ಹೋಯ್ತೆಂದು ತಿಳಿದು ಇವರಿಬ್ಬರೂ ಊರಿನ ದಾರಿ ಹಿಡಿದರು. ಅನೇಕರು ಸಂತೆಗೆ ಹೋಗುವವರು ಆ ದಾರಿಯಲ್ಲಿ ಓಡಾಡಿದ್ದರು, ಕುಳಿತು ಹರಟಿದ್ದರು. ಆ ಬಂಡೆಯ ಮೇಲೇ ಕುಳಿತು ಹರಟಿದ್ದರು ಕೆಲವರು.

ಮಾರನೆಯ ದಿನ ಇವರು ಬಂದವರು ಆ ರಂಧ್ರದ ಪಕ್ಕ ಇನ್ನೊಂದು ರಂಧ್ರ ತೋಡತೊಡಗಿದರು. ಹಿಂದಿನ ದಿನದ ಬೆಂಕಿ ಆದಾವ ಬಗೆಯಲ್ಲಿ ಇತ್ತೋ ಏನೋ. ಇವರು ಉಳಿಯಿಂದ ಟಕ್ಕಟಕ್ಕ ಕುಟ್ಟತೊಡಗಿದರು, ಅದರ ಪಕ್ಕದಲ್ಲಿ. ಆ ಸುಪ್ತವಾದ ಬೆಂಕಿ ಫಕ್ಕನೆ ಜಾಗೃತವಾಯ್ತೆಂದು ಕಾಣುತ್ತದೆ. ಅನೇಕ ದಿನಗಳ ಬಳಕೆಯಿಂದ ಸಿಡಿಮದ್ದು ತಮ್ಮ ಮುಟ್ಟಿಗೆ ಪಳಗಿ ಸಾಧುವಾಗಿದೆ ಎಂದು ಭಾವಿಸಿದ್ದರು ಈ ಇಬ್ಬರೂ. ನಾಲ್ಕು ಏಟಿನ ಒಳಗೇ ಭಯಂಕರ ಸದ್ದಿನೊಂದಿಗೆ ಅಗ್ನಿಜ್ವಾಲೆ ಸಿಡಿದೆದ್ದಿತು. ಇವರು ಹೊಸ ರಂಧ್ರಕ್ಕೆ ತುಂಬಲು ಒಯ್ದಿದ್ದ ಪುಡಿಯೂ ಹೊತ್ತಿ ಉರಿಯಿತೋ ಏನೋ. ಅಂತೂ ದೊಡ್ಡವನ ಬೆನ್ನು ಸುಟ್ಟಂತಾಗಿತ್ತು. ಹೆಚ್ಚು ಕಡಿಮೆ ಅರ್ಧಕ್ಕಿಂತ ಹೆಚ್ಚು ದೇಹ ಜ್ವಾಲೆಗೆ ಸಿಕ್ಕಂತಿತ್ತು.

ಕುಬಿ ಅವನಿಗೆ ಇಲಾಜು ಮಾಡುತ್ತಿದ್ದಾಗ ಅವನಿಗೆ ಹಲವಾರು ಉಗ್ರ ಮೇಹರೋಗಗಳೂ ಇದ್ದವು. ಏನಿದ್ದರೂ ಒಂದೇ. ಏಕೆಂದರೆ ಅವನು ಬದುಕಬಲ್ಲನೆಂಬುದರ ಬಗ್ಗೆ ಕುಬಿಗೆ ಹೆಚ್ಚಿನ ಆಸೆ ಇರಲಿಲ್ಲ. ಆದರೆ ಹೊದಿಕೆಯೊಳಗೆ ದೇಹವೆಲ್ಲ ಮುಚ್ಚಿದ್ದುದರಿಂದ ಆಸ್ಪತ್ರೆಯ ಮಂಚದ ಮೇಲೆ ಮಲಗಿದ್ದ ಅವನಿಗೆ ಏನೂ ಆಗಿಲ್ಲದಂತೆ ಕಾಣುತ್ತಿದ್ದ.

ಈ ಅಪಘಾತದ ಇತ್ಯೋಪರಿಗಳು ಸವಿವರವಾಗಿ ಪ್ರಚಾರವಾಗುತ್ತಾ ಬಂದಂತೆ, ಜನರು ಕರುಣೆ, ಅನುಕಂಪಗಳನ್ನು ಪ್ರಕಟಿಸುವುದನ್ನು ಕಡಿಮೆ ಮಾಡತೊಡಗಿದರು. "ಹುಚ್ಚು ಮುಂಡೇಗಂಡರು, ಮದ್ದಿನ ಹತ್ತಿರ ಚೆಲ್ಲಾಟವಾಡಲು

ಹೋದರೆ ಆಗುತ್ತದೆಯೇ!" ಎಂದು ಕೆಲವರು ಅವರ ಬಗ್ಗೆ ಟೀಕಿಸಿದರು. ಆ ಕಲ್ಲಿನ ಬಳಿಯೇ ಕುಳಿತು ಹಿಂದಿನ ದಿನ ಹರಟಿದ್ದ ಕೆಲವರು ಹೆದರಿ ಹೌಹಾರಿ, "ಮನೆಹಾಳ ಸೂಳೇಮಕ್ಕಳು ನಮಗೆ ಆ ಗತಿಯನ್ನು ತಂದಿಡಬೇಕೆಂದು ಮಾಡಿದ್ದರಲ್ಲಾ. ದೇವರ ದಯೆ. ಆ ಸೂಳೇಮಕ್ಕಳಿಗೆ ಒಳ್ಳೇ ಬುದ್ಧಿ ಕಲಿಸಿದ," ಎಂದು ದೇವರ ಮಹಿಮೆಯನ್ನೂ ಆ ಬಂಡೆಯ ಮಹಿಮೆಯನ್ನೂ ಕೊಂಡಾಡತೊಡಗಿದರು. ಏಕೆಂದರೆ ಕಲ್ಲು ವ್ಯವಹರಿಸಿದ ರೀತಿಯಲ್ಲಿಯೂ ಯಾವುದೋ ತರ್ಕಬದ್ಧತೆಯನ್ನು ಅವರು ಗುರುತಿಸಿದ್ದರು. ಏಕೆಂದರೆ ಕಳ್ಳನನ್ನು ಪತ್ತೆ ಮಾಡುವಂಥ ನಾಯಿ ಇರಬೇಕಾದರೆ!

ಇನ್‌ಸ್ಪೆಕ್ಟರ್ ಅಸ್ಗರ್ ಮಹಜರು ಮಾಡಿ ಎಲ್ಲರ ಹೇಳಿಕೆ ತೆಗೆದುಕೊಂಡು ರಿಪೋರ್ಟು ತಯಾರು ಮಾಡಿದ. ಈ ಬಗ್ಗೆ ಅವನಿಗೆ ಅಂಥ ಶ್ರದ್ಧಾಸಕ್ತಿಗಳೇನೂ ಇರಲಿಲ್ಲ. ಏಕೆಂದರೆ ಹಣವಂತ ಪಾರ್ಟಿಗಳಾರೂ ಇದಕ್ಕೆ ಸಂಬಂಧಿಸಿರಲಿಲ್ಲ.

೯

ಹಮಾಲರು ಸ್ಟೇಷನ್ನಿಗೆ ಹೋದಾಗ ಸ್ಟೇಷನ್ನಿನಲ್ಲಿ ಇನ್‌ಸ್ಪೆಕ್ಟರ್ ಅಸ್ಗರ್ ಇರಲಿಲ್ಲ. ಸಿಡಿಮದ್ದಿನ ದುರಂತದ ತನಿಖೆ ನಡೆಸಲು ಹೋಗಿದ್ದರು. ದಫೇದಾರ ನಂಜಪ್ಪನೇ "ಅಲ್ಲರೋ ಬೇಕೂಫ್ ಸೂಳೇಮಕ್ಕಳ! ಏನೋ ಕೋಪದಲ್ಲಿ ನಾವು ನಾಲ್ಕು ಹೊಡೆತ ಹೊಡೆದರೆ ಹೋಗಿ ಆ ಕುಬಿ ಡಾಕ್ಟರ ಹತ್ತಿರ ಚಾಡಿ ಹೇಳಿಕೊಂಡು ಅವನು ಹೇಳಿದಾಗೆ ಕುಣೀತಿದ್ದೀರಾ! ನಿಮ್ಮನ್ನ ಊರಾಗೆ ಇರ್ಲಿಲ್ಲಾಂತ ಮಾಡ್ತೀವಿ ನೋಡಿ. ಆ ಸೊಸೈಟಿ ಡೈರೆಕ್ಟರು ಅನ್ನ ಕೊಟ್ಟ ಧಣಿ. ಅವರ ಮೇಲೆ ಚಾಡಿ ಹೇಳಿದ್ದೀರೇನ್ರೋ!" ಎಂದು ರೇಗಾಡಿದ.

ಸೊಸೈಟಿ ಡೈರೆಕ್ಟರು ಶಿವಣ್ಣನಿಗೆ ಎಲ್ಲಾದರೂ ಈ ಹಮಾಲರು ತಾನು ಸೊಸೈಟಿಯ ಹಣ ತಿಂದುದರ ವಿವರಗಳನ್ನು ಬಹಿರಂಗಗೊಳಿಸುತ್ತಾರೋ ಎಂದು ಭಯವಿತ್ತು. ಅನೇಕ ಸಾರಿ ಕದ್ದು ಸಾಗಿಸುವಾಗಲೆಲ್ಲ ಈ ಹಮಾಲರೇ ಮೂಟೆಗಳನ್ನು ಲಾರಿಗೆ ಲೋಡು ಮಾಡಿದ್ದರು. ಗೊಬ್ಬರಕ್ಕೆ ಕಡೂರಿನ ಮರಳನ್ನೂ ಇವರ ಕೈಯಿಂದಲೇ ಮಿಶ್ರಮಾಡಿಸಿದ್ದ. ಆದ್ದರಿಂದಲೇ ಶಿವಣ್ಣ ಈ ಹಮಾಲರ ಮೇಲೆ ಕೊಂಚ ನಿಗ ಇಟ್ಟೇ ಇದ್ದ. ಬೇರೆ ಯಾವುದಾದರೂ ಒಂದು ಕೇಸಿನಲ್ಲಿ ಇವರನ್ನು ಸಿಕ್ಕಿಸಿ ಚರ್ಮ ಸುಲಿಸಿ ಹತ ಮಾಡಿಬಿಡಬೇಕೆಂದು ಹಂಚಿಕೆ ಹಾಕಿಕೊಂಡಿದ್ದ. ಅಥವಾ ಪ್ರಾಣಾಪಾಯದಷ್ಟು ತೊಂದರೆ ಕೊಟ್ಟು ಊರು ಬಿಡಿಸಿಬಿಡಬೇಕೆಂದು ಆಲೋಚಿಸಿದ್ದ. ಕುಬಿ ಡಾಕ್ಟರು ಈ ಹಮಾಲರ ಬಗ್ಗೆ ಆಸಕ್ತಿವಹಿಸಿದುದನ್ನು ನೋಡಿ ಇವನಿಗೆ ಇನ್ನೂ ದಿಗಿಲಾಗಿತ್ತು. ಇದರೊಡನೆ ಹಮಾಲರು, "ಡಾಕ್ಟರು ಮ್ಯಾಲಿನೋರಿಗೆ ಎಲ್ಲಾ ರಿಪೋರ್ಟು ಮಾಡುತ್ತಾರಂತೆ," ಎಂದು ಅಲ್ಲಲ್ಲಿ ಹೇಳಿದ್ದೂ ಶಿವಣ್ಣನ ಕಿವಿಗೆ ಬಿದ್ದಿತ್ತು. ವಾಸ್ತವವಾಗಿ ಹಮಾಲರಿಗೆ ಈ ಯಾವ ದುರ್ವ್ಯವಹಾರಗಳೂ ಗೊತ್ತಿರಲಿಲ್ಲ. ಮರಳನ್ನೂ ಯಾವುದೋ ಒಂದು ರಾಸಾಯನಿಕ ಗೊಬ್ಬರ ಎಂದೇ ಮಿಶ್ರ ಮಾಡಿದ್ದರು.

ಇಯಾಲಳ ಕೊಲೆ ಶಿವಣ್ಣನಿಗೆ ಸೂಕ್ತ ಸಂದರ್ಭದಂತೆ ಕಂಡಿತ್ತು. ಈ ಬಗ್ಗೆ ಅವನು ಪೋಲೀಸ್ ಇನ್‌ಸ್ಪೆಕ್ಟರನ್ನು ಕಾಣಲು ಆಲೋಚಿಸುತ್ತಿರುವಾಗಲೇ ಅರಪರ ಸೇಸ, ರೈಟರ್ ಓಬ್ರಿನ್ ಒಬ್ಬೊಬ್ಬರಾಗಿ ನಾಪತ್ತೆಯಾಗತೊಡಗಿದ್ದು ಒಂದು ಆಶಾಕಿರಣದಂತೆ ಕಂಡಿತು. ಅವನು ಅಸ್ಗರ್‌ಗೆ ಅವರನ್ನು ಸಾಯಬಡಿಯಿರಿ ಎಂದು ಹೇಳಿದ್ದ. ಏಕೆಂದರೆ ಮಧ್ಯದಲ್ಲಿ ತಾನು ಭಾರೀ ಕರುಣೆ ಇರುವವನಂತೆ ತಲೆಹಾಕಿ ಹಮಾಲರಿಗೆ ಹಣ ಕೊಟ್ಟು ಊರು ಬಿಡುವಂತೆ ಪ್ರೇರಿಸಿಬಿಡುವುದು ಎಂದು ಅವನ ಹಂಚಿಕೆಯಾಗಿತ್ತು. ಶಿವಣ್ಣ ಇಷ್ಟೊಂದು ತವಕದಿಂದಿರಲು ಮೂಲ ಕಾರಣ ಸೊಸೈಟಿಯಲ್ಲಿ ಪೋಲಾದ ಹಣ ಸಣ್ಣ ಪ್ರಮಾಣದ್ದೇನೂ ಆಗಿರಲಿಲ್ಲ. ಸುಮಾರು ಹದಿನೇಳು ಲಕ್ಷ ರೂಪಾಯಿಗಳ ವರೆಗೆ ಇತ್ತು. ಅಷ್ಟೊಂದನ್ನು ಯಾರು ನುಂಗಿದ್ದರೋ ಏನೋ! ಅಂತೂ ಶಿವಣ್ಣ ಕೊಳ್ಳೆ ಹೊಡೆಯುತ್ತಿರುವುದನ್ನು ನೋಡಿ ಸಿಕ್ಕಸಿಕ್ಕವರೆಲ್ಲಾ ದೋಚಿಕೊಂಡಿದ್ದರು. ಬಹುಶಃ ಹಮಾಲರನ್ನು ಉಳಿ

ಸುವ ನೈತಿಕ ಅಧಿಕಾರ ಕುಬಿ ಡಾಕ್ಟರರನ್ನು ಬಿಟ್ಟರೆ ಇನ್ನು ಯಾರಿಗೂ ಇರಲಿಲ್ಲೆಂದು ಕಾಣುತ್ತದೆ. ಈಗ ಆ ಹಣವನ್ನು ದಕ್ಕಿಸಿಕೊಳ್ಳಲು ಶಿವಣ್ಣ-ನಿಗೆ ಉಳಿದುದು ಒಂದೇ ಮಾರ್ಗ. ಯಾರನ್ನೋ ತ್ತ ಕೊಂದೋ ದೇಶಾಂತರ ಕಳಿಸಿಯೋ ನಾಪತೆ ಮಾಡಿ ಆ ಕಳ್ಳತನ ಅವರ ಮೇಲೆ ಹೊರಿಸಿ ಬಿಡುವುದು.

ಹಮಾಲರ ರಂಗ ಪೋಲೀಸ್ ಸ್ಟೇಷನ್ನಿನಿಂದ ಹೊರಬಿದ್ದಾಗ, "ರಹಮಾನಣ್ಣ, ಆಫ್ಸರ್ ಸಾಬು ನಿನ್ನನ್ನೇನೋ ಜಾತಿವಸ್ತ ಅಂತಲಾದರೂ ಬಿಡ ಬಹುದೇನೋ! ನನ್ನ ಮಾತ್ರ ಉಳಸಾಕಿಲ್ಲ ರಹಮಾನಣ್ಣ," ಎಂದು ಹೇಳಿದ. ರಹಮಾನ್ ಮಾತಾಡಲಿಲ್ಲ. ಚಿಂತಾಕ್ರಾಂತನಾಗಿದ್ದ ಆತ. ತಮ್ಮಿಬ್ಬರಿಗೂ ಸಂಬಂಧವೇ ಇರದ ಯಾವುದೋ ವ್ಯೂಹದಲ್ಲಿ ತಾವು ಯಜ್ಞಪಶುಗಳಾಗಿರುವುದು ಅವರಿಗೆ ಗೊತ್ತಾಗತೊಡಗಿತ್ತು. ಇಬ್ಬರೂ ಒಳ ಗಿಂದೊಳಗೇ ಊರು ಬಿಟ್ಟು ಪರಾರಿಯಾಗಿ ಬಿಡ ಬೇಕೆಂದು ನಿರ್ಧರಿಸಿದ್ದರು. ಅವರಿಗೂ ಗೊತ್ತಿತ್ತು ತಾವು ನಾಪತ್ತೆಯಾದ ಕೂಡಲೇ ಇಯಾಲಳ ಕೊಲೆ ತಮ್ಮ ತಲೆಗೆ ಸುತ್ತಿಕೊಳ್ಳುತ್ತದೆಂದು. ಆದರೆ ಬೇರೆ ವಿಧಿಯೇ ಇರಲಿಲ್ಲ ಅವರಿಗೆ. ಕುಬಿ ಡಾಕ್ಟರಿಗೆ ಒಂದು ಮಾತು ಕೇಳಿ ಹೋಗಿ ಬಿಡೋಣ ಎಂದುಕೊಂಡು ಆಸ್ಪತ್ರೆ ಕಡೆ ಬಂದರು ಅವರಿಬ್ಬರೂ.

ಆಸ್ಪತ್ರೆಗೆ ಅವರಿಬ್ಬರೂ ಬಂದಾಗ ಕುಬಿ ಮತ್ತು ರಾಮರಾಯರಿಬ್ಬರೂ ಮೈ ಸೀದು ಹೋಗಿದ್ದ ಲೋರಿಯ ಬಳಿ ಅತ್ಯಂತ ಏಕಾಗ್ರತೆ ಯಿಂದ ಉಪಚರಿಸುತ್ತಾ ಕುಳಿತಿದ್ದರು. ಕತ್ತಲಾಗುತ್ತಿತ್ತು. ಭಾರಿ ಕೆಲಸ ಮಾಡಿದವರಿಗೆ ಸುರಿದಂತೆ ಒಂದೇ ಸಮ ಬೆವರು ಸುರಿಯತೊಡ ಗಿತ್ತು ಅವರ ಮುಖದಲ್ಲಿ. ಲೋರಿಯ ರಕ್ತಕ್ಕೆ ಗ್ಲೂಕೋಸ್ ಸಲೈನ್ ಕೊಡುತ್ತಿದ್ದರು. ಲೋರಿ ಇನ್ನೇನು ಈಗಲೋ ಆಗಲೋ ಎನ್ನುವಂತಿ ದ್ದನು. ಹಮಾಲರನ್ನು ಕಂಡೊಡನೆಯೇ ಕುಬಿ ಸನ್ನೆ ಮಾಡಿಯೇ ಮಾತನಾಡಬೇಡಿ ಹೋಗಿ ಹೋಗಿ ಎಂದು ತಿಳಿಸಿದ.

ಬೆಳಿಗ್ಗೆ ನೋಡಿದಾಗ ಹಮಾಲರು ಊರಿನಿಂದ ಅಂತರ್ಧಾನವಾಗಿದ್ದಾರೆಂದು ಗೊತ್ತಾಯಿತು. ಜನರು ಒಬ್ಬೊಬ್ಬರಾಗಿ ಅಂತರ್ಧಾನವಾಗುವು ವನ್ನು ಕಂಡು ಭೈರಾಪುರವಾಸಿಗಳು ಈ ಸಾರಿ ಚಕಿತರಾದರು. ಜೊತೆಗೆ ಅರವರು ಭಾರಿ ದಂಗೆ ಎದ್ದು ಊರು ಮುತ್ತುತ್ತಾರೆಂಬ ವಾರ್ತೆ ಹಬ್ಬಿ ಹೋಟೆಲು, ಅಂಗಡಿಗಳನ್ನು ಮುಚ್ಚ ತೊಡಗಿದರು.

ಶಿವಣ್ಣ ಇನ್‌ಸ್ಪೆಕ್ಟರನ್ನು, "ಒಳ್ಳೆಯ ಕೆಲಸ ಮಾಡಿದೆ. ಏನು ಮಾಡಿದೆ ಅವರನ್ನು," ಎಂದು ಕೃತಜ್ಞತೆಯಿಂದ ಕೇಳಿದ.

"ನಾವೇನು ಮಾಡಿದೆವೆನ್ನೋದನ್ನೆಲ್ಲ ಹಾಗೆ ಬಿಟ್ಟುಕೊಡೋದಕ್ಕಾಗೊಲ್ಲ. ನೀನು ಆ ತರಲೇ ಡಾಕ್ಟರು ನನ್ನ ಮೇಲೇನೂ ರಿಪೋರ್ಟು ಮಾಡ ದಂತೆ ನೋಡಿಕೋ!" ಎಂದು ಶಿವಣ್ಣನಿಗೆ ಇನ್‌ಸ್ಪೆಕ್ಟರು ಹೇಳಿದ. ಶಿವಣ್ಣನಿಂದ ಸರಿಯಾಗಿ ಸುಲಿಯಬೇಕೆಂದು ಅವನು ನಿರ್ಧರಿಸಿಯೇ ಹಮಾಲರು ತಾವಾಗೇ ಓಡಿಹೋದರೆಂದು ತಿಳಿಸ ಲಿಲ್ಲ.

೧೦

ಹಮಾಲರು ಹಿಂದಿನ ದಿನ ಸಾಯಂಕಾಲ ಬಂದಾಗ ಕುಬಿ ಡಾಕ್ಟರು ನಿತಾಂತ ಹೆಣಗು-ತ್ತಿದ್ದುದಕ್ಕೆ ಒಂದು ಕಾರಣವಿತ್ತು.

ಲೋರಿಗೆ ಏನೂ ಗಾಯವಾಗದೆ ಕೇವಲ ಮೈ ಸುಟ್ಟುದರಿಂದ ಅವನಿಗೆ ತಾನು ಸಾಯು-ತ್ತೇನೆಂಬ ನಂಬಿಕೆ ಇರಲಿಲ್ಲ. ಆದರೆ ದಿನ ಕಳೆದಂತೆ, ಸುಟ್ಟ ಗಾಯದಿಂದ ನೀರು ಇಳಿದಂತೆ ಇಳಿದಂತೆ ಅವನ ಚೈತನ್ಯ ಉಡುಗುತ್ತಾ ಅವಸಾನ ಹತ್ತಿರ ಹತ್ತಿರಾಗತೊಡಗಿತು. ಪ್ರಜ್ಞೆ ಮಂದಮಂದ ವಾಗತೊಡಗಿತು. ಭ್ರಮಾಧೀನನಂತೆ ಮಾತಾಡ ತೊಡಗಿದ. ಕುಬಿ ಮನೆಗೆ ಹೋಗುತ್ತಾ ರಾಮರಾಯನನ್ನು ರೋಗಿಯ ಬಳಿ ಬಿಟ್ಟು ಇವನು ಉಳಿಯುವ ಸಂಭವ ತೀರಾ ಕಡಿಮೆ ಎಂದು ಹೇಳಿಹೋಗಿದ್ದ. ರಾಮರಾಯ ಇನ್ನು ಉಳಿಯಲಾರನೆಂದೆನ್ನಿಸಿದ ಮೇಲೆ ಇವನ ಸಂಬಂಧಿಕರು ಯಾರಿದ್ದಾರೆ? ಎಲ್ಲಿದ್ದಾರೆ? ಎಂದು ಕೇಳಿದ. ಅದು ರೋಗಿಗೆ ಏನು ಎಂದು ಕೇಳಿತೋ ಏನೋ! ಇದ್ದಕ್ಕಿದ್ದಂತೆ ಗೋಳೋ ಎಂದು ಅಳುತ್ತಾ ಆ ಬಂಡೆಯ ಬಳಿಯಲ್ಲಿ

ಕಿರಿಸ್ತಾನರ ಹುಡುಗಿಯನ್ನು ತಾನೇ ಕೊಂದಿದ್ದು! ಎಂದು ಹಲವರಿಯುತೊಡಗಿದ.

ರಾಮರಾಯನಿಗೆ ಹೃದಯಾಘಾತವಾದಂತಾಯ್ತು. ಈ ವಾಸ್ತವವನ್ನು ಎದುರಿಸಲಾರದವನಂತೆ ತತ್ತರಿಸಿ ಕುಬಿ ಬಳಿ ಓಡಿ ಹೋಗಿ ಎಲ್ಲವನ್ನೂ ವರದಿಮಾಡಿದ.

ಕುಬಿ ಏನೋ ಒಂದು ಆಶಾಕಿರಣ ಕಂಡವನಂತೆ ಜಾಗ್ರತೆ ಆಸ್ಪತ್ರೆಗೆ ಬಂದಾಗ ಲೋರಿ ಪ್ರಜ್ಞಾಶೂನ್ಯನಾಗಿದ್ದನು. ಅವನ ಪ್ರಾಣ ಇನ್ನೇನು ಹಾರಿಹೋಗುವುದರಲ್ಲಿತ್ತು.

ಕುಬಿಯ ಎದುರು ಒಂದು ದೊಡ್ಡ ಸಮಸ್ಯೆಯೇ ಮಲಗಿತ್ತು— ಲೋರಿ ಹಾಗೆ ಹೇಳಿದನೋ ಇಲ್ಲವೋ! — ರಾಮರಾಯನೇ ಹಾಗೆಂದು ಭ್ರಮಿಸಿದನೋ! —ಅಥವಾ ಖೂನಿ ಮಾಡಿದ್ದರೆ ಏಕೆ ಖೂನಿ ಮಾಡಿದ?— ಈ ಸಮಸ್ಯೆಗಳನ್ನು ಎಂದೂ ಯಾರೂ ಬಿಡಿಸದಂತೆ, ನಂಬಲೂ ಸಾಧ್ಯವಾಗದಂತೆ ಉಳಿಸಿ ಇವನು ಸಾಯುತ್ತಾನೆ!

ಈಗ ಇವನನ್ನು ಇನ್ನೊಮ್ಮೆ ಮಾತನಾಡುವಂತೆ ಮಾಡಬೇಕು. ಒಂದೇ ಒಂದು ಕ್ಷಣ ಯಮಪಾಶದಿಂದ ಕಳಚಿ ಪ್ರಜ್ಞೆ ಬರಿಸಿ ವಿವರವನ್ನು ಕೇಳಬೇಕು. ಕುಬಿ ದೃಢ ಮನಸ್ಸಿನಿಂದ ಗ್ಲೂಕೋಸ್ ಸಲೈನ್, ಹಿಮೋಗ್ಲೋಬಿನ್, ಆಮ್ಲಜನಕ ಸಿಲಿಂಡರ್ ಎಲ್ಲ ಇಟ್ಟುಕೊಂಡು ಹೋರಾಡತೊಡಗಿದ. ಹಮಾಲಿಗಳು ಬಂದಿದ್ದೂ ಹೋಗಿದ್ದೂ ಅವನಿಗೆ ಯಾವುದೂ ಪ್ರಜ್ಞಾಗಮ್ಯವಾಗಿರಲಿಲ್ಲ.

ಕುಬಿ ಕಾರ್ಯರಂಗಕ್ಕಿಳಿದಾಗ ಲೋರಿ ಅಕ್ಷರಶಃ ಸತ್ತಂತಿದ್ದ. ರಾಮರಾಯನಿಗಂತೂ ನಾಡಿ ಸಹ ಸಿಕ್ಕಲಿಲ್ಲ. ಕುಬಿ ಅವನ ಎದೆ ನೀವಿ ಉಸಿರಾಟವನ್ನೂ ಆರಂಭಿಸಿ ಕೋರಮಿನ್ ಇಂಜಕ್ಷನ್ನು ಕೊಟ್ಟು ತನ್ನ ಮುಂದಿನ ಸವಾಲನ್ನು ಒಮ್ಮನಸ್ಸಿನಿಂದ ಇದಿರಿಸಿದ.

ರಾಮರಾಯನಿಗೆ ಆ ರಾತ್ರಿಯಲ್ಲಿ ಕುಬಿಯ ಕೆಲಸವೆಲ್ಲಾ ವಾಮಾಚಾರದಂತೆ, ಶಾಕ್ತರು ಕಾಪಾಲಿಕರು ಸ್ಮಶಾನದಲ್ಲಿ ಹೆಣದೊಡನೆ ನಡೆಸುವ ಕರ್ಮಗಳಂತೆ ಕಂಡವು. ಕುಬಿ ಅಮಾನುಷ ವ್ಯಕ್ತಿಯೆಂಬ ಅವನ ಗುಮಾನಿ ಮತ್ತೂ ದೃಢವಾಗತೊಡಗಿತು. ಸುಮಾರು ಮಧ್ಯರಾತ್ರಿಯ ಹೊತ್ತಿನಲ್ಲಿ ಭೂತ ಆವಾಹನೆಯಾದ ಹೆಣದಂತೆ ರೋಗಿಗೆ ಪ್ರಜ್ಞೆ ಬಂದು ಕ್ಷೀಣವಾಗಿ ಏನೇನೋ ಪಿಟಿಪಿಟಿ ಎನ್ನತೊಡಗಿದ. ಕುಬಿ ಅದೇನೆಂದು ತಿಳಿದುಕೊಳ್ಳಲು ರಾಮರಾಯನಿಗೆ ಹೇಳಿದ. ರಾಮರಾಯ ಯಾಕೆ ಕೊಂದೆ ಹುಡುಗಿಯನ್ನ? ಯಾಕೆ ಕೊಂದೆ ಹುಡುಗಿಯನ್ನ? ಎಂದು ಗಟ್ಟಿಯಾಗಿ ಕಿವಿಯಲ್ಲಿ ಕೇಳುವುದು, ಬಾಯಿಯ ಬಳಿ ಕಿವಿಯಿಟ್ಟು ಕೇಳುವುದು, ಮಾಡುತ್ತಿದ್ದ. ರಾಮರಾಯನ ಧ್ವನಿ ಆ ನಡುರಾತ್ರಿಯಲ್ಲಿ ಖಾಲಿ ಆಸ್ಪತ್ರೆಯಲ್ಲಿ ಯಾವುದೋ ಒಂದು ಅಶರೀರ ವಾಣಿಯಂತೆ ಮೊಳಗುತ್ತಿತ್ತು. "ಹ್ಞೂ ಹೇಳು ಹ್ಞೂ" ಎಂದು ಆಗಾಗ್ಗೆ ರಾಮರಾಯ ಕೂಗುತ್ತಿದ್ದ. ಯಾರೋ ದೂರದ ಊರಿಗೆ ಫೋನಿನಲ್ಲಿ ಮಾತಾಡುತ್ತಿದ್ದಂತೆ ಭಾಸವಾಗುತ್ತಿತ್ತು ಕುಬಿಗೆ. ರಾಮರಾಯ ಕೇಳಿಸಿಕೊಂಡುದರ ಒಟ್ಟು ಸಾರಾಂಶ ಇಷ್ಟು— ಮುಟ್ಟಾಗದ ಹುಡುಗಿಯರನ್ನು ಕೂಡಿದರೆ ಹೆಂಗಸರ ರೋಗ ಹೋಗುತ್ತದೆ—ಎಂದು.

"ಅದು ಸರಿ! ಏಕೆ ಕೊಂದೆ? ಏಕೆ ಕೊಂದೆ?" ರಾಮರಾಯ ಶಕುನವತ್ತಾಗಿ ಅವನ ಕಿವಿಯಲ್ಲಿ ಕೂಗುತ್ತಲೇ ಇದ್ದ. ರೋಗಿಯ ಪ್ರಜ್ಞೆ ಮತ್ತೆ ನಿಧಾನವಾಗಿ ಸುಷುಪ್ತಿಯಲ್ಲಿ ಕರಗಿಹೋಯ್ತು.

ಕುಬಿ ಹೊರಬಂದ. ಕಗ್ಗತ್ತಲು ಕವಿದಿತ್ತು. ಪ್ರವಾದಿಯಂತೆ ಮುಂಬರುವ ನಾಳೆಗಳನ್ನು ಆಲೋಚಿಸಿದ. "ಲೋರಿ ಬಹುಶಃ ಮೈನೆರೆಯದ ಕನ್ನೆಯನ್ನು ಸಂಭೋಗಿಸಿದರೆ ಮೇಹರೋಗ ಹೋಗುತ್ತದೆಂದು ಈ ಕೆಲಸ ಮಾಡಿದ್ದಾನೆ. ಯಾರಿಗೂ ತಿಳಿಯದಿರಲೆಂದೋ, ಅಥವಾ ಇವಳೂ ದೊಡ್ಡವಳಾಗಿದ್ದವಳೇ ಎಂದು ತಿಳಿದಾಗಿನ ಸಿಟ್ಟಿನಿಂದಲೋ, ಅಥವಾ ತೊಡೆ ಮುರಿದು ಪ್ರಜ್ಞಾಶೂನ್ಯಳಾದಾಗ ಸತ್ತೇ ಹೋದಳೆಂದೋ ಕೊಂದು ಹಾಕಿದ್ದಾನೆ.

ಬೆಳಿಗ್ಗೆ ಈ ಸಮಾಚಾರದಿಂದ ಹಮಾಲರಿಗೆ ವಿಮೋಚನೆ. ಇಡೀ ಊರಿಗೆ ಅಮರಿಕೊಂಡ ಒಂದು ಪೀಡೆ ಕಳೆಯುತ್ತದೆ.

ಧೂಪದ ಮರದ ಕಲ್ಲುಬಂಡೆ ಶಾಶ್ವತವಾಗುತ್ತದೆ. ಒಂದು ಕುರುಡು ನಂಬಿಕೆಯಿಂದ ಜನ

ಇನ್ನೊಂದಕ್ಕೆ ಹಬ್ಬಿಕೊಳ್ಳುತ್ತಾರೆ. ಆ ಬಂಡೆ ಯಾತ್ರಾಸ್ಥಳವಾಗಿ ಜನ ಸುಪ್ತವಾಗಿ ಪ್ರಶಂಸಿಸಿದ್ದ ಅದು ಅಲ್ಲಿ ಶಾಶ್ವತವಾಗುತ್ತದೆ.

ಬೆಳಿಗ್ಗೆ ಮೊದಲು ಆ ಹಮಾಲರ ತಂಟೆಗೆ ಹೋಗದಂತೆ ಇನ್ಸ್‌ಪೆಕ್ಟರಿಗೆ ಎಚ್ಚರಿಕೆ ಕೊಡಬೇಕೆಂದುಕೊಂಡ. ತನ್ನ ವೃತ್ತಿಯಿಂದಾಚೆಗೂ ಹಬ್ಬುತ್ತಿರುವ ಜವಾಬ್ದಾರಿಯನ್ನು ತಪ್ಪಿಸಿಕೊಂಡರೂ ಏನು ಸಾಧಿಸಿದಂತಾಯ್ತೆಂದು ಆಲೋಚಿಸಿದ ಕುಬಿ.

೧೧

ಬೆಳಗ್ಗೆ ಲೋರಿಯ ವಾರ್ತೆ ಕಾಳ್ಗಿಚ್ಚಿನಂತೆ ಊರೆಲ್ಲಾ ಹಬ್ಬಿತು, ಇನ್ಸ್‌ಪೆಕ್ಟರೇ ಅರವರ ಸೇಸನನ್ನು ಕೊಂದಿದ್ದಾರೆಂದು ಅರವರ ಕೇರಿಯವರೆಲ್ಲಾ ಏಕಾಏಕಿ ಪೋಲೀಸ್ ಸ್ಟೇಷನ್ನಿನ ಮೇಲೆ ಸಶಸ್ತ್ರ ಧಾಳಿಗೆ ಸಿದ್ಧರಾದರು.

ಕುಬಿಯ ಗ್ರಹಿಕೆಗಿಂತ ವೇಗವಾಗಿ ಘಟನೆಗಳು ಸಂಭವಿಸತೊಡಗಿದುವು. ಆದರೆ ಭೈರಾಪುರದ ಜನರಿಗೆ ಎಲ್ಲವೂ ತಿಳಿನೀರಿನಂತೆ ಸ್ಪಷ್ಟ. ಲೋರಿ ಪುಟ್ಟ ಸುಂದರಿ ಇಯಾಲಳ ಮೇಲೆ ಅತ್ಯಾಚಾರ ಮಾಡಿ ಕೊಂದ. ಅದಕ್ಕೆ ಅವಳು ಇವರು ಬಂಡೆ ಒಡೆಯುತ್ತಿರಬೇಕಾದರೆ ರಣವಾಗಿ ಬಂದು ಬಡಿದಳು. ಇಲ್ಲದಿದ್ದರೆ ಒಂದು ದಿನದ ವರೆಗೂ ಸುಪ್ತವಾಗಿ ಉಳಿದಿದ್ದ ಕಿಡಿ ಯಾರಿಗೂ ತೊಂದರೆ ಕೊಡದೆ ಇವರನ್ನೇ ಕೊಲ್ಲಲು ಇನ್ನೇನು ಕಾರಣ ?

ಕುಬಿ ಡಾಕ್ಟರು ಸತ್ತ ಲೋರಿಯ ಹೆಣದ ಮೇಲೆ ಅವನ ಪ್ರೇತವನ್ನು ಆವಾಹನೆ ಮಾಡಿ ಈ ಎಲ್ಲ ಸತ್ಯಗಳನ್ನೂ ಕೇಳಿ ತಿಳಿದರು. ಮಹಾ ಸತ್ಯನಿಷ್ಠ ಕುಬಿ ಡಾಕ್ಟರು ಎಂದರೆ ದೈಯ್ಯ ಪ್ರೇತ ಪಿಶಾಚಿಗಳೂ ತಗ್ಗಿ ನಡೆಯುತ್ತವೆ !

ಹೀಗೆಲ್ಲಾ ಆಲೋಚಿಸಿ ಜನ ಧೂಪದ ಮರದ ಬಂಡೆಯನ್ನೂ ಕುಬಿ ಡಾಕ್ಟರನ್ನೂ ಕೊಂಡಾಡತೊಡಗಿದರು. ಕುಬಿ ತಾನು ಯಾವುದನ್ನು ಸಂಬದೆ ವಿರೋಧಿಸಿ ತಿರಸ್ಕರಿಸಿದ್ದ ನೋ ಅದನ್ನೇ ಗೂಢವಾಗಿ ಇನ್ನೊಂದು ಕಡೆಯಿಂದ ಪ್ರತಿಪಾದಿಸುತ್ತಲೂ ಬಂದುದು ಕಾಲಪುರುಷನ ಅಪಹಾಸ್ಯ, ಇತಿಹಾಸದ ವ್ಯಂಗ್ಯ. ✡



ಏಪ್ರಿಲ್ 1973

ಕೇಂದ್ರ ಆರೋಗ್ಯ ಶಾಖೆಯು ನಡೆಸಿದ ಸ್ಯಾಂಪಲ್ ಸರ್ವೆಯಲ್ಲಿ ಕಂಡು ಬಂದುದಿಷ್ಟು :

* ಶೇಕಡಾ ೭೪.೩ ದಂಪತಿಗಳು ತಮ್ಮ ಸಂತತಿಯನ್ನು ನಾಲ್ಕಕ್ಕೆ ಮಿತಗೊಳಿಸಬಯಸುತ್ತಾರೆ.

* ಹೆಂಡತಿಯ ಶಿಕ್ಷಣ ಮಟ್ಟ ಹೆಚ್ಚಿದಂತೆ ಅವಳು ಬಯಸುವ ಮಕ್ಕಳ ಸಂಖ್ಯೆಯು ಮಿತಿ ಕಿರಿದಾಗುತ್ತ ಹೋಗುತ್ತದೆ. ಕಾಲೇಜ್ ಶಿಕ್ಷಣ ಹೊಂದಿದ ವಿವಾಹಿತ ಸ್ತ್ರೀಯರಲ್ಲಿ ಶೇಕಡಾ ೭೮ ಜನಕ್ಕೆ ಮೂರಕ್ಕಿಂತ ಹೆಚ್ಚು ಮಕ್ಕಳು ಬೇಡ. ಶೇಕಡಾ ೧೯.೯ ರಷ್ಟು ಜನಕ್ಕೆ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳು ಬೇಕು.

* ತಮ್ಮ ವಂಶವೃದ್ಧಿಗಾಗಿ ಗಂಡು ಮಗು ಬೇಕೇಬೇಕೆಂದು ಶೇಕಡಾ ೯೧ರಷ್ಟು ವಿವಾಹಿತ ಪುರುಷರೂ ಶೇಕಡಾ ೮೫.೯ ರಷ್ಟು ವಿವಾಹಿತ ಸ್ತ್ರೀಯರೂ ನಂಬುತ್ತಾ

ವೀಣಾ

ಮರೀಚಿಕೆ

ಟಾಟಾ ಆಂಟಿ"; "ಸೂಟಿ ಆದಕೂಡ್ಲೆ ಪಿಲೂ—ಸತೀಶ ಇಬ್ರನ್ನೂ ಕಳಿಸಬೇಕು. ಹಾಂ"; "ಆಂಟಿ ಟಾಟಾ"—ಅಕ್ಕನ ಮೂರೂ ಮಕ್ಕಳು ಮರಾಠಿಯಲ್ಲಿ ಒಂದೇ ಸಮನೆ ಕಿರುಚುತ್ತಿರುವಾಗ ಈ ಬಸ್ಸು ಒಮ್ಮೆ ಬಿಟ್ಟರೆ ಸಾಕು ಅನ್ನಿಸಿತು ಆಕೆಗೆ. ಅಲ್ಲ, ರಾತ್ರಿ ಹನ್ನೊಂದಾಗಲು ಬಂದಿರಬೇಕು. ಸುಮ್ಮನೆ ಮನೆಯಲ್ಲಿ ಮಲಗುವುದು ಬಿಟ್ಟು 'ಆಂಟೀನ್ನ ಕಳಿಸ್ಲಿಕ್ಕೆ ನಾವೂ ಬರ್ತೀವಿ' ಅಂತ ಹಟ ಹಿಡಿದು ತಾವೂ ಬಂದಿವೆ; ಅಕ್ಕನಿಗಾದರೂ ಕಂಡಲ್ಲಿ ಹೀಗೆ ಹುಡುಗರನ್ನು ಕರಕೊಂಡು ಹೋಗುವುದರಲ್ಲಿ ಎಂತಹ ಹುರುಪೋ ಏನೋ. ಅವಳಿಗೆ ಯಾತರಲ್ಲೂ ಬೇಸರವಿಲ್ಲ. ಬಸ್‌ಸ್ಟ್ಯಾಂಡಿಗೆ ಹೋಗುವುದೆಂದು



ರಾತ್ರಿ ಎಷ್ಟು ಉತ್ಸಾಹದಿಂದ ಅಡಿಗೆ ಮಾಡಿದಳು! ಎಲ್ಲರಿಗೂ ಬಡಿಸಿದಳು. ತಿರುಗಿ ಆಗಿಂದಾಗ ಊಟದ ಟೇಬಲ್ಲು, ಅಡಿಗೆ ಮನೆ ಎಲ್ಲ ಸ್ವಚ್ಛ ಮಾಡಿದಳು. ಗಂಡನ ಕೂಡ ಎಷ್ಟು ನಗುನಗುತ್ತ ಮಾತಾಡುತ್ತಾಳೆ ಅಕ್ಕ—ಲಗ್ನವಾಗಿ ಹನ್ನೆರಡು ವರ್ಷಗಳ ನಂತರ ಸಹ. ಅದೇ ಗಂಡ, ಅದೇ ಮಕ್ಕಳು, ಅದೇ ಮನೆ, ಅದೇ ಕೆಲಸ—ದಿನಾ ಅದೇ ಅದೇ. ಆದರೂ ಇನ್ನೂ ನಿನ್ನೆ ಲಗ್ನವಾದ ಹುಡುಗಿಯ ಹಾಗೆ ಆಡುತ್ತಾಳೆ ಅಕ್ಕ. ಈ ಎಲ್ಲದರಿಂದ ಓಡಿಹೋಗಬೇಕು ಒಮ್ಮೆಯಾದರೂ, ತುಸು ಹೊತ್ತಾದರೂ–ಅಂತ ಅವಳಿಗೆಂದೂ ಅನಿಸಿರಲಿಕ್ಕೇ ಇಲ್ಲವೆ?

"ಮಿನೀ, ಇನ್ನೊಮ್ಮೆ ಕೊಲ್ಹಾಪುರಕ್ಕ ಬರುವಾಗ ಹೀಂಗ ಒಬ್ಬಾಕಿನೇ ಬರಬ್ಯಾಡ ಹ್ಞಾ, ನಿನ್ನ ಯಜಮಾನರನ್ನ ಹುಡುಗರನ್ನ ಕರಕೊಂಡ ಬಾ,"– ಅಕ್ಕ. "ಅಲ್ಲೇನ್ರಿ?" —"ಹ್ಞಾ, ಹೌದು, ಹೌದು" ಅಂತ ಸೋ ಹಾಕಿದ ಅಕ್ಕನ ಗಂಡ. ಒತ್ತರಿಸಿ ಬರುತ್ತಿರುವ ಬೇಸರ ಮುಚ್ಚಿಡಲು ಅಷ್ಟೇನೂ ಪ್ರಯತ್ನಪಡದೆ ಆಕೆ ಮಾತಾಡಿದಳು, "ನೀವಿನ್ನ ಮನಿಗೆ ಹೋಗ್ರಿ ಅಕ್ಕಾ, ಹುಡುಗರಿಗೆ ನಿದ್ದೆಯ ಹೊತ್ತು." "ಹ್ಞಾ ಹ್ಞಾ ಹೋಗ್ತೇವಿ. ನಿನಗೇನ ಬಸ್ಸಿನೊಳಗ ತ್ರಾಸಾಗ್ಲಿಕ್ಕಿಲ್ಲಲ್ಲ ಮಿನೀ; ಪುಶ್‌ಬ್ಯಾಕ್ ಸೀಟ್ಸ್ ಅವ. ಮಲಕೊಂಡಬಿಡು. ನೀ ಕಣ್ಣ ತಗಿಯೂದ್ರಾಗ ಪುಣೆ ಬಂದಿರ್ತದ." –ಅಷ್ಟಂದು ಅಕ್ಕ ಒಮ್ಮೆಲೆ ಗಂಡನ ಕಡೆಗೆ ಹೊರಳಿ ಬಹಳ ಕಾಳಜಿಯ ಧ್ವನಿಯಲ್ಲಿ ಹೇಳಿದಳು, "ಮರೆತು ಬಿಟ್ಟೆ: ಹಾಲಿನ ಭಾಂಡಿಯ ಮ್ಯಾಲ ಮುಚ್ಚಲೇ ಇಲ್ಲ. ಹಾಳು ಬೆಕ್ಕು—"

ಹಾಲಿನ ಸಲುವಾಗಿ ಅಕ್ಕನಿಗೆ ಇರುವ ಕಾಳಜಿ ನೋಡಿ ಆಕೆಗೆ ನಿಜವಾಗಿ ಮತ್ಸರವಾಯಿತು. ಮನೆಯಲ್ಲಿ ತಾನೂ ಹಾಲಿನ ಸಲುವಾಗಿ ಕಾಳಜಿ

ತೆಗೆದುಕೊಳ್ಳುತ್ತಾಳೆ ಖರೆ. ಆದರೆ ಅಕ್ಕನ ಹಾಗೆ ತನಗೆಂದೂ ಹೀಗೆ ಅದರ ಸಲುವಾಗಿ ಹೃತ್ಪೂರ್ವಕ ಕೆಟ್ಟೆನಿಸುವುದಿಲ್ಲ. ಯಾಕೋ.

"ನೋಡ್ರಿ, ಅಕಸ್ಮಾತ್ ಬೆಕ್ಕು ಹಾಲು ಕುಡದಬಿಟ್ಟಿದ್ದರೆ ನಾಳೆ ನಸೀಕ್ಲೆ ನೀವು ಆಫೀಸಿಗೆ ಹೋಗೋದರೊಳಗಾಗಿ ಚಹಾ ಆಗೂದಿಲ್ಲ. ನಾ ಅಂತೀನಿ-ನೀವು ೯ ಗಂಟೇಕ್ಕ ಹೋದರ ಹ್ಯಾಂಗ? ಇಲ್ಲದಿದ್ದರ—"

—ಒಮ್ಮೆ ನಿಲ್ಲಿಸಬಾರದೇ ಅಕ್ಕ ಈ ಪುರಾಣ. ಈ ಬಸ್ಸಾದರೂ ಯಾಕೆ ಇಷ್ಟು ತಡ ಮಾಡಬೇಕು......

"ಬಸ್ ಬಿಟ್ಟಿತು ಹಿಂದೆ ಸರೀರಿ ಹುಡುಗ್ರಾ. ಮಿನೀ, ಹೋಗಿ ಬರ್ತೀಯಾ ಹಂಗಾರ?"

"ಅಂಟಿ ಟಾಟಾ—"

ಉತ್ತರ ರೂಪವಾಗಿ ಆಕೆ ಕಿಡಿಕೆಯಲ್ಲಿ ಮುಖ ತೂರಿ ಕೈ ಬೀಸಿದಳು. ಮತ್ತು ಅವರೆಲ್ಲ ಇನ್ನೂ ಕಾಣುತ್ತಿರುವಾಗಲೇ ಕೈ ಬೀಸುವುದು ನಿಲ್ಲಿಸಿ ಒಳಕ್ಕೆ ಸರಿದು ಸರಿಯಾಗಿ ಕೂತು ಉಸ್ಸೆಂದು ಉಸಿರು ಬಿಟ್ಟಳು.

ಥೂ, ಮೂರು ದಿನ ವ್ಯರ್ಥವಾಗಿ ಕಳೆದು ಹೋದವು. ಸಿನೆಮಾ, ತಿರುಗಾಟ, ಪಕ್ವಾನ್ನದ ಊಟ, ಹುಡುಗರ ಧಾಂಧಲೆ—ಛಿಛಿ, ಪುಣೆ ಬಿಟ್ಟು ಹೊರಟಾಗ ಇದನ್ನೆಯೆ ತಾನು ಬಯಸಿದ್ದು? ಇಂಥದರಿಂದ ಬಿಡುಗಡೆ ಬಯಸಿ ಮನೆಯಿಂದ ಹೊರಟು ಮತ್ತೆ ಇಂಥದರಲ್ಲೇ ಸಿಕ್ಕಿಹಾಕಿಕೊಂಡು ಬೇಸರ ಮಾತ್ರ ಹೆಚ್ಚಾಯಿತು.

—ಅದ್ಭುತ ಹೆಂಗಸು ಅಕ್ಕ. ಎರಡು ದಿನ ತನ್ನೊಡನೆ ಪುಣೆಗೆ ಬಾ ಅಂದರೆ ಮನೆ ಬಿಟ್ಟು ಹೇಗೆ ಬರಲಿ ಎಂದಳು. ಇವಳಿಗಷ್ಟೇನೇ ಮನೆ ಇರುವುದು?—ತನಗೂ ಇದೆ. ಅವಳಿಗಿಂತ ದೊಡ್ಡ ಮನೆ, ಕಾರು, ಅವಳ ಗಂಡನಿಗಿಂತ ಹ್ಯಾಂಡ್‌ಸಮ್ ಗಂಡ, ಎರಡು ಮಕ್ಕಳು—ಎಲ್ಲ ಇದೆ. ಹತ್ತು ವರ್ಷಗಳಿಂದ ಇದೆ. ದಿನಾ ಅಡಿಗೆ—ಬಡಿಸುವುದು— ಗಂಡ ಆಫೀಸಿಗೆ ಹೋಗುವಾಗ ಅವನ ಕೋಟಿನ ಬಟನ್ಸ್ ಹಾಕುವುದು—ಆಗ ಅವನು ಮರೆಯದೇ ಇಂದಿಗೂ ತನ್ನ ಹಣೆ ಮುದ್ದಿಸುವುದು— ಪಿಲ್ಲೂ, ಸತೀಶ ಸ್ಕೂಲಿಗೆ ಹೊರಟಾಗ ಟಾಟಾ—ಮಧ್ಯಾಹ್ನ ನಿದ್ದೆ, Femina, ವಿವಿಧ ಭಾರತಿ— ಮತ್ತೆ ಸಂಜೆಯ ಚಹಾ-ತಿನಿಸು, ಊಟ— ರವಿವಾರವಾಗಿದ್ದರೆ ಸಿನೇಮಾ, ಪಿಕ್‌ನಿಕ್, ಪಾರ್ಟಿ, ರಾತ್ರಿ ತಡವಾಗಿ ಮನೆ ಸೇರುವುದು, 'ನೀ ಇವತ್ತ ಎಲ್ಲಾರಕಿಂತಾ ಛಂದ ಕಾಣ್ತಿದ್ದಿ ಮಿನಿ' ಅಂತ ಗಂಡನ ಕಾಂಪ್ಲಿಮೆಂಟು, ನಂತರ ಮಲಗುವುದು, ಮಲಗಿ ಮತ್ತೆ ಏಳುವುದು, ಮತ್ತೆ—

ಛೀ ಇದೇ ಜೀವನವೇ?

ಮೊನ್ನೆ ಓದಿದ ಒಂದು ಫ್ರೆಂಚ್ ಕತೆ: ಪ್ಯಾರಿಸಿನಲ್ಲಿಯ ಚರ್ಚೊಂದರಲ್ಲಿ ಅಕಸ್ಮಾತ್ ಭೆಟ್ಟಿಯಾಗುತ್ತಾರೆ ಒಬ್ಬ ಐರಿಶ್ ಹೆಂಗಸು, ಒಬ್ಬ ಫ್ರೆಂಚ್ ಯುವಕ. ಚರ್ಚ್‌ನಲ್ಲಿ ಒಟ್ಟಾಗಿ ಪ್ರಾರ್ಥನೆ ಸಲ್ಲಿಸಿದ ನಂತರ ಹೊರಬಂದು ಇಬ್ಬರೂ ಹೋಟೆಲ್‌ಗೆ ಹೋಗುತ್ತಾರೆ; ಅಲ್ಲಿಂದ ಮುಂದೆ ಒಂದು ಸಿನೇಮಾಕ್ಕೆ; ಸಂಜೆ ಒಂದು ಸಭೆಗೆ; ರಾತ್ರಿ ಒಂದು ರೆಸ್ಟ್ ಹೌಸಿಗೆ. ಸರಿ, ಮುಂಜಾನೆ ಅವಳು ಪ್ಲೇನ್ ಹತ್ತಿ ತಿರುಗಿ ತನ್ನ ದೇಶಕ್ಕೆ ಹೋಗುತ್ತಾಳೆ. ಅವಳಿಗೆ ಬಾಯ್ ಬಾಯ್ ಹೇಳಿ ಆತ ತನ್ನ ಆಫೀಸಿಗೆ ಹೋಗುತ್ತಾನೆ. ಇಬ್ಬರಿಗೂ ಜೀವನ ಹೆಚ್ಚು ಸುಂದರವಾದಂತೆ ಅನಿಸುತ್ತದೆ. ಕತೆ ಮುಗಿಯಿತು.

—ಎಷ್ಟೋ ಸಲ ಮಧ್ಯಾಹ್ನ ಒಬ್ಬಳೇ ಮಲಗಿಕೊಂಡು ನಿದ್ದೆ ಬಾರದೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಾಗ ತನಗೆ ಅನಿಸುವುದು— ಒಮ್ಮೆ ಹೋಗಬೇಕು ರೆಕ್ಕೆ ಬಿಚ್ಚಿಕೊಂಡು. ಈ ಎಲ್ಲ ಗೋಡೆ ದಾಟಿ ಆಚೆ ಕಡೆ ಏನಿದೆಯೆಂದು ನೋಡಬೇಕು. ಒಂದು ಸಲವಾದರೂ ಹೀಗೆ ಮಾಡಿದರೆ ಹೇಗೆ, ಹಾಗೆ ಮಾಡಿದರೆ ಹೇಗೆ ಅಂತ ವಿಚಾರಿಸದೆ ಮನಸ್ಸಿಗೆ ಬಂದದ್ದು ಮಾಡಬೇಕು. ಸಿಕ್ಕೀತು ತನಗೂ ಒಂದು ಫೇರೀಲ್ಯಾಂಡ್. ಅದೀತು ಕುದುರೆಯೊಂದಿಗಿನ ರಾಜಕುಮಾರನ ಭೆಟ್ಟಿ—

ಆದರೆ ಛೆ, ಇದರರ್ಥ ಬೇರೆಯೇ ಆಗಿರುತ್ತದೆ; ಹೀಗಲ್ಲ ತನಗನಿಸುವುದು, ಖಂಡಿತ ಹೀಗಲ್ಲ. ತನಗನಿಸುವುದು ಒಟ್ಟು ಹೀಗೆ: ಏನಾದರೂ ಇಲ್ಲಿಯ ತನಕ ಮಾಡಲಾರದ್ದು ಮಾಡಬೇಕು, ಅಥವಾ ಇಲ್ಲಿಯ ತನಕ ಆಗದೇ ಇದ್ದದ್ದು ಆಗಬೇಕು— ಈ ಎಲ್ಲ ಬೇಸರ ಹೋಗಿಸಿಬಿಡು ವಂಥಾದ್ದು ಏನಾದರೂ...

ಬಹಳ ಸಲ ವಿಚಾರ ಮಾಡಿದ್ದಳು ಆ ಕತೆ ಓದಿದ ನಂತರ, ರಾತ್ರಿ ಕೊನೆಗೆ ಅವರು ರೆಸ್ಟ್ ಹೌಸಿಗೆ ಹೋಗದೇ ಹಾಗೇ ಒಬ್ಬರನ್ನೊಬ್ಬರು ಬೀಳ್ಕೊಂಡಿದ್ದರೂ ಜೀವನ ಹೆಚ್ಚು ಸುಂದರ ಅನಿಸುತ್ತಿತ್ತೇ ಅವರಿಗೆ?—ಬಹಳ ಹೊತ್ತಿನ ನಂತರ ಆಕೆ ನಿರ್ಧಾರ ಮಾಡಿದ್ದಳು—ಹೌದು, ಖಂಡಿತ ಅನಿಸುತ್ತಿತ್ತು.

—ಹೀಗೆ ಜೀವನ ಸುಂದರವಾಗುವ ಅವಕಾಶ ಹುಡುಕಿಕೊಂಡೇ ತಾನು ಮೂರು ದಿನಗಳ ಹಿಂದೆ ಪುಣೆ ಬಿಟ್ಟದ್ದು. ಈಗ ವಿಚಾರ ಮಾಡಿ ನೋಡಿದರೆ ಮೂರ್ಖತನ ಅನಿಸುತ್ತದೆ. ಇಂಥ ಅವಕಾಶಗಳೇನು ಕೊಲ್ಹಾಪುರದ ಅಕ್ಕನ ಮನೆಯಲ್ಲಿ ಬಿದ್ದಿರುತ್ತವೆಯೆ? ತಾನು ತಪ್ಪು ಮಾಡಿದೆ, ಇಲ್ಲಿಗೆ ಬಂದು. ದೂರ ಹೀಗೇ ಎಲ್ಲಾದರೂ ಹೋಗಬೇಕಿತ್ತು. ದೂರ—ಈ ಹಾಲಿನ ಭಾಂಡಿಯ ಹಾಗೂ ಅದರ ಮುಚ್ಚಳದ ಜಗತ್ತಿನಿಂದ ದೂರ......

—ಲಗ್ಝರಿ ಬಸ್ಸು. ಸಾಕಷ್ಟು ಸ್ಪೀಡಿನಿಂದಲೇ ಓಡುತ್ತಿದೆ. ಬಸ್ ಟರ್ನ್ ತೆಗೆದುಕೊಳ್ಳುವಾಗಲೆಲ್ಲ ಟಿಕೆಟ್ಸ್ ಕೊಡುತ್ತಿರುವ ಕಂಡಕ್ಟರನ ಜೋಲಿ ತಪ್ಪದೇ ಹೆಂಗಸರಿದ್ದ ಸೀಟಿನ ಕಡೆಗೆ ಹೋಗುತ್ತಿದೆ....

"Excuse me—"

—ಬದಿಯಿಂದಲೇ ಬಂದ ಗಡುಸು ಧ್ವನಿ ಕೇಳಿ ಆಕೆ ಒಮ್ಮೆಲೆ ಬಲಕ್ಕೆ ಹೊರಳಿ ನೋಡಿದಳು. ಆಕೆಯ ಮಗ್ಗುಲು ಸೀಟಿಗೆ ಕೂತ ಮನುಷ್ಯ ಗಂಭೀರವಾಗಿ ಆಕೆಯನ್ನೇ ನೋಡುತ್ತ ಹೇಳಿದ: "Excuse me madam."

ಏನು ಯಾಕೆ ಅಂತ ತಿಳಿಯದೆ ಆಕೆ ಅವನನ್ನೇ ನೋಡಿದಳು. ಹಿತವೆನ್ನಿಸಿತು. ಆತ ಮಾತಾಡಿಸಿದ್ದೇಕೆ ಅಂತ ಕೇಳುವುದು ಬಿಟ್ಟು ನೋಡುತ್ತಲೇ ಇದ್ದಳು. ಆಕೆಯ ಕಾಲ ಕೆಳಗೆ ಏನೋ ಅಲುಗಾಡಿತು. ಒಮ್ಮೆಲೇ ಹೊಳೆಯಿತು ಆಕೆಗೆ—ತಾನು ಚಪ್ಪಲುಗಾಲಿನಿಂದ ಆತನ ಪಾದ ಮೆಟ್ಟಿದ್ದು. "Oh sorry," ಅಂತ ಕಾಲು ಈಚೆಗೆ ಎಳೆದುಕೊಂಡಳು. ಮತ್ತೆ ಮತ್ತೆ ವ್ಯಥೆ ವ್ಯಕ್ತಪಡಿಸಿದಳು. "ಅಡ್ಡಿಯಿಲ್ಲ ಅಡ್ಡಿಯಿಲ್ಲ," ಅಂದ ಆತ ನಸುನಗುತ್ತ. ಅಲ್ಲ, ತಾನೆಂಥ ಪೆದ್ದಿ! ಇಷ್ಟು ಹೊತ್ತಿನಿಂದಲೂ ಈತ ನನ್ನು ಗಮನಿಸಿಯೇ ಇಲ್ಲವಲ್ಲ ಅಂತನಿಸಿತು. ಈ ಧ್ವನಿ ಎಷ್ಟು ಗಡುತರವಾಗಿದೆ ಸಿನೇಮಾದಲ್ಲಿನ ಮಹಾರಾಜನ ಧ್ವನಿಯ ಹಾಗೆ. ಒಂದು ಬದಿಯಿಂದ ನೋಡಿದರೆ ಗ್ರೀಕ್ ಯೋಧನ ಹಾಗೆ ಕಾಣುತ್ತಾನೆ... ಆಕೆ ತನ್ನ ಕಣ್ಣ ಕೊನೆಯಿಂದ ಹಲವು ಬಾರಿ ಆತನನ್ನು ನೋಡಿದಳು. ಸಮಾಧಾನವಾಗದೆ ಪೂರಾ ತಿರುಗಿ ನೋಡಿದಳು. ಅಕಸ್ಮಾತ್ ಅವನೂ ನೋಡಿದ—ಹೀಗಾದಾಗ ಬೆಚ್ಚಿ ಬೀಳಲು ತಾನೇನು ಸಣ್ಣ ಹುಡುಗಿಯಲ್ಲವಲ್ಲ ಅಂತ ಆಕೆ ಮುಗುಳ್ನಕ್ಕಳು. ಆತನೂ ನಕ್ಕ, ಸುಂದರವಾಗಿ ನಕ್ಕ.

ಕತೆ ಸುರುವಾಗುತ್ತಿದೆಯೋ ಏನೋ ಅನಿಸಿತು ಆಕೆಗೆ. ಆಕೆ ತನ್ನ ದೃಷ್ಟಿ ಬೇರೆಡೆ ಹೊರಳಿಸಲಿಲ್ಲ. ಹೌದು, ಆತ ಮಾತಾಡುತ್ತಾನೆ ಈಗ:

"ನೀವು ಪುಣೇಕ್ಕ ಹೋಗ್ಬೇಕೋ ಅಥವಾ–"

"ಹೌದು ಪುಣೇಕ್ಕ; ನೀವು?"

"ನಾನೂ ಅಲ್ಲಿಗೇ. ಬಸ್ಸಿನೊಳಗ ಕೂತು ರಾತ್ರಿ ಕಳೀಲಿಕ್ಕೆ ಬ್ಯಾಸರ ಅಲ್ಲs?"

"ಹೌದು."

"ಆದರ ಹಿಂಗ ಛಲೋ ಕಂಪನಿ ಸಿಕ್ಕರ ಬ್ಯಾಸರಾಗೂದಿಲ್ಲ."

ಆಕೆ ನಕ್ಕಳು ಮಾತ್ರ.

"ನೀವು ಪುಣೇದಾಗ ಕಲೀತೀರೇನು?"

"ಆ್ಞ?" ಏನು ಉತ್ತರಿಸುವುದೆಂದು ತಿಳಿಯದ

ಆಕೆ ಹೇಳಿದಳು, "ಹ್ಞೂ."

ತಾನಿನ್ನೂ ಕಾಲೇಜು ಹುಡುಗಿಯ ಹಾಗೆ ಕಾಣುವೆನೆಂದು ಆಕೆ ಬಹಳ ಜನರಿಂದ ಕೇಳಿದ್ದಾಳೆ. ಪ್ರಕಾಶನಂತೂ ಯಾವಾಗಲೂ ಅನ್ನುತ್ತಾನೆ. ಆದರೆ ಈ ಅಪರಿಚಿತನಿಂದ ಈ ಮಾತು ಕೇಳಿದಾಗ ಬೇರೆಯೇ ಏನೋ ಅನಿಸುತ್ತಿದೆ—ಈ ವರೆಗೆ ಎಂದೂ ಅನಿಸಲಾರದ್ದು. ಆಕೆ ಕಾಳಜೀಪೂರ್ವಕವಾಗಿ ಮಂಗಲಸೂತ್ರವನ್ನು ಬ್ಲೌಜಿನೊಳಗಡೆ ತೂರಿ ಮರೆ ಮಾಡಿದಳು.

"ನಿಮ್ಮ ಹೆಸರು?"

"ಮಿನಿ"— ಅಂದಳು ಮಿಸೆಸ್ ಮೀನಾಕ್ಷಿ ಪುಣೇಕರ ಅನ್ನದೆ.

"ಓ, sweet name."

"ಚಾಕಲೇಟ್?"— ಆತ ಕ್ಯಾಡ್‌ಬರೀಸ್ ತುಂಡನ್ನು ಕೈಯಲ್ಲಿ ಹಿಡಿದು ಕೇಳಿದ. ಆಕೆ ಒಂದನ್ನೆತ್ತಿಕೊಂಡಾಗ, "Sweets to the sweet," ಅಂದ.

ಎಷ್ಟು polished, ಎಷ್ಟು smart ಇದ್ದಾನೆ...

"ವಿಪರೀತ ಗಾಳಿ," ಅನ್ನುತ್ತ ಕಿಡಿಕಿಯ ಗಾಜು ಸರಿಸಹೋದಳು ಆಕೆ. ಅರ್ಧ ಸರಿಸಿ ಅವನ ಕಡೆ ನೋಡಿ, "ಬಹಳ ಬಿಗಿ," ಅಂದಳು.

"ಬಿಡ್ರಿ, ನಾ ಹಾಕ್ತೇನಿ," ಅಂದು ಆತ ತನ್ನ ಎಡಗೈಯನ್ನು ಅವಳಿಗೆ ಅಡ್ಡವಾಗಿ ಕಿಡಿಕಿಯವರೆಗೆ ಚಾಚಿ ಗಾಜು ಸರಿಸಿದ. ಈಗ—ತಾನಾದರೂ ಅರ್ಧ ಇಂಚು ಮುಂದೆ ಬಾಗಬೇಕು, ಇಲ್ಲ ಅವನ ಕೈಯಾದರೂ ಅರ್ಧ ಇಂಚು ಈ ಕಡೆ ಸರಿಯಬೇಕು...ಏನಾಯಿತೋ ಅಂತೂ ಒಟ್ಟು ಮರುಕ್ಷಣದಲ್ಲಿ ಆತನ ಮೊಳಕೈ ಮೃದುವಾಗಿ ಅವಳ ಎದೆ ಸವರಿಕೊಂಡು ಹೋಯಿತು. 'Oh, sorry' 'Oh, it s all right'ಗಳ ನಂತರ ಆಕೆಗೆ ಅನಿಸಿತು—ಎಷ್ಟು ವರ್ಷಗಳ ನಂತರ ಇಂದು ತಾನು ಎಷ್ಟು ಬೇರೆಯೇ ಆಗಿದ್ದೇನೆ...ಹೈಸ್ಕೂಲಿನಲ್ಲಿದ್ದಾಗಂತೂ ಮೂದೇವಿಯಾಗಿದ್ದೆ. ಕಾಲೇಜಿನಲ್ಲಿದ್ದದ್ದು ಎರಡೇ ವರ್ಷ. ತಲೆ ಎತ್ತಿ ಯಾರನ್ನೂ ನೋಡಿರಲಿಲ್ಲ ಸಹ, ಹಿಡಿದು ಲಗ್ನ ಮಾಡಿಬಿಟ್ಟರು. ಹತ್ತು ವರ್ಷವಾಯಿತು ಪುಣೆಯಲ್ಲಿ ಸಂಸಾರ ಹೂಡಿ. ದಿನ ಬೆಳಗಾದರೆ ಅದೇ ರಾಡಿ. ಒಮ್ಮೆ, ಒಂದೇ ಒಂದು ಸಲ, ಗಟ್ಟಿ ಮನಸ್ಸು ಮಾಡಿ ಗಂಡ, ಮಕ್ಕಳು, ಮನೆ, ಹಾಲಿನ ಭಾಂಡಿ ಎಲ್ಲ ಅವರವರ ಪಾಡಿಗೆ ಬಿಟ್ಟು ಬೆಳಕಿಗೆ ಬಂದು ನೋಡಬೇಕೆಂದು ಹೊರಟಾಗಿತ್ತು. ಮೂರು ದಿನವಂತೂ ಕೊಲ್ಹಾಪುರದಲ್ಲಿ ವ್ಯರ್ಥ ಕಳೆದಾಗಿತ್ತು. ಇನ್ನು ತನಗುಳಿದಿರುವುದು ನಾಳೆ ಮುಂಜಾನೆಯತನಕದ ಅವಧಿ ಮಾತ್ರ. ಮುಂಜಾನೆ ಆದ ಕೂಡಲೇ ಬರುವುದು ಪುಣೆ. ಮತ್ತೆ ಅದೇ ಅದೇ. ಈ ಅವಕಾಶ ತಿರುಗಿ ಸಿಗುವುದಿಲ್ಲ... ಈ ನಾಲ್ಕೈದು ತಾಸಿನಲ್ಲೇ ಏನಾದರೂ ಆಗಬೇಕು. ಎಷ್ಟೋ ಸಲ ಎಲ್ಲೋ ಎರಡೇ ಮಿನಿಟು ಭೆಟ್ಟಿಯಾದವರಲ್ಲೂ ಏನೇನೆಲ್ಲ ಆಗಿ ದೊಡ್ಡ ದೊಡ್ಡ adventuresನ ಕತೆಗಳೇ ಹುಟ್ಟುವುದಿಲ್ಲವೇ? ನೋಡೋಣ. ತಾನಂತೂ ಬಯಲಿಗೆ ಇಳಿದಿದ್ದಾಗಿದೆ. ಅಭೂತಪೂರ್ವ ಅನುಭವವೊಂದು ತನಗಾಗಿ ಕಾದಿದ್ದರೆ ಬೇಡವೇಕೆ?

—ಎಲ್ಲೋ ಬಸ್ಸು ನಿಂತಾಗ ಆತ ಮೃದುವಾಗಿ ಕೇಳಿದ: "ಚಹಾ ತಗೋತೀರೇನು?"

"ಓ ಯೆಸ್."

ಆತ ಎರಡು ಚಹಾ ತರಲು ಹೇಳಿದ. ಅದು ಬಂದಾಗ ತಾನೇ ತನ್ನ ಕೈಯಿಂದ ಅವಳಿಗೆ ಕೊಟ್ಟ. "ಇಂಥಾ ಥಂಡಿ ಇದ್ದಾಗ ಚಹಾ ಕುಡೀಲಿಕ್ಕ ನನಗೆ ಭಾಳ ಸೇರತದ."

"ನನಗೂ," ಅಂದಳು ಆಕೆ.

ಆಕೆ ಬಿಲ್ ಕೊಡಲು ಪರ್ಸ್ ತೆರೆದಾಗ ಬಹಳ ಆರ್ಜವತೆಯಿಂದ ಅವಳ ಕೈ ಮುಟ್ಟಿ ತಡೆದು, "No please, ನನಗ ಚಾನ್ಸ್ ಕೊಡ್ರಿ. ಇಂಥಾ ಅವಕಾಶ ನನಗೆಲ್ಲೆ ಮತ್ತೊಮ್ಮೆ ಸಿಗಬೇಕು?" ಎಂದ.

–ಈತನೂ ತನ್ನಂತೆಯೇ ಅವಕಾಶ ಹುಡುಕಿಕೊಂಡು ಹೊರಟವನಿರಬೇಕು...

ಆಕೆ ಸುಮ್ಮನೆ ಕೈಯಲ್ಲಿದ್ದ ಪುಸ್ತಕದ ಮೇಲೆ ಕಣ್ಣಾಡಿಸಿದಳು.

"ಏನದು ನಿಮ್ಮ ಕೈಯೊಳಗಿನ ಪುಸ್ತಕ?"

"Waiting for Godot."

"ಓ, ಹಂಗಾರ ನಮ್ಮಿಬ್ಬರ likings ಒಂದೇ ಅಂಥಂಗಾತು. ನಿಮಗೇನನಸ್ತದ— ಅಂದರ ಬೆಕೆಟ್ ಬಗ್ಗೆ—"—ಆತ ಮಾತಾಡುತ್ತಿದ್ದ: ಸಾಹಿತ್ಯ, ವಿಮರ್ಶೆ, ಹೀಗೇ ಹಲವಾರು ವಿಷಯ. ಆತನ ಬಿಝಿನಿಸ್, ಅದರಿಂದ ಆತನಿಗಾಗುವ ಬೇಸರ—ಅಕಸ್ಮಾತ್ ಬಸ್ಸಿನಲ್ಲಿ ಆಕೆಯ ಭೆಟ್ಟಿಯಾಗಿದ್ದರಿಂದ ಆತನಿಗಾದ ಸಂತೋಷ—ಇತ್ಯಾದಿ.

ಆಕೆ ಆತನ ಧ್ವನಿಯ ಏರಿಳಿವುಗಳಿಗೆ ಕಿವಿಗೊಟ್ಟು ನಡುನಡುವೆ ಹ್ಞೂ, ಅನ್ನುತ್ತ, ಆತನ ಮೂಗು—ತುಟಿಗಳ ಚಲನೆ ನೋಡುತ್ತ ಕೂತಿದ್ದಳು. ಯಾಕೋ ಜೀವನವೆಲ್ಲ ಹಗುರಹಗುರವಾದಂತೆ ಅನ್ನಿಸತೊಡಗಿತ್ತು. ಅವಳಿಗೆ ಯಾವಾಗ ನಿದ್ದೆ ಬಂತೋ ಗೊತ್ತಿಲ್ಲ...

"ಮಿನಿ, ಮಿನಿ"— ಮೆತ್ತಗಿನ ಧ್ವನಿ ಕಿವಿಯ ತೀರ ಸಮೀಪವೇ ಕೇಳಿ ಎಚ್ಚರಾದರೂ ಕಣ್ಣು ತೆರೆಯಲಿಲ್ಲ ಆಕೆ. ಏನೋ ಒಂದು ಥರದ ಗಂಡು ವಾಸನೆ ಹತ್ತಿರದಿಂದಲೇ ಬಂದಂತಾಗಿ ಏನಿರಬಹುದು ಅಂತ ಒಂದು ಕ್ಷಣ ವಿಚಾರಿಸಿದಳು. ಮರುಕ್ಷಣ ಕಾರಣ ಹೊಳೆಯಿತು- ತಾನು ಆ ಅಪರಿಚಿತನ ಭುಜದ ಮೇಲೆ ತಲೆಯೊರಗಿಸಿ ನಿದ್ರಿಸಿಬಿಟ್ಟಿದ್ದೇನೆ—ಅಂತ. ಎರಡು ತಾಸೋ ನಾಲ್ಕು ತಾಸೋ. ತಟ್ಟನೆ ಫ್ರೆಂಚ್ ಕತೆ ನೆನಪಾಯಿತು. ತನ್ನ ಕತೆ ಅದಕ್ಕಿಂತ ಸುಂದರವಾಗಿ ಸಾಗಿದೆ ಅನ್ನಿಸಿತು.

"ಮಿನಿ, ಏಳ್ತೀರೇನು? ಪುಣೆ ಬಂತು."—ಆತ ಕಲ್ಲುಗೊಮ್ಮಟನ ಹಾಗೆ ಅಲುಗಾಡದೆ ಕುಳಿತೇ ಮಾತಾಡಿದ. ಆಕೆ ಹಗುರಾಗಿ ಎದ್ದು ಬೆಚ್ಚಿ ಬಿದ್ದ ಹಾಗೆ ಅಂದಳು: "Oh sorry, ನಿಮಗೆಷ್ಟ ತ್ರಾಸ ಕೊಟ್ನಲ್ಲ, ನೀವು ಮೊದಲs ಎಬ್ಬಿಸಬಾರದಾಗಿತ್ತs?"

"ನನಗೇನೂ ತ್ರಾಸಾಗಿಲ್ಲ. ಆದರೆ ನಾ ಒರಟು ಮನುಷ್ಯ—ನಿಮ್ಮ ಕುತ್ತಿಗೆ ನೋವಾಗಿರಬಹುದು—"

—ಊಹ್ಞೂ, indecent ಅನ್ನುವಂಥದರ ನೆರಳೂ ಇರಲಿಲ್ಲ, ಆತನ ಮಾತಿನಲ್ಲಿ...

ಎಷ್ಟು ದಿನದಿಂದ ಕಾಯುತ್ತಿದ್ದೆ ತಾನು ಇಂಥ ಒಂದು ಹಿಂದುಮುಂದಿಲ್ಲದ, ಆದರೆ ಸ್ವಯಂಪರಿಪೂರ್ಣವಾದ, ಕಡೆ ತನಕ ನೆನಪುಳಿಯುವ...ಏನಾದರೂ ತನ್ನ ಜೀವನದಲ್ಲಿ ಘಟಿಸೀತು ಅಂತ... ಎಷ್ಟು ಕಾಯಬೇಕಾಯಿತು ಇದಕ್ಕಾಗಿ...ಆದರೆ ಹಾಗೆ ನೋಡಿದರೆ ಇನ್ನೂ ಏನೂ ಆಗಿಯೇ ಇಲ್ಲ. ಈ ವರೆಗೆ ಆದದ್ದೆಲ್ಲ ತಲೆಬಾಲವಿಲ್ಲದ್ದು. ಇನ್ನೂ ಪೂರ್ಣವಾಗಬೇಕು ಇದು—ಯಾರಿಗೆ ಗೊತ್ತು, ಆ ಫ್ರೆಂಚ್ ಕತೆಯ ಕೊನೆಯ ಹಾಗೆ—

"ನಾನು Waiting For Godot ಓದುತ್ತಿದ್ದೆ ನೀವು ಮಲಗಿಕೊಂಡಾಗ."

"ಉಹ್ಞ? " ಆಕೆ ಬಹಳ ಸರಳವಾಗಿ ಅನ್ನುವಂತೆ ಅಂದಳು: "ನಾನು ಎಚ್ಚರಾಗ್ಲಿ ಅಂತ ಕಾಯ್ಕೋತ ? "

ಆತ ನಕ್ಕು, ನಂತರ ಗಂಭೀರವಾಗಿ ಅಂದ: "ನಾವು ಏನೇನೋ ಆಗ್ಲಿ ಅಂತ್ಲ ಕಾಯ್ತಿರತೀವಿ. ಆದರ ಎಲ್ಲಾ ಎಲ್ಲೆ ಆಗತಾವ ಜೀವನದಾಗ ?"

"ಯಾಕಾಗೂದಿಲ್ಲ ಪ್ರಯತ್ನ ಮಾಡಿದರ ?"

"ಅದೂ ಖರೇನs" —ಆತ ಆಕೆಯ ಕಡೆ ನೋಡಿದ. ಆತನ ದೃಷ್ಟಿ ಖಂಡಿತ ಅರ್ಥಪೂರ್ಣವಾಗಿದೆ—ಅನ್ನಿಸಿತು ಆಕೆಗೆ. ಆತ ತನಗೆ ಏನೋ ಹೇಳಬಯಸಿದಂತಿದೆ. ಹೇಗೆ ಹೇಳಲಿ ಅಂತ ಗೊಂದಲದಲ್ಲಿರುವಂತಿದೆ. ಪುಣೆಯಲ್ಲಿ ಇಳಿದ ಮೇಲೆ ಹೇಳೋಣವೇ ಅಂತ ವಿಚಾರಿಸುತ್ತಿರುವಂತಿದೆ. ಏನು ಹೇಳುವುದು ಅಂತ ಪ್ಲ್ಯಾನ್ ಮಾಡುತ್ತಿರುವಂತಿದೆ—ಸಂಜೆ ಇಷ್ಟು ಹೊತ್ತಿಗೆ ಇಂಥಲ್ಲಿ ಬಾ ಅಂತ?— ಖರೇನೇ ಎಷ್ಟು ಸುಂದರವಾಗಿ ಮುಂದುವರೆಯುತ್ತಿದೆಯಲ್ಲ ತನ್ನ ಕತೆ...

ನಸುಕು. ಸಮೀಪದಲ್ಲೇ ಪುಣೆ ಸಿಟಿ ಕಾಣು

ತ್ತಿದೆ. ಆಕೆಯ ಮನಸ್ಸು ಒಮ್ಮೆಲೆ ಅಸ್ವಸ್ಥವಾಯಿತು. ಏನು ಹೇಳಬಹುದು ಆತ? ತಾನು ಏನೆಂದು ಉತ್ತರಿಸುವುದು ಅದಕ್ಕೆ? ಛೆ, ಇಷ್ಟು ದಿನ ಎಂದೂ ಈ ಬಗ್ಗೆ ವಿಚಾರ ಮಾಡಿಯೇ ಇಲ್ಲವಲ್ಲ ತಾನು?

ಇದ್ದಕ್ಕಿದ್ದಂತೆ ಆತ ಕೇಳಿದ: "ನನ್ನ ನೆನಪಿಡುತ್ತೀರಲ್ಲ?"

ನೇರವಾಗಿ ಉತ್ತರಿಸದೆ ಆಕೆ ಮರುಪ್ರಶ್ನೆ ಹಾಕಿದಳು: "ನೀವು?"

"ನಾನು ಸುಂದರವಾದದ್ದನ್ನು ಯಾವಾಗಲೂ ನೆನಪಿಡ್ತೇನಿ."

"ಓ, ಥ್ಯಾಂಕ್ಸ್."

ಆಕೆಯ ಮನಸ್ಸು ಹಕ್ಕಿಯಂತೆ ಹಾರಿತು. ಕತೆಯ ಅಂತ್ಯದ ಬಗ್ಗೆ ಆಕೆಗೆ ಸಂಶಯ ಉಳಿಯಲಿಲ್ಲ.

"Waiting For Godot ಅರ್ಧಾಕ್ಕೇ ಉಳೀತು," ಅಂದ ಆತ.

ಅಂದರೆ—

ಪುಣೆ ಬಂದೇಬಿಟ್ಟಿತು.

"ನೀವು ಇದ್ವೀರಿ ಅಂತ ಹೊತ್ತು ಹೋದದ್ದೇ ಗೊತ್ತಾಗ್ಲಿಲ್ಲ. ಥ್ಯಾಂಕ್ಸ್—ಸುಂದರವಾದ ಈ ರಾತ್ರಿಗೆ—ಅಂದರೆ ನಿಮ್ಮ ಸುಂದರ companyಗೆ—" ಆತ ಸಾಮಾನು ಸರಿಪಡಿಸಿಕೊಳ್ಳುತ್ತ ಮಾತಾಡಿದ.

ಆಕೆ ಬಹಳವಾಗಿ ಗಲಿಬಿಲಿಗೊಂಡಿದ್ದಳು. ಏನಾದೀತು ಈ ಕತೆಯ climax? ಬಹುಶಃ ಆತ ತನ್ನ ಮನಃಸ್ಥಿತಿ ಸರಿಯಾಗಿ ತಿಳಿದಿಲ್ಲ. ಅಂತೆಯೇ ಮುಂದುವರಿಯಲು ಹಿಂದೆ ನೋಡುತ್ತಿದ್ದಾನೆ, ಸಂಕೋಚಪಡುತ್ತಿದ್ದಾನೆ. ಯಾರು ಮೊದಲು ಮುಂದುವರಿದರೇನು? ತಾನೇ ಮಾಡಿದರೆ ಆ ಕೆಲಸ?

ಕೂಲಿಗಳ ಕಿರುಚಾಟ, ಪ್ರಯಾಣಿಕರು ಇಳಿಯುವ ಗಡಿಬಿಡಿ, ಸುತ್ತೆಲ್ಲ ಜನಸಾಗರ.

ಆತ ಬಸ್ಸಿನ ಹಿಂದೆ ಹೋಗಿ ನಿಂತು ಮೇಲಿನಿಂದ ಸಾಮಾನು ಇಳಿಸಿಕೊಳ್ಳುತ್ತಿದ್ದಾನೆ.

—ದೂರದಲ್ಲಿ—ಪ್ರಕಾಶ ಬಂದಿದ್ದಾನೆ, ಕಾರು ತಗೊಂಡು. ತನ್ನನ್ನು ಹುಡುಕುತ್ತಿದ್ದಾನೆ. ಇನ್ನೇನು ಇಲ್ಲಿಗೆ ಬಂದೇಬಿಡುತ್ತಾನೆ...ಆಕೆಯ ತಲೆ ಚುರುಕಾಗಿ ಕೆಲಸ ಮಾಡಿತು. ಪರ್ಸಿನಿಂದ ಆಕೆ ನೀಲಿ ಬಣ್ಣದ ಕಾಗದ-ಪೆನ್ನು ತೆಗೆದಳು. ದುಂಡಾದ ಅಕ್ಷರಗಳಲ್ಲಿ ಇಂಗ್ಲೀಷ್‌ನಲ್ಲಿ ಬರೆದಳು-ತನ್ನ ಫೋನ್ ನಂಬರು, ಅಡ್ರೆಸ್, 'ಸಂಜೆ ನಾಲ್ಕಕ್ಕೆ ಫೋನ್ ಮಾಡಿ ನಿನ್ನನ್ನು ಎಲ್ಲಿ ಭೆಟ್ಟಿಯಾಗುವುದೆಂದು ತಿಳಿಸು. ಕಾಯುತ್ತಿರುತ್ತೇನೆ." ಕಾಗದ ಮಡಿಚಿ "Waiting For Godot"ದ ಮೊದಲ ಪೇಜಿನಲ್ಲೇ ಇಟ್ಟು, ಅಲ್ಲೇ ಆತ ಬಿಟ್ಟುಹೋಗಿದ್ದ ಹ್ಯಾಂಡ್‌ಬ್ಯಾಗಿನ ಮೇಲೆ ಪುಸ್ತಕ ಇಟ್ಟಳು.

"ಹೋಗಿ ಬರ್ತೀರೇನು? ನಮಸ್ಕಾರ," ಅಂತ ಆತ ಹತ್ತಿರ ಬರುತ್ತಿರುವುದನ್ನು ಕಂಡು "ನಮಸ್ಕಾರ," ಅಂತ ಅವಸರದಿಂದ ಹೇಳಿ ಹೊರಟೇಬಿಟ್ಟಳು ಅಲ್ಲಿಂದ.

*

—ಮಧ್ಯಾಹ್ನ ಎರಡು ಗಂಟೆ. ಆಕೆ ಕೂತಲ್ಲಿ ಕೂಡಲಾಗದೆ ನಿಂತಲ್ಲಿ ನಿಲ್ಲಲಾಗದೆ ಚಡಪಡಿಸಿದಳು. ನಾಲ್ಕಕ್ಕೆ ಇನ್ನೂ ಎರಡು ತಾಸು. ಏನಂತ ಫೋನ್ ಮಾಡಬಹುದು ಆತ? ಇಂಥ ಹೋಟೆಲಿಗೆ ಬಾ ಅಂತ? ಇಂಥ ಪಾರ್ಕಿನಲ್ಲಿ ಭೆಟ್ಟಿಯಾಗೋಣ ಅಂತ?

ಅಲ್ಲ, ಹಾಗೆ ಒಂದು ವೇಳೆ ಭೆಟ್ಟಿ ಆಯಿತು ಅಂತಿಟ್ಟುಕೊಂಡರೆ ಮುಂದೆ? ಆತ ನನಗೆ ನೀನು ಬೇಕು ಅಂದರೆ-?

-ಅಂದರೇನು? ತಾನು ಆತನಿಗೆ ತಿಳಿಸಿ ಹೇಳಬೇಕು: ನಾನು ಬಯಸಿ ಕಾದಿದ್ದ ಅಪೂರ್ವ ಅನುಭವವೊಂದನ್ನು ನನಗೆ ತಂದು ಕೊಟ್ಟದ್ದಕ್ಕಾಗಿ ನಿನಗೆ ಋಣಿ. ನನ್ನ ಜೀವನವನ್ನು ನಿನ್ನ ಒಂದು ರಾತ್ರಿಯ ಸಹವಾಸದಿಂದ ಇಷ್ಟು ಸುಂದರವನ್ನಾಗಿ ಮಾಡಿದ್ದೀಯ. ನಾವು ಸ್ನೇಹಿತರಂತೆ ಅಗಲೋಣ. ನನ್ನ ವರ್ತನೆ ನಿನ್ನಲ್ಲಿ ಬೇರೆ ಏನಾದರೂ ನಿರೀಕ್ಷೆ ಹುಟ್ಟಿಸಿದ್ದರೆ ಅದಕ್ಕಾಗಿ

ನನ್ನನ್ನು ಕ್ಷಮಿಸು. ನನ್ನ ಉದ್ದೇಶ ಅದಾಗಿರಲಿಲ್ಲ. ನನಗೆ ಸಂಸಾರವಿದೆ. ನಿನ್ನನ್ನು ಯಾವಾಗಲೂ ನೆನಪಿಡುವೆ. ಬಾಯ್...

ಕಾಲಿಂಗ್ ಬೆಲ್ ಕೇಳಿ ತಟ್ಟನೆ ನಿಂತಲ್ಲೆ ನಿಂತಳು ಆಕೆ. ಇದೇನು, ಮನೆಗೇ ಬಂದನೇ ಆತ ಅಂತ ಎದೆ ಒಂದು ಕ್ಷಣ ವೇಗವಾಗಿ ಬಡಿದುಕೊಂಡಿತು. ಆತನನ್ನು ಎದುರಿಸುವ ಧೈರ್ಯ ಒಮ್ಮೆಲೆ ಸೋರಿಹೋದಂತೆನಿಸಿತು.

ಬಂದವನು ಪ್ರಕಾಶ. "ನೀ ಇವತ್ತ ಊರಿಂದ ಬಂದೀ ಅಂತ ಮಧ್ಯಾಹ್ನ ಲೀವ್ಹ ಹಾಕಿ ಬಂದ್ಬಿಟ್ಟೆ. ಸಿನೇಮಾಕ್ಕ ಹೋಗೋಣ?" ಅಂದ ಆತ, ಅವಳಿಂದ ಉತ್ತೇಜಕ ಪ್ರತಿಕ್ರಿಯೆ ನಿರೀಕ್ಷಿಸುತ್ತ.

"ಅಂದರ? ನೀ ಮಧ್ಯಾಹ್ನೆಲ್ಲಾ ಮನ್ಯಾಗೇ ಇರ್ತಿಯೇನು? ಅಂದರ ನೀ ಆಫೀಸಿಗೆ ಹೋಗೊದೇ ಇಲ್ಲೇನು? ಅಂದರ–?" ಅವಳ ಧ್ವನಿ ಗಂಟಲಲ್ಲೇ ಸಿಲುಕಿತು.

"ಅಂದರ ನಾ ಇವತ್ತ ಬಾಯಿಸಾಹೇಬರ ಹುಕುಮಿನ ಗುಲಾಮ ಅಂತ. ಹಿಂಗ್ಯಾಕಾಗೇದ ನಿನ್ನ ಮಾರಿ? ಆರಾಮಿಲ್ಲೇನು?"

"ಏನಿಲ್ಲ, ಹಿಂಗೇ ಸ್ವಲ್ಪ ತಲಿ ತಿರುಗಿಧಾಂಗ–" ಅನ್ನುತ್ತ ಆಕೆ ಹಾಸಿಗೆಯಲ್ಲಿ ಕುಸಿದು ಕುಳಿತಳು.

"ಹಂಗಾರ ನೀ ಮಲಕೋ, ರಾಧಾಬಾಯೀಗೆ ಹೇಳ್ತೀನಿ ನಿನಗ ಛಲೋ ಒಂದ ಕಪ್ಪ ಬಿಸೀ ಚಹಾ ಮಾಡಿಕೊಡೂ ಅಂತ. ಡಾಕ್ಟರ್‌ಗೆ ಫೋನ್ ಮಾಡ್ಲೇನು?" ಕಾಳಜಿಯಿಂದ ಕೇಳಿದ ಪ್ರಕಾಶ.

"ಬ್ಯಾಡ ಬ್ಯಾಡ."

"ಮಲಕೋ ನೀನು, ಬಸ್ಸಿನ್ಯಾಗ ಬಂದೀಯಲ್ಲ ಅದರ ಪರಿಣಾಮ ನೋಡು ಇದು. ರೆಸ್ಟ್ ತಗೋ. ಐದ ಮಿನಿಟಿನ್ಯಾಗ ಚಹಾ ಬರ್ತದ," ಅನ್ನುತ್ತ ಆತ ಅಡಿಗೆಮನೆ ಕಡೆ ಹೋದ.

ಹಿಂದಿನಿಂದ ಎತ್ತರವಾದ ಆ ಆಕೃತಿ ನೋಡುತ್ತಿದ್ದಂತೆ ಒಮ್ಮೆಲೆ ಆಕೆಯ ಕಣ್ಣು ತುಂಬಿ ಬಂದವು. ತಾನು ಬೇಸರಪಟ್ಟುಕೊಂಡಿದ್ದ, ಮೊದ್ದು ಅಂದುಕೊಂಡಿದ್ದ ಈತನಿಗೆ ತನ್ನಲ್ಲಿ ಎಷ್ಟು ಪ್ರೀತಿಯಿದೆ. ಎಂತಹ ಕೆಲಸ ಮಾಡಿದೆ ತಾನು! ಇನ್ನು ಒಂದೇ ತಾಸು—ನಂತರ ಎಲ್ಲ ಬಯಲಾಗಿ ಬಿಡುತ್ತದೆ. ತನ್ನನ್ನು ಇಷ್ಟು ಪ್ರೀತಿಸುವ ಗಂಡ, ಮಕ್ಕಳು, ಈ ಮನೆ ಎಲ್ಲ ತನ್ನ ಪಾಲಿಗೆ ಇದ್ದೂ ಇಲ್ಲವಾಗುತ್ತದೆ. ನಾಲ್ಕು ಗಂಟೆಗೆ ಫೋನ್ ಎತ್ತುವ ಪ್ರಕಾಶನಿಗೆ ಎಂತಹ ಆಘಾತ ಕಾದಿದೆ...ಆ ಅಪರಿಚಿತ ಎಂಥವನೋ. ಇತ್ತೀಚೆ ಪುಣೆಯಲ್ಲಿ ಬ್ಲ್ಯಾಕ್‌ಮೇಲ್ ಮಾಡುವವರ ಸಂಖ್ಯೆ ಹೆಚ್ಚಾಗಿದೆಯಂತೆ. ತನ್ನ ಹೆಸರು–ವಿಳಾಸ–ಹಸ್ತಾಕ್ಷರ ಸಹಿತ ಅವನ ಕಡೆಗಿದೆ. ಈ ಆಧಾರದ ಮೇಲೆ ಅವನು ಬೇಕಾದದ್ದು ಮಾಡಬಹುದು. ಪ್ರಕಾಶನಿಗೆ ಇದನ್ನೆಲ್ಲ ತೋರಿಸುವ ಬೆದರಿಕೆ ಹಾಕಿ ತನ್ನಿಂದ ಹಣ ದೋಚಬಹುದು. ಅಷ್ಟೇ ಆದರೆ ಅಡ್ಡಿಯಿಲ್ಲ, ಮತ್ತೇನಾದರೂ ಕೇಳಿದರೆ?... ತಾನು ನಿರಾಕರಿಸಿದರೆ ತನ್ನ ಗುಟ್ಟು ಬಯಲು ಮಾಡುತ್ತೇನೆಂದರೆ? ಈ ಮನೆ–ಸಂಸಾರದೊಂದಿಗಿನ ತನ್ನ ಸಂಬಂಧ? ಮನೆತನದ ಮರ್ಯಾದೆ? ಮಕ್ಕಳ ಭವಿಷ್ಯ? ಅಯ್ಯೋ ದೇವರೆ, ಎಂಥ ಹೊತ್ತು ತಂದಿಟ್ಟೆ... ಸಾಹಸ ಬೇಕಾಗಿತ್ತಲ್ಲವೆ ತನಗೆ? ಹಾಲಿನ ಭಾಂಡಿಯ ಜಗತ್ತಿನಿಂದ, ನೀರಸನೆನಿಸುವ ಗಂಡನಿಂದ, ಯಾಂತ್ರಿಕವೆನಿಸುವ ಸಂಸಾರದಿಂದ, ರೋಮ್ಯಾಂಟಿಕ್ ಬಿಡುಗಡೆ ಬೇಕಾಗಿತ್ತಲ್ಲವೆ?

ಆಕೆಗೆ ಒಮ್ಮೆಲೆ ಅಳಬೇಕು ಅನ್ನಿಸಿತು...ಆತ್ಮಹತ್ಯೆ?, ಹ್ಞಾ ಯಾಕಾಗಬಾರದು? ನಾಚಿಕೆಗೆಟ್ಟ ಬಾಳು ಬಾಳುವುದಕ್ಕಿಂತ ಸಾಯುವುದು ಒಳ್ಳೆಯದಲ್ಲವೆ? ಪ್ರಕಾಶ ಎಷ್ಟು ಅಳಬಹುದು ತಾನು ಸತ್ತರೆ?—ಆ ಕಲ್ಪನೆಯಿಂದ ಆಕೆಗೆ ಬಹಳ ಸಮಾಧಾನವೆನಿಸಿತು. ನಾಲ್ಕಕ್ಕೆ ಫೋನ್ ಮಾಡುವ ಅಪರಿಚಿತನಿಗೂ ಸುದ್ದಿ ತಿಳಿದು ಆತ ಧಾವಿಸಿ ಬರಬಹುದು...ಆ ಫ್ರೆಂಚ್ ಕತೆಗಿಂತ ಹತ್ತು ಪಾಲು ಹೆಚ್ಚು ಸುಂದರವಾಗುತ್ತದಲ್ಲ ತನ್ನ ಕತೆ...ಹೌದು, ಅದೇ ಸರಿ, ನಾಲ್ಕು ಗಂಟೆ

ಯಾಗುತ್ತಿರುವಂತೆಯೇ...

ಆಕೆ ಅಸಹಾಯ ಕಣ್ಣುಗಳಿಂದ ಗೋಡೆಯ ಮೇಲಿನ ಗಡಿಯಾರದ ಕಡೆ ನೋಡಿದಳು. ನಾಲ್ಕಕ್ಕೆ ಹತ್ತು ನಿಮಿಷ. ಎಂಥದೋ ಸಂಕಟ. ಹೊಟ್ಟೆಯಲ್ಲಿನ ಕರುಳೆಲ್ಲ ಹೊರಗೆ ಬರುತ್ತಿರುವಂತೆ ಅನಿಸಿಕೆ. ಕೈಕಾಲು ಅಲುಗಾಡಿಸಲಿಕ್ಕೆ ಶಕ್ತಿಯೇ ಇಲ್ಲ. ಆಕೆಯ ಕಣ್ಣುಗಳು ಭಾರವಾಗಿ ಮುಚ್ಚಿಕೊಂಡವು.

....

ಟ್ರಿಣ್ ಟ್ರಿಣ್–

ಆಕೆ ಬೆಚ್ಚಿ ಕಣ್ಣು ಬಿಟ್ಟಳು. ಇದೇನು, ಇಂಥ crisis ನಲ್ಲೂ ತನಗೆ ನಿದ್ರೆ ಹತ್ತಬೇಕೆ ಅಂತ ಧಡಾರನೆ ಎದ್ದು ಕೂತಳು. ಹೊರಗಿನ ರೂಮಿನಿಂದ ಟೆಲಿಫೋನ್ ಕೂಗುತ್ತಿತ್ತು. ಆಕೆ ಹಾಸಿಗೆಗೆ ಅಂಟಿಕೊಂಡಂತಾಗಿ ಗಡಿಯಾರ ನೋಡಿದಳು— ನಾಲ್ಕು ಗಂಟೆ. ಇನ್ನು ಮುಗಿಯಿತು ಈ ಜಗದ ಬಂಧ. ಎಲ್ಲಕ್ಕೂ–ಎಲ್ಲರಿಗೂ ಗುಡ್‌ಬಾಯ್–

ಹೊರಗಿನಿಂದ ಕೇಳಿಬರುತ್ತಿದ್ದ ಪ್ರಕಾಶನ ಧ್ವನಿಗೆ ಆಕೆ ನಿರ್ಜೀವಳಂತೆ ಕಿವಿಗೊಟ್ಟಳು: 'ಹಲೋ, ಡಾ. ಮಿಶ್ರಾ? ನಮಸ್ಕಾರ. ಏನು. ಸಂಜೆಯ ಪಾರ್ಟಿಗೇ? Sorry. ಇವತ್ತ ನನ್ನ ಮಿಸೆಸ್ ಮೈಯಾಗ ಆರಾಮಿಲ್ಲ. ಹ್ಞಾ ಹ್ಞಾ, ನೆನಪದ. ಮುಂದಿನ ವಾರ—'

ಮಿನಿ ಹಾಯಾಗಿ ಉಸಿರು ಬಿಟ್ಟಳು. ಆದರೆ ಮರುಕ್ಷಣ ಹಾಸಿಗೆಯಿಂದ ಕೆಳಗಿಳಿದಳು. ಇನ್ನೇನು ಐದಾರು ಮಿನಿಟಿನ ಅವಧಿ. ಅಷ್ಟರಲ್ಲೇ ಬರುವುದು ಆ ಅಪರಿಚಿತನ ಫೋನ್. ಆತ ಬ್ಲ್ಯಾಕ್‌ಮೇಲರ್ ಆಗಿದ್ದು ದುಷ್ಟ ಆಗಿದ್ದರೆ... ಒಂದೋ ತಾನು ಗಂಡ, ಮಕ್ಕಳನ್ನು ತೊರೆಯಬೇಕು. ಇಲ್ಲವೆ ಯಾವನೋ ಲಫಂಗನ ಜೊತೆ—

ಛಿ. ಮುಂದೆ ವಿಚಾರಿಸಲಾಗದೆ ಆಕೆ ಎರಡೂ ಕೈಗಳಿಂದ ತಲೆ ಗಟ್ಟಿಯಾಗಿ ಹಿಡಿದುಕೊಂಡಳು.

"ಮಿನಿ," ಹೊರಗಿನಿಂದ ಕೂಗಿದ ಪ್ರಕಾಶ. "ನಿನ್ನ ಕಡೆ ಯಾರೋ ಬಂದಾರ ನೋಡು"—

ಏನು? ಬಂದೇಬಿಟ್ಟನೇ? ಮಿನಿಯ ಕಾಲಲ್ಲಿಯ ಶಕ್ತಿ ಉಡುಗುತ್ತಿರುವಂತೆನಿಸಿತು; ಆದರೆ ಮರುಕ್ಷಣ ಅವಳು ಹುಚ್ಚು ಧೈರ್ಯದಿಂದ ಧಡಧಡ ಹೊರಗೆ ಬಂದಳು–ಬಂದದ್ದು ಬರಲಿ, ತಾನು ಎಲ್ಲ ಎದುರಿಸಬಲ್ಲೆ, ತಾನೇನು ಹೇಡಿಯೆ?

ಬಾಗಿಲಲ್ಲಿ ನಿಂತಿದ್ದವ ಬಿಳಿಯ ಸಮವಸ್ತ್ರ ಧರಿಸಿದ್ದ ಒಬ್ಬ ಸೇವಕ. ಬಹಳ ವಿನಯದಿಂದ ಬಾಗಿ ಕೈಯಲ್ಲಿನ ಪ್ಯಾಕೆಟ್ಟನ್ನು ಮುಂದೆ ಚಾಚಿದ, "ಬಾಯಿಯವರು ತಮಗ ಕೊಟ್ಟು ಬಾ ಅಂದರು."

ಆಕೆ ಅದನ್ನು ಸ್ವೀಕರಿಸಿದಾಗ ಆತ ಬಗ್ಗಿ



ಸಲಾಮ್ ಮಾಡಿ ಎರಡು ಹೆಜ್ಜೆ ಹಾಗೇ ಹಿಂದೆ ಸರಿದು ನಂತರ ತಿರುಗಿ ಹೊರಟುಹೋದ. ಪ್ರಕಾಶ ಅಲ್ಲೇ ಪೇಪರೋದುತ್ತ ಕುಳಿತವನು ತಲೆ ಎತ್ತದೆಯೇ ಮಾತಾಡಿದ, "ನಿನ್ನ ಫ್ರೆಂಡ್ ಶಶಿಕಲಾ ಕಳಿಸಿರಬೇಕು—ಏನಾದರೂ ಹೊಸಾ ನಮೂನೆ ಹಲ್ವಾ. ಮತ್ತೇನ ಕೆಲ್ಸ ನಿಮಗ ಹೆಂಗಸರಿಗೆ—"

ಆಕೆ ಉತ್ತರಿಸದೆಯೆ ವೇಗವಾಗಿ ಒಳಗೆ ಬಂದಳು. ಬೆಡ್‌ರೂಮಿನ ಬಾಗಿಲು ಹಾಕಿಕೊಂಡು ಹಾಸಿಗೆಯ ಮೇಲೆ ಕುಳಿತಳು. ಅವಳ ಕೈ ನಡುಗುತ್ತಿದ್ದವು. ಗುಲಾಬಿ ಬಣ್ಣದ ರ್‍ಯಾಪರ್, ರೇಶಿಮೆಯ ದಾರ—Waiting for Godot, ತಿಳಿ ನೀಲಿ ಬಣ್ಣದ ಕಾಗದ, ತಾನೇ ಬರೆದ ಚೀಟಿ. ಎಲ್ಲ ಸುರಕ್ಷಿತ ವಾಪಸ್.

ಆ ಫ್ರೆಂಚ್ ಕತೆ, ರಾತ್ರಿ ಬಸ್ಸಿನಲ್ಲಿ ಅಕಸ್ಮಾತ್ ಭೆಟ್ಟಿಯಾದ ಅಪರಿಚಿತ, ಅವನು ತಿರುಗಿ ಕಳಿಸಿದ ಪುಸ್ತಕ–ಚೀಟಿ; ಈ ಮನೆ ಸಂಸಾರ, ಬಿಡುಗಡೆಗಾಗಿ ಕಾದಿದ್ದು...ಸಾಹಸ...? ಛಿ, ಈ ಎಲ್ಲಕ್ಕೂ ಸೀಮೆ ಎಣ್ಣೆ ಸುರಿದು ಬೆಂಕಿಯಿಡಬೇಕು... ಎದ್ದು ಪಡಸಾಲೆಗೆ ಬರುತ್ತ ಆಕೆ ಗಟ್ಟಿಯಾಗಿ ಹೇಳಿದಳು, "ನಡೀ ಪ್ರಕಾಶ್, ಸಿನೆಮಾಕ್ಕೆ ಹೋಗೋಣ." ✡



ಅದ್ಭುತ ದೀಪದ ಸೋಲು

ಅದ್ಭುತ ದೀಪದ ಅಲ್ಲಾವುದ್ದೀನನು (Allauddeen with the Wonderful Lamp) ಕೆಲ ದಿನಗಳ ವಿಹಾರಾರ್ಥವಾಗಿ ಬೆಂಗಳೂರಿಗೆ ಬಂದಿದ್ದ. ಮರುದಿನ ನಗರದ ಸೌಂದರ್ಯವನ್ನು ಸವಿಯಲು ಹೊರಟ ಆತನಿಗೆ ಚಿಲ್ಲರೆಯ ಅಭಾವದ ಬಿಸಿ ತಾಗಿತು. ಬೇಜಾರುಪಟ್ಟುಕೊಂಡು ಹೋಟೆಲಿಗೆ ಹೋಗಿ ಆತ, ಕೂಡಲೇ 'ಅದ್ಭುತ ದೀಪ'ದಲ್ಲಿದ್ದ, ಬೇಕಾದ್ದನ್ನು ಮಾಡಿಕೊಡುವ, ತನ್ನ 'ಗುಲಾಮ'ನಿಗೆ ಪ್ರತ್ಯಕ್ಷನಾಗಲು ಆಜ್ಞಾಪಿಸಿದ. ಕಂಠಾರಿನಂತೆ ಪ್ರತ್ಯಕ್ಷನಾದ ಆ ಗುಲಾಮ, ರೂಮಿನ ಸೂರಿನವರೆಗೂ ಬೆಳೆದು ನಿಂತು, "ಗುಲಾಮ ತಮ್ಮ ಸೇವೆಯಲ್ಲಿ ಹಾಜರಾಗಿದ್ದಾನೆ. ಅಪ್ಪಣೆಯಾಗಲಿ ಪ್ರಭೂ!" ಎಂದು ತಲೆಬಾಗಿದ. ನೂರು ರೂಪಾಯಿಯ ನೋಟುಗಳನ್ನು ಆತನೆಡೆಗೆ ಒಡ್ಡುತ್ತ ಅಲ್ಲಾವುದ್ದೀನ್, "ಈ ರೂಪಾಯಿಗಳಿಗೆ ಚಿಲ್ಲರೆಯನ್ನು ತಾ, ಬೇಗ ತಾ," ಎಂದ ಗುಲಾಮ ಹೇಳಿದ: "ಸಾರಿ ಬಾಸ್! ಇದೊಂದು ಕೆಲಸ ಬಿಟ್ಟು ಏನಾದರೂ ಮಾಡಲು ಸಿದ್ಧನಿದ್ದೇನೆ. ಆದರೆ ಇದು ಮಾತ್ರ ನನ್ನಿಂದ ಆಗದ ಕೆಲಸ."

ಸಿಟ್ಟಿಗೆದ್ದ ಅಲ್ಲಾವುದ್ದೀನ್ ಕೇಳಿದ: "ಏಕೆ, ಏಕೆ ಸಾಧ್ಯವಿಲ್ಲ?" ಗುಲಾಮ ಹೇಳಿದ, "ಹುಜೂರ್, ಬೆಂಗಳೂರಿನಲ್ಲಿಯೇ ಏಕೆ, ಇಡೀ ಭಾರತದಲ್ಲಿಯೇ ನಿಮಗೆ ಇಷ್ಟು ರೂಪಾಯಿಗಳ ಚಿಲ್ಲರೆ ಸಿಗಲು ಸಾಧ್ಯವಿಲ್ಲ!"

—ಸಂಗ್ರಹ: ಶ್ರೀಧರ, ಹೊನ್ನಹಳ್ಳಿ

ಸಿದ್ಧಲಿಂಗ ಪಟ್ಟಣಶೆಟ್ಟಿ

ಮಾವ

ಈ ಪಟ್ಟಣದಲ್ಲಿ ನೌಕರಿಗೆ ಸೇರಿದಾಗಿನಿಂದ ನನ್ನ ಸಾಹಿತ್ಯಿಕ ಚಟುವಟಿಕೆಗಳು ಹೆಚ್ಚಾಗಿ ನನ್ನ ಹಳ್ಳಿಯ ಸಂಪರ್ಕವೇ ಕಳಚಿ ಹೋದಂತಾಗಿದೆ. ಅಕ್ಕ, ಅವಳ ಮಕ್ಕಳು ವರ್ಷಕ್ಕೊಮ್ಮೆ ಮುರುಘಾಮಠದ ಜಾತ್ರೆಗೆ ಬಂದಾಗ ಇಲ್ಲಿಗೆ ಬಂದು ಹೋಗುತ್ತಾರೆ. ಮಾವ ಮಾತ್ರ ಪ್ರತಿ ಮಂಗಳವಾರ ಸಂತೆಗೆ ಬಂದಾಗ ಮನೆ ಕಡೆ ಬಂದು ಹೋಗುತ್ತಾರೆ. ತಂದೆ ಸತ್ತರೂ ಸೋದರಮಾವ ಇರಬೇಕಂತೆ. ಈ ಮಾವ ನಿಜವಾಗಿಯೂ ನನ್ನ ಪಾಲಿನ ದುಃಖಗಳಿಗೆ ಹೆಗಲು ಕೊಟ್ಟಿದ್ದರಿಂದಲೇ ನಾನೂ ಒಬ್ಬ ಮನುಷ್ಯ ಅನಿಸಿಕೊಂಡದ್ದು. ಮಾವ ನನಗೆ ಮಾಡದ ಸಹಾಯವಿಲ್ಲ. ಬಾಲ್ಯದಲ್ಲಿಯೇ ತಂದೆಯನ್ನು

ಕಳೆದುಕೊಂಡು ತಬ್ಬಲಿಯಾಗಿದ್ದರೂ ಆ ಅನಾಥ ಭಾವ ಬರದಂತೆ ನನ್ನನ್ನೂ ನನ್ನ ತಾಯಿಯನ್ನೂ ನೋಡಿಕೊಂಡ ಈ ಮಾವ ನನಗಿಂತ ಆರೇಳು ವರ್ಷವಷ್ಟೇ ದೊಡ್ಡವ. ತುಂಬಾ ಉದಾರಿ, ದೊಡ್ಡ ಮನಸ್ಸು.


ಇಲ್ಲಿಂದ ಆರೇ ಮೈಲು ದೂರದಲ್ಲಿ ಮಾವನ ಹಳ್ಳಿ, ಅವ್ವನ ತೌರೂರು. ನಾನು ಹೋದರೆ ಮನೆಯಲ್ಲಿ ಅವರಿಗೆಲ್ಲ ಹಬ್ಬ. ಊರಿನ ಜನರಿಗೆಲ್ಲ ಅಭಿಮಾನ. ನನ್ನ ಮಾವನಂತೂ 'ನನ್ನ ಅಳಿಯ ಪ್ರೊಫೆಸರ್' ಎಂದು ಮೀಸೆಯ ಮೇಲೆ ಕೈ ಹಾಕಿ ಇಲ್ಲಿ ಸಂತೆಗೆ ಬಂದವರೆದುರು ಹೇಳುವುದನ್ನು ಕೇಳಿದಾಗ ನನಗೇಕೋ ನಾಚಿಕೆಯೆನಿಸುತ್ತಿತ್ತು.

ಶನಿವಾರದ ಕಡೆಯ ಬಸ್ಸಿಗೆ ಕರಡೀಗುಡ್ಡಕ್ಕೆ ಹೋಗಿ ಅಲ್ಲಿಂದ ಮೂರು ಮೈಲು ನಡೆದು ಕಲ್ಲು–ಮುಳ್ಳುಗಳನ್ನು ತುಳಿದು ಈ ಊರನ್ನು ಸಮೀಪಿಸಿದೆ. ನೇರವಾಗಿ ಬಸ್ ಬರಲು ದಾರಿ ಇರದ್ದರಿಂದಲೇ ಸಂಪರ್ಕ ಇರದೆ ಈ ಜನ ಕಗ್ಗರಾಗಿದ್ದಾರೆ, ಹುಂಬರಾಗಿದ್ದಾರೆ. ಊರಿನ ತುಂಬ ಬಡಿದಾಡುವ, ಕಡಿದಾಡುವ ಜನರೇ ತುಂಬಿದ್ದಾರೆ. ಏನು ಧಾಡಿ ಇವರಿಗೆ, ದಾರಿ ಯಾಕೆ ಮಾಡಿಸಿಕೋಬಾರದು ಎಂದು ಶಪಿಸುತ್ತ ಹೊರಟಿದ್ದೆ. "ಶರಣರೀ ಎಪ್ಪಾ, ಈಗ ಬಂದ್ರೀ?" ಎಂದ ಧ್ವನಿ ನನ್ನನ್ನು ತಡೆಯಿತು. ನೋಡಿದೆ. ಹೊಲೆಯರ ಬಸ್ಯಾ ಊರ ಮುಂದಿನ ಹೊಲದ ದಾರಿಯ ಏರೆಯ ಹಕ್ಕಲದಲ್ಲಿ ಸೇಂಗಾ ಕಾಯುತ್ತ ಕುಳಿತಿದ್ದ. ಊರ ಮುಂದಿನ ಹೊಲ ಎಷ್ಟು ಅನುಕೂಲವೋ ಅಷ್ಟೇ ಅನನುಕೂಲ. ಯಾವಾಗಲೂ ಒಂದು ಆಳು ಕಾಯುತ್ತಿರಬೇಕಾಗುತ್ತದೆ. ಭಿಡೆ–ಮುರವತ್ತುಗಳಿಗೂ ಸೋಲಬೇಕಾಗುತ್ತದೆ, "ಶರಣ ಬಸ್ಯಾ, ಏನ ಆರಾಮದಿಯಾ?" ಎಂದೆ. "ಹ್ಞೂಂನ್ರಿಯಪ್ಪಾ, ನಿಮ್ಮ ದಯದಿಂದ ಎಲ್ಲಾ ಬೇಸಿ ಐತ್ರಿ. ಒಂದ್ಯಾಡ್ ದಿನ ಇದ್ದ ಹೋಗ್ರಿಯಪ್ಪಾ," ಎಂದ ಕಳಕಳಿಯಿಂದ. ಈ ನಿರ್ವ್ಯಾಜ ಪ್ರೀತಿಯ ಆಮಂತ್ರಣ ಮನಸ್ಸು ತುಂಬಿತು. "ಹ್ಞೂ. ಇದ್ದ ಹೋಗತೇನಿ," ಎನ್ನುತ್ತ ಹೊರಟೇಬಿಟ್ಟೆ. ಬಸ್ಯಾ ಕೈ ಮುಗಿದು ನಿಂತಿದ್ದ ಮೂರ್ತಿ ಕಣ್ಣಿನಲ್ಲಿ ತುಂಬಿತ್ತು.

ಹಳ್ಳ ದಾಟಿದೆ. ಕೈ–ಕಾಲು ತೊಳೆದುಕೊಂಡೆ. ನನ್ನ ಬಾಲ್ಯದಲ್ಲಿ ಇಲ್ಲಿ ದಿನಾ ಬಂದದ್ದು, ಈಚಲ ಹಣ್ಣು ಹರಿದು ತಿಂದದ್ದು, ಜಾಲಿಯ ಮುಳ್ಳು ತುಳಿದು ಅದನ್ನು ಜಾಲಿಯ ಮುಳ್ಳಿನಿಂದಲೇ ತೆಗೆದುಕೊಂಡದ್ದು, ಏರಿ ರಾಡಿಯಲ್ಲಿ ಮೊಣಕಾಲು ತನಕ ಕಾಲು ಸಿಗಿಬಿದ್ದದ್ದು, ಹೊನ್ನಾರಿ ಹೂ ಹರಿದು ದನ ಕಾಯುವ ಹುಡಿಗೆಯರಿಗೆ ಕೊಟ್ಟು ಮನೆ ಕಟ್ಟಿ ಬೇವಿನ ಗಿಡದ ಕೆಳಗೆ ಆಡಿದ್ದು, ಬಸ್ಯಾನ ಮಗಳು ಸ್ವಲ್ಪ ದೂರದಲ್ಲೇ ನಿಂತು ನಮ್ಮ ಆಟ ನೋಡಿದ್ದು, ಶಿವಳ್ಳಿ ಹನುಮಂತನಿಂದ ರೊಟ್ಟಿ ಕಲ್ಯಾ, ಶಾನುಭೋಗರ ಶ್ರೀನಿವಾಸ, ನಾನು ಒದೆತ ತಿಂದದ್ದು. ತೇಗೂರ ಮೂಗಪ್ಪ, ಸಣ್ಣೀಮನಿ ಎಲ್ಲನ ಕೂಡ ಶಾಲೆ ತಪ್ಪಿಸಿ ಹಳ್ಳದ ಗುಂಟ ಹೋಗಿ ಸಂಜೆಯಾದ ನಂತರದ ತನಕ ಕಾದು, ಅಲ್ಪ ಸ್ವಲ್ಪ ಬಿದ್ದಿದ್ದ ನೀರಾ ಕುಡಿದದ್ದು, ಗೊಬ್ಬಿಗಳನ್ನು ಒಡೆದದ್ದು, ಸಿಂದೀ ಹೇರಿಕೊಂಡು ಬರುತ್ತಿದ್ದ ಒಂಟೆಗಳನ್ನು ನೋಡಿ ಒಂದು ಮಹಾ ಅದ್ಭುತ ಪ್ರಾಣಿಯನ್ನು ಕಂಡಂತೆ ಬೆರಗಾಗಿ ನಿಲ್ಲುತ್ತಿದ್ದದ್ದು, ಅಜ್ಜನ ಚಹದಂಗಡಿಯಲ್ಲಿ ಹುರಿಯುತ್ತಿದ್ದ ಪುಟಾಣಿ ಕಿಸೆ ತುಂಬ ಹಾಕಿಕೊಂಡು ಅಮ್ಮನಿಂದ ಬೆಲ್ಲ ಇಸಗೊಂಡು ತಿನ್ನುತ್ತ ಪತ್ರೀ ಭಾವಿ ಕಡೆಗೆ ಅಡ್ಡಾಡಲು ಹೋಗುತ್ತಿದ್ದದ್ದು, ಕಡೇಮನಿ ರಾಮ್ಯಾ ಗರಡೀ ಮನೆಯಲ್ಲಿ ಎಳೆದು ಹೊಡೆದದ್ದು... ಛೀ, . ಈ ಹಾಳು ನೆನಪುಗಳು ಸಣ್ಣಗೆ ಬೆಳತನಕ ಬೀರು ಕುಡಿದಂತೆ. ಮುಖಕ್ಕೆ ಛಲ್ಲನೆ ಮತ್ತೊಮ್ಮೆ ನೀರು ಚಿಮ್ಮಿಕೊಂಡು ಎದ್ದೆ. ಆಗಲೇ ಮಬ್ಬುಗತ್ತಲಾಗಿತ್ತು. ಊರಿನ ದನಗಳೆಲ್ಲ ಮನೆ ಸೇರುತ್ತಿದ್ದವು. ನಮ್ಮೂರಿನ ಧೂಳಿನ ಸೌಂದರ್ಯವೂ ಮೋಹಕ.

ಮಾವ ಅಂಗಡಿಯಲ್ಲಿ ಕುಳಿತಿದ್ದ, ಮಾತಾಡಿಸಿದ. ಅಂಗಡಿಯಲ್ಲಿ ಬಹಳ ಗದ್ದಲವಿತ್ತು. ಒಳಗೆ ಹೋಗಿ ಅಕ್ಕನ್ನ ಮಾತಾಡಿಸಿ ಹೊರಗೆ ಬಂದೆ. ಒಂದೆರಡು ದಿನ ಇದ್ದೇ ಹೋಗು ಎಂದ ಮಾವ. ಈ ಮಾವ ನನ್ನ ಮುಂದೆ ಭವ್ಯ. ಊರಿನ ಮಂದಿಯೆಲ್ಲ ಅಂಗಡಿಯ ಬಾಜೂವಿನ ಕೋಣೆಯಲ್ಲಿ ಕೂಡಪತ್ತಿದರು. ಅಕ್ಕನ್ನ ಅಂಗಡಿಯಲ್ಲಿ ಕೂಡ್ರಿಸಿ ಮಾವನೂ ಬಂದ. ಎಲ್ಲರ ಮುಖದ ಮೇಲೂ ಆಶ್ಚರ್ಯ, ಅದ್ಭುತ, ಆನಂದದ ತೆಪ್ಪಗಳು ತೇಲುತ್ತಿದ್ದವು. ಎಲ್ಲರೂ ನೂರಾಯೆಂಟು ಪ್ರಶ್ನೆ ಕೇಳುವವರು. ಕುರ್ಚಿ ಇಟ್ಟಿದ್ದರೂ ಅವರೆಲ್ಲರ ಕೂಡ ಕೆಳಗೆ ಗುಡಾರದ ಮೇಲೇ ಲೋಡಿಗೆ ಒರಗಿ ನಾನು ಕುಳಿತಿದ್ದರಿಂದ ಅವರಿಗೆ ಇನ್ನೂ ಆನಂದ.

ರಾತ್ರಿ ಎಂಟಕ್ಕೆ ಮಾವನ ಮಗ ಗುರುಪುತ್ರ ಬಂದು ಊಟಕ್ಕೆ ಬಾ ಎಂದಾಗ ಎಲ್ಲರನ್ನೂ ಕಳಿಸಿ ಮಾವ, "ನೀ ಉಣ್ಣ ಹೋಗು. ನಾ ಅಟ ಅಂಗಡ್ಯಾಗ ಕುಂತ ಆಮ್ಯಾಲೆ ಉಣತೇನಿ," ಅಂದ. ಅವನು ಅಂಗಡಿಯಲ್ಲಿ ಕೂತ. ಅಕ್ಕ ನೀಡಲು ಒಳಗೆ ಬಂದಳು. ಕೆಲಸದ ಮುದುಕಿಯನ್ನು ಮಾತಾಡಿಸಿದೆ. ಎಷ್ಟೋ ವರ್ಷಗಳಿಂದ ತನಗೆ ಯಾರೂ ಸಂಬಂಧಿಕರಿಲ್ಲದ ಈ ಮುದುಕಿ ನಮ್ಮ ಮನೆಯ ಒಬ್ಬ ಸದಸ್ಯಳಾಗಿಯೇ ಬೆಳೆದಿದ್ದಾಳೆ. "ಅಕ್ಕ, ಹ್ಯಾಂಗದೀ?" ಎಂದೆ. "ಹಿಂಗದೇನಿ ನೋಡಲ್ಲ," ಅಂದ ಅಕ್ಕನ ಮುಖ ಒಲೆಯ ಮುಂದೆ ಕುಳಿತಿದ್ದರಿಂದ ಉರಿಯ ಬೆಳಕಿಗೆ ಕೆಂಪಾಗಿತ್ತೇನೊ. ಹುಡುಗರೆಲ್ಲ ಉಂಡು ಮಲಗಿದ್ದರು. "ಇನ್ನ ಮಾವನ ಊಟ, ಯಾವಾಗ?" ಅಂದೆ. "ಅವರೇನ ಚಿತ್ತಿ ಮಳಿ



ಇದ್ದಂಗ," ಅನ್ನುತ್ತ ಅಕ್ಕ ಅನ್ನಕ್ಕೆ ಕೆನೆ ಮೊಸರು ಹಾಕಿದಳು. ಕೆನೆ ಮೊಸರು ನನಗೆ ಪ್ರೀತಿಯೆಂದು. ೨-೩ ವರ್ಷಕ್ಕೊಮ್ಮೆ ಬರುವ ನನ್ನ ಇಚ್ಛೆಗಳನ್ನೂ ಈ ಅಕ್ಕ ನೆನಪಿಟ್ಟಿದ್ದಾಳಲ್ಲ ಎಂದು ಅಭಿಮಾನವೆನ್ನಿಸಿತು.

ಊಟ ಮಾಡಿ ಡರಕಿ ಹೊಡೆಯುತ್ತ ಹೊರಗೆ ಬಂದೆ. ಮಾವನ ಕಿರಾಣಿ ಅಂಗಡಿಯ್ಯಾಗದ್ದಲ ಸ್ವಲ್ಪ ಕಡಿಮೆಯಾಗಿತ್ತು. ಹೊಲೇರ ಬಸ್ಯಾ ಚುಟ್ಟಾ ಸೇದುತ್ತ ಒಂದು ದಂಡೆಗೆ ಫಡಕುಗಳ ಹತ್ತಿರ ಕೂತಿದ್ದ. "ನೀ ದಣದೀ, ಹೋಗಿ ಮಲಕೊಂಡ ಬಿಡು," ಎನ್ನುತ್ತ ಮಾವ ಎಲೆ ಅಡಿಕೆ, ಯಾಲಕ್ಕಿ, ಸುಣ್ಣ ಒಂದು ಬಸಿಯಲ್ಲಿ ಇಟ್ಟುಕೊಟ್ಟ. ಅದನ್ನು ಹಿಡಿದುಕೊಂಡೇ ಹೊರಗಿನ ಕೋಣೆಗೆ ಬಂದೆ. ಚಿಮಣಿ ಇನ್ನೂ ಉರಿಯುತ್ತಿತ್ತು. ಒಂದೇ ಫಡಕು ತೆರೆದಿತ್ತು. ಅದನ್ನು ತಿರುವು ಮುರುವು ಮಾಡಿ ಚಿಲಕ ಒಳಗೆ ಮಾಡಿ ಮುಚ್ಚಿಕೊಂಡೆ. ಬರುವಾಗ ತಂದಿದ್ದ ಕಾದಂಬರಿಯೊಂದನ್ನು ಓದಬೇಕೆಂದೆ. ಆಗಲಿಲ್ಲ. ಎಲೆ ಅಡಕೆ ತಿನ್ನುತ್ತ ದಣಿದ ಮೈಗೆ ಚಿಮಣಿ ದೀಪದ ಬೆಳಕು ನಿಶೆ ಪರಿಸಿದಂತಾಯಿತು. ಶಹರದ ವಿದ್ಯುತ್ ದೀಪಗಳಿಗಿಂತ ಈ ಚಿಮಣಿ ಬೆಳಕು ಮಾದಕ. ಇದರ ಮಧು ಬೆಳಕು ಬೇಕಾದಷ್ಟನ್ನೇ ತೋರಿಸಿ ಕುತೂಹಲವನ್ನು ಉಳಿಸಿಟ್ಟು ಬದುಕಿನ ಸೌಂದರ್ಯಕ್ಕೆ ಮನವೊಲಿಸುತ್ತದೆ; ವಿದ್ಯುತ್ ದೀಪ ಬೇಡವಾದದ್ದನ್ನೂ ತೋರಿಸುವುದರಿಂದ ಮನಸ್ಸು ಎಂದೂ ಅದರಲ್ಲಿ ಮುಕ್ತವಾಗಿ ಯೋಚಿಸಲೂ ಶಕ್ಯವಿಲ್ಲ.

ಆಕಳಿಸುತ್ತಿದ್ದಂತೆಯೇ ತೇಲುಗಣ್ಣುಗಳು ಮುಚ್ಚಿಕೊಳ್ಳತೊಡಗಿದವು. ಇಂಥ ಛಂದ ನಿದ್ರೆ ಎಷ್ಟೋ ದಿನಗಳ ನಂತರ ಬಂದಿತ್ತು. ಮನ ತುಂಬಿ ಮಲಗಿದೆ. ಬೆಳಗ್ಗೆ ಎಚ್ಚರಾದಾಗ ಅಂಗಳ ಕಸ ಹೊಡೆದು ಅಕ್ಕ ನೀರು ಹೊಡೆಯುತ್ತಿದ್ದಳು. ಬಾಗಿಲು ಪೂಜೆ ಮಾಡಿ ಊದಿನಕಡ್ಡಿ ಬೆಳಗಿ ಅಂಗಡಿಯಲ್ಲಿ ಬಂದು ಕೂತಳು. ನನ್ನ ಕೋಣೆಯ ಫಡಕುಗಳ ಸಂದಿಯಿಂದ ನೋಡುತ್ತ ಕಣ್ಣು ಬಿಟ್ಟುಕೊಂಡು ಸುಮ್ಮನೇ ಮಲಗಿದ್ದೆ. ನಂತರ ಎದ್ದು ಮುಖದ ಮೇಲೆ ನೀರಾಡಿಸಿಕೊಂಡು ಹಳ್ಳದ ಕಡೆ ಹೋಗಿ ಬರುವೆನೆಂದು ಅಕ್ಕನಿಗೆ ಹೇಳಿ ಹೊರಟೆ. ಮಾವ ಒಳಗೆ ಮಲಗಿದ್ದ.

ಯಾವಾಗಲೂ ನೀರು ತುಂಬಿ ಹರಿಯುವ ನಮ್ಮೂರಿನ ಹಳ್ಳದ ದಂಡೆಗೆ ಹೋಗಿ ಬಹಿರ್ವಿಧಿಗಳನ್ನು ಮುಗಿಸಿಕೊಂಡು ಬರುವ ಆನಂದವೇ ವಿಚಿತ್ರ. ಸುಮ್ಮನೇ ತಂಬಿಗಿ ಹಿಡಿದುಕೊಂಡು ಊರ ಮುಂದಿನ ಹೊಲಕ್ಕೆ ಹೋಗುತ್ತಾರೆ ಈ ಮಂದಿ. ಸ್ವಲ್ಪ ದೂರ ಹೋಗಿ ಸ್ವಾಭಾವಿಕ ಆನಂದಪಡುವುದೇ ಇವರಿಗೆ ಗೊತ್ತಿಲ್ಲ. ಲಂಡಕ್ಯಾನ ಹಳ್ಳದ ಕಡೆಗೆ ಹೊರಟೆ. ದುರ್ಗಿಗುಡಿಗೆ ಹೊಂದಿ ಎರಡನೇ ಮನೆಯೇ ಬಸ್ಯಾನದು. ಮುದುಕ ಇಷ್ಟೊತ್ತಿನಲ್ಲಿ ಏನು ಮಾಡುತ್ತಿರಬೇಕು ? ಈಗ ಆ ಕಡೆಗೆ ಹೋಗುವುದೇ ಬೇಡ. ಸಹಜ ಆ ಕಡೆ ತಿರುಗಿದೆ. ಬಾಗಿಲಲ್ಲಿ ಒಬ್ಬ ಹುಡುಗಿ ಸಾರಿಸುತ್ತಿದ್ದಳು. ಯಾರೀಕೆ ? ಬಸ್ಯಾನ ಮನೆಯಲ್ಲಿದ್ದವರೇ ಮೂರು ಜನ. ಅವನ ಹೆಂಡತಿ ಸತ್ತ ನಂತರ ಈಗ ಬಸ್ಯಾ ಮತ್ತು ಅವನ ಮಗಳು. ಬಹುಶಃ ಮಗಳೇ ಇರಬೇಕು. ನಾನು ದೂರದಿಂದಲೇ ಹೊರಟೆ. ಊರ ಜನರೆಲ್ಲ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು. ಲಂಡಕ್ಯಾನ ಸರುವು ಸ್ವಲ್ಪ ದೂರವೆನಿಸಿದರೂ ಪ್ರಶಾಂತ ಸುಂದರ ಸ್ಥಳ. ಹಳ್ಳದ ಮೇಲಿನ ಸಿಂದೀ ಗಿಡಗಳ ನಡುವೆ ಹಕ್ಕಿಗಳ ಸಂಗಡ ಏಕಾಂಕಿಯಾಗಿ ನಾನು ಏನು ಬೇಕಾದರೂ ಮಾಡಬಹುದು. ಸ್ವಲ್ಪ ಹೊತ್ತಾಯಿತೆಂದರೆ ದನ ಕಾಯುವ ಹುಡುಗರು ಇತ್ತ ಬರುತ್ತಾರೆ.

ತಿರುಗಿ ಬರುವಾಗ ಭೆಟ್ಟಿಯಾದವರೆಲ್ಲ ಮಾತಾಡಿಸಿದರು. ಮಾವನ ಭಕ್ತರು ಇವರೆಲ್ಲ. ಮಾವ ಈ ಊರಿನ ಕುಲದೇವತೆಗಳಲ್ಲಿ ಒಬ್ಬ. ಊರ ಜನರೆಲ್ಲ ಒಂದಲ್ಲ ಒಂದು ರೀತಿಯಿಂದ ಅವನಿಗೆ ಋಣಿ. ಮದುವೆ–ಮುಂಜಿವೆ, ಸಾವು–

ಹುಟ್ಟು, ದಾನ-ದಕ್ಷಿಣೆ, ಜಾತ್ರೆ, ಕುಸ್ತೀಕಣ-ಎಲೆಕ್ಶನ್, ಅಧಿಕಾರಿಗಳಿಗೆ ಕೋಳಿ ಪಾರ್ಟಿ ಎಲ್ಲವೂ ಮಾವದತ್ತವೇ. ಈ ಮಂದಿಯ ಒಂದೊಂದು ಉಸುರಿನ ಮೇಲೂ ಮಾವನ ಋಣದ ಅನೇಕ ಆರ್ಸಿಸಿ ಭವನಗಳು ನಿರ್ಮಾಣ ಗೊಂಡಿವೆ. ಬರುವಾಗ ಬಸ್ಯಾ ಬಾಗಿಲಲ್ಲಿ ಎಕ್ಕಿ ಎಲೆ ಸೇದುತ್ತಿದ್ದ. ಅವನನ್ನು ಮಾತಾಡಿಸದೇ ಹಾಗೇ ಹೋಗುವುದಾಗಲಿಲ್ಲ. ಗೊಂಗಡಿ ಹಾಸಿದ. ಕೂತೇ ಬಸ್ಯಾ ಗೂರುತ್ತ ತನ್ನ ದುಃಖದಲ್ಲಿ ಮಾವ ಸಹಾಯ ಮಾಡಿದ್ದನ್ನು ಹೇಳಿದ. ಹೆಂಡತಿ ಸತ್ತಾಗ, ತನ್ನ ಹೊಲ ಒತ್ತೆ ಇಡುವ ಪ್ರಸಂಗ ಬಂದಾಗ ಅವರಿವರಿಗೆ ಕೊಡುವುದೇನು ಎಂದು ಮಾನನೇ ಇಟ್ಟುಕೊಂಡು ರೊಕ್ಕ ಕೊಟ್ಟಿದ್ದು, ಹೋದ ವರ್ಷದ ಕಾಮನ ಹಬ್ಬದ ಮರುದಿನ ಬಸ್ಯಾನ ಗುಡಿಸಲಿಗೆ ಬೆಂಕಿ ಬಿದ್ದು ಅವನ ಸುಲ್ಯಾದೆ ಬಟಾಬಯಲಾದಾಗ ಮಾವನೇ ಆ ಮರ್‍ಯಾದೆಯನ್ನು ಉಳಿಸಿ ಕಾಪಾಡಿದ್ದು, ಹೊಸದಾಗಿ ಗಟ್ಟಿ ಮನೆ ಮಾಡಿದ್ದು— ಒಂದೊಂದನ್ನೂ ಹೇಳುವಾಗ ಬಸ್ಯಾನ ಗುಳಿಬಿದ್ದ ಕಣ್ಣುಗಳಿಂದ ಕೃತಜ್ಞತೆಯು ಮಿಂಚು ಸೂಸುತ್ತಿತ್ತು. ಒಮ್ಮೆ ಬಾಗಿಲ ಸಂದಿನಿಂದ ಇಣಿಕಿದ ಹುಡುಗಿ ಅವನ ಮಗಳೇ ಇರಬೇಕು. ಬಸ್ಯಾನೇ ಕರೆದು, "ಸಾಂವಕ್ಕ, ನೋಡು ನಿನ್ನ ಶಾರದ ಯಜಮಾನ್ರು ಬಂದಾರು," ಅಂದ. "ಅವರಿಗೇನು ಕೊಡೋದು? ನಮ್ಮಂಥವರ ಮನ್ಯಾಗ ಅವ್ರು ಚಾ ಸೈತ ಕುಡ್ಯಾಕಿಲ್ಲ," ಎನ್ನುತ್ತ ಬಾಗಿಲ ನಡುವೆ ನಿಂತ ಸಾಂವಕ್ಕನನ್ನು ಕಣ್ಣು ಕಣ್ಣು ಬಿಟ್ಟು ನೋಡಿದೆ. ಎಲಾ ಇವಳ! ಐದಾರು ವರ್ಷದ ಹಿಂದೆ ನಾನು ನೋಡಿದ್ದ ಆ ಬಡಕಾಟೆ ಹುಡುಗಿ ಇವಳೇನೇ? ಗಲ್ಲದ ಗುಳಿಗಳನ್ನು ನೋಡಲಾಗದೆ ನಾನೇ ನಾಚಿ ಮುಖ ಕೆಳಗೆ ಮಾಡಿದೆ. "ಸಾವ್ಕಾರು, ಹೆಂಗುದೀರಿ? ನಮ್ಮಂಥವರ ನೆನಪು ಹೆಂಗಾಕ್ಕತಿ ನಿಮಗ? ಮುಂಜಾನೆ ನೋಡಿನೂ ಹಂಗs ಹೋದ್ರಿ?" ಎಂದಳು. ನಾನು ಏನು ಹೇಳಬೇಕೋ ತಿಳಿಯಲಿಲ್ಲ. "ಇಲ್ಲ. ಸ್ವಲ್ಪ ಹೊರಕಡಿಗೆ ಹೊರಟಿದ್ದೆ. ಬರೂವಾಗ ಬಂದ್ರಾತಂತ ಬರಲಿಲ್ಲ," ಎಂದೆ. "ನಿನ್ನೆ ಚೆಂಜೀಮುಂದ ತಡಾ ಆಗಿ ಬಂದ್ರೆಂತ?" ಅಂದಳು. "ಹೌದು, ನಿನ್ನೆ ಚೆಂಜೀಮುಂದ ಬಂದ್ರು," ಅಂದ ಬಸ್ಯಾ. ನನಗೆ ಅಲ್ಲಿ ಹೆಚ್ಚಿಗೆ ಕೂಡ್ರುವ ಧೈರ್ಯ ಸಾಲಲಿಲ್ಲವೇನೊ. ಎದ್ದು ನಿಂತೆ. "ಇನ್ನs ಎಷ್ಟ ದಿನಾ ಇರ್ತೀರಿ?" ಎಂದಳು. "ನಾಳೇ ಮುಂಜೇನೆ ಹೊಕ್ಕೇನಿ," ಎಂದೆ. "ಮಧ್ಯಾಣದಾಗ ಊಟಾಗೀಟಾ ಮಾಡಿ ಇಕಾಡೆ ಬರ್ರೆಲಾ," ಎಂದು ಆ ದಪ್ಪ ತುಟಿಗಳನ್ನು ಮುಂದೆ ಮಾಡಿ ಹೇಳಿದ್ದನ್ನು ನೋಡಿ, 'ಎಲಾ ಇವಳ, ಏನ ಧೈರ್ಯಾ ಇವಳಿಗೆ! ಇದು ಹಾಡುಹಗಲೇ ಆಮಂತ್ರಣ,' ಅಂದುಕೊಂಡೆ. ಬಸ್ಯಾ ತಲೆಯೆತ್ತದೇ ಸುಮ್ಮನೇ ಬೇರೆ ಎಕ್ಕಿ ಎಲೆ ಸುತ್ತುತ್ತಿದ್ದ. ಅನಾಯಾಸವಾಗಿ "ಹ್ಞೂ ಬರ್ತೇನಿ," ಎಂದವನೇ ಹೊರಟುಬಿಟ್ಟೆ. ಅವಳ ದೊಡ್ಡ ದೊಡ್ಡ ತುಟಿಗಳ ನಡುವೆ ಕಂಡ ಎರಡು ದೊಡ್ಡ ಹಲ್ಲುಗಳು ನನ್ನನ್ನು ಹರಿದು ತಿನ್ನುವಂತೆ ನಕ್ಕಿದ್ದವು. ಸಾಂವಕ್ಕ, ಸಾವಿತ್ರಿ, ನನಗಿಂತ ಏಳೆಂಟು ವರ್ಷ ಸಣ್ಣವಳೇ ಇರಬೇಕು. ಮಾವನ ಅಂಗಡಿಗೆ ಬಂದು ಕಾಳು ಹಾಕಿ ಕಿರಾಣಿ ಒಯ್ಯುವಾಗ ಎಷ್ಟೋ ಸಲ ಇವಳನ್ನು ನೋಡಿದ್ದೆ. ಎರಡೂ ಕೈಯಿಂದ ಸೋರುವ ಸುಂಬಳ ಒರೆಸುತ್ತ, ಲಂಗಕ್ಕೆ ತಿಕ್ಕುತ್ತ ತಮ್ಮಪ್ಪನಿಗೆ ಚುಟ್ಟಾನೋ ಎಲೆ ಅಡಿಕೆಯೋ, ಮನೆಗೆ ಒಳ್ಳೆಣ್ಣೆ ಉಳ್ಳಾಗಡ್ಡಿಯೋ ಒಯ್ಯುವಾಗ ಈ ದರಿದ್ರ ಸೊಳಕಿ ಹುಡುಗಿಯನ್ನು ನೋಡುವುದೇ ಅಸಹ್ಯ. ಆದರೆ ಈಗ ಈ ರತಿಯನ್ನು ನೋಡದವನೇ ದರಿದ್ರ ಅನ್ನಿಸಿತು.

ಅಕ್ಕ ಅವಲಕ್ಕಿ, ಬಿಸಿ ಬಿಸಿ ತಾಲೀಪೆಟ್ಟುಗಳನ್ನು ಮಾಡಿಕೊಟ್ಟಳು. ತಿಂದು ಚಹ ಕುಡಿದೆ. ಮಾವ ಇನ್ನೂ ಎದ್ದಿರಲಿಲ್ಲ. ಮುಂಜಾನೆಯ ಗಿರಾಕಿಗಳು ಸುರುವಾಗಿದ್ದವು. ಮುದುಕಿ ಅಂಗಡಿಯಲ್ಲಿದ್ದಳು. ನನ್ನ ಕೋಣೆಗೆ ಬಂದು ಓದಬೇಕೆಂದೆ, ಆಗಲಿಲ್ಲ. ಮುಂಜಾವಿನ ಸೂರ್ಯ

ವೈ ಹೊಕ್ಕಂತಾಗಿತ್ತು. ಮತ್ತೆ ಸಾವಿತ್ರಿಯು ನೆನಪು.

ಕೂಡಲಾಗಲಿಲ್ಲ. ಹೊರಗೆ ಹೋಗಬೇಕೆಂದೆ. ಮಾವನ ಮಕ್ಕಳೆಲ್ಲ ಬಂದವು. ಅವರೆಲ್ಲರನ್ನೂ ಕರೆದುಕೊಂಡು ಊರ ತುಂಬ ಸುತ್ತಾಡಿದೆ. ಪೋಸ್ಟಾಫೀಸಿನ ಶೀನಂಭಟ್ಟರು, ಗೌಡರ ಬಸ್ಯಾ, ಅಗಸೀಮನಿ ನರಗ, ಗೂಳಪ್ಪಾರ ಚೆನ್ಯಾ, ಕೋಯಪ್ಪನವರ ಮಲ್ಲವ್ವ, ಬೇವಿನ ಗಿಡದ ಸಂಗಣ್ಣ, ಗಡಾದ ಮಾದ್ಯಾ, ಬಸವನ ಗುಡಿ ದುಂಡಮ್ಮ ಒಬ್ಬೊಬ್ಬರೂ ಎಷ್ಟೊಂದು ಪ್ರೀತಿಯಿಂದ ಮಾತಾಡಿಸಿದರು. ನಾನು ಅವರೆಲ್ಲರ ಅಭಿಮಾನಧನ. ಎಷ್ಟ ದಿನಕ್ಕ ಬಂದೆಲ್ಲ, ನಿನ್ನ ಪಗಾರ ಎಷ್ಟು, ತಿಂಗಳಾ ಆರನೂರs ನಿನ್ನ ನಸೀಬಾನs ದೊಡ್ಡದು—ಎಲ್ಲ ಪ್ರಶಂಸೆಯ ಶಬ್ದಗಳು. ರವಿವಾರವಿದ್ದುದರಿಂದ ಕುಲಕರ್ಣಿ ಮಾಸ್ತರರೂ ಸಿಕ್ಕರು. ಮತ್ತೆ ಮನೇ ಕಡೆಗೆ ಬಂದೆವು. ತಾನೇ ಕಲಿಸಿ ನನ್ನನ್ನು ದೊಡ್ಡವನನ್ನಾಗಿ ಮಾಡಿದೆ ಎಂಬ ದೃಢವಾದ ನಂಬಿಕೆ ಮಾಸ್ತರರಿಗೆ ಈಗಲೂ ಇದೆ.

ಮಾವ ಅಂಗಡಿಯಲ್ಲಿ ಕೂತಿದ್ದ. ಅಲ್ಲೇ ಕೂತೆವು. ಹುಡುಗರೆಲ್ಲ ಆಡಲು ಹೋದರು. ಮತ್ತೊಮ್ಮೆ ಎಲ್ಲರೂ ಚಹ ಕುಡಿದೆವು. ಮಾಸ್ತರರು ಹೋದರು. ಅಂಗಡಿಯಲ್ಲಿ ಗಿರಾಕಿಗಳ ಕೂಡ ನಗುನಗುತ್ತ, ಚೇಷ್ಟೆ ಮಾಡುತ್ತ ಎಲ್ಲರನ್ನೂ ಮಾವ ಪ್ರೀತಿಯಿಂದ ಕಾಣುತ್ತಾನೆ. ಈ ಮಾವನಿಂದ ಬಹಳಷ್ಟು ಕಲಿಯುವದಿದೆ. ವ್ಯಕ್ತಿತ್ವ ಹೀಗೆ ಬೆಳೆಯಬೇಕು ಅಂದುಕೊಂಡೆ.

ಸುಮಾರು ಹನ್ನೊಂದು ಗಂಟೆಯಾಗಿತ್ತು. ಹಸಿವೆಯಾಗಿರಲಿಲ್ಲ. ಕೋಣೆಗೆ ಬಂದು ಓದುತ್ತ ಕೂಡ್ರಬೇಕೆಂದೆ. ಬೇಡ, ಹಳ್ಳದ ಕಡೆಗೆ ಹೋಗಿ ಬಸ್ಯಾನ ಹೊಲದಲ್ಲಿ ಮಾವಿನ ಮರಗಳ ನೆರಳಲ್ಲಿ ಕೂತು ಆರಾಮವಾಗಿ ಓದಬಹುದು. ಎದ್ದೆ. ಬಸ್ಯಾ ಹೊಲದಲ್ಲಿದ್ದ. "ಬರ್ರಿ ಧಣ್ಯಾರ," ಅಂತ ನಕ್ಕ. ಅವನ ಹೊಲದಲ್ಲೆಲ್ಲ ಸುತ್ತಾಡಿ ಮಾವಿನ ಮರದಡಿಗೆ ಬಂದು ಕುಳಿತೆ. ಸುಮ್ಮನೇ ಮಲಗಬೇಕನ್ನಿಸಿತು. ಓದುವುದು ಇಡೀ ಜೀವನ ಇದೆ. ಇಂಥ ಸ್ಥಳ, ಸುಖನಿದ್ರೆ ಎಲ್ಲಿಯಾದರೂ ಸಿಕ್ಕೀತೆ? ಹಾಗೇ ಸ್ವಲ್ಪ ಹೊತ್ತು ಒರಗಿದೆ. ಮಂಪರು. ನೊರಜುಗಳ ಕಾಟ ವಿಪರೀತವಾಯಿತು. ಎದ್ದೆ. ಎದುರಿಗೆ ಬಸ್ಯಾನಿಗೆ ರೊಟ್ಟಿ ಹಚ್ಚಿಕೊಡುತ್ತ ಸಾವಿತ್ರಿ ಕುಳಿತಿದ್ದಳು. ಅವಳ ಬೆನ್ನು ನನ್ನ ಕಡೆಗಿತ್ತು. ಯಾವ ಶಿಲ್ಪಿ ಕಟೆದಿರಬೇಕು ಇವಳನ್ನು. ಎಲ್ಲ ತುಂಬಿ ಬಂದಿದೆ, ಕೂಡಿಬಂದಿದೆ ಅನ್ನಿಸಿತು. ಆನಂದವಾಯಿತು. ಸಾವಿತ್ರಿ ಒಮ್ಮೆ ತಿರುಗಿ, ನಾನು ಕುಳಿತದ್ದು ನೋಡಿ ನಗುತ್ತ, "ಧಣ್ಯಾರ, ನನ್ನ ರೊಟ್ಟೀ ತಿಂತೀರೇನು?" ಅಂದಳು. ನನ್ನ ಬಾಯಿಯನ್ನು ಅವಳು ಮುಚ್ಚಿಬಿಟ್ಟ ಹಾಗಿದೆ. ದಿನಾಲು ವಿದ್ಯಾರ್ಥಿಗಳೆದುರು ಇಷ್ಟು ಮಾತಾಡುವ, ಮಾತಾಡುವುದೇ ಧಂಧೆಯಾದ ನಾನು ಇಲ್ಲೇಕೆ ಮೌನವಾಗಿರುವೆ? ಇವಳ ಬಾಯಿ, ಇವಳ ಮಾತು, ಇವಳ ನಗೆ ನನ್ನದು ಅನ್ನಿಸಿತು. "ಬ್ಯಾಡ ಸಾಂವಕ್ಕ, ಮನ್ಯಾಗ ಮಾವ ದಾರೀ ನೋಡತಿರತಾನ," ಅಂದೆ. "ಉಂಡ ಮ್ಯಾಲ ಮನೀ ಕಡೆ ಬರ್ರೆಲ್ಲಾ." ನಾನು ಆ ಮಾತಿಗೆ ಉತ್ತರ ಕೊಡಲಿಲ್ಲ. ಇದು ಸುಮ್ಮನೇ ಹೇಳಿದ ಮಾತಲ್ಲ. ಬೆಳಗ್ಗೆಯೂ ಹೇಳಿದ್ದಳು. ಈಗ ಮತ್ತೆ ನೆನಪಿಸಿ ಬಾ ಎಂದಿದ್ದಾಳೆ. ಬಸ್ಯಾ ತನ್ನದೇನೂ ಸಂಬಂಧವಿಲ್ಲವೆನ್ನುವಂತೆ ಸುಮ್ಮನಿದ್ದಾನೆ.

ಸಾವಿತ್ರಿ ನಗುತ್ತಲೇ ಇದ್ದಳು. ಯಾವಾಗಲೂ ನಗೆ. ಆ ನಗೆಯ ತೆರೆತೆರೆಯ ಮೇಲೆ ಹತ್ತಿ ಮನೆಗೆ ಬಂದೆ. ಮಾವನ ಕೂಡ ಊಟ ಮಾಡಿದೆ. ಸ್ವಲ್ಪ ಹೊತ್ತು ಮಲಗೋಣವೆಂದುಕೊಂಡೆ. ಆಗಲಿಲ್ಲ. ಓದಹತ್ತಿದೆ. ಸಾವಿತ್ರಿ ಬಾ ಎಂದಿದ್ದಾಳೆ. ಹೋಗಬೇಕೆ? ಈ ಮಧ್ಯಾಹ್ನದಲ್ಲಿ ಅವಳ ಮನೆಗೆ ಹೋದರೆ ನೋಡಿದವರಾದರೂ ಏನು ಅಂದಾರು? ರಾತ್ರಿ ಅಥವಾ ಮಬ್ಬುಗತ್ತಲಾದ ಕೂಡಲೇ ಹೋಗಿ ಬರುವುದೇ ಸರಿ. ಆದರೆ... ಅವಳ ಮನೆಗೆ ಹೋಗಲೇಬೇಕೆ?

ಸುಮ್ಮನೇ ಹೋಗಿ ಬರುವುದರಲ್ಲಿ ಏನು ತಪ್ಪಿದೆ? ಪಾಪ, ಬಾ ಎಂದಿದ್ದಾಳೆ. ಐದು—ಹತ್ತು ನಿಮಿಷ ಅವಳ ಕೂಡ ಮಾತಾಡಿದರೂ ಅವಳಿಗೆ ಆನಂದ ವಾಗುತ್ತಿದ್ದರೆ ಆ ಸಂತೋಷವನ್ನು ಅವಳಿಗೇಕೆ ನೀಡಬಾರದು? ಸಮೀಪ ಕೂತರೂ, ಮಾತಾಡಿ ದರೂ ಎದೆ ಮಿಡಿಯುತ್ತದೆ ಸಾವಿತ್ರಿಯಂಥ ಹೆಣ್ಣಿದ್ದರೆ...

ನಿದ್ದೆ ಹತ್ತಿದ್ದೇ ನೆನಪಿಲ್ಲ. ಎದ್ದಾಗ ಸಂಜೆ ಐದು ಗಂಟೆಯಾಗಿತ್ತು. ಪುಸ್ತಕ ಬೋರಲಾಗಿ ಬಿದ್ದಿತ್ತು. ಗುರುಪುತ್ರ ಬಂದು "ಚಾಕ್ಕ ಅವ್ವಾ ಕರೀತಾಳ," ಅಂದ. ಎದ್ದು ಹೋಗಿ ಮುಖ ತೊಳೆದುಕೊಂಡು, ಮೇಲೆ ವಗ್ಗರಣೆ ಹಾಕಿಸಿ-ಕೊಂಡು ಚುರಮುರಿ ತಿಂದು, ಗಂಗಾಳ ತುಂಬ ಚಹ ಕುಡಿದೆ. ತೃಪ್ತಿಯೆನ್ನಿಸಿತು. ಎದ್ದು ಬಂದು ಅಂಗಡಿಯಲ್ಲಿ ಕುಳಿತೆ. ಮತ್ತೆ ಊರಿನ ಮಂದಿ. ಮಾತಾಡಿಸುವವರು. ಬೆರಗಾಗಿ ನನ್ನನ್ನೇ ನೋಡುವ ಗಿರಾಕಿಗಳು. ಬಾವಿಮನಿ ಹುಸನಮ್ಮ ಹಣ್ಣು ಹಣ್ಣು ಮುದುಕಿ. ಹತ್ತಿರ ಕೂತು, ನನ್ನನ್ನು ಮುಟ್ಟಿ ಲಟಿಕೆ ಮುರಿದು ದೃಷ್ಟಿ ಹತ್ತದಿರಲಿ ಎಂದಳು. ಮಾವ, "ನೋಡಬೇ ಏಮ್ಮಾ, ನಿನ್ನ ಮೊಮ್ಮಗಾ ದೊಡ್ಡ ಸಾಯ್ಬ ಆಗ್ಯಾನೀಗ," ಎಂದು ಮೀಸೆಯ ಮೇಲೆ ಕೈ ಹಾಕಿದ. ಮುದುಕಿ ಒಳಗೆ ಹೋಗಿ ಅಕ್ಕನ್ನ ಮಾತಾಡಿಸಿ ಹೋದಳು.

ಮಬ್ಬು ಕಾವಳ. ಅಕ್ಕ ಲಾಟನ್ನು ಹಚ್ಚಿ ತಂದಿಟ್ಟಳು. ನನ್ನ ಕೋಣೆಯಲ್ಲಿಯ ಚಿಮಣಿ ಯಲ್ಲಿ ಎಣ್ಣೆ ತೀರಿತ್ತು. ಅದನ್ನು ತಂದು, ಎಣ್ಣೆ ಹಾಕಿ, ಕಾಜು ಒರೆಸಿ, ಒಂದು ಗುಬ್ಬಿ ಲಾಟನ್ನನ್ನೂ ಹಚ್ಚಿ ಇಟ್ಟಳು. ಈ ದೀಪ ನನಗೆ ಬಹಳ ಹಿತ-ವೆನ್ನಿಸಿತು. ಅರೆ ಎಚ್ಚರದ ಆನಂದ ನೀಡುವ ಈ ಬೆಳಕು ನಿರಂತರ ಬೇಕು. ಕಾಡಿಗೆ ಕಾರುವ ಚಿಮಣಿ ಆರಿಸಿಬಿಟ್ಟೆ. ಮೇಲೆ ಜೋತಾಡುವ ಗುಬ್ಬಿ ಲಾಟನ್ನಿನ ಹೊಯ್ದಾಟದ ನೆರಳು ಗೋಡೆಯ ಮೇಲೆ. ಥುತ್ತೆಂದು ಸಾವಿತ್ರಿ ಕಣ್ಣ ಮುಂದೇ ನಿಂತಂತಾಯಿತು. ಕಿರಾಣಿ ಅಂಗಡಿಯ ಫಡಕುಗಳಿಗೆ ಅಂಟಿಕೊಂಡೇ ನಿಂತಿದ್ದಳು ಸಾವಿತ್ರಿ. ಬಹುಶಃ ಏನಾದರೂ ಸಾಮಾನು ಒಯ್ಯಲು ಬಂದಿರಬಹುದು. ಮಾವ ಮಾಪಿನಿಂದ ಎತ್ತರಿಸಿ ಎಣ್ಣೆ ಹಾಕುತ್ತಿದ್ದ. ಬೆಲ್ಲ ತೂಗಿ ಅವಳ ಉಡಿ ಯಲ್ಲಿ ಸುರುವಿದ. ಎದೆಯನ್ನು ಸೆರಗಿನಿಂದ ಬಿಗಿಯಾಗಿ ಮುಚ್ಚಿಕೊಂಡು ಎಳೆನಗು ನಗುತ್ತ ನಿಂತಿದ್ದ ಈ ಗರತಿಯನ್ನು ಮಾವ ಮಾತಾಡಿಸಿ, "ನನ್ನ ಅಳ್ಯಾನ್ನ ನೋಡಿಯೇನ ಸಾಂವಿ?" ಎನ್ನುತ್ತಿದ್ದ. ನಾನು ಎದ್ದವನೇ ಹೊರಗೆ ಬಂದೆ. ನನ್ನನ್ನು ನೋಡಿ ನಾಚಿಕೊಂಡಂತೆ ಇನ್ನಷ್ಟು ನಾಚಿಗೆಮುಳ್ಳಾದಳು. ಮಾವನ ಮಾತಿಗೆ ಉತ್ತರವಾಗಿ ನನ್ನ ಕಡೆ ಒಮ್ಮೆ ನೋಡಿ ಸುಮ್ಮನೆ ನಕ್ಕಳು. ನನಗೆ ಕೆಟ್ಟೆನಿಸಿತು. ಪಾಪ, ಮಧ್ಯಾಹ್ನ ಬಾ ಎಂದಿದ್ದಳು. ದಾರಿ ನೋಡಿರ ಬೇಕು. ನಾನು ಬರದ್ದಕ್ಕೆ ನೊರಗಿದ ಹಾಗೆ ಕಾಣುತ್ತಿದ್ದಾಳೆ. ನನಗೆ ತೃಪ್ತಿಯಾಗಲಿ ಬಿಡಲಿ, ಇನ್ನೊಬ್ಬರಿಗೆ ತೃಪ್ತಿಯಾಗುವಂತೆ ನಡೆದು ಕೊಂಡರೂ ಸಾರ್ಥಕತೆಯ ಅನುಭವವಾಗುವು ದಿಲ್ಲವೆ? ನಾನು ತಪ್ಪು ಮಾಡಿದೆ. ಒಂದು ಹತ್ತು ನಿಮಿಷದ ಮಟ್ಟಿಗಾದರೂ ಇಳಿಹೊತ್ತಿನ-ಕಿಂತ ಮುಂಚೆ ಹೋಗಿ ಬರಬೇಕಿತ್ತು. ನನ್ನನ್ನೇ ಶಪಿಸಿಕೊಂಡೆ. ಸಾವಿತ್ರಿ ಏನೂ ಮಾತಾಡದೇ ನನಗೆ ಬಹಳಷ್ಟು ಹೇಳಿದ್ದಳು.

ಅವಳು ಹೊರಟು ಹೋದ ಮೇಲೆ ಕೋಣೆ ಯೊಳಕ್ಕೆ ಬಂದೆ. ಕೂಡುವುದಾಗಲಿಲ್ಲ. ಅಗಸಿಯ ಕಡೆಗೆ ಅಡ್ಡಾಡುತ್ತ ಹೋದೆ. ನರಗಜ್ಜ, ಜಿಡ್ಡಿಮನಿ ನಿಂಗಪ್ಪ, ಆರ್ಯಾರ ಬಸಪ್ಪ ದತ್ತಾ-ತ್ರೇಯ ಗುಡಿ ಮುಂದೆ ಚಿಲಮಿ ಹಚ್ಚಿಕೊಂಡು ಪಾಳಿಯ ಪ್ರಕಾರ ಜುರಿ ಎಳೆಯುತ್ತ ಕುಳಿತಿ ದ್ದರು. ಅವರ ಕೂಡ ಸ್ವಲ್ಪ ಹರಟೆ ಹೊಡೆದು, ನಡ ಬಿಗಿದಂತಾಗಿ ಸಾಲೆಯ ಹಿಂದಿನ ಕಳ್ಳಿಯ ಸಾಲಿನಲ್ಲಿ ಉಚ್ಚೆ ಹೊಯ್ದೆ. ಸಾವಿತ್ರಿಯ ಬಾಗಿಲಲ್ಲಿ ಜೋತುಬಿದ್ದ ಗುಬ್ಬಿ ಲಾಟನ್ನು ಕಾಣಿಸಿತು. ಹೋಗಿಬಿಡಲೇ ಅನ್ನಿಸಿತು. ಬೇಡ. ಇವರೆಲ್ಲ ಏನು ಅಂದುಕೊಂಡಾರು? ಮನೆ ಕಡೆ


ಬಂದೆ.

"ನೀ ಊಟಾ ಮಾಡಿಬಿಡು. ನನಗ ತಡಾ ಆಕ್ಕತಿ," ಅಂದ ಮಾವ. ಊಟ ಮುಗಿಸಿ ಎಲೆ-ಅಡಿಕೆ ಹಾಕುತ್ತ ನನ್ನ ಕೋಣೆಗೆ ಬಂದೆ. ಸಂಜೆಯ ಗಿರಾಕಿಗಳ ಗದ್ದಲ ಮುಗಿದು ಈಗ ಆಗೊಂದು ಈಗೊಂದು ಕಳ್ಳ ಗಿರಾಕಿ ಬರುತ್ತಿದ್ದವು. ಊರೆಲ್ಲ ನಿಸ್ತಬ್ಧವಾಗತೊಡಗಿತ್ತು. ರಾತ್ರಿಯ ೯-೯॥ ಅಂದರೆ ಹಳ್ಳಿಯವರಿಗೆ ಮಧ್ಯ ರಾತ್ರಿ. ಮಾವ ಎದ್ದು ಊಟಕ್ಕೆ ಹೋದ. ಅಕ್ಕ ಅಂಗಡಿಯಲ್ಲಿ ಕುಳಿತಿದ್ದಳು. ನಾನು ಫಡಕು ಹಾಕಿಕೊಂಡೆ.

ಓದಲು ವ್ಯರ್ಥ ಪ್ರಯತ್ನ ಮಾಡಿದೆ. ಅಕ್ಷರ ಅಕ್ಷರದ ನಡುವೆ ಸಾವಿತ್ರಿಯ ದೊಡ್ಡ ತುಟಿಗಳ ನಡುವಿನ ಆ ಎರಡು ದೊಡ್ಡ ಹಲ್ಲುಗಳ ನಗೆ, ಅವಳ ಸೆರಗಿನಿಂದ ಬಿಗಿದು ಮುಚ್ಚಿದ ಎದೆ. ಹೋಗಬೇಕು. ಸ್ವಲ್ಪ ಹೊತ್ತು ಅವಳ ಕೂಡ ಕೂತು ಬಂದರೂ ಒಂದು ನಿಮಿರುವ ಅನುಭವ.. ಮಾವ, ಅಕ್ಕ ಅಂಗಡಿ ಬಂದು ಮಾಡಿ ಮಲಗಿದ ನಂತರ ಹೋಗಬೇಕು. ಸಾವಿತ್ರಿ ತಪ್ಪು ತಿಳಿಯಲಿಕ್ಕಿಲ್ಲ. ಅವಳೇ ಬಾ ಎಂದಿದ್ದಾಳೆ. ನಾನು ಅವಳಲ್ಲಿಗೆ ಹೋಗದಿದ್ದರೇ ಅವಳಿಗೆ ದುಃಖ ವಾಗುತ್ತದೆ. ಲಾಟನ್ನನ್ನು ಇನ್ನೂ ಸಣ್ಣದು ಮಾಡಿದೆ. ಕಣ್ಣಿನ ತುಂಬ ತೀರ ಏನೂ ಕಾಣದ ಮಬ್ಬು.

ಅಂಗಡಿ ಮುಚ್ಚಿ ಕೀಲಿ ಹಾಕಿದ ಸಪ್ಪಳ. ಒಳಗೆ ಅಗಳಿ ಜಡಿದು ಕೀಲಿ ಹಾಕಿರಬೇಕು ಮಾವ. ಹೊರಗೆ ಯಾವುದೋ ನಾಯಿಯ ಬೊಗಳುವಿಕೆ. ಹಾಗೇ ಸ್ವಲ್ಪ ಹೊತ್ತು ಒರಗಿಯೇ ಇದ್ದೆ. ಸುಮಾರು ಅರ್ಧ ತಾಸಿನ ನಂತರ ಮೆಲ್ಲಗೆ ಎದ್ದೆ. ನನ್ನ ಕೋಣೆಯ ಫಡಕು ತೆಗೆದು ಹೊರಗೆ ಬಂದು ಮತ್ತೆ ಸಾವಕಾಶ ಹಾಕಿದೆ. ಕೊರಳಿಗೆ ಮಫ್ಲರ್ ಸುತ್ತಿಕೊಂಡು ಕಟ್ಟೆ ಇಳಿದೆ. ದ್ಯಾಮವ್ವನ ಗುಡಿ ಮುಂದಿನ ನಾಯಿ ಒಮ್ಮೆ ಒದರಿತು. ನಾನು ಮೆಲ್ಲನೆ ಮುಂದೆ ಹೋಗಿ ಸಾಲೆಯ ಹತ್ತಿರ ಉಚ್ಚೆ ಹೊಯ್ದು ನೇರವಾಗಿ ಸಾವಿತ್ರಿಯ ಮನೆಯ ಮುಂದೆ ಬಂದು ನಿಂತೆ.

ಬಾಗಿಲು ಹಾಕಿತ್ತು. ಒಳಗೂ ಕತ್ತಲೆ. ಪಾಪ, ದಣಿದು ಮಲಗಿರಬೇಕು. ಮುದುಕನೂ ಮಲಗಿರಬೇಕು. ಈಗ ಸಾವಿತ್ರಿಯನ್ನು ಹೇಗೆ ಎಬ್ಬಿಸುವುದು? ಅವಳ ಮನೆಯ ಮುಂದಿನ ಹುಣಿಸೆಮರದಲ್ಲಿಯ ತೊಗಲಬಾವಲಿಗಳು ಒಮ್ಮೆ ಪಟಪಟ ರೆಕ್ಕೆ ಬಡಿದುವು. ಒಂದೈದು ನಿಮಿಷ ಏನೂ ತೋಚದೆ ಹೊರಗಿನ ಕಟ್ಟೆಯ ಮೇಲೆ ಕುಳಿತೆ. ಒಳಗೆ ಬಳೆಯ ಸಪ್ಪಳ. ಹಾಗಾದರೆ ಮುಂದಿನ ಕೋಣೆಯಲ್ಲಿಯೇ ಸಾವಿತ್ರಿ ಮಲಗಿದ್ದಾಳೆ. ಧೈರ್ಯದಿಂದ ಎದ್ದವನೇ ಹವುರಗೆ ಬಾಗಿಲು ಬಡಿದು ಸಾವಕಾಶ, "ಸಾಂವಕ್ಕಾ" ಅಂದೆ. ಒಮ್ಮೆಲೇ ಗಡಬಡಿಸಿ ಎದ್ದಂತೆ ಬಳೆ ಸಪ್ಪಳ. ಮತ್ತೆ "ಸಾಂವಕ್ಕಾ...ನಾನು" ಎಂದೆ. ಎದೆ ಡವಡವ ಬಡಿದುಕೊಳ್ಳತೊಡಗಿತ್ತು. ಈ ಕಳ್ಳತನದಲ್ಲಿ ಎಂಥ ಮಧುರ ಯಾತನೆಯ ಸುಖ ವಿರುತ್ತದೆ! ಕಡ್ಡಿ ಕೊರೆದ ಸಪ್ಪಳ. ಹೌದು, ಚಿಮಣಿ ಹಚ್ಚಿರಬೇಕು. ಸ್ವಲ್ಪ ಬೆಳಕು ಕಾಣಿಸುತ್ತದೆ. ಬಳೆ ಸಪ್ಪಳ ಹತ್ತಿರ ಬಂತು. ನನ್ನನ್ನು ಆ ಬಳೆಗಳ ವೃತ್ತದಲ್ಲಿಯೇ ಅವಳು ಹಿಚುಕಿದಂತೆ ಬಿಸಿನೀರ ಬುಗ್ಗೆಯಲ್ಲಿ ಚಳಿಗಾಲದಲ್ಲಿ ಸ್ನಾನ ಮಾಡಿದಂತೆ ಮೈತುಂಬ ನವಿರು. ಕಿರ್ರ್ ಎಂದು ಹವುರಗೆ ಬಾಗಿಲು ತೆರೆಯಿತು. ಸರಕ್ಕನೆ ಒಳಗೆ ಬಂದು ಬಾಗಿಲು ಮುಚ್ಚಿಕೊಂಡೆ. ಸಾವಿತ್ರಿಯ ಎದೆಯ ಮೇಲೆ ಸೆರಗಿರಲಿಲ್ಲ. ಕಚ್ಚಿ ಹಾಕಿಕೊಳ್ಳುತ್ತ ಮಾವ ಹೊರಸಿನ ಹತ್ತಿರ ನಿಂತು ದುರುಗುಟ್ಟಿ ನನ್ನನ್ನೇ ನೋಡುತ್ತಿದ್ದ. ✡



ಉದ್ಧಾರ

ಯಶವಂತ ಚಿತ್ತಾಲ

ಅಹಿಲ್ಯೆ ಅಮ್ಮನ ಹಾದಿ ಕಾಯುತ್ತ ಕುಳಿತಿದ್ದಳು.

ಸಂಜೆಯಿಂದಲೂ ಧಾರೆ ಹಿಡಿದು ಬೀಳುತ್ತಿದ್ದ ಮಳೆ ಇನ್ನೂ ಹೊಳವಾಗಿರಲಿಲ್ಲ. ಹೊಳವಾಗುವ ಲಕ್ಷಣವೂ ತೋರಲಿಲ್ಲ. ಗಾಳಿ ಗುಡುಗುಗಳ ಅಬ್ಬರ ನೋಡಿದರಂತೂ ಅದು ಇನ್ನೂ ಹೆಚ್ಚೇ ಆಗುತ್ತಿದ್ದಂತೆ ತೋರಿತು. ಒಮ್ಮೆಲೇ ಬೀಸಿ ಬಂದ ಗಾಳಿಯ ಸೆಳಕಿಗೆ ಅಡಿಗೆಮನೆಯ ಬಾಗಿಲು ಕಿಡಕಿಗಳ ಕದಗಳು ಲಟಲಟ ಬಡೆದುಕೊಂಡವು. ಮಿಣಿ ಮಿಣಿ ಉರಿಯುತ್ತಿದ್ದ ಚಿಮಣಿ ಬುರುಡೆಯ ದೀಪ ಫಕ್ ಎಂದು ಆರಿ ಹೋಯಿತು. ಕಿಟಕಿಗಳ ಕದಗಳನ್ನಿಕ್ಕುತ್ತಿದ್ದಂತೆ ಅಮ್ಮ ಗೋಕರ್ಣದಲ್ಲೇ ನಿಂತಳೇನೋ. ಇಂತಹ ಮಳೆಯಲ್ಲವಳು ಹೇಗೆ ಬಂದಾಳು ಎನ್ನಿಸಿ ಕಾತರಪಟ್ಟಳು. ಅಡಿಗೆಮನೆಯಲ್ಲಿ ದೀಪವಿರಲಿಲ್ಲ. ಹೊರಗೆ ಹೋಗಿ ಒಳಜಗಲಿಯ ಮೇಲೆ ತೂಗುಹಾಕಿದ ಲಾಟನು ತರುವ ಮನಸ್ಸಾಗಲಿಲ್ಲ. ಒಲೆಯಲ್ಲಿಯ ಬೆಂಕಿಯ ಕೆಂಪು ಪ್ರಕಾಶದಲ್ಲಿಯೇ ಅಡುಗೆಯ ಕೆಲಸ ಸಾಗಿತ್ತು. ರಾತ್ರಿಯಿಡೀ ಈ ಮನೆಯಲ್ಲಿ ತಾನೊಬ್ಬಳೇ ಎಂಬ ವಿಚಾರಕ್ಕೆ ಅಹಿಲ್ಯೆ ಸಣ್ಣಗೆ ನಡುಗಿದಳು. ಅವಳ ಅಮ್ಮ ನಿನ್ನೆ ರಾತ್ರಿ ಮುಟ್ಟಾದಳು. ಬೆಳಿಗ್ಗೆ ಎದ್ದವಳೇ ಮನೆಯೊಳಗಿನ ಕೆಲಸಕ್ಕೇನು ತನ್ನ ಕೈ ತಾಗುವಂತಿಲ್ಲ; ಹೀಗೇ ಅಣ್ಣನ ಮನೆಗೆ ಹೋಗಿ ಬರುತ್ತೇನೆ ಎಂದು ಹೋದವಳು ಇನ್ನೂ ಬಂದಿರಲಿಲ್ಲ. ಮಳೆಯಿಂದಾಗಿ ಗೋಕರ್ಣದಲ್ಲೇ ತಡೆದಳೇನೋ. ಇಲ್ಲ, ಮಳೆ ತುಸು ಹೊಳವಾದ ಮೇಲೆ ಬಂದರೂ ಬಂದಳೇ. ತಾನೊಬ್ಬಳೇ ಈ ಮನೆಯಲ್ಲಿರಲು, ಅದೂ ಇಂತಹ ರಾತ್ರಿಯಲ್ಲಿ, ಎಷ್ಟೊಂದು ಹೆದರುತ್ತೇನೆಂದವಳಿಗೆ ಗೊತ್ತಿಲ್ಲವೇ? ಈ ಸಂತೈಕೆ ಸಮಾಧಾನ ತರುವ ಬದಲು ಇನ್ನಷ್ಟು ಹೆದರಲು ಹಚ್ಚಿತು.

ಒಲೆಯಲ್ಲಿ ಸಂತತವಾಗಿ ಉರಿಯುತ್ತಿದ್ದ ಜ್ವಾಲೆಯ ಇದಿರಿಗೆ ಮೈ ಬಿಸಿಯಾಗುತ್ತಿದ್ದಂತೆಯೇ ಮನಸ್ಸನ್ನು ಹೊಕ್ಕ ಒಂದು ವಿಚಾರಕ್ಕೆ ಮೈ 'ಶಿರ್ರ್' ಎಂದು ಮುಳ್ಳಿಗೊಳಗಾಯಿತು. ಇಲ್ಲ, ಅಮ್ಮ ಈ ಮಳೆಯ ರಾತ್ರಿಯಲ್ಲಿ ಬಾರದಿದ್ದರೇನೇ ಒಳ್ಳೆಯದು. ಹನ್ನಳ್ಳಿ ಘಾಟಿಯ ನೆತ್ತಿಯಲ್ಲಿ ನಿಂತ ಆ ಕೆಂಪು ಮಣ್ಣಿನ ಗುಹೆಯನ್ನು ಅವಳೊಬ್ಬಳೇ ಹೇಗೆ ದಾಟಿಯಾಳು? ಮೊನ್ನೆ ಮೊನ್ನೆ ಸಾಂತಯ್ಯ ಬಾಪ್ಪಾ ಹಾಗೂ ಪುರುಷೋತ್ತಮ ರಾತ್ರಿಯ ಊಟದ ನಂತರ ಸೂಡಿ ಹೊತ್ತಿಸಿಕೊಂಡು ಸಾಣಿಕಟ್ಟೆಗೆ ಹೊರಟಿದ್ದರಂತೆ. ಘಾಟಿಯ ತುದಿಗೆ ಬಂದದ್ದೇ ಆ ಗುಹೆಯಿದ್ದ ಜಾಗದಲ್ಲಿ ಏನನ್ನೋ ಕಂಡಂತಾಗಿ ಹೆದರಿ ಹಾಗೇ ಹಿಂತಿರುಗಿದರಂತೆ... ರಾಮಕೃಷ್ಣ ಮಾಮ ಇಂತಹ ಮಳೆಯಲ್ಲಿ ಅಮ್ಮನನ್ನು ಒಬ್ಬಳನ್ನೇ ಹೋಗಲು ಬಿಡಲಿಕ್ಕಿಲ್ಲ. ಅಹಿಲ್ಯೆಯ ಭೀತಿ ಒಮ್ಮೆಲೇ ಹೆಚ್ಚಿತು. ಹೊರಗೆ ಗಾಳಿ ಮಳೆಗಳ ಜೋರೂ ಹೆಚ್ಚಿತ್ತು. ಕದಗಳೆಲ್ಲವನ್ನೂ ಮುಚ್ಚಿದ್ದರೂ ಎಲ್ಲಿಂದಲೋ ಗಾಳಿ ಒಳಗೆ ಬರುತ್ತಲೇ ಇತ್ತು. ಚಿಮಣೀ ದೀಪ ಆ ಗಾಳಿಗೆ ತಡೆಯುವಂತೆ ಕಾಣಲಿಲ್ಲ. ಅದನ್ನು ತಿರುಗಿ ಹಚ್ಚುವ ಪ್ರಯತ್ನ ಮಾಡದೇ, ಹೆದರುವ ಹೆಜ್ಜೆ ಇಡುತ್ತ ಒಳ ಜಗಲಿಗೆ ಬಂದು, ಅಲ್ಲಿ ತೂಗಹಾಕಿದ ಲಾಟನನೆತ್ತಿ, ದೇವರ ಕೋಣೆಯಲ್ಲಿ



ಹೇಗಾದರೂ ದೀಪವಿದೆ; ಜಗಲಿಯ ಮೇಲೆ ಕತ್ತಲಾದರೇನಂತೆ; ಇಂತಹ ಮಳೆಯ ರಾತ್ರಿ ಮನೆಗೆ ಯಾರು ಬರುತ್ತಾರೆ ಎಂದುಕೊಂಡವಳೇ ದುಡುದುಡು ಅಡಿಗೆಮನೆ ಸೇರಿದಳು.

ಸ್ಟೂಲಿನ ಮೇಲೆ ಜೋಪ್ರಗಣ್ಣಿನ ಕಂದೀಲು. ಒಲೆಯಲ್ಲಿ ಬೂದಿಯಡಿಗೆ ತಣ್ಣಗಾಗುತ್ತಿದ್ದ ಕೆಂಡಗಳು. ಮಾಡಿದ ಅಡಿಗೆಯನ್ನು ಬಟ್ಟಲಲ್ಲಿ ಬಡಿಸಿಕೊಂಡು ಉಣ್ಣುತ್ತಿದ್ದ ಹಾಗೆ ಆ ಕೆಂಪು ಮಣ್ಣಿನ ಗುಹೆಯ ನೆನಪು ಬೇಡವೆಂದರೂ ಮನಸ್ಸನ್ನು ಮುತ್ತಹತ್ತಿತು. ತನ್ನ ವಯಸ್ಸಿನ ವಳೇ ಹೆಂಗಸು. ಗೋಕರ್ಣದವಳು. ಮೂರು ಸಣ್ಣ ಸಣ್ಣ ಮಕ್ಕಳ ತಾಯಿ. ಮನೆಯ ಜಗಲಿಗೆ, ಒಲೆಗೆ ಮೆತ್ತುವ ಕೆಂಪು ಮಣ್ಣನ್ನು ತರಲೆಂದು ಆ ಗುಡ್ಡಕ್ಕೆ ಬಂದಿದ್ದಳು— ಆ ಗುಡ್ಡ ಅಂತಹ ಮಣ್ಣಿನ ಸಲುವಾಗಿ ಹೆಸರುಗೊಂಡಿತ್ತು. ಮಣ್ಣನ್ನು ಕೊರೆ ಕೊರೆದು ತೆಗೆಯುತ್ತ ಹೋದಂತೆ ದೊಡ್ಡ ಸುರಂಗವಾಗಿ ಮೂವತ್ತು ನಲುವತ್ತು ಅಡಿಗಳಷ್ಟು ದೂರ ಒಳಗೆ ಹೋಗಿತ್ತು. ಅವಳು ಗುಡ್ಡಕ್ಕೆ ಬಂದಾಗ ಒಳ್ಳೇ ಬಿಸಿಲಿನ ಹೊತ್ತು. ಬುಟ್ಟಿ, ಕತ್ತಿಗಳನ್ನು ಹಿಡಿದು ಒಬ್ಬಳೇ ಸುರಂಗವನ್ನು ಹೊಕ್ಕಳು. ಮಣ್ಣನ್ನು ಬಗೆಯುತ್ತಿದ್ದಂತೆ ಗುಡ್ಡದ ಮೇಲ್ಭಾಗ ಕೊಸರಿ ಇವಳು ಮಣ್ಣಿನ ಅಡಿಗೆ ಸಿಕ್ಕಳು. ಸಂಜೆಯಾದರೂ ಹೆಂಡತಿ ಹಿಂತಿರುಗದ್ದರಿಂದ ಹೆದರಿದ ಗಂಡ ಗುಡ್ಡಕ್ಕೆ ಬಂದು ನೋಡಿದಾಗ ಕಂಡ ದೃಶ್ಯದಿಂದ ಕಂಗಾಲಾದ. ಆಳುಗಳನ್ನು ಹಚ್ಚಿ ಕುಸಿದ ಮಣ್ಣಿನ ಗುಪ್ಪೆಯನ್ನು ಅಗೆಯಲು ಪೂರ್ತಿ ಒಂದು ದಿನ ಹಿಡಿಯಿತು. ಆ ಮೇಲೆ ಸಿಕ್ಕಿದ್ದು ಹೆಂಡತಿಯ ಹೆಣ! ಗುರುತು ಹಿಡಿಯುವುದು ಕಠಿಣವಾಗಿತ್ತಂತೆ......

ಬಂದ ನೆನಪಿನಿಂದ ಅಹಿಲ್ಯೆಯ ಊಟದ ರುಚಿ ಕೆಟ್ಟಿತು. ಬಾಯಿ ತೊಳೆಯಲು ಹೊರಗೆ ಹೋಗುವ ಧೈರ್ಯವಾಗದೇ, ಉಂಡ ಬಟ್ಟಲಲ್ಲೇ ಕೈ, ಬಾಯಿ ತೊಳೆದು, ಮುಸುರೆಯ ಕೆಲಸ ಮುಗಿಸಿ, ಲಾಟನನ್ನೆತ್ತಿ ಒಳಜಗಲಿಗೆ ಬಂದು, ಲಾಟನನ್ನು ಗೂಟಕ್ಕೆ ತೂಗು ಹಾಕಿ

ಕಟಾಂಜನಕ್ಕೆ ಬಂದಳು. ಕಟಾಂಜನದ ಸರಳುಗಳಿಗೆ ಹಣೆ ಆನಿಸಿ ಹೊರಗೆ ಹಣಿಕಿಕ್ಕಿ ನೋಡಿದಳು. ಏನೇನೂ ಕಾಣುತ್ತಿರಲಿಲ್ಲ. ಕತ್ತಲೋ ಕತ್ತಲು. ಮಳೆ ಒಂದೇ ಸಮನೆ ಕಣ್ಣು ಮುಚ್ಚಿ ಹೊಯ್ಯುತ್ತಿತ್ತು. ಸುತ್ತಲಿನ ಹಿತ್ತಲುಗಳಲ್ಲಿಯ ಗಿಡ-ಮರಗಳೆಲ್ಲ ತೊಯ್ದು ಸೋಽಽ ಎನ್ನುತ್ತಿ-ದ್ದುವು. ನೆಲದ ಮೇಲೆ ಹಳ್ಳಗಟ್ಟಿದ ನೀರು ಜುಳು ಜುಳು ಎನ್ನುತ್ತಿತ್ತು. ಮನೆಯ ಹಂಚುಗಳ ಮೇಲೆ, ಹತ್ತಿರದ ದನಗಳ ಕೊಟ್ಟಿ-ಗೆಯ ತಗಡು ಹೊದಿಸಿದ ಮಾಡಿನ ಮೇಲೂ ನೀರಿನ ವಿಚಿತ್ರ ಸದ್ದು. ಹಿತ್ತಿಲುಗಳಲ್ಲಿ, ಆಚೆಯ ಗದ್ದೆಗಳಲ್ಲಿ ಕತ್ತಲೆಗೇ ಬಾಯಿ ಬಿಡಿಸಿದ ಹಾಗೆ ಕಪ್ಪೆಗಳ ತೆರಪಿಲ್ಲದ ಒದರಾಟ. ಸಳ್ ಎಂದು ಮಿಂಚಿದ ಸಿಡಿಲಿನ ಧಾರೆಯೊಂದು ಆಕಾಶದಿಂದ ನೆಲದ ವರೆಗೂ ಕತ್ತಲೆಯನ್ನು ಕೊರೆಯಿತು. ಹೊರಗಿನ ನಿತ್ಯ ಪರಿಚಯದ ಸೃಷ್ಟಿಯ ಮೇಲೆ ಕ್ಷಣಕಾಲ ಬೆಳಕು ಚೆಲ್ಲಿತು. ಕಣ್ಣು ಮುಚ್ಚಿತು. ಅಂಗಳದಲ್ಲಿಯ ತುಳಸೀ ಕಟ್ಟೆ— ಅಂಗಳದಂಚಿನಲ್ಲಿ ನಿಂತ ಕಪ್ಪು ಹಲಸಿನ ಮರ–– ತೆಂಗಿನ ಮರಗಳು— ಹಿತ್ತಿಲ ಬೇಲಿ— ದಣಪೆ— ಓಹ್... ಅಹಿಲ್ಯೆ ಒಮ್ಮೆ-ಗೊಲೇ ಎರಡೂ ಕೈಗಳಿಂದ ಬಾಯಿ ಮುಚ್ಚಿ-ಕೊಂಡಳು. ಮಿಂಚಿನ ಹಿಂದೆಯೇ ಬರುವ ಗುಡುಗಿನ ಸದ್ದಿನಂತೆ ಬಂದಿತ್ತು— ಮಿಂಚು ಮರೆ-ಯಾಗುವ ಮೊದಲಷ್ಟೇ ಕಂಡದ್ದರ ನೆನಪು: ಮಳೆಯಲ್ಲಿ ತೊಯ್ಯುತ್ತ, ಇವಳ ಮನೆಯತ್ತಲೇ ನೋಡುತ್ತ ದಣಪೆಯ ಎದುರಿಗೇ ನಿಂತಿದ್ದ— ಒಬ್ಬ ಗಂಡಸು! ಥರಥರ ನಡುಗುತ್ತ ಓಡಿ ಹೋಗಿ ಅಹಿಲ್ಯೆ ದೇವರ ಕೋಣೆಯನ್ನು ಸೇರಿದ್ದಳು. ದೇವರ ಮೂರ್ತಿಯ ಮುಂದೆ ಕಣ್ಣು ಮುಚ್ಚಿ ಕೈ ಮುಗಿದು ಕುಳಿತಾಗ ಮೆಲ್ಲನೆ ಅರಿವು ಮೂಡ ಹತ್ತಿತ್ತು. ದಣಪೆಯಲ್ಲಿ ನಿಂತವನು ಜಡೆ ಗಡ್ಡ ಬೆಳೆಯಿಸಿದ ಬಾವಾಜಿ! ಗಾಳಿಯ ವೇಗ ತೀವ್ರ-ವಾಯಿತೇನೋ. ಜಗಲಿಯ ಮೇಲಿನ ಲಾಟನು ಜೋಕಾಲಿಯಂತೆ ಜೀಕಿ ಹಚ್ಚಿದ ಗೂಟದಿಂದ ತಪ್ಪಿಸಿಕೊಂಡು ನೆಲಕ್ಕೆ ಅಪ್ಪಳಿಸಿ ಫಳ್ ಎಂದು ಕಾಚು ಒಡೆದ ಸದ್ದು; ದೇವರ ಮುಂದಿನ ಎಣ್ಣೆ ತೀರುತ್ತ ಬಂದ ಸಮೆಯೊಳಗಿನ ದೀಪವೂ ಆರಿಹೋಯಿತು. ಮನೆ ತುಂಬ ತಿನ್ನಲು ಬಂದಂತಹ ಕತ್ತಲೆ. ಅಮ್ಮ ಇವತ್ತು ಗೋಕರ್ಣಕ್ಕೆ ಹೋಗಲೇಬಾರದಿತ್ತು ಎನ್ನಿ-ಸಿತು. ನಡುಗುತ್ತ, ಮೈ ನಡುಕವನ್ನು ತಡೆ-ಯಲಾಗದೇ ನೆಲಕ್ಕೆ ಮೈ ಚಾಚಿದಲ್ಲೇ ಅಹಿಲ್ಯೆ, ಮೈಯನ್ನೆಲ್ಲ ಕಿವಿಯಾಗಿಸಿ ಹೊರಗಿನ ಸದ್ದಿಗಾಗಿ ಕಾದಳು. ಹತ್ತು ನಿಮಿಷಗಳ ಮೇಲೆ ಅಂಗಳ-ದಲ್ಲಿ ಏನೋ ಖಣಕ್ ಎಂದಂತೆ ಸದ್ದು. ತುಸು ಹೊತ್ತಿನ ಮೇಲೆ ಜಗಲಿಯ ಮೆಟ್ಟಲುಗಳ ಮೇಲೇ ಹೆಜ್ಜೆಗಳ ಸದ್ದು. ಇನ್ನೂ ತುಸು ಹೊತ್ತಿನ ಮೇಲೆ ಜೈ ಸೀತಾರಾಮ್— ಬಾವಾಜಿಯ ಉದ್ಗಾರ!

ದೇವರ ಮೂರ್ತಿಯ ಮುಂದೆ ಒರಗಿದಲ್ಲೇ ಅಹಿಲ್ಯೆ ಭೀತಿಯಿಂದ ಕಲ್ಲಾಗಿದ್ದಳು.

೨

ಇತ್ತ, ಗೋಕರ್ಣದಲ್ಲಿ, ಮಳೆ ಹೋಳವಾಗುವುದನ್ನೇ ಕಾಯುತ್ತ ಕುಳಿತ ಅಮ್ಮನ ಮನಸ್ಸಿನ ಬೇಜಾರು ಕತ್ತಲಾಗುವ ಹೊತ್ತಿಗೆ ಅರ್ಥವಾಗದ ಕಳವಳಕ್ಕೆ ಎಡೆ ಮಾಡಿಕೊಟ್ಟಿತು. ಅಹಿಲ್ಯೆ ಹಾಗೇನು ಪುಕ್ಕಲು ಕೂಸೇ? ಮಳೆಯ ರಾತ್ರಿಯಾದರೇನಂತೆ, ಒಂದು ದಿನದ ಮಟ್ಟಿಗೆ ಅಮ್ಮನ ಹೊರತು ಇರಲಾರಳೇ? ಎಂದು ಅಣ್ಣ, ಅತ್ತಿಗೆ ಪುಸಲಾಯಿಸಿದಾಗ ಅನಿಸಿದ ಸಮಾಧಾನ, ಈಗ ದಟ್ಟವಾಗುತ್ತಿದ್ದ ಕತ್ತಲೆಯಿಂದಾಗಿ, ಗಳಿಗೆಯ ಪುರಸತ್ತಿಲ್ಲದೆ ಹೊಯ್ಯುತ್ತಿದ್ದ ಮಳೆಯಿಂದಾಗಿ ಮಸಕಾಗುತ್ತ ನಡೆದ, ಕೋಟಿತೀರ್ಥದ ದಂಡೆಯ ಮೇಲಿನ ಕೇರಿಗಳಲ್ಲಿ ಮಿಣುಕಹತ್ತಿದ್ದ ದೀಪಗಳನ್ನು ನೋಡುತ್ತಿದ್ದಂತೆ, ಭಟ್ಟರ ಮನೆಗಳ, ದೇವಸ್ಥಾನಗಳ ದಿನ ನಿತ್ಯದ ಸದ್ದುಗದ್ದಲವನ್ನೂ ಮುಳುಗಿಸಿ ಬಳ್ಳಗಳ ಹಾಗೆ ಹುಯ್ಯೋ ಎಂದು ಹುಯಿಲೆಬ್ಬಿಸಿದ ಗಾಳಿಯ ಕೂಗನ್ನು ಕೇಳುತ್ತಿದ್ದಂತೆ, ಮೆಲ್ಲನೆ ಕರಗ ಹತ್ತಿ, 'ಈವತ್ತು ಬಂದದ್ದೇ ತಪ್ಪಾಯಿತು. ಸಾಡೇಸಾತಿಯಂತೆ ಹತ್ತಿದ ಮಳೆ ಬಿಡಲೇಬಾರದೆಂದರೆ! ಮಗು ಪಾಪ ಎಷ್ಟೊಂದು ಹೆದರಿಕೊಂಡಿದೆಯೋ. ಇಲ್ಲ,...... ಬೆಳಗಾದದ್ದೇ ಒಂದು ಗಳಿಗೆ ಇಲ್ಲಿ ನಿಲ್ಲಲಾರೆ, ಎಂದುಕೊಂಡಳು.

ಕೆಲವೇ ಗಂಟೆಗಳ ಹಿಂದೆ ತನ್ನ ಭೀತಿಯನ್ನು

ಅರ್ಥಮಾಡಿಕೊಂಡು ತನ್ನನ್ನು ಪುಸಲಾಯಿಸಿದ ಅಣ್ಣನ ಮುಖಭಾವ ಕಣ್ಣ ಮುಂದೆ ನಿಂತಾಗ ಹುಟ್ಟಿದ ಹಿಂದಿನ ಎಷ್ಟೊಂದು ಸಂಗತಿಗಳ ನೆನಪಿನ ಜೊತೆಗೇ ತನ್ನ ಮನೆಯ ಮೇಲೆ ಎಂತಹದೋ ಶಾಪವಿರಬೇಕು ಎಂದು ಕೆಲವರು ಅನ್ನುತ್ತಿದ್ದರ ನೆನಪು ಮೂಡಿ ಕಳವಳಿಸಿದಳು.

ಗಂಡಸರು, ಹೆಂಗಸರು, ಮಕ್ಕಳು–ಮರಿಗಳಿಂದ ಒಮ್ಮೆ ಕಿಕ್ಕಿರಿದ ಮನೆಯಲ್ಲಿ ಈಗ ಉಳಿದವರು ಇಬ್ಬರು ಹೆಂಗಸರು ಮಾತ್ರ. ಐವತ್ತು ದಾಟಿದ ವಿಧವೆ ತಾನು, ಹಾಗೂ ಲಗ್ನವಾದ ಮೊದಲ ರಾತ್ರಿಯೇ ಗಂಡ ಬಿಟ್ಟುಹೋದ ತನ್ನ ಮೂವತ್ತರ ಪರೆಯದ ಮಗಳು. ಮನೆಯ ಎರಡು ತಲೆಮಾರುಗಳ ಹಿರಿಯರು ದುರ್ಮರಣಕ್ಕೆ ಗುರಿಯಾಗಿ ಸತ್ತವರೇ. ಅಹಿಲ್ಯೆಯ ದೊಡ್ಡಪ್ಪ ಒಂದು ಜಮೀನಿನ ತಂಟೆಯಲ್ಲಿ ಹೆಂಡತಿಯೊಡನೆ ಆದ ಮನಸ್ತಾಪದಿಂದ ಪ್ರಕ್ಷುಬ್ಧಗೊಂಡ ಮನಃಸ್ಥಿತಿಯಲ್ಲಿ ಇದೇ ಕೋಟಿತೀರ್ಥದಲ್ಲಲ್ಲವೇ ಜೀವ ತೆಗೆದುಕೊಂಡದ್ದು? ಅದು ನಡೆದು ಈಗ ಎಷ್ಟು—ಇಪ್ಪತ್ತು ವರುಷಗಳಾದರೂ ಸಂದಿರಬೇಕು. ಅಹಿಲ್ಯೆಯ ಅಜ್ಜ ಸತ್ತ ರೀತಿಯಂತೂ ಇನ್ನೂ ಭೀಕರವಾಗಿತ್ತಂತೆ. ಗೊತ್ತಿದ್ದ ಜನ ಈಗಲೂ ಅದರ ನೆನಪಿಗೆ ಹೆದರುತ್ತಾರೆ. ತನಗೆ ಒಪ್ಪಿಗೆ ಇಲ್ಲದ ಹುಡುಗಿಯೊಬ್ಬಳನ್ನು ತಮ್ಮನ ಮಗ ಮದುವೆಯಾಗಲು ಹೊರಟ ಎಂಬುದರಿಂದಲೇ ಕನಲಿ ಮದುವೆಯ ರಾತ್ರಿಯೇ ಮನೆಯಿಂದ ಬೇಪತ್ತೆಯಾದವರಂತೆ. ಮೂರು ದಿನಗಳ ಮೇಲೆ ಕರಡು ಹುಲ್ಲಿಗೆ ಹೋದ ಗೌಡರು ಮುರ್ಕುಂಡೀ ದೇವಸ್ಥಾನದ ಹಿಂದಿನ ಬೇಣದ ಮೇಲೆ ಹುಲ್ಲು ಕೊಯ್ಯುವಾಗ 'ದುರ್ನಾತ' ಬರುತ್ತದೆಯೆಂದು ಅತ್ತಿತ್ತ ನೋಡಿದಾಗ ನೇರಲ ಮರದ ಟೊಂಗೆಯಿಂದ ತೂಗುತ್ತಿದ್ದ ಹಗ್ಗದ ಉರುಲಿಗೆ ಕೊರಳು ಸಿಕ್ಕ ಹೆಣ ಆಗಲೇ ಅರ್ಧ ರಣಹದ್ದುಗಳ ಪಾಲಾಗಿತ್ತಂತೆ!

ಒಂದು ಕಾಲಕ್ಕೆ ಹೊರೆಗಟ್ಟಲೆ ಹೂವು ಅರಳುತ್ತಿದ್ದ, ಹಸಿರು ಗಿಜಿಗಿಜಿಸುತ್ತಿದ್ದ ಹಿತ್ತಿಲಲ್ಲಿ ಈಗ ಜೀವ ಹಿಡಿದು ನಿಂತವುಗಳು ನಾಲ್ಕಾರು ತೆಂಗುಗಳು; ಒಂದೆರಡು ಮಾವಿನ ಮರಗಳು; ಅಂಗಳದಲ್ಲಿಯ ಹಲಸಿನ ಮರ. ಮರಗಳ ಮೈ ಬುಡಗಳಿಗೆಲ್ಲ ಒರಲೆ; ನೆಲಕ್ಕೆ, ಹಿತ್ತಿಲ ಬಾವಿಗೆ ಕೂಡ. ಆಳೆತ್ತರ ಬೆಳೆದು ಹಸಿರಿನಿಂದ ಸೊಕ್ಕಿದ ಬೇಲಿಯಲ್ಲಿ ಈಗ ಬರೀ ಮುಳ್ಳಿನ ಜಗ್ಗುಗಳು. ಅವುಗಳಿಗೂ ಒರಲೆ...ಅಣ್ಣನಿಗೆ ಆಗ ಈ ಒರಲೆಯ ಸಮಾಚಾರ ಹೇಳಹೇಳುತ್ತಿರುವಾಗ ಅವಳಿಂದ ಕಣ್ಣೀರು ತಡೆಯುವುದಾಗಲಿಲ್ಲ...

ಅವಳು ಗೋಕರ್ಣಕ್ಕೆ ಬಂದದ್ದು, ನಿಜವಾಗಿ ನೋಡಿದರೆ, ಅಣ್ಣನಿಗೆ ಅಂಕೋಲೆಯಿಂದ ಬಂದ ಸುದ್ದಿ ತಿಳಿಸಲು. ಅಣ್ಣನಿಗೂ ಆ ಸುದ್ದಿ ಈ ಮೊದಲೇ ಮುಟ್ಟಿತ್ತು— ಅಹಿಲ್ಯೆಯನ್ನು ಮದುವೆಯಾಗಿದ್ದವನು ಈಗ ಸಂನ್ಯಾಸಿಯಾಗಿ, ಗಡ್ಡ ಜಡೆ ಬೆಳೆಯಿಸಿ, ಕಾವಿ ಬಟ್ಟೆ ತೊಟ್ಟು ಊರೂರು ಅಲೆಯುತ್ತಿದ್ದಾನಂತೆ. ಕಾಶಿಯಲ್ಲಿಯೋ ಬದರಿಯಲ್ಲಿಯೋ ಇದ್ದವನು ಈಗ ಅಂಕೋಲೆಯ ಹತ್ತಿರವೇ ಯಾವುದೋ ಹಳ್ಳಿಗೆ ಬಂದಿದ್ದಾನಂತೆ. ಈ ಸುದ್ದಿ ತಿಳಿದಂದಿನಿಂದ ಅಹಿಲ್ಯೆ ಒಂದು ನಮೂನೆಯಾಗಿದ್ದಾಳೆ. ಎಂತಹ ಬಂಗಾರದಂತಹ ಹುಡುಗಿ! ಮುಖ್ಯ ತಪ್ಪು ನಾವು ಹಿರಿಯರೇ ಮಾಡಿದ್ದು. ಎಲ್ಲ ಗೊತ್ತಿದ್ದೂ ಗೊತ್ತಿದ್ದೂ ಅವಳನ್ನು ಈ ಸುಡುಗಾಡುಸಿದ್ಧನ ಕೊರಳಿಗೆ...ಅವಳ ಮನಸ್ಸಿಗೆ ತುಂಬ ತುಂಬ ಬೇಸರವಾಯಿತು. ಸುಡುಗಾಡುಸಿದ್ಧನೆಂದು ಇದೀಗ ಬೈಸಿಕೊಂಡವನು ದೂರದವನೇ? ತನ್ನ ಸೋದರತ್ತೆಯ ಒಬ್ಬನೇ ಒಬ್ಬ ಮಗ. ಅಂಕೋಲೆಯ ಶೇಷ ಪೈಗಳ ಪರಿಚಯ ಯಾರಿಗಿಲ್ಲ? ಹನುಮಟ್ಟೆಯ ಅವರ ರಾಜವಾಡೆಯಂತಹ ಮನೆಯಲ್ಲಿ ಎಷ್ಟೊಂದು ಜನ ನಿಂತು, ಉಂಡು ಹೋದವರಿಲ್ಲ! ಪಿತ್ರಾರ್ಜಿತ ಆಸ್ತಿಯ ಮೇಲೇ ಮುಂದಿನ ಎರಡು ಪೀಳಿಗೆಗಳು ಸುಖವಾಗಿ ಕೂತು ಉಂಡು ಉಟ್ಟು ಇರಬಹುದಾಗಿತ್ತು. ಹೀಗಿರುವಾಗ ಒಂದು ದಿನ, ಮಗ ವಯಸ್ಸಿನ ಇಪ್ಪತ್ತು ವರ್ಷಕ್ಕೇ ಇದ್ದಕ್ಕಿದ್ದ ಹಾಗೆ ಮನೆಯಿಂದ ಓಡಿಹೋದ ಸುದ್ದಿ. ಏನಾಯಿತೋ ಯಾಕಾಯಿತೋ ಯಾರಿಗೂ ಸರಿಯಾಗಿ ತಿಳಿಯಲಿಲ್ಲ. ಧಾರವಾಡದ ಕಾಲೇಜಿನಲ್ಲಿ ಓದುತ್ತಿದ್ದ ಹುಡುಗ. ದೀಪಾವಳಿಯ ರಜೆಯೆಂದು ಊರಿಗೆ ಬಂದಾಗ ಗೆಳೆಯರೊಡಗೆ ನಗುತ್ತ ಓಡಾಡುತ್ತ ಇದ್ದವನು ಒಂದು ದಿನ ಬೆಳಿಗ್ಗೆ ಮನೆಯವರಿಗೆಲ್ಲ

ಎಚ್ಚರಾಗುವ ಹೊತ್ತಿಗೆ ಹಾಸಿಗೆಯಲ್ಲಿರಲಿಲ್ಲ ಎನ್ನುವುದಷ್ಟು ಗೊತ್ತು. ದಿನ ಉರುಳಿದವು. ತಿಂಗಳು ಸರಿದವು. ವರ್ಷ ಕೂಡ ಕಳೆಯಿತು. ಎಲ್ಲೂ ಪತ್ತೆಯಾಗಲಿಲ್ಲ. ಎರಡು ವರ್ಷಗಳ ನಂತರ ಯಾತ್ರೆಗೆ ಹೋದ ಜನ ಇವನನ್ನು ಕಾಶಿಯಲ್ಲೆಲ್ಲೋ ನೋಡಿದಂತಾಗಿತ್ತು ಎಂದು ತಿಳಿಸಿದ ಸುದ್ದಿಯಿಂದಲೇ ಆಸೆ ಚಿಗುರಿ ಜನ ಕಳಿಸಿ ಕಾಶಿ, ಹರಿದ್ವಾರಗಳಲ್ಲಿ, ಬದರಿಯಲ್ಲಿ ಕೂಡ ಹುಡುಕಿಸಿದ್ದಾಯಿತು. ಇಲ್ಲ. ಎಲ್ಲೂ ತಿರುಗಿ ದೃಷ್ಟಿಗೆ ಬೀಳಲಿಲ್ಲ. ಮಗ ಹಿಂತಿರುಗುವ ಆಸೆ ಬಿಟ್ಟು ಕುಳಿತಾಗ ತಿರುಗಿ ಅವನ ಭೆಟ್ಟಿಯಾದದ್ದು ಹತ್ತು ವರ್ಷಗಳ ನಂತರವೇ. ಜುಮುಜುಮು ನಸುಕಿನಲ್ಲೇ ಒಂದು ದಿನ ಮನೆಯ ಕದ ತಟ್ಟಿ ಅಮ್ಮಾ ಎಂದು ಕರೆದಂತೆ ಕೇಳಿಸಿದಾಗ, ತಾಯಿ ದಡಬಡಿಸಿ ಎದ್ದು ಓಡೋಡಿ ಬಂದು ಕದ ತೆರೆದಾಗ ಕಣ್ಣ ಮುಂದೆ ಶುಭ್ರ ಬಟ್ಟೆ ತೊಟ್ಟು, ಉದ್ದ ಕೂದಲು, ಗಡ್ಡ ಬೆಳೆಯಿಸಿದ ಬೆಳೆದ ಮಗ! ಇಷ್ಟು ದೀರ್ಘಕಾಲ ಎಲ್ಲಿ ಇದ್ದ, ಏನು ಮಾಡುತ್ತಿದ್ದ ಕೊನೆಗೂ ಒಬ್ಬರಿಗೂ ತಿಳಿಸಲಿಲ್ಲ. ಮಗ ಹಿಂತಿರುಗಿದನೆಂಬುದರಿಂದಲೇ ಪುಲಕಿತರಾದ ತಂದೆ–ತಾಯಿಗಳೂ ಆ ವಿಷಯದಲ್ಲಿ ಹೆಚ್ಚು ಮಾತನಾಡಲು ಹೋಗಲಿಲ್ಲ. ಉಳಿದವರಿಂದಲೂ ಆಡಿಸಲಿಲ್ಲ. ಗಡ್ಡ, ತಲೆಯ ಕೂದಲು ನೋಡಿ ಯಾವುದಾದರೂ ಆಶ್ರಮ ಸೇರಿದ್ದನೇನೋ ಎಂದು ಎಲ್ಲರಿಗೂ ಬಲವಾದ ಅನುಮಾನ. ಅವನನ್ನು ಸಂಪೂರ್ಣವಾಗಿ ಸಂಸಾರದತ್ತ ಒಲಿಸಲು ಮದುವೆ ಸರಿಯಾದ ಉಪಾಯವೇನೋ ಎಂದ ಊರ ಹಿರಿಯರ ಹಿತವಚನ ಕೇಳಿ ತಾಯಿ ಮದುವೆಯ ಮಾತೆತ್ತಿದ್ದಾಗ ಅವನು ಸಿಟ್ಟಿಗೆದ್ದ ರೀತಿ ನೋಡಿಯೇ ತಿರುಗೆಲ್ಲಿ ಮನೆ ಬಿಟ್ಟು ಓಡಿಹೋದಾನೋ ಎಂದು ಹೆದರಿ ಕಂಗಾಲಾದ ತಂದೆ–ತಾಯಿಗಳು ತಿರುಗಿ ಆ ವಿಷಯದಲ್ಲಿ ಪಿಟ್ಟೆನ್ನಲಿಲ್ಲ.

ಹೀಗಿರುವಾಗಲೇ ಒಂದು ದಿನ ಬಂಡೀ ಹಬ್ಬಕ್ಕೆಂದು ಅಹಿಲ್ಯೆಯೊಂದಿಗೆ ತಾನು ಅಂಕೋಲೆಗೆ ಹೋದಾಗ ಸೋದರತ್ತೆಯ ಮನೆಗೂ ಹೋದದ್ದು. ಆಗಲೇ ಅಹಿಲ್ಯೆ ಅವನ ಕಣ್ಣಿಗೆ ಬಿದ್ದದ್ದು. ಆಗ ಅಹಿಲ್ಯೆಗೆ ಬರೇ ಹದಿನೇಳು ವರ್ಷ ಪ್ರಾಯ. ಎಂತಹ ರೂಪ ಪೋರಿಯದು! ಅವನು ಈ ಮೊದಲು ನೋಡಿದಾಗ ಅವಳಿನ್ನೂ ಆರೇಳು ವರ್ಷಗಳ ಕಿರುಗಣೆ ಉಡುತ್ತಿದ್ದ ಮಗು. ನಾವು ಹೋದ ಮೇಲೆ ತಾಯಿ ಹತ್ತಿರ ತನ್ನ ಮನಸ್ಸನ್ನು ಬಿಚ್ಚಿದನಂತೆ. ಅಹಿಲ್ಯೆ ತನ್ನನ್ನು ಮದುವೆಯಾಗಲು ಒಪ್ಪಿದರೆ ತಾನು ಮದುವೆಗೆ ಸಿದ್ಧನೆಂದನಂತೆ. ತಂದೆ-ತಾಯಿಗಳಿಗೆ ಆನಂದದ ಜೊತೆಗೇ ಅನುಮಾನ, ಆತಂಕ. ಮಗನ ಇತಿಹಾಸ ಗೊತ್ತಿದ್ದೂ-ಗೊತ್ತಿದ್ದೂ ಅಹಿಲ್ಯೆಯಂತಹ ಸುಂದರ ಹುಡುಗಿ ಮದುವೆಗೆ ಒಪ್ಪಿಯಾಳೆ? ಇಬ್ಬರ ವಯಸ್ಸಿನಲ್ಲೂ ತುಂಬ ಅಂತರವಿದೆ ಮೇಲಾಗಿ. ಅಳುಕುತ್ತಲೇ ಸೋದರತ್ತೆ ಹನೇಹಳ್ಳಿಗೆ ಬಂದಿದ್ದಳು ತನ್ನನ್ನು ಮಾತನಾಡಿಸಲು. ತನಗೂ ಭಯ, ಕೂಡಲೇ ಒಪ್ಪಲು. ಆದರೂ ತಂದೆಯಿಲ್ಲದ ಹುಡುಗಿ. ಹುಡುಗ ಉಳಿದೆಲ್ಲ ದೃಷ್ಟಿಯಿಂದ ಒಳ್ಳೆಯವ. ಇಬ್ಬರೂ ಕೂಡಿ ಅದೇ ದಿನ ಅಣ್ಣನ ಮನೆಗೆ ಬಂದಿದ್ದೆವು. ಇದೇ ಜಗಲಿಯ ಮೇಲೆ ಅಣ್ಣನ ಸಲಹೆ ಕೇಳಿದ್ದೆವು. ಅಣ್ಣನ ಮನಸ್ಸಿನಲ್ಲೂ ಗೊಂದಲ: ಇದೆಲ್ಲ ದೈವದಾಟ. ನಾವೇನು ಮಾಡಬಲ್ಲೆವು? ಅಹಿಲ್ಯೆಯನ್ನೇ ಏಕೆ ಕೇಳಿ ನೋಡಬಾರದು? ಎಂದ. ಆಶ್ಚರ್ಯದ ಮಾತೆಂದರೆ ಅಹಿಲ್ಯೆ ಯಾವ ಆತಂಕವಿಲ್ಲದೇ ಒಪ್ಪಿಕೊಂಡದ್ದು. ಹುಡುಗಿ ಕೂಡ ತಾನಾಗಿಯೇ ಹುಡುಗನನ್ನು ಮೆಚ್ಚಿಕೊಂಡಿತ್ತು. ಇಲ್ಲ, ಆಗ ತಾವೇ ಹಾಗೆ ಬಗೆದೆವೋ. ಅಂತೂ ಮುಂದೆ ಆಗುವುದೆಲ್ಲವೂ ಆಯಿತು. ಮುಂದಿನ ಕೆಲ ತಿಂಗಳಲ್ಲೇ ಹಿರಿಯರು ನಿಶ್ಚಯಿಸಿದ ಮುಹೂರ್ತಕ್ಕೆ ಹನುಮಟ್ಟೆಯಲ್ಲೇ ಮದುವೆ ಮಾಡಿದ್ದಾಯಿತು. ಮೊದಲ ರಾತ್ರಿಯೇ ಹುಡುಗ ಸೆಜ್ಜೆಮನೆಯಿಂದ ಓಡಿಹೋದದ್ದೂ ಆಯಿತು—ಬಂದ ನೆನಪಿನಿಂದ ಅಮ್ಮನ ಕಣ್ಣುಗಳು ತಿರುಗಿ ತುಂಬಹತ್ತಿದವು. ಎಂತಹ ಮುತ್ತಿನಂತಹ ಹುಡುಗಿ. ಅವಳ ಯಾವ ತಪ್ಪಿಗೆಂದು ಇಂತಹ ಸಣ್ಣ ವಯಸ್ಸಿನಲ್ಲಿ ಈ ಶಿಕ್ಷೆ? ಅವನು ಓಡಿಹೋಗಿ ಈಗ ಎಷ್ಟು, ಹದಿಮೂರು ವರುಷಗಳೇ ಸಂದಿರಬೇಕು. ಈಗ ಒಮ್ಮಿಗೆಲೇ ಈ ಸುದ್ದಿ. ಸಂನ್ಯಾಸಿಯಾದವನು ತಿರುಗಿ ಯಾಕೆ

ಇತ್ತ ಬಂದನೋ. ಮಗು ಒಂದು ನಮೂನೆಯಾಗಿದ್ದಾಳಲ್ಲ. ಪಾಪ ಇಂದಿನ ರಾತ್ರಿ ಹೇಗೆ ಕಳೆಯುತ್ತಾಳೋ. ನನಗೆ ಯಾಕಾದರೂ ಇಂದೇ ಇಲ್ಲಿ ಬರುವ ಮನಸ್ಸಾಯಿತೋ...

ಮನೆಯವರೆಲ್ಲ ಆಗಲೇ ಗಾಢ ನಿದ್ದೆ ಸೇರಿದ್ದರು. ರಾತ್ರೆ ಎಷ್ಟಾಯಿತೋ ಅಮ್ಮನಿಗೆ ಗೊತ್ತಾಗಲೇ ಇಲ್ಲ. ದಣಿದ ಅವಳ ಮನಸ್ಸೂ ನಿದ್ದೆಯ ಆಸರೆ ಬಯಸಿ ಕಣ್ಣು ಬಾಡುತ್ತಿರುವಾಗ ಹಠಾತ್ತನೆ ಒಂದು ದೂರದ ನೆನಪು: ಅಂದೂ ಹೀಗೆ: ಮುಸಲ ಧಾರೆಯ ಮಳೆ. ಆಗಲೂ ಕೂಡ ಅಪಿಲ್ಯ ಅಂದಿನ ಮಳೆಯ ರಾತ್ರಿಯನ್ನು ಮನೆಯಲ್ಲಿ ಒಬ್ಬಂಟಿಗಳಾಗಿ ಕಳೆದಿದ್ದಳು. ಅಂದು, ಬೆಳಿಗ್ಗೆ ಎದ್ದದ್ದೇ ಗಂಗಾವಳಿಯಿಂದ ತಂಗಿಯ ಮನೆಯಿಂದ ಕರೆ. ಮೊದಲ ಹೆರಿಗೆಗೆಂದು ತವರಿಗೆ ಬಂದ ಅವಳ ಮಗಳು, ಮುನ್ನಾದಿನ ರಾತ್ರಿಯೇ ನೋವು ಸುರುವಾಗಿದ್ದು ಬೆಳಗಾದರೂ ಬಿಡುಗಡೆಯಾಗದೇ ಇರುವಾಗ ಅಬಚಿಯನ್ನು ನೆನೆದಳಂತೆ. ಸಂಜೆಯೊಳಗಾಗಿ ಹಿಂತಿರುಗಿ ಬರುತ್ತೇನೆಂದು ಹೊರಟವಳಿಗೆ, ರಾತ್ರೆಯಾದರೂ ಹೆರಿಗೆಯಾಗದೇ ಅಲ್ಲೇ ನಿಲ್ಲಬೇಕಾಗಿ ಬಂದ ಪ್ರಸಂಗ. ಸಂಜೆಯಿಂದಲೂ ಮಳೆ ಮೇಲಾಗಿ. ರಾತ್ರೆ ಇಲ್ಲೇ ಕಳೆಯುವಿಯಂತೆ ಅಕ್ಕ. ಬೆಳಗಾದದ್ದೇ ಹೋಗು. ಬೇಕಾದರೆ ಕಾಣೀಗೌಡನನ್ನು ಕಳಿಸೋಣ. ಅಪಿಲ್ಯಗೆ ಹೆದರಿಕೆ ಆಗುತ್ತಿದ್ದರೆ ಒಂದು ರಾತ್ರಿಯ ಮಟ್ಟಿಗೆ ನಿಮ್ಮ ಜಗಲಿಯ ಮೇಲೆ ಮಲಗಿಯಾನು. ಪೋರಿ ತನಗೆ ಹೆದರಿಕೆ ಇಲ್ಲ ಎಂದದ್ದಕ್ಕೆ ಗೌಡ ಬರೀ ಸುದ್ದಿ ಮುಟ್ಟಿಸಿ ತನ್ನ ಮನೆಗೆ ಹೋಗಿದ್ದ.

ಈ ನೆನಪಿನ ಹಿಂದೆಯೇ ಬಂದ ಇನ್ನೊಂದು ನೆನಪಿಗೆ ಮಾತ್ರ ಅಮ್ಮನ ಮೋರೆಯ ಮೇಲೆ ಹೊದಿಕೆಯ ಮುಸುಕಿನಲ್ಲೂ ಮುಗುಳು ನಗು ಮೂಡಿತು: ನವರಾತ್ರಿಯ ದಿನಗಳವು. ಊರ ಮಠದಲ್ಲಿ ದಿನವೂ ಕೀರ್ತನೆ. ಕಾರ್ಕಳದಿಂದ ಪ್ರಖ್ಯಾತ ಕೀರ್ತನಕಾರರೊಬ್ಬರನ್ನು ಕರೆಯಿಸಲಾಗಿತ್ತು. ಅವರು ನಮ್ಮ ಹಳ್ಳಿಯನ್ನು ತಲುಪಿದ್ದು ಇದೇ ಮಳೆ ಬಿದ್ದ ರಾತ್ರಿ. ನಮ್ಮ ಹಳ್ಳಿಯವರೇ ಕೆಲ ಜನ ಅವರನ್ನು ಗುರುತಿಸಿ ಮಠಕ್ಕೆ ಹೋಗುವ ದಾರಿ ತೋರಿಸಿಕೊಟ್ಟಿದ್ದರಂತೆ. ಮಳೆಯಲ್ಲಿ ದಾರಿ ತಪ್ಪಿದವರು ಆ ದಿನ ರಾತ್ರಿ ಮಠವನ್ನು ಮುಟ್ಟಲೇ ಇಲ್ಲ. ಮರುದಿನವೂ ಇಲ್ಲ. ಆಮೇಲೆ ಊರಲ್ಲೆಲ್ಲ ಗುಲ್ಲು: ಕೀರ್ತನಕಾರರು ಎಳೆ ಪ್ರಾಯದವರಂತೆ. ಕಾಣಲು ಚಂದವಂತೆ. ಕತ್ತಲೆ, ಮಳೆಗಳಿಂದಾಗಿ ಮಠವನ್ನು ತಲುಪದೇ ಯಾರಲ್ಲೋ ತಂಗಿದಲ್ಲೇ 'ಪಸೋ' ಆಗಿ ಬೆಳಗಾಗುವ ಮೊದಲೇ ಹಳ್ಳಿಯಿಂದ ಕಾಲು ಕಿತ್ತರಂತೆ. ಇಂತಹದರಲ್ಲೆಲ್ಲ ನಮ್ಮವರ ತಲೆ ಸೂಕ್ಷ್ಮವಲ್ಲವೆ! ಯಾರಲ್ಲಿ ತಂಗಿದ್ದರೆನ್ನುವುದು ಮಾತ್ರ ಯಾರಿಗೂ ಗೊತ್ತಾಗಲೇ ಇಲ್ಲ...

ಗಾಢ ನಿದ್ದೆ ಸೇರಿದ ಅಮ್ಮ ದುಃಸ್ವಪ್ನ ಕಂಡು ಎಚ್ಚತ್ತವಳ ಹಾಗೆ ದಡಬಡಿಸಿ ಹಾಸಿಗೆಯಲ್ಲಿ ಎದ್ದು ಕುಳಿತು ಕಣ್ತೆರೆದಾಗ ಮಳೆ ಇನ್ನೂ ಹೊಯ್ಯುತ್ತಲೇ ಇತ್ತು. ಆ ಘಟನೆ ನಡೆದು ಈಗ ನಾಲ್ಕು ದಶಕಗಳ ಮೇಲೇ ಆದರೂ ಈ ವರೆಗೂ ಬಂದಿರದ ದುಷ್ಟ ಸಂಶಯವೊಂದು ಹಠಾತ್ತನೆ ಮನಸ್ಸನ್ನು ಹೊಕ್ಕು ವಿಹ್ವಲಗೊಂಡಳು: ಅಂದು ಪರಾರಿಯಾದ ಕೀರ್ತನಕಾರ ತಂಗಿದ್ದು ತನ್ನ ಮನೆಯಲ್ಲಲ್ಲ ತಾನೆ!

ಅಮ್ಮ ತಿರುಗಿ ಸರಿಯಾಗಿ ನಿದ್ದೆ ಬರದೇ ಬೆಳಗಾಗುವುದನ್ನೇ ಕಾಯುತ್ತಿದ್ದಳು.

೩

ನಡುರಾತ್ರಿಯಲ್ಲಿ ಛಡಕ್ಕನೆ ಎಚ್ಚರಗೊಂಡು ಕಣ್ತೆರೆದಾಗ ತಾನು ಹೀಗೆ ಕತ್ತಲಲ್ಲಿ ಬರಿ ನೆಲದ ಮೇಲೆ ಹೇಗೆ ಮಲಗಿದ್ದೇನೆ ಎನ್ನುವುದನ್ನು ಕಕ್ಕಾವಿಕ್ಕಿಯಾಗಿ ನೆನೆಯುತ್ತಿದ್ದಾಗ ಸದ್ದು ಆಲಿಸಿದಳು. ಕೇಳಿಸಿದ್ದು ಸುಳ್ಳಲ್ಲ. ಇನ್ನೂ ಕೇಳಿಸುತ್ತ ಇದೆ, ಹೆಚ್ಚು ಹೆಚ್ಚು ಸ್ಪಷ್ಟವಾಗಿ: ಅಡಿಗೆಮನೆಯ ಹಿತ್ತಲ ಬದಿಯ ಕದದ ಮೇಲೆ ನಾಯಿ ಕಾಲುಗುರಿನಿಂದ ಕೆದರಿದ ಸದ್ದು. ಅದೇ! ತನ್ನ ಕನಸುಗಳಲ್ಲಿ ಧುತ್ ಎಂದು ಪ್ರಕಟವಾಗಿ ತನ್ನನ್ನು ಹೆದರಿಸುತ್ತಿದ್ದ ಆ ಕಪ್ಪು ಕಪ್ಪು... ಮಳೆ, ಬರಿ ನೆಲಗಳ ತಂಪಿನಲ್ಲೂ ತನ್ನ ಮೈ ಬೆವರೊಡೆಯುತ್ತಿದ್ದ ಭಾಸವಾಗಿ ಇನ್ನಷ್ಟು ಹೆದರಿದಳು ಅಪಿಲ್ಯ. ಹಾಗೆ ಕೆದರುತ್ತಿದ್ದ ನಾಯಿ ತುಂಬ ತುಂಬ ಕಪ್ಪು ಇರಬೇಕು, ತನ್ನ ಮೇಲೆ

ತುಂಬ ತುಂಬ ಸಿಟ್ಟುಗೊಂಡಿರಬೇಕು ಎಂದು ಕಾರಣವಿಲ್ಲದೇ ಅನ್ನಿಸಿ ನೆಲವನ್ನು ಗಟ್ಟಿಯಾಗಿ ಅದುಮಿದಳು. ತನ್ನ ಬದುಕಿನಲ್ಲಾದ ಎರಡೂ ಅನಾಹುತಗಳ ಸಂದರ್ಭದಲ್ಲಿ ಈ ಕಪ್ಪು ನಾಯಿ ತನ್ನ ಕನಸುಗಳಲ್ಲಿ ಬಂದು ತನ್ನನ್ನು ಹೆದರಿಸಿತ್ತು. ಎರಡೂ ಸಲ ಕಂಡ ಕನಸುಗಳ ಸನ್ನಿವೇಶ ಒಂದೇ: ಹಿತ್ತಿಲ ಬಾವಿಯ ಬಳಿಯಲ್ಲಿಯ ಕಲ್ಲು ಮರಗಿಯಲ್ಲಿ ತಾನು ಒಗೆಯುವ ಅರಿವೆಗಳನ್ನು ನೆನೆಯುತ್ತಿದ್ದಾಗ ಹಿತ್ತಿಲ ಬೇಲಿಯ ಕಂಡಿಯೊಳಗಿಂದ ಕಪ್ಪು ನಾಯಿಯೊಂದು ಒಳಗೆ ಬಂದು, ನೆಲವನ್ನು ಮೂಸುತ್ತ ಮೂಸುತ್ತ ನೇರವಾಗಿ ತನ್ನ ಹತ್ತಿರ ಬಂದಷ್ಟೇ ತಡೆದು, ಮುಖವನ್ನೆತ್ತಿ ತನ್ನ ಕಣ್ಣುಗಳಲ್ಲೇ ಸಿಟ್ಟಿನಿಂದ ನೋಡುತ್ತ ಗುರುಗುಟ್ಟುತ್ತಿದೆ. ಕಿಟಾರನೆ ಚೀರಿದ್ದೇ ತನಗೆ ಎಚ್ಚರ. ಮೊಟ್ಟಮೊದಲ ಸಲ ಕನಸು ಕಂಡ ಕೆಲದಿನಗಳಲ್ಲೇ ಅವಳ ಲಗ್ನವಾದದ್ದು. ಎರಡನೆಯ ಸರತಿ ಕನಸು ಬಿದ್ದ ಮರುದಿವಸ, ಸರಿಯಾಗಿ ನೆನಪಿದೆ— ಹೀಗೇ ಮಳೆ ಬಿದ್ದಿತ್ತು. ಆ ದಿನ ರಾತ್ರಿ ಕೂಡ ಅಮ್ಮ ಹೀಗೇ ಮನೆಯಲ್ಲಿ ಇದ್ದಿರಲಿಲ್ಲ. ಗಂಗಾವಳಿಗೆ ಹೋಗಿದ್ದಳು ಅಬಚಿಯ ಮನೆಗೆ. ಅಮ್ಮ ಮಳೆಯಿಂದಾಗಿ ಅಲ್ಲೇ ತಡೆದಳೇನೋ ಎಂದು ಅನುಮಾನಪಡುತ್ತ ಹಾದಿ ಕಾದು ಹಸಿವಾದ್ದರಿಂದ ತನ್ನ ಊಟ ಮುಗಿಸಿ ಒಳಜಗಲಿಗೆ ಬಂದು ಅಮ್ಮನ ಹಾದಿ ಕಾಯುತ್ತ ಕುಳಿತಿದ್ದಳು. ಅದಾಗ ಯಾರೋ ಕದ ತಟ್ಟಿದ್ದು ಕೇಳಿಸಿ ಅಮ್ಮನೇ ಎಂದು ತಿಳಿದು ಕದ ತೆರೆದರೆ ಉದ್ದ ಕೂದಲು ಬೆಳೆಸಿದ, ಕೈಯಲ್ಲೊಂದು ಸಣ್ಣ ಟ್ರಂಕನ್ನು ಹಿಡಿದ ತರುಣನೊಬ್ಬ, ಮಳೆಯಲ್ಲಿ ಸಂಪೂರ್ಣವಾಗಿ ತೊಯ್ದು ಚಳಿಯಿಂದ ನಡುಗುತ್ತ, 'ನಾನು ಇಲ್ಲಿಯ ಮಠದಲ್ಲಿ ಕೀರ್ತನೆಗಾಗಿ ಬಂದ ಕೀರ್ತನಕಾರ. ಮಳೆಯಲ್ಲಿ ದಾರಿ ತಪ್ಪಿ ಇಲ್ಲಿ ಬಂದಿದ್ದೇನೆ. ನಿಮಗೆ ತೊಂದರೆ ಆಗದಿದ್ದರೆ ಒಂದು ರಾತ್ರಿಯನ್ನು ಇಲ್ಲಿ ಕಳೆಯಬಹುದು ಎಂದುಕೊಂಡಿದ್ದೆ. ಒಳಗೆ ಬರಲೇ ?' ಎಂದ. ಅವನ ಪ್ರಶ್ನೆಯಲ್ಲಿಯ ಮುಗ್ಧ ಸಹಜತೆಯ ಪ್ರಭಾವದಿಂದಲೋ, ಹೇಗಾದರೂ ಇನ್ನು ಕೆಲ ಹೊತ್ತಿನಲ್ಲಿ ಅಮ್ಮ ಬಂದೇ ಬರುತ್ತಾಳಲ್ಲ ಎಂದು ಆ ಕ್ಷಣದ ಮಟ್ಟಿಗೆ ಅನ್ನಿಸಿದ ಭರವಸೆಯಿಂದಲೋ ಅವನನ್ನು ಒಳಗೆ ಬಿಟ್ಟು ಕದ ಮುಚ್ಚಿಕೊಂಡಿದ್ದಳು. ಲಾಟನು ಕೊಟ್ಟು, ಮಾಳಿಗೆಯ ಮೇಲೆ ಹೋಗಿ ಬಟ್ಟೆ ಬದಲಿಸಿ ಬರಲು ಹೇಳಿ ಮೇಲೆ ಹೋಗುವ ದಾರಿ ತೋರಿಸಿಕೊಟ್ಟು ಒಳಗೆ ಹೋಗಿ ಕಾಚಿನ ಬುರುಡೆಯ ದೀಪವನ್ನು ಹಚ್ಚಿ, ತಿರುಗಿ ಜಗಲಿಗೆ ಬರುವ ಹೊತ್ತಿಗೆ ಚಿಕ್ಕಮ್ಮನೋರೇ ಎಂದು ಹೊರಜಗಲಿಯ ಮೇಲೆ ಕಾಣೇಗೌಡ ಹಾಜರು. ಕದ ತೆರೆದಾಗ ಅಮ್ಮ ನಾಳೆ ಬೆಳಿಗ್ಗೆ ಬರುತ್ತಾಳೆ ಎಂದು ಸುದ್ದಿ ತಿಳಿಸಿದ. 'ನಿಮಗೆ ಹೆದರ್ಕೆ ಅಗ್ತಿದ್ರೆ ನನಗಿಲ್ಲೇ ಮಲಗೂಕೆ ಹೇಳೀರು,' ಎಂದಾಗ ತನಗೆ ಹೆದರಿಕೆ ಇಲ್ಲ ಎಂದು ಹೇಳಿ ಗೌಡನನ್ನು ಮನೆಗೆ ಕಳಿಸಿಕೊಟ್ಟಿದ್ದಳು. ಅದೇ ತಪ್ಪಾಯಿತೇನೋ. ಆದರೆ ಆಗ ಹಾಗೆ ಅನ್ನಿಸಿರಲಿಲ್ಲ. ·ಕೆಲ ಹೊತ್ತಿನ ಮೇಲೆ ಬಟ್ಟೆ ಬದಲಿಸಿ, ಕೆಳಗೆ ಬಂದ ಅವನು ಮನೆಯಲ್ಲಿ ಇನ್ನಾರೂ ಇಲ್ಲವೇ ಎಂದು ಮಾತನಾಡಿಸಿದ್ದ. 'ನಿಮಗೆ ಹಸಿವಾಗಿರಬೇಕು. ಊಟಕ್ಕೆ ಸಿದ್ಧವಿದೆ' ಎಂದಾಗ, ತನಗೆ ಹಸಿವೆ ಇಲ್ಲ; ಇದ್ದರೆ ಇಷ್ಟು ಹಾಲು ಕೊಡಿ ಎಂದಿದ್ದ. ಹಾಲು, ಹಣ್ಣು ತಂದು ಕೊಟ್ಟು ಅಮ್ಮನ ಬಗ್ಗೆ ಹೇಳಿದ್ದಳು. ಹಾಲು ಕುಡಿಯುತ್ತ ಯಾವ ಸಂಕೋಚ, ಆತಂಕ ತೋರಿಸದೇ ಮಾತನಾಡಿಸಿದ್ದ ಅವನ ಮಾತುಗಳಲ್ಲಿಯ ಸಹಜತೆ ಅವಳನ್ನು ಮುಗ್ಧಗೊಳಿಸಿತ್ತು. ಸ್ವಚ್ಛ ಬಿಳಿಯ ಧೋತರ. ಕಾವೀ ಬಣ್ಣದ ನಿಲುವಂಗಿ. ಹೆಗಲು ಮುಟ್ಟುವ ಉದ್ದನ್ನ ತಲೆಗೂದಲು. ಮಾತನಾಡುವಾಗ ತುಟಿಗಳಂಚಿನಲ್ಲಿ ಸಣ್ಣ ಮುಗುಳು ನಗೆ. ಸ್ವಚ್ಛ ಕಣ್ಣುಗಳಲ್ಲಿ ಮಾತ್ರ ಎಂತಹದೋ ಮ್ಲಾನತೆ– ಬೈರಾಗಿಯ ಕಣ್ಣುಗಳ ಹಾಗೆ. ಅವಳು ಮೊತ್ತಮೊದಲು ನೋಡಿದ ದಿನವೇ ವಿಚಿತ್ರ ರೀತಿಯಿಂದ ಹುಚ್ಚು ಹಿಡಿಸಿದ, ಅವಳನ್ನು ಮದುವೆಯಾದವನ ಕಣ್ಣುಗಳಲ್ಲಿ ಕಂಡ ಬೈರಾಗಿಯ ದೃಷ್ಟಿ!...

ಆ ರಾತ್ರಿ ತಾವಿಬ್ಬರೂ ಜಾರಿದ್ದೆವು. ಬೆಳಿಗ್ಗೆ ಎಚ್ಚರವಾದದ್ದೇ ಮೆಲ್ಲನೆ ತನ್ನನ್ನು ಅಪ್ಪುಗೆಯಿಂದ ದೂರ ಸರಿಸಿ, ತನ್ನ ಪಾದಗಳನ್ನು ಕಣ್ಣೀರಿನಿಂದ ಒದ್ದೆ ಮಾಡಿ ಕ್ಷಮೆ ಬೇಡಿದ್ದ. ಬೆಳಗಾಗುವ ಮೊದಲೇ ಊರಿನಿಂದ ಓಡಿಹೋಗಿದ್ದ. ನವ

ರಾತ್ರಿಯ ಕೀರ್ತನೆಗಾಗಿ ಬಂದಾತ ಮಠವನ್ನು ನೋಡುವ ಮೊದಲೇ...ದೇವರೇ ದೇವರೇ...

ಅಪಿಲ್ಯೆ ಧಾರಾಳವಾಗಿ ಬೆವೆತಿದ್ದಳು. ಹೊರಗೆ ಕದದ ಮೇಲಿನ ಉಗುರುಗಳ ಸಪ್ಪಳ ಇದು ಕನಸಲ್ಲ ಎಂದು ಎಡೆಬಿಡದೇ ಸಾರುತ್ತಿರುವಾಗ ಕಿಟಾರನೆ ಚೀರಬೇಕೆಂದು ಎನ್ನಿಸಿದರೂ ಬಾಯಿಂದ ಶಬ್ದವೇ ಹೊರಡದೇ ಮೂಕವಾಗಿ ನಡುಗಿದಳು. ಅಮ್ಮನ ನೆನಪಾಗಿ ಅತ್ತಳು.

೪

ಬೆಳಗಾಗುವ ಪುರಸತ್ತೇ ಇಲ್ಲದವಳ ಹಾಗೆ ಎದ್ದ ಅಮ್ಮ ಇನ್ನೂ ಕತ್ತಲು ಇರುವಾಗಲೇ ಹೊರಟು ನಿಂತಾಗ ಅವಳ ಆಗಿನ ಮನಃಸ್ಥಿತಿಯ ಅರಿವು ಇದ್ದ ಅಣ್ಣ ಅತ್ತಿಗೆ ತಡೆಯಲು ಹೋಗ ಲಿಲ್ಲ. ಮಳೆ ಪೂರ ನಿಂತರೂ ಗಾಳಿಯಲ್ಲಿನ್ನೂ ನೆಲಸಿದ್ದ ಒದ್ದೆತನ, ಚಳಿ–ಯಾವುದರ ಪರಿವೆ ಇಲ್ಲದವಳಂತೆ ಓಡೋಡುತ್ತಲೇ ಹಳ್ಳಿ ತಲುಪಿದ ಅಮ್ಮನಿಗೆ ಮನೆಯ ಅಂಗಳದಲ್ಲಿ ಕಾಲಿಡುವ ಹೊತ್ತಿಗೆ ಮೇಲುಸಿರು ಹತ್ತಿ ತುಳಸೀ ಕಟ್ಟೆಯ ಇದಿರಿಗೇ ಕುಸಿಯುವಂತಾಯಿತು. ತಟ್ಟಿ ಕಟ್ಟಿದ ಜಗಲಿಯ ಮೇಲೆ ಕಾಲವರೆಗೂ ಹೊದ್ದು ಯಾರೋ ಮಲಗಿದ್ದಾರೆ ಎನ್ನುವುದು ಮಸಕು ಮಸಕಾಗಿ ಕಂಡರೂ ಯಾರಿರಬಹುದೆಂಬ ಕುತೂಹಲವನ್ನು ಕೂಡ ಮನಸ್ಸಿನಲ್ಲಿ ತರಗೊಡದೇ ಲಗುಬಗೆಯಿಂದ ಕದ ತಟ್ಟಿ ಪೋರೀ ಎಂದು ಕರೆಯಬೇಕೆಂದರೆ ಬಾಯಿಂದ ಸದ್ದೇ ಹೊರಡ ಲಿಲ್ಲ. ಇನ್ನೊಮ್ಮೆ ಕದ ತಟ್ಟಿದಳು, ಜೋರಿನಿಂದ. ಒಳಗಿಂದ ಉತ್ತರವಿಲ್ಲ. ನಡುವಿನ ಕೋಣೆಯಲ್ಲಿ ಗಾಢ ನಿದ್ದೆ ಸೇರಿದವಳಿಗೆ ಇಲ್ಲಿಂದ ಕರೆದರೆ ಕೇಳಿಸ ಲಿಕ್ಕಿಲ್ಲವೆಂದು ಬಗೆದು ದುದು ದಾಡು ದಾಗುಡ ತುಂಬಿದ ಹೆಜ್ಜೆ ಇಡುತ್ತ ಹಿಂದಿನ ಜಗಲಿ ಸೇರಿ ಅಡಿಗೆ ಮನೆಯ ಕಿಟಕಿಯ ಬಾಗಿಲು ತಟ್ಟಲು ಹೋದರೆ ಅದು ಪೂರ ತೆರೆದೇ ನಿಂತಾಗ ಒಳಗೆ ಹಣಕಿಕ್ಕಿ ನೋಡಿದಳು. ಏನೇನೂ ಕಾಣಿಸಲಿಲ್ಲ. ಕೊನೆಗೊಮ್ಮೆ ಪೋರೀ ಎಂದು ಕರೆದಳು. ಎಚ್ಚ ರಾಗೂ ಎಂದಳು. ಒಳಗಿಂದ ಸದ್ದಿಲ್ಲ. ಹೊತ್ತು ಹೋದ ಹಾಗೆ ಅಡಿಗೆ ಮನೆಯಲ್ಲಿಯ ನಸುಗತ್ತಲೆಗೆ ಹೊಂದಿಕೊಳ್ಳುತ್ತ ನಡೆದ ಕಣ ಮುಂದೆ ಎಂತಹದೋ ಅಸ್ಪಷ್ಟ ಆಕೃತಿ. ಮಬ್ಬು ಸರಿದ ಹಾಗೆ ಹೆಚ್ಚು ಹೆಚ್ಚು ಸ್ಪಷ್ಟವಾಗಹತ್ತಿತು: ನೆಲದಿಂದ ಸುಮಾರು ಒಂದು ಫೂಟು ಎತ್ತರಕ್ಕೆ ತೂಗುತ್ತಿದ್ದ ಪಾದಗಳು. ಕ್ರಮೇಣ ಆ ಪಾದ ಗಳಿಗೆ ಹೊಂದಿಕೊಂಡ ದೇಹದ ಉಳಿದ ಭಾಗ ಗಳು. ಕಣ್ಣುಗಳಿಗೆ ಕಂಡದ್ದಕ್ಕಿಂತ ಹೆಚ್ಚು ನಿಚ್ಚಳ ವಾಗಿ, ನಡೆದದ್ದು ಮನಸ್ಸಿಗೆ ಹೊಳೆದಾಗ ಅಮ್ಮ ಚೀರಿಕೊಂಡಳು. ಯಾರೋ ಎತ್ತಿ ಹಿಡಿದಿದ್ದಾರೆ ಎನ್ನುವ ಹಾಗೆ ಅಪಿಲ್ಯೆ ಅಡಿಗೆಮನೆಯ ಮಾಡಿನಿಂದ ತೂಗುತ್ತಿದ್ದಳು. ಆಗಲೇ ತುಸು ಎಚ್ಚರಗೊಂಡ ಬಾವಾಜಿ ಅಮ್ಮನ ಚೀರಾಟಕ್ಕೆ ಪೂರ್ಣ ಎಚ್ಚರಗೊಂಡು ಅಡಿಗೆಮನೆಯತ್ತ ಧಾವಿಸಿ, ಅಮ್ಮ ಇನ್ನೂ ನೋಡುತ್ತಲೇ ನಿಂತು ಬಿಟ್ಟ ಕಿಟಕಿಯೊಳಗಿಂದ ಒಳಗೆ ನೋಡಿದಾಗ ಕಂಡ ದೃಶ್ಯದಿಂದ ದಂಗು ಬಡೆದು ಅರರೇ ಎಂದ. ಇನ್ನೂ ಜೀವ ಇರಬಹುದೇನೋ ಎಂದು ಬಗೆದು ಬಾಗಿಲ ಕಡೆ ಓಡಿ, ಕಾಲಿನಿಂದ ಒದ್ದು ಕದ ಮುರಿದು ಒಳಗೆ ಹೋದ. ಅಲ್ಲೇ ಅಡ್ಡ ಬಿದ್ದ ಸ್ಟೂಲನ್ನು ನಿಲ್ಲಿಸಿ, ಹತ್ತಿ, ಕೊರಳಿಗೆ ಬಿಗಿದ ಹಗ್ಗ ಕತ್ತರಿಸಿ ಹೆಣವನ್ನು ಕೆಳಗಿಳಿಸುವ ಹೊತ್ತಿಗೆ ಬೆಳಕು ಚೆನ್ನಾಗಿ ಮೂಡಿತ್ತು.

ಅಮ್ಮನ ಬೊಬ್ಬೆಗೆ ಎಚ್ಚರಗೊಂಡ ಕೇರಿಯ ಜನ ಓಡೋಡಿ ಬಂದರು. ರಾಮ ರಾಮಾ ಎನ್ನುತ್ತ, ಹೆಣವನ್ನು ಆದೇ ಕೆಳಗಿಳಿಸಿದ ಬಾವಾಜಿಯ ಸುತ್ತಲೂ ನೆರೆದರು. ಏನಾಯಿತು ಹೇಗಾಯಿತು ಎಂದು ಬಾವಾಜಿಯನ್ನೇ ಕೇಳಿ ದರು. ಮಳೆಯಿಂದಾಗಿ ನಿನ್ನೆಯ ರಾತ್ರಿ-ಯೊಂದನ್ನು ಮುಂದಿನ ಜಗಲಿಯ ಮೇಲೆ ಕಳೆದ ತನಗೆ ಏನೂ ಗೊತ್ತಿಲ್ಲ ಎಂದು ಮಂಕು ಬಡಿದವನಂತೆ ಬಡಬಡಿಸಿದ ಬಾವಾಜಿ. ಹೊತ್ತು ಹೋದ ಹಾಗೆ ಸುತ್ತಲೂ ನೆರೆದ ಜನ, ತನಗೂ ಈ ಸಾವಿಗೂ ಏನೋ ಸಂಬಂಧವಿದೆ ಎನ್ನುವಂತೆ ನೋಡುವ ರೀತಿಯಿಂದ ಅಂಜಿದ. ಮೆಲ್ಲನೆ ಅಲ್ಲಿಂದ ಜಾರಿಕೊಳ್ಳುತ್ತ ಮುಂದಿನ ಜಗಲಿ ಯಲ್ಲಿಯ ತನ್ನ ಹಾಸಿಗೆಯನ್ನು ಸುರುಳಿ ಸುತ್ತಿ ಎತ್ತಿಕೊಂಡವನೇ ಅಲ್ಲಿಂದ ಹೊರಬಿದ್ದ. ಅವಸರ ಅವಸರವಾಗಿ ದಣಪೆಯತ್ತ ಕಾಲಿಡುತ್ತ, ಓಣಿ ಸೇರಿ ಕಾಣದಾದ.

ಆಧುನಿಕ ಜೀವನ ಪರಿಸರದಿಂದ ಅನಿವಾರ್ಯವಾಗಿ ಹುಟ್ಟುವ ಮಾನಸಿಕ ತ್ರಾಸ–Stress–ದ ಫಲವಾಗಿ ರಕ್ತದ ಒತ್ತಡ, ಹೃದಯರೋಗ, ಅಲರ್ಜಿಯಿಂದ ಉದ್ಭವಿಸುವ ಇತರ ಕಾಯಿಲೆಗಳು, ನರಮಂಡಲದ ಬಗೆಬಗೆಯ ರೋಗಗಳು ಇವು ಗಾಬರಿಗೊಳಿಸುವಷ್ಟು ಹೆಚ್ಚು ಜನರನ್ನು ಪೀಡಿಸುತ್ತಿವೆ. ಮತ್ತು ಇತರರ ಪ್ರಾಣಗಳ ಮತ್ತು ಬದುಕಿನ ಸುರಕ್ಷಿತತೆ, ಸುಖ ಇವುಗಳ ಜವಾಬ್ದಾರಿಯನ್ನು ಹೊತ್ತವರನ್ನೇ ಈ ರೋಗಗಳು ಬಾಧಿಸುವುದು ಜಾಸ್ತಿ. ಈ ರೀತಿಯಾಗಿ ಅವುಗಳ ಬಾಧೆ ವ್ಯಕ್ತಿಗಳಿಗಾದರೂ ದುಷ್ಫಲಗಳು ಇಡೀ ಸಮಾಜಕ್ಕೇ ವ್ಯಾಪಿಸುತ್ತವೆ. ಇದಕ್ಕೆ ಏನಾದರೂ ಪ್ರತೀಕಾರವಿಲ್ಲವೇ?

ಚಿಂತೆಯ ಬೆಂತರದಿಂದ
ಬೆದರಿದ ಆಧುನಿಕ ಯುಗಕ್ಕೆ
ಇದೊಂದು ವರವಾದಿತೇ ?

ಮಹರ್ಷಿ ಮಹೇಶಯೋಗಿಗಳ ಕ್ರಾಂತಧ್ಯಾನದ ಆಶ್ಚರ್ಯಗಳು


ರಾಧಾಕೃಷ್ಣ ರಾವ್

ಇದಕ್ಕೆ ಉತ್ತರ ಹುಡುಕುತ್ತ ಮನಶ್ಶಾಸ್ತ್ರಿಗಳೂ ಔಷಧಶಾಸ್ತ್ರಿಗಳೂ ಬಗೆಬಗೆಯ ಪರಿಹಾರಗಳನ್ನು ಸಂಕೇತಿಸುತ್ತಾರೆ. ಆದರೆ ನಿಜವಾಗಿ ಅಧಿಕಾಂಶ ಪ್ರಕರಣಗಳಲ್ಲಿ ಸಫಲವಾದ ಉಪಾಯಗಳು ಕಡಿಮೆ. ಆಧುನಿಕ ಜೀವನದ ತ್ರಾಸಗಳಿಂದಾಗಿ ಅನೇಕರು ಮಾದಕ ದ್ರವ್ಯಗಳ ಸೇವನೆಯ ಚಟವನ್ನು ಬೆಳೆಸಿಕೊಂಡು ಸಮಾಜಕ್ಕೆ ಘೋರ ಸಮಸ್ಯೆಯಾಗುತ್ತಿದ್ದಾರೆ.

ಭಾರತದ ಮಹರ್ಷಿ ಮಹೇಶಯೋಗಿಗಳು ರೂಪುಗೊಳಿಸಿದ ಅತೀತ ಧ್ಯಾನ ಅಥವಾ ಕ್ರಾಂತಧ್ಯಾನ ಯೋಗದ ಅನುಷ್ಠಾನದಿಂದ ಆಧುನಿಕ ಜೀವನದ ಈ ಸಮಸ್ಯೆಗೆ ಪರಿಹಾರದ ಆಶೋದಯವಾಗಿದೆ. ಹಿಮಾಲಯದಲ್ಲಿ ಯೋಗಾಭ್ಯಾಸ ಮಾಡಿದ ಮಹೇಶಯೋಗಿಗಳು ಪ್ರಾಚೀನ

ಯೋಗಿಗಳು ನಿರೂಪಿಸಿದ ಅಷ್ಟಾಂಗ ಯೋಗದ ಒಂದು ಅಂಗವಾದ ಧ್ಯಾನವನ್ನು ಆಧುನಿಕ ಜೀವನದ ಆಗುಹೋಗಗಳಿಗೆ ಅನ್ವಯಿಸಿ ರೂಪಿಸಿದರು ಈ ಕ್ರಾಂತಧ್ಯಾನ– ಅಥವಾ Transcendental Meditation–ದಲ್ಲಿ ದಿನಕ್ಕೆ ಎರಡು ಸಲ ಇಪ್ಪತ್ತಿಪ್ಪತ್ತು ನಿಮಿಷ ಸುಲಭವಾದ ಒಂದು ಮಂತ್ರವನ್ನು ಧ್ಯಾನ ಮಾಡಲು ಕಲಿಸಲಾಗುತ್ತದೆ. ಇಷ್ಟರಿಂದಲೇ ಆಯಾ ದಿನದಲ್ಲಿ ಕೂಡಿಬಿದ್ದ ತ್ರಾಸದ ದುಷ್ಫಲಗಳಿಂದ ನರಗಳು ಪೂರ್ತಿ ದುರಸ್ತಿಹೊಂದುವುದಲ್ಲದೆ ಹೆಚ್ಚಿನ ಶಕ್ತಿಯೂ ಶೇಖರವಾಗುವುದೆಂದು ವೈಜ್ಞಾನಿಕ ಪರಿಶೀಲನೆಗಳಿಂದ ವ್ಯಕ್ತವಾಗಿದೆ.

ಹದಿನಾಲ್ಕು ವರ್ಷಗಳ ಹಿಂದೆ ಮಹೇಶ ಯೋಗಿಗಳು ಈ ಕ್ರಾಂತಧ್ಯಾನದ ಸಂದೇಶದೊಡನೆ ಪಾಶ್ಚಾತ್ಯ ದೇಶಗಳಿಗೆ ಹೋದರು. ಅವರ ಪ್ರಥಮ ಶಿಷ್ಯರು ಬೀಟಲ್ಸ್ ಮತ್ತು ಹಿಪ್ಪೀಗಳಾಗಿದ್ದರು. ಆದರೆ ಇಂದು ಈ "ಬಾಹಿರರು" ಮಹರ್ಷಿಗಳ ಶಿಷ್ಯಕೋಟಿಯಲ್ಲಿ ಹೇಳಿಕೊಳ್ಳುವಷ್ಟಿಲ್ಲ. ಈ ಧ್ಯಾನದಿಂದ ಲಾಭವುಂಟೆಂದು ಮನಃಪೂರ್ವಕವಾಗಿ ನಂಬುವವರಲ್ಲಿ ಡಾಕ್ಟರರೂ ವಿಜ್ಞಾನಿಗಳೂ ಶುದ್ಧ ವ್ಯವಹಾರದೃಷ್ಟಿಯ



ವ್ಯಾಪಾರಪ್ರಮುಖರೂ ಜನರಲ್ಲರೂ ಇದ್ದಾರೆ. ಮಹರ್ಷಿಗಳ ಧ್ಯಾನವಿಧಾನದ ಅನುಯಾಯಿಗಳಾಗುತ್ತಿರುವ ಅಮೇರಿಕನ್ನರ ಬಳಗ ಪ್ರತಿ ತಿಂಗಳಿಗೆ ೧೦,೦೦೦ ದಂತೆ ಹೆಚ್ಚುತ್ತಿದೆಯೆಂದು ಈಚೆಗಿನ ಒಂದು ವರದಿಯಲ್ಲಿ ಹೇಳಿದೆ. ಕಳೆದ ಡಿಸೆಂಬರ್ ಹೊತ್ತಿಗೆ ೨,೦೦,೦೦೦ ಜನ ಅಮೇರಿಕನ್ನರು ಧ್ಯಾನದೀಕ್ಷಿತರಾಗಿದ್ದರು. ಇಂಗ್ಲೆಂಡಿನಲ್ಲಿಯೂ ಸುಮಾರು ೨೦,೦೦೦ ಜನರು ಧ್ಯಾನದ ಅನುಯಾಯಿಗಳಾಗಿದ್ದಾರೆ.

ಕ್ರಾಂತಧ್ಯಾನದ ಅನುಯಾಯಿಗಳಾದವರು ತಮ್ಮ ಮೇಲೆ ಅದರಿಂದಾದ ಶುಭ ಪರಿಣಾಮಗಳನ್ನು ಕುರಿತು ಹೇಳಿಕೊಳ್ಳುವುದರಲ್ಲಿ ಅರ್ಧಾಂಶ ಮಾತ್ರ ಸತ್ಯವಾಗಿದ್ದರೂ ಕ್ರಾಂತಧ್ಯಾನ ಮಾನವಕೋಟಿಗೆ ಒಂದು ವರವಾಗಿದೆಯೆಂದು ಒಪ್ಪಬೇಕಾದೀತು. ಒಬ್ಬ ಹೆಂಗಸು, ಧ್ಯಾನದ ನಂತರ ತನ್ನಲ್ಲಿ ಎಷ್ಟು ಉತ್ಸಾಹ ಉಕ್ಕಿ ಬಂತೆಂದರೆ, "ಬೆಳಗಿನ ಎರಡು ಗಂಟೆಯ ವರೆಗೆ ಮನೆಯನ್ನು ಗುಡಿಸಿ ತೊಳೆದು ಸ್ವಚ್ಛ ಮಾಡಿದೆ," ಎನ್ನುತ್ತಾಳೆ. ಸಂಜೆ ಹೊತ್ತು ಇಪ್ಪತ್ತು ನಿಮಿಷ ಧ್ಯಾನಾವಸ್ಥಿತನಾದ ಮೇಲೆ "ಬೆಳಗಿನ ನಾಲ್ಕೈದು ಗಂಟೆಗಳ ವರೆಗೂ ಪರೀಕ್ಷೆಗಾಗಿ ಓದುತ್ತ ಕೂಡ್ರುವುದು ನನಗೇನೂ ಕಷ್ಟವಾಗಲಿಲ್ಲ," ಎಂದು ಇನ್ನೊಬ್ಬ ವಿದ್ಯಾರ್ಥಿ ವರದಿ ಮಾಡಿದನು. ಇನ್ನೊಬ್ಬಾತನಂತೂ ಧ್ಯಾನವನ್ನು ಅಭ್ಯಸಿಸುವ ಮೊದಲು ತನ್ನ ಹೆಂಡತಿಯನ್ನು ಕಾಮದಲ್ಲಿ ತೃಪ್ತಿಪಡಿಸಲು ತನ್ನಿಂದಾಗುತ್ತಿದ್ದಿಲ್ಲವೆಂದೂ ತಾನು ಕ್ರಾಂತಧ್ಯಾನಿಯಾದ ಮೇಲೆ ಈಗವಳು ಪೂರ್ತಿ ತೃಪ್ತಿ ಹೊಂದುತ್ತಿದ್ದಾಳೆಂದೂ ಹೇಳಿಕೊಂಡಿದ್ದಾನೆ!

ಅಮೇರಿಕನ್ ಜನಸಾಮಾನ್ಯರಿಗೆ ಸಹಜವಾದ ಅತ್ಯುತ್ಸಾಹದ ಈ ಅತ್ಯುಕ್ತಿಗಳನ್ನು ಬದಿಗಿಟ್ಟರೂ ಧ್ಯಾನದಿಂದ ಮನಸ್ಸು ಸ್ಫುಟವಾಗುತ್ತದೆ, ಆಯಾಸ ಪರಿಹಾರ ಹೊಂದಿ ಉತ್ಸಾಹ ಬರುತ್ತದೆ, ಚಿತ್ತದ ಉದ್ರೇಕಗಳು ಶಮನಗೊಳ್ಳುತ್ತವೆ, ಏಕಾಗ್ರತೆ ಹೆಚ್ಚುತ್ತದೆ ಎಂದು ಮುಂತಾಗಿ ಬಹಳ ಜನರು ವರದಿ ಮಾಡುತ್ತಿದ್ದಾರೆ.

ಎಲ್ಲಕ್ಕಿಂತಲೂ ಹೆಚ್ಚಾಗಿ ಹಿರೋಯಿನ್, ಅಫು, ಎಲ್ ಎಸ್ ಡಿ ಮೊದಲಾದ ಮಾದಕ

ದ್ರವ್ಯಗಳ ಚಟಕ್ಕೆ ದಾಸರಾದವರು ಕ್ರಾಂತಧ್ಯಾನವನ್ನು ಅಭ್ಯಸಿಸಿದ ನಂತರ ಮಾದಕಗಳ ಆತುರ ಹಿಂಗಿ ಅನೇಕರು ಅವುಗಳನ್ನು ಪೂರ್ತಿಯಾಗಿ ಪರಿತ್ಯಜಿಸಿದರೆಂದು ದೃಢಪಟ್ಟಿದೆ. ಇದು ಅಮೇರಿಕದ ಅಧಿಕಾರಿವರ್ಗಗಳ ಗಮನವನ್ನು ಧ್ಯಾನದ ಕಡೆ ಆಕರ್ಷಿಸಿದೆ. ಇಲಿನಾಯಿಸ್ ರಾಜ್ಯದ ಸಾಮಾನ್ಯ ಸಭೆ ಒಂದು ನಿರ್ಣಯದ ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕ್ರಾಂತಧ್ಯಾನದ ಉಪದೇಶಕ್ಕೆ ಅನುಮತಿ ನೀಡಿದ್ದಲ್ಲದೆ ಮಾದಕ ದ್ರವ್ಯಗಳ ಚಟ ಹತ್ತಿದವರನ್ನು ಅದರಿಂದ ಬಿಡಿಸಲು ಧ್ಯಾನವನ್ನು ಉಪಯೋಗಿಸಿ ನೋಡಬೇಕೆಂದು ಮಾನಸಿಕ ಆರೋಗ್ಯದ ಇಲಾಖೆಗೆ ಶಿಫಾರಸು ಮಾಡಿತು. ಅಮೇರಿಕದ ಕೇಂದ್ರ ಸರಕಾರದ ಆರೋಗ್ಯ, ಶಿಕ್ಷಣ ಮತ್ತು ಕಲ್ಯಾಣ ಇಲಾಖೆಯವರು ಕಳೆದ ಆಗಸ್ಟಿನಲ್ಲಿ ೧೨೫ ಶಿಕ್ಷಕರನ್ನು ಧ್ಯಾನದಲ್ಲಿ ತರಬೇತಿ ಮಾಡಲು ೨೧,೫೪೦ ಡಾಲರುಗಳನ್ನು ಮಂಜೂರು ಮಾಡಿದರು. ಅಮೇರಿಕದ ಸೈನ್ಯಖಾತೆಯವರು ಮಾದಕ ದ್ರವ್ಯಗಳ ಚಟದಿಂದ ಸೈನಿಕರನ್ನು ಮುಕ್ತಗೊಳಿಸುವ ಆಶೆಯಿಂದ ಧ್ಯಾನ ತರಬೇತಿಗೆ ಶಿಕ್ಷಕರನ್ನು ಕಳಿಸಿದರು. ಪೆನಿಸಿಲ್ವೇನಿಯದಲ್ಲಿರುವ ಯುದ್ಧ ವಿದ್ಯಾಶಾಲೆಯ ಕಮಾಂಡಂಟರಾದ ಮೇಜರ್ ಜನರಲ್ ಫ್ರಾಂಕ್ಲಿನ್ ಡೇವಿಸರು ಧ್ಯಾನದಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಕೆನಡಾದಲ್ಲಿ ಸರಕಾರಿ ಅಧಿಕಾರಿಗಳ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಕ್ರಾಂತ ಧ್ಯಾನವನ್ನು ಬಳಸಲಾಗುತ್ತಿದೆ. ಆಫ್ರಿಕದ ಇಥಿಯೋಪಿಯ ಮತ್ತು ಇತರ ದೇಶಗಳಲ್ಲಿ ಕ್ರಾಂತ ಧ್ಯಾನದ ಬಗ್ಗೆ ತುಂಬಾ ಆಸಕ್ತಿ ತೋರಿಬಂದಿದೆ.

ಭಾರತದ ಯೋಗ ಮತ್ತು ಇತರ ರಹಸ್ಯ ವಿದ್ಯಾಮಾರ್ಗಗಳ ಸಂಪ್ರದಾಯವನ್ನನುಸರಿಸಿ ಮಹರ್ಷಿ ಮಹೇಶ ಯೋಗಿಗಳು ತಮ್ಮೀ ಧ್ಯಾನ ಯೋಗವನ್ನು ಗುರೂಪದೇಶದ ಮೂಲಕವೇ ಪ್ರಸಾರ ಮಾಡುತ್ತಿದ್ದಾರೆ. ಸ್ಪೇನಿನಲ್ಲಿರುವ ಮಾಜೋರಿಕಾ ದ್ವೀಪದಲ್ಲಿ ಅವರು ಸ್ಥಾಪಿಸಿರುವ ಅಂತಾರಾಷ್ಟ್ರೀಯ ಕೇಂದ್ರದಿಂದ ತರಬೇತಿ ಹೊಂದಿದ ಧ್ಯಾನ ಶಿಕ್ಷಕರು ಒಂದು ಸರಳ ಸಮಾರಂಭದ ಮೂಲಕ ಅರ್ಹ ಅಭ್ಯರ್ಥಿಗಳಿಗೆ ಅವರವರ ಪ್ರಕೃತಿಗನುಸಾರವಾದ ಸಂಸ್ಕೃತ ಮಂತ್ರಾಕ್ಷರಗಳ ಉಪದೇಶವನ್ನು ರಹಸ್ಯವಾಗಿ ಕೊಟ್ಟು ದೀಕ್ಷಿತರನ್ನಾಗಿ ಮಾಡುತ್ತಾರೆ. ದೀಕ್ಷಾಕ್ರಮ ಇಷ್ಟೇ: ನಿಮಗಿಷ್ಟವಾದ ಬಣ್ಣದ ವಿಶಿಷ್ಟ ಸಂಖ್ಯೆಯ ಫಲ ಪುಷ್ಪಗಳನ್ನು ಗುರುವಿನಲ್ಲಿಗೆ ಒಯ್ಯುತ್ತೀರಿ. ಅವನು ಕೋಣೆಯಲ್ಲಿ ನಿಮ್ಮನ್ನು ಏಕಾಂತವಾಗಿ ಬರಮಾಡಿಕೊಂಡು ಆ ಫಲಪುಷ್ಪಗಳನ್ನು ನಿಮಗೇ ಕೊಟ್ಟು ಮಂತ್ರೋಪದೇಶವನ್ನು ನೀಡಿ ಧ್ಯಾನ ಮಾಡುವ ರೀತಿಯನ್ನು ನಿಮಗೆ ಬೋಧಿಸುತ್ತಾನೆ. ಅನಂತರ ನೀವೇ ಧ್ಯಾನವನ್ನು ಅಭ್ಯಸಿಸುತ್ತೀರಿ. ಅವನು ಮೂರು ಸಲ ಒಂದೊಂದು ಗಂಟೆಯ ಸಮಾವೇಶಗಳಲ್ಲಿ ನಿಮಗೆ ಹೆಚ್ಚಿನ ತರಬೇತಿಯನ್ನು ನೀಡುತ್ತಾನೆ. ಆ ಮೇಲೆ ದಿನಕ್ಕೆರಡು ಬಾರಿ ಏಕಾಂತದಲ್ಲಿ (ನಿಮಗೆ ಅರ್ಥವಾಗದಿದ್ದರೂ) ಆ ಮಂತ್ರಾಕ್ಷರಗಳ ಮೇಲೆ ಚಿತ್ತವನ್ನು ವೇಧಿಸಿ ಧ್ಯಾನಾರೂಢರಾಗಲು ನಿಮ್ಮಷ್ಟಕ್ಕೆ ನೀವು ಯತ್ನಿಸುತ್ತ ಹೋಗಬೇಕು.

ಮಹೇಶ ಯೋಗಿಗಳು ಅಮೇರಿಕದಲ್ಲಿ ವಿದ್ಯಾರ್ಥಿಗಳಿಂದ ೪೫ ಡಾಲರು ಮತ್ತು ಇತರರಿಂದ ಇನ್ನೂ ಹೆಚ್ಚು ಗುರುದಕ್ಷಿಣೆಯನ್ನು ಪಡೆಯುತ್ತಾರೆ. ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಗಳಿಗೆ ಎಂಟು ಪೌಂಡು, ಇತರರಿಗೆ ೧೫ ಪೌಂಡು ದಕ್ಷಿಣೆ ವಿಧಿಸಲಾಗುತ್ತಿದೆ. ಇದು "ವ್ಯಾಪಾರ"ವೆಂದು ದೂರಿ "ರೆಡ್ ಬುಕ್" ಪತ್ರಿಕೆಯಲ್ಲಿ ಒಬ್ಬಾಕೆ ಲೇಖನ ಬರೆದಿದ್ದಾಳೆ. ದಕ್ಷಿಣೆ ವಸೂಲು ಮಾಡುವುದಕ್ಕೆಂದೇ ರಹಸ್ಯ ಮಂತ್ರೋಪದೇಶದ ನಿಯಮ ಮಾಡಿದ್ದಾರೆಂದೂ ಅದಿಲ್ಲದೆಯೂ ಚಿತ್ತವನ್ನು ಯಾವುದೇ ಅರ್ಥರಹಿತ ವರ್ಣಗಳ ಮೇಲೆ ಕೇಂದ್ರೀಕರಿಸಿ ಧ್ಯಾನಿಸಬಹುದೆಂದೂ ಅವಳು ಹೇಳುತ್ತಾಳೆ. ಜಪಾನಿನಲ್ಲಿ ಪ್ರಚಲಿತವಾದ ಜೆನ್ ಧ್ಯಾನಪದ್ಧತಿಯೂ ಕ್ರಾಂತ ಧ್ಯಾನದಿಂದ ಸಾಧ್ಯವಾದುದನ್ನೆಲ್ಲ ಸಾಧಿಸಬಲ್ಲದೆಂದು ಅವಳ ಅಂಬೋಣವಿದೆ.

ಮಹೇಶಯೋಗಿಗಳು ಪ್ರಚಾರ ಪ್ರವೀಣರೆಂಬುದು ನಿಜ. ಅವರು ದೇಶದಿಂದ ದೇಶಕ್ಕೆ ಜೆಟ್ ವಿಮಾನಗಳಲ್ಲಿ ಸಂಚರಿಸುತ್ತಾರೆ. ಆದರೆ ಅವರು ಭಾರತೀಯ ತತ್ವಜ್ಞಾನ, ವೇದ ಮತ್ತು ಇತರ ವಿದ್ಯೆಗಳ ಪ್ರಸಾರಕ್ಕಾಗಿ ವೆಚ್ಚದ ಕಾರ್ಯ-




ತಲೆ ನೋವೇ?

ಪ್ರಭಾವಶಾಲಿ ಹಾಗೂ ವಿಶ್ವಾಸಾರ್ಹವಾದ

ಅನಾಸಿನ್

ಶೀಘ್ರ ಉಪಶಮನ ನೀಡುತ್ತದೆ



"ತಲೆನೋವಿಗೆ ನಾನು ಯಾವಾಗಲೂ ಅನಾಸಿನ್ ತೆಗೆದುಕೊಳ್ಳುತ್ತೇನೆ" ಎಂದು ಬೊಂಬಾಯಿಯ ಹಡಗು ಕಂಪೆನಿಯೊಂದರ ಅಧಿಕಾರಿ ಶ್ರೀ ಪರಮಶಿವಂ ಹೇಳುತ್ತಾರೆ.

ಪ್ರಭಾವಶಾಲಿ : ಜಗತ್ತಿನೆಲ್ಲೆಲ್ಲ ಡಾಕ್ಟರುಗಳು ಹೆಚ್ಚಾಗಿ ಶಿಫಾರಸು ಮಾಡುವ ವೇದನಾಹಾರಿ ಔಷಧವು ಅನಾಸಿನ್‌ನಲ್ಲಿ ಅಧಿಕ ಪ್ರಮಾಣದಲ್ಲಿದೆ. ಅನಾಸಿನ್ ನೋವನ್ನು ಶೀಘ್ರವಾಗಿ ಉಪಶಮನಗೊಳಿಸುತ್ತದೆ.


ವಿಶ್ವಾಸಾರ್ಹ : ಶ್ರೀ. ಪರಮಶಿವಂರವರಂತಹ ಲಕ್ಷೋಪಲಕ್ಷ ಜನರು ಅನಾಸಿನ್‌ನಲ್ಲಿ ಭರವಸೆಯಿಡುತ್ತಾರೆ. ಡಾಕ್ಟರರ ವಿಶ್ವಸನೀಯ ಔಷಧದಂತೆ, ಅನಾಸಿನ್ ಔಷಧಗಳ ಸಂಯೋಜನೆಯಾಗಿದೆ.

ನೆಗಡಿಯಿಂದ ಉಂಟಾಗುವ ನೋವು ಮತ್ತು ಸಿಡಿತಗಳಿಗೂ, ಫ್ಲೂ, ತಲೆನೋವು, ಬೆನ್ನುನೋವು, ಸ್ನಾಯುನೋವು ಮತ್ತು ಹಲ್ಲುನೋವುಗಳಿಗೂ ಅನಾಸಿನ್ ಪರಿಣಾಮಕಾರಿಯಾಗಿದೆ.

ಪ್ರಭಾವಶಾಲಿ ಹಾಗೂ ವಿಶ್ವಾಸಾರ್ಹವಾದ

ಅನಾಸಿನ್

ಭಾರತದ ಅತ್ಯಂತ ಜನಪ್ರಿಯ ವೇದನಾಹಾರಿ



ಗಳನ್ನು ಕೈಗೊಂಡು ಅಂತಾರಾಷ್ಟ್ರೀಯ ವಿಶ್ವ-ವಿದ್ಯಾಲಯವನ್ನು ಕಟ್ಟುತ್ತಿದ್ದಾರೆಂಬುದೂ ಅಷ್ಟೇ ಸತ್ಯ. ಕರ್ನಾಟಕದ ಬ್ರಹ್ಮರ್ಷಿ ದೈವ-ರಾತರನ್ನೂ ಇತರ ಭಾರತೀಯ ವಿದ್ಯಾ ಪಾರಂಗತರನ್ನೂ ಅವರು ಕಳೆದ ವರ್ಷ ಮತ್ತು ಈ ವರ್ಷಾರಂಭದಲ್ಲಿ ಅನೇಕ ದೇಶಗಳಿಗೆ ಕರೆದೊಯ್ದು ಭಾಷಣ ಮೊದಲಾದ ಕಾರ್ಯಕ್ರಮ-ಗಳನ್ನು ಏರ್ಪಡಿಸಿದರು.

ಮಹರ್ಷಿಗಳ ಉಪದೇಶ ಮತ್ತು ಭಾಷಣಗಳ ವಿನ್ಯಾಸವೂ ತಾರ್ಕಿಕ ಮನೋವೃತ್ತಿಯ ಅನೇಕ ಆಧುನಿಕರಿಗೆ ಅಷ್ಟಾಗಿ ಹಿಡಿಸಿಲ್ಲ. ಅವರು ಅನುಭಾವಿಗಳ ಸಮಸ್ಯಾತ್ಮಕ ಭಾಷೆಯಲ್ಲಿ ಮಾತನಾಡುತ್ತಾರೆ. "ಒಂದೊಂದು ಮರವೂ ಹಸಿರಾಗಿದ್ದರೇನೇ ಅಡವಿ ಹಸಿರಾಗಿ ತೋರ-ಬಲ್ಲದು": "ಸುಖ ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕು, ಮನುಷ್ಯ ಸುಖವನ್ನು ಪಡೆಯಲಾರ-ದಿರುವುದೆಂದರೆ ವಿದ್ಯುತ್ ಕಂಪೆನಿಯವರು ಕತ್ತಲಲ್ಲಿ ಇರಬೇಕೆಂದಂತೆ"—ಇತ್ಯಾದಿ.

ಸಾಮಾನ್ಯರನ್ನು ಇಂಥ ಮಾತುಗಳು ಆಕರ್ಷಿ-ಸಿರಬಹುದು, ತರ್ಕವಾದಿಗಳನ್ನು ವಿಕರ್ಷಿಸಿರ-ಬಹುದು. ಆದರೆ ಕ್ರಾಂತ ಯೋಗದ ಅನು-ಯಾಯಿಗಳಲ್ಲಿ ಹೆಚ್ಚಿನವರು ಕೇವಲ ಮಾತಿಗೆ ಮರುಳಾದರೆನ್ನಲು ಬರುವುದಿಲ್ಲ. ಅದು ಸುವ್ಯಕ್ತವಾದ ಪ್ರಯೋಜನ ಕೊಟ್ಟಿದ್ದರಿಂದಲೇ ತಿಳಿವಳಿ-ಕಸ್ತರು ಅದರ ಅನುಯಾಯಿಗಳಾದರು. ಮನಶ್ಶಾಂತಿ, ಸಮಾಧಾನ, ಮಾನವ ಸಂಪರ್ಕಗಳಲ್ಲಿ ಹೆಚ್ಚು ಸೌಹಾರ್ದ, ವಿಕಟ ಪ್ರಸಂಗಗಳಲ್ಲಿ ಚಿತ್ತಸ್ಥಿಮಿತ, ಹೆಚ್ಚು ಕಾರ್ಯದಕ್ಷತೆ, ಕಡಿಮೆ ಆಯಾಸ,—ಇಂಥವು ಅವರು ಧ್ಯಾನದಿಂದ ಕಂಡ ಅನುಭವಗಳಾಗಿವೆ.

ಮಂತ್ರೋಪದೇಶ, ತಂತ್ರದ ಅಪೂರ್ವತ್ವ ಇಂಥ ಸನ್ನಿವೇಶಗಳಿಂದ ಉದ್ಭವಿಸಿದ ಸಮ್ಮೋ-ಹನಿಯಿಂದಾಗಿ ಈ ಜನರು ತಮಗೆ ಹಿತವಾಗಿದೆಯೆಂದು ಭ್ರಮಿಸಿದ್ದಾರೆಯೇ? ಸ್ವಸಂಮೋಹನದ ಅಂಶ ಇದರಲ್ಲಿ ಇಲ್ಲವೇ ಇಲ್ಲವೆನ್ನಲಾಗುವುದಿಲ್ಲ. "ರೆಡ್‌ಬುಕ್" ಲೇಖನದ ಕರ್ತ್ರಿ ಹೇಳುವ ಹಾಗೆ ದಿನಕ್ಕೆರಡು ಸಲ ಇಪ್ಪತ್ತು ನಿಮಿಷಗಳ ಬರೇ ವಿಶ್ರಾಂತಿಯನ್ನೇ (ಧ್ಯಾನರಹಿತವಾಗಿ) ತೆಗೆದುಕೊಂಡರೂ ಕೆಲವು ಫಲಗಳನ್ನು ಪಡೆಯಬಹುದೋ, ಏನೋ. ಆದರೆ ಕೆಲವೊಂದು ವೈಜ್ಞಾನಿಕ ಪರಿಶೀಲನೆಗಳು ಕ್ರಾಂತಧ್ಯಾನದ ಕಾಲದಲ್ಲಿ ಕೆಲವೊಂದು ಅರ್ಥಪೂರ್ಣ ಶಾರೀರ ಕ್ರಿಯಾ ಬದಲಾವಣೆಗಳಾಗುತ್ತವೆಂದು ಕಂಡು-ಹಿಡಿದಿರುವುದನ್ನು ಗಮನಿಸದಿರಲಾಗುವುದಿಲ್ಲ.


ಕೆಲ ಪ್ರಸಿದ್ಧ ಪಾಶ್ಚಾತ್ಯ ವಿಶ್ವವಿದ್ಯಾಲಯಗಳು ಕ್ರಾಂತಧ್ಯಾನದಿಂದ ವ್ಯಕ್ತಿಯ ಮೇಲಾ-ಗುವ ಪರಿಣಾಮಗಳನ್ನು ಅಭ್ಯಸಿಸಿವೆ. ಅಮೇರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದ ಔಷಧ ಶಾಸ್ತ್ರದ ಪ್ರಾಧ್ಯಾಪಕ ಡಾ. ಹರ್ಬರ್ಟ್ ಬೆನ್ಸ-ನ್ನರೂ ಇನ್ನೊಬ್ಬ ಸ್ವತಂತ್ರ ಸಂಶೋಧಕರಾದ ಡಾ. ಕೀತ್ ವಾಲೇಸರೂ ೪೦ ಕ್ಕೂ ಹೆಚ್ಚು ಪುರುಷ ಧ್ಯಾನಿಗಳನ್ನು ಶರೀರ ಪರೀಕ್ಷೆಗಳಿಗೆ ಒಳಪಡಿಸಿದರು. ಇಪ್ಪತ್ತು ನಿಮಿಷಗಳ ಕ್ರಾಂತ ಧ್ಯಾನದಲ್ಲಿ ಧ್ಯಾನಿಗಳಿಗೆ ದೊರಕುವ ವಿಶ್ರಾಂತ ಭಾವ ನಿದ್ರೆಯಲ್ಲಿ ದೊರಕುವುದಕ್ಕಿಂತ ಭಿನ್ನವಾದದ್ದೆಂದು ಕಂಡುಬಂತು. ಧ್ಯಾನಸ್ಥರಾಗಿದ್ದಾಗ ಧ್ಯಾನಿಗಳ ಜೀವದ್ರವ್ಯಕ್ರಿಯೆ ಇಳಿಮುಖ-ವಾಗುತ್ತದೆ. ಜೀವದ್ರವ್ಯಕ್ರಿಯೆಯ ಪ್ರಮಾಣವನ್ನು ಶರೀರ ಬಳಸಿಕೊಳ್ಳುವ ಪ್ರಾಣವಾಯು (ಆಮ್ಲಜನಕ) ಪ್ರಮಾಣದ ಮೇಲಿಂದ ಅಂದಾಜು ಮಾಡಬಹುದು. ಧ್ಯಾನಸ್ಥನು ಸಾಮಾನ್ಯ ಸ್ಥಿತಿಯಲ್ಲಿದ್ದಾಗಿಗಿಂತ ಸೇಕಡಾ ೨೦ ರಷ್ಟು ಕಡಿಮೆ ಪ್ರಾಣವಾಯುವನ್ನು ಧ್ಯಾನಾ-ವಸ್ಥೆಯಲ್ಲಿ ಬಳಸಿಕೊಳ್ಳುತ್ತಾನೆ. ನಿದ್ರಾ ಕಾಲದಲ್ಲಿ ಸರಾಸರಿಯಾಗಿ ಸೇಕಡಾ ೧೦ ರಷ್ಟು ಮಾತ್ರ ಪ್ರಾಣವಾಯು ಬಳಕೆ ಕುಗ್ಗುತ್ತದೆ. ಹಾಗೆಯೇ ಸಾಮಾನ್ಯವಾಗಿ ನಿದ್ರಾಕಾಲದಲ್ಲಿ ಎದೆಬಡಿತ ಸೇಕಡಾ ೨೦ ರಷ್ಟು ಕಡಿಮೆಯಾಗುತ್ತಿದ್ದರೆ ಧ್ಯಾನಕಾಲದಲ್ಲಿ ಅದು ಸೇಕಡಾ ೨೫ ರಷ್ಟು ನಿಧಾನವಾಗುತ್ತದೆ. ಉಸಿರಾಟದ ಕ್ರಿಯೆಯೂ ನಿಧಾನವಾಗುತ್ತದೆ. ನಿದ್ರೆಗಿಂತಲೂ ಗಾಢವಾದ ವಿಶ್ರಾಂತಿ ಧ್ಯಾನ ಸ್ಥಿತಿಯಲ್ಲಿ ಶರೀರಕ್ಕೆ ದೊರೆಯುತ್ತದೆ ಎಂದಂತಾಯಿತು. (ಏಳು ಗಂಟೆಗಳ ನಿದ್ರೆಯ ನಂತರ ಶಾನೇ ಪ್ರಾಣವಾಯು ಬಳಕೆ ಪ್ರಮಾಣ ಸೇಕಡಾ ೧೭ ರಷ್ಟು ಕುಂದುತ್ತದೆ.)

ಇನ್ನೊಂದೆಂದರೆ, ರಕ್ತದಲ್ಲಿನ ಲ್ಯಾಕ್ಟೇಟ್

ಪ್ರಮಾಣ. ಧ್ಯಾನಸ್ಥವಾಗಿರುವಾಗ ಅದು ಧ್ಯಾನ ಪೂರ್ವದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಾಗಿನಿಗಿಂತ ನಾಲ್ಕು ಪಟ್ಟು ವೇಗವಾಗಿ ಕುಗ್ಗಿತು. ಲ್ಯಾಕ್ಟೇಟ್ ಪ್ರಮಾಣಕ್ಕೂ ಮನುಷ್ಯನು ಅನುಭವಿಸುತ್ತಿರುವ ಚಿಂತೆಗೂ ಸಂಬಂಧವುಂಟೆಂದು ಮೊದಲೇ ಸಿದ್ಧವಾಗಿದೆ. ರಕ್ತದ ಒತ್ತಡವುಳ್ಳ ರೋಗಿಗಳ ರಕ್ತದಲ್ಲಿ ಲ್ಯಾಕ್ಟೇಟ್ ಅಂಶ ಅಧಿಕವಾಗಿರುತ್ತದೆ. ಲ್ಯಾಕ್ಟೇಟ್ ಪ್ರಮಾಣ ಇಳಿಮುಖವಾಗುವುದು ಧ್ಯಾನದಿಂದ ಚಿಂತೆ, ಗಾಬರಿ ಕಡಿಮೆಯಾಗುತ್ತದೆಂದು ಸಂಕೇತಿಸುತ್ತದೆ. ಹೃದಯದ ಬಡಿತ ಮತ್ತು ಅದರೊಡನೆ ಉಸಿರಾಟ ಕೂಡ ಕಡಿಮೆಯಾದರೂ ಧ್ಯಾನಸ್ಥನ ಶರೀರದಲ್ಲಿ ರಕ್ತ ಪ್ರವಾಹದ ಪ್ರಮಾಣ ಮೊದಲಿಗಿಂತ ಹೆಚ್ಚಾಗಿರುವುದನ್ನೂ ನರಗಳಿಗೂ ಅಂಗಾಂಗಳಿಗೂ ಪ್ರಾಣವಾಯುಂ ಸಮೀಚೀನವಾಗಿ ಲಭ್ಯವಾಗುವುದನ್ನೂ ಬೆನ್ಸನ್ನರು ಕಂಡು ಆಶ್ಚರ್ಯಗೊಂಡರು. ಧ್ಯಾನ ಕಾಲದಲ್ಲಿ ರಕ್ತನಾಳಗಳ ಉದ್ರೇಕ ಸಡಿಲಾಗಿ ಹೆಚ್ಚು ರಕ್ತ ಪ್ರವಾಹಕ್ಕೆ ದಾರಿ ಮಾಡಿಕೊಡುವುದು ಇದಕ್ಕೆ ಕಾರಣವಾಗಿರಬೇಕೆಂದೂ ರಕ್ತನಾಳಗಳನ್ನು ಸಂಕುಚಿತಗೊಳಿಸುವ ನರಗಳು ಧ್ಯಾನದಲ್ಲಿ ಶಾಂತವಾಗುವುದೇ ರಕ್ತನಾಳಗಳು ಸಡಿಲಗೊಳ್ಳಲು ಕಾರಣವೆಂದೂ ಅವರು ತರ್ಕಿಸಿದರು. ಚರ್ಮದಲ್ಲಿನ ವಿದ್ಯುತ್ ಪ್ರತಿರೋಧ ಶಕ್ತಿ ಧ್ಯಾನ ಸ್ಥಿತಿಯಲ್ಲಿ ಐದು ಪಟ್ಟು ಹೆಚ್ಚಾದದ್ದು ಗಮನಾರ್ಹವಾಗಿತ್ತು. ಇದು ಜಾಗ್ರತಾವಸ್ಥೆಯಲ್ಲೂ ಗಾಢವಾದ ವಿಶ್ರಾಂತ ಸ್ಥಿತಿಯನ್ನು ಧ್ಯಾನವು ಸಾಧಿಸುತ್ತದೆಂದು ಸೂಚಿಸುತ್ತದೆ.

ಲಂಡನ್ನಿನ ಮಾಡ್‌ಸ್ಲೆ ಆಸ್ಪತ್ರೆಯಲ್ಲಿ ಡಾ. ಪೀಟರ್ ಫೆನ್‌ವಿಕ್ ಅವರು ಧ್ಯಾನಸ್ಥರ ಮಿದುಳಿನ ವಿದ್ಯುತ್ ಕ್ರಿಯೆಯನ್ನು ಅಳೆದು ನೋಡಿದ್ದಾರೆ. ಧ್ಯಾನಸ್ಥಿತಿಯಲ್ಲಿರುವವರ ಮಿದುಳಿನ ಹಿಂಭಾಗದಲ್ಲಿ ಆಲ್ಫಾ ಅಲೆಗಳು ಸಸುವೆ ಸಾವಕಾಶಗೊಂಡರೂ ಅವು ಪೂರ್ತಿ ಕಣ್ಮರೆಯಾಗುವುದಿಲ್ಲ. ಮಿದುಳು ಧ್ಯಾನಾವಸ್ಥೆಯಲ್ಲಿ ಜಾಗೃತವಾಗಿಯೇ ಇರುತ್ತದೆಂದು ಇದು ತೋರಿಸುತ್ತದೆ. ಆದರೂ ಭಾವನೆಗಳನ್ನೂ ವ್ಯಕ್ತಿತ್ವವನ್ನೂ ನಿಯಂತ್ರಿಸುವ ಮಿದುಳಿನ ಭಾಗಗಳಲ್ಲಿ ನಿದ್ರಾಕಾಲದಲ್ಲಿರುವಂತೆ ತೀಟಾ ಅಲೆಗಳು ಕಾಣಿಸಿಕೊಳ್ಳುತ್ತವೆ. ಅಂದರೆ ಧ್ಯಾನಸ್ಥನು ಎಚ್ಚರದ ಸ್ಥಿತಿಯಲ್ಲಿರುವಾಗಲೂ ನಿದ್ರಾಸ್ಥಿತಿಯ ಉಪಶಾಂತತ್ವವನ್ನು ಅನುಭವಿಸುತ್ತಾನೆ. ಇತರ ಪರೀಕ್ಷೆಗಳಿಂದಲೂ ಡಾ. ಫೆನ್‌ವಿಕ್‌ರು ಧ್ಯಾನಸ್ಥರ ನರಗಳು ಹೆಚ್ಚು ಅವ್ಯಗ್ರವಾಗಿದ್ದುದನ್ನು ಕಂಡುಕೊಂಡರು.

ಸಂತತ ಧ್ಯಾನಾಭ್ಯಾಸದಿಂದ ಕೆಲ ಶಾಶ್ವತ ಪ್ರಯೋಜನಗಳು ಸಂಚಿತವಾಗುವಂತೆ ತೋರುತ್ತದೆ. ಎರಡು ವರ್ಷಗಳ ಕಾಲ ಕ್ರಾಂತ ಧ್ಯಾವ



ವನ್ನು ಅನುಷ್ಠಾನ ಮಾಡಿದವರ ನರಮಂಡಲಗಳು ಇತರರಕ್ಕಿಂತ ಸ್ತಿಮಿತದಲ್ಲಿರುತ್ತವೆಂದು ಟೆಕ್ಸಾಸ್ ವಿಶ್ವವಿದ್ಯಾಲಯದ ಡಾ. ಓರ್ವ್ ಜಾನ್ಸನ್ ಸಿದ್ಧಪಡಿಸಿದ್ದಾರೆ. ಚರ್ಮಪರೀಕ್ಷೆ ಮಾಡಿದಲ್ಲಿ ಸಾಮಾನ್ಯರು ಹತ್ತು ನಿಮಿಷಗಳಲ್ಲಿ ೩೪ ಉದ್ವೇಗದ ಏರಿಳಿತಗಳನ್ನು ತೋರಿಸಿದರೆ ಧ್ಯಾನಸ್ಥರು ಹತ್ತೇ ಏರಿಳಿತಗಳನ್ನು ತೋರಿಸಿದರು. ಕರ್ಕಶ ಶಬ್ದಗಳೇ ಮೊದಲಾದ ತ್ರಾಸದಾಯಕ ಬಾಹ್ಯ ವಿಕೋಪಗಳಿಂದ ಉಂಟಾದ ದುಷ್ಪರಿಣಾಮಗಳಿಂದ ಧ್ಯಾನಾಭ್ಯಾಸಿಗಳು ಇತರರಿಗಿಂತಲೂ ಬಹು ಬೇಗ ಸುಧಾರಿಸಿಕೊಳ್ಳುತ್ತಾರೆಂದು ಕಂಡಿತು.

ಕೆಲಿಫೋರ್ನಿಯ ವಿಶ್ವವಿದ್ಯಾಲಯದ ಕೆರೆನ್ ಬಾಸ್‌ವೆಲ್ಲರು ಕನ್ನಡಿಯಲ್ಲಿ ನಕ್ಷತ್ರದಾಕೃತಿಗಳನ್ನು ನೋಡಿ ಅವುಗಳನ್ನು ಕಾಗದದ ಮೇಲೆ ಬರೆಯುವ ಪರೀಕ್ಷೆಯನ್ನು ತೆಗೆದುಕೊಂಡಾಗ ಧ್ಯಾನಾಭ್ಯಾಸಿಗಳು ಇತರರಿಗಿಂತ ಮೂರು ಪಟ್ಟು ಕಡಿಮೆ ತಪ್ಪು ಮಾಡಿದರು. ಧ್ಯಾನಾಭ್ಯಾಸದಿಂದ ನೋಟ—ಹಸ್ತಗಳ ಕ್ರಿಯಾ ಸಂಯೋಜನ ಶಕ್ತಿ ತುಂಬಾ ಸುಧಾರಿಸುತ್ತದೆಂದಾಯಿತು. ಅದೇ ವಿಶ್ವವಿದ್ಯಾಲಯದ ಇನ್ನೊಂದು ಪರಿಶೀಲನೆಯಲ್ಲಿ ಎರಡು ವರ್ಷಗಳ ಕಾಲ ಧ್ಯಾನಾಭ್ಯಾಸ ಮಾಡಿದವರು ಧ್ಯಾನ ಮಾಡದವರಿಗಿಂತ ಅದ್ಯತನ ಮತ್ತು ಅನದ್ಯತನ ಭೂತಕಾಲದ ವಿಷಯಗಳನ್ನು ಬೇಗನೆ ನೆನಪು ಮಾಡಿಕೊಳ್ಳಬಲ್ಲರೆಂದು ಗೊತ್ತಾಯಿತು.

ಎಲ್ಲಕ್ಕೂ ಹೆಚ್ಚಾಗಿ ಎರಡು ಮೂರು ವರ್ಷಗಳವರೆಗೆ ಧ್ಯಾನಾಭ್ಯಾಸ ಮಾಡಿದ ೧೮೬೨ ವಿದ್ಯಾರ್ಥಿಗಳು ಮರಿಜುವಾನಾ, ಎಲ್ ಎಸ್ ಡಿ ಮೊದಲಾದ ಮಾದಕಗಳ ಮಾತ್ರವಲ್ಲ, ಸಿಗರೇಟುಗಳ ಚಟವನ್ನೂ ಪೂರ್ತಿ ಅಥವಾ ಬಹಳ ಮಟ್ಟಿಗೆ ಪರಿತ್ಯಾಗ ಮಾಡಲು ಸಮರ್ಥರಾದರೆಂದು ಡಾ. ಬೆನ್ಸನ್ನರು ಒಂದು ಪರಿಶೀಲನೆಯಿಂದ ಖಚಿತಪಡಿಸಿಕೊಂಡರು.

ವಿದೇಶಗಳಲ್ಲಿ ಈ ನವೀನ ಧ್ಯಾನಯೋಗದ ಬಗ್ಗೆ ಹೆಚ್ಚುತ್ತಿರುವ ಆಸಕ್ತಿಯಿಂದಾಗಿ ಇನ್ನೂ ಖಚಿತವಾದ ಸಂಶೋಧನೆ, ಪ್ರಯೋಗ, ಪರಿಶೀಲನೆಗಳು ಆರಂಭವಾಗಿವೆ. ಶಿಕ್ಷಣಕ್ರಮದಲ್ಲಿ ಅದನ್ನು ಸೇರಿಸುವ ಪ್ರಯತ್ನಗಳೂ ಆಗುತ್ತಿವೆ. ಸಾಮಾನ್ಯವಾಗಿ ಇಂಥ ವಿಧಾನಗಳನ್ನು ಸಂಶಯದೃಷ್ಟಿಯಿಂದ ನೋಡುವ ಮನೋವಿಜ್ಞಾನಿಗಳು ಕ್ರಾಂತಧ್ಯಾನದ ಬಗ್ಗೆ ಈ ವರೆಗಂತೂ ಏನೂ ಆಕ್ಷೇಪವೆತ್ತಿಲ್ಲ.

ಕ್ರಾಂತಧ್ಯಾನ ತನ್ನ ಕಾರ್ಯವನ್ನು ಹೇಗೆ ಸಾಧಿಸುತ್ತದೆ ಎಂಬುದಿನ್ನೂ ವೈಜ್ಞಾನಿಕ ದೃಷ್ಟಿಯಿಂದ ಸ್ಪಷ್ಟಪಟ್ಟಿಲ್ಲ. ಧ್ಯಾನಸ್ಥಿತಿ ಖಂಡಿತವಾಗಿ ನಿದ್ರೆಯಲ್ಲ, ತಂದ್ರಿಯೂ ಅಲ್ಲ. ಧ್ಯಾನಾವಸ್ಥೆಯಲ್ಲಿ ಮನಸ್ಸು ತುಂಬಾ ಜಾಗೃತವಾಗಿಯೇ ಇರುತ್ತದೆ. ಶಬ್ದಾದಿ ಬಾಹ್ಯ ಅನುಭವಗಳು ಧ್ಯಾನ ಕಾಲದಲ್ಲಿ ಆಗುತ್ತಲೇ ಇರುತ್ತವೆ. ಕೆಲವರಂತೂ ಕಣ್ಮುಚ್ಚಿ ಧ್ಯಾನಾಸಕ್ತರಾಗಿರುವಾಗ ತಮ್ಮ ಬೋಧಶಕ್ತಿ (awareness) ಇನ್ನೂ ತೀವ್ರವಾಗಿರುತ್ತದೆ ಎನ್ನುತ್ತಾರೆ. ಆದರೂ ನಿದ್ರೆಯಿಂದ ಶರೀರಕ್ಕೂ ನರಮಂಡಲಕ್ಕೂ ಸಿಗುವ ವಿಶ್ರಾಂತಿಗಿಂತಲೂ ಅಧಿಕತರವಾದ ಉಪಶಮನ ಅವರಿಗೆ ಲಭ್ಯವಾಗುತ್ತದೆ. ಮನುಷ್ಯ ಪ್ರಕೃತಿಯಲ್ಲಿ ಈ ವರೆಗೆ ಅಲಕ್ಷಿತವಾಗಿದ್ದ ಶಕ್ತಿಯನ್ನು ಕ್ರಾಂತಧ್ಯಾನ ಉಪಯೋಗಕ್ಕೆ ತಂದು, ಶಾರೀರಿಕ ಮಾನಸಿಕ ತ್ರಾಸದಿಂದ ಸಂಚಿತವಾದ ಕಲ್ಮಷವನ್ನು ಹೊರದಬ್ಬಿ, ಮನಸ್ಸನ್ನೊಳಗೊಂಡು ಎಲ್ಲ ಇಂದ್ರಿಯಗಳನ್ನೂ ಹೆಚ್ಚು ದಕ್ಷತೆಗೇರಿಸುವಂತೆ ಕಾಣುತ್ತದೆ. ✡

ನಮ್ಮೀ ಜಗತ್ತು, ಈ ಇಂದ್ರಿಯ ಪ್ರಪಂಚ, ಈ ವಿಚಾರಾತ್ಮಕ ಬುದ್ಧಿಗಮ್ಯ ಲೋಕ, ಇಕ್ಕೆಡೆಗಳಲ್ಲೂ ಅಸೀಮ, ಅಜ್ಞೇಯ, ಸದಾ ಅಜ್ಞಾತವಾದುದರಿಂದ ಸುತ್ತುವರಿಯಲ್ಪಟ್ಟಿದೆ. ನಮ್ಮ ಅನ್ವೇಷಣೆ, ನಮ್ಮ ಜಿಜ್ಞಾಸೆ, ಅಲ್ಲೇ ಧರ್ಮವೆಂದು ನಾವು ಕರೆಯುವ ಬೆಳಕಿನ ಉಗಮಕ್ಕೆ ನೆಲೆಯಾದ ತಥ್ಯಗಳು ಇರುವುದು. ಆದರೂ ಮೂಲತಃ ಧರ್ಮವೆಂಬುದು ಇಂದ್ರಿಯಾತೀತ, ತರ್ಕಾತೀತ. ಅದು ಬುದ್ಧಿಯ ಮಟ್ಟದಲ್ಲಿ ಇಲ್ಲ, ಅದೊಂದು 'ದರ್ಶನ', ಹಂಬಲ. –ಸ್ವಾಮಿ ವಿವೇಕಾನಂದ

ಆಕಾಶವಾಣಿಯಲ್ಲಿ ಕಾಲು ಶತಮಾನ ಪಳಗಿದ ಎನ್ಕೆಯವರಿಂದ ಕೆಲ ಸ್ವಾರಸ್ಯ ಒಳ ನೋಟಗಳು

ರೇಡಿಯೋರಂಗದ ವಿಂಗಿನಿಂದ

ಎನ್ಕೆ

ನಾನೀಗ ರೇಡಿಯೋ ರಂಗಭೂಮಿಯಿಂದ ನಿವೃತ್ತನಾಗಿದ್ದೇನೆ. ಅಂತೆಯೆ ರಂಗಭೂಮಿಯ ವಿಂಗಿನಿಂದ ಸಂಭಾಷಣೆಯ ಕಲಿಕೆಯ ಮಾತು ಬಿಟ್ಟು ಸ್ವಂತದ ಮಾತನಾಡುವ ಸ್ವಾತಂತ್ರ್ಯ ಪಡೆದಿದ್ದೇನೆ. ಭಾರತ ಸ್ವತಂತ್ರವಾಗಿ ಪ್ರತಿಯೊಬ್ಬ ಪ್ರಜೆಯೂ ವಾಕ್‌ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯಗಳನ್ನೂ ಪಡೆದಾಗ ನಾನು ಮಾತ್ರ ಕೈಕಟ್ಟಿಸಿಕೊಂಡು ಬಾಯಿ ಹೊಲಿಸಿಕೊಂಡು ಇದ್ದೆ ಎನಿಸುತ್ತದೆ. ಒಬ್ಬ ಲೇಖಕನಾದ ನಾನು ಹೊರಗೆ ಪತ್ರಿಕೆಗಳಿಗೆ ಒಂದು ಸಾಹಿತ್ಯಕ, ಸಾಂಸ್ಕೃತಿಕ ವಿಷಯವಾಗಿ ಕೂಡ ಸುಲಭವಾಗಿ ಒಂದು ಲೇಖನ ಬರೆಯುವಂತಿರಲಿಲ್ಲ. ಸಾರ್ವಜನಿಕ ಭಾಷಣ ಮಾಡುವಂತಿರಲಿಲ್ಲ. ನಾಟಕ, ಕಾದಂಬರಿಗಳನ್ನೂ ಸರಕಾರದ ಪೂರ್ವ ಒಪ್ಪಿಗೆಯಿಲ್ಲದೆ ಪ್ರಕಟಿಸುವಂತಿರಲಿಲ್ಲ. ಯಾವುದಾದರೂ ಒಂದು ದೀಪಾವಳಿ ಸಂಚಿಕೆಗೆ ಒಂದು ವಿಶೇಷ ಲೇಖನ ಬರೆಯುವುದಿದ್ದರೆ ಮೊದಲೆ ಆ ಬಗ್ಗೆ ಅನುಮತಿಗಾಗಿ ಅರ್ಜಿ ಮಾಡಿಕೊಳ್ಳಬೇಕು. ಆಮೇಲೆ ಎಷ್ಟೋ ತಿಂಗಳ ತರುವಾಯ ಮತ್ತೊಂದು ವಿಧೇಯವಾದ ನೆನಪಿನ ಓಲೆ ಕಳಿಸಿದಾಗ ನಾನು ಪ್ರಕಟಿಸಬೇಕೆಂದಿರುವ ಲೇಖನವನ್ನೂ ಅದರ ಇಂಗ್ಲಿಷ್ ಸಾರಾಂಶವನ್ನೂ ಕಳಿಸಿಕೊಡಬೇಕು. ಕೊನೆಗೊಮ್ಮೆ ಲೇಖಕ Lucky ಆಗಿದ್ದರೆ ಅನುಮತಿ ಬರಬೇಕು; ಎಂದರೆ ದೀಪಾವಳಿ ಸಂಚಿಕೆಗಾಗಿ ಬರೆಯುವ ಲೇಖನದ ಅನುಮತಿ ಹೋಳಿ ಹುಣ್ಣಿಮೆಯ ಹೊತ್ತಿಗೆ! (ಅನುಮತಿ ಬರಬಹುದು ಬಿಡು, ಎಂಬ ಭರವಸೆಯಿಂದಲೆ ನಾವು ಮುಂಚಿತವೆ ಲೇಖನವನ್ನು ಪ್ರಕಟಣೆಗೆ ಕೊಡುತ್ತಿದ್ದೆವು.) ಇನ್ನು ಒಂದು ಏಕಾಂಕ ಸಂಗ್ರಹವನ್ನೋ ಒಂದು ಕಾದಂಬರಿಯನ್ನೋ ಪ್ರಸಿದ್ಧಿಸುವುದಾದರೆ ಮೂಲ ಕನ್ನಡ ಹಸ್ತಪ್ರತಿಯನ್ನೂ ಅದರ ಇಂಗ್ಲಿಷ್ ಸಾರಾಂಶವನ್ನೂ ಅದರ ಪ್ರಕಾಶಕರ ಹೆಸರು ವಿಳಾಸಗಳನ್ನೂ ನಾನು ಸ್ವೀಕರಿಸಬಹುದಾದ ಸಂಭಾವನೆಯ ಮೊತ್ತವನ್ನು ಎಲ್ಲಾ ವಿವರ ವಿವರವಾದ ಮಾಹಿತಿಯನ್ನು ಪೂರೈಸಬೇಕು. ಅಂತಿಮವಾಗಿ ಅನುಮತಿ ಕೈಸೇರಬೇಕಾದರೆ ನಮ್ಮ ರಾಯಲ್ಟಿ ಹಣದ ಶೇಕಡಾ ೩೩ರಷ್ಟು ಹಣವನ್ನು ದಿಲ್ಲಿ ಸೆಂಟ್ರಲ್ ರೆವೆನ್ಯೂ ಇಲಾಖೆಗೆ ಕಟ್ಟಬೇಕು, ಎಂದು ಮೊದಲಾದ ಶೋಷಣಾತ್ಮಕ ಕರಾರುಗಳು! (ಕಳೆದ ಕೆಲವು ವರ್ಷಗಳಿಂದ ಮಾತ್ರ ಈ ಬಿಗಿ ಒಂದಿನಿತು ಸಡಿಲಾಗಿದೆ. ಅನುಮತಿಗಾಗಿ ದಿಲ್ಲಿಯವರೆಗೂ ಬರೆಯಬೇಕಿಲ್ಲ. ಆಯಾ ಕೇಂದ್ರಾಧಿಕಾರಿಯನ್ನು ಕೇಳಬಹುದು. ಸಂಭಾವನೆಯ ಹಣ ಕೆಲವೊಂದು ಮಿತಿಯನ್ನು

ಮಿಕ್ಕದಿದ್ದರೆ ಲೇಖಕನು ಪೂರ್ಣ ಮೊತ್ತವನ್ನೂ ಪೂರ್ಣ ಅನುಮತಿ ಪಡೆದು ಸ್ವೀಕರಿಸಬಹುದು. ಆದರೆ ಇಂದಿಗೂ ಒಬ್ಬ ಆಕಾಶವಾಣಿ ನೌಕರನು ಯಾವುದೆ ಸ್ಥಳೀಯ ಸಾಂಸ್ಕೃತಿಕ ಸಂಘದ ಸದಸ್ಯನಾಗುವುದಾಗಲಿ, ಯಾವುದೆ ಸಾಹಿತ್ಯಿಕ ಕಮಿಟಿಯ ಮೆಂಬರನಾಗುವುದಾಗಲಿ, ಯಾವುದೆ ಸಂಶೋಧನ ಸಮಿತಿಗೆ ಸಲಹಾಕಾರನಾಗುವುದಾಗಲಿ ಕಷ್ಟಸಾಧ್ಯ.)

ಇದು ಸ್ವತಂತ್ರ ಭಾರತದ ಆಕಾಶವಾಣಿ ಇಲಾಖೆಯ ಒಬ್ಬ ಲೇಖಕ ನೌಕರನ ಪರಿಸ್ಥಿತಿ. ಇದರಿಂದಾಗಿ ಎಷ್ಟೋ ಲೇಖಕರು ಸುಳ್ಳು ಹೇಳಿ, ಅಪ್ರಾಮಾಣಿಕವಾಗಿ, ಇನ್ನೇನೊ ಕಾವ್ಯನಾಮಗಳನ್ನು ಹಚ್ಚಿಕೊಂಡು ಸಾಹಿತ್ಯ ಕಾಯಕ ನಡೆಸಿದುದುಂಟು. ಅಂತಹವುಗಳ ಬಗ್ಗೆ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳೂ ಬಂದಿವೆ. ಯಾರೊ ಒಬ್ಬ ಮಹನೀಯರು ಕಾಲೇಜು ನೋಟ್ಸ್ ಬರೆದು ಹಣಗಳಿಸುತ್ತಿದ್ದರಂತೆ. ಆ ಬಗ್ಗೆ ಒಬ್ಬ ಎಂ. ಪಿ. ಮಹಾಶಯರು ಪ್ರಶ್ನೆ ಮಾಡಿದ್ದರಂತೆ, ಲೋಕಸಭೆಯಲ್ಲಿ. ಸರಿ ಲೋಕಸಭೆಯಲ್ಲಿ ಯಾರಾದರೂ ಒಂದು ಪ್ರಶ್ನೆ ಎತ್ತಿದರೆ ಸಾಕು, ಎಲ್ಲ ಕೇಂದ್ರಗಳ ಅಧಿಕಾರಿಗಳು ಇದ್ದು ಬಿದ್ದ ಕೆಲಸ ಬಿಟ್ಟು ಆ ಪ್ರಶ್ನೆಗಳಿಗೆ ಉತ್ತರಗಳನ್ನು ತಯಾರಿಸಿ ೨೪ ಗಂಟೆಯೊಳಗೆ ತಂತಿ ಮೂಲಕ ಕಳಿಸಬೇಕು. ಹರಿಜನ ವಿಷಯವಾಗಿ ಕಳೆದ ನಾಲ್ಕೈದು ವರ್ಷಗಳಲ್ಲಿ ಎಷ್ಟು ಬಗೆಯ ಕಾರ್ಯಕ್ರಮಗಳು ಪ್ರಸಾರವಾಗಿವೆ ? ಪ್ರಸಾರ ಮಾಡಿದ ಭಾಷಣಕಾರರು ಯಾರು ಯಾರು ? ಇವೇ ಮೊದಲಾದ ಪ್ರಶ್ನೆಗಳನ್ನು ಒಮ್ಮೆ ಕೇಳಿದರೆ ಇನ್ನೊಮ್ಮೆಗೆ ಮತ್ತೆ ಅದೇ ಮಾದರಿಯಾಗಿ ಕಳೆದ ಒಂದು ವರ್ಷದಲ್ಲಿ ಪ್ರಸಾರ ಮಾಡಿದ ಹರಿಜನ ಭಾಷಣಕಾರರು ಯಾರು ? ಅವರಿಗೆ ಎಷ್ಟು ಸಂಭಾವನೆ ಕೊಡಲಾಯಿತು ?— ಇದೇ ಮೊದಲಾಗಿ.



ಆಕಾಶವಾಣಿಯಲ್ಲಿ ಪ್ರೋಗ್ರಾಂ ಎಗ್ಸಿಕ್ಯೂಟಿವ್ ಎಂದು ಒಂದು ವರ್ಗವಿರುತ್ತದೆ. ಇವರು ಗ್ಯಾಜಿಟೆಡ್ ರ್‍ಯಾಂಕಿನ ಕ್ಲಾಸ್ II ಅಧಿಕಾರಿಗಳು. ಇವರ ಕಾರ್ಯವ್ಯಾಪ್ತಿ ಮುಖ್ಯವಾಗಿ ಕಾರ್ಯಕ್ರಮಗಳ ಒಂದೊ, ಎರಡೊ, ಮೂರೊ ವಿಭಾಗಗಳನ್ನು ನೋಡಿಕೊಳ್ಳುವುದು, ನಡೆಸಿಕೊಂಡು ಹೋಗುವುದು. (ದಿಲ್ಲಿಯ ಒಂದು ಸೆಮಿನಾರ್‌ನಲ್ಲಿ ಲಂಡನ್ ಬಿ. ಬಿ. ಸಿ.ಯ ಒಬ್ಬ ಕಾರ್ಯಕರ್ತ ಕೇವಲ ಒಂದೇ ಒಂದು ಭಾಷಣ ಮಾಲಿಕೆಯ P. A. ಎಂದಾಗ ನಮಗೆಲ್ಲ ಅಚ್ಚರಿಯೇ ಅಚ್ಚರಿ). ಈ ಪ್ರೋಗ್ರಾಂ ಅಧಿಕಾರಿಗಳಿಗೆ ನಿಲಯದ ಕಲಾವಿದರು ಸಹಾಯಕರಾಗಿ ಕೆಲಸ ಮಾಡುತ್ತಾರೆ. ಸ್ಟುಡಿಯೊ ಕೆಲಸ ಪ್ರೊಡ್ಯೂಸರ್ ಮತ್ತು ನಿಲಯಕಲಾವಿದರದು. ಪ್ರೊಡ್ಯೂಸರ್ ಎಂಬುವವರೂ ಒಬ್ಬ ಪ್ರೋಗ್ರಾಂ ಎಗ್ಸಿಕ್ಯೂಟಿವ್‌ನಷ್ಟೆ ಸ್ಥಾನಮಾನವುಳ್ಳವರು. ಇದಕ್ಕೂ ಮುಂಚೆ ಪ್ರೊಡ್ಯೂಸರರ ಸ್ಥಾನಮಾನ ಇದಕ್ಕೂ ದೊಡ್ಡದಿತ್ತು. ಒಂದು ಪ್ರದೇಶದ ಮಹಾ ಸಾಹಿತಿಗಳನ್ನು ಕಿಸೆಗೆ ಹಾಕುವುದರ ಸಲುವಾಗಿ ಅವರನ್ನು ಪ್ರೊಡ್ಯೂಸರ್ ಎಂದೊ ಸಲಹಾಕಾರರೆಂದೂ ಮಾಡಿ ಒಂದು ರೀತಿ ಅವರನ್ನು ಆಕಾಶವಾಣಿಯ ಪಂಜರದಲ್ಲಿ ಸಾಕುತ್ತಿದ್ದರು. ಶ್ರೀ ಜಿ. ಸಿ. ಅವಸ್ಥಿ ಎಂಬ ಪ್ರೋಗ್ರಾಂ ಎಗ್ಸಿಕ್ಯೂಟಿವ್ ಒಬ್ಬರು ಆಕಾಶವಾಣಿಯ ಪಕ್ಷಪಾತ, ಅವ್ಯವಸ್ಥೆಗಳಿಗಾಗಿ ಹೇಸಿ ತಮ್ಮ ನೌಕರಿಗೆ ರಾಜೀನಾಮೆ ನೀಡಿ, Broadcasting In India ಎಂಬ ಗ್ರಂಥವನ್ನು ಪ್ರಕಟಿಸಿ ಅದರಲ್ಲಿ ಆಕಾಶವಾಣಿಯ ಅವ್ಯವಹಾರ್ಯ ಧೋರಣೆಗಳ ಬಗ್ಗೆ ತೀವ್ರವಾಗಿ ಬರೆದಿದ್ದಾರೆ.

ಒಬ್ಬ ಪ್ರೋಗ್ರಾಂ ಎಗ್ಸಿಕ್ಯೂಟಿವ್ ಬರೆಯಲು, ಚಿತ್ತರಿಸಲು ಸಮರ್ಥನಾಗಿದ್ದರೆ ಆತನಿಗೂ ಆಗಾಗ ಸ್ಟುಡಿಯೋದಲ್ಲಿ ಪ್ರವೇಶ ದೊರಕುವುದುಂಟು. ಆದರೆ ಕೆಲವೊಂದು ಕೇಂದ್ರಗಳಲ್ಲಿ ಒಬ್ಬ ಪ್ರೋಗ್ರಾಂ ಎಗ್ಸಿಕ್ಯೂಟಿವ್ ಅಧಿಕಾರಿಯು ಹಲವಾರು ಕಾರ್ಯಕ್ರಮಗಳನ್ನು ಬರೆದು, ಭಾಗವಹಿಸಿ, ಚಿತ್ತರಿಸುವುದರ ಜೊತೆಗೆ ಅವರು ಅಡಳಿತವನ್ನು ವಹಿಸಿಕೊಳ್ಳಬೇಕೆಂದರೆ ಅವರಿಗೆ ಇದರಿಂದ ದೊರಕುವ ಉತ್ತೇಜನವೇನು? ಎಲ್ಲಿಯ ಉತ್ತೇಜನ! ದಿಲ್ಲಿಯ ಕಿವಿಯ ವರೆಗೂ ಆತನ ಕೀರ್ತಿ ಮುಟ್ಟಿದರೆ ತಾನೆ? ಒಬ್ಬ ಎಂಜಿನಿಯರ್ ಉತ್ತಮ ಗಾಯಕನೂ ಆಗಿರಬಹುದು. ಆ ಎಂಜಿನಿಯರ್ ಸಂಗೀತ ಕಾರ್ಯಕ್ರಮವನ್ನು ಪ್ರಸಾರ ಮಾಡಿದರೆ ಉಳಿದ ಸಂಗೀತಕಾರರಂತೆ ಅವನಿಗೂ ಒಂದು ನಿರ್ದಿಷ್ಟ ಸಂಭಾವನೆ ಯಾಕೆ ದೊರೆಯಬಾರದು! ಊಹೂಂ! ಇದು ಶೋಷಣೆಯಲ್ಲವೆ? ಆಕಾಶವಾಣಿಯ ಕಣ್ಣಲ್ಲಿ ಇದು ಶೋಷಣೆ ಅಲ್ಲ. ಬೇಡಾದರೆ ಆತ ಚಿತ್ತರಿಸದೆ ಕೂಡಲಿ! ಇದು ಅವರ ಧೋರಣೆ. ಒಬ್ಬ ಪ್ರೊಡ್ಯೂಸರ್, ಒಬ್ಬ ನಿಲಯ ಕಲಾವಿದ ಒಂದು ಕಾರ್ಯಕ್ರಮವನ್ನು ಚಿತ್ತರಿಸಿದಾಗ ಅವರ ಹೆಸರನ್ನು ಆಕಾಶವಾಣಿಯ ಮೇಲೆ ಎಷ್ಟೊಂದು ಸುಲಭವಾಗಿ ಹೇಳಬಹುದೊ ಅಷ್ಟು ಸುಲಭವಾಗಿ ಒಬ್ಬ ಪ್ರೋಗ್ರಾಂ ಎಗ್ಸಿಕ್ಯೂಟವ್‌ನ ಹೆಸರು ಹೇಳಲಾಗದು. ಒಬ್ಬ ಪ್ರೋಗ್ರಾಂ ಎಗ್ಸಿಕ್ಯೂಟಿವ್, ಒಬ್ಬ ಟ್ರಾನ್ಸಿಮಿಶನ್ ಎಗ್ಸಿಕ್ಯೂಟಿವ್ ಎಂದರೆ ಆಕಾಶವಾಣಿಯ ಊಳಿಗದವರು, ಅವರಿಗೆ ಸ್ವತಂತ್ರ ಸ್ಥಾನಮಾನಗಳಿಲ್ಲ. ಆಕಾಶವಾಣಿಗೆ ಮಂತ್ರಿಗಳೋ ಬೇರೆ V. I. P. ಗಳೋ ಭೆಟ್ಟಿಕೊಟ್ಟಾಗ ಅವರಿಗೆ ತೆರೆಯ ಹಿಂದೆ ನಿಂತು ಚಹಾ ವ್ಯವಸ್ಥೆ ಮಾಡುವುದಿಷ್ಟೆ ಈ ಊಳಿಗದವರ ಕರ್ತವ್ಯ. ಆ ಚಹಾ ವೆಚ್ಚವನ್ನೂ ಒಮ್ಮೊಮ್ಮೆ ತಮ್ಮ ಕಿಸೆಯಿಂದಲೇ ಸೋಸಿ, ಆ ಮೇಲೆ ಹೋಟೆಲ್ voucher ಕೊಟ್ಟು ಆಫೀಸಿನಿಂದ ಹಣ ಪಡೆದುಕೊಳ್ಳುವ ಮಟ್ಟಿಗಷ್ಟೇ ಈ ಅಧಿಕಾರಿಗಳ ಅಧಿಕಾರ ಚಲಾವಣೆ!

ಒಂದು ಪ್ರಾದೇಶಿಕ ಕೇಂದ್ರ ಹೇಗೆ ನಡೆಯುತ್ತದೆಯೆಂಬುದು ದಿಲ್ಲಿಯಲ್ಲಿ ದರ್ಬಾರ್ ನಡೆಸುವ ಮಹಾ ಅಡಳಿತಗಾರರಿಗೇನು ಗೊತ್ತಾಗಬೇಕು? ಆ ಪ್ರಾದೇಶಿಕ ಕೇಂದ್ರದ ಮಟ್ಟಿಗೆ ಆಯಾ ನಿರ್ದೇಶಕರೇ ಸರ್ವಾಧಿಕಾರಿಗಳು. ಆಯಾ ಪ್ರಾದೇಶಿಕ ಭಾಷೆ ತಿಳಿಯಲಿ ಬಿಡಲಿ, ಆಯಾ ಪ್ರಾದೇಶಿಕ ಸಂಸ್ಕೃತಿ, ಸಾಹಿತ್ಯ, ಜನಜೀವನ ವ್ಯಕ್ತಿ ವ್ಯಕ್ತಿಗಳ ಪರಿಚಯ ಇರಲಿ ಬಿಡಲಿ, ಪ್ರಾದೇಶಿಕ ಕೇಂದ್ರಾಧಿಕಾರಿಗಳು ವಿಂಗಿನಲ್ಲಿ

ಕೆಲಸಮಾಡುವ ಪ್ರಾಮ್ಟರರ ಸಹಾಯದಿಂದ ರಂಗಭೂಮಿಯ ಮೇಲೆ ಬಣ್ಣ ಹಚ್ಚಿಕೊಂಡು ನಾಟಕ ಮಾಡುವವರು. ಹೂಮಾಲೆ ಹಾಕಿಸಿಕೊಂಡು ಫೋಟೊ ತೆಗೆಯಿಸಿಕೊಳ್ಳುವವರು! ಎಲ್ಲಾದರೂ ಏನಾದರೂ ಒಂದಿಷ್ಟು ಕೇಂದ್ರದ ಆಡಳಿತದ ವಿರುದ್ಧ, ಕಾರ್ಯಕ್ರಮಗಳ ವಿರುದ್ಧ ಕೂಗೆದ್ದರೂ ಫಾಶೀ ಹಗ್ಗ ಬೀಳುವುದು ಕಾರ್ಯಕ್ರಮ ನಿಷ್ಪಾದಕ (ಪ್ರೋಗ್ರಾಂ ಎಗ್ಜಿಕ್ಯೂಟಿವ್)ನ ಕತ್ತಿಗೇ!

ಆಕಾಶವಾಣಿಯ ಪ್ರಸಾರ ಧೋರಣೆಗಳಲ್ಲಿ ಅನಾವಶ್ಯಕವಾಗಿ ವ್ಯಕ್ತಿಗಳ, ಸಂಸ್ಥೆಗಳ, ವ್ಯಾಪಾರೀ ಹೆಸರುಗಳ ನಿರ್ದೇಶನ ಬರಕೂಡದು ಎಂಬುದೂ ಒಂದು. ಒಮ್ಮೆ ಗಮಕಿಗಳೊಬ್ಬರು ಸ್ಟುಡಿಯೋದಲ್ಲಿ ಕುಮಾರವ್ಯಾಸ ಭಾರತದಿಂದ ಆಯ್ದುಕೊಂಡ ಪದ್ಯಗಳನ್ನು ಬಿತ್ತರಿಸುತ್ತಿದ್ದರು:

'ಎಲೆ ದಿವಾಕರ ತನಯ ನಿನ್ನಯ
ಕುಲವನರಿಯೆಯಲಾ...'

ಎಂಬ ಸಾಲುಗಳನ್ನು ಪರಿಪರಿಯಾಗಿ ಗಮಕ ರೀತ್ಯಾ ವಿನ್ಯಾಸ ಮಾಡುತ್ತ ತದೇಕಚಿತ್ತರಾಗಿ ಹಾಡುತ್ತಿದ್ದರು. ತಮ್ಮ ಆಫೀಸ್ ರೂಂನಲ್ಲಿ ಕನ್ನಡ ಭಾಷೆ ತಿಳಿಯದಿದ್ದರೂ ತನ್ನ ಕರ್ತವ್ಯವೆಂದು ಪ್ರತಿಯೊಂದು ಕಾರ್ಯಕ್ರಮವನ್ನೂ ಆಥದಿಂದ ಇತಿವರೆಗೆ ಕೇಳುತ್ತಿದ್ದ ಕೇಂದ್ರಾಧಿಕಾರಿಗಳು ಧಾವಿಸುತ್ತ ನನ್ನ ಬಳಿ ಬಂದು ರೇಗಿದರು– 'What is this N. K ? Why do you allow our H. M.'S name on the AIR ? (H. M. ಎಂದರೆ Honourable Minister! ನಮ್ಮ ಮಾನ್ಯ ಮಂತ್ರಿಗಳ ಹೆಸರನ್ನೇಕೆ ಬಿತ್ತರಿಸಲು ಕೊಡುತ್ತಿದ್ದೀರಿ?) ಎಂದು ಕೋಪ ಕಂಪನಗಳೊಡನೆ ಕೇಳಿದರು. ನನಗೂ ಅರ್ಥವಾಗಲಿಲ್ಲ. ಆಮೇಲೆ ಹೊಳೆಯಿತು, 'ಎಲೆ ದಿವಾಕರ ತನಯ' ಎಂಬುದು H. M. ಅವರಿಗೆ ಸಂಬಂಧಿಸಿದುದು ಎಂದು ಅವರು ತಿಳಿದುಕೊಂಡಿದ್ದಾರೆ ಎಂದು. (ಆಗ ಮಾನ್ಯ ರಂಗರಾವ್ ದಿವಾಕರರು ಆಕಾಶವಾಣಿ ಮಂತ್ರಿಗಳಾಗಿದ್ದರು). ಆಮೇಲೆ ನಾನು ತಿಳಿಸಿ ಹೇಳಿದೆ, 'ದಿವಾಕರ ತನಯ' ಎಂದರೆ 'ಕರ್ಣ' ಎಂದು. ಆದರೂ ಅವರಿಗೆ ಸಮಾಧಾನವಾದಂತೆ ತೋರಲಿಲ್ಲ. 'Still you should not have allowed it' ಎಂದೇ ಗುಣುಗುಣಿಸುತ್ತ, ಗೊಣಗುತ್ತ ಹೋದರು.

ಇನ್ನೂ ಒಂದು ಸಂದರ್ಭ. ಧಾರವಾಡದಲ್ಲಿ ಮುದ್ರಣ ಒಡೆಯರ ಸಮ್ಮೇಳನವೊಂದು ಜರುಗಿತ್ತು. ಶ್ರೀ ಮೊಹರೆ ಹಣಮಂತರಾಯರು ಆಗ ಅದರ ಅಧ್ಯಕ್ಷರಾಗಿದ್ದರು. ಬಾನುಲಿ ವರದಿಗಾಗಿ ಈ ಕಾರ್ಯಕ್ರಮದ ಅಂಶಗಳನ್ನು ಧ್ವನಿಮುದ್ರಿಸುವುದೆಂದು ಗೊತ್ತಾಗಿತ್ತು. ಸ್ವಾಗತ ಗೀತೆಯಲ್ಲಿ ಮೊಹರೆ ಹಣಮಂತರಾಯರ ಬಗ್ಗೆ ಮೆಚ್ಚಿಗೆ ಇದೆಯೆಂದು ತಿಳಿದಾಗ ಆ ಬಗೆಯ ವೈಯಕ್ತಿಕ ವಿಷಯವನ್ನು ಧ್ವನಿಮುದ್ರಿಸಿಕೊಳ್ಳುವುದು ಬೇಡವೆಂದು ಆಜ್ಞಾಪಿಸಲಾಗಿತ್ತು. ಸರಿ, ಕಾರ್ಯಕ್ರಮ 'ಉದಯವಾಗಲಿ' ಗೀತೆಯೊಂದಿಗೆ ಪ್ರಾರಂಭವಾಯಿತು. ಗೀತೆಯ ಧ್ವನಿಮುದ್ರಣ ನಡೆದಿತ್ತು. 'ಆ ಜಲಧಿಯನೆ ಜಿಗಿದ ಹನುಮ ನುಡಿಸಿದ ಬೀಡು' ಎಂಬ ಸಾಲು ಮುಗಿದಿತ್ತೊ ಇಲ್ಲವೊ ಮುಖ್ಯಾಧಿಕಾರಿಗಳು ಧ್ವನಿಮುದ್ರಣ ಸ್ಥಳಕ್ಕೆ ನೆಗೆದು, ಬಂದು 'What is this ? I have told you not to recored Moharay Hanumantrao...' ಎಂದು ರೇಗಿದರು. ಭಾಷೆ, ಪ್ರಾದೇಶಿಕ ಇತಿಹಾಸ ಗೊತ್ತಿರದ ಅಧಿಕಾರಿಯೊಬ್ಬ ಬಂದರೆ ಆಕಾಶವಾಣಿ ಕೇಂದ್ರದ ಆಡಳಿತದ ಹಣೆಬರೆಹ ಇಷ್ಟೆ.

ನಾನು ಮುಂಬಯಿ ಆಕಾಶವಾಣಿಯಲ್ಲಿದ್ದಾಗ, ೧೯೪೬ ರ ಸಪ್ಟೆಂಬರ್‌ನಲ್ಲಿ ಜಿನ್ನಾ ಅವರ ಡೈರೆಕ್ಟ ಆ್ಯಕ್ಶನ್ ಪರಿಣಾಮವಾಗಿ ಮಹಾನಗರದ ಕೆಲವಾರು ಪ್ರದೇಶಗಳಲ್ಲಿ ಕರ್ಫ್ಯೂ ಆಜ್ಞೆ ಜಾರಿಗೆ ಬಂತು. ಕೆಲವೆಡೆಗಳಲ್ಲಿ ಕೆಲವೊಂದು ಅವಧಿಯವರೆಗೆ ಕರ್ಫ್ಯೂ ಎಂಬ ಮ್ಯಾಜಿಸ್ಟ್ರೇಟ್ ಆಜ್ಞೆಯ ವಿವರಗಳನ್ನು ಆಕಾಶವಾಣಿಯಲ್ಲಿ ಬಿತ್ತರಿಸಬೇಕಾಗಿ ಪೋಲೀಸ್ ಅಧಿಕಾರಿಯಿಂದ ಫೋನ್ ಬಂತು. ಅದರಲ್ಲಿ ಒಂದು ಕ್ಷೇತ್ರದ ಗಡಿ ಮೆಟ್ರೊ ಥಿಯೇಟರ್ ಎಂದಿತ್ತು. ಛೆ. ಛೆ. ಆಕಾಶವಾಣಿಯಲ್ಲಿ ಖಾಸಗಿ ಸಂಸ್ಥೆಯ ಹೆಸರು ಹೇಳಕೂಡದು! ಡ್ಯೂಟಿ ಆಫೀಸರ್ ಅದು ಸಾಧ್ಯವಿಲ್ಲ ಎಂದು

ಹೇಳಿದರು. ಆಕಾಶವಾಣಿ ನಿಯಮವೆಂದರೆ ವೇದವಾಕ್ಯ! ಆಯ್ತು. ಆಮೇಲೆ ಆ ಪೋಲೀಸ್ ಅಧಿಕಾರಿ ಮೇಲಿನ ಅಧಿಕಾರಿಗಳ ಜೊತೆ ಚರ್ಚೆ ನಡೆಸಿ ಕೊನೆಗೆ ಹೇಗೊ ಅದನ್ನು ಹೇಳಿಸಿದರು.

ಆಕಾಶವಾಣಿಯ ನಿಯಮಗಳೆ ಒಂದಿಷ್ಟು ವಿಚಿತ್ರ ಎನ್ನಬೇಕು. ಅವನ್ನು ಅನ್ವಯಿಸಿ ಕಾರ್ಯಾಚರಣೆಯಲ್ಲಿ ತರುವ ಅಧಿಕಾರಿಗಳ ಬುದ್ಧಿವಂತಿಕೆ ಅವಕ್ಕೂ ವಿಚಿತ್ರ. ೧೯೪೮ರಲ್ಲಿ ಗಾಂಧೀಜಿ ಕೊಲೆ ನಡೆದ ಮೇಲೆ ಕೆಲವಾರು ತಿಂಗಳು ಪ್ರತಿ ದಿನದ ಕಾರ್ಯಕ್ರಮಗಳಲ್ಲಿ ಒಂದಿಲ್ಲೊಂದು ರೀತಿ ಗಾಂಧೀಜಿ ಬಗ್ಗೆ ಗೀತಗಳು, ಭಾಷಣ ಸಂಭಾಷಣೆಗಳು ಇದ್ದೇ ಇರುತ್ತಿದ್ದವು. ಕೆಲ ಕಾಲ ಇದು ಹೀಗೆಯೇ ನಡೆದ ಮೇಲೆ, ಗಾಂಧೀಜೀ ಬಗ್ಗೆ ಇಷ್ಟೊಂದು ಅತಿಯಾಗಿ ಕಾರ್ಯಕ್ರಮಗಳು ಬೇಡ; ಆಗಾಗ ವಿಶೇಷ ಸಂದರ್ಭಗಳಲ್ಲಿ ಮಾತ್ರ ಇರಲಿ ಎಂದು ಆಜ್ಞೆ ಬಂತು. ಅದರ ಉದ್ದೇಶ ಗಾಂಧೀಜಿ ಹೆಸರು ಬಹಳ ಅಗ್ಗವಾಗಕೂಡದು ಎಂದು. ಸರಿ. ಹೀಗೆ ಒಮ್ಮೆ ಆಜ್ಞೆ ಹೊರಟಿತೊ, ಹಳ್ಳಿಯ ಕಾರ್ಯಕ್ರಮಗಳ ಅಧಿಕಾರಿಯೊಬ್ಬರು ನಮಗೆಲ್ಲ ಇನ್ನು ಮೇಲೆ ಗಾಂಧೀಜಿ ಬಗ್ಗೆ ಕಾರ್ಯಕ್ರಮಗಳು ಕೂಡದು ಎಂದು ಹೇಳಿದರು. ಮುಂದಿನ ವಾರದಲ್ಲಿ ಗಾಂಧೀಜಿ ಬಗ್ಗೆ ಲಾವಣಿ ಶೆಡ್ಯೂಲ್ ಆಗಿತ್ತು. ಈ ಸ್ವರಚಿತ ಲಾವಣಿ ಹೇಳುವವರು ಮಂಗಳೂರು ಕಡೆಯ ಒಬ್ಬ ಪ್ರಭಾವಿ ವ್ಯಕ್ತಿ. ನಮ್ಮ ಮೇಲಧಿಕಾರಿಗಳು ಅವರಿಗೆ ಕೂಡಲೆ ಪತ್ರ ಬರೆದರು– 'Since songs on Gandhiji have now been banned from this station, you are reqested kindly to substitute...' ಎಂದು ಮೊದಲಾಗಿ. ಆ ಪ್ರಭಾವಿ ವ್ಯಕ್ತಿ ನೇರವಾಗಿ ದಿಲ್ಲಿಗೇ ಟ್ರಂಕ್ ಕಾಲ್ ಸಂಪರ್ಕ ಬೆಳೆಸಿದರು. ಮರ ಕ್ಷಣವೆ ಮುಂಬಯಿಗೆ ಟ್ರಂಕ್ ಕಾಲ್ ಬಂತು. ಅಧಿಕಾರಿಯ ಜನ್ಮನದ ಹೂರಣ ಹೊರ ಬಿತ್ತು. ಆದರೂ ಆಕಾಶವಾಣಿಯ ಪ್ರತಿಷ್ಠೆಯೊಂದಿರುತ್ತದಲ್ಲ! ನನ್ನನ್ನು ಕರೆಕಳಿಸಿ ಆ ಗೀತದಲ್ಲಿ ಒಂದೆರಡಾದರೂ objectionable ಸಾಲುಗಳನ್ನು ಹುಡುಕಿಕೊಡಲು ಹೇಳಿದರು! ಆಮೇಲೆ ಈ ಅಧಿಕಾರಿಗೇನಾಯಿತು? ಎಂದು ಕೇಳಬೇಡಿ. ಅವರೂ ಪ್ರಭಾವಿ ವ್ಯಕ್ತಿಯೇ ಆಗಿದ್ದರು!

ಆಕಾಶವಾಣಿಯೆಂದರೆ ಸರಕಾರೀ ಪ್ರಚಾರ ಸಾಧನ. ಸರಕಾರೀ ಶಂಖ! ಈಗೀಗ ಈ ಒಮ್ಮೊಗದ ಧೋರಣೆ ಬದಲಾಗಿ ಒಂದಿಷ್ಟು ಭಿನ್ನಾಭಿಪ್ರಾಯಗಳಿಗೂ ಅವಕಾಶ ದೊರಕುತ್ತಿದೆ. ಇದು ಒಳ್ಳೆಯ ಲಕ್ಷಣ. ಆದರೂ ಹಲವಾರು ಜಯಂತಿ, ಪುಣ್ಯತಿಥಿಗಳು ಇನ್ನೂ ನಿಂತಿಲ್ಲ. ಪುಣ್ಯತಿಥಿಗಳ ಹಿಂದೆ ಒಂದು ಶ್ರದ್ಧೆ ಇರದಿದ್ದರೆ ಅದು ಕೇವಲ ಶ್ರಾದ್ಧದ ಮಟ್ಟಿಗೆ ನಡೆಯುವ ಪುಣ್ಯತಿಥಿಯಾಗುತ್ತದೆ.

ಇನ್ನು ಸಪ್ತಾಹಗಳಿಗೂ, ಪಾಕ್ಷಿಕಗಳಿಗೂ ಎಣೆಯೇ ಇಲ್ಲ. ಕುಟುಂಬ ಯೋಜನೆ ಸಪ್ತಾಹ, ಪಾಕ್ಷಿಕ, ಮಾಸಗಳನ್ನೂ ಮೀರಿ ಈಗ ಕಾಯಂ ಹನ್ನೆರಡೂ ತಿಂಗಳ ಆಚರಣೆಯ ಅಂಗವಾಗಿ ಬಿಟ್ಟಿದೆ. ಸೊಣಗಳ ನಿರ್ಮೂಲನ ಸಪ್ತಾಹದಿಂದ



ಮಾನ್ಯ ಸಂಪಾದಕರೇ. ನಾನು ಬರೆದ ಜೇಮ್ಸ್-ಬಾಂಡ್ ಕಥೆಯನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೀರೋ ಇಲ್ಲವೋ...

ಜನಪ್ರಿಯ ಸ್ಪರ್ಧೆ

ಪ್ರವೇಶ ಶುಲ್ಕವಿಲ್ಲ-ನೀವು ಒಂದು ಬಹುಮಾನ ಗೆಲ್ಲಬೇಕು

ಮೊದಲನೆ ಬಹುಮಾನ : ಒಂದು ವೆಸ್ಪ ಸ್ಕೂಟರ್ ಅಥವಾ ಆಲ್ವಿನ್ ರೆಫ್ರಿಜರೇಟರ ೨ನೇ ಬಹುಮಾನ : ಒಂದು ಟೇಪ್ ರಿಕಾರ್ಡರ ಅಥವಾ ಅಟೋಮ್ಯಾಟಿಕ ಕ್ಯಾಮರಾ ಅಥವಾ ರೇಡಿಯೋ ಗ್ರಾಂ. ೩ನೇ ಬಹುಮಾನ (೧೦೦) ಟೋಯೋ ಮಾಡೆಲ್ ಜಪಾನ್ ೩ ಬ್ಯಾಂಡ್ ಆಲ್‌ವರ್ಲ್ಡ ಟ್ರಾನ್ಸಿಸ್ಟರ್ ಬೆಲೆ : ರೂ. ೨೭೫ ೪ನೇ ಬಹುಮಾನ (೧೦) ಟೋಯೋ ಜೂನಿಯರ ಜಪಾನ ಮಾದರಿಯ ೩ ಬ್ಯಾಂಡ್ ಆಲ್‌ವರ್ಲ್ಡ ಟ್ರಾನ್ಸಿಸ್ಟರ್ ಬೆಲೆ : ರೂ. ೨೫೦

ನೀವು ಮಾಡಬೇಕಾದ್ದೇನು ?

ಸಂಖ್ಯೆ ೯ (ಒಂಭತ್ತು) ರಿಂದ ೨೪ (ಇಪ್ಪತ್ನಾಲ್ಕು) ರ ವರೆಗೆ ಒಂದು ಸಂಖ್ಯೆಯನ್ನು ಒಂದು ಸಲ ಉಪಯೋಗಿಸಿ ಅಡ್ಡಡ್ಡವಾಗಿ, ಮೇಲಿನಿಂದ ಕೆಳಕ್ಕೆ ಮೂಲೆಯಿಂದ ಮೂಲೆಗೆ ಯಾವ ರೀತಿ ಕೂಡಿಸಿದರು ಒಟ್ಟು ೬೬ (ಅರವತ್ತಾರು) ಬರುವಂತೆ ತುಂಬಬೇಕು.

ಪ್ರವೇಶ ಶುಲ್ಕ : ಪ್ರವೇಶ ಶುಲ್ಕ ಇಲ್ಲ. ಇದು ಜನಪ್ರಿಯ ಸ್ಪರ್ಧೆ

ಕಡೇ ತಾರೀಖು : ೨೯-೫-೬೩. **ಫಲಿತಾಂಶ : ೩೧-೫-೬೩**

ಸಹಾಯದ ನಮೂನೆ ಒಟ್ಟು ೬೨.

೧೨	೧೫	೧೮	೧೭
೧೯	೧೬	೧೩	೧೪
೨೧	೨೨	೧೧	೮
೧೦	೯	೨೦	೨೩

ಸ್ಪರ್ಧೆ ನಿಯಮಗಳು : (೧) ಎಂಟ್ರಿಗಳನ್ನು ಕಳುಹಿಸಲು ಖಾ ಕಾಗದ ಉಪಯೋಗಿಸಿರಿ. (೨) ತಿದ್ದಿದ, ಹೊಡೆದುಹಾಕಿದ ಪ್ರವೇ ಗಳನ್ನು ಅಂಗೀಕರಿಸುವುದಿಲ್ಲ. (೩) ಪ್ರೊಮೋಟರುಗಳ ತೀರ್ಮಾನವೆ ಅಖೈರಾದದ್ದು ಹಾಗೂ ಕಾನೂನುಬದ್ಧ ಅನ್ವಯಿಸುತ್ತದೆ. (೪) ಅಧಿಕಾ ಯುತ ಸೀಲಾದ ಉತ್ತರಕ್ಕೆ ಸರಿ ಹೋಗುವ ಉತ್ತರ ಸರಿ ಎಂದ ಪರಿಗಣಿಸಲಾಗುವುದು. (೫) ಮೊದಲನೇ ಬಹುಮಾನ : [೧] ಅಧಿಕೃ ಉತ್ತರಕ್ಕೆ ಸರಿಸಮಾನವಾಗಿರುವುದಕ್ಕೆ ಕೊಡಲಾಗುವದು. (೬) ೨ನೇ ಬಹುಮಾನ (೧)ಮೇಲಿನ ಮೂರ ಅಡ್ಡ ಸಾಲುಗಳು ಸರಿಸಮಾನವಾಗಿದ್ದಲ್ಲಿ ಕೊಡಲಾಗುವುದು. (೭) ೩ನೇ ಬಹುಮಾನ (೧೦೦) ಯಾವುದ ಸಾಲು ಯಾವುದೇ ಅಂಕಿ ಎಲ್ಲಿಯೇ ಸರಿಸಮಾನವಿದ್ದಲ್ಲಿ ಕೊಡಲಾಗುವುದು. (೮) ೪ನೇ ಬಹುಮಾನ (೧೦ ಡ್ರಾನಲ್ಲಿ ಪ್ರೊಮೋಟರಿಗೆ ತೃಪ್ತಿಯಾಗಿ ಕಂಡು ಬಂದವರಿಗೆ ನೀಡಲಾಗುವುದು. (೯) ಬಹುಮಾನಿತರ ಅಂಚೆ ವೆಚ್ಚ, ಪ್ಯಾಕಿಂಗ್, ಲೈಸೆನ್ಸ ಫೀ ಮುತಾದುವುಗಳನ್ನು ಭರಿಸಬೇಕಾಗುವುದು. (೧೦) ೩ನ ಮತ್ತು ೪ನೇ ಬಹುಮಾನಿತರು ಈ ವೆಚ್ಚಗಳ ಜೊತೆಗೆ ಟ್ರಾನ್ಸಿಸ್ಟರು ಬೆಲೆಯ ಅರ್ಧದಷ್ಟು ಸ ಕೊಡಬೇಕಾಗುವುದು. (೧೧) ಫಲಿತಾಂಶ ಕಳುಹಿಸಲು ೪೫ ಪೈಸೆ ಸ್ಟಾಂಪ ಕಳುಹಿಸಿರಿ. (೧೨) ನಿವ ವಿಳಾಸವನ್ನು ಇಂಗ್ಲೀಷ ಅಥವಾ ಹಿಂದಿಯಲ್ಲಿ ಬರೆಯಿರಿ. (೧೪) ಒಂದು ಕುಟುಂಬದಲ್ಲಿ ಒಂದೇ ಪ್ರವೇ ಪತ್ರ ಕಳುಹಿಸಬಹುದು. ಅಪೂರ್ವ (೧೫) ಮುಂದಕ್ಕೆ ಬೇಕಾಗುವುದರಿಂದ ನಿಯಮಗಳನ್ನು ಕತ್ತರಿ ಇಟ್ಟುಕೊಳ್ಳಿರಿ. (೧೬) ಫಲಿತಾಂಶ ಪ್ರಕಟವಾದ ಕೂಡಲೇ ಜಯಶಾಲಿಗಳಿಗೆ ತಿಳಿಸಲಾಗುವದು ಮತ್ತ ಅವರು ಡೆಪಾಜಿಟ್, ಲೈಸೆನ್ಸ ಫೀ ಕೊಡಬೇಕಾಗುವದು.

Director-Contest Department

MUSIC & SOUND (M-66)

ಮೊದಲ್ಗೊಂಡು ಕೈಮುಗ್ಗ ಸಪ್ತಾಹದವರೆಗೆ ನಡೆಯುತ್ತಿರುವುದು ಬರಿ ಪ್ರಚಾರ. ಅದರಲ್ಲೂ ಗ್ರಾಮಾಂತರ ಕಾರ್ಯಕ್ರಮಗಳಂತೂ ತೀರಿಯೆ ಹೋಯಿತು. 'ಹೈಬ್ರಿಡ್'ನಿಂದ ಡಿ. ಡಿ. ಟಿ. ವರೆಗೆ ಎಲ್ಲವೂ ಪ್ರಚಾರ, ಪ್ರಚಾರ! ಆಕಾಶ ವಾಣಿಯಲ್ಲಿ ಕಮರ್ಶಿಯಲ್ ಬ್ರಾಡ್‌ಕಾಸ್ಟಿಂಗ್ ಪ್ರಾರಂಭವಾದ ನಂತರ ಒಬ್ಬ ಮಹನೀಯರು ಹೇಳಿದರು, "ಇನ್ನು ಯಾವ ಕಾರ್ಯಕ್ರಮ ಕೇಳೋಣ? 'A' ಚಾನಲ್ ಮೇಲೆ ಸರಕಾರದ ಜಾಹೀರಾತು, 'B' ಚಾನಲ್ ಮೇಲೆ ಕಮರ್ಶಿಯಲ್ ಜಾಹೀರಾತು!" ಎಂದು.

ನಮ್ಮಲ್ಲಿ ರೇಡಿಯೋ ಪ್ರಜ್ಞೆ ಇನ್ನೂ ಬೆಳೆದಿಲ್ಲವೆಂದೇ ಆಕಾಶವಾಣಿಯ ಧೋರಣೆಯಲ್ಲಿ ಹೆಚ್ಚಿನ ಡೆಮೊಕ್ರ್ಯಾಟಿಕ್ ಬದಲಾವಣೆ ಕಂಡು ಬರುತ್ತಿಲ್ಲ. 'You get the radio programmes you deserve' ಎಂದು ಹೇಳಬೇಕಾಗುತ್ತದೆ. ಎಂತಹ ಕಾರ್ಯಕ್ರಮಗಳನ್ನೂ ನಾವು ಸಹನೆಯಿಂದ ಕೇಳುತ್ತೇವೆ. ಎಂತಹ ಅನ್ಯಾಯಗಳನ್ನೂ ತಾಳ್ಮೆಯಿಂದ ತಡೆದುಕೊಳ್ಳುತ್ತೇವೆ. ಎತ್ತಿನ ಕೊರಳಲ್ಲಿ ಟ್ರಾನ್ಸಿಸ್ಟರ್ ಕಟ್ಟುವಷ್ಟು ನಮ್ಮ ರೈತರು ಶ್ರೀಮಂತರಾಗಿದ್ದಾರೆ. ಆದರೆ ಕಾರ್ಯಕ್ರಮಗಳನ್ನು ವಿಮರ್ಶಿಸುವಷ್ಟು ಬುದ್ಧಿವಂತರಾಗಿಲ್ಲ.

ರೇಡಿಯೋ ಕಾರ್ಯಕರ್ತನ ಬೇಸರದ ಜೀವನದಲ್ಲಿ ಒಂದೊಂದು ಸ್ವಾರಸ್ಯ ಆಗಾಗ್ಗೆ ಒದಗಿ ಅವನ ಬದುಕನ್ನು ಸಹ್ಯವಾಗಿ ಮಾಡುವುದುಂಟು. ಒಮ್ಮೆ ನಾನು ಒಂದು ಮಗುವನ್ನು ರೇಡಿಯೋದಲ್ಲಿ ಸಂದರ್ಶಿಸುತ್ತಿದ್ದೆ. "ಮಗೂ ನಿನಗೆಷ್ಟು ವರ್ಷ?" ಎಂದು ಪ್ರಶ್ನಿಸಿದ್ದಕ್ಕೆ ಮಗು ಸುಮ್ಮನೆ ಮೂಲೆಯಲ್ಲಿ ನಿಂತಿದ್ದ ತನ್ನ ತಾಯಿಯ ಮುಖ ನೋಡತೊಡಗಿತು. ನಾನು ಮತ್ತೊಮ್ಮೆ ಪ್ರಶ್ನಿಸಿದೆ, 'ಹೇಳಪ್ಪ ನಿನಗೆ ಎಷ್ಟು ವರ್ಷ?" ಮಗು ಮತ್ತೆ ತಾಯಿಯ ಮುಖ ನೋಡಿತು. ತಾಯಿ ನಾಲ್ಕು ಬೆರಳು ಮಾಡಿ ಮಗುವಿಗೆ ನಾಲ್ಕು ವರ್ಷ ಎಂಬ ಸಂಜ್ಞೆ ನೀಡಿದಳು. ಸರಿ, ತನಗೆಷ್ಟು ವರುಷ ಎಂಬುದನ್ನು ಮಗುವೂ ಮೈಕ್ರೊಫೋನ್ ಮುಂದೆ ನಾಲ್ಕು ಬೆರಳೆತ್ತಿ ತೋರಿಸಿತು.

ಕೆಲ ಪ್ರಬುದ್ಧರೂ ಈ ಮಗುವಿಗಿಂತ ಬಹಳ ಹಿಂದಿರುವುದಿಲ್ಲ. ರೇಡಿಯೋದಲ್ಲಿ ನಡೆಯಬೇಕಾದುದೆಲ್ಲವೂ ಶಬ್ದ ದ್ವಾರಾ. ರೇಡಿಯೋ ನಾಟಕದಲ್ಲಿ ಎಲ್ಲ ಅಭಿನಯವೂ ವಾಚಿಕಾಭಿನಯವಾಗಿಯೇ ಮಾರ್ಪಡಬೇಕಾಗುತ್ತದೆ. ಈ ಒಂದು ಹೊಸ ಪ್ರಜ್ಞೆ ಕೇಳುಗರಲ್ಲೂ ಬೇಕು, ಕಲಾವಿದರಲ್ಲೂ ಬೇಕು. ಒಮ್ಮೆ ಒಬ್ಬ ಮಹಾ ಮಹನೀಯರು ತಮ್ಮ ಪ್ರಥಮ ಪ್ರಸಾರ ಭಾಷಣ ಮಾಡಲಿದ್ದರು. 'ಕೆಂಪು ದೀಪ ಬಂದ ಕೂಡಲೇ ನಿಮ್ಮ ಭಾಷಣ ಸುರು ಮಾಡಿರಿ' ಎಂದು ರಿಹರ್ಸಲ್‌ನಲ್ಲಿ ಅವರಿಗೆ ಹೇಳಲಾಗಿತ್ತು. ಕೆಂಪು ದೀಪ ಬಂತು. 'ಸುರು ಮಾಡಲ್ಯಾ?' ಎಂದು ಕೇಳಿದರು! ನಾನೂ 'ಹೂಂ' ಎಂದೇ ಉತ್ತರಿಸಿದ್ದರೆ ಇನ್ನೂ ಅವಾಂತರವಾಗುತ್ತಿತ್ತು. ನಾಟಕ ಕಲಾವಿದರೊಬ್ಬರು ಹೂಂ! ಎಂದು ಉತ್ತರಿಸುವಲ್ಲಿ ಬರಿ ಗೋಣು ಹಾಕಿದ್ದರು. ಅದರಿಂದ ಕೇಳುಗನಿಗೇನು ಅರ್ಥವಾಗಬೇಕು? ರೇಡಿಯೋ ನಾಟಕದಲ್ಲಿ ವನವಾಸಕ್ಕೆ ತೆರಳಲಿರುವ ರಾಮ–ಲಕ್ಷ್ಮಣರು ಸೂಟು ಹಾಕಿಕೊಂಡು ಬಂದರೆ ನಡೆಯುತ್ತದೆ. ಬೂಟು ಹಾಕಿಕೊಂಡು ಬರಕೂಡದು–ಎಂದು ನಾನೊಮ್ಮೆ ಹೇಳಿದ್ದೆ. ವನವಾಸಕ್ಕೆ ಹೊರಟ ಶ್ರೀರಾಮಚಂದ್ರ ಪಾದುಕೆ ಬಿಟ್ಟು ಬೂಟು ಹಾಕಿಕೊಂಡಿದ್ದನೇ? ಎಂದು ಪ್ರಶ್ನಿಸುವ ಚಾಣಾಕ್ಷ ಕೇಳುಗರೂ ಇರಬಹುದು.

ನಮ್ಮ ಕೇಳುಗರಲ್ಲಿ, ನಮ್ಮ ರೇಡಿಯೋ ಬರೆಹಗಾರರಲ್ಲಿ ಈ ಒಂದು ರೇಡಿಯೋ ಪ್ರಜ್ಞೆ ಇನ್ನೂ ಬೆಳೆಯಬೇಕಾಗಿದೆ. ನಮ್ಮ ಮಂತ್ರಿಗಳು, ನಮ್ಮ ಶಾಸಕರು ಸಹ ರೇಡಿಯೋದಲ್ಲಿ ಮಾತಾಡುವುದು ಹೇಗೆ ಎಂಬುದನ್ನು ಸಾಧಿಸಬೇಕಾಗಿದೆ. ಮಂತ್ರಿಗಳ ಭಾಷಣಗಳೆಂದರೆ ನನಗಂತೂ ವಿಚಿತ್ರ ಅನುಭವಗಳು ಬಂದಿವೆ. ಮಂತ್ರಿಗಳಿಗೆ ತಮ್ಮ ಭಾಷಣಗಳನ್ನು ಬರೆಯಲೂ ಸವಡು ಇರುವುದಿಲ್ಲ, ರಿಹರ್ಸಲ್ ಮಾಡಲೂ ಪುರುಸೊತ್ತಿರುವುದಿಲ್ಲ. ನೇರವಾಗಿ ಸ್ಟುಡಿಯೋಕ್ಕೇ ನುಗ್ಗುತ್ತಾರೆ. ಈಗೀಗ ಟೇಪ್ ರೆಕಾರ್ಡಿಂಗ್ ಸೌಕರ್ಯದಿಂದಾಗಿ ಮಂತ್ರಿಗಳು ಏನು ತಪ್ಪು ಮಾಡಿದರೂ ರೇಡಿಯೋದವರು ಸುಧಾರಿಸುತ್ತಾರೆ ಎಂಬುದೊಂದು ಪ್ರಜ್ಞೆ ಅವರಿಗೆ ಮೂಡಿದೆ. ಆದರೆ

ಮಂತ್ರಿಗಳ ಕೆಮ್ಮು, ಮಂತ್ರಿಗಳ Pause ಗಳನ್ನು ತಿದ್ದಲು ಹೇಗೆ ಸಾಧ್ಯವೋ ಹಾಗೆ Dalai lama, ಎಂದಿದ್ದುದನ್ನು 'Dalmia' ಎಂದು ಓದಿಬಿಟ್ಟರೆ ಅದನ್ನು ಹೇಗೆ ತಿದ್ದುವುದು? ಆದರೂ 'ಅದನ್ನಿಷ್ಟು ಸರಿಪಡಿಸಿಬಿಡ್ರಿ!' ಎಂದು ಹೇಳಿ ನಡೆದೇ ಬಿಡುತ್ತಾರೆ.

ಭಾಷಣಕಾರರು ಮರುಪ್ರಶ್ನೆ ಮಾಡದೆ ಆಕಾಶವಾಣಿಯ ಹಲಕೆಲವು ವಿಚಿತ್ರ ನಿಯಮಗಳನ್ನು ಪಾಲಿಸಬೇಕಾಗುವುದು. ಇಂತಹ ನಿಯಮಗಳನ್ನು ನೆನೆದು ನಮ್ಮ ಭಾಷಣಕಾರರು ಎಷ್ಟೊಂದು ಸಹನೆ ತೋರುತ್ತಿದ್ದಾರಲ್ಲ ಎಂದು ನನಗೆ ಆಗಾಗ ಎನಿಸದೆ ಇಲ್ಲ. (ಅದೂ ಆಕಾಶವಾಣಿಯವರು ಕೊಡುವ ಇಪ್ಪತ್ತೈದು ರೂಪಾಯಿಗಳಿಗೆ!) ೧೯೬೨ರಲ್ಲಿ ಚೀನಾದವರು ಅತಿಕ್ರಮಣ ಮಾಡಿದಾಗ ಅದು ಭಾರತ-ಚೀನಾ ಯುದ್ಧ ಎಂದು ಹೇಳುವಂತಿರಲಿಲ್ಲ. ಅದು ಬರಿ 'ತಿಕ್ಕಾಟ,' 'ಘರ್ಷಣೆ,' 'ಅತಿಕ್ರಮಣ' ಮಾತ್ರವಾಗಿತ್ತು. ೧೯೬೫ರಲ್ಲಿ ಪಾಕಿಸ್ತಾನದವರು ಕಾಲು ಕೆದರಿ ಕಾಳಗ ಹೂಡಿದ್ದರೂ ಅವರು ನಮ್ಮ ವೈರಿಗಳು ಎಂದು ಹೇಳುವಂತಿರಲಿಲ್ಲ. ನಮ್ಮ ನೆರೆ ರಾಷ್ಟ್ರದವರು ಎಂದೇ ಪಾಕಿಸ್ತಾನೀಯರನ್ನು ಸಂಬೋಧಿಸಬೇಕಿತ್ತು. ಪಂಚವಾರ್ಷಿಕ ಯೋಜನೆಗಳಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಾಗಲಿ, ಖಾಸಗಿ ಕ್ಷೇತ್ರದಲ್ಲಾಗಲಿ ಸರಕಾರದ ಶೈಥಿಲ್ಯದ ಮನೋಧೋರಣೆಯನ್ನು ಟೀಕಿಸ ಕೂಡದು. ಈಗೀಗ ಮಾತ್ರ ಸಮಾಜ-ಸಮತಾವಾದದತ್ತ, ಗರೀಬಿ ಹಟಾವೋದತ್ತ, ಮುನ್ನಡೆ
ದಿರುವ ನಮ್ಮ ಸರಕಾರ ಎಲ್ಲೆಲ್ಲಿ ಎಡಹಿದೆ ಎಂ
ಬಗ್ಗೆ ಅಭಿಪ್ರಾಯಗಳನ್ನು ಮುಕ್ತಮನಸ್ಸಿನಿಂ
ವ್ಯಕ್ತಪಡಿಸಬಹುದು ಎಂಬ ನಿರ್ದೇಶನವಿದ್ದರ
ಆಕಾಶವಾಣಿ ಕೇಂದ್ರದ ಆಡಳಿತಗಾರರಿಗೆ ಸ
ಕ್ಕಿಂತ ಸೌಮ್ಯ ಧೋರಣೆಯೆ ಪ್ರಶಸ್ತವಾ
ತೋರುತ್ತದೆ.

ಆಕಾಶವಾಣಿಯ ಕಾರ್ಯಕ್ರಮಗ
ಎಷ್ಟೊಂದು ಕಲ್ಪನಾಶೀಲ, ಸೃಜನಾತ್ಮಕವಾಗಿ
ತ್ತವೆಯೆಂಬುದಕ್ಕೆ ಅದರ ರಸಹೀನ ಅನೌನ್ಸ
ಮೆಂಟುಗಳೇ ಸಾಕ್ಷಿ. ಒಮ್ಮೆ ಒಂದು ಪಾಶ್ಚಾ
ಸಂಗೀತ ಕಾರ್ಯಕ್ರಮ ನಡೆದಿತ್ತಂತೆ. ಶ್ರೋ
ಗಳಿಗೆ ಅದೊಂದು ಸ್ವರ್ಗೀಯ ಗಳಿಗೆಯೆನಿ
ಬಿಟ್ಟಿತ್ತು. ಕಾರ್ಯಕ್ರಮದ ಕೊನೆಯ
ಭಾವನಾಶೀಲ, ರಸಿಕ ಅನೌನ್ಸರ್ ಮಾಮೂ
ಲಿಯ ಅನೌನ್ಸಮೆಂಟ್ ಕೊಡದೆ, "Th
enchanting hour is over' ಎಂ
ಹೇಳಿದನಂತೆ. ಮರುದಿನ ಮೇಲಧಿಕಾರಿಯ
ದಾರಿ ಬಿಟ್ಟು ಅನೌನ್ಸ್ ಮಾಡಿದ ಆ ಬಡಪಾ
ಯನ್ನು ತರಾಟೆಗೆ ತೆಗೆದುಕೊಂಡನಂತೆ.
ಅನುಭವವನ್ನು ದಿ. ವಿಕ್ಟರ್ ಪರಂಜ್ಯೋ
ಅವರು ತಮ್ಮ ಸ್ಮೃತಿಗಳಲ್ಲಿ ಹೇಳಿದ್ದಾರೆ.

ಆಕಾಶವಾಣಿ ಈ ಒಂದು repeatin
groove ನಿಂದ ಹೊರಬಂದಾಗಲೇ ನಿಜವಾ
ಪ್ರಜಾಸತ್ತೆಯ ಪ್ರಜ್ಞೆಯ ವಿಕಾಸಕ್ಕೆ ಅವಕಾ
ಅದು ವರೆಗೆ ಆಕಾಶವಾಣಿ ಎಂದರೆ H
Master's Voice ಧ್ವನಿಮುದ್ರಿ
ಇದ್ದಂತೆ.



ಲೇಖಕ

ತಮ್ಮ ವಿಫಲ ಸರಕಾರಗಳನ್ನು ಮಾತ್ರವಲ್ಲ, ಪುಕ್ಕತನದಿಂದ ತೇಜೋವಧೆಗೆ ಕಲೆಯೊಡ್ಡುವ ಜನರನ್ನೂ ವಿಮರ್ಶಿಸುವ ಹಕ್ಕು ಲೇಖಕರಿಗಲ್ಲದಿದ್ದರೆ ಇನ್ನಾರಿಗಿದೆ? ನಿಂತಲ್ಲಿ ನಿಲ್ಲಲಾಗದ ಯುವಕರನ್ನು ಮತ್ತು ತಮ್ಮ ಕತ್ತಿ ಹಿರಿದು ಮೆರೆಯುವ ಯುವಕರನ್ನು ವಿಮರ್ಶಿಸುವವರಾರು?

ಅಲೆಗ್ಸಾಂಡರ್ ಸೋಲ್ಝೆನಿತ್ಸಿನ್

ಬದರೀನಾಥ

ಯುರೋಪಿನಲ್ಲಿ ಅಪೂರ್ವ ಬದಲಾವಣೆ

ನಮ್ಮ ದೇಶದಲ್ಲೂ ಒಂದು ಕಾಲಕ್ಕೆ ಬಂಗಾರದ ಹೊಗೆ ಹಾಯುತ್ತಿತ್ತು ಎಂದು ಗತವೈಭವವನ್ನು ನೆನೆಯುತ್ತ ಕೂಡುವುದು ಭಾರತೀಯರದೇ ವೈಶಿಷ್ಟ್ಯವೆಂದು ಸಾಮಾನ್ಯ ತಿಳುವಳಿಕೆ. ಆದರೆ ಪಶ್ಚಿಮ ಯುರೋಪಿನ ದೇಶಗಳಿಗೂ ದ್ವಿತೀಯ ಮಹಾಯುದ್ಧಾನಂತರ ಅಂಥ ಪರಿಸ್ಥಿತಿ ಒದಗಿತ್ತು. ಮೂವತ್ತು ವರ್ಷಗಳಲ್ಲಿ ಎರಡು ಭಯಂಕರ ಯುದ್ಧಗಳಲ್ಲಿ ತಮ್ಮನ್ನೇ ತೊಡಗಿಸಿಕೊಂಡು ಉಧ್ವಸ್ತಗೊಂಡ ಯುರೋಪಿನ ಈ ದೇಶಗಳು ನಾನ್ನೂರು ವರ್ಷಗಳ ಹಿಂದೆ ಆರಂಭಿಸಿ ಕಟ್ಟಿಕೊಂಡಿದ್ದ ತಮ್ಮ ಸಾಮ್ರಾಜ್ಯಗಳು ಕರಗಿಹೋಗುವುದಕ್ಕೆ ತಾವೇ ಸಾಕ್ಷಿಯಾಗಿ ನಿಲ್ಲಬೇಕಾಯಿತು. ದ್ವಿತೀಯ ಮಹಾಯುದ್ಧಾನಂತರ, ಮುಗ್ಗರಿಸುತ್ತಿದ್ದ ಈ ದೇಶಗಳ ಪುನರುತ್ಥಾನಕ್ಕೆ ಜಗತ್ತಿನ ಮಹಾ ಪ್ರಬಲವೂ ಶ್ರೀಮಂತವೂ ಆದ ರಾಷ್ಟ್ರ ಅಮೇರಿಕ ಮುಂದಾಗಬೇಕಾಯಿತು. ಆದರೆ ಕಾಲು ಶತಮಾನದ ಅವಧಿಯಲ್ಲಿ ಜಗತ್ತು ಅದೆಂಥ ಬದಲಾವಣೆಯನ್ನು ಕಾಣುವಂತಾಗಿದೆ! ಆರ್ಥಿಕ ರಂಗದಲ್ಲಿ ಯುರೋಪು ಆಶ್ಚರ್ಯಕರ ರೀತಿಯಲ್ಲಿ ಚೇತರಿಸಿಕೊಂಡಿದೆ ಮಾತ್ರವಲ್ಲ, ಅಮೇರಿಕಕ್ಕೇ ಬಲವಾದ ಪ್ರತಿಸ್ಪರ್ಧಿಯೆನಿಸುವಂತಾಗಿದೆ. ಗತವೈಭವವನ್ನು ನೆನೆಯುವಾಗಲೂ ಇಂದು, ನಾಳೆಗಳನ್ನು ಮರೆಯದ ಯುರೋಪಿಯನರು ಈ ಆರ್ಥಿಕ ಪುನರುದ್ಧಾರಕ್ಕಾಗಿ ತಮ್ಮ ತಮ್ಮಲ್ಲಿಯ ಹಳೆಯ ವೈರಗಳನ್ನೂ ಕೆಲ ಮಟ್ಟಿಗೆ ಸಂಕುಚಿತ ರಾಷ್ಟ್ರೀಯತೆಯನ್ನೂ ಒದಿಗೆ ಸರಿಸಬೇಕಾಗಿ ಬಂದಿದೆ.

ಪಶ್ಚಿಮ ಯುರೋಪಿನ ಬೆಲ್ಜಿಯಂ, ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಲಕ್ಸೆಂಬರ್ಗ್, ಮತ್ತು ನೆದರ್ಲಂಡ್ಸ್ ೧೯೫೮ ರಲ್ಲಿ ಒಂದು ಒಪ್ಪಂದಕ್ಕೆ ಅಂಕಿತ ಹಾಕಿ ಐರೋಪ್ಯ ಆರ್ಥಿಕ ಕೂಟ—ಯುರೋಪಿಯನ್ ಇಕನಾಮಿಕ್ ಕಮ್ಯುನಿಟಿ (E E C) –ವನ್ನು ರಚಿಸಿಕೊಂಡವು. ಇದನ್ನೇ ಐರೋಪ್ಯ ಸಾಮಾನ್ಯ ಪೇಟೆ-ಯುರೋಪಿಯನ್ ಕಾಮನ್ ಮಾರ್ಕೆಟ್ (E C M)—ಎಂದೂ ಹೇಳುವುದುಂಟು. ವ್ಯಾಪಾರೋದ್ಯಮ ರಂಗದಲ್ಲಿ ಪರಸ್ಪರರಲ್ಲಿ ಸ್ಪರ್ಧೆಯನ್ನು ತಪ್ಪಿಸಿ ಪರಸ್ಪರರಿಗೆ ಪೂರಕವಾಗುವಂಥ ವಾತಾವರಣ ನಿರ್ಮಾಣ ಮಾಡುವುದು ಈ ಕೂಟದ ಮುಖ್ಯ ಉದ್ದೇಶ. ಆದಕ್ಕಾಗಿ ಕೂಟದಲ್ಲಿಯ ದೇಶಗಳ ನಡುವೆ ಸರಕುಗಳ ಮೇಲಿನ ಕರ ತೆರಿಗೆಗಳನ್ನು ನಿರ್ಮೂಲನಗೊಳಿಸುವುದಲ್ಲದೆ ಸದಸ್ಯ ರಾಷ್ಟ್ರಗಳ ಆಯಾತ-ನಿರ್ಯಾತ ಕರಗಳನ್ನು ಏಕರೂಪಗೊಳಿಸುವುದು; ಸದಸ್ಯ ರಾಷ್ಟ್ರಗಳಲ್ಲಿ ಸರಕು ಸಾಮಗ್ರಿ, ಜನ ಮತ್ತು ಬಂಡವಾಳದ ಅನಿರ್ಬಂಧ ಸಾಗಾಟ ಮುಂತಾದವುಗಳನ್ನು ಸಾಧಿಸುವುದು ಮುಖ್ಯ ಗುರಿಯಾಗಿದೆ.

ಬೆಲ್ಜಿಯಂ, ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಲಕ್ಸೆಂಬರ್ಗ್ ಮತ್ತು ನೆದರ್ಲೆಂಡ್ಸ್ ಈ ಆರು ಸ್ಥಾಪಕ ಸದಸ್ಯ ದೇಶಗಳು. ಯುರೋಪಿನ ಬೇರೆ ದೇಶಗಳಿಗೂ ಪ್ರವೇಶ ನೀಡುವ ಹಕ್ಕನ್ನು ಈ ದೇಶಗಳು ಹೊಂದಿವೆ.

ತನ್ನದೇ ಆದ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರಗಳೊಂದಿಗೆ ವಿಶಿಷ್ಟ ಆರ್ಥಿಕ ಸಂಬಂಧಗಳನ್ನು ಹೊಂದಿದ್ದ ಬ್ರಿಟನ್ ಈ ಕೂಟವನ್ನು ಸೇರುವುದರ ಬಗ್ಗೆ ಮೊದಮೊದಲೇನೂ ಅಷ್ಟೊಂದು ಉತ್ಸಾಹ ತೋರಲಿಲ್ಲವಾದರೂ ಯುರೋಪಿನ ಇನ್ನು ಕೆಲ ದೇಶಗಳೊಂದಿಗೆ ಒಂದು ಒಪ್ಪಂದ ಮಾಡಿಕೊಂಡು ಐರೋಪ್ಯ ಮುಕ್ತ ವ್ಯಾಪಾರ ಸಂಘ–ಯುರೋಪಿಯನ್ ಫ್ರೀ ಮಾರ್ಕೆಟ್ ಅಸೋಸಿಯೇಶನ್ (EFTA) ಒಂದನ್ನು ಸ್ಥಾಪಿಸಲು ಮುಂದಾಯಿತು. ಆಸ್ಟ್ರಿಯಾ, ಡೆನ್ಮಾರ್ಕ್, ಬ್ರಿಟನ್, ನಾರ್ವೆ, ಪೋರ್ತುಗಾಲ್, ಸ್ವೀಡನ್ ಮತ್ತು ಸ್ವಿತ್ಸರ್ಲೆಂಡ್ ಈ ಸಂಘದ ಪ್ರಾರಂಭಿಕ ಸದಸ್ಯ ದೇಶಗಳು. ಆದರೆ ೧೯೬೩ ರಷ್ಟು ಹಿಂದೆಯೇ ಬ್ರಿಟನ್ ಸಾಮಾನ್ಯಪೇಟೆಯ ಸದಸ್ಯತ್ವಕ್ಕೆ ಅರ್ಜಿ ಹಾಕಿತು. ಈ ಕಾರಣದಿಂದಾಗಿ ಈ ಮುಕ್ತ ವ್ಯಾಪಾರ ಸಂಘ ಒಂದು ಉದ್ದೇಶಹೀನ ಸಂಸ್ಥೆಯಾಗಿ ಪರಿಣಮಿಸಿತು. ೧೯೬೩ ರಲ್ಲಿ ಮತ್ತು ೧೯೬೭ ರಲ್ಲಿ ಕೂಟದ ಇತರೆಲ್ಲ ಸದಸ್ಯರು ಬ್ರಿಟನ್ನಿನ ಪ್ರವೇಶಕ್ಕೆ ಅನುಕೂಲ ಮತ ನೀಡಿದಾಗಲೂ ಫ್ರಾನ್ಸಿನ ಅಧ್ಯಕ್ಷ ಡಿಗಾಲರು ಪ್ರತಿಷೇಧಾಧಿಕಾರವನ್ನು ಪಯೋಗಿಸಿ ಅದನ್ನು ಹೊರಗಿಟ್ಟರು. ಆದರೆ ಅವರ ನಂತರ ಬಂದ ಅಧ್ಯಕ್ಷ ಪಾಂಪಿಡು ಅನುಕೂಲರಾಗಿದ್ದುದರಿಂದ ಕಳೆದ ವರ್ಷ ಬ್ರಿಟನ್ನು ಮಾತ್ರವಲ್ಲ, ಐರ್ಲೆಂಡ್, ಡೆನ್ಮಾರ್ಕ್‌ಗಳು ಸಹ ಈ ಕೂಟದ ಸದಸ್ಯತ್ವ ಪಡೆದುವು.



ಐರೋಪ್ಯ ಸಾಮಾನ್ಯ ಪೇಟೆಯ ವ್ಯಾಪ್ತಿ

ಹಿಗ್ಗುವುದರೊಟ್ಟಿಗೆಯೇ ಈ ಕೂಟ ಜಗತ್ತಿನ ಎರಡನೆಯ ಅತಿ ದೊಡ್ಡ (ಅಮೇರಿಕದ ನಂತರ) ಆರ್ಥಿಕ ಶಕ್ತಿಯಾಗಿ ಪರಿಣಮಿಸಿದೆ.

ರೋಮನ್ ಸಾಮ್ರಾಜ್ಯವು ಅಳಿದುಹೋದ ನಂತರ ಯುರೋಪನ್ನು ಒಂದಾಗಿ ಕೆಲಕಾಲ ಹಿಡಿದಿರಿಸಿದ ಶಕ್ತಿಯೆಂದರೆ ಕ್ರೈಸ್ತ ಧರ್ಮ. ಆದರೆ ಕ್ರೈಸ್ತ ಧರ್ಮದ ಸರ್ವಶ್ರೇಷ್ಠ ಧರ್ಮಾಧಿಕಾರಿ ಪೋಪರ ಅಧಿಕಾರವ್ಯಾಪ್ತಿ ಅತಿಯೆನಿಸುವಷ್ಟರ ಮಟ್ಟಿಗೆ ಬೆಳೆದು ನಿಂತಾಗ ಯುರೋಪಿನ ಅರಸೊತ್ತಿಗೆಗಳಿಂದಲೂ ಮಾರ್ಟಿನ್ ಲೂಥರರಂಥ ಧರ್ಮಸುಧಾರಣಾವಾದಿಗಳಿಂದಲೂ ವಿರೋಧ ಪ್ರಾಪ್ತವಾಗತೊಡಗಿತು. ಇದರ ಪರಿಣಾಮವಾಗಿ ಕೆಲ ಶತಮಾನಗಳ ಅವಧಿಯಲ್ಲಿ ಪೋಪರ ಅಧಿಕಾರ ಲೌಕಿಕ ಮತ್ತು ಧಾರ್ಮಿಕ–ಎರಡೂ ಕ್ಷೇತ್ರಗಳಲ್ಲಿ ಕುಗ್ಗಿತು. ಅನೇಕ ಅರಸೊತ್ತಿಗೆಗಳು ಪೋಪರ ನಿಯಂತ್ರಣದಿಂದ ಬಹುಮಟ್ಟಿಗೆ ಸ್ವತಂತ್ರವಾದುವು. ಪೂರ್ವ ಯುರೋಪಿನಲ್ಲಿ ಗ್ರೀಕ್ ಸನಾತನಿ ಚರ್ಚು ಪ್ರಬಲವಾದರೆ ಉತ್ತರ ಯುರೋಪಿನಲ್ಲಿ ಪ್ರೊಟೆಸ್ಟಂಟ್ ಧರ್ಮ ಬೆಳೆಯಿತು. ಇಂಗ್ಲೆಂಡಿನಲ್ಲಿ ರಾಜನೇ ಧಾರ್ಮಿಕ ವರಿಷ್ಠನೂ ಆಗಿರುವ ಚರ್ಚ್ ಆಫ್ ಇಂಗ್ಲೆಂಡ್ ಸ್ಥಾಪಿತವಾಯಿತು. ಕೇಂದ್ರಾಧಿಕಾರದ ಸವಕಳಿಯಿಂದುಂಟಾದ ಒಂದು ಪರಿಣಾಮವೆಂದರೆ ಯುರೋಪಿನಲ್ಲಿ ಭಿನ್ನ ಭಿನ್ನ ರಾಷ್ಟ್ರಗಳ ಉದಯ. ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್, ಪೋರ್ಚುಗಾಲ್, ಹಾಲೆಂಡ್, ಮುಂತಾದ ದೇಶಗಳು ತಂತಮ್ಮ ಪ್ರತ್ಯೇಕ ಅಸ್ತಿತ್ವದಲ್ಲೇ ಹೆಮ್ಮೆ ಪಡತೊಡಗಿದುವು. ಈ ದೇಶಗಳವರಲ್ಲಿ ತಲೆದೋರಿದ ಸಾಹಸೀ ಮನೋವೃತ್ತಿಯಿಂದಾಗಿ ಇಲ್ಲಿನ ನಾವಿಕರು ಪೂರ್ವದ ನಾಗರಿಕ ದೇಶಗಳೊಂದಿಗೆ ವ್ಯಾಪಾರಿ ಸಂಬಂಧಗಳನ್ನು ಬೆಳೆಸಲು ಹೊಸ ಹೊಸ ಸಾಗರ ಮಾರ್ಗಗಳನ್ನು ಶೋಧಿಸತೊಡಗಿದರು. ಅಲ್ಲದೆ, ಅಮೇರಿಕದಂಥ ಹೊಸ ಭೂಖಂಡದ ಶೋಧದಿಂದಾಗಿ ಈ ದೇಶಗಳಿಗೆ [illegible]

ಹೆಚ್ಚಿತು. ಮುಂದೆ ಔದ್ಯೋಗಿಕ ಕ್ರಾಂತಿಯೂ ಯುರೋಪಿನಲ್ಲೇ ಸಂಭವಿಸಿದ್ದರ ಪರಿಣಾಮವಾಗಿ ಜಗತ್ತಿನ ನಾಗರಿಕತೆಯ ಕೇಂದ್ರ ಈ ಪ್ರದೇಶದತ್ತಲೇ ಸರಿಯಿತಲ್ಲದೆ ವಿಭಿನ್ನ ಭಾಷಾ ಮತ್ತು ಜನಾಂಗಿಕ ಗುಂಪುಗಳಲ್ಲಿ ರಾಷ್ಟ್ರೀಯ ಜಾಗ್ರತಿಯೂ ಬೆಳೆಯತೊಡಗಿತು. ಇದೆಲ್ಲದರ ಒಟ್ಟು ಪರಿಣಾಮವೆಂದರೆ ಯುರೋಪಿನಲ್ಲಿ ಏನು ಸಂಭವಿಸಿದರೂ ಅದೇ ಜಾಗತಿಕವೆಂಬಷ್ಟರ ಮಟ್ಟಿಗೆ ಯುರೋಪಿನ ಮಹತ್ವ ಬೆಳೆಯಿತು. ಆದರೆ ಈ ಚಿಕ್ಕ ಭೂಖಂಡ ಮಾತ್ರ ಹಲವಾರು ದೇಶಗಳಾಗಿ ಹಂಚಿಹೋಯಿತು. ಈ ಶತಮಾನದ ಪ್ರಾರಂಭಕಾಲದಲ್ಲಿ ಸಂಭವಿಸಿದ ಪ್ರಥಮ ಮಹಾಯುದ್ಧ ಪೂರ್ವ ಯುರೋಪಿನಲ್ಲಿ ಹಲವು ಹೊಸ ರಾಷ್ಟ್ರಗಳ ಉದಯಕ್ಕೆಯೇ ಕಾರಣವಾಯಿತು.

ದ್ವಿತೀಯ ಮಹಾಯುದ್ಧ ಮುಕ್ತಾಯವಾದಾಗ ಯುರೋಪಿನ ಪೂರ್ವ ಭಾಗವೆಲ್ಲ ರಶಿಯದ ಪ್ರಭಾವದಡಿಯಲ್ಲಿ ಬಂದುಬಿಟ್ಟಿತಾದರೆ ಪಶ್ಚಿಮ ಭಾಗ ರಾಜಕೀಯ ಸ್ವಾತಂತ್ರ್ಯವನ್ನುಳಿಸಿಕೊಂಡಿತು. ಆದರೂ ಅದು ಅಮೇರಿಕದ ಸೈನಿಕರಕ್ಷೆಯಲ್ಲಿ ಮತ್ತು ಅದರ ಅಭೂತಪೂರ್ವವೆಂಬಂಥ ಆರ್ಥಿಕ ನೆರವಿನಿಂದ ಆರ್ಥಿಕ ಪುನರುದ್ಧಾರಕ್ಕಾಗಿ ಹೆಣಗಬೇಕಾಯಿತು.

ಐರೋಪ್ಯ ಆರ್ಥಿಕ ಕೂಟ ರೂಪುಗೊಳ್ಳಲು ಕಾರಣವೇನಿರಬಹುದೆಂದು ಹುಡುಕಲು ಹೆಚ್ಚು ದೂರ ಹೋಗಬೇಕಿಲ್ಲ. ದ್ವಿತೀಯ ಮಹಾಯುದ್ಧಾನಂತರದಲ್ಲಿ ಯುರೋಪು ಒಂದೆಡೆ ಅಮೇರಿಕ, ಇನ್ನೊಂದೆಡೆ ರಶಿಯಗಳ ತೆಕ್ಕೆಯಲ್ಲೇ ಸುಖ ಕಂಡುಕೊಳ್ಳಬೇಕಾಗಿ ಬಂದಿದೆ. ಪೂರ್ವಾರ್ಧ ಬಿಡಿಸಿಕೊಳ್ಳಲಾಗದಂಥ ರಶಿಯದ ಬಲವಾದ ಅಪ್ಪುಗೆಯಲ್ಲಿ ಸಿಕ್ಕುಬಿದ್ದಿದೆಯಾದರೆ ಪಶ್ಚಿಮಾರ್ಧ ಅಮೇರಿಕದ ಸೈನಿಕ–ಆರ್ಥಿಕ ನೆರವಿನ ಭಾರದಡಿಯಲ್ಲಿ ಸಿಲುಕಿಕೊಂಡಿದೆ. ಪೂರ್ವ ಯುರೋಪಿಗೆ ಬಂಧನದಿಂದ ಪಾರಾಗುವ ದಾರಿ ಕಾಣದಂತಿದೆಯಾದರೆ ಪಶ್ಚಿಮ ಯುರೋಪು [illegible]

ಜನ ಪಡೆದುಕೊಂಡು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುತ್ತಲಿದೆ.

ಪಶ್ಚಿಮ ಯುರೋಪು ಸಾಮೂಹಿಕ ಪ್ರಗತಿಯತ್ತ ಹೆಜ್ಜೆಯಿಡುತ್ತಿರುವುದನ್ನು ನೋಡಿದರೆ ವಿಚಿತ್ರವಾಗುವ ಒಂದಂಶವೆಂದರೆ ಯುದ್ಧ ಅವರ ಮಟ್ಟಿಗೆ ಮಹತ್ವದ ಸಾಧನಮಾರ್ಗವಾಗುಳಿದಿಲ್ಲ ಎಂಬುದು. ಭೌಗೋಲಿಕವಾಗಿ ಬಹು ದೊಡ್ಡ ದೇಶಗಳಾದ ಅಮೇರಿಕ, ರಶಿಯಗಳಂತಹ ಮಹಾಪ್ರಬಲ ದೇಶಗಳೊಡನೆ ತಲೆಯೆತ್ತಿ ನಿಲ್ಲುವುದಾದರೆ ಏಕಾಕಿಯಾಗಿ ತಾವದನ್ನು ಸಾಧಿಸಲಾರೆವೆಂಬುದು ಪಶ್ಚಿಮ ಯುರೋಪಿನ ದೇಶಗಳಿಗೆ ಮನವರಿಕೆಯಾಗಿದೆ. ಔದ್ಯೋಗಿಕವಾಗಿ ಮುಂದುವರಿದ ದೇಶಗಳಾದ ಇವು ತಮ್ಮ ತಮ್ಮಲ್ಲೇ ಸ್ಪರ್ಧಿಸುವುದು ತಮ್ಮ ಹಿತಕ್ಕೇ ಮಾರಕವೆಂಬುದನ್ನು ಕಂಡುಕೊಂಡಿವೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಮೇರಿಕ, ರಶಿಯಗಳನ್ನು ಮಾತ್ರವಲ್ಲ, ಜಪಾನನ್ನು ಸಹ ಏಕಾಕಿಯಾಗಿ ಎದುರಿಸುವುದು ಕಷ್ಟಪ್ರದವಾಗಿದೆ. ಅಲ್ಲದೆ ಆರ್ಥಿಕ ಸಂಪನ್ಮೂಲಗಳು ಪರಿಮಿತವಿದ್ದು ಬೆಳೆಯುತ್ತಿರುವ ಜನಸಂಖ್ಯೆಗೆ ಉದ್ಯೋಗಾವಕಾಶವೊದಗಿಸುವುದು ಕೂಡ ಈ ದೇಶಗಳಿಗೆ ಸಮಸ್ಯೆಯಾಗಿಯೇ ಪರಿಣಮಿಸಿದೆ. ಈ ಕಾರಣಗಳಿಂದಾಗಿ ತಮ್ಮ ತಮ್ಮಲ್ಲಿರುವ ಕೃತ್ರಿಮ ನಿರ್ಬಂಧಗಳನ್ನು ತೆಗೆದೊಗೆದು ಆರ್ಥಿಕ ಮತ್ತು ಸಾಂಸ್ಕೃತಿಕ ಸಹಕಾರ ಸಾಧಿಸುವುದರೊಂದಿಗೆ ಹೊಸ ಯುರೋಪು ತಲೆಯೆತ್ತತೊಡಗಿದೆ. ಇದರಿಂದಾಗಿ ಈಗೊಬ್ಬ ಇಂಗ್ಲೀಷ್ ಮನುಷ್ಯ ಜರ್ಮನಿಯಲ್ಲೊ ಇಟಲಿಯಲ್ಲೊ ತನ್ನ ಬಂಡವಾಳ ತೊಡಗಿಸಬಹುದು; ಬೆಲ್ಜಿಯನ್ ಯುವಕ ಡೆನ್ಮಾರ್ಕಿನಲ್ಲೊ ಫ್ರಾನ್ಸಿನಲ್ಲೊ ಸಲೀಸಾಗಿ

ನೌಕರಿ ಮಾಡಬಹುದು. ರಾಜಕೀಯ ಐಕ್ಯವೊಂದನ್ನು ಳಿದು ಉಳಿದೆಲ್ಲ ದೃಷ್ಟಿಯಲ್ಲೂ ಸಾಮರಸ್ಯ ಸಾಧ್ಯವಾಗುವಂಥ ಅವಕಾಶವನ್ನು ಈ ದೇಶಗಳಿಂದು ಕಲ್ಪಿಸಿಕೊಂಡಿವೆ.

ಆದರೆ ಯುರೋಪು ಈ ಹೊಸ ಅವಸ್ಥೆಗೆ ಸರಿಯಾಗಿ ಹೊಂದಿಕೊಂಡೀತೆ? ಯಾಕೆಂದರೆ ಕಳೆದ ನಾನ್ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ರಾಷ್ಟ್ರೀಯತೆ ಮತ್ತು ಸಾಮ್ರಾಜ್ಯವೈಭವಗಳನ್ನೇ ಉಂಡುಟ್ಟು ಬೆಳೆದ ಜನ ಇಲ್ಲಿನವರು. ಅದೆಲ್ಲಕ್ಕಾಗಿ ಎಂಥ ರಕ್ತಪಾತಕ್ಕೂ ಹಿಂಜರಿಯದಿದ್ದ ಜನ ಇಂದು ಹೊಸ ಪರಿಸರಗಳಿಗೆ ಹೊಂದಿಕೊಳ್ಳಬಹುದೆ? ಈ ಪ್ರಶ್ನೆಗೆ ಉತ್ತರವನ್ನು ಭವಿಷ್ಯತ್ತೇ ಹೇಳಬೇಕು. ಆದರೆ ಸದ್ಯ ಅವಿರಿಸಿಕೊಂಡಿರುವ ಒಂದು ಮುಖ್ಯ ಉದ್ದೇಶವೆಂದರೆ ಅಮೇರಿಕದ ಬೃಹತ್ ಕಂಪನಿಗಳ ಆರ್ಥಿಕ ಹಿಡಿತದಿಂದ ಮುಕ್ತವಾಗುವುದು, ತಮ್ಮ ಮುಗ್ಗರಿಸಿರುವ ಹಣಕಾಸಿನ ಪರಿಸ್ಥಿತಿಗೆ ಸ್ಥೈರ್ಯವನ್ನೊದಗಿಸುವುದು ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜಪಾನ್ ಮತ್ತು ಅಮೇರಿಕಗಳೊಂದಿಗೆ ಸರಿಸಾಟಿಯಾಗಿ ಸ್ಪರ್ಧಿಸುವುದು. ಈ ಮಿತ ಉದ್ದೇಶಗಳು ಅಸಾಧ್ಯವೇನಲ್ಲವೆಂಬುದಕ್ಕೆ ಆಗಲೆ ಸಾಕಷ್ಟು ನಿದರ್ಶನಗಳು ದೊರೆತಿವೆ.

ಐರೋಪ್ಯ ಆರ್ಥಿಕ ಒಕ್ಕೂಟಕ್ಕೆ ಮುಂದೆಂದಾದರೂ ರಾಜಕೀಯ ಐಕ್ಯವು ಪ್ರಾಪ್ತವಾದರೆ ಏನಾಗಬಹುದೆಂಬುದನ್ನು ಯಾರೂ ಊಹಿಸಬಹುದು. ಈ ಕೂಟದಲ್ಲಿಯ ದೇಶಗಳ ಒಟ್ಟು ಕ್ಷೇತ್ರವಿಸ್ತಾರ ಮತ್ತು ಅವುಗಳ ಇಂದಿನ ಜನಸಂಖ್ಯೆ ಮತ್ತು ಇಂದಿನ ಒಟ್ಟು ವಾರ್ಷಿಕ ಉತ್ಪಾದನೆಗಳ ಮೌಲ್ಯ (G N P) ವನ್ನು ಅಮೇರಿಕ ಮತ್ತು ರಶಿಯಾಗಳ ಈ ಅಂಶಗಳೊಂದಿಗೆ ಹೋಲಿಸಿ ನೋಡಿದರೆ ಒಂದು ಸ್ಥೂಲ ಕಲ್ಪನೆ ಬಂದೀತು.

ಕ್ಷೇತ್ರವಿಸ್ತಾರದಲ್ಲಿ ರಶಿಯ, ಅಮೇರಿಕಗಳಿಗೆ ಹೋಲಿಸಿದರೆ ಐರೋಪ್ಯ ಆರ್ಥಿಕ ಕೂಟ ರಶಿಯದ ಸುಮಾರು ೧/೧೬ ದಷ್ಟು ಮತ್ತು ಅಮೇರಿಕದ ೧/೭ ದಷ್ಟು ಮಾತ್ರ ಆಗುವುದಾದರೂ ಇದು ಅವುಗಳಿಗೂ ತುಸು ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಅದು ಮಾತ್ರವಲ್ಲ, ಅದರ ಒಟ್ಟು ವಾರ್ಷಿಕ ಉತ್ಪಾದನಾಮೌಲ್ಯ ರಶಿಯದಕ್ಕಿಂತಲೂ ಸುಮಾರು ೨೯ ಬಿಲಿಯನ್ ಡಾಲರುಗಳಿಂದ ಹೆಚ್ಚಾಗಿದೆಯಾದರೆ ಅಮೇರಿಕದಕ್ಕಿಂತ ಸುಮಾರು ೪೫೬ ಬಿಲಿಯನ್ ಡಾಲರುಗಳಷ್ಟು ಕಡಿಮೆಯಿದೆ. ಅರ್ಥಾತ್ ಅಮೇರಿಕಕ್ಕಿಂತ ಒಟ್ಟು ಉತ್ಪಾದನಾಮೌಲ್ಯ ಅರ್ಧಕ್ಕರ್ಧ ಕಡಿಮೆಯಿದ್ದರೂ ಐರೋಪ್ಯ ಕೂಟ ಜಗತ್ತಿನಲ್ಲಿ ಎರಡನೆಯ ಸ್ಥಾನದಲ್ಲಿ ನಿಲ್ಲುವುದು.


ಇದು ಮಾತ್ರವಲ್ಲದಂತೆ ಅಮೇರಿಕವನ್ನೊಳಗೊಂಡು ಬಹುತರ ಎಲ್ಲೆಡೆಯೂ ತೀವ್ರವಾಗಿರುವ ನಿರುದ್ಯೋಗದ ಸಮಸ್ಯೆಯನ್ನು ಉಳಿದೆಲ್ಲರಿಗಿಂತ ಪಶ್ಚಿಮ ಯುರೋಪಿನ ಈ ದೇಶಗಳು ಹೆಚ್ಚು ಸಮರ್ಥವಾಗಿ ಎದುರಿಸಿವೆಯೆನ್ನಬಹುದು. ಇಂದು ಐರೋಪ್ಯ ಸಾಮಾನ್ಯ ಪೇಟೆಯ ದೇಶಗಳಲ್ಲಿ ನಿರುದ್ಯೋಗ ೨% ರಿಂದ ೩% ಇದೆ. ದಕ್ಷಿಣ ಇಟಲಿ ಮತ್ತು ನೈಋತ್ಯ ಫ್ರಾನ್ಸುಗಳಲ್ಲಿ ಈ ಪ್ರಮಾಣ ಇನ್ನೂ ಹೆಚ್ಚಿದೆ.


	ಕ್ಷೇತ್ರವಿಸ್ತಾರ		ಜನಸಂಖ್ಯೆ	ವಾರ್ಷಿಕ ಉತ್ಪಾದನಾಮೌಲ್ಯ		
ರಶಿಯ	೮,೬೪೩,೫೩೮	ಚ. ಮೈ.	೨೪೧,೭೪೮,೦೦೦	೪೮೫	ಬಿಲಿಯನ್*	ಡಾಲರುಗಳು
ಅಮೇರಿಕ	೩,೬೧೭,೨೦೪	,,	೨೦೪,೬೦೦,೦೦೦	೯೭೦	,,	,,
ಐ. ಆ. ಕೂಟ	೫೨೧,೯೯೧	,,	೨೪೯,೦೦೦,೦೦೦	೫೧೪	,,	,,

ಅಷ್ಟು ಮಾಂತ್ರಿಕ

ಅಷ್ಟು ಮಾರ್ಮಿಕ

ಲಾವಣ್ಯ ರಕ್ಷಣೆಗೆ





ಅಫಘಾನ

ನೀವು ನಂಬಲಿಕ್ಕಿಲ್ಲ. ಆದರೂ ಅಫಘಾನ ಬಗ್ಗೆ ಅದು ಸತ್ಯ. ಗಂಟೆಯಿಂದ ಗಂಟೆಗೆ—ಅಷ್ಟು ಪರಿಪೂರ್ಣತೆ ಅಷ್ಟು ಮೃದುತ್ವ, ಬೇರೆ ಯಾರು ಅಷ್ಟು ಕಾಳಜಿ ವಹಿಸಿಯಾರು ? ಅದೊಂದು ರಹಸ್ಯವಿರಬೇಕೆಂದು ನಾನು ನಂಬುವೆ. ಆ ನಂಬಿಕೆಯಲ್ಲಿ ನೀವೂ ಬೇಕಾದಾಗ ಪಾಲುಗಾರರಾಗಬಹುದು.

'ಆಹಾ' ಉದ್ಘೋಷ ಅಫಘಾನ ಸ್ನೋ ಕ್ಕೆ

ಈ. ಎಸ್. ಪಾಟನ್‌ವಾಲಾ, ಮುಂಬಯಿ-೮೬

ಆದರೆ ಈ ಸಮಸ್ಯೆಗೆ ಉತ್ತರವಾಗಿ ಇಂದು ಈ ದೇಶಗಳಲ್ಲಿ ಕಾರಖಾನೆಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಪೂರ್ಣವೆಂಬಷ್ಟರ ಮಟ್ಟಿಗೆ ಬಳಸಿಕೊಂಡು ದುಡಿಯುತ್ತಿವೆ. (ಪಶ್ಚಿಮ ಜರ್ಮನಿಯಲ್ಲಿ ಇದರ ಪ್ರಮಾಣ ಅತಿ ಹೆಚ್ಚು ಅಂದರೆ ೯೩% ಇದೆ.) ಇದರಿಂದಾದ ಒಂದು ಪರಿಣಾಮವೆಂದರೆ ಅತೀವ ಅತಿಪ್ರಸರಣ. ಯುರೋಪಿನ ದೇಶಗಳಲ್ಲಿ ಉತ್ಪಾದಿತವಾದದ್ದರಲ್ಲಿ ತೀರ ಅಲ್ಪಾಂಶ ಮಾತ್ರ ಆಯಾ ದೇಶಗಳಲ್ಲಿ ಬಳಸಲ್ಪಡುತ್ತದೆ; ಬಹ್ವಂಶವನ್ನು ನಿರ್ಯಾತ ಮಾಡಲೇಬೇಕಾಗುತ್ತದೆ. ಈ ಕಾರಣಕ್ಕಾಗಿಯೆ ಈ ದೇಶಗಳು ಸದಾ ಹೊಸ ಹೊಸ ನಿರ್ಯಾತ ಪೇಟೆಗಳ ಶೋಧದಲ್ಲಿ ತೊಡಗಿರಬೇಕಾದುದು ಅನಿವಾರ್ಯವಾಗುತ್ತದೆ. ನಿರ್ಯಾತಕ್ಕೆ ಅವಕಾಶ ದೊರೆಯದೆ ಉತ್ಪಾದನೆಯನ್ನು ಕಡಿಮೆ ಮಾಡಬೇಕು (ಅತಿಪ್ರಸರಣವನ್ನು ತಡೆಗಟ್ಟಲೋಸುಗ) ಎಂಬ ಪ್ರಯತ್ನ ನಡೆದಾಗ ಪ. ಜರ್ಮನಿ ಮತ್ತು ಇತರೆಡೆಗಳ ಸಂಘಟಿತ ಕಾರ್ಮಿಕರು ಅದನ್ನು ಬಲವಾಗಿ ವಿರೋಧಿಸಿದರು. ಕಡಿಮೆ ಉತ್ಪಾದನೆಯ ಪರಿಣಾಮವಾಗಿ ನಿರುದ್ಯೋಗ ಹೆಚ್ಚಬಹುದು. ನಿರುದ್ಯೋಗಕ್ಕಿಂತ ಅತಿಪ್ರಸರಣ ಯಾವಾಗಲೂ ಉತ್ತಮ ಎಂಬುದವರ ನಿಲುಮೆ.

ಜಾಗತಿಕ ಪೇಟೆಯಲ್ಲಿ ಈಗ ಐರೋಪ್ಯ ಆರ್ಥಿಕ ಕೂಟದ ಮಹತಿ ಎಷ್ಟು ಹೆಚ್ಚಿದೆಯೆಂದರೆ ಒಂದು ಕಾಲಕ್ಕೆ ಜಗತ್ತಿನ ಅತ್ಯಂತ ಸುಭದ್ರ ಕರೆನ್ಸಿಯೆನಿಸಿದ ಅಮೇರಿಕನ್ ಡಾಲರ್ ಕಳೆದ ಒಂದೂವರೆ ವರ್ಷದಲ್ಲಿ ಎರಡು ಸಲ ಅಪಮೌಲ್ಯವಾಗಬೇಕಾಗಿ ಬಂತಾದರೆ ಜರ್ಮನ್ ಮಾರ್ಕ, ಫ್ರೆಂಚ್ ಫ್ರಾಂಕ್ ಮತ್ತು ಕೆಲ ಮಟ್ಟಿಗೆ ಬ್ರಿಟಿಶ್ ಸ್ಟರ್ಲಿಂಗ್ ಸಹ ತುಂಬ ತೇಜಿಯಲ್ಲಿವೆ.

ಐರೋಪ್ಯ ಆರ್ಥಿಕ ಕೂಟವೆಂದಾದರೂ ಒಂದು ದಿನ ರಾಜಕೀಯವಾಗಿ ಒಂದಾಗಲೇಬೇಕು; ಇಲ್ಲದಿದ್ದರೆ ಈ ದೇಶಗಳಿಗೆ ಭವಿಷ್ಯವೆ ಇಲ್ಲವೆಂದು ಸಾಮಾನ್ಯತಃ ಎಲ್ಲರೂ ಒಪ್ಪುತ್ತಾರೆ ಆದರೆ ಈ ದೇಶಗಳಲ್ಲಿ ರಾಷ್ಟ್ರೀಯ ಪ್ರಜ್ಞೆ ಮತ್ತು ಅಭಿಮಾನ ಯಾವ ಮಟ್ಟದಲ್ಲಿವೆಯೆಂದರೆ, ತಾ… ಪವಿತ್ರವೆಂದು ಬಗೆಯುವ ಕೆಲವು ಅಂಶಗಳನ್ನು ಸಾಮೂಹಿಕ ಹಿತಕ್ಕಾಗಿ ತ್ಯಜಿಸಲು ಈ ಜ… ತಯಾರಾಗಬಹುದೆ ಎಂಬುದಿನ್ನೂ ಪ್ರಶ್ನಾರ್ಥ… ವಾಗಿಯೇ ಇದೆ. ಉದಾಹರಣಾರ್ಥ, ಇಡಿ… ಯುರೋಪಿಗೆ ಒಂದೇ ಕೇಂದ್ರ ಸರಕಾರವಿರ… ಬೇಕೆಂದಾದರೆ ಇಂಗ್ಲೆಂಡು ತನ್ನ ರಾಣಿಯನ್ನು ಬಿಟ್ಟು ಬಿಡಲೊಪ್ಪಬಹುದೆ?

ಇದು ಮಾತ್ರವಲ್ಲ, ಯುರೋಪಿ… ಒಂದೊಂದು ದೇಶದಲ್ಲೂ ವಿಭಿನ್ನ ಭಾಷೆಗಳಿಗೆ ಜನಾಂಗಗಳಿಗೆ ಸೇರಿದ ಅಲ್ಪಸಂಖ್ಯಾಕ ಗುಂಪುಗಳಿವೆ. ರಾಷ್ಟ್ರೀಯ ಸತ್ತೆ ಬಲವಾಗಿದ್ದಾಗಲೆ ತೆಪ್ಪಗಿರುತ್ತಿದ್ದ ಇವು ಕೇಂದ್ರ ತುಸು ಬಲ… ಹೀನವಾದಾಗಲೆಲ್ಲ ಪುನಃ ಪುನಃ ತಲೆಯೆತ್ತಲೆತ್ತಿ… ಸುತ್ತಿವೆ. ಇಂಥ ಅನೇಕ ಬಗೆಯ ಶಕ್ತಿ–ಪ್ರತಿ ಶಕ್ತಿಗಳು ನಿರತವಿರುವ ಯುರೋಪಿನ ಭವಿತವ್ಯ ಕುತೂಹಲ ಕೆರಳಿಸುವಂತಿದೆ.

ಇಂಗ್ಲೆಂಡ್ ಐರೋಪ್ಯ ಆರ್ಥಿಕ ಕೂಟವನ್ನು ಸೇರಿದ್ದರ ಕ್ಷಿಪ್ರ ದುಷ್ಪರಿಣಾಮ ಕೆಲಮಟ್ಟಿಗೆ ಭಾರತದ ನಿರ್ಯಾತ ವ್ಯಾಪಾರದ ಮೇಲಾಗಲಿದೆ ಕಾಮನ್‌ವೆಲ್ತ ಸದಸ್ಯತ್ವದಿಂದಾಗಿ ಇದುವರೆಗೆ ಭಾರತದ ಕೆಲ ಸರಕುಗಳಿಗೆ ಇಂಗ್ಲೆಂಡ್ ಪ್ರಾಶಸ್ತ್ಯ ನೀಡುತ್ತಿತ್ತು. ಉದಾಹರಣೆಗೆ ಅರಳೆ ಬಟ್ಟೆ ಚಹ, ಸಣಬು, ಇತ್ಯಾದಿಗಳಿಗೆ ಇಂಗ್ಲೆಂಡು ಎಂದಿನಿಂದಲೂ ನಮಗೆ ಬಹು ದೊಡ್ಡ ಮಾರುಕಟ್ಟೆ. ಈ ವಿಶೇಷ ಸಂಬಂಧ ಇನ್ನು ಹೆಚ್ಚು ಕಾಲ ಮುಂದುವರಿಯದು. ಇನ್ನು ಭಾರತ ಈ ವಸ್ತುಗಳನ್ನು ನಿರ್ಯಾತ ಮಾಡುವ ಇತರ ದೇಶಗಳೊಂದಿಗೆ ಗುಣ ಬೆಲೆ ಎರಡರಲ್ಲೂ ಸ್ಪರ್ಧೆಗಿಳಿಯಬೇಕಾಗುತ್ತದೆ.

ಸ್ವಾತಂತ್ರ್ಯೋತ್ಸವದ ಬಳುವಳಿ

ಮೊದಲನೇ ಬಹುಮಾನ ರೂ. 500/-

1000 ರೂಪಾಯಿಗಳು
[ಒಟ್ಟು ಬಹುಮಾನಗಳು]

ಎರಡನೇ ಬಹುಮಾನ ರೂ. 300/- (ಒಂದು ತಪ್ಪಿದ್ದವರಿಗೆ)

ಮೂರನೇ ಬಹುಮಾನ ರೂ. 200/- [ಎರಡು ತಪ್ಪಿದವರಿಗೆ]

ಪ್ರವೇಶಧನ ರೂ. 1/- ಮಾತ್ರ

ಪದಬಂಧ ಸ್ಪರ್ಧೆ - 2

(ಕಥಾ ಸಂಕಲನಗಳಿಂದ ಆಯ್ದ ಸಾಲುಗಳು)

1 .... ಸೌಧದ ಸುತ್ತಣ ಯಾವತ್ಜೀವವೂ ಉತ್ಸಾಹದಿಂದುಜ್ಜೀವಿತ. ಗೊಂಡವು. [ಇಂದ್ರ/ಚಂದ್ರ]

2. ಅವಳು .... ದಿಂದ ಅತ್ತಿತ್ತ ನೋಡಿದಳು. [ಆತುರ/ಕಾತುರ]

3 ಹಸಿವಿನಿಂದ .... ತ್ತಿದ್ದ ಮಕ್ಕಳ ಸ್ಥಿತಿ ಮನ ಕರಗಿಸುವಂತಿತ್ತು. [ತೊಳಲು/ಬಳಲು]

4 ಕೆಲಸಗಾರರೆಲ್ಲ ಮೂರ್ತಿಗೆ ಸಮಾಧಾನ ಹೇಳಿ .... ಕರೆತಂದರು. [ಕೆಳಗೆ/ಒಳಗೆ]

5 ಅವಳ ಗಂಡ - ಅವಳ ...... ತುಟಿಯೊತ್ತಿ "ನನ್ನ ನಗೆ ಮಲ್ಲಿಗೆಗೆ" ಎಂದ. [ತುಟಿಗೆ/ಕೆನ್ನೆಗೆ]

6 .... ಕರೀತಾ ಇದ್ದಾರೆ -" ಎಂದಳು ನೆಲ ನೋಡುತ್ತಾ. [ಅಮ್ಮಯ್ಯ/ಅಪ್ಪಯ್ಯ]

7 ಎದ್ದವನೇ ಚಪ್ಪಲಿ ಮೆಟ್ಟಿಕೊಂಡು ಧಡಧಡನೆ ಮಹಡಿ ಮೆಟ್ಟಿಲು ಇಳಿದು .... ನಡೆದ. [ಕೆಳಗೆ/ಮನೆಗೆ]

8 ಬಿಜ್ಜಳ ಪ್ರಭುಗಳು ಇದನ್ನು ಕೇಳಿದರೆ ನಿಜವಾಗಿಯೂ .... ರಾಗುವರು. [ದುಃಖಿತ/ಕುಪಿತ]

9 ಸೋತ ಕಣ್ಣಿನಿಂದ .... ಕಡೆಗೊಮ್ಮೆ ದೃಷ್ಟಿಯನ್ನು ಬೀರಿದಳು. [ಮಗಳ/ಮಗನ]

10 ಸ್ವಾಗತಿಸಿದ ನಾರಾಯಣಿ. ಹುಲುಗ ತಲೆ ಎತ್ತಿ ನೋಡಿದ. ಭೀಮಿ .... ನಕ್ಕಳು. [ಚೆಳ್ಳದಾಗಿ/ಸೊಗಸಾಗಿ]

11 ಚಿಕ್ಕಯ್ಯ ತನ್ನ ಬಲಿಷ್ಠವಾದ ಬಾಹುಗಳಿಂದ ಅವಳ .... ಬಳಸಿ ಭದ್ರವಾಗಿ ಆಲಿಂಗಿಸಿಕೊಂಡ. [ಸೊಂಟವನ್ನು/ನಡುವನ್ನು]

12 ಅವನೆ. ಆತ "ತನ್ನನ್ನು .... " ಎನ್ನುವ ಅತ್ಯಭಿಲಾಷೆ ಮನದಲ್ಲಿ ಎತ್ತರಿಸುತ್ತದೆ. [ಚುಂಬಿಸಲಿ/ಮುದ್ದಿಸಲಿ]

13 ಅವಳನ್ನು ನೋಡಲೆಂದು ಅವರು ಬಂದಿದ್ದ ದಿನ. ನಾಗರತ್ನ ಮುಡಿದಿದ್ದದ್ದು .... ದಂಡೆ. [ಮಲ್ಲಿಗೆಯ/ಸಂಪಿಗೆಯ]

14 ಹೊಡೆಯಲಾದರೆ ಎದ್ದು .... ಎಂಬ ಹೆದರಿಕೆಯಾದರೂ ಇರುತ್ತಿತ್ತು. [ಓಡಬೇಕು/ಓಡಬೇಕು]

15 "ಹಾಗಾದರೆ .... ನಿನಗೆ ಮದುವೆಮಾಡಿಬಿಡೋಣ". [ಅವಳನ್ನೆ/ಅವನನ್ನೆ]

ವಿ. ಸೂ. :—(1) ಪ್ರತಿಯೊಂದು ಕೂಪನ್ನಿಗೂ ಪ್ರವೇಶ ಧನ ಕೇವಲ ರೂ. 1/- ಮಾತ್ರ. ಎಷ್ಟು ಕೂಪನ್ನುಗಳು ಬೇಕಾದರೂ ಒಂದೇ ಲಕೋಟೆಯಲ್ಲಿ ಕಳುಹಿಸಬಹುದು, ಆದರೆ ಪ್ರತಿಯೊಂದಕ್ಕೂ ಪ್ರವೇಶಧನ ಪ್ರತ್ಯೇಕ. ನಿಮ್ಮ ಪ್ರವೇಶ ಧನವನ್ನು ಪೋಸ್ಟಲ್ ಆರ್ಡರ್/ಎಂ. ಓ. ಮೂಲಕ "ಸವಿ ರಾಮ್ ಎಂಟರ್‌ಪ್ರೈಸಸ್" ರವರ ಹೆಸರಿಗೆ ಕಳುಹಿಸಬೇಕು. (2) ಸರಿಯಾದ ಉತ್ತರ ಬರೆದವರಿಗೆ ಮಾತ್ರ ಮೇಲ್ಕಂಡ ಬಹುಮಾನ. ಒಂದೇ ರೀತಿಯ ಹಲವು ಉತ್ತರಗಳು ಬಂದಲ್ಲಿ ಬಹುಮಾನದ ಮೊತ್ತವನ್ನು ಸಮನಾಗಿ ಹಂಚಲಾಗುವುದು. (3) ಕಳುಹಿಸುವ ಕೂಪನ್ ಚಿತ್ತಾಗಲಿ, ಗಲೀಜಾಗಲಿ ಆಗಿದ್ದರೆ ಸ್ಪರ್ಧೆಗೆ ಅನರ್ಹವೆಂದು ತೀರ್ಮಾನಿಸಲಾಗುತ್ತದೆ. (4) "ಕಸ್ತೂರಿ" ಕಾರ್ಯಾಲಯಕ್ಕೆ ಕಳುಹಿಸಿದರೆ ನಾವು ಗಮನಿಸುವದಿಲ್ಲ.

(ಹೆಚ್ಚಿಗೆ ಪ್ರವೇಶ ಕೂಪನ್ನುಗಳು ಬೇಕಾದಲ್ಲಿ ಸಾಕಷ್ಟು ಅಂಚೆ ಚೀಟಿಯೊಂದಿಗೆ ನಿಮ್ಮ ವಿಳಾಸಕ್ಕೆ ಬರೆಯಿರಿ.)

ವಿಳಾಸ :— ಸವಿ ರಾಮ್ ಎಂಟರ್‌ಪ್ರೈಸಸ್
೩, "ಸವಿ ನಿಲಯ", ೨ನೇ ಘಟ್ಟ,
ರಾಜಾಜಿನಗರ — ಬೆಂಗಳೂರು-೧೦

ಸಂ.	ಖಾಲಿ ಸ್ಥಳದಲ್ಲಿ ಸರಿಯಾದ ಅಕ್ಷರದಿಂದ ಭರ್ತಿ ಮಾಡಿ.			
1		ದ್ರ		
2		ತು	ರ	
3		ಳ	ಲು	
4		ಳ	ಗೆ	
5			ಗೆ	
6	ಅ		ಯ್ಯ	
7			ಗೆ	
8			ತ	
9	ಮ	ಗ		
10				ಗಿ
11			ವ	ನ್ನು
12			ಸ	ಲಿ
13			ಗೆ	ಯ
14	ಓ		ಬೇ	ಕು
15	ಅ	ವ		ನ್ನೆ

ಈ ಪ್ರವೇಶ ಪತ್ರ ಕಳುಹಿಸುವ ಮುನ್ನ ನಾನು ನಿಮ್ಮ ನಿಯಮಗಳಿಗೆ ಒಳಪಟ್ಟಿದ್ದೇನೆ ಮತ್ತು "ಸವಿ ರಾಮ್ ಎಂಟರ್‌ಪ್ರೈಸಸ್" ರವರ ತೀರ್ಮಾನವನ್ನು ಅಂತಿಮ ಹಾಗೂ ಕಾನೂನುಬದ್ಧ ಎಂದು ಒಪ್ಪಿಕೊಳ್ಳುತ್ತೇನೆ. ಈ ಕೂಪನ್ನಿನೊಂದಿಗೆ ಸರಿಯಾದ ಎಂ. ಓ. ರಸೀತಿ/ಪೋಸ್ಟಲ್ ಆರ್ಡರ್ ಲಗತ್ತಿಸಿರುತ್ತೇನೆ.

ದಿನಾಂಕ ಸಹಿ

ಹೆಸರು

ವಿಳಾಸ

ಕೀರ್ತನ ಪರಿತ್ಯಾಗ ಮತ್ತು ಶಬರಿಭಾವ

ವಿಕ್ರಮರಾಯ ಕವಲಿ

ನಗರದ ರಾಮಮಂದಿರದ ಜೀರ್ಣೋದ್ಧಾರ ನಡೆದಿತ್ತು. ಆಸ್ತಿಕ ಭಕ್ತರೆಲ್ಲ ಹಣ ಎತ್ತಲು ಇಪ್ಪತ್ತೊಂದು ದಿನಗಳ ಮನೋರಂಜನೆಯ ಕಾರ್ಯಕ್ರಮ ಏರ್ಪಡಿಸಿದ್ದರು. ಅದರಲ್ಲಿ ಆರು ದಿನ ಕೀರ್ತನಪಂಚಾನನ, ಹರಿಕಥಾಚಕ್ರವರ್ತಿ ಪಾಂಡುರಂಗದಾಸಾಚಾರ್ಯರ ಹರಿಕಥೆ ನಡೆದು ಬಂದಿತ್ತು.

ಕಟ್ಟಡದ ಕೆಲಸಕ್ಕೆಂದು ಸುತ್ತಮುತ್ತಲೂ ಕಲ್ಲು ಮಣ್ಣು ಬಿದ್ದುಕೊಂಡಿದ್ದರೂ ಜನರು ಅಂತಹುದರಲ್ಲಿಯೇ ಕುಳಿತುಕೊಂಡು, ನಿಂತುಕೊಂಡು ಕಾರ್ಯಕ್ರಮಗಳನ್ನು ಸವಿದು ಹೋಗುತ್ತಿದ್ದರು.

ಆದರೆ ಏಳನೆಯ ದಿನ ಪಾಂಡುರಂಗದಾಸಾಚಾರ್ಯರು ಇದ್ದಕ್ಕಿದ್ದಂತೆ ಅಸ್ವಸ್ಥರಾದರು. ಅವರ ಪಟ್ಟಶಿಷ್ಯರಾದ ಕಂದಸ್ವಾಮಿಯವರು ತಾವೇ ಹರಿಕಥೆ ನಡೆಸುವುದಾಗಿ ಒಪ್ಪಿಕೊಂಡರು. ಅದರಂತೆ ದೊಡ್ಡ ಅಕ್ಷರಗಳಲ್ಲಿ ಹೊರಗೆ ಫಲಕದ ಮೇಲೆ ಬರೆದರು. ನಮ್ಮ ಬೆಂಗಳೂರಲ್ಲಿ ಒಂದು ಬೇನೆ. ಏನು ಬರೆದರೂ ಇಂಗ್ಲೀಷಿನಲ್ಲಿಯೇ ಬರೆಯುತ್ತಾರೆ. ಚಿಕ್ಕ ಅಕ್ಷರಗಳಲ್ಲಿ ಕನ್ನಡದಲ್ಲಿಯೂ ಕೆಳಗೆ ಬರೆದಿದ್ದರೆನ್ನಿ. ಆದರೆ ಬರೆಯುವಾಗ ಒಂದು ಚಿಕ್ಕ ಅಚಾತುರ್ಯ ನಡೆಯಿತು: P. A. ಕಂದಸ್ವಾಮಿಯವರ ಹೆಸರು P A Khandaswamy ಎಂದು h ಅಕ್ಷರದ ಸ್ಥಳ ಪಲ್ಲಟವಾದದ್ದಲ್ಲದೆ P ಮತ್ತು A ಗಳ ನಂತರದ ಚುಕ್ಕೆಗಳು ಸರಿಯಾಗಿ ಮೂಡದ್ದರಿಂದ ಕೀರ್ತನಕಾರರ ಹೆಸರು ಪಾಖಂಡಸ್ವಾಮಿ ಎಂದು ಜನರು ಓದಿಕೊಂಡರು.

'ಪಾಖಂಡಸ್ವಾಮಿ'ಯೊಬ್ಬರು ಹ ರಿ ಕ ಥೆ ಮಾಡುವರೆಂದು ಬೋರ್ಡು ನೋಡಿದ ಬಳಿಕ ಯುವಕರೂ ಆಸ್ತಿಕರಲ್ಲದವರೂ ಕುತೂಹಲದಿಂದ ಕಿಕ್ಕಿರಿದು ತುಂಬತೊಡಗಿದರು. ಮಿನಿ ಸ್ಕರ್ಟು, ಬೆಲ್ ಬಾಟಮ್‌ಗಳೂ ತರತರಹದ ನವೀನ ಸೀರೆಗಳೂ ಟೈಟ್ ಪ್ಯಾಂಟು, ಹಿಪ್ಪಿ ಕ್ರಾಪುಗಳೂ ಧಾರಾಳವಾಗಿ ಬಂದು ಸೇರತೊಡಗಿದವು. ಇದನ್ನು ಅರ್ಥ ಮಾಡಿಕೊಂಡು ಕಾರ್ಯದರ್ಶಿಗಳು ಸ್ವಲ್ಪ ಗಾಬರಿಯಿಂದಲೇ ಕಂದಸ್ವಾಮಿಯವರಿಗೆ ವಿನಂತಿಯನ್ನು ಮಾಡಿಕೊಂಡರು: "ಕಂದಸ್ವಾಮಿಗಳೇ, ಇಂದು ಇಲ್ಲಿ ನೆರೆದಿರುವವರಿಗೆ ಮಾಮೂಲು ಹರಿಕಥೆ ಹಿಡಿಸಲಾರದು. ಹಿಡಿಸಲಿಲ್ಲವೆಂದು ಅವರು ತಮ್ಮ ಪಾಡಿಗೆ ತಾವು ಎದ್ದುಹೋದರೆ ಸರಿ. ಆದರೆ ಸುತ್ತುಮುತ್ತಲೂ ಇರುವ ಕಲ್ಲುಗಳ ರಾಶಿ ಬಲು ಸುಲಭವಾಗಿ ಎಟುಕುವಂತೆ ಇರುವುದರಿಂದ

ಅವರಿಗೆ ಬೇರೆ ಪ್ರೇರಣೆಗಳಾಗಬಹುದು. ಆಂಗ್ಲ ಬರಹದಲ್ಲಿ ಪಾಖಂಡಸ್ವಾಮಿ ಎಂದು ನಿಮ್ಮ ಹೆಸರು ತಪ್ಪಾಗಿ ಓದಲ್ಪಟ್ಟಿರುವದರಿಂದ ಈಗ ವಿಪತ್ತಿನಲ್ಲಿ ಸಿಕ್ಕಿಕೊಂಡಂತಾಗಿದೆ." ಕಂದ-ಸ್ವಾಮಿಗಳು ವಿಚಾರಮಾಡಿ, "ಯಜಮಾನರೇ, ಈಗ ಒಂದೇ ಉಪಾಯ ಹೊಳೆಯುತ್ತಿದೆ. ದೇವರಲ್ಲಿ ಕ್ಷಮೆಬೇಡಿ, ನಾನು 'ಪಾಖಂಡ ಪುರಾಣ' ವನ್ನೇ ಹರಿಕಥೆ ಮಾಡಿಬಿಟ್ಟರೆ, ನಿಮ್ಮ ಆಕ್ಷೇಪಣೆ ಇಲ್ಲವಷ್ಟೇ?" ಎಂದು ಕೇಳಿದರು. "ನಮ್ಮದೇನೂ ಅಭ್ಯಂತರವಿಲ್ಲ. ಒಟ್ಟಿನಲ್ಲಿ ವಿಪತ್ತಿನಿಂದ ಪಾರಾದರೆ ಸಾಕು, "ಎಂದರು ಕಾರ್ಯದರ್ಶಿಗಳು.

ಮಾತಿನಂತೆ ಕಂದಸ್ವಾಮಿ ಪ್ರವಚನ ಪ್ರಾರಂಭವಾಯಿತು. ಅವರ ಹರಿಕಥೆಯ ಪೂರ್ಣ ಅವತರಣಿಕೆಯನ್ನು ಉಪಕಥೆಗಳೊಂದಿಗೆ ಸೇರಿಸಿ ಇಲ್ಲಿ ಕೊಡಲು ಸ್ಥಳಾವಕಾಶವಿಲ್ಲದ್ದರಿಂದ ಅವರ ಸಾರಾಂಶವನ್ನು ಮಾತ್ರ ಕೊಡುತ್ತಿದ್ದೇನೆ.

ಶ್ರೀರಾಮಚಂದ್ರನು ಸೀತೆ ಲಕ್ಷ್ಮಣರೊಂದಿಗೆ ವನವಾಸಕ್ಕೆ ತೆರಳಿದ್ದನಷ್ಟೇ? ಅಲ್ಲಿ ದಿನಾಲೂ ರಾಮ ಸೀತೆಯರ ನಡುವೆ ಏನು ಸಂಭಾಷಣೆ ನಡೆಯುತ್ತಿತ್ತೆಂಬುದನ್ನು ಯಾರೂ ಬರೆದಿಲ್ಲ. ಕಾರಣವೇದರೆ, ಅವರ ಉಲ್ಲೇಖಗಳು ಸಿಕ್ಕೇ ಇರಲಿಲ್ಲ. ಸೀತೆ ಪತಿವ್ರತಾಶಿರೋಮಣಿಯಾಗಿದ್ದಳಾದರೂ ಇತ್ತೀಚೆಗೆ ದೊರೆತ ಅಜ್ಞಾತ ಪುರಾಣಗಳ ಆಧಾರಗಳಿಂದ ಸೀತಾದೇವಿ ದಿನಾಲೂ ರಾಮನನ್ನು ಸಾಕಷ್ಟು 'ಬೋರು' ಹೊಡೆದುಕೊಳ್ಳುತ್ತಿದ್ದಳೆಂದು ತಿಳಿದುಬಂದಿದೆ. ಅರಮನೆಯಲ್ಲಿಯಾಗಿದ್ದರೆ ರಾಜಕಾರಣ ಆಲೋಚನೆ, ಒಡ್ಡೋಲಗ ಎಂದೆಲ್ಲ ಹೇಳಿ ಓಡಿ ಹೋಗಲು ಬರುತ್ತಿತ್ತು. ಇಲ್ಲಿ ಆಹಾರ ತರುವ ಕೆಲಸವನ್ನು ಕೂಡ ಲಕ್ಷ್ಮಣನೇ ಮಾಡುತ್ತಿದ್ದುದರಿಂದ ರಾಮನಿಗೆ ಸೀತೆಯ ವಾಚಾಳಿತನದಿಂದ ಪಾರಾಗಲು ದಾರಿಯೇ ಇರಲಿಲ್ಲ.

ರಾವಣ ಸೀತೆಯನ್ನು ಕದ್ದೊಯ್ದನಂತರ ಅವನು ದಕ್ಷಿಣ ದಿಕ್ಕಿಗೆ ಹೋದನೆಂದು ಗೊತ್ತಾದರೂ ರಾಮನು ರಭಸದಿಂದ ಆ ದಿಕ್ಕಿಗೆ ಓಡಿದನೇ? ಇಲ್ಲ. ವಾಲಿಯನ್ನು ಕೊಲ್ಲುವುದಕ್ಕಿಂತ ಮುಂಚೆ ಏಳು ಮರಗಳಲ್ಲಿ ಹಾಯ್ದು ಹೋಗುವಂತೆ ಬಾಣಪ್ರಯೋಗ ಮಾಡಿ ಪರಾಕ್ರಮ ತೋರಿಸಿದ ಅವನಿಗೆ ಲಂಕೆಗೆ ಹೋಗಿ ರಾವಣನನ್ನು ಕೊಲ್ಲುವುದು ಯಾವ ಪ್ರಯಾಸ? ಅದೂ



ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡುವುದು ನಿಷಿದ್ಧವಲ್ಲದಿರುವಾಗ! ಆದರೆ ರಾಮನು ಅಂತಹದೇನನ್ನೂ ಮಾಡಲಿಲ್ಲ.] ತತ್‌ಕ್ಷಣ ರಾವಣನನ್ನು ಕೊಂದು ಸೀತೆಯನ್ನು ಬಿಡಿಸಿಕೊಂಡು ಬಂದರೆ ಹದಿನಾಲ್ಕು ವರ್ಷದ ಅವಧಿ ಮುಗಿಯುವ ವರೆಗೆ ಮತ್ತೆ ಅವಳಿಂದ ಬೋರು ಹೊಡೆಸಿಕೊಳ್ಳಬೇಕಾದೀತೆಂದು ಹೆದರಿ ತನ್ನ ಕಾರ್ಯಕ್ರಮವನ್ನು ಬಲು ಜಾಣತನದಿಂದ ರಾವಣ ವಧೆಯ ಮರುದಿನವೇ ಹದಿನಾಲ್ಕು ವರುಷದ ಗಡುವು ಮುಗಿಯುವಂತೆ ಹೊಂದಿಸಿಕೊಂಡ.

ಇಲ್ಲಿ ಇನ್ನೊಂದು ವಿಷಯ ಗಮನಿಸತಕ್ಕದ್ದು. ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗಿದ್ದು ಕೇವಲ 'ರಾಜಕಾರಣ'ದ ನಿಮಿತ್ತವೇ ಹೊರತು ಬಹು ಜನರು ತಿಳಿದಿರುವಂತೆ ಸ್ತ್ರೀ ವ್ಯಾಮೋಹದಿಂದ ಅಲ್ಲವೆಂದು ರಾಮನಿಗೆ ಗೊತ್ತಿತ್ತು. ಶೂರ್ಪಣಖೆಗಾದ ಅವಮಾನಕ್ಕೆ ಪ್ರತಿ ಮಾಡದಿದ್ದರೆ ಲಂಕೆಯಲ್ಲಿ ರಾವಣನ ವಿರುದ್ಧ ದಂಗೆಯೇಳಬಹುದಿತ್ತು. ವಿಭೀಷಣನೇ ಅದರ ನೇತೃತ್ವ ವಹಿಸಬಹುದಿತ್ತು.

ಜನನಮರಣಗಳ ದಾಖಲೆಗಳನ್ನು ಸರಿಯಾಗಿ ಹುಡುಕಿದ ರಾವಣನಿಗೆ ರಾಮನು ತನ್ನ ಅಳಿಯನೆಂದು ತಿಳಿದುಬಂದಿತ್ತು. ಆದರೆ ರಾಜಕುಲದ ಪ್ರತಿಷ್ಠೆಯ ಕಾರಣಗಳಿಗಾಗಿ ಅದನ್ನು ಬಹಿರಂಗ ಪಡಿಸುವಂತಿರಲಿಲ್ಲ. ರಾಮನೊಡನೆ ಈ ಬಗ್ಗೆ ರಾವಣ ರಹಸ್ಯವಾಗಿ ಪ್ರಸ್ತಾಪಿಸಿ ಸೀತೆಯನ್ನು ಕೆಲ ಕಾಲ ಲಂಕೆಗೆ ಕಳಿಸಬೇಕೆಂದು ಕೇಳಿದ್ದ. ರಾಮನೂ ರಾಜಕೀಯ ಕಾರಣಗಳಿಗಾಗಿಯೇ ಅದನ್ನು ನಿರಾಕರಿಸಿದ್ದ. ಹೀಗಾಗಿ ರಾವಣನು ಅಪಹರಿಸಿದ್ದರಿಂದ ಸೀತೆಯ ಯೋಗಕ್ಷೇಮದ ಬಗೆಗೆ ಯಾವ ರೀತಿಯ ಚಿಂತೆಯೂ ಅವಶ್ಯವಿರಲಿಲ್ಲವೆಂದು ರಾಮನಿಗೆ ಖಚಿತವಾಗಿತ್ತು. ಆದ್ದರಿಂದ ಹದಿನಾಲ್ಕು ವರುಷ ಮುಗಿಯುವ ವರೆಗೆ ಎದುರಾಳಿಯ ತಪ್ಪಿನ ಲಾಭ ಪಡೆಯಲು ರಾಮ ನಿರ್ಧರಿಸಿದ.


ಆದರೂ ಸೀತೆಯ ಜನ್ಮರಹಸ್ಯವನ್ನು ಕಾಪಾಡುವುದು ರಾಮನ ಉದ್ದೇಶವಾಗಿತ್ತು. ಅದಕ್ಕಾಗಿ ಸೀತೆಯನ್ನು ಕಳೆದುಕೊಂಡಾಗ ಪ್ರಲಾಪ ಮಾಡಿದ; ಹುಡುಕಿದಂತೆ ಮಾಡಿದ; ರಾವಣನ ಹೆಸರಿನಲ್ಲಿ ಸ್ತ್ರೀವ್ಯಾಮೋಹದ ಆಪಾದನೆಯನ್ನೂ ಮಾಡಿದ. ರಾವಣನಿಗೆ ಅದನ್ನು ನಿರಾಕರಿಸುವ ಮಾರ್ಗವಿರಲಿಲ್ಲ.

ಮುಂದೆ ನಡೆದ ನಾಟಕದ ಕೊನೆಯಲ್ಲಿ ರಾವಣನ ವಧೆ ಮಾಡಿ ವಿಭೀಷಣನಿಗೆ ರಾಜ್ಯಭಾರ ಕೊಡುವಂತಾಯಿತು. ರಾಮನ ಯೋಜನೆಯಂತೆಯೇ ಎಲ್ಲ ನಡೆಯಿತು.

ಕೋಸಲ ದೇಶದವರ ಚಕ್ರಾಧಿಪತ್ಯವನ್ನು ಕನ್ಯಾಕುಮಾರಿಯವರೆಗೆ ಆತ ವಿಸ್ತರಿಸಿ ಈಗ ಲಂಕೆಯನ್ನು ಅದರಲ್ಲಿ ಸಮಾವೇಶ ಮಾಡಿಕೊಂಡಂತಾಯಿತು.

ಆದರೆ ಎಲ್ಲ ಸಂಗತಿಗಳೂ ಬೆಳಕಿಗೆ ಬಂದಿಲ್ಲ. ರಾವಣನ ವಧೆಯಾದ ಬಳಿಕ ರಾಮನು ಹರುಷದಿಂದ ಇದ್ದನೆ? ಕುಣಿದಾಡಿದನೇ? ಅದಾವ ಉಲ್ಲೇಖವೂ ರಾಮಾಯಣದಲ್ಲಿ ಬಂದಿಲ್ಲ. ಮಹತ್ವದ ಕೆಲವು ದಾಖಲೆಗಳು ಸಿಕ್ಕದೆ ಹೋಗಿದ್ದು — ಈಗ ಸಿಕ್ಕಿವೆ. ಅಶೋಕವನದಲ್ಲಿನ ಸೆರೆಯಿಂದ ಸೀತೆಯು ಪಾಚಾಳಿತನ ಹೋಗಿ ಅವಳಲ್ಲಿ ಗಾಂಭೀರ್ಯ ಬಂದಿರಬಹುದೆಂದು ಭಾವಿಸಿದ್ದ ಶ್ರೀರಾಮಚಂದ್ರ ಸೀತಾದೇವಿಯನ್ನು ಸಂಧಿಸಿ ಪ್ರೇಮದಿಂದ ಅಪ್ಪಿಕೊಂಡ. ಅಶೋಕವನದಲ್ಲಿಯೇ ಒಂದು ಹಾಸುಗಲ್ಲಿನ ಮೇಲೆ ಕುಳಿತುಕೊಂಡು ಅವರು ಮಾತನಾಡತೊಡಗಿದ್ದರು. ಆದರೆ ಸೀತೆ ಕೇಳಿದ ಮೊದಲ ಪ್ರಶ್ನೆಯೇ, "ನಾಥಾ, ಆ ಬಂಗಾರದ ಚಿಗರಿ ಸಿಕ್ಕಿತೇ?" ಎಂದು. ರಾಮನಿಗೆ ನಿರಾಶೆಯಾಯಿತು. ಅದರ ಜೊತೆಗೆ ಪೇಚಿಗೂ ಸಿಕ್ಕಿಕೊಂಡ. ಜಗದೇಕವೀರನೆಂದು ಪ್ರಖ್ಯಾತಿ ಪಡೆದವನು ಆ ಚಿಗರೆ ಸಿಕ್ಕಲಿಲ್ಲವೆಂದು ಒಪ್ಪಿಕೊಳ್ಳುವುದೆ? ಆದರೆ ಆತ ಸತ್ಯವ್ರತ. "ಪ್ರಿಯೆ, ವಿಷಾದದ ಸಂಗತಿ. ಆ ಚಿಗರೆ ಬಲು ಚಾಲಾಕಾಗಿ ಓಡಿತು. ಕೊನೆಗೆ

ನಿಮ್ಮ ಉಳಿತಾಯ ಯೋಜನೆಯನ್ನು ನಾವು ಸಂರಕ್ಷಿಸುತ್ತೇವೆ



ಒಬ್ಬ ವಯಸ್ಕನು, ಒಂದು 5-ವರ್ಷದ ಕ್ಯುಮ್ಯುಲೇಟಿವ್ ಟೈಂ ಡಿಪಾಜಿಟ್ ಅಥವಾ 5 ರೂ. ಇಲ್ಲವೆ 10 ರೂ. ವರ್ಗದ ರಿಕರಿಂಗ್ ಡಿಪಾಜಿಟ್ ಖಾತೆಯನ್ನು ಅಂಚೆ ಕಚೇರಿಯೊಂದರಲ್ಲಿ ಪ್ರಾರಂಭಿಸಿ, 24 ಮಾಸಿಕ ಠೇವಣಾತಿಗಳನ್ನು ಅಲ್ಲಿ ತುಂಬಿದ್ದಾನೆಂದು ತಿಳಿಯಿರಿ. ಒಂದುವೇಳೆ ಈ ಉಳಿತಾಯ ಯೋಜನೆಯನ್ನು ಪೂರ್ಣಗೊಳಿಸದೆ ಆತ ವಿಧಿವಶಕ್ಕೆ ತುತ್ತಾದರೆ, ಆಗ ಐದು ವರ್ಷಗಳ ಅಖೈರದವರೆಗೂ ಆತ ತನ್ನ ಎಲ್ಲ ಮಾಸಿಕ ಠೇವಣಾತಿಗಳನ್ನು ತುಂಬಿ ಬಿಟ್ಟಿರುವ ಹಾಗೆ, ಆತನ ಉತ್ತರಾಧಿಕಾರಿಗೆ ಅಥವಾ ಆತನಿಂದ ನಾಮಕರಣಗೊಂಡ ವ್ಯಕ್ತಿಗೆ, ಸರಕಾರವು ಬಡ್ಡೀ ಸಹಿತ ಎಲ್ಲ ಹಣವನ್ನು ನೀಡುವುದು, ಹೇಗೆಂಬುದನ್ನು ನೋಡಿರಿ:

ಸಿ.ಟಿ.ಡಿ. ಪ್ರತಿ ತಿಂಗಳಿಗೆ 10 ರೂ. ಉಳಿಸಿದ್ದು	675 ರೂ. ಗಳನ್ನು [illegible]
ಆರ್.ಡಿ. ಪ್ರತಿ ತಿಂಗಳಿಗೆ 10 ರೂ. ಉಳಿಸಿದ್ದು	710 ರೂ. ಗಳನ್ನು [illegible]

ಸಂರಕ್ಷಿತ ಉಳಿತಾಯ ಯೋಜನೆಯಿಂದ ಎಲ್ಲರಿಗು ಸಾಮಾಜಿಕ ಭದ್ರತೆ

ರಾಷ್ಟ್ರೀಯ ಉಳಿತಾಯ ಸಂಸ್ಥೆ

davp 72/518

ಅದನ್ನು ಬಾಣಪ್ರಯೋಗ ಮಾಡಿ ಕೊಂದು-ಬಿಟ್ಟೆ." ಆದರೆ ಅವಳು ನಿರಾಶಳಾಗುವ ಬದಲು, "ಪರವಾಯಿಲ್ಲ ಬಿಡಿ; ಅಷ್ಟೇ ಆದರೂ ಸಾಕು," ಎಂದು ಹೇಳಿ ರಾಮನನ್ನು ಚಕಿತಗೊಳಿಸಿದಳು.

"ಅಷ್ಟೇ ಸಾಕು ಎಂದರೆ! ?"

"ಚಿಗರೆ ಚಿಕ್ಕದಾದರೂ ಅಷ್ಟಾದರೂ ಬಂಗಾರ ಸಿಕ್ಕಿತಲ್ಲ! ಅದರಲ್ಲಿ ಕನಿಷ್ಠ ಐದು ದೊಡ್ಡ ಕಂಠೀಹಾರಗಳು, ಆರು ಬೇರೆ ಬೇರೆ ತರಹದ ಡಾಬು-ಗಳು, ಕಂಕಣಗಳು......"

ಅವಳು ಇನ್ನೂ ಏನೇನು ಹೇಳಿದಳೋ ಆರ್ಯಪುತ್ರ ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

"ಅಂದಹಾಗೆ ಆ ಚಿಗರೆಯನ್ನು ಎಲ್ಲಿ ಇಟ್ಟಿರಿ?" ಎಂದು ಅವಳು ಕೇಳಿದ್ದಕ್ಕೆ, "...ಆಂ...ಹೂಂ...ಚಿಗರೆ...ಅಲ್ಲಿಯೆ..." ಎಂದ ರಾಮ ಉಗುಳು ನುಂಗುತ್ತ, ಮಾತಿನ ದಾರಿ ತಿರುಗಿಸಲು, "ಚಿಗರೆ ಜೀವಂತವಾಗಿ ಸಿಕ್ಕಿದ್ದರೆ ಚೆನ್ನಾಗಿರುತ್ತಿತ್ತಲ್ಲವೇ?" ಎಂದು ಕೇಳಿದ.

"ಹೌದು, ಊರಿಗೆ ಕೊಂಡು ಹೋಗಿ, ಬೆಳೆಸಿ, ಕೊಬ್ಬಿಸಿ ಇನ್ನೂ ಒಂದರ್ಧ ಮಣ ಹೆಚ್ಚು ಬಂಗಾರ ಪಡೆಯಬಹುದಿತ್ತು. ಈಗ ಎಲ್ಲಿ ಬಿಟ್ಟಿರಿ ಅದನ್ನು?"

ಈ ಪ್ರಸಂಗದಿಂದ ಪಾರಾಗಬೇಕಾದರೆ ರಾಮನಿಗೆ ಸಾಕುಬೇಕಾಯಿತು. ಇನ್ನು ಇವಳನ್ನು ಅಯೋಧ್ಯೆಗೆ ಕೊಂಡುಹೋಗುವುದೇ ಬೇಡವೇ ಎಂಬುದನ್ನು ತೀವ್ರವಾಗಿ ಯೋಚಿಸಿದ. ರಾಮಚಂದ್ರನಿಗೆ ಆ ಬಳಿಕವೂ ಸೀತಾದೇವಿ ಇನ್ನೂ ಏನೇನೋ ಬೋರು ಹೊಡೆಯುತ್ತಲೇ ಇದ್ದಳು.

ಪ್ರಯತ್ನ ಮಾಡಿ ನೋಡೋಣವೆಂದು ಶೀಲದ ಪರೀಕ್ಷೆಯ ನೆವ ಮಾಡಿ ಅವಳನ್ನು ಅಗ್ನಿಪ್ರವೇಶಕ್ಕೆ ಒಳಪಡಿಸಿದ. ಅದರಲ್ಲಿ ಸೀತಾದೇವಿಯ ಅದೃಷ್ಟ ಗಟ್ಟಿಯಾಗಿತ್ತು. ಅವಳು ಇನ್ನೂ ನಾರು ಮಡಿಗಳನ್ನು ಧರಿಸುತ್ತಿ-ದ್ದಳಲ್ಲವೇ? ಸಾಕಷ್ಟು ಕಲ್ಲು ನಾರಿನ ಬಟ್ಟೆ ಧರಿಸಿದ್ದರಿಂದ ಅವಳಿಗೆ ಏನೂ ಆಗಲಿಲ್ಲ. ಆ ನಾರಿನಿಂದಲೇ ಈಗಿನ ಉಷ್ಣನಿರೋಧಕ 'ಅಸ್ಬೆಸ್ಟಾಸ್' ತಯಾರಿಸುತ್ತಿರುವುದು.

ನಿರ್ವಾಹವಿಲ್ಲದೆ ಅವಳನ್ನು ಕಟ್ಟಿಕೊಂಡು ರಾಮ ಅಯೋಧ್ಯೆಗೆ ಮರಳಲೇಬೇಕಾಯಿತು. ನಿಧಾನ-ವಾಗಿ ಪ್ರಯಾಣ ಮಾಡಿದರೆ ಮತ್ತೆ ಹಾದಿಯು-ದ್ದಕ್ಕೂ ಬೋರು ಹೊಡೆಸಿಕೊಳ್ಳಬೇಕು— ಎಂದು ಅರ್ಜೆಂಟಾಗಿ ಪುಷ್ಪಕವಿಮಾನವನ್ನು ತರಿಸಿಕೊಂಡು ಅದರಲ್ಲಿ ಅಯೋಧ್ಯೆಗೆ ಮರಳಿದ. ದಾರಿಯುದ್ದಕ್ಕೂ ಸುತ್ತಮುತ್ತ ಕಣ್ಣಿಗೆ ಕಾಣುವ ದೃಶ್ಯಗಳ ಬಗ್ಗೆ 'ರನಿಂಗ್ ಕಾಮೆಂಟರಿ' ಕೊಡುತ್ತ ಸೀತಾದೇವಿಗೆ ಬಾಯಿ ತೆರೆಯಲು ಅವಕಾಶವಾಗದಂತೆ ನೋಡಿಕೊಂಡಿದ್ದನೆಂದು ವಾಲ್ಮೀಕಿ ರಾಮಾಯಣದಿಂದ ವಿದಿತವಾಗುತ್ತದೆ.

ಅಯೋಧ್ಯೆಗೆ ಬಂದಬಳಿಕ ಎಲ್ಲರ ನಡುವೆ ಸೇರಿಕೊಂಡು ರಾಮಚಂದ್ರ ಸಾಕಷ್ಟು ಕಡಿಮೆ ಸಮಯ ಸೀತೆಯ ಜೊತೆಯಲ್ಲಿ ಕಳೆಯುವಂತೆ ನೋಡಿಕೊಂಡಿದ್ದ. ಸೀತಮ್ಮನಿಗೆ ಇದಾವುದರ ಪರಿವೆಯೂ ಇಲ್ಲ. 'ತಮ್ಮ ಯಜಮಾನರಿಗೆ ಕೈತುಂಬ ಕೆಲಸ' ಎಂದಿಷ್ಟೇ ಗೊತ್ತು. ಅವರಿಗಾಗಿ ನಾನಾ ರೀತಿಯ ವ್ರತ, ಪೂಜೆಗಳನ್ನು ಮಾಡಲು ಪ್ರಾರಂಭಿಸಿದ್ದಳು. ಅಲ್ಲಿಗೆ ಶ್ರೀರಾಮಚಂದ್ರನಿಗೆ ಇನ್ನೊಂದು ರೀತಿಯ ಹೊಸ ಬೋರ್ ಪ್ರಾರಂಭವಾಯಿತು.

ವ್ರತ ನಿಯಮಾವಳಿಯಲ್ಲಿ ಮಡಿ-ಉಡಿಗೆಯಲ್ಲಿ ದೇವರಿಗೆ ಪ್ರಸಾದ ನೈವೇದ್ಯಗಳನ್ನು ಮಾಡಬೇಕು ಎಂದು ಹೇಳಿತ್ತು. ಜನಕರಾಜನ ಏಕೈಕ ಪುತ್ರಿಯಾಗಿ ಬೆಳೆದವಳು ಅಡಿಗೆಮನೆಗೆ ಕಾಲು ಹಾಕಿರಲಿಲ್ಲ. ಆ ಬಳಿಕ ವನವಾಸದಲ್ಲಿ ಕಂದಮೂಲಗಳನ್ನು ತಿನ್ನುವಾಗ ಪಾಕಶಾಸ್ತ್ರ-ವೆಲ್ಲಿಂದ ಬಂತು? ಆದರೆ ಈಗ ಬಹಳ ಆಸ್ಥೆಯಿಂದ ಪುಸ್ತಕದಲ್ಲಿ ಓದಿಕೊಂಡು ಭಕ್ಷ್ಯಭೋಜ್ಯಗಳನ್ನು ನೈವೇದ್ಯಕ್ಕಾಗಿ ತಯಾರಿಸತೊಡಗಿದಳು.

ದೇವರಿಗೆ ಅರ್ಪಿಸಿದ ಮೇಲೆಯೇ ತಿನ್ನಬೇಕು

ಎಂದು ನಿಯಮ ತಾನೆ! ಪತಿಯೇ ದೇವರೆಂದು ಶಾಸ್ತ್ರದಲ್ಲಿ ಹೇಳಿತ್ತು. ಅದರಿಂದಾಗಿ ಶ್ರೀರಾಮಚಂದ್ರನಿಗೆ ದಿನಾಲೂ ಒಂದೊಂದು ಬಗೆಯ ವಿಪತ್ತು ಬಂದಂತಾಗುತ್ತಿತ್ತು. ಪಾಕಶಾಸ್ತ್ರದಲ್ಲಿ ಅದೇ ಆಗ ಹೆಜ್ಜೆ ಇಡುತ್ತಿದ್ದ ಸೀತಾದೇವಿ ಮಾಡಿದ ಒಂದೊಂದು ಬಗೆಯ ರುಚಿ(!)ಯುಳ್ಳ ಭಕ್ಷ್ಯಗಳನ್ನು ದಿನವೂ ಮೊದಲನೆಯದಾಗಿ ತಿನ್ನಬೇಕಾದ ಪರಿಸ್ಥಿತಿ ರಾಮನಿಗೆ ಕಡ್ಡಾಯವಾಯಿತು.

ಒಂದು ದಿನ ಉಪ್ಪು ಹೆಚ್ಚು, ಮತ್ತೊಂದು ದಿನ ಹುಳಿ ಕಡಿಮೆ; ಒಂದು ದಿನ ಖಾರ. ದಿನಾಲೂ ಭವಣೆಪಡುತ್ತಾ ಕೊನೆಗೆ ಶ್ರೀರಾಮ, "ಪ್ರಾಣೇಶ್ವರಿ, ಮೊದಲು ನೀನೇ ಸ್ವಲ್ಪ ರುಚಿ ನೋಡಿ ಆಮೇಲೆ ಬಡಿಸು. ಶಬರಿಯಂತೆ ನೀನೂ ಮಾಡಿದರೆ ನನಗೂ ಸಂತೋಷ," ಎಂದು ಡಿಪ್ಲೊಮಸಿಯಿಂದ ಸೂಚಿಸಿದ.

"ಅದು ಹೇಗೆ ಸಾಧ್ಯ? ದೇವರಾದ ನಿಮಗೆ ನೈವೇದ್ಯವಾಗಬೇಕಾದುದನ್ನು ನಾನು ಮೊದಲು ತಿಂದು ನರಕಕ್ಕೆ ಹೋಗಲೇ!" ರಾಮಚಂದ್ರನ ಡಿಪ್ಲೊಮಸಿ ವ್ಯರ್ಥವಾಗಿತ್ತು.

'ಸರಿ. ಇದು ಬಿಡದ ಕರ್ಮ,' ಎಂದು ಮನಸ್ಸು ಗಟ್ಟಿ ಮಾಡಿಕೊಂಡ ಅವನಿಗೆ ಮೊದಲು ತಿನ್ನಲು ಕೊಡದೇ ಯಾವ ಪದಾರ್ಥವನ್ನೂ ತಿನ್ನಬಾರದೆಂದು ಸೀತೆಯ ನಿಯಮಾವಳಿಯಲ್ಲಿತ್ತು.

ಒಂದು ದಿನ ಓಲಗದಿಂದ ಬಂದೊಡನೆಯೇ ಸೀತಾದೇವಿ ಕೆಂಪಗೆ ಗುಲಾಬಜಾಮೂನಿನಂತಹ ತಿಂಡಿಯನ್ನು ರಾಮನಿಗೆ ಕೊಟ್ಟಳು. ರಾಮನು ಒಂದು ತೆಗೆದುಕೊಂಡು ಕಚ್ಚಿಕೊಂಡು ಮೆಲ್ಲುತ್ತ ಹೊರಗೆ ಬಂದ. ಸೀತೆ ಉಳಿದುದರಲ್ಲಿ ತಾನೂ ತಿನ್ನತೊಡಗಿದಳು. ರಾಮ ಒಂದೇ ತುಂಡನ್ನು ತಿಂದವನು ಹೊರಗೆ ಬಂದವನೇ ಉಗುಳಿದ. ಏನಿದು! ಬರೀ ಮಣ್ಣು!! ಕೆಂಪು ಬಣ್ಣದ ಮಣ್ಣು!! ಒಳಗೆ ಬಂದು ನೋಡುತ್ತಾನೆ! ಸೀತಾದೇವಿ ಬ್ರಹ್ಮಾನಂದದಿಂದ ಅದೇ ತಿಂಡಿಯನ್ನು ಭಕ್ಷಿಸುತ್ತಿದ್ದಾಳೆ— ಒಂದಾದ ಮೇಲೆ ಒಂದು!

ಮರುದಿನ ಬಿಳಿಯದೇನೋ ತಿಂಡಿ. ತಿಂದು ನೋಡುತ್ತಾನೆ ವಿಭೂತಿಯಂತಿತ್ತು. "ಈ ತಿಂಡಿಯ ಹೆಸರೇನು?" ಎಂದು ಕೇಳಿಯೇಬಿಟ್ಟ. "ಅದು ತಿಂಡಿಯಲ್ಲ, ವಿಭೂತಿ" ಎಂದಳು. ಸೀತೆ.

"ಇವನ್ನೇಕೆ ತಿನ್ನಬೇಕು? ಬೇರೆ ತಿಂಡಿಯಿಲ್ಲವೇ?"

"ಇದೆ. ಆದರೆ ನನಗೆ ಯಾಕೋ ಇಂದು ಇದನ್ನೇ ತಿನ್ನಬೇಕೆನಿಸುತ್ತೆ. ನಿಮಗೆ ತಿನ್ನಿಸದೇ ನಾನು ತಿನ್ನಬಾರದಲ್ಲ. ಅದಕ್ಕಾಗಿ ಮೊದಲು ನೀವು ತಿನ್ನಲೇಬೇಕು."

ರಾಮನಿಗೆ ಪರಿಸ್ಥಿತಿ ಅರಿವಾಯಿತು. ಸೀತಾದೇವಿ ಬಯಕೆಯ ಸ್ಥಿತಿಯಲ್ಲಿದ್ದಾಳೆ. ಆದರೆ ತನಗೆ ಈ ಶಿಕ್ಷೆ!! ಅವಳ ಪತಿಸೇವೆಯ ಪುಸ್ತಕಕ್ಕೆ ಬೆಂಕಿ ಇಡಬೇಕೆಂಬಷ್ಟು ಸಿಟ್ಟು ಬಂದರೂ ಅವನು ನಿಸ್ಸಹಾಯನಾಗಿದ್ದ.

ಒಂದು ದಿನ ಶ್ರೀರಾಮ ಬೇಟೆಯಾಡಲು ದೂರ ಕಾಡಿಗೆ ಹೋಗಿದ್ದ. ಮರಳಿದ್ದು ಮರು ದಿನ. ಬಂದವನೇ ಕೇಳಿದ, "ಏನು ನಿನ್ನೆ ಇಡೀ ದಿನ ಉಪವಾಸವೇ?"

ಸೀತೆ ಹೇಳಿದಳು: "ಇಲ್ಲವಲ್ಲ, ಯಾಕೆ?"

"ನಿನ್ನೆ ನಾನು ಇರಲಿಲ್ಲವಲ್ಲ, ನಿನ್ನ ನೈವೇದ್ಯ ಸ್ವೀಕರಿಸಲು. ನನಗೆ ಕೊಡದೇ ನೀನು ತಿನ್ನುವುದು..."

ಸೀತೆ ನಕ್ಕಳು... "ಅಯ್ಯೋ ನಿಮಗೆ ವ್ರತ ನಿಯಮಾವಳಿ ಏನೇನೂ ತಿಳಿಯಲ್ಲ. ಪತಿದೇವರು ಊರಲಲ್ಲಿಲ್ಲದಾಗ ಅವರ ಪಟವನ್ನೇ ದೇವರೆಂದು ತಿಳಿದು ನೈವೇದ್ಯ ಮಾಡಿ ಪ್ರಸಾದ ಸ್ವೀಕರಿಸಬಹುದು."

"ಅದನ್ನೇ ಪತಿ ಊರಲ್ಲಿ ಇದ್ದಾಗಲೂ ಮಾಡಿದರೆ ಹೇಗೆ?"

"ಛೀ ಛೀ, ಬಿಡ್ತು ಅನ್ನಿ. ಎದುರಿಗೆ ದೇವರು ಇರುವಾಗ ಪಟಕ್ಕೆ ನೈವೇದ್ಯವೇ?" ಎಂದು ಸೀತೆ ತನ್ನ M. C. S. R. ಕೋಟ್ ಮಾಡಿದಳು.

ಕಂಗೆಟ್ಟ ಶ್ರೀರಾಮನ ಬುದ್ಧಿ ಏನೇನೋ

ವಿಚಾರ ಮಾಡತೊಡಗಿತು. ಉಪ್ಪು, ಹುಳಿ, ಖಾರ ಸಮನಾಗಿರುವ ತಿಂಡಿ ತಿನ್ನುವ ಬಯಕೆ ಬೃಹದಾಕಾರಕ್ಕೆ ಬೆಳೆದು ನಿಂತಿತ್ತು. ತಾನು ಬೇರೆ ಕಡೆಗೆ ಹೋದರೆ, ಇಲ್ಲಿ ರಾಜಕಾರಣ ನಡೆಯುವಂತಿಲ್ಲ. ಇವಳನ್ನು ತವರಿಗೆ ಅಟ್ಟಬೇಕೆಂದರೆ, ಜನಕರಾಜನು ಎಂದೋ ಸ್ವಾಮಿ ಪಾದ ಸೇರಿದ್ದ. ಅದಕ್ಕಾಗಿ ಲಕ್ಷ್ಮಣನೊಡನೆ ಗುಪ್ತಾಲೋಚನೆ ಮಾಡಿ ವಾಲ್ಮೀಕಿಯವರಲ್ಲಿ ಸೀತೆಯನ್ನು ಕಳಿಸಿಬಿಟ್ಟರಾಯಿತೆಂದು ನಿರ್ಧರಿಸಿದ. ಹೇಗೂ ಅಲ್ಲಿ ಎಲ್ಲರೂ ಪರಿಚಿತರು.

ಆದರೆ ಅವಳು ಹೆರಿಗೆಯಾಗುವ ಮುನ್ನವೇ ತಿರುಗಿಬಂದುಬಿಟ್ಟರೇನು ಗತಿ! ಅದಕ್ಕಾಗಿ ಅವಳನ್ನು ತಾನೇ 'ಪರಿತ್ಯಾಗ' ಮಾಡಿರುವುದಾಗಿ ದೂರ ಹೋದ ಬಳಿಕ ತಿಳಿಸಬೇಕು ಎಂದು ತೀರ್ಮಾನವಾಯಿತು. ಆದರೆ ಭರತ ಶತ್ರುಘ್ನರು ಸುಮ್ಮನಿರುವರೆ ? ಅವರಿಗೇನಾದರೂ ಹೇಳಬೇಡವೆ ? ರಾಜನೀತಿಜ್ಞನಾದರೂ ರಾಮ ಸುಳ್ಳು ಹೇಳಬಾರದು. ಲಕ್ಷ್ಮಣನಿಗೂ ಅಷ್ಟೆ. ಅದು ಇನ್ನೂ ತ್ರೇತಾಯುಗ; ಈ ಸಮಯಕ್ಕೆ ಸರಿಯಾಗಿ ಕಳ್ಳು ಕುಡಿದ ಅಗಸ ಸೀತೆಯನ್ನು ಒತ್ತಿಟ್ಟು ಹೆಂಡತಿಯನ್ನು ಬೈದ ಸುದ್ದಿ ರಾಮನಿಗೆ ಸಿಕ್ಕಿದ್ದು. ಈ ನೆವವನ್ನು ಉಪಯೋಗಿಸಿಕೊಳ್ಳುವುದರಲ್ಲಿ ತಪ್ಪೇನು ? ಮನಸ್ಸಿನ ವಿರುದ್ಧ ಸೀತೆಯನ್ನು ಪರಿತ್ಯಾಗ ಮಾಡುವವನಂತೆ ಶ್ರೀರಾಮಚಂದ್ರ–ಗ್ಲಿಸರಿನ್ ಸಹಾಯದಿಂದ–ಕಣ್ಣೀರು ಸುರಿಸಿ ಒಮ್ಮತದ ತೀರ್ಮಾನವಾಗುವಂತೆ ಮಾಡಿದ. ವಾಲ್ಮೀಕಿಗೆ ಬೇಕಾದ ಅನುಕೂಲತೆಗಳನ್ನೆಲ್ಲ ರಹಸ್ಯವಾಗಿ ಮಾಡಿಸಿಟ್ಟು, ಒಂದು 'ಸುಮುಹೂರ್ತ'ದಲ್ಲಿ ಸೀತೆಯನ್ನು ಕಾಡಿಗೆ ಕಳಿಸಿ ಬರಲು ಲಕ್ಷ್ಮಣ ಹೊರಟ.

"ವಾಲ್ಮೀಕಿಯವರಿಗೆ ಎಲ್ಲವನ್ನೂ ಸರಿಯಾಗಿ ತಿಳಿಸಲಾಗಿದೆಯಷ್ಟೇ?" ಎಂದು ಕೇಳಿದ ಲಕ್ಷ್ಮಣ

"ಅದೆಲ್ಲ ಏರ್ಪಾಡಾಗಿದೆ. ನನ್ನ ಹೆಸರಿನಲ್ಲಿ ರಾಮಾಯಣ ಅವರೇ ಬರೆಯುವವರಿರುವುದ

ವಾಯಿತು."

"ಮತ್ತೇನಾದರೂ ಕೆಲಸವಿದೆಯೋ ಅಣ್ಣ ?" ಎಂದು ಲಕ್ಷ್ಮಣ ಕೇಳಿದಾಗ, ರಾಮಚಂದ್ರ ಬಲು ದೈನ್ಯದಿಂದ ಹೇಳಿಕೊಳ್ಳಲು ಪ್ರಾರಂಭಿಸಿದ: "ನೋಡು ಲಕ್ಷ್ಮಣಾ, ಇನ್ನೊಂದು ಬೇಡಿಕೆಯಿದೆ. ಎಂದೂ ನಿನ್ನಲ್ಲಿ ಬೇಡಿರಲಿಲ್ಲ. ಎಂತಹ ಅಲ್ಪ ಬೇಡಿಕೆಯೆಂದು ನಗಬೇಡ; ಅಲ್ಪ ಕೆಲಸವೆಂದು ತಾತ್ಸಾರ ಮಾಡಬೇಡ. ಶಬರಿಯ ಗುಡಿಸಲು ನೋಡಿರುವೆಯಲ್ಲ; ಬರುವಾಗ ಅವಳನ್ನು ಕರೆದುಕೊಂಡು ಬಾ. ನಾನು ಬರಲೇಬೇಕೆಂದು ಒತ್ತಾಯ ಮಾಡಿರುವುದಾಗಿ ಹೇಳು. ಗುಟ್ಟಾಗಿ ಕರೆದುಕೊಂಡು ಬಾ ! ದಯವಿಟ್ಟು."

"ಅದೇಕೆ ಅಣ್ಣಾ ?"

"ನಾನು ರುಚಿಯಾದ ಅಡಿಗೆಯನ್ನು ಉಣ್ಣಲು ಹಂಬಲಿಸುತ್ತಿರುವುದು ನಿನಗೇ ತಿಳಿದೇ ಇದೆ. ನನಗೆ ಸಲ್ಲದ ಮಹತ್ವ ಕೊಟ್ಟು, ಮೀಸಲು ಅಡಿಗೆಯೆಂದು ಎಲ್ಲರೂ ಸರಿಯಾಗಿ ರುಚಿ ನೋಡದೆ ಹಾಗೆಯೇ ಭೋಜನವನ್ನು ಬಡಿಸುತ್ತಿದ್ದಾರೆ.

"ಅವಳೊಬ್ಬಳಿಗೆ ವ್ಯವಹಾರ ಜ್ಞಾನವಿದೆ. ಅವಳನ್ನು ಮುಖ್ಯ ಅಡಿಗೆಯವಳನ್ನು ಮಾಡಿ ಜೀವನವಿಡೀ ಸಂತೋಷಪಡಬೇಕೆಂದು ನನ್ನ ಆಸೆ–ಹಂಬಲ."

ಲಕ್ಷ್ಮಣ ಒಪ್ಪಿಕೊಂಡು ಹೋದ. ಸೀತೆಯನ್ನು ಬಿಟ್ಟು ಬಂದ, ಶಬರಿಯನ್ನು ಕರೆತಂದ. ಅದು ಯಾರಿಗೂ ಗೊತ್ತಿಲ್ಲ. ತ್ಯಾಗರಾಜರಿಗೆ ಮಾತ್ರ ಇದರ ಸುಳಿವು ಸಿಕ್ಕಿತ್ತು. ಅದಕ್ಕಾಗಿ ಅವರು, "ಎಂಥ ಭಾಗ್ಯಮು ನೀ ಶಬರಿ!" ಎಂದು ಹಾಡಿದ್ದಾರೆ.

ಹರಿಕಥೆ ಮುಗಿದ ಬಳಿಕ ಆರತಿಯ ತಟ್ಟೆ ಓಡಾಡಿದಾಗ ಚಿಲ್ಲರೆ ಅಭಾವದಿಂದಾಗಿಯೋ ಅಥವಾ ಸಂತೋಷದಿಂದಲೋ ರೂಪಾಯಿ ನೋಟುಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಂದು ಕೂಡಿಬಿದ್ದಿದ್ದವೆಂದು ಖಂಡೇರಾಯರು ಮತ್ತು

ಅವರು ರಾಷ್ಟ್ರೀಯ ಶಿಕ್ಷಣಕ್ಕಾಗಿ
ಜೀವನವನ್ನೇ ಮುಡಿಪಾಗಿಟ್ಟವರು

ಕೆ. ಸಂಪದ್ಗಿರಿರಾಯರು


ಶ್ಯಾಮಸುಂದರ ಕುಲಕರ್ಣಿ

ಮಹಾತ್ಮಾ ಗಾಂಧಿಯವರು ೧೯೨೦ರಲ್ಲಿ ನೀಡಿದ ಅಸಹಕಾರ ಚಳುವಳಿಯ ಕರೆಗೆ ಓಗೊಟ್ಟು ತಮ್ಮ ವೃತ್ತಿಗೂ ಶಿಕ್ಷಣಕ್ಕೂ ಶರಣೆಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದವರ ಸಂಖ್ಯೆ ಸಾವಿರಾರು. ಆ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜೈಲು ಸೇರುವ ಬದಲು ಗಾಂಧೀಜಿಯವರ 'ರಾಷ್ಟ್ರೀಯ ಶಿಕ್ಷಣ'ದ ಕಲ್ಪನೆಯನ್ನು ಸಾಕಾರಗೊಳಿಸುವ ದೀಕ್ಷೆ ತೊಟ್ಟು, ಅದಕ್ಕಾಗಿ ಅಕ್ಷರಶಃ ತಮ್ಮ ಜೀವನವನ್ನು ಮುಡುಪಾಗಿಟ್ಟ 'ಮೇಷ್ಟ್ರು' ಶ್ರೀ ಕೆ. ಸಂಪದ್ಗಿರಿರಾವ್.

ಶಿಕ್ಷಣ ರಂಗದಲ್ಲಿ ಬ್ರಿಟಿಷರ ಪ್ರಭಾವವೇ ಜಾಸ್ತಿಯಿದ್ದ ಕಾಲವಲ್ಲಿ ಅದಕ್ಕೆ ಸ್ವದೇಶೀ ಮುದ್ರೆಯೊತ್ತಿ, ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಜಾಗೃತಿಯುಂಟುಮಾಡಲು ಪರಿಶ್ರಮಿಸಿದವರಲ್ಲಿ ಸಂಪದ್ಗಿರಿರಾಯ-ರೊಬ್ಬ ಅಗ್ರಗಣ್ಯ ವ್ಯಕ್ತಿ. ಅನ್ನಿ ಬೆಸೆಂಟರು ೧೯೧೭ರಲ್ಲಿ ಸ್ಥಾಪಿಸಿದ್ದ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲನ್ನು ೧೯೨೧ರಲ್ಲಿ ಮುಚ್ಚಬೇಕಾಗಿ ಬಂದ ಪರಿಸ್ಥಿತಿಯಲ್ಲಿ ಮುಂದೆ ಬಂದು ಕೆಲವು ಮಿತ್ರರ ಸಹಕಾರದಿಂದ ಅದರ ಕರ್ಣಧಾರತ್ವವನ್ನು ವಹಿಸಿಕೊಂಡು, ಅದರ ಶಿಕ್ಷಕರಾಗಿ, ಹೆಡ್‌ಮೇಷ್ಟ್ರರಾಗಿ, ಮುಂದೆ ಅದೇ ಸಂಸ್ಥೆಯು ಆರಂಭಿಸಿದ ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಸ್ಥಾನಕ್ಕೂ ಹೆಸರು ಕೇಳಿಬರು

ತ್ತಿದ್ದ ಸಂಪದ್ಗಿರಿರಾಯರ ನಾಲ್ವತ್ತು ವರ್ಷಗಳ ಸೇವೆಯ ಕಾಲದಲ್ಲಿ ಅವರಿಂದ ಪಾಠ ಕಲಿತು, ತಾವು 'ರಾಯರ' ಶಿಷ್ಯರೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಜನ ಇಂದು ದೇಶದ ಯಾವ ಭಾಗದಲ್ಲೂ ಸಿಗುತ್ತಾರೆ.

ಆದರೆ,ಸಂಪದ್ಗಿರಿರಾವ್ ಶಿಕ್ಷಣ ರಂಗ ಸೇರಿದ್ದೊಂದು ಆಕಸ್ಮಿಕ. ಅವರು ಬೆಂಗಳೂರಿಗೆ ಬಂದು ನೆಲೆಸಿದ್ದೂ ದೈವನಿಯಾಮಕ. ರಾಯರ ಪೂರ್ವಜರು ಕೋಲಾರದವರು, ಅವರ ತಾತ ಹೊಸಕೋಟೆಯಲ್ಲಿ ವೈದಿಕರಾಗಿದ್ದರು. ಅವರ ತಂದೆ ಶೇಷಗಿರಿರಾಯರು— ಸಾಕಷ್ಟು ವಯಸ್ಸಾಗುವವರೆಗೂ ಸರಿಯಾದ ನೌಕರಿ ಸಿಗದೇ ತಮ್ಮ ಪತ್ನಿಯೊಂದಿಗೆ ಬಹಳ ವರ್ಷ ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯಲ್ಲಿ ತಮ್ಮ ಮಾವನ ಮನೆಯಲ್ಲಿದ್ದರು. ಆ ಜಿಲ್ಲೆಯ ಪೋಳೂರಿನಲ್ಲಿ ಸಂಪದ್ಗಿರಿರಾಯರು ಜನಿಸಿದರು (೪-೪-೧೮೯೭). ಪೋಳೂರು, ಕಾಳಹಸ್ತಿ-



ಗಳಲ್ಲಿ ತೆಲುಗಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ಅವರು ನಂತರ ಮದ್ರಾಸಿನ ಮಿಷನ್ ಸ್ಕೂಲ್ ಹಾಗು ಕಾಂಚೀಪುರದಲ್ಲೂ, ಮದ್ರಾಸಿನ ಕ್ರಿಶ್ಚನ್ ಕಾಲೇಜಿನಲ್ಲೂ ಅಧ್ಯಯನವನ್ನು ಮುಂದುವರಿಸಿ ಇಂಗ್ಲಿಷ್ ಸಾಹಿತ್ಯದಲ್ಲಿ ಬಿ. ಎ (ಆನರ್ಸ್) ಪರೀಕ್ಷೆ ಪಾಸಾದರು (೧೯೧೮).

ಆ ವರೆಗೆ ಸಂಪದ್ಗಿರಿರಾಯರ ಜೀವನ ಧ್ಯೇಯಗಳಲ್ಲಿ ಪತ್ರಕರ್ತನಾಗಬೇಕೆಂಬುದೂ ಇತ್ತು. ಶಾಲೆಯಲ್ಲಿರುವಾಗಲೇ ಅವರು ಸೀನಿಯರ್ ಶೀಘ್ರಲಿಪಿ ಪರೀಕ್ಷೆ ಪಾಸು ಮಾಡಿ, 'ವರದಿಗಾರ'ನಾಗುವ ಕನಸು ಕಾಣುತ್ತಿದ್ದರು. ಕಾಲೇಜಿನಲ್ಲಿದ್ದಾಗ ಶೇಕ್ಸ್‌ಪಿಯರ್ ವರ್ಡ್ಸ್‌ವರ್ಥರ ಜೊತೆಗೆ ಕಾಳಿದಾಸನನ್ನೂ ಓದಿ ಅರಗಿಸಿಕೊಂಡಿದ್ದ ರಾಯರ ತಲೆ ಕೆಡಿಸಿದವರೆಂದರೆ ವಿವೇಕಾನಂದ ಹಾಗೂ ಪರಮಹಂಸರು. ಅಧ್ಯಾಪಕರಾಗಿ ಗೋಖಲೆ ಹಾಗೂ ತಿಲಕರು ಅವರ ಮೇಲೆ ಪ್ರಭಾವ ಬೀರಿದ್ದರು. ಪದವೀಧರರಾದ ನಂತರ 'ಹಿಂದೂ' ಪತ್ರಿಕೆಯ ಸಂಪಾದಕ ಮಂಡಳಿಯನ್ನು ಸೇರುವ ಆಸೆ ಹೊತ್ತು, ತಮ್ಮ ಪರಿಚಯಸ್ಥರಿಂದ ಶಿಫಾರಸು ಪತ್ರ ಪಡೆದು, ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಕಸ್ತೂರಿ ರಂಗಯ್ಯಂಗಾರರನ್ನು ಭೇಟಿಯಾಗಲು ಹೋದರಾದರೂ ಆಗವರು ಯುರೋಪ್ ಪ್ರವಾಸದಲ್ಲಿದ್ದುದರಿಂದ ಅವರ ಭೇಟಿ ಸಾಧ್ಯವಾಗಲಿಲ್ಲ.

ಅದೇ ಹೊತ್ತಿಗೆ ಮುಳಬಾಗಿಲಿಗೆ ತಮ್ಮ ಸೋದರ ಸಂಬಂಧಿಯೊಬ್ಬರ ಮುಂಜಿವೆಗೆಂದು ಬಂದಾಗ ಮೊದಲ ಬಾರಿ ಅವರು ಬೆಂಗಳೂರು ನೋಡಿದರು. ಆಗ ಏನಾದರೊಂದು ಉದ್ಯೋಗದ ಅನ್ವೇಷಣೆಯಲ್ಲಿದ್ದ ಅವರಿಗೆ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಅಕಸ್ಮಾತ್ತಾಗಿ ಕೆಲಸ ಸಿಕ್ಕಿತು. ಮರುವರ್ಷವೇ ಅವರಿಗೆ ಅಪ್ರಾರ್ಥಿತವಾಗಿ ಸೆಂಟ್ರಲ್ ಕಾಲೇಜಿನಲ್ಲಿ ಉದ್ಯೋಗ ದೊರೆಯಿತು. ಖ್ಯಾತನಾಮವಾಗಿದ್ದ ಸೆಂಟ್ರಲ್ ಕಾಲೇಜಿನಲ್ಲಿ ಆಗ ಕೋದಂಡರಾವ್, ವೆಂಕಣ್ಣಯ್ಯ, ಗೋಪಾಲಸ್ವಾಮಿ ಅಯ್ಯಂಗಾರ

ಮೊದಲಾದವರು ಅಧ್ಯಾಪಕರಾಗಿದ್ದರು. ನಿಟ್ಟೂರ ಶ್ರೀನಿವಾಸರಾವ್, ಹೆಚ್. ವಿ. ಆರ್. ಅಯ್ಯಂಗಾರ್ ಮುಂತಾದ ಪ್ರತಿಭಾವಂತ ವಿದ್ಯಾರ್ಥಿಗಳು ಅವರ ಶಿಷ್ಯರಾಗಿದ್ದರು. ಪೂರ್ತಿ ಸೂಟು, ಮೇಲೊಂದು ರುಮಾಲು ಧರಿಸಿ ಠೀವಿಯಿಂದ ಕಾಲೇಜಿಗೆ ಬರುತ್ತಿದ್ದ ಅವರು ಒಳ್ಳೆ "ಸ್ಯಾನಿಟರಿ ಇನ್ಸ್‌ಪೆಕ್ಟರರಂತೆ" ಕಾಣು ತ್ತಿದ್ದರೆಂದು ನಿಟ್ಟೂರು ಶ್ರೀನಿವಾಸರಾಯರು ಒಂದೆಡೆ ಹೇಳಿದ್ದಾರೆ.

ಅವರೆ ಬೇಸಿಗೆ ರಜೆಯಲ್ಲಿ ಅವರ ವೇಷ ಬದ-ಲಾಯಿತು. ಧೋತರ, ಜುಬ್ಬ ಮೇಲೊಂದು ಗಾಂಧೀ ಟೊಪ್ಪಿಗೆ ಧರಿಸಿ ಸೈಕಲ್ ಮೇಲೆ ಓಡಾಡುತ್ತಿದ್ದ ಅವರಲ್ಲಿ ಹಠಾತ್ ಬದಲಾವಣೆ-ಯನ್ನು ಕಂಡು ಅನೇಕರಿಗೆ ಆಶ್ಚರ್ಯ. ಗಾಂಧೀಜಿಯವರ ಅಸಹಕಾರ ಚಳುವಳಿಯ ಕರೆ ಯಿಂದ ಪ್ರಭಾವಿತರಾದ ಸಂಪದ್ಗಿರಿರಾವ್ ಕೆಲಸಕ್ಕೆ ರಾಜೀನಾಮೆ ನೀಡಲು ಕೂಡ ನಿರ್ಧರಿಸಿದರು.

ಇದೇ ಸಮಯ (೧೯೨೧) ಬಿ. ಕೆ. ಗರುಡಾ ಚಾರ್ ಮೊದಲಾದವರು ಅನ್ನಿ ಬೆಸೆಂಟರ 'ದೇಶೀಯ ವಿದ್ಯಾಲಯ'ವನ್ನು ವಹಿಸಿಕೊಂಡು ಅದರ ಪುನಶ್ಚೇತನದ ವಿಚಾರ ಮಾಡುತ್ತಿರುವಾಗ ಸಂಪದ್ಗಿರಿರಾಯರು ಅಲ್ಲಿ ಶಿಕ್ಷಕರಾಗಿ ಸೇರಿ, ತನ್ಮೂಲಕ ರಾಷ್ಟ್ರಸೇವೆಯ ದೀಕ್ಷೆ ತೊಟ್ಟರು.

ಪುಣೆಯ ಫರ್ಗ್ಯುಸನ್ ಕಾಲೇಜಿನ ರೀತಿ ಯಲ್ಲಿ ಶಾಲೆಯು ಪರಿವರ್ತನೆಗೊಂಡಿತು. ಸಂಪದ್ಗಿರಿರಾಯರೂ ಅವರ ಸಹೋದ್ಯೋಗಿ ಗಳೂ ಅಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿದರು. ಯಾವ ಶಿಕ್ಷಕನೂ ೧೦೦ ರೂಪಾಯಿ ಗಿಂತ ಅಧಿಕ ವೇತನ ಪಡೆಯಬಾರದೆಂಬ ಸೂಚನೆಯನ್ನು ಮುಂದಿಟ್ಟವರೇ ಸಂಪದ್ಗಿರಿ ರಾಯರು. ಶಿಕ್ಷಕರು ಮತ ಹಾಕಿ ಪ್ರತಿವರ್ಷವೂ ತಮ್ಮವರಲ್ಲೊಬ್ಬರನ್ನು ಮುಖ್ಯಾಧ್ಯಾಪಕರಾಗಿ ಆಯ್ಕೆ ಮಾಡುವ ಪ್ರಜಾತಂತ್ರ ಸಂಪ್ರದಾಯ ವನ್ನು ದಕ್ಷಿಣ ಭಾರತದಲ್ಲೇ ಮೊಟ್ಟಮೊದಲು ಆಗ ನ್ಯಾಷನಲ್ ಹೈಸ್ಕೂಲು ಆರಂಭಿಸಿತು. (ಈಗಲೂ ಮೂರು ವರ್ಷಗಳಿಗೊಮ್ಮೆ ಶಿಕ್ಷಕರೇ ಮತಹಾಕಿ ಅಲ್ಲಿ ಪ್ರಿನ್ಸಿಪಾಲರನ್ನು ಆರಿಸು-ತ್ತಾರೆ.) ಹೀಗಿರುವಾಗ ೨೪ ವರ್ಷಗಳಲ್ಲಿ ಹದಿ ನೇಳು ಸಲ ಪ್ರಿನ್ಸಿಪಾಲರಾಗಿ ಆಯ್ಕೆಯಾದುದು ಸಂಪದ್ಗಿರಿರಾಯರ ಜನಪ್ರಿಯತೆಗೊಂದು ನಿದ ರ್ಶನ. ೧೯೪೫ರಲ್ಲಿ ನ್ಯಾಷನಲ್ ಕಾಲೇಜು ಸ್ಥಾಪನೆಯಾದಾಗಲೂ ಪ್ರಿನ್ಸಿಪಾಲರ ಜವಾಬ್ದಾರಿ ಯನ್ನು ಅವರ ತಲೆಗೇ ಕಟ್ಟಲಾಯಿತು.

ತಮ್ಮ ನಾಯಕತ್ವದಲ್ಲಿ ಪುನಶ್ಚೇತನಗೊಂಡ ದೇಶೀಯ ವಿದ್ಯಾಶಾಲೆಯು ದೇಶದಲ್ಲೇ ಆದರ್ಶ ವಿದ್ಯಾನಿಲಯ ಎನಿಸಬೇಕು ಎಂಬುದು ಸಂಪದ್ಗಿರಿರಾಯರ ಆದರ್ಶವಾಗಿತ್ತು. ಅದಕ್ಕಾಗಿ ಅವರು ಅಹರ್ನಿಶಿ ದುಡಿದರು. ಹೊಸ ಹೊಸ ಯೋಜನೆಗಳ ಹೊಳಹು ಹಾಕಿದರು. ಆಗ ಪಠ್ಯಕ್ರಮದಲ್ಲಿಲ್ಲದ ಅನೇಕ ವಿಷಯಗಳನ್ನು ಕಲಿಸಲು ಆರಂಭಿಸಿದರು. ಮಧ್ಯಾಹ್ನದ ಊಟದ ಯೋಜನೆ, ಹಿಂದೀ ಶಿಕ್ಷಣ, ದೈಹಿಕ ಶಿಕ್ಷಣ, ಸಾಮೂಹಿಕ ಭಜನೆ, ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ, ಖ್ಯಾತ ವ್ಯಕ್ತಿಗಳ ಜಯಂತಿ ಆಚರಣೆ ಹೀಗೆ ಹತ್ತಾರು ಹೊಸ ವಿಚಾರಗಳಿಗೆ ದೇಶೀಯ ವಿದ್ಯಾಶಾಲೆಯೇ ಮೊಟ್ಟ ಮೊದಲ ಪ್ರಯೋಗ ಶಾಲೆಯಾಯಿತು. ಇಂದು ಒಂದು ಘಟ್ಟವನ್ನು ತಲುಪಿರುವ ಕನ್ನಡ ಮಾಧ್ಯಮದ ಪ್ರಚಾರ ಸತ್ರವನ್ನು ನಾಲ್ಕು ದಶಕಗಳ ಹಿಂದೆಯೇ ಆರಂಭಿಸಿದ ಶ್ರೇಯಸ್ಸು ಸಂಪದ್ಗಿರಿರಾಯರದು.

ಆಗ ದೇಶೀಯ ವಿದ್ಯಾಶಾಲೆಗೆ ದಡ್ಡ ಹುಡು ಗರು ಬರುತ್ತಿದ್ದುದೇ ಜಾಸ್ತಿ. ಹುಡುಗರು ದಡ್ಡರಾದರೂ ಜನರ ಸೇವೆಗಾಗಿ ಸರಕಾರಿ ಶಿಲ್ದು ಪಡೆದ ಪ್ರಥಮ ಶಾಲೆಯದು. ೧೯೧೮ ರಲ್ಲಿ ರಾಷ್ಟ್ರವ್ಯಾಪ್ತ ಇನ್‌ಫ್ಲುಯೆಂಜಾ ಪಿಡುಗು ಬೆಂಗಳೂರಿಗೂ ಹಬ್ಬಿದಾಗ ಊರವರೆಲ್ಲ ಹಾಸಿಗೆ ಹಿಡಿದರು. ಸರಿಯಾದ ಔಷಧಿಯಿಲ್ಲ, ಮನೆಯಲ್ಲಿ ಅಡಿಗೆ ಮಾಡುವವರಿಲ್ಲ. ಇಂಥ ವಿಷಮ ಸ್ಥಿತಿಯಿಂದಾಗಿ ದಿನೇ ದಿನೇ ಸಾಯುವ


ಮೈಸೂರ್ ಖ್ಯಾತಿ
ಪುಷ್ಪಾಂಜಲಿ
ಇತಿಹಾಸದಂತೆ
ಮನೋಹರ
ದಾವಣಗೆರೆ
ಬಟ್ಟೆಗಳು
dcm/3/72 kan

ವರ ಪ್ರಮಾಣವು ಹೆಚ್ಚಿದಾಗ—ಸರ್ಕಾರವು ತಾನೇ ಗಂಜಿ ಹಾಗೂ ಔಷಧಿಯನ್ನು ನೀಡಲು ಮುಂದೆ ಬಂತು. ಅನೇಕ ವಿದ್ಯಾರ್ಥಿಗಳು ಅವುಗಳನ್ನು ಮನೆ ಮನೆಗೂ ಹಂಚಲು ಮುಂದೆ ಬಂದರು. ಆಗ ಹೆಚ್ಚು ಪ್ರಮಾಣದಲ್ಲಿ ಸೇವೆ ಸಲ್ಲಿಸಿದವರು ದೇಶೀಯ ವಿದ್ಯಾಶಾಲೆಯ ವಿದ್ಯಾರ್ಥಿಗಳು.

೧೯೨೭ ರಲ್ಲಿ ಕಾಯಿಲೆ ಬಿದ್ದ ಗಾಂಧೀಜಿಯವರು ಕೆಲವು ದಿನ ನಂದೀಬೆಟ್ಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಅವರ ಸೇವೆಗೆ ಸಂಪದ್ಗಿರಿರಾಯರು ತಮ್ಮ ವಿದ್ಯಾರ್ಥಿಗಳನ್ನು ಕಳುಹಿಸಿಕೊಟ್ಟರು. ಇದರಿಂದ ಸಂಪ್ರೀತರಾದ ಗಾಂಧೀಜಿಯವರು ಸ್ವತಃ ನ್ಯಾಷನಲ್ ಹೈಸ್ಕೂಲಿಗೆ ಭೇಟಿ ನೀಡಿ, ಅಲ್ಲಿರುವ ವ್ಯಾಯಾಮಶಾಲೆಯನ್ನು ಉದ್ಘಾಟಿಸಿದರು.

ಅದೇ ವೇಳೆಗೆ ರಾಜಾಜಿಯವರ ಜೊತೆ ರಾಯರ ಸ್ನೇಹ ಬೆಳೆಯಿತು. ತಾವು ನ್ಯಾಷನಲ್ ಹೈಸ್ಕೂಲಿನ 'ಅತಿಥಿ ಶಿಕ್ಷಕರು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ರಾಜಾಜಿ ಆಗಾಗ್ಗೆ ಅಲ್ಲಿ ಬಂದು ಪ್ರವಚನ ನೀಡುತ್ತಿದ್ದರು. ಸಂಪದ್ಗಿರಿರಾಯರ ವ್ಯಕ್ತಿತ್ವವನ್ನೂ ಸೇವಾನಿಷ್ಠೆಯನ್ನೂ ಶಿಕ್ಷಣರಂಗದಲ್ಲಿ ಸದ್ದಿಲ್ಲದೇ ಅವರು ನಡೆಸಿದ ಕ್ರಾಂತಿಯನ್ನೂ ಕಂಡು ಕೊನೆಯವರೆಗೂ ಅವರೊಡನೆ ರಾಜಾಜಿ ಸಂಪರ್ಕವಿಟ್ಟುಕೊಂಡಿದ್ದರು.

ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರ ಮಾತಿನಲ್ಲಿ ಹೇಳಬಹುದಾದರೆ ಸಂಪದ್ಗಿರಿರಾಯರೊಬ್ಬ 'ಪ್ರಿನ್ಸ್ ಆಫ್ ಹೆಡ್‌ಮಾಸ್ಟರ್ಸ್'. ಆದರೆ ನಾಲ್ಕು ಗೋಡೆಗಳ ಮಧ್ಯೆ ಸದಾ ಪುಸ್ತಕಗಳ ನಡುವೆ ತಲೆ ತೂರಿಕೊಂಡು ಕೂಡುವ ಪ್ರಾಧ್ಯಾಪಕ ವರ್ಗಕ್ಕೆ ಅವರು ಸೇರಿರಲಿಲ್ಲ. 'ನಮ್ಮ ಬಾಳು ಶ್ರೀಮಂತವಾಗಬೇಕಾದರೆ, ನಮ್ಮ ನೆರೆಹೊರೆಯವರ ಜೀವನವನ್ನೂ ಶ್ರೀಮಂತಗೊಳಿಸಲು ಪ್ರಯತ್ನಿಸಬೇಕು' ಎಂದವರು ಈಗಲೂ ಹೇಳುತ್ತಾರೆ.

೫೦ ವರ್ಷಗಳ ತಮ್ಮ ಸಾರ್ವಜನಿಕ ಜೀವನದಲ್ಲಿ ಸಂಪದ್ಗಿರಿರಾಯರು ಆಸಕ್ತಿ ವಹಿಸದ ಯಾವ ರಂಗವೂ ಇಲ್ಲ. ಅವರು ಅಮೆಚೂರ್ ಡ್ರಾಮಾಟಿಕ್ ಅಸೋಸಿಯೇಶನ್ನಿಗಾಗಿ 'ದಿ ಥಿಯೇಟರ್' ಎಂಬ ಪತ್ರಿಕೆಯ ಸಹಸಂಪಾದಕರಾಗಿದ್ದರು. ಸ್ನೇಹಿತ ಶ್ರೀ ತಿ. ತಾ. ಶರ್ಮರ ಪತ್ರಿಕೆಗಳಿಗಾಗಿ—ವಿಶೇಷತಃ 'ಮೈಸೂರು ಕ್ರಾನಿಕಲ್' ಪತ್ರಿಕೆಗಾಗಿ-ಅವರು ಬಹು ವಿಧ ಸೇವೆ ಸಲ್ಲಿಸಿದರು. ಕನ್ನಡದ ಕಹಳೆಯೂದುತ್ತ ಅವರೂ ಸಾಹಿತ್ಯ ಪರಿಷತ್ತಿನವರ ಜೊತೆ ನಾಡಿನಾದ್ಯಂತ ಸಂಚರಿಸಿದರು. ಹಿಂದೀ ಪ್ರಚಾರದ ನೇತೃತ್ವ ವಹಿಸಿದರು. ಖಾದೀ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. 'ತ್ರಿವೇಣಿ' ಎಂಬ ಆಂಗ್ಲ ಸಾಂಸ್ಕೃತಿಕ ಪತ್ರಿಕೆಯ ಸಂಪಾದಕರಾದರು. ನಾನಾ ಪತ್ರಿಕೆಗಳಿಗೆ ಲೇಖನ ಬರೆದರು. ನಾಡಿನಾದ್ಯಂತ ಉಪನ್ಯಾಸಗಳನ್ನು ನೀಡಿದರು. ಸಂಗೀತ, ಚಿತ್ರಕಲೆಗಳಲ್ಲೂ ಆಸ್ಥೆ ವಹಿಸಿದರು. ತಾವೇ ಬಣ್ಣ ಬಳಿದುಕೊಂಡು ನಾಟಕವಾಡಿದರು ಕೂಡ.

೧೯೩೭ ರಿಂದ ೫೪ ರ ವರೆಗೆ ಅವರು ಶಿಕ್ಷಕ ಮತಕ್ಷೇತ್ರದಿಂದ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ಒಂದು ತಿಂಗಳು ಹಂಗಾಮಿ ಅಧ್ಯಕ್ಷರೂ ಆಗಿದ್ದರು. ೧೯೫೭ರಲ್ಲಿ ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಯಿಂದ ನಿವೃತ್ತರಾದ ನಂತರ ಅವರು ಶ್ರೀ ರಂಗನಾಥ ದಿವಾಕರ ಅವರ ಸಲಹೆಯಂತೆ ರಾಂಚಿಯ ವಿಕಾಸ ವಿದ್ಯಾಲಯ ಎಂಬ ಪಬ್ಲಿಕ್ ಸ್ಕೂಲಿನ ಪ್ರಿನ್ಸಿಪಾಲರಾಗಿ ಮೂರು ವರ್ಷ ದುಡಿದರು. ನಂತರ ಬಿ. ಎಂ. ಎಸ್. ಮಹಿಳೆಯರ ಕಾಲೇಜಿನಲ್ಲಿ ಕೆಲವು ಕಾಲ ಅವರು ಗೌರವ ಪ್ರಾಧ್ಯಾಪಕರಾಗಿದ್ದರು.

ಇಂದು ೭೭ರ ಹೊಸ್ತಿಲಲ್ಲಿರುವ ಅವರು ವಾನಪ್ರಸ್ಥಜೀವನ ನಡೆಸುತ್ತಿದ್ದಾರೆ. (ಅವರ ಪತ್ನಿ ಬಹು ಹಿಂದೆಯೇ ೧೯೪೯ರಲ್ಲಿ ಅವರನ್ನು ಅಗಲಿದರು.) ತಾವು ಆರಂಭದಿಂದಲೂ ಗವರ್ನಿಂಗ್ ಬಾಡಿಯ ಸದಸ್ಯರಾಗಿರುವ ಬೆಂಗಳೂರು

ಗೋಖಲೆ ಇನ್‌ಸ್ಟಿಟ್ಯೂಟಿನ ಎದುರುಬದಿಯೇ ಇಂದವರ ವಾಸ. "ಹಿಂದಿನ ಕಾಲದಲ್ಲಿ ವಾನ ಪ್ರಸ್ಥವೆಂದರೆ ಕಾಡಿಗೆ ಹೋಗುತ್ತಿದ್ದರು. ಆದರೆ ಇಂದು ಡಕಾಯಿತರಿಗೆ ಅವಿತುಕೊಳ್ಳಲು ಕೂಡ ಕಾಡು ಉಳಿದಿಲ್ಲವಾದ್ದರಿಂದ ನಾನು ಕಾಡಿಗಂತೂ ಹೋಗುವಂತಿಲ್ಲ," ಎನ್ನುವ ಅವರು ಮನೆಯಲ್ಲಿ ಅಧ್ಯಯನ-ಬರವಣಿಗೆಗಳಿಗಾಗಿಯೇ ಮಹಡಿಯ ಮೇಲೆ ಪ್ರತ್ಯೇಕ ಕೋಣೆಯೊಂದನ್ನು ಇಟ್ಟು ಕೊಂಡಿದ್ದಾರೆ.

ತಮ್ಮ ಕೊಠಡಿಯನ್ನು ಅವರು 'ಆಶ್ರಮ' ಎಂದೇ ಕರೆಯುತ್ತಾರೆ. ಊಟಕ್ಕೇನೊ ಕೆಳಗಡೆ ಬಂದು, ಎಲ್ಲರೊಡನೆ ಸರಸ ಸಲ್ಲಾಪವಾಡುತ್ತ ಕೂಡುತ್ತಾರೆ. (ಅವರಿಗೆ ಒಬ್ಬ ಹೆಣ್ಣು, ಮೂವರು ಗಂಡು ಮಕ್ಕಳು.) ನಂತರ ಮತ್ತೆ ತಮ್ಮ ಗೂಡಿಗೆ ಹೋಗುತ್ತಾರೆ. "ಬನ್ನಿ ನಮ್ಮ ಏಕಾಂತ ವೈಭವಕ್ಕೆ ಹೋಗೋಣ," ಎನ್ನುತ್ತ.

ಸಂಪದ್ಗಿರಿರಾಯರು ರಾಜಾಜಿಯವರ ರಾಮಾ ಯಣ, ಸಾಕ್ರೆಟೀಸ್, ಭಗವದ್ಗೀತೆ, ಉಪನಿಷತ್ ಕಥೆಗಳನ್ನಲ್ಲದೇ-ಕೆಲವು ಚಿಡಿಗಥೆಗಳನ್ನೂ ತಮಿಳಿ ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಸಮಾನ ಪದಕ್ಕಾಗಿ ತಾಕಲಾಡಿ, ವಿದ್ವಜ್ಜನರ ಜೊತೆ ಚರ್ಚಿಸಿ ಅನುವಾದ ಕಾರ್ಯವನ್ನು ಮುಂದುವರೆ ಸುತ್ತಿದ್ದ ಸಂಪದ್ಗಿರಿರಾಯರ ಭಾಷಾಂತರ ಪ್ರೌಢಿಮೆಯ ಬಗ್ಗೆ ರಾಜಾಜಿಯವರಿಗೆ ಅದೆಷ್ಟು ಭರವಸೆ ಇತ್ತೆಂದರೆ, ಎಲ್. ಗುಂಡಪ್ಪನವರು ಅವರ 'ಮಹಾಭಾರತ'ದ ಭಾಷಾಂತರದ ಹೊಣೆ ಹೊತ್ತಾಗ, ಅದನ್ನು ಪರಿಷ್ಕರಿಸುವ ಹೊಣೆ ಯನ್ನು ಅವರು ಸಂಪದ್ಗಿರಿರಾಯರಿಗೇ ವಹಿಸಿ ದ್ದರು.

ಶ್ರೀ ನಾ. ಸು. ಹರ್ಡೀಕರ ಹಾಗೂ ಅವರ ಸೇವಾದಳ ಚಟುವಟಿಕೆಗಳ ಜೊತೆ ಮೊದಲಿ ನಿಂದಲೂ ನಿಕಟ ಸಂಪರ್ಕವಿಟ್ಟುಕೊಂಡಿರುವ ಸಂಪದ್ಗಿರಿರಾಯರು ಹರ್ಡೀಕರ ಅವರ ಬಗ್ಗೆ 'ಗ್ರೇ ಬಟ್ ಫ್ರೆಶ್' ಎಂಬ ಗ್ರಂಥವನ್ನು ರಚಿಸಿ ದ್ದಾರೆ. ಇತ್ತೀಚೆ 'ಹೊಯ್ಸಳರು' ಎಂಬ ಪುಸ್ತಕವನ್ನು ಬರೆದಿದ್ದಾರೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ೨೦೦ ವರ್ಷಗಳ ಇತಿಹಾಸವನ್ನು ಕುರಿತ 'ಸ್ವರಾಜ್ಯ' ಎಂಬ ಪುಸ್ತಕವು ಇದೀಗ ಹೊರಬಂದಿದೆ. ಶಾಲೆಗಳಲ್ಲಿ ನೇರವಾಗಿ ಧಾರ್ಮಿಕ ಶಿಕ್ಷಣ ಕೊಡುವ ಬದಲು ನಾನಾ ಧರ್ಮಸಂಸ್ಥಾಪಕರ ಹಾಗೂ ಸಂತರ ಜೀವನ ಚರಿತ್ರೆಯನ್ನು ಮಕ್ಕಳಿಗೆ ಹೇಳಿಕೊಟ್ಟರೆ ಸಾಕು ಎಂದು ಸರ್ಕಾರದ ಸಮಿತಿಯು ನಿರ್ಧರಿಸಿದ ಮೇಲೆ ಸಂಪದ್ಗಿರಿರಾಯರೂ ಅವರ ಸ್ನೇಹಿತರೂ ಬರೆದ ೬೧ ಲೇಖನಗಳ ಮೂರು ಪುಸ್ತಕಗಳನ್ನು ರಾಜ್ಯ ಸರ್ಕಾರವು ಪ್ರಕಟಿಸಿದ್ದು, ಈ ಶೈಕ್ಷಣಿಕ ವರ್ಷದಿಂದ ಅವು ೮, ೯, ಹಾಗೂ ೧೦ ನೇ ತರಗತಿಗಳಿಗೆ ಪಠ್ಯಪುಸ್ತಕಗಳಾಗಲಿವೆ.

ಶ್ರೀ ದಿವಾಕರ ಅವರ ಆಹ್ವಾನದ ಮೇರೆಗೆ ಅವರು 'ಕರ್ನಾಟಕ ಥ್ರೂ ದಿ ಏಜಿಸ್' (ಎಂಬ ಬೃಹತ್ ಗ್ರಂಥದ ಸಂಪಾದಕ ಮಂಡಲಿಯ ಸಹಾಯಕರಾಗಿದ್ದರು. ನಂತರ ಅದರ ಕನ್ನಡ ಭಾಷಾಂತರ ಸಮಿತಿಗೂ ಅಧ್ಯಕ್ಷರಾಗಿದ್ದರು.

ಹಾಗೆ ನೋಡಿದರೆ ಸಂಪದ್ಗಿರಿರಾಯರು ಬರೆದ ಸ್ವತಂತ್ರ ಲೇಖನವೆಂದರೆ 'ವಿಶ್ವವ್ಯಾಪಿ ಇಜಾರ' ಎಂಬ ಹಾಸ್ಯ ಲೇಖನ. ಅವರ ಪ್ರಖರ ಬುದ್ಧಿ, ವಿಡಂಬನ ಶಕ್ತಿಗೆ ಅದೊಂದೇ ಲೇಖನವು ಸಾಕ್ಷಿ. ಅದು ತಮಿಳು, ತೆಲುಗಿಗೆ ಅನುವಾದವಾದಾಗ— ರಾಯರು ಇನ್ನೂ ಇಂಥ ಲೇಖನಗಳನ್ನು ಬರೆದಿದ್ದಾರೆಯೇ? ಎಂದು ಆ ಭಾಷೆಯವರು ಕೇಳಿದ್ದುಂಟು. ಇಜಾರಿನ ಮೇಲೆ ಅಂಥದೊಂದು ವಿಡಂಬನ ಲೇಖನವನ್ನು ಬರೆದ ಈ 'ಮಹಾ ರಾಜು' ವಿಶ್ವದ ಸಾವಿರಾರು ಸಮಸ್ಯೆಗಳ ಅರಿ ವಿದ್ದೂ-ಅವುಗಳ ಬಗ್ಗೆ ಲೇಖನ ಬರೆಯುತ್ತಿಲ್ಲ ವಲ್ಲ ಎಂದು ಅವರ ಅನೇಕ ಸ್ನೇಹಿತರ ಕೊರಗು.

ಸಂಪದ್ಗಿರಿರಾಯರಿಗೆ ಖಾದಿಯೆಂದರೆ ಮೋಹ. ಖಾದೀ ಚಳವಳಿ ಆರಂಭವಾದಾಗ ಸಾಕಷ್ಟು ಬಟ್ಟೆ ಸಿಗದೇ ಒಂದೇ ಗಜ ಅಗಲವಾದ ಪಂಚೆ ಯುಟ್ಟು ತಿರುಗುತ್ತಿದ್ದ ರಾಯರನ್ನು ಕಂಡು ಅನೇಕರು ಹಾಸ್ಯ ಮಾಡಿದ್ದುಂಟು. ಅನಂತರ

ವಂತೂ ಅವರು ತಾವು ತೆಗೆದ ನೂಲಿನಿಂದ ತಯಾರಿಸಿದ ಬಟ್ಟೆಯನ್ನೇ ಹೆಚ್ಚಾಗಿ ಧರಿಸಿದ್ದಾರೆ. ನಿತ್ಯ ರಾತ್ರಿ ನೂಲು ತೆಗೆಯುವುದು ಅವರದೊಂದು ವ್ರತವಾಗಿಬಿಟ್ಟಿತ್ತು.

ಸಂಪದ್ಗಿರಿರಾಯರ ಹಾಸ್ಯ ಪ್ರವೃತ್ತಿಯೂ ಅವರ ಜನಪ್ರಿಯತೆಯ ಮುಖ್ಯ ಕಾರಣಗಳಲ್ಲೊಂದು. ನ್ಯಾಷನಲ್ ಹೈಸ್ಕೂಲಿನಿಂದ ಅವರು 'ದೇಶೀಯ ವಿದ್ಯಾ ಶಾಲಾ ಪತ್ರಿಕೆ'ಯನ್ನು ಹೊರಡಿಸುತ್ತಿದ್ದರು. ಅವರನ್ನು ಕೆರಳಿಸಲು ಅನೇಕರು ಈ ಪತ್ರಿಕೆಯನ್ನು 'ದೇವಿಶಾಪ' ಎಂದು ಮೊಟಕಾಗಿಯೇ ಕರೆಯುತ್ತಿದ್ದರು. ಅಂಥವರಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರೊಬ್ಬರು. ಒಮ್ಮೆ ಗೊರೂರು ಅವರೇ ಆ ಪತ್ರಿಕೆಗಾಗಿ, 'ಹಾರುವಯ್ಯ ಹಜಾಮನಾದ' ಎಂಬ ಲೇಖನವನ್ನು ಬರೆದರು. ಆಗ ಸಂಪದ್ಗಿರಿರಾಯರು ವಿನೋದವಾಗಿಯೇ ಹೇಳಿದರು, "ದೇವಿಶಾಪದಿಂದ ಹಾರುವಯ್ಯ ಹಜಾಮನಾದ," ಎಂದು.

ಖಾಸಗೀ ಜೀವನದಲ್ಲಿ ಸಂಪದ್ಗಿರಿರಾಯರು ಸರಸಿ, ರಸಿಕ. ಬಾಳಿನಲ್ಲಿ ಸಾಕಷ್ಟು ಕಷ್ಟ, ಬೇಸರ ಅನುಭವಿಸಿದರೂ ಅವರು ಸದಾ ನಗುತ್ತಲೇ ಇರುತ್ತಾರೆ. ಬುತ್ತಿ, ಚಿಗುರು ವೀಳೆಯದೆಲೆ, ಈರನಗೆರೆ ಬದನೇಕಾಯಿ, ರಸಬಾಳೆಹಣ್ಣುಗಳನ್ನು ಕಂಡು ಈಗಲೂ ಅವರು ಮಕ್ಕಳು ಹೊಸ ಆಟಿಕೆಗಳನ್ನು ಕಂಡಷ್ಟು ಸಂತಸಪಡುತ್ತಾರೆ. ನಂಜನಗೂಡಿನ ರಸಬಾಳೆ ಹಣ್ಣು ಕಂಡರಂತೂ ಅವರು ನಿಂತುಬಿಡುತ್ತಾರೆ. ಪಾರಿಯಲ್ಲೆ ಕೊಂಡು ಸ್ನೇಹಿತರಿಗೆಲ್ಲ ಹಂಚಿ, "ಈಗ ಹಿಂದಲ ನಂಜನಗೂಡು ರಸಬಾಳೆ ಹಣ್ಣು ಮರೆಯಾಗಿದೆ; ಸಿಕ್ಕರೂ ಎಳಕು," ಎಂದು ತೃಪ್ತಿಪಡುತ್ತಾರೆ.

ಜೀವನದಲ್ಲಿ ದೊಡ್ಡ ಸುಖಕ್ಕಾಗಿ ಹಗಲು-ರಾತ್ರಿ ಚಿಂತಿಸದೇ ಸಣ್ಣ ಸಣ್ಣ ವಿಷಯಗಳಲ್ಲೂ ಸುಖದ ಅನುಭವವನ್ನು ಪಡೆಯುವುದು ಅವರ ಗುಣ ವಿಶೇಷ. ಅಂತೇ ತಮ್ಮ ಜೀವನದ ಯಾವ ಘಟನೆಯನ್ನು ನೆನೆದಾಗಲೂ ಅವರಿಗೆ ಸಂತೋಷ. ಈ ಯುಗಾದಿಗೆ ೭೬ ತುಂಬುವ ಸಂಪದ್ಗಿರಿರಾಯರ ಜೀವನದಲ್ಲಿ ಬೇವು-ಬೆಲ್ಲ ಎಂಬ ತಾರತಮ್ಯವೇ ಇಲ್ಲ. ಎರಡೂ ಅವರಿಗೆ ಸುಖದ ಅನುಭವ. ✿



ಮಾನವನ ಜೀವನವು ದೇಶ ಕಾಲಗಳಿಂದ ಉತ್ತೇಜಿತವೂ ಆಗಿದೆ, ತ್ರಸ್ತವೂ ಆಗಿದೆ. ಜೀವನದ ಬಿಸ್ನ ಹಕ್ಕಿ ಬಾಯಿ ಬಿಂದಾಗ, ಜೀವಾಣುಗಳ ಪ್ರಚಂಡತೆ ಕವಚವನ್ನು ತೆಗೆದೊಗೆದು ಹೊರನುಗ್ಗಿ ಬಂದಾಗ ಸಾಹಿತ್ಯವಾಗಿದೆ. ಸಾಹಿತ್ಯವನ್ನು ನಿರ್ಮಿಸುವುದು ವ್ಯಕ್ತಿಯಾಗಿದ್ದರೂ ದೇಶದ ಹೊಟ್ಟೆಯಿಂದ, ಕಾಲನ ಬಾಯಿಯಿಂದ ಅದು ಹೊಮ್ಮುತ್ತಿದೆ. ದೇಶ ಎಂದರೆ ಭೌಗೋಲಿಕ ಮರ್ಯಾದೆಯಲ್ಲ. ಕಾಲ ಎಂದರೆ ಗಡಿಯಾರದ ದುಂಡು ಸುತ್ತುವ ಮುಳ್ಳಿನ ಪ್ರಮಾಣವಲ್ಲ.

— ರಾವಬಹಾದ್ದೂರ ('ಅಭಿವಂದನ'ದಲ್ಲಿ)

ಕನ್ನಡ ಪತ್ರಿಕೋದ್ಯಮದ ಮೊದಲ ಹೆಜ್ಜೆ 'ಮಂಗಳೂರು ಸಮಾಚಾರ'ದ್ದು (೧೮೪೩). ವಿದೇಶದಿಂದ ಅದರ ಮೈಕ್ರೋಫಿಲ್ಮ್ ತರಿಸಿ ಚಿತ್ರ ಸಹಿತವಾಗಿ ಅದನ್ನು 'ಕಸ್ತೂರಿ'ಯ ವಾಚಕರಿಗೆ ಈ ಹಿಂದೆ (೧೯೬೮ ರ ವಸಂತ ಸಂಚಿಕೆ) ಪರಿಚಯ ಮಾಡಿಕೊಟ್ಟದ್ದಾಗಿದೆ.

ಆದರೆ ೧೮೪೩ಕ್ಕೆ ಮೊದಲು ಕನ್ನಡದಲ್ಲಿ ಪತ್ರಿಕೆಗಳು ಇರಲೇ ಇಲ್ಲವೆ? ಇದನ್ನು ನಿರ್ಧರಿಸಬೇಕಾದರೆ, ಅಂಥ ಆ ಪತ್ರಿಕೆಗಳು ಸಕೃದ್ದರ್ಶನಕ್ಕೆ ದೊರೆಯುವಂತಿರಬೇಕು. ಇಲ್ಲವೆ ನಿಶ್ಚಿತ ಪುರಾವೆ ಅಥವಾ ಮೂಲ ದಾಖಲೆ ಇರಬೇಕು. ಹಾಗೆ ಯಾವುದೂ ದೊರೆತಿಲ್ಲ. ಅರ್ಧ

ಕನ್ನಡ ಪತ್ರಿಕೋದ್ಯಮದ ಮೊದಲ ಹೆಜ್ಜೆಗಳು

ಶ್ರೀನಿವಾಸ ಹಾವನೂರ

ಮರ್ಧ ಪುರಾವೆ ಅಥವಾ ಊಹೆಯ ಮೇಲಿಂದ ೧೮೪೩ ಕ್ಕೆ ಮುಂಚೆ ಪತ್ರಿಕೋದ್ಯಮದ ಹೆಜ್ಜೆಗಳಿದ್ದುವೆಂದು ಅಲ್ಲಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ. ಉದಾಹರಣೆಗೆ ೧೮೧೨ರಿಂದು ಬಳ್ಳಾರಿಯಲ್ಲಿ ಜರ್ಮನ್ ಪಾದ್ರಿಗಳು ಕಲ್ಲಚ್ಚಿನಲ್ಲಿ 'ಕಂನಡ ಸಮಾಚಾರ'ವೆಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದರೆಂದು ಭಾರತೀಯ ಪತ್ರಿಕೋದ್ಯಮದ ಕುರಿತಾದ ಥೀಸಿಸ್‌ನಲ್ಲಿ ಬಂದಿದೆ. ಇದಕ್ಕೆ ಆಧಾರವೇನೆಂಬುದು ಸೂಚಿತವಾಗಿಲ್ಲ. ಆದರೆ ಇದೊಂದು ಅಸತ್ಯದ ಹೇಳಿಕೆ. ಜರ್ಮನ್ ಮಿಶನರಿಗಳು ನಮ್ಮ ನಾಡಿಗೆ ಬಂದದ್ದು ಅದಕ್ಕೂ ತಡವಾಗಿ– ಎಂದರೆ ೧೮೩೪ರಲ್ಲಿ. ಅಲ್ಲದೆ ಅವರ ಕಾರ್ಯಕ್ಷೇತ್ರವು ಉತ್ತರದ ಬಳ್ಳಾರಿ ಅಲ್ಲ; ದಕ್ಷಿಣ ಕರಾವಳಿಯ ಮಂಗಳೂರು–ಎಂಬುದು ಸರ್ವವಿದಿತ. ಅವರು

ಕಲ್ಲಚ್ಚಿನ ಮುದ್ರಾಯಂತ್ರವನ್ನು ಸ್ಥಾಪಿಸಿದುದು ೧೮೪೨ರಷ್ಟು ತಡವಾಗಿ. ಇದೆಲ್ಲ ವಿವರ ಜರ್ಮನ್ (ಬಾಸೆಲ್) ಮಿಶನರಿಗಳ ವಿವಿಧ ವರದಿ/ಪುಸ್ತಕಗಳಲ್ಲಿ ಸ್ಪಷ್ಟವಾಗಿ ಬಂದದ್ದೇ ಇದೆ; ಇದಕ್ಕಿಂತ ಪ್ರಬಲ ವಿರೋಧವೆಂಪರೆ, 'ಮಂಗಳೂರು ಸಮಾಚಾರ'ವೇ ಬಳ್ಳಾರಿಗೆ ಸ್ಥಳಾಂತರ ಹೊಂದಿ 'ಕಂನಡ ಸಮಾಚಾರ' ಎಂದಾದುದು. ಹಾಗೆಂದು 'ಮಂಗಳೂರು ಸಮಾಚಾರ'ದ ಕೊನೆಯ ಸಂಚಿಕೆಯಲ್ಲಿಯೇ ಉಕ್ತವಾದುದನ್ನು 'ಕಸ್ತೂರಿ'ಯ ವಾಚಕರಿಗೆ ನೆನಪಿಸಬಯಸುತ್ತೇವೆ.

ಇನ್ನು ೧೮೨೭ರ ಸುಮಾರಿಗೆ ಯಾವುದೋ ಒಂದು ಕನ್ನಡ ಪತ್ರಿಕೆ ಇತ್ತು ಎಂಬುದಾಗಿ ಓರ್ವ ಪತ್ರಿಕೋದ್ಯಮಿ ಭಾಷಣ ಮಾಡಿದ್ದರು. ಪತ್ರಿಕೆ ಹೊರಡಬೇಕಾದರೆ ಮುದ್ರಣಾಲಯ ಬೇಕು. ಕರ್ನಾಟಕದಲ್ಲಿ ಮುದ್ರಾಯಂತ್ರಗಳು ನೆಲೆಗೊಂಡದ್ದು ಅನಂತರವೇ. (ಬಳ್ಳಾರಿ-೧೮೨೬; ಬೆಂಗಳೂರು-೧೮೪೧; ಮಂಗಳೂರು-೧೮೪೨; ಮೈಸೂರು-೧೮೪೩; ಬೆಳಗಾಂವಿ-೧೮೪೮) ಭಾರತದಲ್ಲಿ ಪತ್ರಿಕೆಗಳನ್ನು ಹೊಂಡಿಸಲಾರಂಭಿಸಿದವರು ಮಿಶನರಿ ಜನರಷ್ಟೇ. ಬಳ್ಳಾರಿಯಲ್ಲಿ ಆಗ ನೆಲೆಗೊಂಡಿದ್ದ ಲಂಡನ್ ಮಿಶನ್‌ನವರು ಸ್ವತಃ ಪತ್ರಿಕೆಯನ್ನು ಹೊರಡಿಸಿದ್ದರ ಉಲ್ಲೇಖವು ಅವರ ಯಾವ ವಾರ್ಷಿಕ ವರದಿಗಳಲ್ಲಿಯೂ ಇಲ್ಲ.

ಕ್ರಿ. ಶ. ೧೮೫೦ ರ ಸುಮಾರಿಗೆ ಧಾರವಾಡದಲ್ಲಿ 'ಭಾವಾ' ಎಂಬ ಪತ್ರಿಕೆ ಹೊರಡುತ್ತಿತ್ತೆಂಬುದಾಗಿ 'ಪತ್ರಿಕಾ ವ್ಯವಸಾಯ' ಪುಸ್ತಕದಲ್ಲಿ ಕಾಣಿಸಲಾಗಿದೆ. ಧಾರವಾಡದಲ್ಲಿ 'ಭಾವಾ' ಎಂಬ ಪತ್ರಿಕೆಯೇನೋ ಇದ್ದಿತು—ಆದರೆ ಮರಾಠಿಯಲ್ಲಿ! ಭಾವಾ—ಇದು ಕನ್ನಡ ಶಬ್ದವೂ ಅಲ್ಲ. ಮರಾಠಿಯಲ್ಲಿ ಅದರ ಅರ್ಥ ಅನೆಯ ಮರಿ ಎಂಬುದು. ಇನ್ನೊಂದೆಂದರೆ ಅದರ ಪ್ರಕಟನೆ ೧೮೫೩ರಿಂದ ಆರಂಭ. ಹಾಗೆಂದು ಮುಂಬಯಿ ಸರಕಾರದ Report on Native Papers ನಲ್ಲಿ ಹಾಗೂ ಹಳೆಯ ಧಾರವಾಡ ಜಿಲ್ಲಾ ಗೆಜೆಟಿಯರ್‌ನಲ್ಲಿ (ಪು. ೬೨೦) ಕಾಣಿಸಲಾಗಿದೆ.*

ಅಂತೂ ೧೮೪೩ರ 'ಮಂಗಳೂರ ಸಮಾಚಾರ'ವೇ ಕನ್ನಡ ಪತ್ರಿಕೋದ್ಯಮದ ಮೊದಲ ಹೆಜ್ಜೆಯೆಂಬುದು ಸದ್ಯಕ್ಕೆ ನೆಲೆಗೊಂಡಿದೆ. ಅದಕ್ಕಿಂತ ಪೂರ್ವದಲ್ಲಿ ಬೆಳಕು ಕಂಡ ಇತರ ಭಾರತೀಯ ಭಾಷಾ ಪತ್ರಿಕೆಗಳನ್ನು ನೋಡೋಣ. ಬಂಗಾಲೀ ಭಾಷೆಯ ಮೊದಲ ಪತ್ರಿಕೆ 'ಸಮಾಚಾರ ದರ್ಪಣ'ವು ೧೮೧೮ರಲ್ಲಿ ಜನ್ಮ ತಾಳಿತು. ಮರಾಠಿಯ ಮೊದಲ ಪತ್ರಿಕೆಯ ಹೆಸರು 'ಮುಂಬಾಪುರ ವರ್ತಮಾನ'ವೆಂಬುದು (೧೮೨೮). ತಮಿಳು ಪತ್ರಿಕೋದ್ಯಮದ ಮೊದಲ ವರ್ಷ ೧೮೩೧. ಕ್ರಿ. ಶ. ೧೮೩೫ರಲ್ಲಿ ಹೊರಬಂದ 'ಸತ್ಯದೂತ'ವು ತೆಲುಗಿನ ಪ್ರಥಮ ಪತ್ರಿಕೆಯಾಗಿದೆ.

ಕನ್ನಡದ ಪ್ರಥಮ ಪತ್ರಿಕೆಯು ನಿಜವಾದ ಸಮಾಚಾರ ಪತ್ರಿಕೆಯಾಗಿದ್ದಿತು. ನಾಲ್ಕೇ ಪುಟಗಳದ್ದಿದ್ದರೂ ಮಂಗಳೂರು ನಗರದಿಂದ ಹಿಡಿದು ಜಗತ್ತಿನ ಸುದ್ದಿಗಳ ವರೆಗೆ ಅದರ ಹರಹು ಇದ್ದಿತು. ಕತೆ-ಹಾಡುಗಳೂ ಪ್ರಕಟವಾಗುತ್ತಿದ್ದುವು. ಅದನ್ನು ಸಂಪಾದಿಸಿ ಮಂಗಳೂರಿನಿಂದ ಪ್ರಕಟಿಸುತ್ತಿದ್ದವನು ಹರ್ಮನ್ ಮೊಗ್ಲಿಂಗ್ ಎಂಬ ಬಾಸೆಲ್ ಮಿಶನ್ನಿನ ಪಾದ್ರಿಯು. ಅವನು

---

* ಉತ್ತರ ಕರ್ನಾಟಕದಲ್ಲಿ ಆ ಕಾಲಕ್ಕೆ ಹೊರಡುತ್ತಿದ್ದ 'ಬೆಳಗಾಂವ ಸಮಾಚಾರ', 'ಹುಬಳೀ ವೈಭವ' 'ಧಾರವಾಡ ವೃತ್ತ' ಪತ್ರಿಕೆಗಳು ಮರಾಠಿಯಲ್ಲಿದ್ದುವು. ಇನ್ನೊಂದು ಪತ್ರಿಕೆಯ ಹೆಸರು 'ಕರ್ನಾಟಕ ವೃತ್ತ' ಆದರೆ ಬರೆವಣಿಗೆಯೆಲ್ಲ ಮರಾಠಿಯಲ್ಲಿ! ಅದರಂತೆ ೧೮೭೦ರ 'ಹಿತೇಚ್ಛು' (ಕಲಾಡಗಿ, ವಿಜಾಪುರ ಜಿಲ್ಲೆ) ಕೂಡ ಮರಾಠಿಯಲ್ಲೇ ಇದ್ದಿತೆಂದು ಸರಕಾರೀ ದಾಖಲೆಗಳಲ್ಲಿ ಉಕ್ತವಾಗಿದೆ. ಆ ಕಾಲಕ್ಕೆ ಈ ಭಾಗದ ವ್ಯವಹಾರ ಭಾಷೆ ಹೆಚ್ಚಾಗಿ ಮರಾಠಿಯಿದ್ದುದೇ ಅದಕ್ಕೆ ಕಾರಣವಾಗಿದೆ.

ತಮ್ಮ ಮತ್ತು ಪ್ರಸಾರಕ್ಕೆಂದು ಪತ್ರಿಕೆಯನ್ನು ಬಳಸಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಅದೊಂದು ಸೋಜಿಗವೇ ಸೈ. ಬದಲಾಗಿ ಇನ್ನಷ್ಟು ಸುದ್ದಿಗಳನ್ನು ಕೊಡುತ್ತ, ಅಖಿಲ ಕರ್ನಾಟಕ ಮಟ್ಟದಲ್ಲಿ ಅದನ್ನು ಹೊರಡಿಸಬೇಕೆಂದು ಬಗೆದನು.

"ಮಂಗಳೂರು, ಮೈಸೂರು, ತುಮಕೂರು, ಬಳ್ಳಾರಿ, ಶಿವಮೊಗ್ಗ, ಹುಬ್ಬಳ್ಳಿ, ಶಿರಸಿ, ಹೊಂನಾವರ ಮೊದಲಾದ ಸ್ಥಳಗಳಲ್ಲಿ ಕೆಲವು ನೂರು ಮಂದಿ ಈ ಕಾಗದಗಳನ್ನು ಛಾಪಿಸಿ ಪ್ರಕಟಿಸುವಾಗ್ಯೆ ನಾವು ಮಾಡಿದ ಆಲೋಚನೆ ಈ ಕಾಲದಲ್ಲಿ ಈ ದೇಶಸ್ಥರೊಳಗೆ ನಡಿಯುವದೋ ಏನೋ ಎಂದು ಸ್ವಲ್ಪ ಸಂದೇಹಪಡುತ್ತಿದ್ದೆವು. ಈಗ ಈ ದೇಶಸ್ಥರಲ್ಲಿ ಅನೇಕರಿಗೆ ಕನಡು ಭಾಷೆಯಲ್ಲಿ ಬರೆದ ಒಂದು ಸಮಾಚಾರ ಕಾಗದವನ್ನು ಓದುವವರಲ್ಲಿ ಮತಿ ಆಗುವದೆಂದು ನೋಡಿ ಅದನ್ನು ವೃದ್ಧಿ ಮಾಡುವ ಪ್ರಯತ್ನದಿಂದ ಇನ್ನು ಮುಂದೆ ಅದನ್ನು ಕಲ್ಲಿನಲ್ಲಿ ಛಾಪಿಸದೆ ಬಳ್ಳಾರಿಯಲ್ಲಿ ಇರುವ ಅಕ್ಷರ ಛಾಪಖಾನೆಯಲ್ಲಿ ಅಚ್ಚು ಪಡಿ ಮಾಡಲಿಕ್ಕೆ ನಿಶ್ಚೈಸಿದ್ದೇವೆ. ಆ ಮೇಲೆ ಕಂನಡ ಶೀಮೆಯ ನಾಲ್ಕು ದಿಕ್ಕುಗಳಲ್ಲಿಯಿರುವವರು ಶುದ್ಧವಾದ ಮೊಳೆ ಅಚ್ಚುಗಳಿಂದ ಆಗುವ ಬರಹವನ್ನು ಸುಲಭವಾಗಿ ಓದಬಹುದು. ಇದಲ್ಲದೆ ಹೆಚ್ಚು ವರ್ತಮಾನವಂನೂ ಚರಿತ್ರಗಳನ್ನೂ ಬರಿಯುವದಕ್ಕೆ ಸ್ಥಳ ಸಿಕ್ಕುವದು."

ಇದರ ಹಿಂದಿರುವ ಕನ್ನಡ ಪ್ರಜ್ಞೆಯನ್ನು ಗಮನಿಸಬೇಕು. ಅಂತೆಯೇ ಪತ್ರಿಕೆಯ ಹೆಸರನ್ನು 'ಕಂನಡ ಸಮಾಚಾರ'ವೆಂದು ಬದಲಿಸಲಾಯಿತು. ಮಾರ್ಚ್ ೧೮೪೪ರಿಂದ ಬಳ್ಳಾರಿಯಲ್ಲಿ ಮುದ್ರಿತವಾಗತೊಡಗಿತು. ಆದರೆ ಬಳ್ಳಾರಿಯಲ್ಲಿ ಮೊಗ್ಲಿಂಗನಷ್ಟು ಕರ್ತೃತ್ವಶಾಲೀ ಮಿಶನರಿ ಇರಲಿಲ್ಲ. ದೂರದ ಮಂಗಳೂರಲ್ಲಿದ್ದ ಮೊಗ್ಲಿಂಗನಿಗೆ ಅದರ ನಿರ್ವಹಣೆ ಸಾಧ್ಯವಿರಲಿಲ್ಲ. 'ಕಂನಡ ಸಮಾಚಾರ'ವು ಆ ವರ್ಷಾಂತ್ಯದ ವರೆಗೆ ಮಾತ್ರ ನಡೆದು ನಿಂತುಹೋಯಿತು.


ಬೆಳಗಾಂವಿಯ 'ಸುಬುದ್ಧಿ ಪ್ರಕಾಶ'ವು (೧೮೪೯) ನಮ್ಮ ಪತ್ರಿಕೋದ್ಯಮದ ಮುಂದಿನ ಹೆಜ್ಜೆಯಾಗಿದೆ. ಮಿಶನರಿಗಳು ಮುದ್ರಣ ಶಾಲೆಯನ್ನು ಹೊಂದಿ, ಪತ್ರಿಕೆಯನ್ನು ಹೊರಡಿಸುತ್ತಿದ್ದರೆ ಅದು ಕ್ರಮಪ್ರಾಪ್ತವಾದುದು. ಆದರೆ ಮರಾಠಿಯ ಪ್ರಭಾವದಲ್ಲಿದ್ದುಕೊಂಡು ಕನ್ನಡ ವಾಚಕವೃಂದವೇ ಸೃಷ್ಟಿಯಾಗಿರದಿದ್ದ ಕಾಲದಲ್ಲಿ, ಅದರಂತೆ ದೇಶೀಯರ ಮುದ್ರಣವು ನೆಲೆಗೊಂಡಿರದಿದ್ದಾಗ, ಬೆಳಗಾಂವಿಯ ಕನ್ನಡಿಗರು ಈ 'ಸುಬುದ್ಧಿ ಪ್ರಕಾಶ'ದ ವಿಚಾರ ಮಾಡಿದುದು ಸಾಹಸದ ಮಾತಾಗಿದೆ. ಅಷ್ಟೇ ಅಲ್ಲ, ಅದನ್ನು ಆರೇಳು ವರ್ಷವಾದರೂ ಮುನ್ನಡೆಸಿದರು. ಇದರ ಒಂದೇ ಒಂದು ಸಂಚಿಕೆ ದೊರೆತಿದ್ದು, ಆ ಕುರಿತು ದಿ. ೧೯-೮-೧೯೫೭ರ 'ಸಂಯುಕ್ತ ಕರ್ನಾಟಕ'ದಲ್ಲಿ ಅದರ ವಿವರಗಳನ್ನು ಕೊಡಲಾಗಿದೆ. ದೊರೆತ ಆ ಸಂಚಿಕೆಯಲ್ಲಿ ಅಯೋಧ್ಯೆ, ಮನುಷ್ಯರ ದೀರ್ಘಾಯುಷ್ಯ, ಖಜಿನದ ಮಾರ್ಗ (ರೇಲ್ವೆ), ಮುಲ್ಕೀಖಾತೆಯ ವೃತ್ತಾಂತ ಮುಂತಾದ ವಿಷಯಗಳಿವೆ. ಅದರ ಮೇಲೆ ೭ ನೇ ಸಂವತ್ಸರದ ೨೩ ನೇ ಸಂಚಿಕೆ ಎಂದಿರುವದರಿಂದ ಈ ಪತ್ರಿಕೆಯು ಪಕ್ಷಪತ್ರಿಕೆಯಾಗಿರಬೇಕು. ವಾರ್ಷಿಕ ಚಂದಾ ೭ ರೂ; ತಿಂಗಳಿಗೆ ೮ ಆಣೆ. ಆಗಿನ ದಿನಮಾನಕ್ಕೆ ಇದು ಹೆಚ್ಚೆನಿಸಬಹುದಾದರೂ ಮುದ್ರಣದ ಕಷ್ಟಸಾಧ್ಯತೆಯನ್ನು ಗಮನಕ್ಕೆ ತಂದುಕೊಳ್ಳತಕ್ಕದು.

ಇತ್ತ 'ಕಂನಡ ಸಮಾಚಾರ'ವು ನಿಂತು ಹೋದ ಮುಂದಿನ ಹಲವು ವರ್ಷ ಮಿಶನರಿಗಳ ಪತ್ರಿಕಾ ರಂಗವು ಸ್ತಬ್ಧವಾಗಿದ್ದಿತು. ಮೊಗ್ಲಿಂಗನೇ ಮುಂದೆ ಬಂದು 'ಕಂನಡ ವಾರ್ತಿಕ'ವನ್ನು ಹೊರಡಿಸತೊಡಗಿದನು (೧೮೫೭). ಸಿಪಾಯಿ ದಂಗೆಯೆದ್ದಾಗ ವಾರ್ತೆಗಳನ್ನು ಪೂರೈಸುವ ಅಗತ್ಯವನ್ನು ಮನಗಂಡು ಈ ವಾರ್ತಾ ಪತ್ರಿಕೆ ಆರಂಭವಾಗಿರಬೇಕು. ದಂಗೆಯು ಶಮನವಾಗಿ

ಅದರ ೬ನೇ ಸಂಚಿಕೆಯಲ್ಲಿ (೧೯-೯-೧೮೫೭) ಬಂದ ವರ್ತಮಾನದ ಬಗೆಯನ್ನು ನೋಡಬಹುದು:

“ಕಾಟಕಾಯಿ ಹುಟ್ಟಿದ ಮೊದಲನೇ ತಿಂಗಳಲ್ಲಿ ಹಿಂದೂ ಜನರೂ ಮುಸಲ್ಮಾನರೂ ಆದ ಶಿಪಾಯಿಗಳು, ಕುಂಪನಿ ಸರಕಾರದವರು ತಮ್ಮ ಜಾತಿಗಳನ್ನು ಕೆಡಿಸಿ ತಮ್ಮ ಪೂಜೆಗಳನ್ನು ನಿಲ್ಲಿಸಿ ತಮ್ಮನ್ನು ಅಂಕೆಯಿಂದಾ ಕ್ರೈಸ್ತ ಮತದಲ್ಲಿ ಸೇರಿಸುವ ಆಲೋಚನೆಯಲ್ಲಿ ಇದ್ದಾರೆಂಬ ಭಯದಿಂದಾ ರಾಜದ್ರೋಹದಲ್ಲಿ ಸೇರಿದವರೆಂದು ಅನೇಕರು ನೆನಸಿದರು. ಕುಂಪನಿ ಸರಕಾರದವರು ಅಂಥಾ ಆಲೋಚನೆ ಮಾಡುತ್ತಾರೆಂಬ ಮಾತು ಸ್ವಸ್ಥ ಚಿತ್ತರಿಗೆಲ್ಲಾ ಬರೇ ಸುಳ್ಳೆಂದು ಗೊತ್ತದೆ.”

‘ಕಂನಡ ವಾರ್ತಿಕ’ದಲ್ಲಿ ಮಾತ್ರ ಮತಪ್ರಸಾರದ ಕೆಲವು ವಿವರಗಳು ಸೇರಿಕೊಂಡವು. ಈ ಪತ್ರಿಕೆಯೂ ಒಂದು ವರ್ಷಕ್ಕಿಂತ ಹೆಚ್ಚು ಕಾಲ ನಡೆಯಲಿಲ್ಲ. ಹಾಗೆಂದು ಮಿಶನ್ನಿನ ೧೮೫೮ರ ವರದಿಯಲ್ಲಿ ಪರೋಕ್ಷವಾಗಿ ಕಾಣಿಸಲಾಗಿದೆ. ಚಿಕ್ಕ ಆಕಾರದ ಈ ಪತ್ರಿಕೆಯು ಬಿಡಿ ಮೊಳೆಗಳ ಮುದ್ರಣದಿಂದ ಸೊಗಸಾಗಿ ಕಾಣುತ್ತಿತ್ತು. ಪತ್ರಿಕೆಯ ಭಾಷಾ ಶೈಲಿಯಲ್ಲಿಯೂ ಸುಧಾರಣೆ ಕಂಡು ಬಂದಿದ್ದಿತು. ಮೊಗ್ಲಿಂಗ್ ಬೇರೆ ಕೆಲಸಗಳಲ್ಲಿ ಮಗ್ನನಾಗಿದ್ದುದೂ ಇದರ ಪರಿಸಮಾಪ್ತಿಗೆ ಕಾರಣವಾಯಿತು.



ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೧. ೧೮೪೩ ಅಂಕೆ ೧.

ಪ್ರಸಿದ್ಧಿ ಪತ್ರ.

[illegible]

ಮೇಲಿನ ಮೂರು ಪಕ್ಷಪತ್ರಿಕೆಗಳು ಬಿಡಿಯಾದ ಪ್ರಯತ್ನಗಳಷ್ಟೆ. ಕನ್ನಡ ಪತ್ರಿಕಾ ವ್ಯವಸಾಯವು ೧೮೬೦ರ ಒಳಹೊರಗೆ ನಿಯಮಿತವಾಗಿ ಆರಂಭವಾಯಿತೆನ್ನಬೇಕು. ಬೆಂಗಳೂರು, ಧಾರವಾಡ ಮತ್ತು ಮಂಗಳೂರು—ಈ ಮುಖ್ಯ ನಗರಗಳಿಂದ ಪತ್ರಿಕೆಗಳು ಹೊರಡಲಾರಂಭಿಸಿದುವು. ಜೂನ್ ೧೮೫೯ರಲ್ಲಿ ಹೊರಬಂದ ‘ಮೈಸೂರು ವೃತ್ತಾಂತ ಬೋಧಿನಿ’ಯು ಪ್ರಥಮ ವಾರಪತ್ರಿಕೆಯಾಗಿದೆ. ಕ್ರಿ. ಶ. ೧೮೬೪ರ ವರೆಗೆ ಅದು ಬದುಕಿದ್ದಿತೆಂದು ಡಿ. ವಿ. ಜಿ. ತಮ್ಮ ‘ಜ್ಞಾಪಕ ಚಿತ್ರ ಶಾಲೆ’ಯಲ್ಲಿ ಜ್ಞಾಪಿಸಿಕೊಂಡಿದ್ದಾರೆ. ಇದರ ಸಂಪಾದನ, ಪ್ರಕಾಶನದಲ್ಲಿ ತೊಡಗಿದ್ದ ಭಾಷ್ಯಂ ಮನೆತನದ ತಿರುಮಲಾಚಾರ್ಯ ಮತ್ತು ಭಾಷ್ಯಾಚಾರ್ಯ (ತಂದೆ–ಮಗ)—ಇವರು ಮುಂದೆ ೧೮೬೫ರ ಜುಲೈ


ತಿಂಗಳಿಂದ 'ಕರ್ನಾಟಕ ಪ್ರಕಾಶಿಕಾ' ಎಂಬ ಪಕ್ಷ ಪತ್ರಿಕೆಯನ್ನು ಹೊರಡಿಸಲಾರಂಭಿಸಿದರು. ಕ್ರಿ. ಶ. ೧೮೭೮ರಲ್ಲಿ ಅದೂ ನಿಂತಿತು. ಮುಂದೆ ಅವರು ೨೧-೧೧-೧೮೭೪ ರಲ್ಲಿ ಅದನ್ನು ವಾರ ಪತ್ರಿಕೆಯಾಗಿ ಪುನಃ ಆರಂಭಿಸಿದಾಗ ಮಾತ್ರ ಬಾಲಗ್ರಹಪೀಡಿತವಾಗದೇ ೧೮೯೮ರ ವರೆಗೂ ಬಾಳಿತು. ಮೊಗ್ಲಿಂಗನ ಅನಂತರ ಭಾಷ್ಯಂ ಪ್ರಭೃತಿಗಳೇ ಕನ್ನಡ ಪತ್ರಿಕೋದ್ಯಮದ ಆದ್ಯರೆಂಬುದನ್ನು ನೆನೆಯಬೇಕು.

ಇತ್ತ ಧಾರವಾಡದಲ್ಲಿ 'ಕನ್ನಡ ಜ್ಞಾನಬೋಧಕ' ಉದಯಿಸಿತು (ಸಪ್ಟೆಂಬರ್ ೧೮೭೧). ಅದರದೊಂದು ಸಂಚಿಕೆಯನ್ನು ಈಚೆಗೆ ಬೆಳಕಿಗೆ ತಂದವರು ಶ್ರೀ ಹೆ. ವು. ಜೋಶಿಯವರು. 'ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಛಾಪಿಸಿ ಪ್ರಸಿದ್ಧ ಮಾಡುವ ಮಂಡಳಿ' ಎಂಬ ಸಂಸ್ಥೆಯು ಇದನ್ನು ಹೊರಡಿಸುತ್ತಿದ್ದಿತು. ಇದರ ಸಂಪಾದನ, ಪ್ರಕಾಶನ ಕಾರ್ಯವು ಬೆಳಗಾಂವಿಯ ಸರದಾರರ ಹೈಸ್ಕೂಲಿನಿಂದ ನಡೆಯುತ್ತಿದ್ದಿತಾದರೂ ಮುದ್ರಣಕ್ಕಾಗಿ ಧಾರವಾಡಕ್ಕೆ ಬರಬೇಕಾಗುತ್ತಿದ್ದಿತು. ಮರಾಠಿಯಲ್ಲಿಯೂ ಕೆಲವು ಲೇಖನಗಳು ಪ್ರಕಟವಾಗುತ್ತಿದ್ದುವು. ಇದು ಮೂಲತಃ ಶೈಕ್ಷಣಿಕ ಪತ್ರಿಕೆಯಾಗಿದ್ದು ಸರಕಾರೀ ಸುದ್ದಿ ಹಾಗೂ ಪ್ರಕಟನೆಗಳಿಗೆ ಪ್ರಾಶಸ್ತ್ಯವಿದ್ದಿತು. ಸುದ್ದಿಗಳ ಮಾದರಿಯನ್ನು ಕೊಡುತ್ತೇನೆ:

"ಉತ್ತರ ಕನ್ನಡ ಜಿಲ್ಲೆಯು ಮದ್ರಾಸ ಇಲಾಖೆಯೊಳಗಿಂದ ಮುಂಬಯಿ ಇಲಾಖೆಯೊಳಗೆ ಬರುವದದೆ. ಅದರ ಚಾರ್ಜು ತೆಗೆದುಕೊಳ್ಳುವದಕ್ಕಾಗಿ ಮುಂಬಯಿ ಸರಕಾರದವರ ತರ್ಫೆನಿಂದ ಫ್ರಯರ್ [illegible] ದ್ದರು. ಆದರೆ ಆ ವ್ಯಾಖ್ಯಾಕ್ಕೆ ಮದ್ರಾಸ ಸರಕಾರದವರು ಚ್ಯಾರ್ಜ ಕೊಡಲಿಲ್ಲವೆಂದು ಕೇಳುತ್ತೇವೆ.

"ಮುಂಬಯಿ ಯುನಿವರ್ಸಿಟಿ ಬಿ. ಎ. ಪ್ರಥಮ ಪರೀಕ್ಷೆ ಆಯಿತಂತೆ. ಅದರಲ್ಲಿ ೭ ಮಂದಿ ಇಳಿದರು. ೮ ಮಂದಿ ಇಳಿಯಲಿಲ್ಲ." (ಇಲ್ಲಿಯ 'ಇಳಿ'ಯುವಿಕೆ ಮರಾಠಿಯ 'ಉತರಲೇ' ಇದರ ನೇರ ಭಾಷಾಂತರದ ಪರಿಣಾಮ!)

ಇದೇ ಸಂಚಿಕೆಯಲ್ಲಿ ಹೈದರಾಬಾದದ ನವಾಬ


A CHRONICLE OF GENERAL NEWS.

VOL. I. 1st MARCH 1871. No. I

ನಿಗೆ ಪುತ್ರಸಂತಾನವಾದುದೂ ಬಂಡಖೋರ ನಾನಾಸಾಹೇಬನು ಇನ್ನೂ ಸತ್ತಿಲ್ಲವೆಂಬುದೂ ವರದಿಯಾಗಿದೆ!

ಕ್ರಿ. ಶ. ೧೮೬೩ರ ಸುಮಾರಿಗೆ ಪತ್ರಿಕೆಯ ಮುದ್ರಣವು ಬೆಳಗಾಂವಿಗೆ ಹೋಯಿತು. ಆಗ ಪತ್ರಿಕೆಯು ಫ್ರೆಂಚ್ ಕ್ವಾರ್ಟೊ ಆಕಾರದಲ್ಲಿ ೨೮ ಪುಟಗಳನ್ನು ಒಳಗೊಂಡಿದ್ದು, ಎರಡು ಆಣೆಗೆ ದೊರೆಯುತ್ತಿತ್ತೆಂದು ಸರಕಾರೀ ವರದಿಯೊಂದು ತಿಳಿಸುತ್ತದೆ. ಅನಂತರ ಎಷ್ಟು ವರ್ಷ ಬದುಕಿದ್ದಿತೆಂಬುದು ತಿಳಿಯದು.

ಬೆಂಗಳೂರಿನಿಂದ ಇದೇ ಕಾಲಕ್ಕೆ 'ಅರುಣೋದಯ'ವೆಂಬ ಮಾಸಪತ್ರಿಕೆಯು ಪ್ರಕಟವಾಗ ತೊಡಗಿತು (೧೮೬೨). ಲಂಡನ್ ಮಿಷನ್ನಿನ ಬಿ. ಹವರ್ನ್ ರೈಸ್ ಅದರ ಸಂಪಾದಕನಿದ್ದನು. ಈ ವೇಳೆಗೆ ಮತಾಂತರ ಹೊಂದಿದ ದೇಶೀ ಕ್ರೈಸ್ತರ (ಪ್ರೊಟೆಸ್ಟಂಟ್) ಸಂಖ್ಯೆ ಹೆಚ್ಚಾಗಿದ್ದಿತು. ಅವರ ಜ್ಞಾನಾರ್ಜನೆಗಾಗಿ ಮತ್ತು ಅವರು ಕ್ರೈಸ್ತ ಮತದಲ್ಲಿ ನಿಷ್ಠರಾಗಿ ಉಳಿಯಬೇಕೆಂಬ ಹೇತುವಿನಿಂದ ರೈಸ್ ಇದನ್ನು ಹೊರಡಿಸತೊಡಗಿದನು. ಇದರಲ್ಲಿ ಹಲವು ಇಂಗ್ಲಿಷ್ ಲೇಖನಗಳು ತಪ್ಪದೇ ಇರುತ್ತಿದ್ದವು. ಚಿತ್ರಗಳು ಇದ್ದುದು ಇದರ ಇನ್ನೊಂದು ವೈಶಿಷ್ಟ್ಯ. ಧಾರ್ಮಿಕ ವಿಚಾರ, ವಿಜ್ಞಾನ ಹಾಗೂ ಪ್ರಪಂಚದ ತಿಳಿವಳಿಕೆ, ಕಥೆ ಮತ್ತು ಜಾಣತನದ ನುಡಿಗಳು ಮತ್ತು ಎಳೆಯರಿಗೆ ಉಪದೇಶ—ಇವನ್ನು ಪ್ರತಿ ಸಂಚಿಕೆಯಲ್ಲಿ ತಪ್ಪದೇ ಕಾಣುತ್ತೇವೆ. ಧಾರ್ಮಿಕ ಬರಹಗಳಲ್ಲಿ ಹಿಂದೂ, ಇಸ್ಲಾಂ ಮತಗಳ ತೀವ್ರ ಖಂಡನೆ ಕಂಡುಬರುತ್ತದೆ. ವಿಜ್ಞಾನ, ಭೂಗೋಲ ಮುಂತಾದ ವಿಷಯಗಳನ್ನು ಕೊಡುವಲ್ಲಿ ಒಂದು ವ್ಯವಸ್ಥಿತ ಕ್ರಮವನ್ನು ಇಟ್ಟುಕೊಳ್ಳಲಾಗಿದ್ದಿತು:

"The publication..is designed to present a connected view of various important branches the volumes when bound, of permanent value to natives who have no access to other sources of information."

ರೈಸನ ಪ್ರಗತಿಪರ ಶೈಕ್ಷಣಿಕ ದೃಷ್ಟಿಯ ಪರಿಣಾಮವಿದು. ಅದರಿಂದಾಗಿ ಈ ಪತ್ರಿಕೆಯು ಮಟ್ಟ ಮೇಲಿನದಾಗಿತ್ತು. ಅಂದಿನ 'ಮೈಸೂರು ವೃತ್ತಾಂತ ಬೋಧಿನೀ' ಪತ್ರಿಕೆಯು ಇದನ್ನು ಸ್ವಾಗತಿಸಿತಾದರೂ ಅದು ಮಾಡುತ್ತಿದ್ದ ಹಿಂದೂ ಧರ್ಮದ ಟೀಕೆಯನ್ನೂ ಭಾಷಾ ಸರಣಿಯನ್ನೂ ಖಂಡಿಸಿತು.

'ಅರುಣೋದಯ'ವು ಆರೇಳು ವರ್ಷ ನಡೆದು ನಿಂತಿತು. ಮತ್ತೆ ೧೮೭೬ರಲ್ಲಿ ಅದನ್ನು ಪುನರುಜ್ಜೀವನಗೊಳಿಸಿದರೂ, ಪತ್ರಿಕೆಯ ರೂಪ ಮತ್ತು ಧೋರಣೆ ಅದೇ ಆಗಿದ್ದಿತು. ಈ ವೇಳೆಗೆ ರೈಸ್ ತೀರಿಕೊಂಡನು. ಆಮೇಲೆ ಪತ್ರಿಕೆ ಹೆಚ್ಚು ಕಾಲ ಬಾಳಲಿಲ್ಲ.

ಮಂಗಳೂರಲ್ಲಿ ೧೮೬೨ರಿಂದು ಹೊರಟ ಪತ್ರಿಕೆಯ ಹೆಸರು 'ವಿಚಿತ್ರ ವರ್ತಮಾನ ಸಂಗ್ರಹ' ಇಲ್ಲವೆ 'Illustrated Canerese Journal'– ಎಂಬುದು. ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳ ಲೇಖನಗಳು ಅದರಲ್ಲಿದ್ದವು. ಈ ಪಕ್ಷ ಪತ್ರಿಕೆಯ ಸಂಪಾದಕರೆಂದರೆ ಜೆ. ಮ್ಯಾಕ್ ಮತ್ತು ಸುಪ್ರಸಿದ್ಧ ಕಿಟೆಲ್. ಇದನ್ನು 'ಸಚಿತ್ರ' ಎನ್ನುವುದರ ಬದಲಿಗೆ 'ವಿಚಿತ್ರ' ಎಂದು ಕರೆದುದು ವಿಚಿತ್ರವೆನಿಸುತ್ತದಲ್ಲವೆ? ಮಿಶನರಿಗಳ ಕನ್ನಡವಿದು. ಇದಕ್ಕೆ ಪುರವಣಿಯಾಗಿ 'ಇಂಡಿಯ ಮತ್ತು ಅನ್ಯದೇಶದ ಪಾರ್ತಿಕ' ಎಂಬುದೂ ಕೆಲಕಾಲ ಹೊರಡುತ್ತಿದ್ದಿತು. 'ವಿಚಿತ್ರ ವರ್ತಮಾನ ಸಂಗ್ರಹ'ವು ಮೂರು-ನಾಲ್ಕು ವರ್ಷ ಮಾತ್ರ ಬಾಳಿತು.

ಪತ್ರಿಕೋದ್ಯಮದಲ್ಲಿ ಅನಂತರದ ಹೆಜ್ಜೆಯೆಂದರೆ 'ಕನ್ನಡ ಶಾಲಾ ಪತ್ರಿಕೆ'ವು. ಸುವಿಖ್ಯಾತಿಯ ಡೆಪ್ಯುಟಿ ಚೆನ್ನಬಸಪ್ಪನು ಅದನ್ನು

THE ARUNODAYA.

An Illustrated Anglo-Canarese Magazine.

EDITED BY

THE REV. B. RICE

LONDON MISSION, BANGALORE.

VOL. II.—1863.

ಅರುಣೋದಯ.

[illegible]

[illegible]

[illegible]

[illegible]

೨ ಪುಸ್ತಕ.—೧೮೬೩.

BANGALORE:

PRINTED FOR THE CHRISTIAN VERNACULAR EDUCATION SOCIETY,

AT THE WESLEYAN MISSION PRESS.

1863.

ಪತ್ರಿಕೆ' ಎಂದು ಇದ್ದಿತು. ಎಪ್ರಿಲ್ ೧೮೬೭ ರಲ್ಲಿ 'ಶಾಲಾಪತ್ರಕ'ವೆಂದು ನಾಮಕರಣ ಹೊಂದಿ, ೧೮೭೧ರಲ್ಲಿ ಅದಕ್ಕೆ 'ಕನ್ನಡ' ಎಂಬ ಅಭಿಧಾನವು ಸೇರಿತು. ಮುಂಬಯಿ ಕರ್ನಾಟಕದ ಟ್ರೇನಿಂಗ್ ಕಾಲೇಜಿನ ಆವಾರದಲ್ಲಿ ಠಾಂಗುಡಿ ಬಿಟ್ಟ ಈ ಪತ್ರಿಕೆಯು ಬೆಳಗಾಂವಿ–ಧಾರವಾಡಗಳ ನಡುವೆ ಓಡಾಡುತ್ತಿದ್ದು ೧೮೭೭ರಿಂದ ನಿಯಮಿತವಾಗಿ ಧಾರವಾಡದಿಂದಲೇ ಪ್ರಕಟವಾಗತೊಡಗಿತು. ಕನ್ನಡ ನಿಷ್ಠೆಯ ಗಂಗೋತ್ರಿಯಂತಿದ್ದ ಟ್ರೇನಿಂಗ್ ಕಾಲೇಜಿನ ಆವಾರದಲ್ಲಿ ಅದು ಬೆಳೆದುದರಿಂದ ಅನೇಕ ಪ್ರೌಢ ಲೇಖನಗಳಿಗೆ ಈ ಪತ್ರಿಕೆ ಎಡೆ ಮಾಡಿಕೊಟ್ಟಿತು. ವಿಶೇಷತಃ ಕನ್ನಡ ಭಾಷೆ, ವಾಙ್ಮಯಗಳನ್ನು ಕುರಿತ ಪರಾಮರ್ಶೆಯು ಅದರ ಮೂಲಕ ನಡೆಯಿತು. ಮೇ ೧೮೬೮ರ ಒಂದು ಸಂಚಿಕೆಯಲ್ಲಿ 'ಶೈಕ್ಷಣಿಕ ಸೂಚನೆಗಳು', 'ಶಬ್ದ ಮಣಿ ದರ್ಪಣ', 'ಜೈಮಿನಿ ಭಾರತ ಪದ್ಯಗಳು,' 'ನೋಟೀಸುಗಳು' 'ವಿದ್ಯುತ್ಶಕ್ತಿಯ ಯಂತ್ರ ಗಳು,' 'ಹುಡುಗರ ವಿದ್ಯಾಭ್ಯಾಸ' ಎಂಬೀ ಬರಹಗಳಿದ್ದು, ಇವುಗಳ ಮೇಲಿಂದ ಪತ್ರಿಕೆಯ ಸ್ವರೂಪವನ್ನೇ ಅರಿಯಬಹುದು.

ಡೆಪ್ಯುಟಿ ಚೆನ್ನಬಸಪ್ಪನು ಕನ್ನಡಕ್ಕಾಗಿ ಮತ್ತು ಕನ್ನಡಿಗರ ಶೈಕ್ಷಣಿಕ ಉನ್ನತಿಗಾಗಿ ಕಳಕಳಿಯಿಂದ ಶ್ರಮಿಸುತ್ತಿದ್ದನೆಂಬ ಮಾತಿಗೆ ನಿದರ್ಶನವಾಗಿ, ಈ ಪತ್ರಿಕೆಯ ಎರಡು ಸಂಚಿಕೆಗಳಲ್ಲಿ ಬಂದ ಪ್ರಕಟನೆಗಳು ಇಲ್ಲಿ ಪ್ರಸ್ತುತವಾಗಿವೆ:

"ಸಂತೋಷದ ವರ್ತಮಾನ: ಬಹು ಸಂತೋಷದಿಂದ ಸಮಸ್ತ ಜನರಿಗೆ, ವಿಶೇಷವಾಗಿ ಲಿಂಗವಂತರಿಗೆ ತಿಳಿಸುವದೇನಂದರೆ, ಬೆಳಗಾಂವಿ ಜಿಲ್ಲೆಯ ಡೆಪಟಿ ಇನಸ್ಪೆಕ್ಟರರಾದ ಚನಬಸವಪ್ಪನವರು ಹೇಳಿಕೊಂಡದ್ದರಿಂದ ಚಿತ್ರಗಲದುರ್ಗದ ಮುರಗಿ ಜಗದ್ಗುರು ಸ್ವಾಮಿಗಳವರು ಬಹು ದಯಾಳುಗಳಾಗಿ ಅನಾಥರಾದ ವಿದ್ಯಾರ್ಥಿಗಳಿಗೆ ಬೆಳಗಾಂವಿಯಲ್ಲಿ ಅನ್ನಕೊಡುವದಕ್ಕೋಸ್ಕರ ಪ್ರತಿ ತಿಂಗಳಿಗೆ ೩೦೦ ರೂಪಾಯಿ ಕೊಡುವದಕ್ಕೆ ಒಪ್ಪಿಕೊಂಡಿದ್ದಾರೆ. ಈ ಹಣದಿಂದ ಒಂದು ಮನೆಯನ್ನು ತೆಗೆದುಕೊಂಡು ಅಡಿಗೆಯವರು ಮೊದಲಾದ ಚಾಕರರನ್ನು ಯಿಟ್ಟು ಸುಮಾರು ೫೦ ಜನ ನಿರಾಶ್ರಿತರಾದ ವಿದ್ಯಾರ್ಥಿಗಳಿಗೆ ಎರಡು ಹೊತ್ತು ಊಟ, ಇರುವದಕ್ಕೆ ಸ್ಥಳ ಕೊಡತಕ್ಕ ಬಗ್ಗೆ ಈಗ ತಜವೀಜು ನಡೆದಿದೆ." (ಅಗಸ್ಟ ೧೮೬೮ರ ಸಂಚಿಕೆ).

ಕರ್ನಾಟಕದಲ್ಲಿ ವೀರಶೈವರ ಮೊತ್ತಮೊದಲಿನ ಬೋರ್ಡಿಂಗ್ ಶಾಲೆಯಿದು. ಇಂದು ಊರೂರಿಗೆ ಕಾಣಸಿಗುವ ಇಂಥ ಛಾತ್ರಾಲಯಗಳಿಗೆ ಇದುವೆ ನಾಂದಿಯಾಯಿತು.


ಚೆನ್ನಬಸಪ್ಪನು ತನ್ನ ಅಧಿಕಾರಸ್ಥಾನದಿಂದ ಹೊರಡಿಸಿದ ಒಂದು ಪರಿಪತ್ರವನ್ನು ಅಕ್ಟೋಬರ್ ೧೮೬೮ರ ಸಂಚಿಕೆಯಲ್ಲಿ ಕಾಣಬಂದಂತೆ ಇಲ್ಲಿ ಕೊಡುತ್ತಿದ್ದೇವೆ:

"ನೋಟೀಸು: ಗೋಕಾಂವಿ, ಸವದತ್ತಿ ಮತ್ತು ಸಂಪಗಾಂವಿ ತಾಲೂಕಿನಲ್ಲಿರುವ ಯಾವತ್ತೂ ಮಾಸ್ತರರಿಗೆ ತಿಳಿಸುವದೇನಂದರೆ ನೀವು ನಿಮ್ಮ ದಫ್ತರಗಳನ್ನು ಕನ್ನಡಿನಲ್ಲಿ ಇಡ್ರಿ. ಇತ್ತ ಕಡೆಯಿಂದಾಗಲಿ ಅಥವಾ ಮತ್ಯಾವ ಕಡಿಯಿಂದಾಗಲಿ ನಿಮಗೆ 'ಆರೆ' [= ಮರಾಠಿ] ಬರದು ಬಂದರು ಸಹಾ ನೀವು ಕನ್ನಡಿನಲ್ಲಿ ಉತ್ತರ ಕೊಡುತ್ತ ಬರ್ರಿ. ಇನ್ನು ಮೇಲೆ ನಮ್ಮ ಕಡಿಗೆ ಬರುವ ಕಾಗದಗಳು ಆರೇದಲ್ಲಿ ಬರಬಾರದು."

ದೀರ್ಘಕಾಲ ಬಾಳಿದ ಪತ್ರಿಕೆಯಿದು. ಇಷ್ಟೇ ಅಲ್ಲ, 'ಜೀವನ ಶಿಕ್ಷಣ' ಎಂಬ ಹೆಸರಿನಿಂದ ಈಗಲೂ ಹೊರಡುತ್ತಲಿದೆ. ಇಂದಿಗೂ ಬದುಕಿ ಇರುವ ಪ್ರಾಚೀನ ಕಾಲದ ಮೂರು ಪತ್ರಿಕೆಗಳಲ್ಲಿ ಇದು ಒಂದಾಗಿದೆ. ಎರಡನೆಯ ಇಂಥ ಪತ್ರಿಕೆಯೆಂದರೆ 'ಮೈಸೂರು ಗೆಜೆಟ್.' ಆದರೆ ಇಂದಿನ ಗೆಜೆಟಿಗೂ ಅಂದಿನದಕ್ಕೂ ತುಂಬಾ ವ್ಯತ್ಯಾಸವಿದೆ. ಇಂದಿನದು ಕೇವಲ ಸರಕಾರೀ ಪ್ರಕಟನೆಗಳಿಗೆ ಮೀಸಲು. ಅಂದಿನದು ಸಾಮಾನ್ಯ ಓದುಗನಿಗೂ ವಾಚನೀಯವೆನಿಸುವ ಸುದ್ದಿಗಳನ್ನು ಒಳಗೊಂಡಿರುತ್ತಿತ್ತು. ಇದರಿಂದಾಗಿ ಸಾಮಾನ್ಯ ಕನ್ನಡಿಗರು ತಾವಾಗಿ ಚಂದಾದಾರರಾ

ARUNODAYA.
ಅರುಣೋದಯ.

Vol. II.] APRIL, 1863. [No. IV.
೨ ಪುಸ್ತಕ.] ಏಪ್ರಿಲ್, ೧೮೬೩. [೪ ಸಂಚಿಕೆ.



The Electric Telegraph.
ಮಿಂಚಿನ ಟಪ್ಪಾಲು.

ಬಹು ದೂರವಾದ ಸ್ಥಳಗಳಿಗೆ ಮಿಂಚಿನ ಗತಿಯಲ್ಲಿ ವರ್ತಮಾನಗಳನ್ನು ಕಳುಹಿಸುವುದಕ್ಕೂ, ತರಿಸುವುದಕ್ಕೂ ನಿಮಿತ್ತ ಒಂದು ಕೌಶಲ್ಯವು ಉಪಯೋಗಿಸಲ್ಪಡುತ್ತದೆ. ಇದಕ್ಕೆ ಮಿಂಚಿನ ಟಪ್ಪಾಲು ಸಂಚಾರ ಎಂದು ಹೆಸರುಂಟು. ಇದನ್ನು ಪ್ರಯೋಗಿಸುವ ಶಕ್ತಿಯು ಮೇಘದಲ್ಲಿ ಹೊಳೆವ ಮಿಂಚಿಗೆ ಸಮಾನವಾಗಿದೆ. ಸರ್ವತ್ರ ಇರುವ ಹಲವು ವಸ್ತುಗಳಲ್ಲಿಯೂ ಎಲೆಕ್ಟ್ರಿಸಿಟಿ (Electricity) ಎಂಬ ಮಿಂಚಿನ ಸಾರವು ಸೇರಿ ಇದೆ. ಈ ಸಾರವುಳ್ಳ ಯಾವದೊಂದು ವಸ್ತುವು ತೀಯುತ್ತಿರುವಾಗ, ಮರೆಯಾಗಿರುವ ಅದು ಎದ್ದು ಹೊರಗೆ ಕಾಣುವದು.

ಗಲು ಮುಂಬರುತ್ತಿದ್ದರು. ದಿ. ೭—೪—೧೮೬೬ರಂದು ಆರಂಭವಾದ ಈ ಪತ್ರಿಕೆಯು ಇಂಗ್ಲಿಷ್-ಕನ್ನಡ ಎರಡೂ ಭಾಷೆಗಳಲ್ಲಿ ಹೊರಡುತ್ತಿದ್ದಿತು. ಆಗಿನ ಸಂಪಾದಕನ ಹೆಸರು ಎಲ್. ರಿಕೆಟ್ಸ್.

ಇತರ ಸುದ್ದಿಗಳಲ್ಲಿ ವಿದೇಶೀ ಸುದ್ದಿಗಳನ್ನೂ ಕೊಡುವ ಕ್ರಮವಿದ್ದಿತು. ಅವನ್ನು ತಂತಿಯ ಮೂಲಕ ತರಿಸಲಾಗುತ್ತಿತ್ತು. ೨೩ನೇ ಜೂನ್ ೧೮೬೬ರ ಸಂಚಿಕೆಯಲ್ಲಿ, ಯುರೋಪದಲ್ಲಿ ನಡೆದಿಪ್ಪ ಯುದ್ಧದ ವಾರ್ತೆಯಿದೆ. ಜಿಲ್ಲಾ ಮಟ್ಟದ ಸುದ್ದಿಗಳಿಗೂ ಅವಕಾಶವಿದ್ದಿತು. ಅಲ್ಲಲ್ಲಿಯ ಭೂಸುಧಾರಣೆ, ಸಾಂಸರ್ಗಿಕ ರೋಗಗಳು, ಮಹತ್ವದ ಘಟನೆಗಳು, ತಪ್ಪಿತಸ್ಥರಿಗೆ ಕೋರ್ಟು ವಿಧಿಸಿದ ಶಿಕ್ಷೆ—ಮುಂತಾದ ಸುದ್ದಿಗಳಿಗೂ ಪ್ರಾಶಸ್ತ್ಯವನ್ನು ಕೊಡಲಾಗುತ್ತಿತ್ತು. ಬರಗಾಲದ ಮತ್ತು ಕಾಲರಾದ ಹಾವಳಿಯ ದಿನಗಳವು. ಹೆದ್ದಾರಿಗಳಲ್ಲಿ ಕೂಳಿಲ್ಲದೆಯೊ ರೋಗದಿಂದಲೂ ಸತ್ತು ಬಿದ್ದವರ ವಿವರಗಳನ್ನು ಓದಿದಾಗ, ಯಾರ ಮನವೂ ಕರಗುವುದು. ದೊಡ್ಡೇರಿ ಗ್ರಾಮದ ಓರ್ವ ಮುಸ್ಲಿಂ ಹೆಂಗಸು ತನ್ನ ಎರಡು ವರ್ಷದ ಕೂಸನ್ನು ಬುಡನ್‌ಖಾನ್ ಎಂಬವನಿಗೆ ಕೇವಲ ಎರಡು ರೂಪಾಯಿಗೆ ಮಾರಿ ಆಹಾರಧಾನ್ಯ ತಂದಳಂತೆ. ಇಂಥ ಸುದ್ದಿಗಳನ್ನು ಇಂದಿನ ಸರಕಾರ ತನ್ನ ಪತ್ರಿಕೆಗಳಲ್ಲಿ ಎಂದಾದರೂ ಪ್ರಕಟಿಸೀತೆ? ಬೇರೆ ಯಾರಾದರೂ ಪ್ರಕಟಿಸಿದ್ದರೆ ಅದನ್ನು ತನ್ನ ಪತ್ರಿಕೆ ಪ್ರಕಟನೆಗಳ ಮೂಲಕ ಅಲ್ಲಗಳೆಯಲು ಸರಕಾರವು ಮುಂದಾಗುತ್ತದೆ. ಇರಲಿ. ಬೇರೊಂದು ಊರಿನ ಬಣಜಿಗ ಹೆಣ್ಣುಮಗಳೊಬ್ಬಳು ಇದೇ ರೀತಿ ತನ್ನ ಮಗನನ್ನು ಮಾರಲೆಳಸಿದ್ದಾಗ ಊರ ಜನ ತಡೆದು, ಅವಳಿಗೆ ಎರಡು ಸೇರು ರಾಗಿ ಕೊಟ್ಟರಂತೆ. ಬರಗಾಲದ ದೆಸೆಯಿಂದಾಗಿ ಜನ ಆಹಾರವಸ್ತುಗಳನ್ನು ಕಳವು ಮಾಡಿದ್ದರ ಇಲ್ಲವೆ ಅಂಗಡಿಗಳನ್ನು ಲೂಟಿ ಮಾಡಿದ್ದರ ವಿವರಗಳೂ ಗೆಜೆಟಿನಲ್ಲಿ ಸಿಕ್ಕುತ್ತವೆ. ಪರಿಣಾಮವಾಗಿ ಅಂದಿನ ಮೈಸೂರು ಸಂಸ್ಥಾನದ ಜೀವನ ಚಿತ್ರಣವು ತುಸು ಮಟ್ಟಿಗೆ ದೊರೆಯುತ್ತದೆ.

ಕ್ರಿ. ಶ. ೧೮೬೮ರಲ್ಲಿ ಬಾಸೆಲ್ ಮಿಶನ್‌ದವರು 'ಸಭಾಪತ್ರ'ದ ಮೊದಲ ಸಂಚಿಕೆಯನ್ನು ಹೊರತಂದರು. ಪತ್ರಿಕೆಯನ್ನು ಹೊರಡಿಸುವಲ್ಲಿ ಇದು ಅವರ ನಾಲ್ಕನೆಯ ಹೆಜ್ಜೆಯಾಗಿದೆ. ಮೊದಲಿನ ಮೂರು ಬೇಗ ಅಳಿಸಿಹೋದುವು. (ಕ್ರೈಸ್ತ) 'ಸಭಾಪತ್ರವು' ಮಾತ್ರ ಹಲವು ದಶಕಗಳ ವರೆಗೆ ಮುಂದುವರಿಯಿತು. ಸುರುವಿಗೆ (೧೮೬೮—೬೯) 'ಬಾಲಪತ್ರ'ವೆಂಬ ಪುರವಣಿಯೂ ಸೇರಿದ್ದಿತು. ಮಕ್ಕಳಿಗೆಂದು ಮೀಸಲಾದ ಈ ಭಾಗವು ಅಪೂರ್ವವಾದುದು. ಆ ಮೂಲಕ ಬಾಲ ಸಾಹಿತ್ಯವು ಕನ್ನಡದಲ್ಲಿ ಕಾಣಿಸಿಕೊಳ್ಳಲಾರಂಭಿಸಿತು. 'ಸಭಾಪತ್ರ'ದ ಮುಖ್ಯ ಉದ್ದೇಶವು ಮತಪ್ರಸಾರವಾಗಿದ್ದರೂ ದೇಶವಿದೇಶಗಳ ಸುದ್ದಿಯನ್ನು 'ವೃತ್ತಾಂತ ಮಂಜರಿ' ಎಂಬ ಸದರಿನಲ್ಲಿ ಕೊಡಲಾಗುತ್ತಿತ್ತು.

ಅದೇ ವರ್ಷ ಮಂಗಳೂರಿನಿಂದ ಕಾನೂನಿನ ವಿಚಾರಗಳಿಗೆ ಸಂಬಂಧಿಸಿದ 'ನ್ಯಾಯ ಸಂಗ್ರಹ' ವೆಂಬ ಪಕ್ಷಪತ್ರಿಕೆ ಹೊರಟಿತು. ಕಾನೂನಿಗೆ ಸಂಬಂಧಿಸಿದ ಪ್ರಥಮ ಕನ್ನಡ ಪತ್ರಿಕೆಯಿದು. ಆದರೆ ವರ್ಷಾವಧಿಯಲ್ಲಿಯೇ ನಿಂತು ಹೋಯಿತು.


ಕ್ರಿ. ಶ. ೧೮೭೩—೭೪ರಲ್ಲಿ ಪುನರ್ಜನ್ಮ ತಾಳಿದ 'ಕರ್ನಾಟಕ ಪ್ರಕಾಶಿಕಾ' ಕನ್ನಡ-ಇಂಗ್ಲಿಷ್ ಎರಡೂ ಭಾಷೆಯ ಲೇಖನಗಳನ್ನು ಒಳಗೊಂಡಿದ್ದಿತು. ಅದರಲ್ಲಿ ತಂತೀ ವರ್ತಮಾನ ಸಂಗ್ರಹ, ಗೆಜೆಟ್ಟಿನ ಸಾರಾಂಶ, ಒಳದೇಶ ಮತ್ತು ತಾಲೂಕಿನ ವೃತ್ತಾಂತ, ನೈಮಿತ್ತಿಕ ವಿಷಯ ನ್ಯಾಸ (Ocasional Notes)— ಇವೇ ಮೊದಲಾದ ವಿಷಯಗಳಿದ್ದುವು. ಅದರ ಬರವಣಿಗೆಯು ಪ್ರೌಢ ಸರಣಿಯಿಂದ ಕೂಡಿದ್ದು, ಪುರೋಗಾಮೀ ದೃಷ್ಟಿಯುಳ್ಳದ್ದಾಗಿತ್ತು. ಜೊತೆಗೆ ಅಂದಿನ ರಾಜ್ಯಾಡಳಿತವನ್ನು ಟೀಕಿಸುವ ಧೈರ್ಯವನ್ನೂ ತೋರಿತು. ಅದರ ಈ ರಾಜಕೀಯ ಧೋರಣೆಯಿಂದಾಗಿ ಮುಂದೆ ೧೮೯೬ರ

The Illustrated Canarese Journal

PUBLISHED TWICE A MONTH

FOR THE BOMBAY CANARESE VERNACULAR SOCIETY

ತಿಂಗಳಿಗೆ ಎರಡು ಸಾರಿ ಪ್ರಕಟಿಸಲ್ಪಡುವದು



[illegible] ೧೮೬೨

CONTENTS

The late Prince Consort
ಮೃತವಾದ ರಾಣೀಪತಿಯು

[illegible]

ಸುಮಾರಿಗೆ ಅದು ನಿಂತುಹೋಯಿತು. ವಿಚಾರ ಸ್ವಾತಂತ್ರ್ಯವನ್ನು ತೋರಿದ ಆದ್ಯ ಪತ್ರಿಕೆಯಿದು.

ಹೀಗೆ ವಾರ್ತೆ ಮತ್ತು ಪ್ರಚಲಿತ ವಿಷಯಗಳಿಗೆ ಪ್ರಾಧಾನ್ಯವಿರುವ ಪತ್ರಿಕೆಗಳನ್ನು ಹೊರಡಿಸಬೇಕೆನ್ನುವ ಪ್ರಜ್ಞೆಯು ನಾಡಿನ ಇತರ ಭಾಗಗಳಲ್ಲಿಯೂ ಕಂಡುಬಂದಿತು. ಮಂಗಳೂರಿನ 'ಸುಬೋಧಿನಿ'ಯು (೧೮೭೧) A Chronicle of General News ಎಂಬ ಅಭಿಧಾನವನ್ನು ಹೊತ್ತಿದೆ. ಮೇಲ್ಕಂಡ 'ಶಾಲಾಪತ್ರಿಕ'ದ ೧೮೭೩ನೇ ವರ್ಷದ ಒಂದು ಸಂಚಿಕೆಯಲ್ಲಿ ಬೆಳಗಾಂವಿಯಿಂದ ಹೊರಡುವ 'ಸೊಬಗಿನ ಸುದ್ದಿ' ಎಂಬ ಪತ್ರಿಕೆಯು ಪ್ರಸ್ತಾಪವಿದ್ದು, ಅದನ್ನು ಮೊತ್ತಮೊದಲಿನ ವಾರ್ತಾಪತ್ರಿಕೆಯೆಂಬುದಾಗಿ ವಿಶೇಷಿಸಲಾಗಿದೆ. ಆ ಮಾತು ಮುಂಬಯಿ ಕರ್ನಾಟಕಕ್ಕೆ ಮಾತ್ರ ಅನ್ವಯಿಸಬಹುದು. ಇವೆರಡೂ ಸುದ್ದಿ ಪತ್ರಿಕೆಗಳು ಬಹು ಕಾಲ ಬಾಳಿದವುಗಳಲ್ಲ.

ವೆಂಕಟ ರಂಗೋ ಕಟ್ಟಿಯ 'ಶೋಧಕ' ಮಾಸಪತ್ರಿಕೆಯನ್ನು ವಿಶೇಷವಾಗಿ ಹೆಸರಿಸಬೇಕು (೧೮೭೫—೭೮). ಮಿಶನರಿ ಜನರ, ಇತರರ ಹಿಂದಿನ ಪತ್ರಿಕೆಗಳಲ್ಲಿ ಲೋಕಶಿಕ್ಷಣ ಇಲ್ಲವೆ ಜನತೆಯ ಜ್ಞಾನಾಭಿವೃದ್ಧಿಯ ದೃಷ್ಟಿಯು ತುಸುಮಟ್ಟಿಗೆ ಇದ್ದಿತಾದರೆ 'ಶೋಧಕ'ದಲ್ಲಿ ಅದು ಪ್ರಮುಖವಾಗಿ ಕಾಣಿಸಿಕೊಂಡಿತು. 'ಇತಿಹಾಸ ಶಾಸ್ತ್ರ ಕಲಾಕೌಶಲ್ಯಾದಿಗಳ ಸಂಗ್ರಹ' ವೆಂಬ ಅದರ ಉಪಶೀರ್ಷಿಕೆಯಲ್ಲಿ ಅದು ಸ್ವಯಂವ್ಯಕ್ತವಾಗಿದೆ. ಕನ್ನಡಿಗರು ಯಾವ ವಿಷಯದಲ್ಲಿಯೂ ತಲೆತಗ್ಗಿಸಬೇಕಾಗಿಲ್ಲ ಎಂಬ ಕನ್ನಡ ಜಾಗೃತಿಯ ಕಹಳೆಯನ್ನು ಈ ಪತ್ರಿಕೆ ಮೊಳಗಿಸಿತು. 'ಸ್ವದೇಶದ ಇತ್ಯಾದಿಗಳಿಗೆ ವಿಶೇಷ ಲಕ್ಷ್ಯವು ಕೊಡಲ್ಪಡುವದು. ಇಂಥಾ ವಿಷಯಗಳನ್ನು ಬರೆದು ಕಳುಹಿದರೆ ಸಂತೋಷದಿಂದ ಅವುಗಳನ್ನು ಸ್ವೀಕರಿಸುವೆವು' ಎಂಬ ಪ್ರಕಟನೆಯು ಕರೆಯಲ್ಲಿ ವೆಂಕಟ ರಂಗೋ ಕಟ್ಟಿಯ ಕನ್ನಡಾಭಿಮಾನ ಚೆನ್ನಾಗಿ ವ್ಯಕ್ತವಾಗಿದೆ.

'ಶೋಧಕ'ದ ಮೊದಲ ಮೂರು ಸಂಚಿಕೆಗಳಲ್ಲಿ ಬಂದ ವಿಷಯಗಳ ಪರಿವಿಡಿಯು ಸಂಪಾದಕನ ಲೋಕಶಿಕ್ಷಣದ ಗುರಿಯನ್ನು ಸ್ಪಷ್ಟಗೊಳಿಸಬಲ್ಲುದು:

ಕರ್ನಾಟಕ ಇತಿಹಾಸಾರಂಭ
ಭೂಗರ್ಭ ಶಾಸ್ತ್ರ
ಜ್ಯೋತಿಶ್ಶಾಸ್ತ್ರದ ಇತಿಹಾಸ
ಕಾಯದೆ
ರಸಹೃದಯ (ನಮ್ಮ ದೇಶದ ರಸಾಯನ ಶಾಸ್ತ್ರವು ಹೆಚ್ಚು ಶ್ರೇಷ್ಠ). ಪಾರಜದಿಂದ ಅಮರತ್ವ.
ಯಂತ್ರವಿದ್ಯೆ
ತಿರುಪತಿ ಯಾತ್ರೆ
ಕಬ್ಬು
ಅಂಕಿಗಳ ಚಮತ್ಕಾರ
ಅಂಜನಗಳು
ದ್ರವಿಡ ಭಾಷೆ.
ಸ್ತಂಭನ ತಂತ್ರ
ಯಾಕೆಂಬುದರ ಕಾರಣಗಳು ಇ.

ಆದರ್ಶವೇ ಪ್ರಧಾನವಾದ ಯಾವ ಕಾರ್ಯವೂ ಈ ಪ್ರಪಂಚದಲ್ಲಿ ಬಹುಕಾಲ ನಿಲ್ಲದೇನೊ! ಈ ಪತ್ರಿಕೆ ೨—೩ ವರ್ಷಗಳಲ್ಲಿ ಅಸ್ತಂಗತವಾಯಿತು.

ಕ್ರಿ. ಶ. ೧೮೪೩ರಿಂದ ೧೮೮೧ರ ವರೆಗಿನ ಪತ್ರಿಕೆಗಳಿವು. ಇದುವೆ ಕನ್ನಡ ಪತ್ರಿಕೋದ್ಯಮದ ಮೊದಲ ಘಟ್ಟ. ಈ ಅವಧಿಯ ಯಾವುದೇ ವರ್ಷದಲ್ಲಿ ಒಂದು, ಅತಿ ಹೆಚ್ಚೆಂದರೆ ಮೂರು–ನಾಲ್ಕು, ಪತ್ರಿಕೆಗಳು ಬಾಳಿದ್ದುವು. ಆದರೆ ಪತ್ರಿಕೆಯ ಮಹತ್ವ, ಪ್ರಯೋಜನಗಳನ್ನು ಆಗಿನ ಕೆಲವರು ಚೆನ್ನಾಗಿ ಮನಗಂಡು ಆ ದಿಶೆಯಲ್ಲಿ ಪ್ರಯತ್ನಪಟ್ಟರು. ಯಾವ ಅನುಕೂಲತೆ ಮತ್ತು ಪ್ರೋತ್ಸಾಹಗಳಿಲ್ಲದಾಗ ನಡೆದ ಈ ಎತ್ತುಗಡೆಯು ಒಂದು ಸಾಹಸವೆನ್ನಬಹುದು.

ಆಗಿನ ಪತ್ರಿಕೆಗಳ ಪ್ರಸಾರ ನೂರರಿಂದ

ಹೆಚ್ಚೆಂದರೆ ಐನೂರರ ವರೆಗೆ ಮಾತ್ರ ಇದ್ದಿತು. ಪ್ರಕಟನಾವಧಿಯು ಮಾನದಿಂದ ಅಂದಿನವರು ಪಕ್ಷ (೧೫ ದಿನ)ವನ್ನು ನೆಚ್ಚಿಕೊಂಡದ್ದು ಕಂಡುಬರು ತ್ತದೆ. ಆ ಮೇಲೆ ಅವನ್ನು ವಾರಪತ್ರಿಕೆ ಯಾಗಿಯೊ, ಇಲ್ಲವೆ ಮಾಸಿಕವೊ ಆಗಿ ಮಾರ್ಪಡಿ ಸಿದುದೂ ಇದೆ. ಮುದ್ರಣಾಲಯ ಮತ್ತು ವಾರ್ತಾಸಂಸ್ಥೆ ಇಲ್ಲದ್ದರಿಂದ ವಾರ್ತಾಪತ್ರಿಕೆ ಗಳು ನಾಲ್ಕಾರು ಪುಟಗಳಿಗೆ ಸೀಮಿತವಾಗಿದ್ದುವು. ಇನ್ನು, ಲೇಖಕರು ತಾವಾಗಿ ಕವಿತೆ, ಕತೆ, ಇತರ ಬರಹಗಳನ್ನು ಕಳಿಸುವ ಇಂದಿನ ಪದ್ಧತಿಯು ಆಗ ರೂಢಿಯಲ್ಲಿರದ್ದರಿಂದ, ಹೆಚ್ಚಿನ ಬರೆವಣಿಗೆ ಯನ್ನು ಸಂಪಾದಕನೇ ಮಾಡಬೇಕಾಗುತ್ತಿತ್ತು. ಸಂಪಾದಕನಲ್ಲಾದರೊ ಮನರಂಜನೆಗೆ ಹೆಚ್ಚು ಅವಕಾಶವಿತ್ತು ಸ್ತ್ರೀಯರ ಚಿತ್ರಗಳನ್ನು ಹಾಕಿ ಚಂದಾದಾರರನ್ನು ಒಲಿಸಿಕೊಳ್ಳುವ ವ್ಯಾವ ಹಾರಿಕ ಮನೋಭಾವ ಇರಲಿಲ್ಲ; ಬದಲಾಗಿ ಸದುದ್ದೇಶದಿಂದ, ಆದರ್ಶ ದೃಷ್ಟಿಯಿಂದ ಪತ್ರಿಕೆ ಯನ್ನು ಹೊರತರಬೇಕೆಂದನು. ಪಾಶ್ಚಾತ್ಯ

ಮೊದಲ ಹೆಜ್ಜೆಗಳು

ಪತ್ರಿಕೆಯ ಹೆಸರು	ಪ್ರಕಟನಾವಧಿ	ವರ್ಷ	ಸಂಪಾದಕ/ನಿರ್ವಾಹಕ
ಮಂಗಳೂರು ಸಮಾಚಾರ	ಪಕ್ಷಪತ್ರಿಕೆ	೧೮೪೩–೪೪	ಹರ್ಮನ್ ಮೊಗ್ಲಿಂಗ್
ಕಂನಡ ಸಮಾಚಾರ	”	೧೮೪೪	”
ಸುಬುದ್ಧಿ ಪ್ರಕಾಶ	”	೧೮೪೯–೧೮೫೫	—
ಕಂನಡ ವಾರ್ತಿಕ	ಪಕ್ಷಪತ್ರಿಕೆ	೧೮೫೭–೫೮	ಮೊಗ್ಲಿಂಗ್
ಮೈಸೂರು ವೃತ್ತಾಂತ ಬೋಧಿನಿ	ವಾರಪತ್ರಿಕೆ	೧೮೫೯–೬೪	ಭಾಷ್ಯಂ ಮನೆತನ
ಕಂನಡ ಜ್ಞಾನಬೋಧಕವು	ಮಾಸಪತ್ರಿಕೆ	೧೮೬೧–೬೨	—
ಅರುಣೋದಯ	ಮಾಸಪತ್ರಿಕೆ	೧೮೬೨–೬೯ ೧೮೮೬–೮೭	ಬಿ. ಎಚ್. ರೈಸ್
ವಿಚಿತ್ರ ವರ್ತಮಾನ ಸಂಗ್ರಹ,	ಪಕ್ಷಪತ್ರಿಕೆ	೧೮೬೨–೬೩	ವ್ಯಾಕ್/ಕಿಟೆಲ್
ಮಠಪತ್ರಿಕೆ/ಕನ್ನಡ ಶಾಲಾಪತ್ರಕ	ಮಾಸಪತ್ರಿಕೆ	೧೮೬೫–	ಚಿನ್ನ ಬಸಪ್ಪ ಇ. ಇ.
ಕರ್ನಾಟಕ ಪ್ರಕಾಶಿಕಾ	ಪಕ್ಷ/ವಾರಪತ್ರಿಕೆ	೧೮೬೫–೬೮	ಭಾಷ್ಯಂ
ಮೈಸೂರು ಗಜೆಟ್	ವಾರಪತ್ರಿಕೆ	೧೮೬೬–	ರಿಕೆಟ್ಸ್ ಇ. ಇ.
ಸಭಾಪತ್ರ	ಪಕ್ಷ/ಮಾಸಿಕ	೧೮೬೮	ಬಾಸೆಲ್ ಮಿಶನ್
ನ್ಯಾಯಸಂಗ್ರಹ	ಮಾಸಿಕ	೧೮೬೮	—
ಸುಬೋಧಿನೀ	ಮಾಸಿಕ	೧೮೭೧	—
ಸೊಬಗಿನ ಸುದ್ದಿ	ವಾರಪತ್ರಿಕೆ	೧೮೭೩	—
ಶೋಧಕ	ಮಾಸಿಕ	೧೮೭೫–೭೮	ವೆಂ. ರಂ. ಶಾಸ್ತ್ರಿ

ಸಂಪರ್ಕದಿಂದಾಗಿ ತಿಳಿದುಬಂದ ಅನೇಕ ವೈಜ್ಞಾನಿಕ, ಔದ್ಯಮಿಕ ವಿಷಯಗಳನ್ನೂ ಪ್ರಪಂಚ ಪರಿಚಯದ ಲೇಖನಗಳನ್ನೂ ಲೋಕಶಿಕ್ಷಣದ ಗುರಿಯನ್ನಿಟ್ಟುಕೊಂಡು ಪ್ರಕಟಿಸಬೇಕೆಂದನು.

೧೮೮೦ನೆಯ ದಶಕವು ಹೊಸಗನ್ನಡ ಸಾಹಿತ್ಯದಲ್ಲಿ ನವೋದಯದ ಕಾಲವಾಗಿದೆ. ಇಷ್ಟು ವರ್ಷಗಳ ವರೆಗೆ ಅನುವಾದ, ಪರಿಷ್ಕರಣ, ಮತ ಪ್ರಸಾರ ಮುಂತಾದವುಗಳೇ ಸಾಹಿತ್ಯ ರಚನೆಗೆ ಪ್ರೇರಕವಾಗಿದ್ದುವು. ೧೮೮೧ ರಿಂದ ಮೊದಲಾಗಿ, ನಾಟಕ, ಕತೆ, ಕಾದಂಬರಿ, ಪ್ರಬಂಧ ಸಾಹಿತ್ಯಗಳಿಂದ ಸಾಹಿತ್ಯವಾಹಿನಿಯು ವಿಸ್ತಾರ ಹೊಂದಿತು. ಹೊಸಗನ್ನಡ ಗದ್ಯವು ನೆಲೆಗೊಂಡಿತು. ಮುಖ್ಯವಾಗಿ ಸ್ವತಂತ್ರ ವಿಚಾರಸರಣಿ ತಲೆಯೆತ್ತಿತು. ನವೋದಯದ ಈ ಕಾಲದಲ್ಲಿ ಪತ್ರಿಕೆಯು ಪ್ರಮುಖ ವಾಹಿನಿಯಾಯಿತು. ಆ ದೃಷ್ಟಿಯಿಂದ ೧೮೮೨–೮೩ರ ಅವಧಿಯಿಂದ ಪ್ರಕಟವಾಗತೊಡಗಿದ 'ಹಿತಬೋಧಿನಿ' (ಬೆಂಗಳೂರು) 'ಚಂದ್ರೋದಯ' (ಧಾರವಾಡ) ಮತ್ತು 'ಕನ್ನಡ ಸುವಾರ್ತೆ' (ಮುಂಬಯಿ) ಇವನ್ನು ಹೆಸರಿಸಬೇಕು. ಅವುಗಳ ಮೂಲಕ ಕನ್ನಡ ಪತ್ರಿಕಾ ವ್ಯವಸಾಯವು ಹೊಸ ಮಾರ್ಗವನ್ನು ಹಿಡಿಯಿತು. ಆ ಮಾರ್ಗವೆಂದರೆ, ವಿಚಾರ ಜಾಗೃತಿ, ಸ್ವಂತ ಅಭಿಪ್ರಾಯಗಳ ಅಭಿವ್ಯಕ್ತಿ ಮತ್ತು ರಾಷ್ಟ್ರೀಯ ಮನೋವೃತ್ತಿ. ಅದಕ್ಕೂ ಹಿಂದೆ 'ಕರ್ನಾಟಕ ಪ್ರಕಾಶಿಕಾ', 'ಶೋಧಕ' ಇವುಗಳ ಪತ್ರಿಕಾಕರ್ತರು ಹಾಗೆ ಮಾಡಿದ್ದಾರೇನೋ ನಿಜ. ಆದರೆ ಅದು ಬಿಡಿಬಿಡಿ ವ್ಯಕ್ತಿಗಳ ಎತ್ತುಗಡೆಯಾಗಿದ್ದಿತಲ್ಲದೆ ಒಂದು ಪ್ರಭಾವೀ ಪರಂಪರೆಯಾಗಿ ಕಂಡು ಬಂದದ್ದು ಮೇಲೆ ಕಾಣಿಸಿದ ಮೂರು ಪತ್ರಿಕೆಗಳ ಮೂಲಕ. ಅಂತೂ ಪತ್ರಿಕೋದ್ಯಮದ ದ್ವಿತೀಯ ಘಟ್ಟವು ೧೮೮೨–೮೩ರಿಂದ ಮೊದಲಾಯಿತು. ಈ ನವೋದಯ ಕಾಲದ ಪತ್ರಿಕೋದ್ಯಮಕ್ಕೆ ಸೂಕ್ತವಾದ ಹಿನ್ನೆಲೆಯನ್ನು ಒದಗಿಸಿದ ಹದಿನೇಳು ಪತ್ರಿಕೆಗಳ, ಅವುಗಳ ನಿರ್ವಾಹಕರ ಕಾರ್ಯವನ್ನು ಸ್ಮರಿಸಿಕೊಳ್ಳುವುದು ಉಚಿತವೇ ಆಗಿದೆ.* ✡

* ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಸದ್ಯದಲ್ಲೇ ಪ್ರಕಟಿಸಲಿರುವ 'ಹೊಸಗನ್ನಡದ ಅರುಣೋದಯ' ಗ್ರಂಥದ ಆಧಾರದಿಂದ.

ಬಲ್ಲವರ ನುಡಿ

ಮಾನವನಿಗೆ ಇರುವ ತೊಂದರೆಗಳು ಎರಡು ವಿಧ. ಅತಿ ಕ್ಲಿಷ್ಟತರವಾದ ಸತ್ಯವನ್ನು ಆತನು ತಿಳಿಯಲಾರ; ತಿಳಿದುಕೊಂಡ ಸುಲಭವಾದ ಸತ್ಯವನ್ನು ನೆನಪಿಟ್ಟುಕೊಳ್ಳಲಾರ.

—ರಿಬೆಕ್ಕಾ ವೆಸ್ಟ್

ನಮ್ಮಲ್ಲಿರುವ ಒಂದು ದುರ್ಗುಣವನ್ನು ಸರಿಪಡಿಸಿಕೊಳ್ಳುವುದಕ್ಕಿಂತ ಸಾವಿರ ಸುಗುಣಗಳನ್ನು ಹೊಂದುವುದು ಸುಲಭ.

—ಜೀನ್ ಬ್ರೆಯರ್

ಎಲ್ಲಿ ಸತ್ಯ, ಇಲ್ಲವೋ ಅಲ್ಲಿ ನಿಜವಾದ ಜ್ಞಾನವೂ ಇರಲಾರದು. —ಗಾಂಧೀಜಿ

ಬಡತನ ಹಾಗೂ ಸ್ವಾತಂತ್ರ್ಯ ಒಟ್ಟಾಗಿರುವುದು ಒಂದು ಹಗಲು ಕನಸು.

—ವಿಲಿಯಂ ಕಾಬೆಟ್

ಸಂದರ್ಭಗಳು ಮನುಷ್ಯನನ್ನು ಸಬಲನನ್ನಾಗಲೀ ದುರ್ಬಲನನ್ನಾಗಲೀ ಮಾಡುವುದಿಲ್ಲ; ಆದರೆ ಆತ ಏನಾಗಿದ್ದಾನೆಂಬುದನ್ನು ತೋರಿಸಿಕೊಡುತ್ತವೆ.

ಸಂಗ್ರಹ : ಯು. ಎಸ್. ಶ್ರೀನಿವಾಸರಾವ್

ನಿತ್ಯದ ಮನೆಕೆಲಸ ನಿಮಗೆ ಬೆನ್ನುನೋವು ಮತ್ತು ಕೀಲು ನೋವುಗಳನ್ನು ಉಂಟುಮಾಡಬಲ್ಲದು.



ನೀವಿನ್ನೂ ಎದ್ದೇ ಇಲ್ಲ, ಆಗಲೇ ನಿಮ್ಮ ಯಜಮಾನರು ಕಛೇರಿಗೆ, ಮಕ್ಕಳು ಶಾಲೆಗೆ ಹೊರಡುತ್ತಿದ್ದಾರೆ. ನೀವು ಸಮಯದೊಂದಿಗೆ ಪಂದ್ಯ ಕಟ್ಟಿ ಕೆಲಸ ಮಾಡುತ್ತೀರಿ. ಅಡಿಗೆ ಕೆಲಸವೆಲ್ಲ ಮುಗಿಯುವ ಹೊತ್ತಿಗೆ ನಿಮ್ಮ ಬೆನ್ನು ನೋಯುತ್ತಿರುತ್ತದೆ.



ನೀವು ಒಂದು ಕ್ಷಣ ಸಹ ವಿಶ್ರಾಂತಿ ತೆಗೆದುಕೊಳ್ಳಲು ಆಗುತ್ತಿಲ್ಲ. ರಾಶಿ ಬಟ್ಟೆಯನ್ನು ನೀವೇ ಒಗೆಯಬೇಕು. ಅದೆಲ್ಲಾ ಮುಗಿಯುವ ಹೊತ್ತಿಗೆ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ.

ವೈಜ್ಞಾನಿಕವಾಗಿ, ಸಂಯೋಜಿತವಾದ ಐಯೊಡೆಕ್ಸ್ ಬಾಧಿತ ಜಾಗಗಳಲ್ಲಿ ಆಳವಾಗಿ ಇಳಿದು ಬೆನ್ನು ನೋವು, ಸ್ನಾಯು ನೋವು ಮತ್ತು ಕೀಲುನೋವುಗಳಿಂದ ನಿಶ್ಚಿತ ಶಮನ ನೀಡುತ್ತದೆ.

ಐಯೊಡೆಕ್ಸ್®


ಪೂರ್ಣ ಶಮನಕ್ಕೆ

50 ವರ್ಷಗಳಿಂದ ಭಾರತದ ಅತ್ಯಧಿಕ ಮಾರಾಟವಾಗುತ್ತಿರುವ ನೋವು ಮುಲಾಮು



SKF ಇದೊಂದು ಸ್ಮಿತ್ ಕ್ಲೈನ್ ಅಂಡ್ ಫ್ರೆಂಚ್ ತಯಾರಿಕೆ.

ASP-SKF-23 KAN




ಬಳೆಯ ಸದ್ದು

ಮೊಟ್ಟಮೊದಲ ಬಾರಿ ಬಳೆಯ ಸದ್ದನ್ನು ನಾನು ಕೇಳಿದಾಗ, ಅದೇನೆಂದು ಅರಿವಾಗಿರದಿದ್ದರೂ ಏನೋ ಮಧುರ ಸದ್ದೆನಿಸಿ ಕಿವಿಗಳಿಗೆ ಹಿತವಾಗಿತ್ತು. ಹಾಗೇ ತೊಟ್ಟಿಲ ತೂಗಿನ ಹಿಂದು ಮುಂದಿನ ಒಲೆತದಲ್ಲಿ ಈ ಸದ್ದಿನ ಮೇಳ ಮೇಳವಿಸಿ ಕಿವಿಗಳಿಗೆ ಜೇನೆರೆದಿದ್ದಾಗ ಕಣ್ಣ ಬಟ್ಟಲುಗಳು ಮುಚ್ಚಿಕೊಂಡು ಸ್ವಪ್ನ-ಲೋಕವನ್ನರಸಲು ಹೋಗುತ್ತಿದ್ದವು. ದಿನದಿಂದ ದಿನಕ್ಕೆ ನನಗೆ ಈ ಸದ್ದು ಹೆಚ್ಚು ಪ್ರಿಯವಾಗುತ್ತ ಬಂದಿತು. ಬಚ್ಚಲಲ್ಲಿ ಎಣ್ಣೆ ಹಚ್ಚಿ ಬಿಸಿನೀರು ಹುಯ್ಯುವಾಗ ಈ ಸದ್ದು ಇದ್ದಿತೆಂದರೆ ಅಳುವೇ ಸುಳಿಯುತ್ತಿರಲಿಲ್ಲ, ತಲೆ ತೂರಿಸಿ ಅಂಗಿ ಹಾಕಿಸಿಕೊಳ್ಳುವಾಗ ನೋವಾಗುವುದಿಲ್ಲವೆ? ಆಗ ಬಳೆಯ ಸದ್ದು ಕೇಳಿಬರದಿದ್ದರೆ ಅಳದಿರುವುದು ಹೇಗೆ? ತೊಟ್ಟಿಲಲ್ಲಿ ಮಲಗಿಸಿ ತೂಗುವಾಗ ಬಳೆಯ ಸದ್ದಿನ ಹಿಮ್ಮೇಳ, ಜೋಗುಳದ ಮುಮ್ಮೇಳ ಇರಲೇಬೇಕು. ಹಿಂದೊಮ್ಮೆ-ಮುಂದೊಮ್ಮೆ ತೂನೆದಾಗ, ಝಣಕ್-ಝಲ್ ಎನ್ನುವ ಬಳೆಗಳ ಸದ್ದದೆಷ್ಟು ಮಾದಕ!

ಅತ್ತಾರೆ ಅಳಲವ್ವ, ಅಳುವ ಕೂಸಿರಲವ್ವ,
ಕೆಟ್ಟಾರೆ ಕೆಡಲಿ ಮನೆಗೆಲಸಾ...

ಹೀಗೆ ಹಾಡುತ್ತ, ಮನೆಗೆಲಸಕ್ಕಿಂತ ನನ್ನನ್ನೇ



★
ಈಶ್ವರಚಂದ್ರ
★

ಹೆಚ್ಚಿಸ್ನುವ, ನಾನು ಅಳುತ್ತಿದ್ದರೂ ನನ್ನನ್ನು ಪ್ರೀತಿಸುವ ತಾಯಿ ಪ್ರೀತಿ, ಅದರೊಡನೆ ಘಲಘಲಿಸುವ ಬಳೆಯ ಸದ್ದು ತುಂಗೆ–ಭದ್ರೆಯರಂತೆ ಸೇರಿ ಒಟ್ಟಿಗೆ ಪ್ರವಹಿಸಿದಾಗ ಅದೆಷ್ಟು ಸುಖ! ಹಾಗೇ ಕೇಳುತ್ತಿದರೆ ಹಾಳಾದ ನಿದ್ರೆ ತತ್‌ಕ್ಷಣ ಬಂದುಬಿಡುತ್ತದೆ. ಇನ್ನಷ್ಟು ಹೊತ್ತು ಅಮ್ಮ ಜೋಗುಳ ಹಾಡಬೇಕು. ಅವಳ ಕೈ ಬಳೆಗಳ ಇಂಚರ ನನ್ನ ಕಿವಿದುಂಬಬೇಕು ಎಂದು ನನಗೇನೋ ಆಸೆ. ಆದರೆ ಅದಾವ ಮಾಯದಲ್ಲೋ ಆ ನಿದ್ರಾಂಗನೆ ಬಂದುಬಿಡುತ್ತಾಳೆ, ನನ್ನನ್ನೆತ್ತಿಕೊಂಡು ಕನಸಿನ ಲೋಕಕ್ಕೆ ಒಯ್ಯುತ್ತಾಳೆ. ಅಲ್ಲೋ–ಬರಿಯ ಮೋಡಗಳು! ಮತ್ತೆ ಹಣ್ಣಿನ ಮರಗಳೂ ಉಂಟು. ಆದರೆ ತಿನ್ನಲು ನನಗೇನು ಹಲ್ಲು ಹುಟ್ಟಿವೆಯೆ? ಆಗೀಗೊಮ್ಮೆ ದೇವಸುಂದರಿಯರು ಅಲ್ಲಿ ಸುಳಿದಾಡುತ್ತಾರೆ. ಆದರೇನು? ಎಲ್ಲ ಬೋಡುಗೈಯಿನವರು. ಅವರಿಗೆ ಕೈತುಂಬ ಬಳೆ ಹಾಕಿಕೊಳ್ಳಬೇಕೆಂದು ತಿಳಿಯದೆ? ಕೈಯನ್ನೊಮ್ಮೆ ಹಾಗೆ ಹೀಗೆ ಕುಣಿಸಿದಾಗ ಕೈ ಬಳೆಗಳ ನುಣ್ ಇಂಚರವನ್ನು ಅವರು ಕೇಳಿಯೇ ಇಲ್ಲವೆ! ಅವರಿಗೂ ನನಗಿರುವಂತೆ ಅಮ್ಮ, ಆ ಅಮ್ಮನ ಕೈತುಂಬ ಬಳೆ ಇಲ್ಲವೇನೋ? ಬಳೆಗಳ ಸದ್ದಿಲ್ಲದ ಆ ಕನಸಿನ ಲೋಕದಲ್ಲಿ ಸುಳಿಯಲು ನನಗೆ ಬೇಸರ. ನಿದ್ರಾಂಗನೆಯ ಹಿಡಿತದಿಂದ ಜಿಗಿಯುತ್ತೇನೆ; ತೊಟ್ಟಿಲು ಅಲುಗಾಡುತ್ತದೆ. ಅದಕ್ಕೆ ಕಟ್ಟಿರುವ ಗೆಜ್ಜೆ ಗೊಂಚಲು ಝಲ್‌ಝಲ್

ಎಂದು ನಾನೆದ್ದುದನ್ನು ಅಮ್ಮನಿಗೆ ಸಾರುತ್ತದೆ. ಅಮ್ಮ ಏನೋ ಕೆಲಸದಲ್ಲಿದ್ದಾಳೆ. ಅವಳ ಬಳೆಯ ಸದ್ದು ಅಸ್ಪಷ್ಟವಾಗಿ ಕೇಳುತ್ತಿದೆ. ಧ್ವನಿ ತೆಗೆದು ಅಳತೊಡಗುತ್ತೇನೆ. ಅಮ್ಮ ಅನ್ನುತ್ತಾಳೆ:

'ಈ ತುಂಟ ಬೇಗ ಎದ್ದ! ಸ್ವಲ್ಪ ತೂಗೀಂದ್ರೆ!'

ಅಪ್ಪ ಬಂದರು. ನನ್ನನ್ನೇ ನೋಡುತ್ತಿದ್ದಾರೆ, ಅದೇ ತರಕಲು ಗಡ್ಡ. ಕೈಮೇಲೆಲ್ಲಾ ಕೂದಲು. ಥೂ. ಅಮ್ಮನ ಕೈಯ ಹಾಗೆ ಏಕಿದು ನುಣುಪಾಗಿಲ್ಲ! ಅಪ್ಪ ಕೈಗೆ ಬಳೆಯನ್ನೇ ತೊಡುವುದಿಲ್ಲ. ಅದೇಕೋ?

ಅಪ್ಪ ತೂಗಲು ಪ್ರಾರಂಭಿಸುತ್ತಾರೆ. ಯಾರಿಗೆ ಬೇಕಾಗಿದೆ? ಒಂದು ಬಳೆಯ ಸದ್ದೆ? ಒಂದು ಜೋಗುಳವೇ? ಏನೂ ಇಲ್ಲ! ಅಗೋ ಪ್ರಾರಂಭಿಸಿದರು–

'ಶ್ರೀವನಿತೆಯುರಸನೆ ವಿಮಲರಾಜೀವ...'

ದಪ್ಪ ಧ್ವನಿ. ಬಳೆಯ ಸದ್ದಿದ್ದರೆ ಹೇಗೋ ಮುಚ್ಚಿ ಹೋಗುತ್ತಿತ್ತು—ಆದರೆ ಅದೂ ಇಲ್ಲ. ಹೋಗಲಿ, ನನ್ನ ಹಾಡೇ ಅದು? ಅದಾರೋ ಶ್ರೀವನಿತೆಯುರಸನದು. ಈ ಹಾಡು ಕೇಳುತ್ತಾ ನಾನೇಕೆ ಮಲಗಲಿ? ಗಟ್ಟಿಯಾಗಿ ಅಳತೊಡಗುತ್ತೇನೆ. ಅಪ್ಪ ತೂಗಿದಷ್ಟೂ ಅಳು ಹೆಚ್ಚು! ಅಪ್ಪ ಬಳಲುತ್ತಾರೆ. ಕೊನೆಗೆ,

'ಲೇ... ಇವನು ಮಲಗೋಲ್ಲ; ನೀನೇ ತೂಗು ಬಾ,' ಎಂದು ಕೂಗುತ್ತಾರೆ. ಅಮ್ಮ ಬಂದು ತೂಗತೊಡಗಿದ ತತ್‌ಕ್ಷಣವೇ ಅಳು ನಿಲ್ಲಿಸುತ್ತೇನೆ.

'ನೋಡಿದೆಯಾ ಈ ತುಂಟನ್ನ! ನೀನು ಬಂದ ಕೂಡ್ಲೆ ಹೇಗೆ ಅಳು ನಿಲ್ಲಿಸಿದ! ಬಳೇ ಸದ್ದು ಬೇಕವನಿಗೆ ಬಳೇ ಸದ್ದು! ಹ್ಹಾ...' ಎನ್ನುತ್ತಾರೆ.

ನನಗೋ, ಎಲ್ಲಿಲ್ಲದ ನಗು. ನಾನು ದೊಡ್ಡವನಾದ ಮೇಲೆ ಕೈತುಂಬ ಬಳೆ ಹಾಕಿಕೊಳ್ಳಬೇಕೆಂದುಕೊಳ್ಳುತ್ತೇನೆ. ಮತ್ತೆ ಅಮ್ಮ ಜೋಗುಳ ಹಾಡುತ್ತಾಳೆ.

ಹೀಗೆ ಹುಟ್ಟಿನಿಂದಲೇ ನಾನು ಬಳೆಯ ಸದ್ದಿನ ಭಕ್ತನಾದೆ. ಸ್ವಲ್ಪ ಬೆಳೆದು ತಪ್ಪು ಹೆಜ್ಜೆ ಇಡುವಂತಾದಾಗಲೂ ನನ್ನ ಕೈಗಳಿಗೆ ಬಳೆ ತೊಡಿಸದಿದ್ದಾಗ ಬಹಳ ಬೇಸರವಾಯಿತು. ಒಮ್ಮೆ ಅಮ್ಮನೇನೋ ಬಣ್ಣ ಬಣ್ಣದ ಬಳೆ ತೊಡಿಸಿದ್ದಳು. ಆದರವೆಂಥ ಬಳೆಗಳು? ಮೂಕ ಬಳೆಗಳೇ ಇರಬೇಕು. ಸದ್ದು ಸಪ್ಪಳವಿಲ್ಲದೆ ಮೂಕ ಬೆಕ್ಕಿನಂತೆ ಇವು ಸುಮ್ಮನಿರುವಂತಿದ್ದರೆ ನನ್ನ ಕೈಯಲ್ಲಿದ್ದೇನು ಉಪಯೋಗ? ಅಂದು ಸಂಜೆ ಮನೆಗೆ ಬಂದ ತಂದೆ ನನ್ನ ಕೈ ನೋಡಿ ಅಮ್ಮನಿಗೆ, 'ಇದೇನೇ ಇವನಿಗೆ ಬಳೆ ತೊಡಿಸಿದೀಯ! ಗಂಡು ಮಗುವನ್ನು ಹೆಣ್ಣು ಮಾಡ್ತಿಯೇನು? ಮುಂದಿನ ವರ್ಷ ಹೆಣ್ಣೇ ಹುಟ್ಟೀತು ಬಿಡು! ಇದಕ್ಕೇಕೆ ಬಳೆ–ಲಂಗ ಎಲ್ಲ? ಗುಂಡುಗೋಲಿ ಹಾಗಿರಲಿ,' ಎಂದು ಒರಟೊರಟಾಗಿ ನನ್ನ ಕೈಬಳೆ ತೆಗೆದಾಗ ನಾನು ನೋವಾಯಿತೆಂದು ಅತ್ತೆ. ಅಮ್ಮ ಮುಂದೆ ಬಂದು, 'ನೀವು ಬಿಡಿ. ನಾನೆಲ್ಲ ಮೆಲ್ಲನೆ ತೆಗೀತೇನೆ. ಇಲ್ಲದಿದ್ದರೆ ಮಗು ರಚ್ಚೆ ಮಾಡುತ್ತೆ,' ಎಂದು ತೆಗೆಯತೊಡಗಿದ್ದಳು ಬಳೆಗಳನ್ನು.

ಆಗೆಲ್ಲಾ ನನಗದೆಷ್ಟು ಸಿಟ್ಟುಬಂದಿತ್ತು! ಅಪ್ಪ ಹೇಳಿದ್ದು ಕೇಳಿ ಅಳುವೇ ಬಂದಿತ್ತು. ಜೋರಾಗಿ ಅತ್ತಿದ್ದೆ. ಆಗಲೇ ನನಗನ್ನಿಸಿತ್ತು— ಬಳೆ ತೊಡದಂತಹ ಏನೋ ಪಾಪ ಮಾಡಿ ನಾನು ಹುಟ್ಟಿದ್ದೇನೆ ಎಂದು. ಈ ಭಾವ ನಿಶ್ಚಯಗೊಂಡಂತೆಲ್ಲಾ ಬಳೆಯ ಸದ್ದು ಕೇಳುವ, ಅದರ ಮಧುರ ಘಲತ್ಕಾರದಲ್ಲಿ ಸುಖ ಪಡೆಯುವ ಆಸೆ ಕೆರಳತೊಡಗಿತ್ತು.

ಆದರೆ ವಿಧಿ ನನ್ನ ವಿರುದ್ಧ ಸಂಚನ್ನೇ ಹೂಡಿರಬೇಕು. ನನಗೆ ತೊಟ್ಟಿಲ ಶಯನ ತಪ್ಪಿತು. ತನ್ಮೂಲಕ ಬಳೆಯ ಸದ್ದು ಸವಿವ ಅವಕಾಶವೂ ಜಾರಿತು. ಪಿಳಿಪಿಳಿ ಕಣ್ಣು ಬಿಡುವ ಪುಟ್ಟ ಪೋರಿಯೊಬ್ಬಳು ಇವೆರಡನ್ನೂ ನನ್ನಿಂದ ಕಸಿದುಕೊಂಡಳೆಂದರೆ ನನಗದೆಷ್ಟು ಸಂತಾಪವಾಗಿರಬೇಡ!

ಅವಳಿಗಿನ್ನೂ ಸರಿಯಾಗಿ ಅಳಲೂ ಬರದಿದ್ದರೂ ಆಗಲೇ ಕೈಯಲ್ಲಿ ಬಳೆ! ಬಣ್ಣಬಣ್ಣದ ಬಳೆಗಳು. ಅದನ್ನು ನೋಡಿಕೊಂಡು ಅವಳು ಪೆಚ್ಚು ಪೆಚ್ಚಾಗಿ ನಗುತ್ತಾಳೆ. ನನಗೋ ಸಹಿಸಲಾಗದ ಸಿಟ್ಟು. ಆದರೆ ಏನು ಮಾಡಲಿ? ಅವಳ ಬಳಿ ನಾನು ಹೋಗದಂತೆ ಅಮ್ಮ ಎಚ್ಚರಿಕೆ ವಹಿಸುತ್ತಾಳೆ. ಅವಳ ಕೈಬಳೆಗೆ ಕೈ ಹಾಕಿದಾಗ

ಒಮ್ಮೆ ತಂದೆ ನನ್ನ ಬೆನ್ನಿಗೆ ಗುದ್ದಿಯೇ ಬಿಟ್ಟಿದ್ದರು. ಅವಳದೇನು ಹೆಚ್ಚು, ನನ್ನದೇನು ಕಡಿಮೆ? ನನಗಿಂತಾ ತಡವಾಗಿ ಬಂದವಳಿಗೆ ಇಷ್ಟು ಪುರಸ್ಕಾರವೆ?

ನನಗರಿವಿಲ್ಲದೆಯೇ ಹೇಗೋ ನಾನು ದೊಡ್ಡವನಾದೆ; ಶಾಲೆಗೆ ಹೋಗತೊಡಗಿದೆ. ದಿನ ದಿನಕ್ಕೆ ಬಳೆಯ ಸದ್ದು ನನ್ನಿಂದ ದೂರವಾಗ ತೊಡಗಿತು. ಆದರೆ ಮನಸ್ಸು ಮಾತ್ರ ಅದರ ಹತ್ತಿರ ಹತ್ತಿರವಾಗತೊಡಗಿತು. ಸಂಜೆ ಬೀದಿಯ ಹುಡುಗ ಹುಡುಗಿಯರೆಲ್ಲ ಒಟ್ಟು ಸೇರಿ ಆಡುವಾಗ ಹುಡುಗಿಯರ ಬಳೆಯೊಡನೆ ಬೆರಳಾಡಿಸಿ ಅದರಿಂದುಂಟಾಗುವ ನಾದತರಂಗಗಳನ್ನನುಭವಿಸುತ್ತಿದ್ದೆ. ನನ್ನ ತಂಗಿ ಜೊತೆಗಿರುತ್ತಿದ್ದಳು. ಅವಳ ಬಳೆಯ ಮೇಲೆ ನನ್ನ ಕೈ! ಅವಳೋ ಮುಟ್ಟಿದರೆ ಮಾಸಿಹೋದೀತೇನೋ ಬಳೆ ಎಂಬಂತಾಡುತ್ತಿದ್ದಳು.

ಆಗೆಲ್ಲಾ ನನಗೆ ಬಳೆಗಾರನೊಬ್ಬ ದೇವದೂತನಂತೆ ಭಾಸವಾಗುತ್ತಿದ್ದ. ಅವನ ಮಲ್ಲಾರದಲ್ಲಿದೆಷ್ಟು ಬಳೆ ಪವಣಿಸಿದ ಸುರುಳಿಗಳು! ಬಣ್ಣ ಬಣ್ಣದ ಬಳೆಗಳು! ನನಗೆ ಬಳೆಗಳ ಮೇಲೇನೂ ಅಂಥ ವಿಶೇಷ ಪ್ರೇಮವಿಲ್ಲ. ಆದರೆ ಅವು ಮಾಡುವ ಸದ್ದು ಕೇಳುವ ಆಸೆ ಅಧಿಕ. ಅಷ್ಟು ಬಳೆ ಇರುವ ಮಲ್ಲಾರ ಹೊತ್ತಿರುವ ಬಳೆಗಾರ ನಡೆಯುವಾಗ ಹೆಜ್ಜೆಗೊಮ್ಮೆ ಫಲರ್-ಝಲಕ್ ಎನ್ನುವ ಬಳೆ ಕಂಡರೆ ಅದೆಂಥದೋ ಅವ್ಯಕ್ತ ಸಂತೋಷ. ಇಲ್ಲ; ಇದು ನನ್ನ ಕಲ್ಪನೆಯಾಗಿತ್ತು. ಬಳೆಗಾರ ಬರುವಾಗ ಆಗುವ ಸದ್ದು ಕೇಳಲು ಹಿತವಾಗಿದ್ದೀತೆಂದು ನನ್ನ ಕಲ್ಪನೆಯಾಗಿತ್ತಷ್ಟೇ. ಆದರೆ ಹಾಗೊಮ್ಮೆ ಕೇಳಿದಾಗ ಆ ಸದ್ದದೇಕೋ ಪ್ರಿಯವಾಗಲಿಲ್ಲ. ಅದೇನೋ ಒಡಕು ದನಿ. ಕಿವಿಗೇಕೋ ಬೇಡ. ಊಹೂಂ ...ಕೈಬಳೆಯ ಸದ್ದದಲ್ಲವೇ ಅಲ್ಲ. ಪಕ್ಷಿಗಳೆಲ್ಲಾ ಸಂಜೆ ಮರದಲ್ಲಿ ಕುಳಿತು ಒಟ್ಟಿಗೆ ಚಿಲಿಪಿಲಿಗುಟ್ಟಿದಂತೆ. ಅದನ್ನು ಕೇಳಲು ಏನು ಹಿತ? ಅದು ಗುಂಪಿನ ದೊಂಬಿ. ನೂರು ಜನ ಸಂಗೀತಗಾರರು ತಮ್ಮ ಮನಸ್ಸಿಗೆ ಬಂದ ಹಾಡನ್ನು ಮನಸ್ಸಿಗೆ ಬಂದ ರಾಗದಲ್ಲಿ ಒಟ್ಟಿಗೆ ಹಾಡಿದರೆ ಕೇಳಲು ಹಿತವೆ? ಹಾಗೆ ಈ ಬಳೆಯ ಮೇಳ. ಅದು ಎಲ್ಲಿರಬೇಕೋ ಅಲ್ಲಿರಬೇಕು. ಆಗ ಮಧುರ ಸ್ವರ ಕೇಳೀತು. ಮಾಟವಾದ ಕೈಯಲ್ಲಿ ಆರೇಳು ಬಳೆಗಳಿದ್ದು ಮಾಡುವ ಸದ್ದೇ ಕೇಳಲು ಸೊಗಸು. ತೊಟ್ಟವರಿಗೂ ಆನಂದ, ಕೇಳಿದವರಿಗೂ ಉಲ್ಲಾಸ.

ಹೀಗಾಗಿ ಬಳೆಗಾರರನನ್ನು ಆದರ್ಶ ವ್ಯಕ್ತಿ ಎಂದುಕೊಂಡಿದ್ದ ಮನ ಬಿಸುಸುಯ್ದಿತು. ಆದರೂ ಲಲನೆಯರಿಗೆ ಬಳೆ ತೊಡಿಸಿ ಆ ಮೂಲಕ ಬಳೆಗಳಿಂದ ಸುಸ್ವನ ಬರುವಂತಾಗಲು ಈತ ನೆರವಾಗುವುದರಿಂದ ನನ್ನ ಸಹಾನುಭೂತಿಯನ್ನೇನೂ ಅವನು ಕಳೆದುಕೊಳ್ಳಲಿಲ್ಲ.

ಮತ್ತೆ ಇನ್ನಷ್ಟು ದೊಡ್ಡನಾದೆ. ಬಳೆಯ ಭೂತವೇನು ನನ್ನನ್ನು ಬಿಟ್ಟು ತೊಲಗಿರಲಿಲ್ಲ. ಆದರೆ ಆ ವೇಳೆಗೆ ಗಂಡಸರು ಬಳೆ ತೊಡಬಾರದು ಅಥವಾ ತೊಡುತ್ತಿಲ್ಲ ಎಂಬ ಅಂಶ ಮನದಟ್ಟಾಗಿತ್ತು. ಎಂದ ಮೇಲೆ ಬಳೆ ತೊಡುವ ಕೈಗಳು ನನ್ನವಲ್ಲ ಎಂದು ನಿಶ್ಚಯವಾಯಿತು. ಇನ್ನೇನು ಮಾಡುವುದು? ಬಳೆ ತೊಟ್ಟಿರುವ ಕೈಗಳಿಂದಲೇ ಬರುವ ಬಳೆಯ ಸದ್ದನ್ನು ಕಿವಿಗಳಿಗೆ ಕೇಳಿಸಿ ಸಂತಸಪಬೇಡಕಷ್ಟೇ? ಅದೇ ಕೆಲಸದಲ್ಲಿ ತೊಡಗಿದೆ. ಆ ಕಾರ್ಯದಲ್ಲಿ ಲೀನವಾಗಿ ಸುತ್ತಲಿನ ಪ್ರಪಂಚವನ್ನು ಗಮನಿಸುವಾಗಲೇ ಇಲ್ಲ. ಬಳೆಯ ಸದ್ದಿನತ್ತ ಮಾತ್ರ ಕೇಂದ್ರಿಕೃತವಾದ ಮನಕ್ಕೆ ಬೇರೇನು ಬೇಕು? ಬೇರೇನು ಕಂಡೀತು? ಆದರೆ ಕಣ್ಣು ತೆರೆದಾಗ ಕಾಲ ಬಿಗಡಾಯಿಸಿತ್ತು. ನನಗದೇನೋ ಬಿರುದಾವಳಿಗಳು ಬಂದಿದ್ದವು. ಇದರಿಂದ ಬೇಸರಗೊಂಡೆ. ಅಸಭ್ಯನನ್ನು ಆ ಹೆಸರಿನಿಂದ ಕರೆದರೆ ಕೋಪವಿಲ್ಲ; ಆದರೆ ಒಬ್ಬ ಸಭ್ಯ ವ್ಯಕ್ತಿಗೆ ಅಸಭ್ಯನ ಪಟ್ಟ ಕಟ್ಟಿದರೆ ಯಾರು ಒಪ್ಪುತ್ತಾರೆ ಸ್ವಾಮಿ? ಬಳೆಯ ಸದ್ದು ಕೇಳುವುದು ತಪ್ಪೆ? ಆ ಸದ್ದು ಕಿವಿಗೆ ಬಿದ್ದಾಗ ಥಟ್ಟನೆ ತಿರುಗಿ ನೋಡುವುದು ತಪ್ಪೆ? ಆ ಸದ್ದು ಚಿಮ್ಮಿದ ಕೈಯೊಡತಿ ಬಾಲೆಯೋ, ಪ್ರೌಢೆಯೋ, ವೃದ್ಧೆಯೋ— ನಾನೇಕೆ ನೋಡಲಿ? ನಾನು ಸಂಗೀತ ಕೇಳಲು ಹೋಗುವವನೇ ಹೊರತು ತಬಲದವನ ಜುಟ್ಟಿನ ನೃತ್ಯವನ್ನು ನೋಡಲು ಹೋಗುವವನಲ್ಲ. ಹಾಗೆ ಏಕಕಾಲದಲ್ಲಿ ಸಂಗೀತವನ್ನೂ ಕೇಳುತ್ತ ಜುಟ್ಟಿನ ನೃತ್ಯವನ್ನೂ

ನೋಡುತ್ತ ಅನುಭವಿಸುವಷ್ಟು ಪ್ರೌಢಿಮೆ ನನ್ನಲ್ಲಿಲ್ಲ.

ಹೀಗೆ ನಂಬಿದ ದೇವರು ನಡುನೀರಿನಲ್ಲಿ ಕೈ ಬಿಡುವುದುಂಟೆ? ನಂಬದಿದ್ದಾಗ ಬಿಟ್ಟಿದ್ದರೆ ನನಗೇಕೆ ವ್ಯಥೆ? '...ನಂಬದೆ ಕೆಟ್ಟರೆ ಕೆಡಲಿ.' ನಾನು ನಂಬಿದ್ದ ನೆಚ್ಚಿದ್ದ 'ಬಳೆಯ ಸದ್ದು' ನನಗಿಷ್ಟು ಅಪಖ್ಯಾತಿ ಕಟ್ಟುವುದು ಯಾವ ನ್ಯಾಯ? ಪಾಪ, ಅದರದೇನು ತಪ್ಪು? ಅದು ನಿಸ್ಸಹಾಯಕವೇ ಅಲ್ಲವೆ? ಎಲ್ಲಾ ಜನರ ಹುಚ್ಚು ವ್ಯಾಪಾರ. ನಾನು ಬಳೆಯೊಡತಿಯರ ಹಿಂದೆ ಹಿಂದೆ ತಿರುಗುತ್ತೇನಂತೆ ಸ್ವಾಮಿ! ಇದು ನಂಬುವ ಮಾತೆ? ಇಂಥ ಸಲ್ಲದ ಉಪದ್ವ್ಯಾಪಕ್ಕೆ ನಾನೇಕೆ ಕೈ ಹಾಕಿಯೇನು? ಅವರ ಮುಖಗಳನ್ನೂ ಸರಿಯಾಗಿ ನಾನು ನೋಡಿದವನಲ್ಲ. ನನಗೆ ಬೇಕಾದುದು ಬಳೆಯ ಸದ್ದಷ್ಟೆ. ಅದನ್ನು ನನ್ನ ಪಾಡಿಗೆ ನಾನು ಕೇಳಿಕೊಂಡರೆ ಯಾರಿಗೇಕೆ ಹೊಟ್ಟೆ ಉರಿ ಅಂತ? ಯಾರ ಗಂಟು ಎಷ್ಟು ಸವೆಯಿತು? ನನಗೆ ಹುಚ್ಚು ಹಿಡಿದಿರಬೇಕೆಂದುಕೊಳ್ಳುವಿರೇನು? ಹೌದು ರಾಯರೇ, ನಾನು ಹುಚ್ಚ. ನನಗೆ ಬಳೆಯ ಸದ್ದಿನ ಹುಚ್ಚು ಹಿಡಿದಿದೆ.

ಮತ್ತೆ, ನನಗೆ ಇಷ್ಟೆಲ್ಲಾ ಬಿರುದು ದಯಪಾಲಿಸಿದ ಈ ಹವ್ಯಾಸವನ್ನು ಬಿಟ್ಟುಬಿಡಬೇಕೆಂದುಕೊಳ್ಳುತ್ತೇನೆ. ಆದರೆ ಇದು ಬರಿಯ ಅಂದುಕೊಳ್ಳುವಿಕೆಯಲ್ಲಿಯೇ ಮುಗಿತಾಯಗೊಳ್ಳುತ್ತದೆ. ನನ್ನ ಮನದಿಂದ, ಗುಣುಗುಡುವ ಆ ಸದ್ದನ್ನು ಕಿತ್ತೆಸೆಯಲು ಸಾಧ್ಯವೇ ಇಲ್ಲ. ಅದು ಹುಟ್ಟಿನಿಂದ ಜೊತೆಯಲ್ಲಿಯೇ ಮೈಗಂಟಿ ಬೆಳೆದುಬಂದಿರುವ ಒಂದು ಅಂಗದಂತೆಯೇ ಇದೆ. ಈ ಬಳೆಯ ಸದ್ದು ನನ್ನ ಮೇಲೆ ಅದೆಂಥ ವಿಶಿಷ್ಟ ಪ್ರಭಾವ ಬೀರಿದೆಯೋ, ಮಾಯೆಯ ಮುಸುಕು ಹಾಕಿದೆಯೋ! ನನ್ನ ಕಿವಿಗಳಲ್ಲಿ ಆಗೀಗೊಮ್ಮೆ ಘಲತ್ಕರಿಸಿ ನನ್ನನ್ನು ಕಾತರಗೊಳಿಸುತ್ತದೆ; ಮಾಯಾಮೃಗದಂತೆ, ಕೇಳಿಯೂ ಕೇಳದಂತೆ ಲೀಲಾವಿಲಾಸಗೈಯ್ಯುತ್ತದೆ. ಮತ್ತಷ್ಟು—ಮತ್ತಷ್ಟು ಅದನ್ನು ನಾನು ಬಯಸುವಂತೆ ಮಾಡುತ್ತದೆ. ಮತ್ತೆ ನಾನು ಅದರ ಗಾರುಡಿಯಲ್ಲಿ ಮರುಳಾಗುತ್ತೇನೆ; ಅದು ಕಿವಿಯಲ್ಲಿ ಉಸಿರುವ ಮಂತ್ರದಿಂದ ಮುಗ್ಧನಾಗಿ ತಲೆದೂಗುತ್ತೇನೆ. ಮತ್ತೆ ಅದರದೇ ಹಂಬಲು. ಅದನ್ನು ಪಡೆವುದೇ ಬಯಕೆ. ಆದರೆ ಹತ್ತಿರ ಹೋದಂತೆಲ್ಲಾ ದೂರ ಹೋಗುವ ಅದನ್ನು ಕಂಡು ನಿರಾಸೆ ಕೆಲವೊಮ್ಮೆ. ಮತ್ತೆ ಕೆಲವು ಬಾರಿ ಯಾವುದಾದರೂ ಸಂಗೀತ ವಾದ್ಯ ಕೊಂಡು, ಅದನ್ನು ನುಡಿಸುವುದನ್ನು ಕಲಿತು ಆ ನಾದ ಮಾಧುರಿಯಲ್ಲಿ ತಲ್ಲೀನನಾಗಿ ಎಲ್ಲ ಮರೆಯೋಣವೆನ್ನಿಸುತ್ತದೆ. ಅದೇಕೋ ಯಾವುದೂ ಪ್ರಿಯವಾಗುವುದಿಲ್ಲ, ಬಾವಿಯಲ್ಲಿನ ಕಪ್ಪೆಯಾಗುತ್ತದೆ ಮನಸ್ಸು. ತಾನಿರುವ ಬಾವಿಗಿಂತ ವಿಶಾಲವಾದ ಜಲಾಶಯ ಯಾವುದಿದೆ? ಬಳೆಯ ಸದ್ದಿಗಿಂತ ಮಧುರವಾದ ನಾದ ಬೇರಾವುದಿದೆ? ಮನಸ್ಸು ಅದರಿಂದ ಅತ್ತಿತ್ತ ಕದಲುವುದಿಲ್ಲ. ಅದೆಷ್ಟೋ ಬೋಡುಗೈ ಹುಡುಗಿಯರನ್ನು ಕಂಡು ಸಿಟ್ಟಿಗೇಳುತ್ತೇನೆ. ಬಳೆಯ ಸದ್ದಿನಿಂದ ನನ್ನನ್ನು ವಂಚಿಸಲೆಂದೇ ಅವರು ಬಳೆ ತೊಟ್ಟಿಲ್ಲವೇ? ಹಾಗಿಲ್ಲದೆ ಕೇವಲ ಫ್ಯಾಷನ್ನಿಗಾಗಿ ತೊಟ್ಟಿಲ್ಲದಿದ್ದರೆ ಅವರ ಬಗೆಗೆ ಅನುಕಂಪ ಸೂಚಿಸುತ್ತೇನೆ, ಮನದಲ್ಲಿಯೇ. ಬಳೆ ತೊಟ್ಟು, ಕೈ ಅಲುಗಿಸಿ ಅದರ ಸದ್ದು ಸವಿವ ಅವಕಾಶವಿದ್ದರೂ, ಯಾವುದೋ ಫ್ಯಾಷನ್ನಿನ ಗಾಳಿಯ ಸುಳಿಗೆ ಸಿಲುಕಿ ಅಸಹಾಯಕರಾಗಿ ತಿರುಗುವ ಅವರನ್ನು ಕಂಡು ಅನುಕಂಪ ಮಾಡದಿನ್ನೇನು?

ಹೀಗೆ ಕಾಡಿಸಿ, ಓಡಿಸಿ, ಬೇಡಿಸಿದ ಬಳೆಯ ಸದ್ದು ನಾನು ಯುವಕನಾದಾಗ, ನನ್ನ ಸಹೃದಯತೆಗೆ, ಗುಣಗ್ರಹಣದ ಸದ್ಗುಣಕ್ಕೆ ಮರುಳಾಗಿ, ಇಷ್ಟು ದಿನ ತೊಂದರೆ ಕೊಟ್ಟು ಕಾಡಿಸಿದ್ದಕ್ಕೆ ನಾಚಿಕೊಂಡಂತೆ ತಲೆ ತಗ್ಗಿಸಿ, ಮೆಲ್ಲನೆ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಸಳಸಳ ಘಲಕ್ ಎನ್ನುತ್ತಾ ನನ್ನ ಬಳಿಗೇ ಬಂದಿತು—ಒಂದು ಶುಭ ದಿನ.

ಆಹ್! ಮೊದಲ ದಿನ ಆ ರಾತ್ರಿ ಮತ್ತದೆಷ್ಟೋ ದಿನಗಳನಂತರ ಬಳೆಯ ಸದ್ದು ಕೇಳುವಾಗ ಎಂಥ ಆನಂದ ನನಗೆ! ಅದರ ಮಂಜುಳ ಮಾದಕ ಸ್ವನಪಾನ ಅದೆಷ್ಟು ಮುದ ನೀಡಿತು! ಮತ್ತೆ ಮತ್ತೆ ಆ ಬಳೆಗಳ ನಡುವೆ ಬೆರಳಾಡಿಸಿ ಸದ್ದು ಕೇಳಿ ಉಲ್ಲಾಸಗೊಂಡೆ. ಆ ಅಪೂರ್ವವಾದ ರಸಾನುಭವ ನನಗೆ ಮತ್ತನ್ನೇ ಬರಿಸಿತು.

ಅಂದಿನಿಂದ ಬಳೆಯ ಸದ್ದಿನ ಸುಗ್ಗಿ ನನಗೆ,

ಬೆಳಗ್ಗೆ ನನ್ನನ್ನೇಳಿಸುವುದು ಬಳೆಯ ಸದ್ದು. ಕಿವಿಯ ಬಳಿ ಉದಯರಾಗ ಹಾಡಿದಾಗ ಥಟ್ಟನೆ ಎಚ್ಚರಗೊಳ್ಳುತ್ತೇನೆ. ಮುಖ ತೊಳೆದ ಮೇಲೆ ಟವೆಲ್ಲಿನೊಡನೆ ಇದು ಬರುತ್ತದೆ. ಅನಂತರ ಹಾಲಿನ ಲೋಟದೊಡನೆ ಗಂಭೀರವಾಗಿ ಬರುತ್ತದೆ. ಹಾಲು ತುಳುಕೀತೆಂದು ಆಗದು ಮೌನವಾಗಿ ಬಂದು, ಹೋಗುವಾಗ ಹಾಡಿಕೊಳ್ಳುತ್ತಾ ಹೋಗುತ್ತದೆ. ಆಮೇಲೆಲ್ಲಾ ಅಡಿಗೆಯ ಮನೆಯಲ್ಲಿ ಅವರ ಸದ್ದು. ಅದನ್ನು ಕೇಳುವುದರಲ್ಲಿ ಮುದಗೊಳ್ಳುತ್ತೇನೆ. ಆಫೀಸಿಗೆ ವೇಳೆಯಾಗುತ್ತ ಬಂದಾಗ ಸ್ನಾನದ ಮನೆಗೆ ಹೋದರೆ ಬಿಸಿನೀರು ತೋಡಿ ಕೊಡುತ್ತಾ ಬಳೆಗಳು ಕುಲು ಕುಲು ನಗುತ್ತವೆ. ಅವಕ್ಕೆ ನಗೆಚಾಟಿಕೆಯೇನೋ! ಮತ್ತೆ ಬೆನ್ನು ತಿಕ್ಕುತ್ತಾ ಬಳೆಯ ಸದ್ದು ಕಿವಿದುಂಬುತ್ತದೆ. ಇನ್ನು ಊಟದ ಮನೆಯಲ್ಲಿ, ಬಡಿಸುವಾಗ ಮಂಜುಳ ಸ್ವರದಲ್ಲಿ ಬಳೆಯ ಸದ್ದು ಭೋಜನಶ್ಲೋಕ ಹೇಳುತ್ತದೆ. ಅದನ್ನು ಕೇಳುತ್ತಾ ಊಟ ಮುಗಿಸುತ್ತೇನೆ. ತಾಂಬೂಲದೊಡನೆ ಮತ್ತೆ ಬಳೆಯ ಸದ್ದಿನ ಮೇಳ. ಕೆಲಸಕ್ಕೆ ಹೊರಟು ನಿಂತಾಗ ಬೀಳ್ಕೊಡುವ ನೀಳದೋಳುಗಳಲ್ಲಿ ಘಲಕ್ ಘಣ್ ಎಂದು ಬಳೆಗಳು ತೂಗಾಡುತ್ತವೆ.

ಅದನ್ನೇ ಬುತ್ತಿಯಾಗಿ ಕಿವಿಯಲ್ಲಿ ತುಂಬಿಕೊಂಡು ಹೊರಟವನಿಗೆ ಸಂಜೆಯವರೆಗೂ ಅದರ ಘಲತ್ಕಾರ ಝುಂಗುಣಿಸುತ್ತಿರುತ್ತದೆ. ಸಂಜೆ ಮನೆಗೆ ಮರಳಿದೊಡನೆಯೇ ಬಳೆಯ ಸದ್ದಿನ ಸ್ವಾಗತ ಗೀತೆ. ಮತ್ತೆ ರಾತ್ರಿಯವರೆಗೆ ಹಲವು ಬಾರಿ–ತಿಂಡಿ ತಿನ್ನುವಾಗ, ಹವಾ ಸೇವನೆಗೆ ಹೊರಟಾಗ, ರಾತ್ರೆ ಪಗಡೆಯಾಡುವಾಗ, ಬಡಿಸುವಾಗ, ಹಾಸಿಗೆ ಸಿದ್ಧಪಡಿಸುವಾಗ, ರಾತ್ರೆ ಹಾಸಿಗೆಯಲ್ಲಿ ಮಲಗಿದಾಗ ಅದೆಷ್ಟೋ ಹೊತ್ತು ಇದರ ಸದ್ದು ಕೇಳಿಬರುತ್ತಲೇ ಇರುತ್ತದೆ. ನನಗೆ ನಿದ್ದೆ ಬರುವಂತಾದಾಗ ಜೋಗುಳ ಹಾಡುತ್ತದಿದು. ನಡುರಾತ್ರೆಯಲ್ಲೇನಾದರೂ ಆಕಸ್ಮಿಕವಾಗಿ ಎಚ್ಚರವಾದರೆ ಆ ಬಳೆಗೊಂಚಲಲ್ಲಿ ಬೆರಳಾಡಿಸಿ ಸದ್ದು ಕೇಳಿ ಸುಖಿಸುತ್ತೇನೆ. ಇರುಳಿನ ಆ ನೀರವತೆಯಲ್ಲಿ ಕುಲು ಕುಲು ಘಲ್ ಝಲಕ್ ಎನ್ನುವ ಬಳೆಯ ಸದ್ದು ಕೇಳುವುದೊಂದು ಮಧುರಾನುಭವ. ಬಳೆಗಳನ್ನು ನೇವರಿಸುತ್ತಾ ನೇವರಿಸುತ್ತಾ ಹಾಗೇ ನಿದ್ದೆ ಹೋಗುತ್ತೇನೆ. ಮತ್ತೆ ಎಚ್ಚರವಾಗುವುದು ಬಳೆಗಳ ಉದಯ ಗೀತೆಯಿಂದಲೇ.

ಬಳೆಯೇನಾದರೂ ತೌರುಮನೆಗೆ ಹೋಯಿತೋ ಮತ್ತೆ ಕೊರಗುತ್ತೇನೆ. ಬಳೆಯ ಸದ್ದಿಲ್ಲದ ಹೋಟೆಲೂಟದಲ್ಲಿ ನಿರಾಸಕ್ತಿ ಹುಟ್ಟುತ್ತದೆ, ಅರುಚಿ ಹುಟ್ಟುತ್ತದೆ. ಇಗೋ ಹೊರಟಿತು ಬಳೆಗೆ ಬುಲಾವ್!

ಹೀಗದೆಷ್ಟೋ ದಿನ ಬಳೆಯ ಸದ್ದಿನ ಆರೋಹ, ಅವರೋಹ, ರಾಗ, ಲಯ, ವಿನ್ಯಾಸ, ಗತ್ತು, ಮಟ್ಟು, ನಡೆ, ನೃತ್ಯ, ಭಾವ, ಭಂಗಿ, ಬಿಬ್ಬೋಕಗಳನ್ನು ಅನುಭವಿಸುತ್ತಾ ಅನುಲಕ್ಷಿಸುತ್ತಾ ಕಳೆದಿದ್ದೇನೆ. ಮತ್ತೀಗ ಮುದುಕನಾಗುತ್ತಿದ್ದಂತೆ ಚಪಲಾಧಿಕವಾಗುತ್ತಿದೆ. ಮೊಮ್ಮಗಳನ್ನು ತೊಡೆಯ ಮೇಲೆ ಕೂಡಿಸಿಕೊಂಡು ಕಥೆ ಹೇಳುತ್ತಾ ಅವಳ ಕೈಗಳನ್ನಲುಗಿಸುತ್ತಾ ಬಳೆಯ ಸದ್ದು ಕೇಳಿ ಆನಂದಗೊಳ್ಳುತ್ತಿದ್ದೇನೆ. ಈಗ ನಾನು ಕೆಲಸಕ್ಕೂ ಹೋಗುವಂತಿಲ್ಲ. ವಿರಾಮ ವೇತನ ಪಡೆಯುತ್ತಾ ಬಳೆಯ ಸದ್ದು ಕೇಳುತ್ತಾ ಸ್ವಚ್ಛಂದವಾಗಿ ಕಾಲಯಾಪನೆ ಮಾಡುತ್ತಿದ್ದೇನೆ. ಈಗ ಬಳೆಯೊಡತಿಯೂ ಮುದುಕಿಯಾಗಿದ್ದಾಳೆ. ಆದರೆ ಅವಳ ಬಳೆಯ ಸದ್ದಿಗೆ ಮುಪ್ಪು ಬಂದಿಲ್ಲ. ಅವಳು ಪಾತ್ರೆ ತೊಳೆಯುವಾಗ, ಮೊಸರು ಕಡೆಯುವಾಗ, ದೋಸೆ ಹಿಟ್ಟು ತಿರುವುವಾಗ ಎಷ್ಟು ಮಂಜುಳವಾಗಿ ಕೇಳಿಸುತ್ತದೆ ಈ ನಾದ!

ಮೊಮ್ಮಗಳನ್ನು ತೂಗುವ ಕೆಲಸ ಆಗೀಗೊಮ್ಮೆ ನನಗೇ ಬರುತ್ತದೆ. ತೂಗುತ್ತಾ ನಡುಗುವ ದಪ್ಪ ದನಿಯಲ್ಲಿ 'ಶ್ರೀವನಿತೆಯರಸನೆ ವಿಮಲರಾಜೀವಪೀಠನ ಪಿತನೆ...' ಎಂದು ಹಾಡತೊಡಗಿದರೆ ಅವಳು ಸುಮ್ಮನಾಗುವುದೇ ಇಲ್ಲ. ಅಳು ನಿಲ್ಲುಸುವುದೇ ಇಲ್ಲ. ಅವಳಜ್ಜಿಯೇ ಬಂದು ತೂಗಿದರೆ ಅಳು ನಿಲ್ಲಿಸುತ್ತಾಳೆ.

'ನೋಡಿದೆಯಾ ಈ ತುಂಟಿಯನ್ನ! ನೀನು ತೂಗುತ್ತಿದ್ದ ಹಾಗೇ ಹೇಗೆ ಅಳು ನಿಲ್ಲಿಸಿದಳು! ಬಳೇ ಸದ್ದು ಬೇಕವಳಿಗೆ ಬಳೇ ಸದ್ದು...' ಎನ್ನುತ್ತೇನೆ.

'ನಿಮ್ಮ ಮೊಮ್ಮಗಳಲ್ಲವೇ' ಎಂದು ಅವಳು ನಕ್ಕು ಕೈ ಅಲುಗಿಸುತ್ತಾಳೆ. ಇದೀಗ ಬಳೆಯ ಸದ್ದು ನನ್ನನ್ನಣಕಿಸುತ್ತದೆ.

ಈಗೀಗ ಶ್ರವಣಶಕ್ತಿ ಕ್ಷೀಣಿಸುತ್ತಿದೆ. ನನಗೋ ಬಳೆಯ ಸದ್ದಿನದೇ ಯೋಚನೆ. ಅದನ್ನು ಕೇಳುವುದನ್ನು ತಪ್ಪಿಸಿಕೊಳ್ಳಬೇಕಲ್ಲಾ ಎಂದು ದುಃಖ. ಬಳೆಯ ಸದ್ದೇ ಈಗೀಗ ಕೇಳಿಸುತ್ತಿಲ್ಲ. ಕೈ ಅಲುಗಾಡಿದ್ದು ಮಂಜು ದೃಷ್ಟಿಗೆ ಕಾಣುತ್ತದೆ. ಬಳೆಗಳು ಹಿಂದೆ ಮುಂದೆ ತೊನೆದಾಡುತ್ತವೆ. ಆದರೆ ಆ ಸದ್ದೆಲ್ಲಿ ಕ್ಷೀಣಿಸಿ ಹೋಗುತ್ತದೆಯೋ? ಯಾರಿದನ್ನು ಕದ್ದವರು? ನನ್ನ ಕಿವಿಗಳೇ ನನಗೆ ಮೋಸ ಮಾಡುತ್ತಿಲ್ಲವಷ್ಟೇ? ವಿಧಿಯೇ ನನ್ನ ವಿರುದ್ಧ ಸಂಚು ಹೂಡಿರಬೇಕು. ಇಲ್ಲದಿದ್ದರೆ ಹೀಗಾದೀತೆ ?

ಬಳೆಯ ಸದ್ದಿಲ್ಲದೆ ಚಡಪಡಿಸುವ ಕಿವಿಗಳನ್ನು ಹೇಗೆ ಸಂತೈಸಲಿ ? ಮತ್ತಿವು ಜಡ್ಡು ಹಿಡಿದಿವೆಯಲ್ಲ ? ದಿನದಿನಕ್ಕೂ ಬಳೆಯ ಸದ್ದಿನಿಂದ ವಿವಂಚಿತನಾಗುತ್ತಾ ಹೇಗೆ ಕಾಲ ದೂಡಲಿ ?

ಇಷ್ಟು ವರ್ಷಗಳಲ್ಲದೆಷ್ಟು ಬಾರಿ ಬಳೆಯ ಸದ್ದು ಕೇಳಿದ್ದೇನೆ! ಕಿವಿಗಳಲ್ಲಿ ಅದೆಷ್ಟು ಬಾರಿ ಬಳೆಯ ಗುಂಜಾರವ ನರ್ತಿಸಿಲ್ಲ? ಅದು ನನ್ನಿಂದ ಹೇಗೆ ತಪ್ಪಿಸಿಕೊಂಡಿತು? ಕಲ್ಪನೆಯ ಕುಸುಮ ಒಣಗೀತೇ ? ಸೌರಭ ಕುಂದೀತೇ ?

ಅದೋ...! ಘಲ್ ಘಲ್ ಝುಣ್ ಝುಕ್.. ಕಿವಿಗಳಲ್ಲೇ ಕೇಳಿಬರುತ್ತಿದೆ. ಅದೆಷ್ಟು ಮೃದುವಾಗಿ ಮಧುರವಾಗಿ ಮೋಹಕವಾಗಿದೆ ಈ ಸದ್ದು! ಇದನ್ನು ಕೇಳುತ್ತಿದ್ದಂತೆಯೇ ಕಿವಿಯ ಬಧಿರತ್ವ ನಶಿಸುತ್ತದೆ, ಮುಪ್ಪು ಮಣಿಯುತ್ತದೆ, ನರನಾಡಿಗಳಲ್ಲಿ ಹರಿಯುವ ರಕ್ತ ಬಿಸಿಗೊಳ್ಳುತ್ತದೆ, ಮುಖದ ಸುಕ್ಕು ಮಾಯವಾಗುತ್ತದೆ. ಸ್ವಚ್ಛಂದ ಲಯದಲ್ಲಿ ಕೇಳಿಬರುತ್ತಿರುವ ಈ ಸದ್ದಿಗನುಗುಣವಾಗಿ ಹೆಜ್ಜೆ ಹಾಕಲು ಹೋಗಿ ತಪ್ಪುತ್ತೇನೆ. ಹಾಗೇ ಒರಗಿದಾಗ ಕಿವಿಗಳಲ್ಲೇ ಘಣುಘಲಿಸುತ್ತದೆ ಬಳೆಯ ಸದ್ದು. ಕೇಳುತ್ತಾ ಆ ನಾದಮಧುಸಾರದಲ್ಲಿ ಮತ್ತನಾದಾಗ ಕಣ್ಣುಗಳು ತಂತಾವೆ ಮುಚ್ಚಿಕೊಂಡು ಕನಸಿನ ಲೋಕಕ್ಕೆ ಸೆಳೆಯುತ್ತವೆ ನನ್ನನ್ನು. ಅಲ್ಲೀಗ ಬರಿಯ ಮೋಡಗಳಷ್ಟೆ ಅಲ್ಲ, ಹಣ್ಣಿನ ಮರಗಳೂ ಇವೆ. ಅವುಗಳನ್ನು ತಿನ್ನಲು ನನ್ನ ಬಾಯಲ್ಲಿ ಹಲ್ಲಿಲ್ಲವೆಂಬುದೇನೋ ದಿಟ. ಆದರೆ ನನಗೇನೂ ಅವು ಬೇಕಾಗಿಲ್ಲ. ಅದೋ ಅಲ್ಲಿ ದೇವಾಂಗನೆಯ ನೃತ್ಯವಾಗುತ್ತಿದೆ. ಅವರ ಕೈಗಳಲ್ಲೀಗ ಬಳೆಗಳಿವೆ. ಕಾಲ ಗೆಜ್ಜೆಯೊಡನೆ ಸ್ಪುರವೆತ್ತಿ ಬಳೆಗಳೂ ಹಾಡುತ್ತಿವೆ. ಘಲ್ ಘಲ್ ಘಲ್ ಘಲ್... ಆ ನಾದಮಧುಪಾನದಲ್ಲೇ ಲೀನನಾದಾಗ ಥಟ್ಟನೆ ಎಚ್ಚರಗೊಳಿಸಲ್ಪಡುತ್ತೇನೆ. ಎಚ್ಚರಿಸಿದ್ದು ಬಳೆಯಿರುವ ಕೈಯೋ ಆದರೂ ಆ ಬಳೆಗಳು ನನ್ನ ಪಾಲಿಗೆ ಮೂಕವಾಗಿವೆ. ಅವು ಅಲುಗುತ್ತಿದ್ದರೂ ನನ್ನ ಕಿವಿಗೇನೂ ಕೇಳಿಸುವುದಿಲ್ಲ. ಅವುಗಳತ್ತ ದೀನನಾಗಿ ನನ್ನ ಮಂಜುದುಂಬಿದ ದಿಟ್ಟಿ ಬೀರುತ್ತೇನೆ. ಅದರಲ್ಲಿನ ಯಾತನೆ, ಬೇಡಿಕೆ ಬಳೆಗಳಿಗೆ ಅರಿವಾಗುತ್ತದೆ. ಅಗೋ ಅವು ಕೊರಳೆತ್ತಿ ಹಾಡುತ್ತಿವೆ—

ಘಲ್ ಘಲ್ ಝುಲ್ ಝುಲ್
ಝುಣ್ ಝುಣ್ ಘಣ್ ಘಣ್

ಅದನ್ನು ಕೇಳುತ್ತಾ ಮತ್ತೆ ನಾನು ತಲ್ಲೀನನಾಗುತ್ತೇನೆ. ✡

ಬದಲಾವಣೆ

ಅಳುವನ್ನು ಕರಗಿಸಿ ನಗುವನ್ನು ಬರಿಸಿ
ತೊದಲನ್ನು ಬದಲಿಸಿ ಸ್ಪಷ್ಟತೆ ತರಿಸಿ
ತಪ್ಪು ಹೆಜ್ಜೆಗಳಿಗೊಪ್ಪವ ತೊಡಿಸಿ
ತನ್ನ ಸುಕುಮಾರನ ಪುರುಷನಾಗಿಸಲು
ವರುಷ ಇಪ್ಪತ್ತಾದರು ಬೇಕು ತಾಯಿಗೆ!

ನಗುವನ್ನು ಕರಗಿಸಿ ಅಳುವನ್ನು ಬರಿಸಿ
ಸ್ಪಷ್ಟತೆ ಬದಲಿಸಿ ತೊದಲನ್ನು ತರಿಸಿ
ಒಪ್ಪು ಹೆಜ್ಜೆಗಳಲಿ ನಡುಕ ಕರೆಸಿ
ತನ್ನ ಪತಿರಾಯನ ಕುರಿಯನಾಗಿಸಲು
ನಿಮಿಷ ಇಪ್ಪತ್ತಾದರೆ ಸಾಕು ಮಡದಿಗೆ !!

— ಜಿ. ನಾಗೇಶ

ಎದೆಯ ಮೇಲೆ ಬಂದ: ಒಂದು
ಸಮಸ್ಯೆಯ ವಿಶ್ಲೇಷಣೆ

ವ್ಯರ್ಥ ಶಿಕ್ಷಣದ ನಿರರ್ಥಕ ವಿಸ್ತರಣೆ

ಕು. ಶಿ. ಹರಿದಾಸಭಟ್ಟ

ಸ್ವಾತಂತ್ರ್ಯದ ತರುವಾಯ ನಮ್ಮ ದೇಶದಲ್ಲಿ ತೀವ್ರವಾಗಿ ಮುನ್ನಡೆದ ಕ್ಷೇತ್ರವೆಂದರೆ ಶಿಕ್ಷಣ. ಹಳ್ಳಿಪಳ್ಳಿಗಳಲ್ಲಿ ಇಂದು ಪ್ರಾಥಮಿಕ ಮಾತ್ರವೇ ಅಲ್ಲದೆ, ಹೈಸ್ಕೂಲು, ಹೈಯರ್ ಸೆಕೆಂಡರಿ, ಜೂನಿಯರ್ ಕಾಲೇಜು, ಏಕೆ, ಕಾಲೇಜುಗಳೆ ತಲೆ ಎತ್ತಿವೆ. ಮುಂಜಾನೆ ಮತ್ತು ಸಂಜೆ ಶಾಲೆಗೆ ಬರುವ ಹೋಗುವ ಮಕ್ಕಳ ಪಟಾಲಮು ದಾರಿಯ ಇಕ್ಕಡೆಗಳಲ್ಲಿ ಒಂದು ಸಾಮಾನ್ಯ ದೃಶ್ಯವಾಗಿದೆ. ಶಾಲೆಗಳನ್ನು ಸ್ಥಾಪಿಸುವುದು, ಸರ್ಕಾರದ ಮನ ಒಲಿಸಿಕೊಂಡು ಸಹಾಯ ಧನ ಕೊಡಿಸುವುದು ಸ್ಥಳೀಯ ಧುರೀಣತ್ವದ ಒಂದು ಸಜೀವ ಸಂಕೇತವೆನಿಸಿ ಶಿಕ್ಷಣವು ಸಕಲರಿಗೂ ನಿಲುಕತಕ್ಕ ಪದಾರ್ಥವೆಂಬಂಶ ಹರಡಿಬಿಟ್ಟಿದೆ. 'ನನ್ನ ಮಕ್ಕಳು ಶಾಲೆಗೆ ಹೋಗಿ ಏನು ಮಾಡಲಿಕ್ಕಿದೆ?' ಎನ್ನುತ್ತಿದ್ದ ಹಳ್ಳಿಯ ಕಡುಬಡವನಿಗೂ ಸಾಲ ಪಡೆದಾದರೂ ಮಕ್ಕಳಿಗೆ ಹೈಸ್ಕೂಲು ಮಾಡಿಸಬೇಕು, ಕಾಲೇಜು ಮೆಟ್ಟಲು ಹತ್ತಿಸಬೇಕು ಎಂಬ ಆಸೆ ಮೊಳೆತಿದೆ. ಪ್ರಾಥಮಿಕ ಹಂತದಲ್ಲಿ ಸಂಬಂಧಪಟ್ಟ ವಯಸ್ಸಿನ ಮಕ್ಕಳ ಪೈಕಿ ನೂರಕ್ಕೆಂಭತ್ತು ಮಂದಿ ಶಾಲೆಗೆ ಪ್ರವೇಶ ಮಾಡುತ್ತಾರೆ; ಹೈಸ್ಕೂಲು ಮಟ್ಟದಲ್ಲಿ ನೂರಕ್ಕಿಪ್ಪತ್ತರಷ್ಟು ಸೇರಿಕೊಳ್ಳುತ್ತಾರೆ. ಜನಸಂಖ್ಯೆ ಐವತ್ತು ಕೋಟಿಗೂ ಹೆಚ್ಚೆನಿಸಿ ನಾಗಾಲೋಟ ಇಕ್ಕಿರುವುದರಿಂದ ೮೦%, ೨೦%, ಎಂಬ ಪ್ರತಿಶತಗಳು ವಾಸ್ತವವಾಗಿ ಮಿಲಿಯಾಂತರ ವಿದ್ಯಾರ್ಥಿಗಳನ್ನೊಳಗೊಂಡಿರುವುದನ್ನು ನಾವು ಗಮನಿಸಬೇಕು.

ಯಾರೋ ಕೆಲವರು ಮಾತ್ರ ಪಡೆಯುತ್ತಿದ್ದ ಶಿಕ್ಷಣ ಇಂದು ಎಲ್ಲರಿಗೂ ಬೇಕೆಂದು ತೋರಲು ಕಾರಣವೇನು? ಈ ಶತಮಾನದ ಮೊದಲ ಭಾಗದಲ್ಲಿ ಜನಸಾಮಾನ್ಯರಿಗೆ ಬೇಡವೆಂದೆನಿಸಿದ್ದ ಶಿಕ್ಷಣ ಇಂದು ಅವರ ಮುಖ್ಯ ಆಕರ್ಷಣೆಯಾಗಲು ಯಾವ ಸಾಮಾಜಿಕ–ಆರ್ಥಿಕ ಒತ್ತಡಗಳು, ಆಮಿಷಗಳು ಕಾರಣವಿರಬಹುದು? ಈ ಒತ್ತಡಗಳಲ್ಲಿ ನಿಜವಾದದ್ದೆಷ್ಟು, ಆಮಿಷಗಳಲ್ಲಿ ಭ್ರಮೆಯ ಪಾಲೆಷ್ಟು ಎಂಬುದನ್ನು ಸಾಧಾರವಾಗಿ ಮಂಡಿಸುವುದು ಈ ಲೇಖನದ ಉದ್ದೇಶ.

ಭ್ರಮೆಯ ಮಾತು ಬಂದಾಗಲೆಲ್ಲ ಒಂದು

ಕಥೆ ನೆನಪಾಗುತ್ತದೆ. ಅನತೋಲ ಫ್ರಾನ್ಸ್* ಬರೆದ 'ಪೆಂಗ್ವಿನ್ ದ್ವೀಪ'ವೆಂಬ ರೂಪಕ ಕಥೆಯಲ್ಲಿ ಒಂದು ಪೆಂಗ್ವಿನ್ ಹಕ್ಕಿ ಮೊತ್ತಮೊದಲ ಬಾರಿಗೆ ಬಟ್ಟೆಯಿಂದ ತನ್ನ ಬತ್ತಲೆ ಮುಚ್ಚಿಕೊಂಡು ಕರಾವಳಿಗುಂಟ ಸಂಚಾರ ಹೊರಡುತ್ತದೆ. ಅದರ ಬೆನ್ನ ಹಿಂದೆ ಸಾವಿರಾರು ನಗ್ನ ಪೆಂಗ್ವಿನ್‌ಗಳು ಇದೇನು ರಹಸ್ಯವೆಂದು ಕುತೂಹಲದಿಂದ ಸಾಲು ಕಟ್ಟುತ್ತವೆ— ಮುಚ್ಚದೆ ಬಯಲಾಗಿದ್ದಾಗ ಇಲ್ಲದಂಥ ಆಸಕ್ತಿ ಆ ಪಕ್ಷಿಗಳಲ್ಲಿ ಈಗ ಕೆರಳಿತಂತೆ. ಸಾಲು ಸಾಲಾಗಿ ಶ್ರೀಸಾಮಾನ್ಯರ ಮಕ್ಕಳು ಶಾಲೆ ಕಾಲೇಜುಗಳತ್ತ ಸಾಗುವುದನ್ನು ನೋಡಿದಾಗ ನನಗೆ ಶಿಕ್ಷಣದ ಸ್ವಾರಸ್ಯವೇ ಈ ಕಥೆಯಲ್ಲಿ ಅಡಗಿರುವಂತೆ ಭಾಸವಾಗುತ್ತದೆ. ಮುಂದೆ ಹೋದವರು ಪಡೆದ ಡಿಗ್ರಿಯೇ ಒಂದು ಕೋಟು; ಅದರೊಳಗಿನ ಹೂರಣ ಎಂದೋ ಹರಿದು ಬಿದ್ದರೂ ಹೊದಿಕೆಗೋಸ್ಕರ ಎಂಥ ತಾಪತ್ರಯವಾದರೂ ನಮ್ಮ ಜನ ವಹಿಸಲು ಸಿದ್ಧರಾಗಿದ್ದಾರೆ. ಶಿಕ್ಷಣ ಮಂತ್ರವಾಗಿ, ಜಪವಾಗಿ, ಒಂದು ಯಜ್ಞವೇ ಆಗಿ, ಸಾರ್ವದೇಶಿಕವಾಗಿಬಿಟ್ಟಿದೆ. ಎಲ್ಲರಿಗೂ ಬೇಕಾದದ್ದನ್ನು ಒದಗಿಸುವ ಜವಾಬ್ದಾರಿ ಹೊತ್ತಿರುವ ಭಾರತದ ಪ್ರಜಾತಂತ್ರಾತ್ಮಕ ಸರ್ಕಾರ, ಆದಾಯದಲ್ಲಿ ಸುಮಾರು ಕಾಲಂಶ (ಶೇಕಡ ೨೦ ರಿಂದ ೨೫ ರಷ್ಟು ವಿದ್ಯಾಕ್ಷೇತ್ರಕ್ಕೆ ಮೀಸಲಿಡಬೇಕಾದ ಕಾಲ ಹತ್ತಿರ ಬರುತ್ತಿದೆ. ಹೆಚ್ಚಿನ ರಾಜ್ಯಗಳಲ್ಲಿ ಆಸ್ಪತ್ರೆಗಳಿಗೂ, ಕಾಮಗಾರಿಗಳಿಗೂ ಏಕೆ, ಬರಗಾಲ ನಿವಾರಣೋಪಾಯಗಳಿಗೂ ತೋರಿಸದ ಆದ್ಯತೆ, ಮುತುವರ್ಜಿಗಳನ್ನು ಶಿಕ್ಷಣಕ್ಕೆ ತೋರಿಸಲಾಗುತ್ತಿದೆ. ಸಾರ್ವಜನಿಕರ ಉತ್ಸಾಹ ಮತ್ತು ಸರ್ಕಾರದ ದಯಾನೀತಿಯಿಂದಾಗಿ ಶಿಕ್ಷಣ ಕ್ಷೇತ್ರ ಹಿಂದೆಂದೂ ನಡೆಯದ ರೀತಿಯಲ್ಲಿ ವಿಸ್ತರಿಸುತ್ತಲೇ ಹೋಗಿದೆ.

ಎಲ್ಲರಿಗೂ ಕೈಲಾಸ

ಮನುಷ್ಯನ ಜೀವನದ ಮುಖ್ಯ ಪ್ರೇರಣೆ ಆಸೆಯಲ್ಲವೆ? ನಮ್ಮ ಶಿಕ್ಷಣದ ವಿಸ್ತಾರಕ್ಕೂ ಮುಖ್ಯ ಕಾರಣ ಆಸೆ— ಎಲ್ಲರನ್ನೂ ಕೈಲಾಸಕ್ಕೆ ಮುಟ್ಟಿಸುತ್ತೇವೆಂದು ರಾಜಕೀಯ ಜನ ಕೊಟ್ಟ ಆಶ್ವಾಸನೆ ಮತ್ತು ಅದರ ಮೇಲೆ ನಮ್ಮ ಜನರು ಇಟ್ಟ ನಂಬಿಕೆ. ಇದು ಪ್ರಜ್ವಲಿಸುವಂತೆ ಮಾಡಲು ಸ್ವಾತಂತ್ರ್ಯದ ಬಳಿಕ ನಾವು ಕೈಕೊಂಡ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳೂ ಯೋಜನೆಗಳೂ ಕಾರಣವಾಗುತ್ತವೆ. ಉದ್ದಿಮೆಗಳ ವಲಯದಲ್ಲಿ ಸಾಕ್ಷರರಾದ ಕೆಲಸಗಾರರೂ ಹೆಚ್ಚು ಶಿಕ್ಷಣ ಪಡೆದ ಉಚ್ಚ ಶಿಕ್ಷಿತರೂ ಸಾಕಷ್ಟು ಸಂಖ್ಯೆಯಲ್ಲಿ ಬೇಕಾಗುತ್ತಾರೆ. ಸಂಬಳ ಸಾರಿಗೆಗಳು ಪದವಿ ಮತ್ತು ತಾಂತ್ರಿಕ ಅರ್ಹತೆಗಳ ಮೇಲೆ ಅವಲಂಬಿಸಿರುವುದು ಮಾತ್ರವಲ್ಲ, ಕೆಲವೊಂದು ನೌಕರಿಗಳಿಗೆ ಡಿಗ್ರಿಯನ್ನೇ ಕನಿಷ್ಠ ಮಿತಿ ಎಂದು ಸಾರಲಾಗಿದೆ. ಎಲ್ಲಿ ಡಿಗ್ರಿ ಅನಗತ್ಯವೋ ಅಂಥಲ್ಲಿ ಕೂಡ— ಅಂದರೆ ಬ್ಯಾಂಕ್, ವಿಮಾ ಕಚೇರಿಗಳ, ತಾಲ್ಲೂಕು ಕಚೇರಿಗಳ ಗುಮಾಸ್ತೆ ಕೆಲಸಕ್ಕೂ— ಡಿಗ್ರಿಯನ್ನು ಅನಿವಾರ್ಯವೆಂದು ನಾವು ನಿರ್ಣಯಿಸಿಬಿಟ್ಟಿದ್ದೇವೆ. ಡಿಗ್ರಿವಂತರಿಗೆ ಅದಿಲ್ಲದವರಿಗಿಂತ ಮುಪ್ಪಟ್ಟು ಸಂಬಳ ಸಿಗುವಾಗ ಎಲ್ಲರೂ ಡಿಗ್ರಿಗಾಗಿ ಮುಗಿಬೀಳುವುದು ಸ್ವಾಭಾವಿಕ. ಮಾರುಕಟ್ಟೆಯ ಸೂತ್ರಗಳ ರೀತ್ಯಾ ನಮ್ಮ ಸಾರ್ವಜನಿಕರು ಪ್ರವರ್ತಿಸುತ್ತಿರುವುದು ಖಂಡಿತ ಸಮರ್ಥನೀಯ. ಅವರ ಸ್ವಂತ ಜೀವನದ ಮೇಲ್ಮೆಯ ದೃಷ್ಟಿ ಅಪೇಕ್ಷಣೀಯ.

ಆದರೆ ಸರ್ಕಾರಕ್ಕೆ ವ್ಯಕ್ತಿಗಳಿಗಿಂತ ಹೆಚ್ಚು ದೂರದೃಷ್ಟಿ, ಹೆಚ್ಚು ನಿಚ್ಚಳವಾದ ದೃಷ್ಟಿ ಇರಬೇಕಾಗುತ್ತದೆ; ಗುರಿಯ ಸ್ಪಷ್ಟವಾದ ಕಲ್ಪನೆ ಇರಬೇಕಾಗುತ್ತದೆ. ಅದೂ ಒಂದು ಬಡ ದೇಶದಲ್ಲಿ ಸರ್ಕಾರಕ್ಕೆ ಒದಗುವ ವಿರಳವಾದ ಸಂಪನ್ಮೂಲಗಳನ್ನು ಬಲು ಜಾಗರೂಕತೆಯಿಂದ

* ಫ್ರೆಂಚ್ ಸಾಹಿತಿ; ನೋಬೆಲ್ ಪಾರಿತೋಷಕ ವಿಜೇತ ೧೯೨೧.

ವ್ಯಯಮಾಡುವ ಅಗತ್ಯವಿದೆ. ಈ ದೃಷ್ಟಿಯಿಂದ ನೋಡಿದರೆ ಶಿಕ್ಷಣಕ್ಕಾಗಿ ವೆಚ್ಚ ಮಾಡುತ್ತಿರುವ ಹಣವಾಗಲಿ ವಿವಿಧ ಹಂತಗಳಿಗೆ ನಾವು ಕೊಟ್ಟಿರುವ ಪ್ರಾಶಸ್ತ್ಯವಾಗಲಿ ಸಮರ್ಪಕವೆ ಎಂಬ ಸಮಸ್ಯೆ ನಮ್ಮನ್ನು ಕಾಡತೊಡಗುತ್ತದೆ.

ಪ್ರಾಥಮಿಕ ಶಿಕ್ಷಣಕ್ಕಾಗಿ ಶಾಲೆಗಳೊಳಗೆ ಪ್ರವೇಶಿಸಿದ ವಿದ್ಯಾರ್ಥಿಗಳ ಪ್ರತಿಶತ (೮೦%) ನಿಜಕ್ಕೂ ಆಶಾದಾಯಕ; ಆದರೆ ಅರ್ಧ್ದಂದ ಹೊರ ಬೀಳುವವರ ಸಂಖ್ಯೆಯು ನಿಟ್ಟಿನಲ್ಲಿ ತೀರ ನಿರಾಶಾ ಜನಕ. ಪ್ರಾಥಮಿಕ ಹಂತದ ಐದೂ ವರ್ಗ ಗಳನ್ನು ಯಶಸ್ವಿಯಾಗಿ ದಾಟುವವರು ಶಾಲೆ ಸೇರಿದವರಲ್ಲಿ ೩೦% ಮಾತ್ರ; ಎಂದರೆ ೭೦% ನಡುನಡುವೆಯೇ ಉದುರಿ ಹೋಗುತ್ತಾರೆ. ಅಥವಾ ನಪಾಸಾಗುತ್ತಾರೆ. ಹೀಗೇಕೆ ಎಂದು ಯಾವ ವಿಧಾನಸಭೆಯಲ್ಲಿಯೂ ಚರ್ಚೆ ನಡೆ ಯುವುದಿಲ್ಲ, ಸಂಸತ್ತಿನಲ್ಲಿ ಪ್ರಶ್ನೆ ಕೇಳುವವರೂ ಇಲ್ಲ. ಪ್ರಾಥಮಿಕ ಶಾಲೆಗಳ ದಾರಿದ್ರ್ಯವನ್ನು ನೋಡಿದವರಿಗೆಲ್ಲ ಇದಕ್ಕಿಂತ ಒಳ್ಳೆಯ ಪರಿ ಣಾಮ ಅಸಾಧ್ಯವೆಂದು ಗೊತ್ತೇ ಇರುತ್ತದೆ. ವಾರ್ಷಿಕ ವೆಚ್ಚದ ತುಲನೆ ಮಾಡಿದರೆ ಪ್ರಾಥ ಮಿಕಕ್ಕೆ ವೆಚ್ಚ ಮಾಡುವುದಕ್ಕಿಂತ ಸುಮಾರು ಏಳೂವರೆ ಪಾಲಷ್ಟು ತಲಾ ವೆಚ್ಚವನ್ನು ಸಾಮಾನ್ಯ ಆರ್ಟ್ಸ್-ಸೈನ್ಸ್ ಕಾಲೇಜು ಶಿಕ್ಷಣಕ್ಕೆ ವಿನಿಯೋಗಿಸುತ್ತೇವೆ.

ಶಿಕ್ಷಣ ವೆಚ್ಚದ ತಲಾ ವಾರ್ಷಿಕ ಸರಾಸರಿ (ಸುಮಾರು)

ಪ್ರಾಥಮಿಕ ಶಾಲೆ	೪೦ ರೂಪಾಯಿ
ಮಿಡ್ಲ ಸ್ಕೂಲ್	೭೦ ರೂಪಾಯಿ
ಹೈಸ್ಕೂಲು, ಹೈಯರ್-ಸೆಕೆಂಡರಿ	೧೪೦ ರೂಪಾಯಿ
ಆರ್ಟ್ಸ ಮತ್ತು ಸೈನ್ಸ್-ಕಾಲೇಜು	೪೦೦ ರೂಪಾಯಿ

ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವ ಕೇವಲ ೬.೦ ಲಕ್ಷ ವಿದ್ಯಾರ್ಥಿಗಳಿಗಾಗಿ ನಮ್ಮ ಸಮಾಜ ಯಾವ ಖರ್ಚು ಮಾಡಲೂ ಸಿದ್ಧ ವಾಗಿದೆ. ಅಂದರೆ, ಇಲ್ಲಿ, ನಮ್ಮ ಸಮಾಜವಾದ ಶೀರ್ಷಾಸನ ಮಾಡುತ್ತದೆ. ಸ್ನಾತಕೋತ್ತರ ಸಂಶೋಧನೆ ಮತ್ತು ಅಧ್ಯಯನ ನಡೆಸುವ ವಿಶ್ವವಿದ್ಯಾನಿಲಯಗಳಿಗೆ ಕೋಟಿಯಲ್ಲಿ, ಕಾಲೇಜುಗಳಿಗೆ ಲಕ್ಷದಲ್ಲಿ ಹಣವನ್ನು ಅಳೆದು ಕೊಡುವ ಕೇಂದ್ರೀಯ ಮತ್ತು ರಾಜ್ಯ ಸರಕಾರಗಳು ಹೈಸ್ಕೂಲುಗಳಿಗೂ ಪ್ರಾಥಮಿಕ ಶಾಲೆಗಳಿಗೂ ನೀಡುವ ಆರ್ಥಿಕ ಸವಲತ್ತು ಗಳನ್ನು ನೋಡಿದರೆ ಅವುಗಳ ಪಕ್ಷಪಾತ ಎತ್ತ ಕಡೆಗೆ ಎಂಬುದು ವೇದ್ಯವಾಗುತ್ತದೆ. ಭರ ದಿಂದ ಸಂಖ್ಯಾವೃದ್ಧಿ ಮಾಡಿಕೊಂಡಿರುವ ಹೈಸ್ಕೂಲು ಹಂತದಲ್ಲಿ, ವೈಜ್ಞಾನಿಕ ಪ್ರಗತಿಯ ಅಡಿಪಾಯವೆನಿಸುವ ಅನ್ವೇಷಕ ಬುದ್ಧಿಯನ್ನು ಮಕ್ಕಳಲ್ಲಿ ಕುದುರಿಸಬೇಕಾದ ವಯಸ್ಸಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಯೋಗಶಾಲೆಗಳೆಲ್ಲಿವೆ? ಇದ್ದವುಗಳಲ್ಲಿ ಏನಿದೆ? ಸರಿಯಾದ ಒಂದು ಮೈಕ್ರೋಸ್ಕೋಪ್ ಎಷ್ಟು ಹೈಸ್ಕೂಲುಗಳ ಲ್ಲಿದೆ? ವಾಚನಾಲಯದ ಸೇವೆ ಅದೆಷ್ಟು ಹೈಸ್ಕೂಲು ಹುಡುಗರಿಗೆ ಲಭ್ಯ? ಪಠ್ಯಪುಸ್ತಕದ ಘನಲಾಭಕ್ಕಾಗಿ ಹಾತೊರೆಯುವ ಸರ್ಕಾರಿ ನೀತಿ, ಶಾಲೆಗಳಿಗೆ ಸರಿಯಾದ ವಾಚನಾಲಯವನ್ನೇಕೆ ಇನ್ನೂ ಜೋಡಿಸಿಲ್ಲ? ಗಂಟೆಗಟ್ಟಲೆ ಗ್ರಂಥೋ ತ್ಸವಗಳಲ್ಲಿ ಅಪವ್ಯಯ ಮಾಡಲು ನಮ್ಮ ಸರ್ಕಾರಿ ಗೈರಸರ್ಕಾರಿ ಧುರೀಣರಿಗೆ ಸಮಯ ಸಿಗುತ್ತದೆ; ನಿಜವಾದ ಪರಿಸ್ಥಿತಿ ಏನೆಂಬುದನ್ನು ತಿಳಿದುಕೊಳ್ಳುವುದಕ್ಕೆ ಏಕೆ ಪುರಸೊತ್ತಿಲ್ಲ?

ವಿದ್ಯಾಮಟ್ಟದ ಕುಸಿತ

ಕಾಲದ್ದಕ್ಕೆ ಸಂದರ್ಭ ಸಿಕ್ಕಲ್ಲೆಲ್ಲ ಸಚಿವೋಪ- ಸಚಿವರುಗಳೂ ವಿದ್ಯಾತಜ್ಞರೂ ಉನ್ನತ ಶಿಕ್ಷಣ ಮಟ್ಟ ಕುಸಿದಿದೆ ಎಂದು ಗೋಗರೆಯುವು ದೊಂದು ನಿತ್ಯ ರೂಢಿಯಾಗಿದೆ. ತಮ್ಮ ಕಾಲ ಬುಡವನ್ನು ನೋಡದೆ ಆಕಾಶವನ್ನೇ ನೋಡುತ್ತ ನಡೆಯುವ ಸಾಮಾಜಿಕ ಪದ್ಧತಿಯ ಅಗ್ರದೂತ

"ಆ ಐದು ದಿನಗಳಲ್ಲಿ ನಾನು ಯಾರ ಎದುರಿಗೂ ಹೋಗುತ್ತಿರಲಿಲ್ಲ.




ಈಗ ನಾನು 'ಕ್ಯಾರ್‌ಫ್ರೀ' ಸ್ಯಾನಿಟರಿ ನ್ಯಾಪ್‌ಕಿನ್ ಬಳಸುತ್ತಿರುವುದರಿಂದ ತಿಂಗಳ 30 ದಿನಗಳನ್ನೂ ನಿಶ್ಚಿಂತೆಯಿಂದ ಕಳೆಯುತ್ತೇನೆ!"

'ವಂಡರ್ ರ್‍ಯಾಪ್' ಇರುವ ಹೊಸ ಕ್ಯಾರ್‌ಫ್ರೀ ಸ್ತ್ರೀ ಶರೀರಕ್ಕೆ ಸಂಪೂರ್ಣ ಆರಾಮವನ್ನೂ ಸಂಪೂರ್ಣ ರಕ್ಷಣೆಯನ್ನೂ ನೀಡುತ್ತದೆ.

ತಿಂಗಳ ಆ ಐದು ದಿನಗಳಲ್ಲಿ ಸ್ತ್ರೀಯ ಶರೀರಕ್ಕೆ ವಿಶೇಷ ತರದ ರಕ್ಷಣೆ ಬೇಕಾಗುತ್ತದೆ. ಅದನ್ನು ಈಗ ಕ್ಯಾರ್‌ಫ್ರೀ ಒದಗಿಸುತ್ತದೆ.

ಕ್ಯಾರ್‌ಫ್ರೀಯ ಅಪೂರ್ವವಾದ 'ವಂಡರ್‌ರ್‍ಯಾಪ್' ಎಂಬ ಹೊರಪದರವು ಬಲು ಬೇಗನೇ ತೇವವನ್ನು ಒಳಪದರಗಳಿಗೆ ಹೀರಿಕೊಳ್ಳುತ್ತದೆ. ಆದ್ದರಿಂದ ನಿಮ್ಮ ಚರ್ಮ ಒಣಗಿರುತ್ತದೆ ಮತ್ತು ನಿಮಗೆ ಆರಾಮವಾಗುತ್ತದೆ.




ಜಾನ್‌ಸನ್ ಅಂಡ್ ಜಾನ್‌ಸನ್

ಕ್ಯಾರ್‌ಫ್ರೀ ಮಾತ್ರ ವಿಶೇಷ ತರದ ಅಧಿಕ ಹೀರುವ ಗುಣವುಳ್ಳ ವಸ್ತುವಿನಿಂದ ತಯಾರಿಸಲ್ಪಡುತ್ತದೆ. ಅದು ನ್ಯಾಪ್‌ಕಿನ್‌ನ ಒಳ ಪದರಗಳಲ್ಲಿ ತೇವವನ್ನು ಸಮವಾಗಿ ಹರಡುತ್ತದೆ. ಹೀಗಾಗಿ, ಒಂದೇ ಕಡೆಯಲ್ಲಿ ಹೆಚ್ಚು ಒದ್ದೆಯಾಗುವ ಪರಿಸ್ಥಿತಿ ಇರುವುದಿಲ್ಲ. ಶೀಲ ರಕ್ಷಾ ಕವಚವೊಂದು ನ್ಯಾಪ್‌ಕಿನ್‌ನ ಪೂರ್ತಿ ಅಡಿಯ ಭಾಗವನ್ನು ಮತ್ತು ಪಾರ್ಶ್ವಗಳನ್ನು ಆವರಿಸಿಕೊಂಡಿರುವುದರಿಂದ ಕಲೆಯುಂಟಾಗುವ ಭಯವಿಲ್ಲ.

ಕ್ಯಾರ್‌ಫ್ರೀಯನ್ನು ಬಳಸಿಯಾದ ಮೇಲೆ ತೊಲಗಿಸಿಬಿಡುವುದು ಬಹಳ ಸುಲಭ. ಅದನ್ನು ನೀರು ಹರಿಸಿ ತೊಲಗಿಸಿಬಿಡಬಹುದು. ನೀವು ಪ್ರಯಾಣ ಮಾಡುತ್ತಿರುವಾಗ ಇದು ಎಷ್ಟೊಂದು ಅನುಕೂಲ!

ಕ್ಯಾರ್‌ಫ್ರೀ ನಿಮ್ಮ ಶರೀರಕ್ಕೆ ಆರಾಮದಾಯಕವಾಗಿ ಫಿಟ್ ಆಗುವಂತೆ ಸರಿಹೊಂದಿಸಿಕೊಳ್ಳಬಹುದಾದ ಸೈಜ್‌ನಲ್ಲಿ ದೊರೆಯುತ್ತದೆ. ಅಲ್ಲದೆ, ಪ್ರತಿಯೊಂದು ಪ್ಯಾಕ್‌ನಲ್ಲಿ ಒಂದು ಉಚಿತವಾದ ಕ್ಯಾರ್‌ಫ್ರೀ ಬೆಲ್ಟ್ ಇರುತ್ತದೆ.

ಅಂತೂ ಕೊನೆಗೆ, ತಿಂಗಳ ಮೂವತ್ತೂ ದಿನಗಳಲ್ಲಿ ನೀವು ನಿಶ್ಚಿಂತರಾಗಿ ಇರಬಹುದು.



ರಾದ ಇವರಿಗೆ ಶಿಕ್ಷಣ ಮಟ್ಟದ ಕುರಿತು ಕಾಳಜಿ ಇರುವುದು ನಿಜವಾದರೆ ಕೂಡಲೆ ಸಾಕಷ್ಟು ಜನ-ಧನಬಲವನ್ನು ಪ್ರಾಥಮಿಕ, ಹೈಸ್ಕೂಲು ಹಂತದ ಕಡೆಗೆ ಚಾಚಬೇಕು. ಇಲ್ಲಿನ ದಟ್ಟದಾರಿದ್ರ್ಯ ಐದೇ ಐದು ವರ್ಷಗಳ ಅವಧಿಯಲ್ಲಿ ತೊಲಗುವಂಥ ಯೋಜನೆ ಹಾಕಿಕೊಳ್ಳಬೇಕು. ಪ್ರತಿ ಶಾಲೆಗೂ ಪರಿಷ್ಕಾರವಾದ ಪ್ರಯೋಗಶಾಲೆ, ವಾಚನಾಲಯ, ಮತ್ತು ಗ್ರಂಥ ಭಾಂಡಾರಗಳನ್ನು ಪೂರೈಸಿಕೊಡಬೇಕು. ಭಾರತದ ಗ್ರಾಮೀಣ ಜನತೆಯನ್ನುದ್ಧರಿಸುವ ಪಣತೊಟ್ಟ ರಾಜಕೀಯಸ್ತ ಜನ ತಮ್ಮ ಮಕ್ಕಳನ್ನು ನಗರದ ಸೆಂಟ್ರಲ್ ಶಾಲೆಗಳಿಗೋ ಕಾನ್ವೆಂಟು-ಗಳಿಗೋ ಪಬ್ಲಿಕ್ ಸ್ಕೂಲುಗಳಿಗೋ ಕಳಿಸುತ್ತ, ಬಡವರ ಸಲುವಾಗಿ ಮುದ್ದಾಂ ಬಡಶಾಲೆಗಳ ಸ್ಥಾಪನೆ ಮತ್ತು ಸಂಖ್ಯಾವಿಸ್ತರಣೆ ಕೈಗೊಂಡಿರುವುದನ್ನು ನೋಡುವಾಗ ಇವರು ಜನಸಾಮಾನ್ಯರ ಕಣ್ಣಿಗೆ ಶಿಕ್ಷಣದ ಧೂಳನ್ನು ಮಾತ್ರ ಉಣಿಸಿ, ತಮಗೆ ಅವರ ರಸಘಟ್ಟಿಯನ್ನು ಕಾದಿರಿಸಿಕೊಂಡಿದ್ದಾರೆಂದು ಅನಿಸುವುದಿಲ್ಲವೆ? ಸಾರ್ವಜನಿಕರೂ ಸಿಕ್ಕಿದ್ದೇ ತೀರ್ಥವೆಂದೂ ಉಂಡದ್ದೇ ಪ್ರಸಾದವೆಂದೂ—ಅದೂ ಪುಕ್ಕಟೆ ಸಿಗುವಾಗ ಆಕ್ಷೇಪಿ-ಸುವುದೇಕೆಂದು—ಮಹಾ ಮೌನವನ್ನು ಮೆರೆ-ಯುತ್ತಿದ್ದಾರೆ. ಕೀಳ್ಮಟ್ಟದ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಪಡೆದ ವಿದ್ಯಾರ್ಥಿ—ಎಸ್ ಎಸ್ ಎಲ್ ಸಿ ತನಕ ಓದಿದವನು—ಯಾವ ಉದ್ಯೋಗಕ್ಕೂ ಅರ್ಹನಾಗುವುದಿಲ್ಲವಾದ್ದರಿಂದ ವ್ಯರ್ಥ ಶಿಕ್ಷಣದ ಮುಂದಿನ ಮೆಟ್ಟಲಾದ ಕಾಲೇ-ಜನ್ನು ಬಯಸುತ್ತಾನೆ. ಅಲ್ಲಿಂದ ಸ್ನಾತ-ಕೋತ್ತರ ತರಗತಿ, ಪಿಹೆಚ್. ಡಿ. ಇತ್ಯಾದಿ ಇತ್ಯಾದಿ ಅವನ ಆಸೆಗಳು ಮೇಲ್ಮೊಗವಾಗಿ ಪುಟಿಯುತ್ತವೆ. ಇಲ್ಲೂ ಅವನು ಯಾವೊಂದು ವಿಷಯದ ಆಸಕ್ತಿಯಿಂದ ಕೋರ್ಸು ಆರಿಸುವುದಿಲ್ಲ. ಬಿ. ಎಸ್‌ಸಿ.ಗಿಂತ ಎಂ. ಎಸ್‌ಸಿ.ಗೆ ಸಂಬಳ ಹೆಚ್ಚು, ಉದ್ಯೋಗಸಾಧ್ಯತೆ ಸುಲಭ ಎಂಬುದಷ್ಟು ಅವನ ಮನಸ್ಸಿನಲ್ಲಿರುತ್ತದೆ. ಪಿಹೆಚ್.ಡಿ.ಯ ಮಟ್ಟದಲ್ಲಂತೂ ಡಿಗ್ರಿ ಪಡೆದ ದಿನವೇ ಸಂಶೋಧನೆ ನಿಂತುಹೋಗುವುದೂ ಉಂಟು.

ಉದ್ಯೋಗವಾದರೂ ಉಂಟೆ ?

ಆಗಲಿ. ಆಸೆಪಟ್ಟ ಉದ್ಯೋಗವಾದರೂ ಉಂಟೆ? ಎಂದರೆ ಅಲ್ಲಿಯೂ ಸಮಸ್ಯೆ ವಿಕಟ ರೂಪದಲ್ಲಿ ಇದಿರಾಗುತ್ತದೆ. ಪದವೀಧರರ ಸಂಖ್ಯೆ ಬೆಳೆದಷ್ಟು ವೇಗದಲ್ಲಿ, ಪ್ರಮಾಣದಲ್ಲಿ, ನಮ್ಮ ಬಡದೇಶದಲ್ಲಿ ಉದ್ಯೋಗಗಳು ಹುಟ್ಟಿಕೊಳ್ಳುವುದಿಲ್ಲ. ಅಮೇರಿಕದಲ್ಲೊ ಜರ್ಮನಿಯಲ್ಲೋ ವಿದ್ಯಾವಂತರಾದ ಜನರಿಂದಲೇ ಆರ್ಥಿಕ ಪ್ರಗತಿ ಸಾಧ್ಯವಾಯಿತು ಎಂಬ ತತ್ವವನ್ನು ನಮ್ಮ ಜನಜೀವನಕ್ಕೆ ಅಳವಡಿಸಲು ಇಷ್ಟು ದಿನವೂ ನಾವು ಪ್ರಯತ್ನಪಟ್ಟಿದ್ದೇವೆ. 'ಶಿಕ್ಷಣ' ಎಂದರೆ ಒಂದು ಮಂತ್ರದ ಕೋಲು; ಅದನ್ನು ಬೀಸಿದ ಕೂಡಲೆ ಉದ್ಯೋಗಗಳು ಹಾರಿಬರುತ್ತವೆಂಬ ಭ್ರಮೆ ಈಗ ಪೂರ್ತಿ ನಿರಸನವಾಗಿದೆ. ಶಿಕ್ಷಣಕ್ಕೂ ಆರ್ಥಿಕ ಪ್ರಗತಿಗೂ ಇರತಕ್ಕ ಕಾರ್ಯಕಾರಣ ಸಂಬಂಧವನ್ನು ಅಮೇರಿಕದ ಅರ್ಥತಜ್ಞರೇ ನಿರಾಕರಿಸುತ್ತಾರೆ. ಆ ದೇಶದಲ್ಲಿ ಮಿಲಿಯಾಂತರ ಜನ ಕಾಲೇಜು ಶಿಕ್ಷಣ ಪಡೆದವರು ಇರುವುದರಿಂದ ಅಲ್ಲಿನ ಸಂಪತ್ತು ಅಷ್ಟು ವಿಪುಲವಾಗಿ ಬೆಳೆಯಿತೆ? ಅಥವಾ ಸಂಪತ್ತಿನ ದೆಸೆಯಿಂದಾಗಿ ಅಷ್ಟು ಜನಕ್ಕೆ ಕಾಲೇಜು ಶಿಕ್ಷಣ ದೊರಕಿಸುವುದು ಸಾಧ್ಯವಾಯಿತೆ ? ಅಮೇರಿಕದಲ್ಲಿ ಕಾಲೇಜು ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿ ಎರಡೂ ಅದ್ಭುತ ಪ್ರಮಾಣದಲ್ಲಿವೆ ಎಂಬುದು ನಿಜ. ಆದರೆ ಅಲ್ಲಿನ ಸಂಪತ್ತಿಗೆ ಕಾಲೇಜು ಶಿಕ್ಷಣ ಕಾರಣವಲ್ಲ; ಸಂಪತ್ತು ಅಷ್ಟು ಜನರ ಶಿಕ್ಷಣಕ್ಕೆ ಕಾರಣ. ಆದ್ದರಿಂದ ಈ ವಿಷಯದಲ್ಲಿ ಬಡ ದೇಶಗಳು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗಿದೆ. ಇರುವ ಅಲ್ಪ ರಾಷ್ಟ್ರೀಯ ಆದಾಯವನ್ನು ವ್ಯರ್ಥ ಶಿಕ್ಷಣಕ್ಕೆ (ಅಂದರೆ ಅನಾವಶ್ಯಕ ಬಿ. ಎ., ಎಂ. ಎ. ತಯಾರಿಕೆಗೆ) ವಿನಿಯೋಗಿಸಬಾರದು. ಕೆಲ ವರ್ಷ

ಚೀನಾ ದೇಶದವರಂತೆ ನಾವು ಶಿಕ್ಷಣದ ಸ್ಥಗಿತ್ಯ ನೀತಿ ಅನುಸರಿಸಬಾರದೇಕೆ? ಹೊಸ ವಿಶ್ವವಿದ್ಯಾನಿಲಯ, ಕಾಲೇಜು ಯಾವುದನ್ನೂ ತೆರೆಯದೆ (ಇದರಿಂದ ಉಳಿಸಿದ ಮೊತ್ತವನ್ನು ಪ್ರಾಥಮಿಕ ಶಿಕ್ಷಣದ ಗುಣಾಭಿವೃದ್ಧಿಗಾಗಿ ಬಳಸಬಹುದು) ಕಾಲೇಜುಗಳ ಪ್ರವೇಶನಿಯಮವನ್ನೂ ತೇರ್ಗಡೆಯ ನಿಯಮವನ್ನೂ ಹೆಚ್ಚು ಕಠಿನಗೊಳಿಸಬಾರದೇಕೆ? ಇದರಿಂದಾಗಿ ಮೇಲ್ಜಾತಿಯವರಿಗೆ ಮಾತ್ರ ಶಿಕ್ಷಣ ಸಾಧ್ಯವಾಗುತ್ತದೆ ಎಂಬ ಆಕ್ಷೇಪ ಬರಬಹುದು; ಇದೊಂದು ನಮ್ಮ ನೂತನ ಭ್ರಾಂತಿ. ಸ್ವಂತ ಬುದ್ಧಿಶಕ್ತಿ ಮತ್ತು ಪರಿಸರ ಈ ಪೈಕಿ ಮನುಷ್ಯನ ಬುದ್ಧಿಶಕ್ತಿ ಪರಿಸರದ ನಿರ್ಬಂಧಗಳನ್ನೆಲ್ಲ ಮೀರಿ ವ್ಯವಹರಿಸಬಲ್ಲುದು. ಪರಿಸರದಲ್ಲಿ ಬೇರೆ ಜಾತಿಯ ಹಿನ್ನೆಲೆಗೆ ಸ್ಥಾನ ನೀಡಬಹುದೇ ಹೊರತು, ಬುದ್ಧಿಶಕ್ತಿಯಲ್ಲಿ ಅಲ್ಲ. ಇದು ಸಕಲ ಜಾತಿಗಳಲ್ಲಿಯೂ ಸಮಾನವಾಗಿ ಹಂಚಲ್ಪಟ್ಟಿದೆ. ನಮ್ಮ ಪ್ರಾಥಮಿಕ ಶಿಕ್ಷಣವನ್ನು ದುರಸ್ತಿ ಮಾಡಿದಲ್ಲಿ, ಗ್ರಾಮಾಂತರ ಜನಜೀವನದಲ್ಲಿ, ನಾನಾ ವಿಧವಾದ ಸಮಾಜಿಕ ಸ್ತರ ಅಥವಾ ವರ್ಗಗಳಲ್ಲಿ ಬದುಕುವ ವಿದ್ಯಾರ್ಥಿಗಳಲ್ಲಿ ಸಮಾನ ಪೌಷ್ಟಿಕಾಂಶಗಳನ್ನು ಸಂವರ್ಧಿಸಲು ಸಾಧ್ಯವಾಗುತ್ತದೆ. ಕಾಲಕ್ರಮೇಣ ಕಾಲೇಜು ಮೆಟ್ಟಲು ಹತ್ತುವ ವೇಳೆ ಎಲ್ಲ ಸಮಾಜಗಳ ಅರ್ಹತೆಯನ್ನು ಹೆಚ್ಚಿಸಬಹುದು.

ಯಾರಾದರೂ ಗಟ್ಟಿಯಾಗಿ ನಮ್ಮ ಸಾಮಾಜಿಕರಿಗೆ ಹೇಳಬೇಕು: ಎಲ್ಲರಿಗೂ ಅವರವರ ಡಿಗ್ರಿಗನುಸಾರವಾಗಿ ಉದ್ಯೋಗ ಒದಗಿಸುವಷ್ಟು ಸರ್ಕಾರಿ ಇಲಾಖೆಗಳು ನಮ್ಮಲ್ಲಿಲ್ಲ. ಮಾತ್ರವಲ್ಲ, ಎಲ್ಲರಿಗೂ ಉದ್ಯೋಗ ಕೊಡುವಷ್ಟು ಭಾರತೀಯ ಅರ್ಥಮಂಡಲ ಸಂಪನ್ನವಾಗಿಲ್ಲ. 'ಐದು ಲಕ್ಷ ಉದ್ಯೋಗ ಕೊಡುತ್ತೇವೆ' ಎಂಬ ಉದ್ಗಾರಗಳಿಂದ ಜನರ ಹಸಿವೆ ಹಿಂಗುವುದಿಲ್ಲ. ಆ

ಉದ್ಯೋಗಗಳು ಎಲ್ಲಿವೆ? ಹೇಗೆ ಬಂದಾವು? ಅದಕ್ಕೆ ಸಮನಾದ ದುಡಿಮೆ, ಯೋಜನೆ ಎಲ್ಲಾದರೂ ಕಣ್ಣಿಗೆ ಬೀಳುತ್ತಿದೆಯೆ? 'ಉದ್ಯೋಗ' ಎಂದರೆ ಯಾರೋ ಕೊಡುವ ಒಂದು ಪದಾರ್ಥವೆ? ಅಥವಾ ಶಿಕ್ಷಿತನಾದವನು ಸ್ವಪ್ರಯತ್ನದಿಂದ ಒಬ್ಬೊಬ್ಬನಾಗಿಯೂ ಸ್ವಂತ ಸಂಘಟನೆಯಿಂದಲೂ ಉತ್ಪಾದಿಸುವ ಉತ್ಪತ್ತಿ ಸನ್ನಿವೇಶವೆ? ಮೈಸೂರು ರಾಜ್ಯದ ಅಂಕಿಸಂಖ್ಯೆಗಳ ಒಂದು ವರದಿಯಲ್ಲಿ ೧೯೬೪ರಿಂದ ಮೂರು ವರ್ಷ ಕಾಲ ಸರ್ಕಾರಿ ಕ್ಷೇತ್ರದಲ್ಲಿ—ಇಡಿ ರಾಜ್ಯದಲ್ಲಿ—ಉತ್ಪನ್ನವಾದ ಹೊಸ ಉದ್ಯೋಗಗಳ ಅವಕಾಶ ಸರಾಸರಿ ೫ ರಿಂದ ೬ ಸಾವಿರ ಮಾತ್ರ ಎಂದು ಪ್ರಕಟವಾಗಿದೆ. ಸರ್ಕಾರದ ಕೆಲಸದ ಜತೆಗೆ ಇತರ ಔದ್ಯಮಿಕ ಮತ್ತು ಸೇವಾಸಂಸ್ಥೆಗಳನ್ನು ನಂಬಿದರೂ ಯಾವುದೇ ದೇಶದಲ್ಲಿ ಸೇಕಡಾ ೧೫. ರಷ್ಟು ಶಿಕ್ಷಿತ ಜನ ಮಾತ್ರ ಇನ್ನೊಬ್ಬರ ನೌಕರಿ ಹಿಡಿದು ಬದುಕುವುದು ಸಾಧ್ಯ. ಉಳಿದವರು ತಮ್ಮ ಕಾಲ ಮೇಲೆ ತಾವೇ ನಿಲ್ಲಬೇಕು, ಏರಬೇಕು. ಸಿಕ್ಕಿದ ಡಿಗ್ರಿಯನ್ನೊಂದು ಭೂಷಣವೆಂದು ತಿಳಿದರೆ ನಮ್ಮ ಕಾಲಿಗೆ ಕಬ್ಬಿಣದ ಗುಂಡು ಕಟ್ಟಿಕೊಂಡಂತೆ. ಅದೊಂದು ಉಪಕರಣ, ಜೇಬಿನೊಳಗಿರಲಿ; ಬೇಕಾದಾಗ ಹೊರಗೆ ತೆಗೆಯೋಣ. ಬೇಡವಾದಾಗ ಅದರ ನೆನಪನ್ನು ಮರೆತು ಪರಿಶ್ರಮಿಸೋಣ. ಕೈಗೆ ಸಿಕ್ಕಿದ್ದೇ ಕೆಲಸ ಎಂಬುದನ್ನು ವಿದ್ಯಾವಂತ ಪದವೀಧರ ತಿಳಿದರೆ ಅವನು ನಿರುದ್ಯೋಗಿಯಾಗಿ ಉಳಿಯಲಾರ. ಸ್ವಪ್ರತಿಷ್ಠೆಯನ್ನು ನೆಮ್ಮಿದರೆ ಸ್ವಾವಲಂಬನ ಅಶಕ್ಯವೆಂಬುದನ್ನು ಆತ ಗಮನಿಸಬೇಕು. ಅರ್ಥಶಾಸ್ತ್ರಜ್ಞ ಪಿಗೂ ಹೇಳಿದ ಮಾತು ಬಡದೇಶಗಳಲ್ಲಿ ವಸ್ತುಸ್ಥಿತಿ: ನಮ್ಮಲ್ಲಿ ಸರ್ವೋದ್ಯೋಗ (full employment)ದ ಪರಿಸ್ಥಿತಿಯನ್ನು ತರಬೇಕಾದರೆ ಕೂಲಿಯ ದರ ಇಳಿಸಿದರಾಯಿತು. ಇನ್ನೂರು ರೂಪಾಯಿ ಸಂಬಳವನ್ನು ಒಬ್ಬನಿಗೆ ಕೊಡುವುದರ ಬದಲು ನೂರಕ್ಕಿಳಿಸಿದರೆ, ಎರಡು ಜನರಿಗೆ ಉದ್ಯೋಗ ಕೊಡಬಹುದಲ್ಲವೇ? ಬೆವರಿಳಿಯದ, ಟೆರಿಲೀನ್ ಮಡಿಕೆ ಮುದ್ದೆಯಾಗದ, ಆರಾಮ ಕುರ್ಚಿ ಉದ್ಯೋಗಗಳಿಗೆ ಕಾತರರಾಗಿರುವ ಯುವಜನರ ಸಂಖ್ಯೆಗೆ ಸಮನಾಗಿ ಅಂಥ ಉದ್ಯೋಗಗಳನ್ನು ನಮ್ಮ ದರಿದ್ರ ದೇಶದಲ್ಲಿ ಸೃಷ್ಟಿಸಲು ಸುತರಾಂ ಸಾಧ್ಯವಿಲ್ಲ.

ದಾರಿ ಯಾವುದಯ್ಯಾ ವೈಕುಂಠಕ್ಕೆ, ಕೈಲಾಸಕ್ಕೆ, ಸುಖಜೀವನಕ್ಕೆ, ಭೋಗಮಯ ಜೀವನಕ್ಕೆ—ಅಂದರೆ ಕಾಲೇಜು ಶಿಕ್ಷಣ ಎಂದು ಇಂದಿನ ಸಮಾಜ ತರುಣರಿಗೆ ಕರೆಕೊಟ್ಟಿದೆ. ಕೆಲವೇ ಕೆಲವು ವ್ಯಾಪಾರಿ ಸಂಸ್ಥೆಗಳು—ಸರ್ಕಾರಿ ಕ್ಷೇತ್ರದಲ್ಲೂ, ಖಾಸಗೀ ಕ್ಷೇತ್ರದಲ್ಲೂ—ಸುಲಭವ ಕೆಲಸ, ಪುಷ್ಕಳ ಸಂಬಳ—ಕೊಡಬೇಕಾದರೆ ಹೊಲದ ರೈತ, ಗಿರಣಿಯ ಕೂಲಿಕಾರ, ಶಾಲೆಯ ಉಪಾಧ್ಯಾಯ ಇನ್ನೂ ಅಗ್ಗದ ಬೆಲೆಗೆ ತಮ್ಮ ಶ್ರಮವನ್ನು ಮಾರಬೇಕು. ಉದ್ಯೋಗವೇ ಸರ್ವಸ್ವ, ಉತ್ಪಾದನೆ ಗೌಣವೆನಿಸುವ ಆಧ್ಯಾಪನ ಸನ್ನಿವೇಶದಲ್ಲಿ ವ್ಯರ್ಥ ಶಿಕ್ಷಣದ ಪ್ರಸಾರದಿಂದ ಶಿಕ್ಷಿತ ವರ್ಗವೆಂಬ ಪಟ್ಟಭದ್ರ ಹಿತಾಸಕ್ತಿ ದುರ್ಬಲ ವರ್ಗಗಳ ಶೋಷಣೆಯಿಂದ ಉಪಜೀವನ ನಡೆಸುವುದು ಸಾಧ್ಯವೇ ಹೊರತು ದೇಶದ ಸಮಗ್ರ ಸಂಪತ್ತಿನ ಅಭಿವೃದ್ಧಿ ಕೈಗೂಡಲಾರದೆಂದು ಇದುವರೆಗಿನ ಶೈಕ್ಷಣಿಕ ವಿಸ್ತರಣದ ಇತಿಹಾಸ ನಮಗೆ ಪಾಠ ಹೇಳುತ್ತಿದೆ. ಕಲಿತವರೆಲ್ಲರಿಗೂ ಕೂತುಂಬ ಕೆಲಸದಿಂದ ಕೈತುಂಬ ಸಂಬಳ ಕೊಡಿಸುವ ಭ್ರಾಂತಿಯನ್ನು ಸಾರ್ವಜನಿಕರಲ್ಲಿ ನಾವೇಕೆ ಮೂಡಿಸಬೇಕೋ ನನಗ ತಿಳಿಯದಾಗಿದೆ. ಕಲಿಯದವನಿಗಿಂತ ಕಲಿತವನು ಹೆಚ್ಚು ಅಸಹಾಯ, ಪರಾವಲಂಬಿ, ಪರೋಪಜೀವಿಯಾಗಿ ಬಾಳುವ ಸನ್ನಿವೇಶಕ್ಕೆ ಸಮಾಜ ಏಕೆ ಪ್ರೋತ್ಸಾಹ ನೀಡಬೇಕು? ೧೯೭೧ರ ವೇಳೆಗೆ ಭಾರತದ ವಾರ್ಷಿಕ ವರಮಾನದಲ್ಲಿ ೩.೧ % ಹಣವನ್ನು ಶಿಕ್ಷಣಕ್ಕೆ ವಿನಿಯೋಗಿಸುವಂತಾಗಿದೆ. ಪರಿಣಾಮವಾಗಿ ೩.೫ ಲಕ್ಷ ಪ್ರಥಮ ಪದವಿ ಪಡೆದವರೂ (ಗ್ರ್ಯಾಜುವೇಟ್‌ಗಳು) ೪೦,೦೦೦ ಸ್ನಾತಕೋತ್ತರ ಪದವಿಯುಳ್ಳವರೂ ೬೪,೦೦೦

ತಾಂತ್ರಿಕ ಅರ್ಹತೆಯುಳ್ಳ ಇಂಜಿನಿಯರ್ ಮುಂತಾದವರೂ ನಿರುದ್ಯೋಗ ಮಂಡಲವನ್ನು ಪ್ರವೇಶಿಸಿದ್ದಾರೆ. ಅಂದರೆ, ಮುಂದಿನ ಸುಮಾರು ಐದು ವರ್ಷಗಳ ಕಾಲ ಯಾವನೇ ವಿದ್ಯಾರ್ಥಿ ಕಾಲೇಜಿಂದ ಹೊರಬೀಳದಿದ್ದರೂ ದೇಶದ ಕೆಲಸವನ್ನು ಮಾಡಲು ಇಷ್ಟು ಜನ ಅಣಿಯಾಗಿ ನಿಂತಿದ್ದಾರೆ ಎಂದಹಾಗಾಯಿತು. ಅವರನ್ನೇ—ಗ್ರಾಜುವೇಟ್‌ಗಳನ್ನು—ವರ್ಷಕ್ಕೆ ೫೦,೦೦೦ ದಂತೆ ಹೀರಿದರೆ ಒಟ್ಟು ಸಂಗ್ರಹ ಮುಗಿಯಲು ಏಳು ವರ್ಷ ಹಿಡಿಯುತ್ತದೆ; ವರ್ಷಕ್ಕೆ ೫೦೦೦ ದಂತೆ ಕೆಲಸ ಒದಗಿಸಿದಲ್ಲಿ ನಮ್ಮ ಸ್ನಾತಕೋತ್ತರ ಕುಮಾರರು ಎಂಟು ವರ್ಷಗಳಿಗೆ ಸಾಕಾಗುತ್ತಾರೆ. ಹಾಗೆಯೇ ತಾಂತ್ರಿಕ ಶಿಕ್ಷಣ ಪಡೆದವರೂ ಅರ್ಥಮಂಡಲದ ಬೇಡಿಕೆ ಪೂರೈಸುವಷ್ಟು ಪ್ರಮಾಣದಲ್ಲಿ ಈಗಾಗಲೇ ಇರುವಾಗ ಮತ್ತೆ ಮತ್ತೆ ಅದೇ ಶಿಕ್ಷಣ ನೀಡಿ ಹೊಟ್ಟೆ ಉಬ್ಬರಿಸಿಕೊಂಡರೆ ಒಂದಲ್ಲ ಒಂದು ದಿನ ಸ್ಫೋಟ ಆಗಿಯೇ ತೀರುವುದು. ಅಮೇರಿಕದ ಸ್ವಾತಂತ್ರ್ಯವೂ ಇಲ್ಲ, ರಶಿಯದ ಕಟ್ಟುನಿಟ್ಟೂ ಇಲ್ಲದಿರುವ ನಮ್ಮ ದೇಶದ ಶೈಕ್ಷಣಿಕ ಪದ್ಧತಿ ಎಲ್ಲರನ್ನೂ ಮೆಚ್ಚಿಸಹೋಗಿ ದೇಶಕಾರ್ಯವನ್ನೇ ಮರೆತುಬಿಟ್ಟಿದೆ. ಮುಕ್ತ ಪ್ರವೇಶ, ಮುಕ್ತ ನಿರ್ಗಮನ (ಅಥವಾ ೩೫% ನಂಥ ಹಾಸ್ಯಾಸ್ಪದವಾದ ಭೂಮಟ್ಟದ ಮಾನದಂಡ) ಉಚ್ಚ ಶಿಕ್ಷಣವನ್ನು ನಗೆಪಾಟಲಾಗಿ ಪರಿವರ್ತಿಸಿಬಿಟ್ಟಿದೆ. ಯಾವ ನಾಚಿಕೆಯೂ ಇಲ್ಲದೆ 'ನಮ್ಮ ಸ್ನಾತಕೋತ್ತರ ಪದವೀಧರರು ಪರದೇಶದ ಬಿ. ಎ., ಬಿ. ಎಸ್. ಸಿ.ಗಳಿಗೆ ಸಮ, ಬಿ. ಎ., ಬಿ. ಎಸ್‌ಸಿ.ಯವರು ಹೈಸ್ಕೂಲುಗಳಿಗೆ ಸಮ, ಎಂದು ಕೋಠಾರಿ ವರದಿ ಒಪ್ಪಿಕೊಂಡಿದೆ. ನಮ್ಮ ಸ್ನಾತಕೋತ್ತರ ವಿದ್ಯಾರ್ಥಿಗಳು ಎಷ್ಟು ಜನ ವಿದೇಶದಲ್ಲಿ ಮೊತ್ತ ಮೊದಲ ಡಿಗ್ರಿ ಪರೀಕ್ಷೆಗೆ ಕೂಡುತ್ತಾರೆ? ಸ್ವದೇಶದಲ್ಲೇ ಕೆಲಸವಿಲ್ಲ, ವಿದೇಶದಲ್ಲಿ ಮನ್ನಣೆ ಇಲ್ಲ ಎನ್ನುವಂಥ ತ್ರಿಶಂಕುಗಳನ್ನು ಲಕ್ಷಾಂತರ ತಯಾರಿಸಲು ಊರ ತುಂಬೆಲ್ಲ ಕಾಲೇಜುಗಳನ್ನು ಹರವಿ ಬಿಟ್ಟು ಶಿಕ್ಷಣ ಕ್ಷೇತ್ರದಲ್ಲಿ ಭಾರೀ ಬದಲಾವಣೆ ಮಾಡಿದ್ದೇವೆಂದು ಹೆಗ್ಗಳಿಕೆಯಿಂದಿರುವ ದೇಶ ಪುಣ್ಯಭೂಮಿ ಭಾರತ!

ಬದಲಾವಣೆಯ ಪ್ರಹಸನ

ಬದಲಾವಣೆಯೆಂದ ಕೂಡಲೇ ಶಿಕ್ಷಣತಜ್ಞರೇ



ಕಾಲ ಕಾಲಕ್ಕೆ ಏರ್ಪಡಿಸುವ ಪ್ರಹಸನಗಳ ನೆನಪಾಗುತ್ತಿದೆ. ಎರಡು ವರ್ಷದ ಇಂಟರ್ಮೀಡಿಯೇಟ್, ಒಂದು ವರ್ಷದ ಪಿ. ಯು. ಸಿ. ಆಗಿ, ಮತ್ತೆ ಎರಡು ವರ್ಷದ ಪಿಯುಸಿಯೆನಿಸಿ ಜೂನಿಯರ್ ಕಾಲೇಜೆಂದು ಹೆಸರು ಕೊಟ್ಟೊಡನೆ ಭಾರೀ ಕ್ರಾಂತಿ ನಡೆಯಿತೆಂದು ಸಾರ್ವಜನಿಕರು ತಿಳಿಯಬೇಕೆಂದು ಒತ್ತಾಯ ಹೇರಲಾಗುತ್ತಿದೆ. ಹಳ್ಳಿಯ ಜೂನಿಯರ್ ಕಾಲೇಜಿನಲ್ಲಿ ಪ್ರಯೋಗಶಾಲೆ ಇಲ್ಲದಿದ್ದರೂ ಏನಂತೆ, ಉಪಾಧ್ಯಾಯರು ಯಾರಾದರೇನಂತೆ, ಅವರಿಗೆ ಯಾವ ಸಂಬಳ ಕೊಟ್ಟರೇನಂತೆ— ಊರಿಗೊಂದು ಜೂನಿಯರ್ ಕಾಲೇಜಿನ ಅಲಂಕಾರ ಒದಗಲಿಲ್ಲವೇ? ಅಲ್ಲಿಂದ ಹೊರಬಿದ್ದ ವಿದ್ಯಾರ್ಥಿ ಏನು ಮಾಡಬೇಕು, ನೇರ ಕಾಲೇಜಿಗೆ ಹೋಗುವುದೇ? ಅಥವಾ ಉದ್ಯೋಗ ಹುಡುಕುವುದೇ? ಅದು ಯಾವ ಉದ್ಯೋಗಕ್ಕೆ ಅವನಿಗೆ ಅರ್ಹತೆ ಇದೆ? ಹಾಗೋ, ಕೋರ್ಸುಗಳನ್ನು ನವೀಕರಿಸುತ್ತೇವೆ, ತಾಂತ್ರಿಕ ಜ್ಞಾನವನ್ನು ಅಳವಡಿಸುತ್ತೇವೆ, ಎನ್ನುತ್ತದೆ ಪಿಯುಸಿ ಮಂಡಳಿ. 'ಅಯ್ಯಾ, ತಾಂತ್ರಿಕ ಪದವೀಧರರಿಗೇ ಕೆಲಸವಿಲ್ಲದಿರುವಾಗ ನಿಮ್ಮ ಪಿಯುಸಿ ಇಂಜಿನಿಯರಗಳಿಗೆ ಎಲ್ಲಿ ಕೆಲಸ? ಪೊಲಿಟೆಕ್ನಿಕ್‌ಗಳಿಗೇ-ನಾಯಿತು?' ಎಂದರೆ, ನಮ್ಮದೇನೂ ಉದ್ಯೋಗ ವಿನಿಮಯ ಕಚೇರಿಯಲ್ಲ ಎಂದೆನ್ನಬಹುದು. ಅಮೇರಿಕದ ಜೂನಿಯರ್ ಕಾಲೇಜು ಅಲ್ಲಿನ ವಿಶಿಷ್ಟ ಆರ್ಥಿಕ ಸಂದರ್ಭಗಳಿಂದ ಹುಟ್ಟಿದ ಒಂದು ಪದ್ಧತಿ; ಅದು ಯಾವ ಕಾಲಕ್ಕೂ ಬದಲಾಗುವ, ಸ್ಥಿತಿಸ್ಥಾಪಕ ಗುಣವುಳ್ಳ ಒಂದು ಪದ್ಧತಿ; ಮಾರ್ಕೆಟ್ ಬೇಡಿಕೆಗಳನ್ನು ಸದಾ ನಜರಿನಲ್ಲಿಟ್ಟುಕೊಂಡು ಕೋರ್ಸುಗಳನ್ನು ಆಗಿಂದಾಗ ಬದಲಾಯಿಸುತ್ತ ಇರುವ ಪದ್ಧತಿ ನಮ್ಮಲ್ಲಿ ಅದು ಈಗಿರುವ ರೂಪದಲ್ಲೇ ಮುಂದುವರಿದರೆ ಅದು ಕಾಲೇಜುಗಳಿಗೆ ಹುಡುಗರನ್ನು ರವಾನೆ ಮಾಡುವ ಒಂದು ಬುಕ್ಕಿಂಗ್ ಆಫೀಸ್ ಆದೀತೇ ಹೊರತು, ೧೭ನೆಯ ವಯಸ್ಸಿನಲ್ಲಿ ಹುಡುಗರನ್ನು ತಂತ್ರಜ್ಞರನ್ನಾಗಿ ಪರಿವರ್ತಿಸುವ ಮಾಂತ್ರಿಕ ಪದ್ಧತಿ ಆಗುವುದು ಶಕ್ಯವೇ ಇಲ್ಲ. ಆದರೂ ಕೋಟ್ಯಂತರ ವೆಚ್ಚದಲ್ಲಿ ಈ ಬದಲಾವಣೆ ನಡೆದಿದೆ. ಹೊಟ್ಟೆಗೆ ಕೂಳಿಲ್ಲವಾದರೂ (ಪ್ರಾಥಮಿಕ, ಹೈಸ್ಕೂಲುಗಳಿಗೆ ಉಪವಾಸ) ಜುಟ್ಟಿಗೆ ಮಲ್ಲಿಗೆ ಹೂ ಮುಡಿದಂತೆ ಇದೊಂದು ಹೊಸ ಪ್ರಾರಬ್ಧವನ್ನು ಕಟ್ಟಿಕೊಂಡು ಮುಂದಿನ ಉಚ್ಚ ಶಿಕ್ಷಣ ನಡೆಯಬೇಕಾಗಿದೆ.

ಶಿಕ್ಷಣದಲ್ಲಿ ಪರಿವರ್ತನೆ ಎಂದು ಹೊರಟಾಗಲೆಲ್ಲ ನಾವು ಹಿಂದೆ ಇದ್ದಲ್ಲಿಗೇ ಬರುವುದು, ಬಂದರೂ ಇದು ಹೊಸ ಗುರಿ ಎನ್ನುವುದು ಸಾರ್ವಜನಿಕರ ಬುದ್ಧಿಯನ್ನೇ ಕೆಣಕುತ್ತಿದೆ. ಇದನ್ನೆಲ್ಲ ನೋಡಿದರೆ ನಾವು ಶಿಕ್ಷಣದ ಕುರಿತು ಗಹನವಾಗಿ ಯೋಚಿಸಿಯೇ ಇಲ್ಲವೆಂದು ಭಾಸವಾಗುತ್ತದೆ. ಅಲ್ಲದೆ ಶಿಕ್ಷಿತರನ್ನು ನಮ್ಮ ಸಮಾಜದೊಡನೆ ಹೊಂದಿಸುವ ಕೆಲಸದ ಬಗ್ಗೆ ಚಿಂತೆಯೇ ಇಲ್ಲದಂತೆ ನಟಿಸುವ ಮಂಡಳಿಗಳನ್ನೂ ವಿಶ್ವವಿದ್ಯಾನಿಲಯಗಳ ಆಡಂಬರವನ್ನೂ ನೋಡುವಾಗ ಯಾವುದೋ ಶಾಪ ನಮ್ಮ ರಾಷ್ಟ್ರೀಯ ಕರ್ತವ್ಯವನ್ನೇ ನಮ್ಮ ಮನಸ್ಸಿನಿಂದ ಮರೆಮಾಡಿದಂತೆ ಅನಿಸುತ್ತದೆ. ನಿರುದ್ಯೋಗಮುಖಿಯಾಗಿ ನಡೆದ ಈ ಶಿಕ್ಷಣವೆಂಬ ಮಹಾಯಜ್ಞದಲ್ಲಿ ಅದೆಷ್ಟು ನಿರ್ಬೋಧ ತರುಣರು ಬೇಯಬೇಕೋ, ನೋಯಬೇಕೋ ಅರಿಯದಾಗಿದೆ. ನಮಗೆ ಬುದ್ಧಿ ಬರಬೇಕಾದರೆ ನಾವಿನ್ನೆಷ್ಟು ಕೆಡಬೇಕೋ! ✿

ಸಂಶೋಧನೆಯಲ್ಲಿ ಭಾಷೆಯನ್ನು ಬಳಸುವಾಗ ಆ ಭಾಷೆಯ ಮೇಲೆ ವಿಂಸುಕದಂಥ ಹಿಡಿತವಿರಬೇಕಾಗುತ್ತದೆ; ಅದಿಲ್ಲದಿದ್ದರೆ ಪ್ರಾಚೀನ ವಿಷಯಗಳ ಸಂಶೋಧನೆ ಅರ್ಥಹೀನವಾಗುತ್ತದೆ, ಅರ್ವಾಚೀನಗಳ ಸಂಶೋಧನೆ ಅಲ್ಪಾರ್ಥದ್ದಾಗುತ್ತದೆ. ಇಂಥ ಪ್ರಭುತ್ವ ಮಾತೃಭಾಷೆಯಲ್ಲಿ ಮಾತ್ರವೇ ಸಾಧ್ಯ. —ರಾಮಮನೋಹರ ಲೋಹಿಯಾ

ರಾಜಶೇಖರ ಭೂಸನೂರಮಠ



ಪರಮಾಣು ವಿಲಾಸ

ದೃಶ್ಯ ೧

ಹಿಮ್ಮೇಳ :

ವಿಶ್ವಸೌಧದಾ ಇಟ್ಟಿಗೆ ನಾವು
ನಶ್ವರನರರೇ ಕೇಳಿರಿ ನೀವು
ಸುಸ್ವರಮೇಳದಿ ಹಾಡಲು ನಾವು
ವಿಶ್ವದ ತುಂಬಾ ಬಂದಿತು ಜೀವಾ
ವಿಶ್ವಸೌಧದಾ ಇಟ್ಟಿಗೆ ನಾವು......

[ತೆರೆ ಏರಿದಾಗ ಸ್ಟೇಜಿನ ಮೇಲೆಲ್ಲ ಕತ್ತಲು. ಪಾರ್ಶ್ವದಲ್ಲಿ "God said 'let there be light' and there was light" ಎಂಬ ಬೈಬಲೋಕ್ತಿ ಕೇಳಬರುವುದರೊಂದಿಗೆ ರಂಗದ ತುಂಬ ಬೆಳಕು ಬೀಳುತ್ತಿದೆ. ಕ್ರಿ. ಪೂ. ೪ ನೆಯ ಶತಮಾನದ ಕಾಲ. ಅಬ್ಡೇರಾ ನಗರದ ಒಂದು ಹಿಣಿ. ಡೆಮಾಕ್ರಿಟಸ್—ಒಬ್ಬ ಗ್ರೀಕ್ ದಾರ್ಶನಿಕ-ರಂಗಪ್ರವೇಶ ಮಾಡುತ್ತಾನೆ. ಹಿಮ್ಮೇಳವಾಗಿ ಮತ್ತೆ ಕೋರಸ್ ಕೇಳಬರುತ್ತದೆ.]

ಡೆಮಾಕ್ರಿಟಸ್ : (ಮುಖ ಅರಳಿ) ಹಾಂ! ನಾನೇನೆಂದೆ ಮತ್ತೆ? ನಾನು—ಡೆಮಾಕ್ರಿಟಸ್—ಹೇಳಿದ್ದು ಸುಳ್ಳೇ ಮತ್ತೆ? ಮಗುವಿಗೂ ತಿಳಿದೀತು ನನ್ನ ತರ್ಕ. ಅಬ್ಡೇರಾದವರು ನನ್ನನ್ನು ಹುಚ್ಚನೆಂದು ಭಾವಿಸಿದ್ದಾರಲ್ಲವೇ? ಅದೂ ಒಳ್ಳೆಯದೇ! ತಿಳಿಗೇಡಿಗಳ ಮಧ್ಯೆ ಬುದ್ಧಿವಂತನಾಗಿರುವುದೂ ಹುಚ್ಚನಾಗಿರುವುದೂ ಒಂದೇ ಅಲ್ಲವೇ?

(ಡೆಮಾಕ್ರಿಟಸನ ಶಿಷ್ಯನೊಬ್ಬನ ಪ್ರವೇಶ)

ಶಿಷ್ಯ : ಗುರುಗಳೇ, ಅಬ್ಡೇರಾ ಬಿಡುವುದೇ ಲೇಸೆಂದು ತೋರುತ್ತದೆ. ನಿಮ್ಮ ಬೀಗರೆಲ್ಲ ಸೇರಿಕೊಂಡು ವೈದ್ಯರ ಗುರು ಹಿಪ್ಪೋಕ್ರೇಟಸ್ಸನ್ನೇ ಅಬ್ಡೇರಾಕ್ಕೆ ಕರೆತಂದಿದ್ದಾರೆ.

ಡೆಮಾಕ್ರಿಟಸ್ : ಹಿಪ್ಪೋಕ್ರೇಟಸ್ (ಆನಂದದಿಂದ ಚಪ್ಪಾಳೆ ತಟ್ಟಿ) ಒಳ್ಳೆಯದೆ! ಆಯಿತಲ್ಲವೇ? ಆ ಮಹಾಶಯನನ್ನು ಭೆಟ್ಟಿಯಾಗಲು ನಾನೂ ಆತುರನೇ ಆಗಿದ್ದೇನೆ.

ಶಿಷ್ಯ : (ಹಣೆ ಬಡಿದುಕೊಳ್ಳುತ್ತ) ಗುರುಗಳೇ, ಹೇಗೆ ಹೇಳಲಿ? ನಿಮ್ಮ ತಲೆಯೊಳಗೆ ಯಾವುದೋ ಪಿಶಾಚಿ ಹೊಕ್ಕು ಬುದ್ಧಿಭ್ರಮೆಯಾಗಿದೆಯೆಂದೂ ನಿಮ್ಮನ್ನು ಗುಣಪಡಿಸಬೇಕೆಂದೂ ಅವರು ಆಲೋಚಿಸಿದ್ದಾರಂತೆ. ಇದು ಶುದ್ಧ ಅವಮಾನವಲ್ಲವೇ?

ಡೆಮಾಕ್ರಿಟಸ್ : ಪಿಶಾಚಿ ಹೊಕ್ಕಿರುವುದು ಅವರೆಲ್ಲರ ತಲೆಯಲ್ಲಿ! ನನ್ನ ತಲೆಯ ತುಂಬ ವಿಶ್ವದ ಇಟ್ಟಿಗೆಗಳಾದ ಪರಮಕಣಗಳೇ ಓಡಾಡಿಕೊಂಡಿವೆ. ಹಿಪ್ಪೋಕ್ರೇಟಸ್ ಅವರ ಮಾತು ನಂಬುವವನಲ್ಲ, ಬರಲಿ ಬಿಡು.

[ವೈದ್ಯಗುರು ಹಿಪ್ಪೋಕ್ರೇಟಸ್ ಪರಿವಾರ ಸಮೇತನಾಗಿ ರಂಗವನ್ನು ಪ್ರವೇಶಿಸುತ್ತಾನೆ. ರಂಗದ ಒಂದು ಬದಿಗೆ ಗೋಳಾಡುತ್ತಿರುವ ಡೆಮಾಕ್ರಿಟಸನ ಹೆಂಡತಿಯನ್ನು ಆಕೆಯ ಬಂಧುಗಳು, 'ಹುಚ್ಚು ಬಿಡಿಸಲು ಮಾಂತ್ರಿಕ ಬೇಕಿಲ್ಲ, ವೈದ್ಯರೇ ಮೇಲು, ಚಿಂತಿಸಬೇಡ ತಂಗೀ......' ಇತ್ಯಾದಿಯಾಗಿ ಸಂತೈಸುತ್ತಿದ್ದಾರೆ]

ಹಿಪ್ಪೋಕ್ರೇಟಸ್ : ಎಲ್ಲಿ ರೋಗಿ? ,

ಡೆಮಾಕ್ರಿಟಸ್ : (ಗಟ್ಟಿಯಾಗಿ ನಗುತ್ತ ಮುಂದೆ ಬಂದು ಹಿಪ್ಪೋಕ್ರೇಟಸನನ್ನು ಆಲಿಂಗಿಸಿ ಕೊಂಡು) ಇಲ್ಲಿರುವವರೆಲ್ಲ!

ಹಿಪ್ಪೋಕ್ರೇಟಸ್ : (ಗೊಂದಲದಲ್ಲಿ ಬಿದ್ದು) ನೀವು ಡೆಮಾಕ್ರಿಟಸ್ ಅಲ್ಲವೇ? ನಿಮ್ಮ ಮುಖದ ಮೇಲಿನ ಕಳೆ ನಿಮ್ಮ ಮಾನಸಿಕ ಸ್ಥಿತಿ ಉಳಿದವರಿಗಿಂತ ಉತ್ತಮವಿದೆಯೆಂದು ಹೇಳು ತ್ತಿದೆ. ನಿಮ್ಮ ಬಂಧುಗಳಾದರೊ...

ಡೆಮಾಕ್ರಿಟಸ್ : ಅವರ ಅಜ್ಞಾನವನ್ನು ಕ್ಷಮಿಸಿರಿ ಹಿಪ್ಪೋಕ್ರೇಟಸ್. ನೀವು ಬರಿ ಶರೀರದ ವೈದ್ಯರಷ್ಟೇ ಆಗಿರದೆ ಮನಸ್ಸಿನ ವೈದ್ಯರೂ ಆಗಿದ್ದುದು ನಿಸ್ಸಂಶಯ. ಇಲ್ಲಿ ಬನ್ನಿ.

[ಡೆಮಾಕ್ರಿಟಸನು ಹಿಪ್ಪೋಕ್ರೇಟಸನನ್ನು ರಂಗದ ಮೂಲೆಗೆ ಕರೆದುಕೊಂಡು ಹೋಗಿ ಇಳಿ- ದನಿಯಲ್ಲಿ ಏನೇನೋ ಹೇಳುವನು. ಹಿಪ್ಪೋ- ಕ್ರೇಟಿಸ್ ಸಾವಧಾನವಾಗಿ ಕೇಳಿಕೊಂಡು ಆನಂದಾ ಶ್ಚರ್ಯಭರಿತನಾಗಿ ರಂಗದ ನಡುವೆ ಬರುವನು. ಈ ಅವಧಿಮಧ್ಯದಲ್ಲಿ ಡೆಮಾಕ್ರಿಟಸನ ಶಿಷ್ಯನೂ ಬಂಧುಗಳೂ ಅಬ್ಡೇರಾ ನಗರದವರೂ ಒಂದು ಸವಾಡದ ನಿರೀಕ್ಷೆಯಲ್ಲಿದ್ದಂತೆ ತಮಗೆ ತೋಚಿ ದ್ದನ್ನು ಮಾತನಾಡಿಕೊಳ್ಳುವರು]

ಹಿಪ್ಪೋಕ್ರೇಟಸ್ : (ಪ್ರೇಕ್ಷಕರನ್ನುದ್ದೇ- ಶಿಸಿ) ಅಬ್ಡೇರಾದ ವರ್ತಕರೇ, ಡೆಮಾಕ್ರಿಟಸ್ ಮಹಾಪುರುಷನ ಮಿದುಳಿನಲ್ಲಿದ್ದ ಜ್ಞಾನಪಿಶಾಚಿ ಯನ್ನು ನೀವು ಕಾಣದೇ ಹೋದಿರಿ. ನಾನು ನಿಮಗೆಲ್ಲ ವೈದ್ಯನಾದರೆ, ಡೆಮಾಕ್ರಿಟಸ್ ನನ್ನ ವೈದ್ಯ, ಇಂದಿನಿಂದ ನನ್ನ ಗುರು.

ಡೆಮಾಕ್ರಿಟಸ್‌ನ ಹೆಂಡತಿ : ಅಯ್ಯೋ ದೇವರೇ, ನನ್ನ ಗಂಡ ಈ ವೈದ್ಯರಿಗೂ ಹುಚ್ಚು ಹಿಡಿಸಿದನಲ್ಲ? ಇನ್ನು ನನ್ನ ಗತಿ ಏನು?

ಎಲ್ಲರೂ : (ವಿವಿಧ ಘಟ್ಟಗಳಲ್ಲಿ ದನಿಗೂಡಿ ಸುತ್ತ) ವೈದ್ಯರೇ, ನಾವೇ ಮೂರ್ಖರೆಂದು ಒಪ್ಪುತ್ತೇವೆ. ಆದರೆ ಡೆಮಾಕ್ರಿಟಸನ ಪಾಂಡಿತ್ಯ ನಮಗೇನೂ ಬೇಕಿಲ್ಲ. ರೂಢಿಯಂತೆ, ನಮಗೆ ತಿಳಿಯುದ್ದನ್ನು ಹೇಳುವ ಆತನನ್ನು ವಿದ್ವಾಂಸ ನೆಂದು ತಿಳಿದು ಗೌರವಿಸುವ ಜವಾಬ್ದಾರಿ ನಮ್ಮದು.

ಹಿಪ್ಪೋಕ್ರೇಟಸ್ : (ಅರ್ಧ ತನ್ನಷ್ಟಕ್ಕೆಂ- ಬಂತೆ) ಆಹಾ! ಎಂಥ ಸುಲಭ ಆದರೆ ಅದ್ಭುತ- ಸತ್ಯವು! ವಿಶ್ವದ ವಸ್ತುವೆಲ್ಲಾ ಕೆಲವೇ ಮೂಲ ಕಣಗಳಿಂದ ನಿರ್ಮಾಣವಾಗಿದೆ. ಕಣಗಳ ಓಡಾಟ, ಒಡನಾಟವೇ ಪ್ರಪಂಚದ ಇರವು. ಒಂದನ್ನು ಅರ್ಧ ಮಾಡಿರಿ, ಅದರರ್ಧ ಮಾಡಿರಿ, ಅದರರ್ಧ ಮಾಡಿರಿ,...ಹೀಗೇ ಮಾಡುತ್ತ ಹೋದರೆ ಸಿಗುವ ದಾದರೂ ಏನು? ಪದಾರ್ಥದ ಸೂಕ್ಷ್ಮಾತಿಸೂಕ್ಷ್ಮ ಕಣಗಳಲ್ಲವೇ? ಕೊನೆಗೊಮ್ಮೆ ಅಚ್ಛೇದ್ಯ ಕಣ ಸಿಕ್ಕುತ್ತಲ್ಲವೇ? ಅದೇ ಪರಮಾಣು! ಅದೇ ವಿಶ್ವದ ಇಟ್ಟಿಗೆ... (ಕಣ್ಣು ಮುಚ್ಚಿ ಕಲ್ಪಿಸ ತೊಡಗುವನು).

ಡೆಮಾಕ್ರಿಟಸ್ : (ಹಿಪ್ಪೋಕ್ರೇಟಸನನ್ನು ಗಟ್ಟಿಯಾಗಿ ಅಲುಗಿಸಿ) ಮಿತ್ರಾ, ಎಚ್ಚರಾಗು. ಆ ಕಣಗಳ ಮಾಯೆಗೆ ಸಿಲುಕಿ ನೀನೂ ನನ್ನಂ- ತೆಯೇ ಹುಚ್ಚನಾದೀ! ರೋಗಗಳ ನಿದಾನ ಮಾಡುವ ನಿನ್ನ ಪವಿತ್ರ ಕರ್ತವ್ಯದಿಂದ ವಿಮುಖ ನಾದೀಯಾ!

[ಡೆಮಾಕ್ರಿಟಸನ ಹೆಂಡತಿಯನ್ನು ಆಕೆಯ ಬಂಧುಗಳು ಸಂತೈಸುತ್ತಿರುವಾಗ, ಆಕೆ ತನ್ನ ಗಂಡನನ್ನೂ ಹಿಪ್ಪೋಕ್ರೇಟಸನನ್ನು ಕೂಡಿಯೇ ಉದ್ಧಾರ ಮಾಡುವಂತೆ ಗೋಳಾಡುತ್ತಿರುವಾಗ ತೆರೆ.]

ದೃಶ್ಯ ೨

ಹಿಮ್ಮೇಳ :

ವಿಶ್ವಸೌಧದಾ ಇಟ್ಟಿಗೆ ನಾವು
ನಶ್ವರನರರೇ ಕೇಳಿರಿ ನೀವು
ಸುಸ್ವರಮೇಳದಿ ಪಾಡಲು ನಾವು
ವಿಶ್ವದ ತುಂಬಾ ಬಂದಿತು ಜೀವಾ
ವಿಶ್ವಸೌಧದಾ ಇಟ್ಟಿಗೆ ನಾವು...


[ಕಳೆದ ಶತಮಾನದ ಆದಿಕಾಲ. ಇಂಗ್ಲಂಡಿನ ಒಂದು ಹಳ್ಳಿಯಲ್ಲಿ ಮಧ್ಯವಯಸ್ಕನಾದ ಜಾನ್ ಡಾಲ್ಟನ್ ಒಂದು ಕೋಣೆಯಲ್ಲಿ ಕುಳಿತಿದ್ದಾನೆ. ಕೋಣೆಯಲ್ಲಿ ಟೆಸ್ಟ್ ಟ್ಯೂಬುಗಳು, ಜಾರುಗಳು,



10 ಮುತ್ತಿನಂಥ ಮಣಿಗಳು! ನಿಮ್ಮ ಮನಮೆಚ್ಚುವ ಹೇಜ್‌ಲೀನ್ ಸ್ನೋದ ಪ್ರತಿಯೊಂದು ಬಾಟಲಿಯ ಜೊತೆಗೆ!

3-4 ಬಾಟಲಿ ಹೇಜ್‌ಲೀನ್ ಸ್ನೋ ಕೊಂಡುಕೊಂಡು ಈ ಸುಂದರ, ಮುತ್ತಿನಂಥ ಮಣಿಗಳನ್ನು ಒಟ್ಟು ಕೂಡಿಸಿರಿ ಮತ್ತು ನಿಮ್ಮ ಕಂಠಕ್ಕಾಗಿ ಒಂದು ಅಂದವಾದ ಹಾರವನ್ನು ಮಾಡಿರಿ!

ಸೌಂದರ್ಯವನ್ನು ಅರಳಿಸಲು ಹೇಜ್‌ಲೀನ್ ಸ್ನೋ ಅನುಪಮ ಮಾದರಿ ಲಘು...ಮೃದು...ಹಾಗೂ ಉತ್ಕೃಷ್ಟ! ಹೇಜ್‌ಲೀನ್ ಸ್ನೋ ನಿಮ್ಮ ಮೈಕಾಂತಿಯನ್ನು ಸದಾ ಕೋಮಲವಾಗಿ ಹಾಗೂ ಆಕರ್ಷಕವಾಗಿ ಇಡುವುದಕ್ಕೆಂದೇ ವಿಶೇಷವಾಗಿ ತಯಾರಿಸಲ್ಪಡುತ್ತದೆ.



ಹೇಜ್‌ಲೀನ್ ಸ್ನೋ

ನವ ಯೌವನದ ಸಹಜ ಸೌಂದರ್ಯದ ರಹಸ್ಯ

OBM-0773-KN

ಇತ್ಯಾದಿ. ಆತನ ಕೈಯಲ್ಲಿ ಒಂದು ಪುಸ್ತಕವಿದೆ. ಅದನ್ನು ಗಟ್ಟಿಯಾಗಿ ಓದುತ್ತಿದ್ದಾನೆ.]

ಡಾಲ್ಟನ್ : (ಓದುತ್ತ) "ಭಾಗಗಳೇ ಇಲ್ಲದ ಕೆಲವು ಸೂಕ್ಷ್ಮಪದಾರ್ಥಗಳಿವೆ, ಅವು ಸೃಷ್ಟಿಯ ಸೂಕ್ಷ್ಮತಮ ಕಣಗಳು......ಇಡೀ ಸೃಷ್ಟಿಯೇ ಎರಡರಿಂದಾಗಿದೆ; ಇವೆಂದರೆ ಈ ಕಣಗಳು ಮತ್ತು ಖಾಲಿ ಬಯಲು ಇರಬೇಕು. ಮತ್ತು ಈ ಕಣಗಳು ಅಥವಾ ಪರಮಾಣುಗಳು ಬಯಲಿನಲ್ಲಿ ಓಡಾಡಿಕೊಂಡಿರುತ್ತವೆ." (ಕೆಮ್ಮಿ) ಲೂಕ್ರೆಟಿಯಸ್ ಎಂಥಾ ಪುಣ್ಯವಂತ! ಆತ ಹೇಳಿದ್ದನ್ನು ಸಿದ್ಧಪಡಿಸಬೇಕಾದರೆ ಅದೆಂಥ ಸೂಕ್ಷ್ಮದೃಷ್ಟಿ ಬೇಕಾದೀತು! ಎರಡು ಸಾವಿರ ವರ್ಷಗಳೇ ಉರುಳಿದ್ದರೂ ಇನ್ನೂ ಸಮಾಧಾನಕರವಾದ ಪರಮಾಣುವಾದವೇ ಇಲ್ಲವಲ್ಲ? ಡೆಮಾಕ್ರಿಟಸ್ ಲೂಕ್ರೆಟಿಯಸರಂಥ ದಾರ್ಶನಿಕರ ಕಾಲವಿದಲ್ಲ-ವಲ್ಲ! ಬಡಪಾಯಿ ಶಾಲಾ ಉಪಾಧ್ಯಾಯನಾದ ನಾನೇನು ತಾನೇ ಮಾಡಬಲ್ಲೆ?

[ಡಾಲ್ಟನ್ನನ ಮಿತ್ರನ ಪ್ರವೇಶ.]

ಮಿತ್ರ : ಜಾನ್! ಜಗತ್ಪ್ರಳಯವೇ ಆದರೂ ನಿನಗೆ ಗೊತ್ತಾಗಲಿಕ್ಕಿಲ್ಲ.

ಡಾಲ್ಟನ್ : (ಜಾರುತ್ತಿದ್ದ ಚಾಳೀಸನ್ನೇರಿಸಿಕೊಳ್ಳುತ್ತ) ಈಗ ಆದದ್ದಾದರೂ ಏನು ಫಿಲಿಪ್?

ಮಿತ್ರ : ಮತ್ತೇನಾಗಬೇಕು? ನ್ಯೂಟನ್ನನಿಗಿಂತ ಪ್ರಸಿದ್ಧ ವಿಜ್ಞಾನಿಯೆಂದು ನಿನ್ನನ್ನು ವರ್ಣಿಸಿ ಬಂದ ಲೇಖನ ಕೂಡ ನೋಡಿಲ್ಲವೆಂತ ಕಾಣುತ್ತದೆ. ಹೋಗಲಿ, ರಾಯಲ್ ಸೊಸೈ-ಟಿಯ ಮುಂದೆ ನಿನ್ನ ಭಾಷಣವಿರುವ ವಿಚಾರವಾದರೂ ನೆನಪಿದೆಯೋ?

ಡಾಲ್ಟನ್ : ಅವನ್ನು ಕೇಳಲು ನೀನೇನು ಬರುವ ಸಂಭವವಿಲ್ಲವಲ್ಲ? ನನ್ನ ಡೈರಿಯ-ಲ್ಲೇತೂ...(ಒಮ್ಮೆಲೆ ನೆನಪಾಗಿ) ಹಾ! ಕ್ಷಮಿಸು ಫಿಲಿಪ್. ನಾನೇ ನೆನಪು ಮಾಡೆಂದು ಹೇಳಿದ್ದೆ-ನಲ್ಲವೇ? ಡೈರಿ ನೋಡಲು ನೆನಪೇ ಆಗಲಿಲ್ಲ ನೋಡು.

ಮಿತ್ರ : ನಿನ್ನಂಥವನು ಮದುವೆಯಾಗಿದ್ದರೆ ಮಾಡಿಕೊಂಡಾಕೆ ಉದ್ಧಾರವಾಗುತ್ತಿದ್ದಳು!

ಡಾಲ್ಟನ್ : (ಬೆದರಿ) ಅದೊಂದು ವಿಚಾರ ಎತ್ತಬೇಡ. ರಾಸಾಯನಿಕ ಕ್ರಿಯೆಗಳೇ ತಲೆಯಲ್ಲಿ ತುಂಬಿರುವಾಗ ಪ್ರೇಮ ಮುಂತಾದವಕ್ಕೆ ಹೇಗೆ ಪುರುಸೊತ್ತಾದೀತು?

ಮಿತ್ರ : ಪ್ರೇಮವೂ ಒಂದು ರಾಸಾಯನಿಕ ಕ್ರಿಯೆಯೇ ಅಲ್ಲವೇ?

ಡಾಲ್ಟನ್ : ಹೋಗಲಿ ಬಿಡು, ಈಗ ಅಂಥ ಭಾವೋಷ್ಣಜನ್ಯಕ್ರಿಯೆಗಳ ಬಗ್ಗೆ ಮಾತನಾಡುವದು ಬೇಡ; ಇದೇನು ಚಳಿಗಾಲವಲ್ಲವಲ್ಲ?

ಮಿತ್ರ : ಹುಟ್ಟು ವರ್ಣಾಂಧನಾದ ನಿನಗೆ ಪ್ರಣಯದ ಕಾಮನಬಿಲ್ಲು ಹೇಗೆ ಕಂಡೀತು! ಹೋಗಲಿ ಬಿಡು, ನಿನ್ನ ಭಾಷಣದ ವಿಚಾರವಾದರೂ ಸ್ವಲ್ಪ ಹೇಳಬಾರದೇ?

ಡಾಲ್ಟನ್ : (ಪುಸ್ತಕವನ್ನು ಕೆಳಗಿಡುತ್ತ) ನನ್ನ ಪರಮಾಣುವಾದವನ್ನು ಕುರಿತೇ ಮಾತನಾಡಬೇಕೆಂದಿರುವೆ.

[ನೇಪಥ್ಯದಲ್ಲಿ ದೃಶ್ಯ ಪ್ರಾರಂಭದಲ್ಲಿ ಕೇಳಿಸಿದ ಹಿಮ್ಮೇಳವೇ ಮತ್ತೆ ಕೇಳಿಬರುವದು.]

ಡಾಲ್ಟನ್ : (ಮುಂದುವರೆದು) ಯಾವುದೇ ಪದಾರ್ಥವಾದರೂ ಸೂಕ್ಷ್ಮ ಕಣಗಳಾದ ಪರಮಾಣುಗಳ ಸಮೂಹವೆಂಬುದನ್ನು ನಾನು ಪ್ರಯೋಗಗಳಿಂದ ದೃಢಪಡಿಸಿರುವೆನಷ್ಟೆ. ಅವು ಮೂಲ ಕಣಗಳು ಅಥವಾ ಇಟ್ಟಿಗೆಗಳು. ಅವುಗಳನ್ನು ಸೃಷ್ಟಿಸಲು ಅಥವಾ ನಾಶಪಡಿಸಲು ಸಾಧ್ಯವೇ ಇಲ್ಲ. ಎಲ್ಲ ವಸ್ತುಗಳೂ ರಾಸಾಯನಿಕವಾಗಿ ಮೂಲವಸ್ತು, ಸಂಯುಕ್ತವಸ್ತು ಮತ್ತು ಮಿಶ್ರಣಗಳೆಂದು ಇರುತ್ತವಷ್ಟೇ? ಒಂದು ಮೂಲವಸ್ತುವಿನ ಎಲ್ಲ ಪರಮಾಣುಗಳು ಎಲ್ಲ ರೀತಿಯಲ್ಲೂ ಒಂದರಂತೆ ಇನ್ನೊಂದಿರುತ್ತವೆ. ಯಾವುದೇ ರಾಸಾಯನಿಕ ಕ್ರಿಯೆಯಲ್ಲಿ ಈ ಪರಮಾಣುಗಳೇ ಭಾಗವಹಿಸುವವು......

ಮಿತ್ರ : ಅಯ್ಯಾ ಮಹಾತ್ಮಾ, ಇಲ್ಲಿಯೇ ನಿನ್ನ ಭಾಷಣ ಪ್ರಾರಂಭಿಸಿದೆಯಾ? ನಾನು ಕೇಳಿದ್ದು ಭಾಷಣದ ವಿಚಾರವಾಗಿ ಹೇಳೆಂದು.

ಡಾಲ್ಟನ್ : (ಗೊಂದಲದಲ್ಲಿ ಬಿದ್ದು) ಅಂದರೆ?

ಮಿತ್ರ : ಅಂದರೆ, ನಾನೆಂದು ಹೊರಡಬೇಕು ? ಯಾವ ವೇಷದಲ್ಲಿರಬೇಕು ? ಅಲ್ಲಿ ಯಾವ ಮಹನೀಯರು ಬರುತ್ತಾರೆ ? ಮಹಿಳೆಯರು ? ಇತ್ಯಾದಿ, ಇತ್ಯಾದಿ.

ಡಾಲ್ಟನ್ : ನಿನ್ನ ಚಿಂತೆ ನಿನಗೆ; ಆದರೆ ಫಿಲಿಪ್, ಒಂದು ಮಾತು. ನಾನು ಡೆಮಾಕ್ರಿಟಸನೂ ಅಲ್ಲ, ನ್ಯೂಟನ್ನನೂ ಅಲ್ಲ; ನಾನೊಬ್ಬ ಬಡ ಶಾಲಾ ಮಾಸ್ತರು. ಮಹಾ ವಿಜ್ಞಾನಿಗಳಿಗ ಸರಿಸಮವಾಗಿ ಓಡಾಡಿ ನನ್ನ ಭಾಷಣ ಮಾಡುವಷ್ಟರಲ್ಲೇ ಅರೆಜೀವವಾಗುವಾಗ, ಗೌಣ ವಿಷಯಗಳ ಪರಿವೆ ನನಗೇಕೆ ?

ಮಿತ್ರ : ಎಲ್ಲ ದೊಡ್ಡ ಮನುಷ್ಯರೂ ಹೀಗೆ ವಿಸಯಿಗಳಾಗಿರುವದರಿಂದಲೇ ಅವರಿಗೆ ಹೆಚ್ಚಿನ ಮೆರುಗು ಬರುತ್ತದಲ್ಲವೇ ? ಪರಮಾಣು ವಿಜ್ಞಾನದ ಪಿತ ನೀನಾಗಿರುವೆಯೆಂದೂ ಭವಿಷ್ಯತ್ತಿನಲ್ಲಿ ಜಗತ್ತೇ ನೆನೆಸುವದೆಂದೂ ನೆನಪಿಟ್ಟುಕೋ.

ಡಾಲ್ಟನ್ : (ಅನಾಸ್ಥೆಯಿಂದ) ತಾಳು, ಇಂದಿನ ಹವಾಮಾನವನ್ನು ಇನ್ನೂ ಡೈರಿಯಲ್ಲಿ ಗುರುತಿಸಿಕೊಂಡಿಲ್ಲ. ವಸಂತಕಾಲವಿದ್ದರೂ ಹವೆಯಲ್ಲಿ ಅದೇಕೆ ಆರ್ದ್ರತೆ ಹೆಚ್ಚಾಗಿದೆಯೋ ನನಗೆ ಅರ್ಥವೇ ಆಗಲೊಲ್ಲದು.

[ಡಾಲ್ಟನ್ನನು ದೊಡ್ಡ ಡೈರಿ ತೆಗೆದು ಅದರಲ್ಲಿ ಹವಾಮಾನದ ಟಿಪ್ಪಣಿ ಮಾಡುತ್ತಿರುವಾಗ ತೆರೆ.]

ದೃಶ್ಯ ೩

ಹಿಮ್ಮೇಳ :

ವಿಶ್ವಸೌಧದಾ ಇಟ್ಟಿಗೆ ನಾವು
ನಶ್ವರನರರೇ ಕೇಳಿರಿ ನೀವು
ಸುಸ್ವರಮೇಳದಿ ಹಾಡಲು ನಾವು
ವಿಶ್ವದ ತುಂಬಾ ಬಂದಿತು ಜೀವಾ ।
ವಿಶ್ವಸೌಧದಾ ಇಟ್ಟಿಗೆ ನಾವು......

[ಸರ್ ಜೆ. ಜೆ. ಥಾಮ್‌ಸನ್ನರ ಮನೆ ೧೯೧೯ರ ಒಂದು ರಾತ್ರಿ. ಹೆಂಡತಿ ರೋಜ್ ಮತ್ತು ಮಗ ಜಾರ್ಜರೊಂದಿಗೆ ಭೋಜನಾನಂತರ ಹರಟುತ್ತ ಕುಳಿತಿದ್ದಾರೆ. ಬ್ರಿಟಿಷ್ ಡ್ರಾಯಿಂಗ್ ರೂಮು-ಆ ದಶಕದ ವೇಷಭೂಷಣ ಮತ್ತು ರಂಗಸಜ್ಜಿಕೆ.]

ಜಾರ್ಜ್ : ಡ್ಯಾಡೀ, ನಿಮಗೆ ನಾನಲ್ಲದೆ ಅರ್ನೆಸ್ಟ್ ರುದರ್‌ಫೋರ್ಡ್ ಅವರೇ ಮಗನಾಗಿ ಹುಟ್ಟಬೇಕಿತ್ತು.

ರೋಜ್ : ಏಕೆ ಮಗೂ? ಕ್ಯಾವೆಂಡಿಷ್‌ನನ್ನು ರುದರ್‌ಫೋರ್ಡರಿಗೆ ಒಪ್ಪಿಸುವ ವಿಚಾರ ನಿನಗೆ ಸರಿಹೋಗದೇನು?

ಜಾರ್ಜ್ : ಮಮ್ಮಿ, ನನ್ನನ್ನು ತಪ್ಪು ತಿಳಿದುಕೊಂಡಿರಿ. ಅವಿಭಾಜ್ಯವೆಂದು ತಿಳಿದಿದ್ದ ಪರಮಾಣುವಿನ ಹೊಟ್ಟೆ ಸೀಳಿ ಅವುಗಳಲ್ಲಿ ಮೂಲ ಋಣ ವಿದ್ಯುತ್ಕಣಗಳಾದ ಎಲೆಕ್ಟ್ರಾನುಗಳಿವೆ ಎಂದು ಡ್ಯಾಡಿ ತೋರಿಸಿ ಪ್ರಪಂಚವನ್ನೆ ದಿಗ್ಭ್ರಮೆಗೊಳಿಸಿದರಲ್ಲ? ಈಗ ರುದರ್‌ಫೋರ್ಡ್ ಅದೇ ಹಾದಿಯಲ್ಲಿ ನಡೆದು ಪರಮಾಣುವಿನ ಮೂಲರಹಸ್ಯಗಳನ್ನೆಲ್ಲಾ ಹೊರಗೆಡವುತ್ತಿದ್ದಾರಲ್ಲ? ಡ್ಯಾಡಿಯ ಯೋಗ್ಯತೆಗೆ ತಕ್ಕ ಮಗನೆಂದರೆ ಅವರೇ ಆಗಬಹುದಲ್ಲವೇ?



ಥಾಮ್‌ಸನ್ : (ಮಗನ ಬೆನ್ನು ತಟ್ಟುತ್ತ) ರೋಜ್ ಡಾರ್ಲಿಂಗ್, ತ್ಯಾಗದ ನಿನ್ನ ಸ್ವಭಾವ ನಿನ್ನ ಮಗನಲ್ಲಿಳಿದುಬಂದಿದೆ ನೋಡು.

ರೋಜ್ : (ಅರ್ಥವಾಗದೆ) ನಾನೇನು ತ್ಯಾಗ ಮಾಡಿದೆ ಡಿಯರ್ ?

ಥಾಮ್‌ಸನ್ : (ನಗುತ್ತ) ಆರ್ನಿ ವಿದ್ಯಾರ್ಥಿಯಾಗಿ ಬಂದ; ನನ್ನ ಮೆಚ್ಚಿನ ಶಿಷ್ಯನೂ ಕ್ಯಾವೆಂಡಿಷ್ ಉತ್ತರಾಧಿಕಾರಿಯೂ ಆದ. ನೀನು ಕಡಿಮೆ ಮೇಧಾವಿಯೇ? ನೀನು ವಿದ್ಯಾರ್ಥಿನಿಯಾಗಿ ಬಂದೆ, ವಿಜ್ಞಾನಪ್ರಸಿದ್ಧಿಗೆ ತ್ಯಾಗ ಮಾಡಿದೆ—ನನ್ನ ಕೈ ಹಿಡಿದೆ!

ರೋಜ್ : (ನಾಚುತ್ತ) ಬೇಡ ಮಗನ ಮುಂದೆ ಏನು ಹುಡುಗಾಟ ಜೋಸೆಫ್!


ಮಿಂಚಿನಂತೆ ಶುಭ್ರ
ಬೆಳಕು ಹೊಳೆಯಲು -ರಿನ್
RIN
DETERGENT WASHING TABLET
ಆನೆಮರಿ ಎತ್ತರದ ಸ್ವಚ್ಛ ಬಟ್ಟೆಗಳು!
ಸೋಪಿಗಿಂತ 50% ಹೆಚ್ಚು ಬಟ್ಟೆಗಳನ್ನು ರಿನ್ ಒಗೆಯುತ್ತದೆ!
ಲಿಂಟಾಸ್-RIN. 5-736 KN
ಹಿಂದುಸ್ಥಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ

ಥಾಮ್ಸನ್ : (ಚಿಂತನಾಪರವಶನಾಗಿ) ನೋಡು ಡಾರ್ಲಿಂಗ್, ನೀನು ಮಾಡಿ ತಿನಿಸುವ ರುಚಿರುಚಿ ದುಂಡುಗಡುಬೇ ಪರಮಾಣುವಿನ ಕಡುಬಿನ ಮಾದರಿಗೆ ಸ್ಫೂರ್ತಿ ಕೊಟ್ಟಿತಲ್ಲವೇ? ನೈಸರ್ಗಿಕವಾಗಿ ಪದಾರ್ಥವೆಲ್ಲವೂ ವಿದ್ಯುದ್ವಿಹೀನವಾಗಿರಬೇಕಾದ್ದರಿಂದ ಪರಮಾಣುಗಳೂ ಒಟ್ಟು ವಿದ್ಯುತ್‌ಶೂನ್ಯಕಣಗಳಾಗಿರಬೇಕು. ನೀನು ಮಾಡಿದ ಕಡುಬಿನ ಹೂರಣವೇ ಧನವಿದ್ಯುತ್ಪೂರಿತವೆಂದೂ ಋಣವಿದ್ಯುತ್ಕಣಗಳಾದ ಎಲೆಕ್ಟ್ರಾನುಗಳೇ ಕಡುಬಿನಲ್ಲಿದ್ದ ದ್ರಾಕ್ಷಿಗಳೆಂದೂ ನಾನು ವರ್ಣಿಸಿದ್ದೆನಷ್ಟೇ? ಈಗ ನಿನ್ನ ಕಡುಬಿಗೆ ಬಂತು ಸಂಚಕಾರ. ಅರ್ನಿ ಹೋಗಲಿ, ನನ್ನ ಮತ್ತು ಅರ್ನಿಯ ಶಿಷ್ಯ ಆ ಡ್ಯಾನಿಷ್ ಹುಡುಗ ನೀಲ್ಸ್ ಎಷ್ಟು ಚೂಟಿಯಾಗಿದ್ದಾನೆ ನೋಡು! ಅವರಿಬ್ಬರೂ ಸೇರಿ ನಿನ್ನ ಕಡುಬೇ ಪಚನವಾಗದಂತೆ ಮಾಡಿದರಲ್ಲ!

ಜಾರ್ಜ್: ಡ್ಯಾಡೀ, ನೀವೇನೇ ಅನ್ನಿರಿ, ಕಣಗಳೊಂದಿಗೆ ಸರಸವಾಡುತ್ತಿರುವ ನಿಮ್ಮ ಭೌತಸಿದ್ಧಾಂತಗಳನ್ನು ನಾನೊಪ್ಪಲಾರೆ. ಐನ್‌ಸ್ಟೀನ್ ಒಬ್ಬರು ಪ್ರಭಾಶಕ್ತಿಯೆಲ್ಲ ಕಣರೂಪಿ ಫೋಟಾನುಗಳದೇ ಎಂದು ಹೇಳಿ ನಿಮಗೆ ಬೆಂಬಲವಾಗಿದ್ದಾರೆ. ಪ್ಲಾಂಕ್ ಒಳ್ಳೇ ಸಮಯಕ್ಕೆ ಸಿಕ್ಕಿದ್ದಾರೆ ನಿಮಗೆಲ್ಲ. ನೀವೆಲ್ಲ ಕೂಡಿ ಇಪ್ಪತ್ತನೆಯ ಶತಮಾನವನ್ನು ಹೀಗೇಕೆ ಸ್ವಾಗತಿಸಿದಿರೋ ನಾ ಕಾಣೆ.

ರೋಜ್ : ಮಗೂ ಏನಾಯಿತೀಗ?

ಜಾರ್ಜ್ : (ಗಂಭೀರತೆ ನಟಿಸಿ) ಹೋಗಮ್ಮಾ, ಇವರೆಲ್ಲರ ಕೈಯಲ್ಲಿ ಸಿಕ್ಕು ಪರಮಾಣುಗಳು ಒದ್ದಾಡುತ್ತಿವೆ. ಡ್ಯಾಡಿ ಹೇಳಿದರು: ಪರಮಾಣುಗಳು ಕಡುಬಿನಂತೆ ಇವೆಯೆಂದು. ರುದರ್‌ಫೋರ್ಡ್, ಬೋಹ್ರ್ ಹೇಳುತ್ತಾರೆ: ಪರಮಾಣುಗಳು ಪುಟ್ಟ ಸೌರವ್ಯೂಹಗಳಂತಿವೆ ಎಂದು. ನಾಳೆ ನಾವು......

ಥಾಮ್ಸನ್ : (ಆನಂದಭಾವದಿಂದ) ಜಾರ್ಜ್, ಹೇಳು, ಹೇಳು! ನೀನೇನೆನ್ನುವೆ?

ಜಾರ್ಜ್ : (ಅಧೀರನಾಗಿ) ಬೇಡ ಡ್ಯಾಡಿ, ನಿಮ್ಮೆಲ್ಲರ ವಿಚಾರಗಳು ಸಂಪೂರ್ಣ ತಪ್ಪೆಂದು ನಾನನ್ನುತ್ತಿಲ್ಲ; ಆದರೆ ಸ್ಪಷ್ಟವಾಗದ ವಿಚಾರಗಳ ಬಗೆಗೆ ಒಮ್ಮೆಲೇ ನಿರ್ಣಯಕ್ಕೆ ಬರುವುದು......

ರೋಜ್ : (ನಡುವೇ ಬಾಯಿ ಹಾಕಿ) ಮಗೂ, ಅದಕ್ಕೇ ಇವರೆಲ್ಲ ಕೊಡುತ್ತಿರುವುದು ಮಾಡೆಲ್ಲುಗಳನ್ನು ಮಾತ್ರವಲ್ಲವೇ? ನೋಡು, ಹತ್ತು ಕೋಟಿ ಪರಮಾಣುಗಳನ್ನು ಸಾಲಾಗಿ ನಿಲ್ಲಿಸಿದರೆ ಅವು ಬರಿ ಒಂದು ಸೆಂಟಿಮೀಟರು ಉದ್ದದಲ್ಲಿ ಕೂಡುತ್ತವೆಂದು ಹೇಳಿದ ಮಾತ್ರದಿಂದ ಅವನ್ನೇನು ಹಿಡಿದು ನಿಲ್ಲಿಸಲಾಗುತ್ತದೆಯೇ?

ಜಾರ್ಜ್ : (ಸ್ವಲ್ಪ ಧೈರ್ಯದಿಂದ) ಬರಿ ಅಂಕಿಸಂಖ್ಯೆಗಳಿಂದ ನಮ್ಮ ಲೆಕ್ಕ ಮುಗಿಸಲು ಸಾಧ್ಯವಿಲ್ಲ ಮಮ್ಮಿ! ಡ್ಯಾಡಿ, ನೀವೇ ಹೇಳಿರಿ, ನಿಜವಾದ ಪರಮಾಣುಗಳು ಯಾವುದಾದರೂ ಮಾದರಿಯನ್ನು ಹೋಲಲು ಸಾಧ್ಯವೇ? ಹಣ್ಣಿನ ರುಚಿಯನ್ನು ಯಾವುದೇ ರುಚಿಯ ಮಾದರಿಯಿಂದ ವರ್ಣಿಸಲು ಆಗುವದೇ? ಸೇಬು ಸೇಬೇ, ಪರಮಾಣು ಪರಮಾಣುವೇ!

ಥಾಮ್ಸನ್ : ಶಾಭಾಸ್ ಜಾರ್ಜ್, ನಿನ್ನ ಬಗ್ಗೆ ನನಗೆ ಅಭಿಮಾನ ಉಕ್ಕುತ್ತಿದೆ ನೋಡು. ಗಟ್ಟಿಮುಟ್ಟಿಯಾದ ಅಭೇದ್ಯ ಕಣಗಳ ವ್ಯೂಹವೇ ಪರಮಾಣುವೆಂಬ ನಮ್ಮ ಇಂದಿನ ವಿಚಾರವನ್ನು ಬುಡಮೇಲು ಮಾಡುವ ಸಾಮರ್ಥ್ಯ ನಿನ್ನಲ್ಲಿ ಒಡೆದು ಕಾಣುತ್ತಿದೆ. ನೋಡು, ಪರಮಾಣುವಿನ ಸೂಕ್ಷ್ಮ ವಿಶ್ವವನ್ನು ಭೇದಿಸಿ ನೀನು ಅದರ ಅಂತಃಸತ್ವವೇನೆಂದು ತೋರಿಸಿದರೆ ಜಗತ್ತೇ ನಿನಗೆ ಕೃತಜ್ಞವಾಗುವದು.

ಜಾರ್ಜ್ : (ಮುಖ ಕೆಳಗೆ ಹಾಕಿ) ಡ್ಯಾಡಿ, ನನ್ನನ್ನೇಕೆ ಸಂಕೋಚಕ್ಕೀಡುಮಾಡುತ್ತಿದ್ದೀರಿ? ನಾನು ನುಡಿವ ಭವಿಷ್ಯವಿಷ್ಟೇ: ಈ ಶತಮಾನ ಕಳೆದರೂ ಪರಮಾಣು ಗರ್ಭದೊಳಗಿಂದ ಅದ್ಭುತ ರಹಸ್ಯ ಹೊರಬರುತ್ತಲೇ ಇರುತ್ತದಲ್ಲದೆ, ದೇವರ ಸೃಷ್ಟಿಯ ಸಂಕೀರ್ಣತೆ ಇಷ್ಟಕ್ಕೇ ಮುಗಿಯಿತೆಂದು ನಮಗಾರಿಗೂ ಸಮಾಧಾನ ಪಟ್ಟುಕೊಳ್ಳಲು ಸಾಧ್ಯವಿಲ್ಲ.

ರೋಜ್ : (ಮಾತು ಬದಲಿಸುತ್ತ) ಡಾರ್ಲಿಂಗ್, ರುದರಫೋರ್ಡರ ವಿಚಾರ ಏನೋ ಹೇಳುವೆನೆಂದಿದ್ದಿರಲ್ಲ?

ಥಾಮ್‌ಸನ್: (ಆಶ್ಚರ್ಯತಾಪೂರಿತ ವಾಣಿಯಲ್ಲಿ) ಅರ್ನಿಯೇ ಒಂದು ಪವಾಡವಾಗಿದ್ದಾನೆ! ಆತ ಆಲ್ಫಾ ಕಣಗಳೊಂದಿಗೆ ಮಾಡುತ್ತಿರುವ ಚೆಲ್ಲಾಟ ನೋಡಿದರೆ, ದೇವರೇ ಬೆರಳು ಕಚ್ಚಬೇಕು. ನೋಡಿದೆಯಾ? ನೀಲ್ಸ್ ಬೋಹ್ರ್‌ನೊಂದಿಗೆ ಸೇರಿ ಅದೆಂಥ ಅದ್ಭುತ ಪರಮಾಣು ಮಾದರಿ ಕೊಟ್ಟಿದ್ದಾನೆ! ಪರಮಾಣುವೆಲ್ಲ ಖಾಲಿ ಶೂನ್ಯ ಪ್ರದೇಶವೇ ಎಂದೂ, ಸೌರವ್ಯೂಹದಲ್ಲಿ ಸೂರ್ಯನಿದ್ದಂತೆ ಪರಮಾಣು ಕೇಂದ್ರದಲ್ಲಿ ಭಾರವಾದ ಧನವಿದ್ಯುತ್ತಿನ ಬೀಜವಿದೆಯೆಂದೂ ಹೇಳುತ್ತಾನಷ್ಟೇ? ಸೂರ್ಯನ ಸುತ್ತ ಗ್ರಹಗಳು ಕಕ್ಷಾಬದ್ಧವಾದಂತೆ, ಪರಮಾಣು ಬೀಜದ ಸುತ್ತ ವಿದ್ಯುತ್‌ಕಣಗಳಾದ ಎಲೆಕ್ಟ್ರಾನುಗಳೇ ಸುತ್ತುತ್ತಿವೆ ಅಲ್ಲವೇ? ಮ್ಯಾಕ್ಸವೆಲ್ಲನ ಲೆಕ್ಕ ಹಿಡಿದರೆ ಈ ಕಕ್ಷೆಗಳು ಸ್ಥಾಯಿಯಾಗಲೇಬಾರದು. ಆದರೆ ನೀಲ್ಸ್ ಅವಕ್ಕೆ ವಿಶೇಷ ಸೌಲಭ್ಯ ಕೊಟ್ಟು ನಿಲ್ಲಿಸಿದ್ದಾನೆ! ಸ್ಪೆಕ್ಟ್ರಾಸ್ಕೋಪಿಯ ಸಾಕ್ಷಿ ಸಿಗದೇ ಹೋಗಿದ್ದರೆ ನೀಲ್ಸನ ಮಾತು ಯಾರು ಕೇಳುತ್ತಿದ್ದರು?

ಜಾರ್ಜ್: (ತನ್ನಷ್ಟಕ್ಕೆ) ಎಲೆಕ್ಟ್ರಾನುಗಳು ಕಕ್ಷೆಯಿಂದ ಕಕ್ಷೆಗೆ ಹಾರಿದಾಗ ಪ್ರಭಾಶಕ್ತಿ—ನಮ್ಮ ಬೆಳಕು—ಹೊರಸೂಸುತ್ತದೆಯಂತೆ? ಹಾಗಿದ್ದರೆ ಕಣಗಳಿಗೂ ತರಂಗಗಳಿಗೂ ಏನು ಸಂಬಂಧ?

ರೋಜ್: (ಆಸ್ಥೆಯಿಂದ) ತಾಳು ಮಗೂ, ನನ್ನ ಕಡುಬಿನ ದ್ರಾಕ್ಷೆಗಳನ್ನೇ ಕಕ್ಷಾಬದ್ಧವಾಗಿ ಮಾಡಿದ್ದಾರೆ ನಿನ್ನ ಡ್ಯಾಡಿ! ಹೂಂ, ಈಗ ಪರಮಾಣುವಿನ ಅವಸ್ಥೆ ಏನಾಗಿದೆ ಹೇಳಿರಿ.

ಥಾಮ್‌ಸನ್: (ಅಂತಿಮ ನಿರ್ಣಯ ಸಾರುವಂತೆ) ಜಗತ್ತಿನ ವಸ್ತುವೆಲ್ಲಾ ಪರಮಾಣುಗಳೆಂಬ ಮೂಲ ಇಟ್ಟಿಗೆಗಳಿಂದಾಗಿದೆ. ಪರಮಾಣು ವಿದ್ಯುತ್‌ಶೂನ್ಯ ಕಣವಿದ್ದು ಅದರ ಗರ್ಭವೆಲ್ಲ ಬಯಲೇ ಬಯಲಾಗಿದೆ! ಪರಮಾಣು ಕೇಂದ್ರವು ಧನಬೀಜವಾಗಿದ್ದು ಪರಮಾಣುವಿನ ದ್ರವ್ಯವೆಲ್ಲಾ ಅಲ್ಲಿ ಕೇಂದ್ರೀಕೃತವಾಗಿದೆ. ಅದರಲ್ಲಿ—ನಿಮಗೀಗಲೇ ಗೊತ್ತಾಗಿದ್ದಂತೆ—ಪ್ರೋಟಾನುಗಳೆಂಬ ಮೂಲಕಣಗಳಿವೆ ಮತ್ತು ನಿರ್ದಿಷ್ಟ ಸಂಖ್ಯೆಯಲ್ಲಿ ಎಲೆಕ್ಟ್ರಾನುಗಳೂ ಇವೆ. ಅಂದರೆ ಇಡೀ ವಿಶ್ವದ ವಸ್ತುವೆಲ್ಲಾ ಪ್ರೋಟಾನು ಮತ್ತು ಎಲೆಕ್ಟ್ರಾನುಗಳೆಂಬ ಮೂಲಕಣಗಳಿಂದ ನಿರ್ಮಿತವಾಗಿದೆ. ಇವೇ ವಿಶ್ವದ ನಿಜವಾದ ಇಟ್ಟಿಗೆಗಳು...

ಜಾರ್ಜ್: (ತನ್ನಷ್ಟಕ್ಕೆಂಬಂತೆ) ಮತ್ತು ಪ್ರೋಟಾನುಗಳನ್ನು ಹೊಂದಿದ ಪರಮಾಣು ಬೀಜದ ರಹಸ್ಯ ಭೇದಿಸಿದರೆ ವಿಶ್ವದ ಹೂರಣ ಹೊರಬಿದ್ದೀತು....

(ತೆರೆ)

ದೃಶ್ಯ ೪

ಹಿಮ್ಮೇಳ :

ವಿಶ್ವಸೌಧದಾ ಇಟ್ಟಿಗೆ ನಾವು
ನಶ್ವರನರರೇ ಕೇಳಿರಿ ನೀವು
ಸುಸ್ವರಮೇಳದಿ ಹಾಡಲು ನಾವು
ವಿಶ್ವದ ತುಂಬಾ ಬಂದಿತು ಜೀವಾ !
ವಿಶ್ವಸೌಧದಾ ಇಟ್ಟಿಗೆ ನಾವು......

[ಎರಡನೆಯ ಮಹಾಯುದ್ಧದ ಮುಕ್ತಾಯ ಕಾಲ. ಡಾ. ನೀಲ್ಸ್ ಬೋಹ್ರ್ ಸ್ವದೇಶವಾದ ಡೆನ್ಮಾರ್ಕಿಗೆ ಮರಳಿದ್ದಾರೆ. "ಇನ್‌ಸ್ಟಿಟ್ಯೂಟ್ ಫಾರ್ ಥಿಯರಿಟಿಕಲ್ ಫಿಸಿಕ್ಸ್"ನ ಕ್ಯಾಂಪಸ್. ಬೋಹ್ರರ ಶಿಷ್ಯರಿಬ್ಬರು ಅವರ ದರ್ಶನಕ್ಕೆ ಬಂದಿದ್ದಾರೆ.]

ಶಿಷ್ಯ ೧ : ಸರ್, ಯುದ್ಧಪೂರ್ವದಲ್ಲಿ ಅರ್ಧಕ್ಕೆ ನಿಲ್ಲಿಸಿದ್ದ ಸಂಶೋಧನೆಯನ್ನು ಮುಂದುವರಿಸಲೇ?

ಶಿಷ್ಯ ೨ : (೧ ನೆಯವನಿಗೆ) ಪ್ರೊಫೆಸರರು ವ್ಯಗ್ರಚಿತ್ತರಾಗಿದ್ದಾರೆ. ಈಗ ಅವರಿಗೆ ವಿಶ್ರಾಂತಿ ಅವಶ್ಯ.

ಬೋಹ್ರ್ : ಓ! ಪರಮಾಣುಗಳೆಷ್ಟು ಸುದೈವಿ! ನಮ್ಮಲ್ಲಿದ್ದ ಯಾವ ರಾಜಕೀಯವೂ ಅವನ್ನು ದೇಶದಿಂದ ದೇಶಕ್ಕೆ ಓಡಿಸುವದಿಲ್ಲ. ನಾನು ಬೇಸರಪಟ್ಟುಕೊಂಡಿದ್ದೇನೆಂದು ನೀವೇನೂ ಚಿಂತಿಸಬೇಡಿ. ನನ್ನ ಪೂಜ್ಯಗುರುಗಳಾಗಿದ್ದ ರುದರಫೋರ್ಡರ ನೆನಪಾಗಿತ್ತು, ಅಷ್ಟೇ.

ಶಿಷ್ಯ ೧ : (ತಲೆ ಕೆಳಗೆ ಹಾಕಿ) ಕ್ಷಮಿಸಿ ಸರ್, ತಮ್ಮ ಗುರುಗಳು ಭೌತವಿಜ್ಞಾನಕ್ಕೆ ಸಲ್ಲಿಸಿದ ಸೇವೆ ನೆನಪಾದರೆ ನನ್ನಂಥ ಅಲ್ಪರೆಲ್ಲ ಎಷ್ಟು ಅಸಮರ್ಥರೆಂಬ ಅರಿವು ಮೂಡುತ್ತದೆ. ನಾನು ಸಂಶೋಧನೆಗಾಗಿ ಅವಸರಪಡಿಸುವುದೂ ತಪ್ಪೇ ಸರಿ.

ಬೋಹ್ರ್ : ಹಾಗೆನ್ನಬೇಡಿ. ಎಲ್ಲರೂ ತಮ್ಮ ಪಾಲಿನ ಕರ್ತವ್ಯ ಮಾಡಿದಾಗಲೇ ನನ್ನ ಗುರುಗಳ ಆತ್ಮಕ್ಕೆ ಶಾಂತಿ ಸಿಕ್ಕೀತು! ನಾಳೆ ಒಂದು ಪ್ರೆಸ್ ಕಾನ್ಫರನ್ಸ್ ಕರೆದಿದ್ದೇನೆ. ಅಲ್ಲಿ ಏನು ಹೇಳಿಕೆ ಕೊಡಬೇಕೆಂದು ಚಿಂತಿಸುತ್ತಿದ್ದೇನೆ.

ಶಿಷ್ಯ ೨ : ಪರಮಾಣು ಮತ್ತು ಪರಮಾಣು ಬೀಜದ ಬಗೆಗೆ ಇಂದು ಮನುಷ್ಯನಿಗೆಷ್ಟು ತಿಳಿದಿದೆ ಎಂದು ಹೇಳಿದರೆ ಹೇಗೆ ಸರ್?

ಶಿಷ್ಯ ೧ : ಅವರಲ್ಲೂ ಪರಮಾಣುಬಾಂಬಿನಿಂದಾಗಿ ಜಗತ್ತೇ ವಿಜ್ಞಾನಿಗಳ ಮೇಲೆ ಸಿಡಿದೇಳುತ್ತಿರುವಾಗ, ತಮ್ಮ ಹೇಳಿಕೆ ಎಷ್ಟೋ ತಪ್ಪು ತಿಳುವಳಿಕೆಗಳನ್ನು ದೂರಮಾಡಬಹುದು.

ಬೋಹ್ರ್ : ಉತ್ತಮ ವಿಚಾರ. ನನ್ನ ಗುರುಗಳ ಸಂಶೋಧನೆಗಳ ಬಗೆಗೆ ಎಷ್ಟು ಹೇಳಿದರೂ ಸಾಲದು.

ಶಿಷ್ಯ ೨ : ಹೇಳಿ, ಹೇಳಿ ಸರ್. ತಮ್ಮ ಮುಖದಿಂದ ಪರಮಾಣುವಿನ ಕಥೆ ಕೇಳಲೂ ಪುಣ್ಯ ಮಾಡಿಬಂದಿರಬೇಕು!

ಬೋಹ್ರ್ : ವಸ್ತುವೆಲ್ಲ ಪರಮಾಣುಗಳೆಂಬ ಅತಿ ಸೂಕ್ಷ್ಮ ಕಣಗಳ ಸಮೂಹವೆಂದು ನೀವು ಹೈಸ್ಕೂಲಿನಲ್ಲೇ ಕಲಿತಿರುವಿರಷ್ಟೇ? ಪರಮಾಣುಗಳು ಅವಿಭಾಜ್ಯವಲ್ಲ, ಅವುಗಳಿಗೆ ಅಂತರ್ರಚನೆ ಉಂಟೆಂದು ಸರ್ ಜೆ. ಜೆ. ತೋರಿಸಿದರು:


ಶಿಷ್ಯ ೧ : ಅವರೂ ತಮ್ಮ ಗುರುಗಳಲ್ಲವೇ ಸರ್?

ಬೋಹ್ರ್ : ಬರಿ ನನ್ನ ಗುರುಗಳಷ್ಟೇ ಅಲ್ಲ, ಅವರು ನನ್ನ ಗುರು ರುದರ್‌ಫೋರ್ಡರ ವಿದ್ಯಾಪಿತ ಕೂಡ! ಇರಲಿ. ಪರಮಾಣುಗಳೆಲ್ಲ ಹೆಚ್ಚು ಕಡಿಮೆ ಪೊಳ್ಳಾಗಿದ್ದು, ಅವುಗಳ ಕೇಂದ್ರದಲ್ಲಿ ಧನವಿದ್ಯುತ್ತಿನ ಉಂಡೆ ಪರಮಾಣುಬೀಜ ಇರುತ್ತದೆಂದು ತೋರಿಸಿದವರು ನನ್ನ ಗುರುಗಳೇ! ಅಷ್ಟೇ ಏಕೆ, ಒಂದು ಪರಮಾಣುವನ್ನು ಪರಿವರ್ತಿಸಿ ಮತ್ತೊಂದನ್ನಾಗಿ ಮಾಡಲು ಸಾಧ್ಯವೆಂದು ತೋರಿಸಿದವರೂ ಅವರೇ.

ಶಿಷ್ಯ ೨ : ಹಿಂದಿನ ಆಲ್ಕೆಮಿಸ್ಟರ ಹಾಗೆ.

ಶಿಷ್ಯ ೧ : ಲಾರ್ಡ್ ರುದರ್‌ಫೋರ್ಡರು ಬರೆದ ಪುಸ್ತಕದ ಹೆಸರೂ 'ದಿ ನ್ಯೂ ಆಲ್ಕೆಮಿ' ಎಂದಲ್ಲವೇ ಸರ್?

ಬೋಹ್ರ್ : ೯೨ ಕ್ಕಿಂತ ಹೆಚ್ಚು ಮಾದರಿಯ ಪರಮಾಣುಗಳಿವೆ ಎಂದು ಗೊತ್ತಾಗಿದ್ದರೂ ಅವೆಲ್ಲ ಕೆಲವೇ ಮೂಲ ಕಣಗಳಿಂದಾಗಿರಬೇಕೆಂಬ ವಿಚಾರ ಕೊಟ್ಟವರೂ ಅವರೇ. ಮಹಾತ್ಮ ಮೆಂಡೆಲೀಫ್ ಅವನ್ನೆಲ್ಲ ಪಾರಿವಾಳದ ಗೂಡುಗಳಂಥ ಆವರ್ತ ಕೋಷ್ಟಕದಲ್ಲಿ ಹೊಂದಿಸಿಟ್ಟ.



ಶಿಷ್ಯ ೧ : ಸರ್, ಶಾಡ್‌ವಿಕ್ಕರು ಕಂಡುಹಿಡಿದ ನ್ಯೂಟ್ರಾನನ್ನು ಹಿಡಿದು ಬರಿ ಮೂರೇ ಮೂಲ ಕಣಗಳೆಂದು ಶಾಲೆ ಕಾಲೇಜುಗಳಲ್ಲಿ ಕಲಿಸುತ್ತಾರಲ್ಲ? ಪರಮಾಣು ಅಷ್ಟು ಸುಲಭರಚನೆಯದಲ್ಲವಷ್ಟೇ?

ಬೋಹ್ರ್ : ಹೌದು! ನೀವನ್ನುವುದು ನಿಜ. ಪರಮಾಣುಬೀಜದಲ್ಲಿ ಸುಮಾರು ಅಷ್ಟಷ್ಟೇ ಸಂಖ್ಯೆಯಲ್ಲಿ ನ್ಯೂಟ್ರಾನುಗಳೂ ಪ್ರೋಟಾನುಗಳೂ ಇರುತ್ತವೆಂದರೂ, ವಿದ್ಯುದ್ಬಲಗಳನ್ನು ಮೀರಿಕೊಂಡು ಅವೆಲ್ಲ ಒಂದೇ ಉಂಡೆಯಲ್ಲಿ ಹೇಗಿರಬಹುದೆಂಬುದು ಸಮಸ್ಯೆಯಾಗಿತ್ತು. ಜಪಾನಿನ ಯುಕಾವಾ ಇದಕ್ಕೆ ಸರಿಯಾದ ಉತ್ತರ ಕೊಟ್ಟರು ನೋಡಿ. ಧನಕಣಗಳಾದ ಪ್ರೋಟಾನುಗಳಾಗಲೀ, ವಿದ್ಯುದ್ವಿಹೀನಕಣಗಳಾದ ನ್ಯೂಟ್ರಾನುಗಳಾಗಲೀ ಸುಮ್ಮನೇ ಇರುವುದಿಲ್ಲ. ಅವು

ಕೆಂಡಿನಲ್ಲಿ ಕೋಟ್ಯನುಕೋಟಿ ಬಾರಿ ತಮ್ಮ ತಮ್ಮೊಳಗೆ ಮೆಸಾನುಗಳೆಂಬ ಮೂಲಕಣಗಳನ್ನು ವಿನಿಮಯ ಮಾಡಿಕೊಳ್ಳುತ್ತಿರುತ್ತವೆ. ಈ ವಿನಿಮಯದಲ್ಲಿ ಒಳಗೊಂಡ ಶಕ್ತಿಯೇ ಬೀಜವನ್ನು ಗಟ್ಟಿಯಾಗಿ ಬಂಧಿಸಿಟ್ಟ ಬಲವಾಗಿದೆ.

ಶಿಷ್ಯ ೧ : ನನ್ನ ಅಜ್ಞಾನ ಕ್ಷಮಿಸಿರಿ ಸರ್—ಆದರೆ ಮೂಲಕಣಗಳನ್ನು ಬೇರೆ ಕಣಗಳಿಂದ ಬೇರೆಯಾಗಿ ಗುರುತಿಸುವುದು ಹೇಗೆ ಸರ್?

ಬೋಹ್ರ್ : ಇದು ಚಿಕ್ಕದಾದರೂ ಮೂಲಭೂತ ಪ್ರಶ್ನೆ. ಯಾವ ಕಣದ ಅಂತರ್ರಚನೆ ನಮಗೆ ಇನ್ನೂ ಗೊತ್ತಾಗಿಲ್ಲವೋ ಅದೇ ಮೂಲಕಣವೆಂದರಾಯಿತು. ಏಕೆಂದರೆ ತರ್ಕಬದ್ಧವಾಗಿ, ಅಂಥ ಮೂಲಕಣಗಳಿಂದಾದುದೆಂದು ಹೇಳಬಹುದೇ ಹೊರತು, ಆ ಮೂಲಕಣಗಳು ಮತ್ತಾವ ಸೂಕ್ಷ್ಮಕಣಗಳಿಂದಾಗಿವೆ ಎಂದು ಹೇಳುವುದು ಅಸಾಧ್ಯ.

ಶಿಷ್ಯ ೨ : ಸರ್, ಈಗಾಗಲೇ ಪ್ರೋಟಾನ್, ಎಲೆಕ್ಟ್ರಾನ್ ಮತ್ತು ನ್ಯೂಟ್ರಾನ್ ಅಲ್ಲದೆ ಹತ್ತಾರು ಮೂಲಕಣಗಳು ಶೋಧವಾಗಿದ್ದು ವಿಚಿತ್ರವಲ್ಲವೇ?

ಬೋಹ್ರ್ : ಇನ್ನೂ ಕಾದು ನೋಡಿರಿ. ಬರುವ ದಶಕಗಳಲ್ಲಿ ನೂರಾರು ಮೂಲಕಣಗಳ ಶೋಧವಾದರೆ ಏನೂ ಆಶ್ಚರ್ಯವಲ್ಲ.

ಶಿಷ್ಯ ೧ : ವಿಶ್ವದ ಮೂಲ ಇಟ್ಟಿಗೆಗಳಾವವು ಎಂಬ ಸಮಸ್ಯೆ ಇತ್ಯರ್ಥವಾಗದೇ ಹೋಯಿತಲ್ಲ ಸರ್?

ಬೋಹ್ರ್ : ಅದು ಇತ್ಯರ್ಥವಾಗದಿದ್ದರೆ ಏನೂ ಹಾನಿ ಇಲ್ಲ.

ಶಿಷ್ಯ ೨ : (ಅಪನಂಬಿಕೆಯಿಂದ) ತಾವು ಹಾಗೆನ್ನುವುದೇ ಸರ್......?

ಬೋಹ್ರ್ : ಮನುಷ್ಯನಿಗೆ ಅಂತಿಮ ಸತ್ಯಗಳು ತಿಳಿಯಬೇಕೆಂದೆಲ್ಲಿ ಹೇಳಿದೆ? ಆತ ಸತ್ಯದ ಸೂಕ್ಷ್ಮ ಪದರುಗಳನ್ನು ಬಿಡಿಸುತ್ತಾ ಹೋದಂತೆ ಆತನ ಜ್ಞಾನವಿಕಾಸ ಮುಂದುವರೆಯುತ್ತಲೇ ಹೋಗುತ್ತದಷ್ಟೇ? ಕೊನೆಯ ಪದರನ್ನು ತೆರೆದೆವೆಂದು ಹೇಳಿದ ದಿನ ಮನುಷ್ಯ ದೇವರೇ ಆಗುತ್ತಾನೆ!

ಶಿಷ್ಯ ೧ : ಒಳ್ಳೆಯ ಆಕರ್ಷಕ ಆದರ್ಶ ಸರ್!

ಬೋಹ್ರ್ : ಅದು ವಿಜ್ಞಾನಿಯ ಗುರಿಯೂ ಹೌದು.

ಶಿಷ್ಯ ೨ : ಆದರೆ ಪರಮಾಣು ಬಾಂಬು...

ಬೋಹ್ರ : ಅದೊಂದು ರಾಜಕಾರಣಿಗಳ ಕುತಂತ್ರ ಮಾತ್ರ! ವಿಜ್ಞಾನಿಯನ್ನು ರಾಜಕೀಯ ಸೂಕ್ಷ್ಮಕ್ಕೆಳೆದು ಪರಮಾಣುವಿನ ಅಗಾಧ ಶಕ್ತಿಯನ್ನು ಹಾಗೆ ವಿನಾಶಕ್ಕೆ ಬಳಸಿದ್ದು ಎಷ್ಟೂ ಸರಿಯಲ್ಲ.

ಶಿಷ್ಯ ೧ : ನಾಳಿನ ಪ್ರೆಸ್ ಕಾನ್ಫರನ್ಸಿನಲ್ಲಿ ಜಗತ್ತಿಗೆ ಈ ವಿಚಾರ ಸ್ಪಷ್ಟವಾದೀತು ಸರ್!

ಬೋಹ್ರ್ : ಹಾಗಾಗಲೆಂದು ದೇವರನ್ನು ಪ್ರಾರ್ಥಿಸೋಣ.

(ತೆರೆ)

ದೃಶ್ಯ ೫

ಹಿಮ್ಮೇಳ :

ವಿಶ್ವಸೌಧದಾ ಇಟ್ಟಿಗೆ ನಾವು
ನಶ್ವರನರರೇ ಕೇಳಿರಿ ನೀವು
ಸುಸ್ವರ ಮೇಳದಿ ಹಾಡಲು ನಾವು
ವಿಶ್ವದ ತುಂಬಾ ಬಂದಿತು ಜೀವಾ
ವಿಶ್ವಸೌಧದಾ ಇಟ್ಟಿಗೆ ನಾವು.........

[ತೆರೆ ಸರಿದಾಗ, ವಿಜ್ಞಾನಿಯೊಬ್ಬ ಪ್ರಯೋಗಶಾಲೆಯಲ್ಲಿ ದುಡಿದು ಬಳಲಿ ಅಲ್ಲಿಯೇ ಒರಗಿದ ದೃಶ್ಯ. ಸೀನ್ ಟ್ರಾನ್ಸಫರು ತಂತ್ರದಿಂದ ಆತನ ಕನಸನ್ನು ತೋರಿಸಬೇಕು. ಬೇಕಾದರೆ ಕನಸು ಕಾಣುತ್ತಿರುವ ವಿಜ್ಞಾನಿಯನ್ನು ಛಾಯಾ ರೂಪದಲ್ಲಿ— silhouette ತೋರಿಸಬಹುದು. ವಿಜ್ಞಾನಿಯ ಛಾಯೆ ಮಾಯವಾಗಿ ವಿಚಿತ್ರ ನಗರವೊಂದರ ದೃಶ್ಯ ಕಾಣುತ್ತದೆ. ಸ್ವಾಭಾವಿಕವಾಗಿಯೇ ಇದು ಕನಸಿನ ದೃಶ್ಯ. ವಿಜ್ಞಾನಿ ಈಗ ಓಡಾಡಿ ಮಾತನಾಡಿದರೆ ಅದೆಲ್ಲ ಕನಸಿನಲ್ಲಿ ಎಂದು ನೆನಪಿಡಬೇಕು.]

ವಿಜ್ಞಾನಿ : (ಹಾದಿ ತಪ್ಪಿದವರಂತೆ) ನಾನೆಲ್ಲಿ ಬಂದೆ? ಇದೇನು ವಿಚಿತ್ರ ನಗರ? ರಾಜಶೇಖರ

ಭೂಸನೂರುಮಠನಂಥ ತಿಳಿಗೇಡಿಗಳು ಬರೆದು ಚಿತ್ರಿಸಿದಂಥ ನಗರವಿದೆಂದು ಕಾಣುತ್ತದೆ. (ಅತ್ತಿತ್ತ ನೋಡಿ) ಇಲ್ಲಿ ಎಲ್ಲರೂ ನಿದ್ದೆ ಮಾಡುತ್ತಿದ್ದಂತೆ ಕಾಣುತ್ತದೆ. ಎಲ್ಲಿಯೂ ಚಟುವಟಿಕೆಯೇ ಇಲ್ಲ!

[ಒಬ್ಬ ಗಂಡಸು ಮತ್ತು ಒಬ್ಬಳು ಹೆಂಗಸು ಗಾಬರಿಯಾಗಿ ಸ್ಟೇಜಿನ ಮೇಲೆ ಓಡುತ್ತ ಬರುತ್ತಾರೆ. ಇಬ್ಬರೂ ಘ್ಯಾಂಟಮರಂತೆ ಮುಖವಾಡ ಹಾಕಿದ್ದಾರೆ. ಗಂಡಸು ಸಂಪೂರ್ಣ ಕೆಂಪು ಬಟ್ಟೆ ಮತ್ತು ಹೆಂಗಸು ಸಂಪೂರ್ಣ ನೀಲಿ ಬಟ್ಟೆ ಧರಿಸಿದ್ದಾರೆ.]

ಹೆಂಗಸು: (ಚೀರುತ್ತ) ಕಟುಕರು! ನನ್ನ ಮಾನಭಂಗ ಮಾಡಿದ್ದಲ್ಲದೆ ಈಗ ಖೂನಿ ಮಾಡಲು ಬರುತ್ತಿದ್ದಾರೆ. ಯಾರಾದರೂ ಪುಣ್ಯಾತ್ಮರು ರಕ್ಷಿಸಿರಿ! ರಕ್ಷಿಸಿರಿ!!

ಗಂಡಸು: (ಚೀರುತ್ತ) ಥೂ! ನಾಚಿಕೆಗೇಡು!! ಎಲ್ಲರನ್ನೂ ಬಿಟ್ಟು ನಮಗೇ ಗಂಟು ಬೀಳಬೇಕೇ? ನಮ್ಮ ಬಾಳು ಮೂರಾಬಟ್ಟೆ ಮಾಡಿದ್ದಾರೆ. ಪೋಲೀಸರೇ ಇಲ್ಲವೇ ಈ ಮಹಾನಗರದಲ್ಲಿ?

[ವಿಜ್ಞಾನಿ ಗಂಡಸಿನ ರಟ್ಟೆ ಹಿಡಿದು ನಿಲ್ಲಿಸುತ್ತಾನೆ. ಈಗ ಗಂಡಸಿಗೂ ಹೆಂಗಸಿಗೂ ಆತನು ಅಲ್ಲಿಯೇ ಇದ್ದ ಪರಿಜ್ಞಾನವುಂಟಾಗಿ, ಒಮ್ಮೆಲೆ ಆತನ ಕಾಲಿಗೆ ಇಬ್ಬರೂ "ರಕ್ಷಿಸಿ" ಎನ್ನುತ್ತ ಬೀಳುವರು.]

ವಿಜ್ಞಾನಿ: (ಸ್ವಗತ) ಹಳೆಯ ನಾಟಕಗಳಲ್ಲಿಯಂತೆ ಸ್ವಗತ ಮಾತನಾಡಬೇಕಲ್ಲ? ಏನು ಮಾಡಬೇಕು? ಪ್ರೇಕ್ಷಕರಿಗೆ ಕೇಳಿಸುವಂತೆ ಮಾತನಾಡಿದರೆ ಇವರಿಬ್ಬರಿಗೂ ಕೇಳಿಬಿಡುತ್ತದೆ. ಆಗ ಅದು ಪ್ರಕಟವಾಗುತ್ತದೆ! ಇರಲಿ, ಸ್ವಗತ ಎಂದು ಗಟ್ಟಿಯಾಗಿ ಹೇಳಿಯೇ ಪ್ರಾರಂಭಿಸುವೆ. (ಗಂಟಲು ಸರಿಪಡಿಸಿಕೊಂಡು, ಮೈಕಿನ ಹತ್ತಿರ ಸರಿದು) ಸ್ವಗತ. ಇವರಾರೋ! ಗಂಡ ಹೆಂಡಿರೆಂದು ಕಾಣುತ್ತದೆ. ನನಗೇ ದಿಕ್ಕು ತಿಳಿಯದಿದ್ದಾಗ ಇವರನ್ನು ಕಟ್ಟಿಕೊಂಡು ಏನು ಮಾಡಲಿ? ಆಗಲಿ, ಇನ್ನು ಪ್ರಕಟ ಮಾತನಾಡೋಣ. (ಪ್ರಕಟವಾಗಿ, ಮೈಕಿನಿಂದ ದೂರ ಸರಿದು ಅವರಿಬ್ಬರ ಹತ್ತಿರ ಹೋಗಿ ಇಬ್ಬರಿಗೂ ಏಳುವಂತೆ ಸನ್ನೆ ಮಾಡಿ) ಏನಪ್ಪಾ? ಏನಮ್ಮಾ? ನೀವು ಯಾರು? ಏನು ಸಮಾಚಾರ? ಯಾರಿಂದ ರಕ್ಷಿಸಬೇಕು? ಆಂ೦೦೦! ?

ಹೆಂಗಸು: ಒಳ್ಳೆಯ ಕೆಲಸವಾಯಿತು ಬಿಡಿ. ನಿಮ್ಮನ್ನು ನೋಡಿದರೆ ಬೇರಾವುದೋ ಲೋಕದಿಂದ ಬಂದಂತೆ ಕಾಣುತ್ತದೆ. ಏನು ರಾಯರೇ, ನಾನು ಹೇಳುವುದು ನಿಜ ತಾನೇ?

ವಿಜ್ಞಾನಿ: ಹೌದಪ್ಪಾ ಹೌದು! ನಾನು ಹಾದಿ ತಪ್ಪಿ ಇಲ್ಲಿ ಬಂದಿದ್ದೇನೆ. ಇದಾವ ಊರು?

ಹೆಂಗಸು: ಪರಮಾಣುನಗರ......

ಗಂಡಸು: ಘನ ಸ್ಥಿತಿಯಲ್ಲಿದೆಯೆಂದು ಸರ್ಟಿಫೈ ಆಗಿದೆ.

ವಿಜ್ಞಾನಿ: ಓ! ಹಾಗಾದರೆ ಇದು ಬೇರೆ ಲೋಕವೇ ಆಯಿತು. ಆ ಸರ್ಟಿಫಿಕೇಟು ಕೊಟ್ಟವರಾರು?

ಗಂಡಸು: (ಹಲ್ಲು ಕಡಿಯುತ್ತ) ಮತ್ತಾರು? ಆ ರಾಕ್ಷಸ ವಿಜ್ಞಾನಿಗಳು!

ವಿಜ್ಞಾನಿ! (ದಿಗಿಲಿನಿಂದ) ಅರೇ! ಹಾಗೆಂದರೆ ಹೇಗ್ರೀ? ನಾನೂ ವಿಜ್ಞಾನಿ......

['ಅಯ್ಯೊಪ್ಪಾ! ಸತ್ತೆವೋS!!' ಎಂದು ಚೀರುತ್ತ ಅವರಿಬ್ಬರೂ ದೆವ್ವ ನೋಡಿದವರಂತೆ ಬೆದರಿ ಕಾಲಿಗೆ ಬುದ್ಧೀ ಹೇಳುವರು.]

ವಿಜ್ಞಾನಿ: ಎಲಾ ಇವನ! ಏನು ವಿಚಿತ್ರವಪ್ಪಾ ಇದು? ಆಗಲಿ, ಈಗ ಮತ್ತಾರಾದರೂ ಬಂದರೆ ನಾನು ವಿಜ್ಞಾನಿ ಎಂದು ಹೇಳಲೇಬಾರದು.

[ಇಬ್ಬರು ಮುಸುಕು ಹಾಕಿದ ದಪ್ಪ ವ್ಯಕ್ತಿಗಳು—ಅವರು ಗಂಡಸೂ ಅಲ್ಲ, ಹೆಂಗಸೂ ಅಲ್ಲ— ಓಡುತ್ತ ಸ್ಟೇಜಿನ ಮೇಲೆ ಬರುತ್ತಾರೆ.]

ಇಬ್ಬರೂ: (ಏಕಕಾಲಕ್ಕೆ) ರಕ್ಷಿಸಿ, ರಕ್ಷಿಸಿ! ನಮ್ಮ ಶಕ್ತಿ ಹಿಂಡಿಕೊಳ್ಳುತ್ತಾರಂತೆ. ಬೇರೆ ಯಾರೂ ಸಿಕ್ಕಲಿಲ್ಲವೇ ಇವರಿಗೆ? (ಒಮ್ಮೆಲೆ ವಿಜ್ಞಾನಿಯನ್ನು ನೋಡಿ) ನೀವೇನು ಪೋಲೀಸರೇನು ?

ವಿಜ್ಞಾನಿ: (ಸ್ವಲ್ಪ ವಿಚಾರ ಮಾಡಿ) ಹಾಂ...... ಹಾಂ! ಹೌದು. ಯಾರವರು? ತೋರಿಸಬರ್ರಿ, ಮಾಡುವೆ ಅವರಿಗೆ ಚೆನ್ನಾಗಿ...

ಒಬ್ಬ: (ಸಂಶಯದಿಂದ) ಆದರೆ ನೀವು ಮುಪ್ಪಿಯಲ್ಲಿದ್ದಂತೆ ಕಾಣುತ್ತದೆ.

ವಿಜ್ಞಾನಿ: (ಆತುರದಿಂದ) ಹಾಂ...ಹಾಂ! ಹೌದ್ಹೌದು.

ಇನ್ನೊಬ್ಬ: (ಇನ್ನಷ್ಟು ಸಂಶಯದಿಂದ) ಇದೆಂಥ ಮುಪ್ಪಿ? ಇವನು ಮನುಷ್ಯನಂತೆ ಕಾಣುತ್ತಾನಲ್ಲ?

ವಿಜ್ಞಾನಿ: (ಆತುರದಿಂದ, ಗೆಳೆತನ ಮಾಡುವವನಂತೆ) ಹಾಂ... ಹಾಂ! ಹೌದ್ಹೌದು. ನಾನು ಮನುಷ್ಯನೇ ಹೌದು. ಮತ್ತೇನೆಂದು ತಿಳಿದಿರಿ?

ಇಬ್ಬರೂ: (ಚೀರುವ ದನಿಯಲ್ಲಿ) ಅಯ್ಯಯ್ಯಪ್ಪೋ! ಸತ್ತೆವ್ರೋ...(ದೆವ್ವ ನೋಡಿದವರಂತೆ ಓಡಿಹೋಗುತ್ತಾರೆ. ವಿಜ್ಞಾನಿ ದಿಗ್ಭ್ರಮೆಯಿಂದ ಅವರನ್ನು ನೋಡುತ್ತಾನೆ.)

ವಿಜ್ಞಾನಿ: (ತಪ್ಪು ಮಾಡಿದವರಂತೆ) ಛೀ! ನಾನು ಮನುಷ್ಯನೆಂದು ಕೂಡ ಹೇಳಬಾರದಿತ್ತು.

[“ಲಾಲಲಾಲ ಲಲಲ್ಲಾ...ಊಹೂ ಹೋ ಹೋss...” ಎಂದು ಗುಣಗುಣಿಸುತ್ತ ಹಳದಿ ಮುಸುಕಿನ ವ್ಯಕ್ತಿ ಬರುತ್ತದೆ. ವಿಜ್ಞಾನಿಯನ್ನು ನೋಡಿ ಅವನ ಹತ್ತಿರ ಬಂದು ಟಕಮಕ ನೋಡುತ್ತ ನಿಲ್ಲುತ್ತದೆ.]

ವಿಜ್ಞಾನಿ: (ಆಶ್ಚರ್ಯದಿಂದ) ‘ಖೂನಿ! ಮಾನಹಾನಿ? ರಕ್ಷಿಸಿರಿ?’ ಏನೂ ಹೇಳದೆ ಮಜವಾಗಿ ಹಾಡುತ್ತ ಬರುತ್ತಿರುವ ಭೂಪನಿವ!! ಯಾರಯ್ಯಾ ನೀನು ಪೋಲೀಸನೇನು ಮತ್ತೆ?

ವ್ಯಕ್ತಿ: (ಅಟ್ಟಹಾಸದಿಂದ ನಕ್ಕು) ನಾನು ನ್ಯೂಟ್ರಾನ್! ಅದಿರಲಿ, ನೀನಾರು?

ವಿಜ್ಞಾನಿ: (ಏನು ಹೇಳಬೇಕೆಂದು ತಿಳಿಯದೆ) ನಾನೂ ಒಂದು ಮೂಲಕಣ.

ವ್ಯಕ್ತಿ: ಛೀ ಹುಚ್ಚಾ, ಈಗೀಗ ಮೂಲಕಣವೆಂದು ಹೇಳಿಕೊಳ್ಳುವುದೇ ಫ್ಯಾಶನ್ನಾಗಿದೆ, ನಿನ್ನನ್ನು ನೋಡಿದರೆ ಮನುಷ್ಯನಂತೆ ಕಾಣುತ್ತೀಯಾ?...

ವಿಜ್ಞಾನಿ: (ಗುಟ್ಟು ಹೊರಬಿದ್ದವರಂತೆ) ಅಲ್ಲಲ್ಲ, ಅಲ್ಲವಲ್ಲಾ? ಛೀ ಛೀ, ಹಾಗಾಗಲು ಶಕ್ಯವೇ ಇಲ್ಲ!

ವ್ಯಕ್ತಿ: (ವಿಜ್ಞಾನಿಯ ಬೆನ್ನಮೇಲೆ ಸಲಿಗೆಯಿಂದ ಚಪ್ಪರಿಸಿ) ಅಯ್ಯಾ ಪುಣ್ಯಾತ್ಮಾ! ನೀನು ಮನುಷ್ಯನಷ್ಟೇ ಅಲ್ಲದೆ, ವಿಜ್ಞಾನಿಯೂ ಆಗಿರುವಿ...

ವಿಜ್ಞಾನಿ: (ತನ್ನ ಬಣ್ಣ ಬಯಲಾಯಿತೆಂದು ಚಿಂತಿಸುತ್ತ) ಹಾಗೇನಲ್ಲ...ಆದರೆ ನಾನು ವಿಜ್ಞಾನಿಯೆಂದು ಹೇಗೆ ಗುರುತು ಹಿಡಿದಿ?

ವ್ಯಕ್ತಿ: ‘ಎಲಿಮೆಂಟರಿ ಮಾಯ್ ಡಿಯರ್ ವಾಟ್ಸನ್!’ ವಿಜ್ಞಾನಿ, ತತ್ವಜ್ಞಾನಿ ಮತ್ತು ಹುಚ್ಚರನ್ನು ಬಿಟ್ಟರೆ ಬೇರಾರೂ ತಮ್ಮ ಕನಸಿನಲ್ಲಿ ಪರಮಾಣುನಗರಕ್ಕೆ ಬರೋದಿಲ್ಲವೆಂಬುದು ನಿನಗೆ ಗೊತ್ತಿಲ್ಲವೇ? ಈ ದಿನಗಳಲ್ಲಿ ತತ್ವಜ್ಞಾನಿಗಳಂತೂ ಕನಸು ಕಾಣುವದನ್ನು ಬಿಟ್ಟುಬಿಟ್ಟಿದ್ದಾರೆ ಮತ್ತು ನಿನಗೆ ಒಮ್ಮೆಲೆ ಹುಚ್ಚನೆನ್ನುವುದು ನನ್ನಂಥ ಸಭ್ಯರಿಂದ ಸಾಧ್ಯವಿಲ್ಲ...

ವಿಜ್ಞಾನಿ: (ನ್ಯೂಟ್ರಾನನ ಅದ್ಭುತ ತರ್ಕಕ್ಕೆ ತಲೆಬಾಗಿ) ಒಪ್ಪಿದೆ. ಆದರೆ ಈ ನಗರದಲ್ಲಿ ಎಲ್ಲರೂ ಗಾಬರಿಯಾದಂತೆ ಕಾಣುತ್ತದಲ್ಲ? ರಕ್ಷಿಸಿ! ರಕ್ಷಿಸಿ!! ಎನ್ನುವುದೇ ಇಲ್ಲಿಯ ಸ್ಲೋಗನ್ ಎಂದು ಕಾಣುತ್ತದೆ. ನನಗೆ ಎಲ್ಲವೂ ಒಗಟಾಗಿದೆ...

ವ್ಯಕ್ತಿ: ಥೂ ನಿನ್ನ! ವಿಜ್ಞಾನಿಯೆಂದು ಹೇಳಿಕೊಳ್ಳಲು ನಾಚಿಕೆ ಆಗುವುದಿಲ್ಲವೇ ನಿನಗೆ? ಇಲ್ಲಿಯ ನಾಗರಿಕರೆಲ್ಲ ಮೂಲಕಣಗಳೇ. ಇಲ್ಲಿಯ ಕುಟುಂಬಗಳೆಲ್ಲಾ ಪರಮಾಣುಗಳು ಮತ್ತು ಅವಿಭಕ್ತ ಕುಟುಂಬಗಳು ಅಣುಗಳು.

ವಿಜ್ಞಾನಿ: ಹೌದು, ಆದರೆ ನೀವೆಲ್ಲ ಗಾಬರಿಯಾಗಿದ್ದೇಕೆ?

ವ್ಯಕ್ತಿ: ಇನ್ನೂ ಹೊಳೆಯಲಿಲ್ಲವೇ ನಿನಗೆ? ಕೆಲವು ವಿಜ್ಞಾನಿಗಳು ಈ ನಗರವನ್ನು ತಮ್ಮ ಪ್ರಯೋಗಗಳಿಗೆ ಆರಿಸಿದ್ದಾರೆ. ಬೀಜವಿದಳನ,

ಬೀಜೀಯ ಕ್ರಿಯೆಗಳು, ಮೂಲಕಣಗಳ ಸ್ವರೂಪ ಮುಂತಾದವನ್ನು ಅಭ್ಯಸಿಸಲಿದ್ದಾರಂತೆ. ಅದಕ್ಕೆ ಈ ಕೋಲಾಹಲ.

ವಿಜ್ಞಾನಿ: ಆದರೆ ನೀನು ಮಾತ್ರ ಆರಾಮಾಗಿರುವಂತೆ ಕಾಣುತ್ತದೆ.

ವ್ಯಕ್ತಿ : ನಾನು ನ್ಯೂಟ್ರಾನ್ ಆಗಿದ್ದರಿಂದ ಭಾರೀ ಬಲಕ್ಷೇತ್ರಗಳಾಗಲೀ ಭಾರೀ ಉಪಕರಣಗಳಾಗಲೀ ನನ್ನನ್ನೇನೂ ಮಾಡವು. ಅದೊಂದು ನನಗಿರುವ ವಿಶೇಷ ಸೌಲಭ್ಯ.

ವಿಜ್ಞಾನಿ : ಆದರೆ ಸ್ವತಂತ್ರವಾಗಿ ನೀನು ನ್ಯೂಟ್ರಾನಾಗಿ ಸ್ಥಿರವಾಗಿರುವುದೂ ಕಷ್ಟವೆಂದು ನಾನು ತಿಳಿದಿದ್ದ.

ವ್ಯಕ್ತಿ : ಹುಚ್ಚಪ್ಪಾ, ಸ್ಥಿರ ಅಸ್ಥಿರಗಳ ನಡುವೆ ಇರುವ ಅಂತರ ನಿನಗೆ ಗೊತ್ತೇ? ಸತ್ಯಾಸತ್ಯಗಳ ನಡುವಿನ ಅಂತರ ನಿನಗೆ ಗೊತ್ತೇ? ಸ್ಥೂಲ ಸೂಕ್ಷ್ಮಗಳ ನಡುವಿನ ಅಂತರ ನಿನಗೆ ಗೊತ್ತೇ?

ವಿಜ್ಞಾನಿ : (ಬೆವರುತ್ತ) ಬಹಳ ಅಂತರವಿರಬೇಕಲ್ಲಾ?

ವ್ಯಕ್ತಿ: ಇಲ್ಲ, ಇಲ್ಲ! ಈ ಹೊಸ ವೇದ ತಿಳಿದುಕೋ; ದೊಡ್ಡ ಮೀನಿಗೆ ಸಣ್ಣ ಮೀನು ಸೂಕ್ಷ್ಮವಾದದ್ದು, ತಿಮಿಂಗಿಲು ದೊಡ್ಡದಾದದ್ದು. ಹುಳುವಿಗೆ ನೂರಾರು ವರುಷವೆಂದರೆ ಅನಂತಕಾಲ; ಪರಮಾಣುವಿಗೆ ನೀನು ಅನಂತ; ನಿನಗೆ ಸೌರವ್ಯೂಹವೇ ಅನಂತ! ಎಲ್ಲವೂ ಸಾಪೇಕ್ಷವಲ್ಲವೇ?

ವಿಜ್ಞಾನಿ : ಐನ್‌ಸ್ಟೀನ್ ಉವಾಚ.

ವ್ಯಕ್ತಿ : ತಥಾ, ಡೆಮಾಕ್ರಿಟಸ್, ಡಾಲ್ಟನ್, ಪ್ಲಾಂಕ್, ಥಾಮ್ಸನ್, ರುದರ್‌ಫೋರ್ಡ್, ಬೋಹ್ರ್, ಬ್ರೋಗ್ಲಿ, ಗೆಲ್ಮನ್ ಆದಿಚ.

ವಿಜ್ಞಾನಿ: ಪರಮಾಣುನಗರದ ಪಂಡಿತನೇನಯ್ಯಾ ನೀನು?

ವ್ಯಕ್ತಿ : (ಸಂಕಟಪಡುತ್ತ, ವಿಜ್ಞಾನಿಯ ಕಡೆಗೆ ಗಮನವಿಲ್ಲದೆ) ಅಯ್ಯೋ! ರಕ್ಷಿಸಿ! ರಕ್ಷಿಸಿ!! (ಓಡಿಹೋಗುವನು)

ವಿಜ್ಞಾನಿ: ಈ ಪಂಡಿತನ ಆಯುಷ್ಯವೂ ಮುಗಿದಂತೆ ಕಾಣುತ್ತದೆ!

[“ಎಲ್ಲಿ ಆ ದುಷ್ಟ ವಿಜ್ಞಾನಿ? ಪಾರಾಗಿ ಹೋದಾನು! ಬಿಡಬೇಡಿರಿ!! ಹಿಡಿಯಿರಿ; ಹೊಡೆಯಿರಿ...!!” ಎಂದು ನೇಪಥ್ಯದಲ್ಲಿ ಕೇಳಿಸುತ್ತದೆ.]

ವಿಜ್ಞಾನಿ : (ಗಾಬರಿಯಾಗಿ) ಅಯ್ಯೋ! ಈ ಮೂಲಕಣಗಳು ಬಡಿಗೆ ತೆಗೆದುಕೊಂಡು ನನ್ನನ್ನೇ ಹೊಡೆಯಲು ಬರುತ್ತಿದ್ದಾವಲ್ಲಾ? ದೇವರೇ! ಯಾರಿದ್ದೀರಿ! (ತಾರಕಸಪ್ತಮದಲ್ಲಿ) ರಕ್ಷಿಸಿ! ರಕ್ಷಿಸಿ!! ಅಯ್ಯೋ! ಪೋಲೀಸ್! ಖೂನಿ! ಮರ್ಡರ್...!!

[ವಿಜ್ಞಾನಿ ದಿಕ್ಕುಗೆಟ್ಟು ಓಡುತ್ತಿರುವಾಗ ಎಲ್ಲವೂ ಮಾಯವಾಗಿ ಎಚ್ಚರಗೊಳ್ಳುತ್ತಿರುವ ವಿಜ್ಞಾನಿಯ ನೆರಳು ಹಿನ್ನೆಲೆಯಲ್ಲಿ ಕಾಣುತ್ತದೆ. ನೇಪಥ್ಯದಲ್ಲಿ ‘ವಿಶ್ವಸೌಧದಾ...’ ಹಿಮ್ಮೇಳ ಗಾನ ಕೇಳಿಸುತ್ತಿರುವಂತೆ ನಾಟಕಮುಕ್ತಾಯದ ತೆರೆ.]



ಜ್ಞಾನ ಭಕ್ತಿ ವೈರಾಗ್ಯ ಬಂದು
ಎಲೆಗಳನ್ನೆಲ್ಲ ಉದುರಿಸಿ ಕೊಂಡು
ಮರ ಮತ್ತೆ ಬದುಕನ್ನು ಕನವರಿಸಿ
ವಸಂತದಲ್ಲಿ ಚಿಗುರಿತು

–ಶಾವೆಂ

‘ಭಯಾನಕವಾದ ತಿರುವಿನಲ್ಲಿ’ ಶೇವರ್ ಸ್ವಿಶ್. *

* ರೇಸಿನ ಮಾರ್ಗದಲ್ಲಿ ಗಂಡಾಂತರದ ತಿರುವು.



ಪ್ರತಿ ಸಲವೂ ಹಾಗೇ ಆಗುವುದುಂಟು:
ಸ್ವಿಶ್‌ನಿಂದ ಶೇವ್ ಮಾಡಿಕೊಂಡವನನ್ನು ನೀವು ಸೋಲಿಸಲಾರಿರಿ!

ನಗೆಮಲ್ಲಿಗೆ

ಕಂಪ್ಲೇಂಟ್‌ಗಳು

ಓರ್ವ ವ್ಯಕ್ತಿ ಒಂದು ಡಜನ್ ಚಿಕ್ಕ ಮಕ್ಕಳೊಡನೆ ಬಸ್ ಏರಿದ. ಆ ಮಕ್ಕಳ ಸಂಖ್ಯೆಯನ್ನು ನೋಡಿ ಕುತೂಹಲ ಕೆರಳಿದ ಓರ್ವ ಸ್ತ್ರೀ ಆತನನ್ನು,

"ಇವೆಲ್ಲಾ ನಿಮ್ಮ ಮಕ್ಕಳೇನಪ್ಪ?" ಎಂದು ಪ್ರಶ್ನಿಸಿದಾಗ, ಆ ವ್ಯಕ್ತಿ,

"ಅಲ್ಲ. ನಾನೊಬ್ಬ ಗರ್ಭನಿರೋಧಕ ಸಾಮಗ್ರಿಗಳನ್ನು ಮಾರುವವ. ಇವೆಲ್ಲಾ ಕಂಪ್ಲೇಂಟ್‌ಗಳು," ಎಂದು ಹೇಳಿದ.

— ಎಸ್. ವಿಶ್ವನಾಥ

ಹೋಲಿಕೆ

"ನಿನ್ನೆ ನನಗಾರೋ ಹೇಳಿದರು ನಾನು ನಿಮ್ಮಂತೆ ಕಾಣುತ್ತೇನೆಂದು."

"ಅದು ಯಾರು ಹೇಳಿ. ಈಗಲೇ ಹೋಗಿ ಅವರ ಕಪಾಳಕ್ಕೆ ಎರಡು ಬಾರಿಸಿ ಹಲ್ಲು ಉದುರಿಸಿ ಬರುತ್ತೇನೆ."

"ಚಿಂತಿಸಬೇಡಿ. ಆ ಕೆಲಸ ನಾನು ಆಗಲೇ ಮಾಡಿ ಮುಗಿಸಿದ್ದೇನೆ."

— ಯು. ಎಸ್. ಶ್ರೀನಿವಾಸರಾವ್

ಯುದ್ಧ

ಪ್ರೇಮ ಎಂದರೆ ಯುದ್ಧದ ಹಾಗೆ; ಬೇಕಾದಾಗ ಅದನ್ನು ಪ್ರಾರಂಭಿಸುತ್ತೀರಿ, ಮತ್ತು ಸಾಧ್ಯವಾದಾಗ ಕೊನೆಗಾಣಿಸುತ್ತೀರಿ.

ಸುಲಭ

ಇಬ್ಬರು ಕಾರು ಮಾಲಿಕರು ತಮ್ಮ ಅನುಭವಗಳ ಬಗ್ಗೆ ಹರಟುತ್ತಿದ್ದರು. ಒಬ್ಬ ಹೇಳಿದ:

"ಪ್ರಾರಂಭದಲ್ಲಿ ನಾನು ಕೊಂಡದ್ದು ಒಂದು ಹಳೇ ಕಾರು. ಅದು ಒಬ್ಬ ಗರಾಜ್ ಮಾಲಿಕನದ್ದು. ಅವನು ಅದನ್ನು ಬಹಳ ಹೊಗಳಿದ. ಕಾರುಗಳ ಬಗ್ಗೆ ನನಗೆ ಆಗ ಏನೂ ಗೊತ್ತಿರಲಿಲ್ಲ."

"ಅದನ್ನು ಕೊಂಡು ಕೈ ಸುಟ್ಟುಕೊಂಡಿರಿ, ಅಲ್ಲವೇ?"

"ಇಲ್ಲ. ಅದರಲ್ಲಿದ್ದ ದೋಷಗಳನ್ನೆಲ್ಲ ಕಂಡುಹಿಡಿದೆ."

"ಹೇಗೆ?"

"ಸುಲಭವಾಗಿ. ಕಾರನ್ನು ಟ್ರಾಯಲ್ ರೈಡಿಗೆ ಅಂತ ಹೇಳಿ ತೆಗೆದುಕೊಂಡು ಹೊರಗೆ ಬಂದೆ. ನೆಟ್ಟಗೆ ಇನ್ನೊಬ್ಬ ಗರಾಜ್ ಮಾಲಿಕನಲ್ಲಿಗೆ ಹೋದೆ. ಈ ಕಾರು ನೀವು ಕೊಳ್ಳುತ್ತೀರಾ ಎಂದು ಕೇಳಿದೆ ಅಷ್ಟೇ."

ಹಾಳತ

ತರುಣಿಯೊಬ್ಬಳು ತನ್ನ ಸುಂದರವಾದ ಹೈಹೀಲ್ಡ್ ಪಾದರಕ್ಷೆಗಳನ್ನು ಸಮಗಾರನ ಹತ್ತಿರ ದುರಸ್ತಿಗೆ ತಂದಳು.

"ಏನಾಗಿದೆ ಇವಕ್ಕೆ? ಹೊಸದಾಗಿ ಕಾಣುತ್ತವಲ್ಲ," ಎಂದ ಸಮಗಾರ.

"ಪಾದಗಳನ್ನು ಬಹಳ ನೋಯಿಸುತ್ತವೆ," ಎಂದಳು ತರುಣಿ.

ವೃದ್ಧ ಸಮಗಾರ ಅವಳನ್ನೊಂದು ಕ್ಷಣ ದಿಟ್ಟಿಸಿ ಅರಿವಿನ ನುಡಿ ಹೇಳಿದ. "ನಮ್ಮ ಪಾದಗಳಿಗೆ ಹಾಳತ ಆಗೋ ಕಾಲ್ಮರಿ ಕೊಳ್ಳಬೇಕಮ್ಮಾ, ಮನಸ್ಸಿಗೆ ಹಾಳತ ಆದವುಗಳನ್ನಲ್ಲ"

ಆಸ್ಪತ್ರೆ

ಒಂದಾನೊಂದು ವಿಧಾನಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸಿದ ಮೇಲೆ ಒಬ್ಬ ವೃದ್ಧರು ಹೇಳಿದ್ದು: "ಹುಚ್ಚರೇ ನಡೆಸುವ ಹುಚ್ಚರ ಆಸ್ಪತ್ರೆ ಇದೊಂದೇ ಅಂತ ಕಾಣುತ್ತೆ."

ದ್ವಿವಿಧ

ಆಡಳಿತ ಕಾಂಗ್ರೆಸ್ಸಿಗರ ಭಾಷಣಗಳು ಎರಡು ವಿಧವಾಗಿವೆಯೆಂದು ಒಬ್ಬ ವರದಿಗಾರ ಹೇಳುತ್ತಾನೆ— ಒಂದು ಪಕ್ಷಪಾತಿ ಮತ್ತು ಇನ್ನೊಂದು ನಿಷ್ಪಕ್ಷಪಾತಿ. ಪಕ್ಷಪಾತಿ ಭಾಷಣಗಳಲ್ಲಿ ಆಡಳಿತ ಕಾಂಗ್ರೆಸ್ಸಿನ ಕೃತಿಗಳ

ಬಗ್ಗೆ ಅತ್ಯಂತ ಪ್ರಶಂಸೆ ಮತ್ತು ಸಂಸ್ಥಾ ಕಾಂಗ್ರೆಸ್ ಕೃತ್ಯಗಳ ಬಗ್ಗೆ ಅತ್ಯಂತ ನಿಂದೆ ಕೇಳಿಬರುತ್ತದೆ. ನಿಷ್ಪಕ್ಷಪಾತಿ ಭಾಷಣಗಳಲ್ಲಿ ಆಡಳಿತ ಕಾಂಗ್ರೆಸ್ಸಿನ ಬಗ್ಗೆ ಕೆಟ್ಟದ್ದನ್ನೇನೂ ಹೇಳಲಾಗುವುದಿಲ್ಲ; ಸಂಸ್ಥಾ ಕಾಂಗ್ರೆಸ್ಸಿನ ಬಗ್ಗೆ ಒಳ್ಳೆಯದೇನನ್ನೂ ಹೇಳಲಾಗುವುದಿಲ್ಲ.

ವಾಸಿ

ಜವಳಿ ಜಾಮಣ್ಣನವರ ಅಂಗಡಿಯಲ್ಲಿ ಹಿಂದಿನ ರಾತ್ರಿಯು ಕಳವಾದ ಸುದ್ದಿ ಕೇಳಿ ಅವರ ಉದ್ಯೋಗಬಂಧುಗಳು ಟೆಲಿಫೋನಿನಲ್ಲಿ ಸಹಾನುಭೂತಿ ವ್ಯಕ್ತಪಡಿಸಿದರು.

ಜಾಮಣ್ಣನವರು ಸಹಾನುಭೂತಿಗೆ ಕೃತಜ್ಞತೆ ಹೇಳಿ, "ಸಾಕಷ್ಟು ಕಳವಾಗಿದೆ. ಆದರೆ ನಿನ್ನೆ ರಾತ್ರೀ ಬದಲು ಮೊನ್ನೆ ರಾತ್ರಿ ಆಗಿದ್ದರೆ ಇನ್ನೂ ಹೆಚ್ಚು ನಷ್ಟವಾಗುತ್ತಿತ್ತು," ಎಂದರು.

"ಹೌದೇ? ಮೊನ್ನೆ ಹೆಚ್ಚು ಬೆಲೆಬಾಳುವ ಸೀರೆಗಳಿದ್ದವೇ?"

"ಹಾಗೇನೂ ಇಲ್ಲ. ಆದರೆ ನಿನ್ನೆ ತಾನೇ ನಾನು ಎಲ್ಲಾ ಸೀರೆಗಳ ಬೆಲೆ ಸೇಕಡಾ ೨೫ ರಷ್ಟು ಇಳಿಸಿ ಹೊಸ ಪಟ್ಟಿ ಹಚ್ಚಿದೆ."

ಸಹಾನುಭೂತಿ

ಈಚೆಗೆ ಬಂದ ಸಹಾನುಭೂತಿಪೂರ್ಣ ಸಂಗೀತ ವಿಮರ್ಶೆ: "ಶ್ರೀಮತಿ ನಾದಮ್ಮ ಅವರು ಇಂದು ತಮ್ಮ ಪ್ರಥಮ ಸಂಗೀತ ಕಚೇರಿಯನ್ನು ನಡೆಸಿದರು. ಎರಡು ಗಂಟೆಗಳ ಕಾಲ ಅವರ ಸಂಗೀತವನ್ನು ಕೇಳಿದ ನಂತರ ನಾದಮ್ಮನವರಲ್ಲಿ ಧೈರ್ಯದ ಅಭಾವಕ್ಕೆ ಕೊರತೆಯಿಲ್ಲವೆಂದು ನಾವು ಮನಗಂಡೆವು. ಅತ್ಯಂತ ಸರಳವಾದ ಕೃತಿಗಳನ್ನೂ ಅವರು ಅತ್ಯಂತ ಕಠಿನವಾಗಿ ಹಾಡುತ್ತಾರೆ."

ಆಯ್ಕೆ

ಫಿಲಿಪ್ಪೈನ್ಸ್ ಅಧ್ಯಕ್ಷರಾಗಿದ್ದ ಮ್ಯಾನ್ಯುವೆಲ್ ರೋಕ್ಸಾಸ್ ಸ್ವತಃ ವಕೀಲರು. ಅವರು ಹೇಳುತ್ತಿದ್ದ ಒಂದು ಹಾಸ್ಯ ಕಥೆ ಇದು:

ಫಿಲಿಪ್ಪೈನ್ಸಿನಲ್ಲೊಬ್ಬ ಬಾರಿ ದರೋಡೆ-ಖೋರನನ್ನು ಬಂಧಿಸಿದ್ದರು. ಅವನ ಹೆಂಡತಿಯನ್ನು ಸಾಕ್ಷಿಯಾಗಿ ಕರೆಸಿ ಸರಕಾರಿ ವಕೀಲರು ಸವಾಲು ಪ್ರಾರಂಭಿಸಿದರು:

"ಈ ಮನುಷ್ಯ ದರೋಡೆ ಹಾಕುತ್ತಾನೆ ಅಂತ ಮದುವೆ ಆಗುವ ಮೊದಲೇ ನಿಮಗೆ ಗೊತ್ತಿತ್ತಲ್ಲವೆ?"


"ಹೌದು ಸ್ವಾಮಿ," ಎಂದಳು ಅವಳು ಶಾಂತವಾಗಿ.

"ಹಾಗಾದರೆ ನೀವು ಅವನನ್ನು ಯಾಕೆ ಮಾಡಿಕೊಂಡಿರಿ?" ವಕೀಲರು ಗರ್ಜಿಸಿದರು.


"ಸ್ವಾಮಿ, ನನಗೆ ಮದುವೆಯ ವಯಸ್ಸು ಮೀರುತ್ತ ಬಂದಿತ್ತು. ಇವರನ್ನು ಬಿಟ್ಟರೆ ನನ್ನನ್ನು ಮದುವೆಯಾಗಲು ತಯಾರಿದ್ದವರೆಂದರೆ ಒಬ್ಬರು ವಕೀಲರು ಮಾತ್ರ," ಎಂದಳಾ ರಮಣಿ.

ದೈವಾಜ್ಞೆ

ಕೆಲಸದಿಂದ ದಣಿದು ಮನೆಗೆ ಬರುವಾಗ ತನ್ನ ಆರು ವರ್ಷದ ಮಗನು ಹಾಕುತ್ತಿದ್ದ ಧಾಂದಲೆಯನ್ನು ತಾಳಲಾರದೆ ಅವನ ಕಿವಿ ಹಿಂಡಿ ಊಟ ಹಾಕಿಸಿ ಮಲಗಲು ಕಳಿಸಿದ ತಂದೆಗೆ ಮರುದಿನ ಸಂಜೆ ಬರುವಾಗ ಮೇಜಿನ ಮೇಲೊಂದು ಪತ್ರ ಕಾಯುತ್ತಿತ್ತು. ಅದರಲ್ಲಿ ಬಾಲಾಕ್ಷರದಲ್ಲಿ ದುಂಡಾಗಿ ಬರೆದಿತ್ತು: "ನಿನ್ನ ಮಕ್ಕಳನ್ನು ಪ್ರೀತಿಯಿಂದ ನಡೆಸಿಕೋ. ಅವರೂ ನಿನ್ನನ್ನು ಪ್ರೀತಿಸುತ್ತಾರೆ. ಇತಿ ನಿನ್ನ ಹಿತೈಷಿ,-ದೇವರು."




ನನ್ನ ಕ್ರಿಕೆಟ್ ಜೀವನ



ನನ್ನ ಕ್ರಿಕೆಟ್ ಜೀವನ

ಕಳೆದ ಎರಡು ವರ್ಷಗಳಿಂದ ಭಾರತದ ಕ್ರಿಕೆಟ್ ತಂಡದ ನಾಯಕರಾಗಿರುವ ಶ್ರೀ ಅಜಿತ ವಾಡೇಕರರ My Cricketing Years* ಅಲ್ಪಾವಧಿಯಲ್ಲೇ ಜನಪ್ರಿಯತೆ ಗಳಿಸಿದ ಪುಸ್ತಕ. ನಮ್ಮ ತಂಡದ ನಾಯಕರಾಗಿ ಅವರು ಗೈದ ಬಹು ದೊಡ್ಡ ಸಾಧನೆ ಯೆಂದರೆ ಸಾಂಘಿಕ ಮನೋಭಾವವನ್ನು ಬೆಳೆಯಿಸಿ ಈ ತಂಡವನ್ನೊಂದು ಹೊಸ ಶಕ್ತಿಯಾಗಿ ಪರಿವರ್ತಿಸಿದ್ದು. ಈ ಹಿಂದೆ ಜಗತ್ತಿನಲ್ಲೇ ಶ್ರೇಷ್ಠರೆನಿಸಬಹುದಾದಂಥ ಹಲವಾರು ಆಟಗಾರರನ್ನು ಹೊಂದಿರುವಾಗಲೂ ನಮ್ಮ ಕ್ರಿಕೆಟ್ ತಂಡಗಳು ತೀರ ದುರ್ಬಲವಾಗಿರುತ್ತಿದ್ದುದಕ್ಕೆ ಕಾರಣ ಈ ಸಾಂಘಿಕ ಮನೋಭಾವದ ಅಭಾವ. ವೆಸ್ಟ್ ಇಂಡೀಸ್ ಮತ್ತು ಇಂಗ್ಲಂಡನ್ನು ಆಯಾ ದೇಶಗಳಲ್ಲೇ ಜಯಿಸಿ ಬಂದ ನಂತರ ಭಾರತ ವಾಡೇಕರರ ನೇತೃತ್ವದಲ್ಲಿ ಈ ಸಲ ಇಂಗ್ಲಂಡನ್ನು ೨–೧ ಪಂದ್ಯಗಳಿಂದ ಭಾರತದಲ್ಲಿ ಜಯಿಸಿ, ಸತತವಾಗಿ ಮೂರು ಪಂದ್ಯಮಾಲಿಕೆಗಳನ್ನು ಗೆದ್ದಿದೆ.

'ಕಸ್ತೂರಿ'ಯ ಓದುಗರಿಗಾಗಿ ವಾಡೇಕರರ ಈ ಪುಸ್ತಕದ ಕೆಲವಂಶಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಜೀವನ ನಿಜಕ್ಕೂ ವಿಚಿತ್ರವಾಗಿದೆ. ಶಾಲೆಯಲ್ಲಿ ನಾನು ಕ್ರೀಡಾಕಲೆಗಳಿಂದ ದೂರವಿರುವ ಬುದ್ಧಿವಂತರ ಗುಂಪಿನಲ್ಲಿ ಸೇರಿಸಲ್ಪಡುತ್ತಿದ್ದೆ. ನನಗೆ ಕ್ರಿಕೆಟ್ ಆಡಲು ಪ್ರೋತ್ಸಾಹವಿರಲಿಲ್ಲ. ಅದು ಕಬಳಿಸುತ್ತಿದ್ದ ಸಮಯ ಮತ್ತು ಅಭ್ಯಾಸಕ್ಕೆ ಆಗುವ ತೊಂದರೆ ಒತ್ತಟ್ಟಿಗಿರಲಿ, ಆಟದಲ್ಲಿ ಪರಿಣತರಾದವರಿಗೂ ಒಳ್ಳೆಯ ಭವಿಷ್ಯ ವಿದ್ದಂತೆ ತೋರುತ್ತಿರಲಿಲ್ಲ.

ನನ್ನ ಬಗ್ಗೆ ತಂದೆಯವರು ಹೆಗ್ಗುರಿಗಳನ್ನಿಟ್ಟು ಕೊಂಡಿದ್ದರು. ಎಲ್ಲವನ್ನೂ ಅವರು ಯೋಚಿಸಿದ್ದರು. ಗಣಿತದಲ್ಲಿ ನನ್ನ ತಲೆ ಓಡುತ್ತಿತ್ತು; ಆದ್ದರಿಂದ ನಾನು ಇಂಜಿನಿಯರನಾಗಲಿದ್ದೆ. ನನ್ನ ತಾಯಿಗೆ ವೈದ್ಯನೊಬ್ಬ ಮನೆಯಲ್ಲಿರುವುದು ಬೇಕಿತ್ತು. ನಿಜ ಹೇಳಬೇಕೆಂದರೆ ರಕ್ತವನ್ನು ನೋಡಲು ಸಹ ನಾನು ಹೆದರುತ್ತೇನೆ. ಒಂದು ಇಂಜಕ್ಷನ್ನನ್ನೂ ನಾನು ತಡೆದುಕೊಳ್ಳಲಾರೆ. ವೆಸ್ಟ್ ಇಂಡೀಸ್‌ನಲ್ಲಿ ನಾವೆಲ್ಲರೂ ಹಳದಿ ಜ್ವರದ ಇಂಜಕ್ಷನ್ ತೆಗೆದುಕೊಳ್ಳಬೇಕೆಂದು ನಾನು ಗಾಬರಿಯಾಗಿದ್ದೆ. ಸುದೈವಕ್ಕೆ ಅದು ಅಷ್ಟೇನೂ ಅವಶ್ಯವಾಗಲಿಲ್ಲ. ಅದಕ್ಕಿಂತ ನಾನು ಸ್ನೋ, ಡೋವ್, ಏಕೆ ಲಿಲ್ಲಿಯ ಬಂಪರುಗಳನ್ನೂ ಎದುರಿಸಿಯೇನು.

ನಾನು ಟೆಸ್ಟ್ ಆಟಗಾರ ಹೇಗಾದೆನೆಂದು ಯೋಚಿಸಿದಷ್ಟೂ ಅದು ಹೆಚ್ಚು ವಿಚಿತ್ರವಾಗಿ ತೋರುತ್ತದೆ. ಕ್ರಿಕೆಟ್ಟಿನಿಂದ ದೂರವಿದ್ದು ಅಭ್ಯಾಸಕ್ಕೆ ಲಕ್ಷ್ಯ ಕೊಡಬೇಕೆಂದು ನನಗೆ ಹೇಳಲಾಗಿತ್ತು. ನಾನು ಹಾಗೆಯೇ ಮಾಡಿದೆ. ಆದರೆ ವಿಚಿತ್ರ ಪರಿಸ್ಥಿತಿಯಲ್ಲಿ ನಾನು ಆಟವನ್ನು ಕೈಗೆತ್ತಿಕೊಳ್ಳಬೇಕಾಯ್ತು. ಗಣಿತದಲ್ಲಿ ನನ್ನ

---

* With kind of permission of M/s. Vikas Publications, 5 Wallace Street, Bombay-1

ಬುದ್ಧಿಮತ್ತೆ, ಪರೀಕ್ಷೆಯಲ್ಲಿ ನನ್ನ ಉಚ್ಚ ಸ್ಥಾನಗಳು ಒಳ್ಳೆಯ ರೀತಿಯಲ್ಲಿ ಸನ್ಮಾನಿಸಲ್ಪಟ್ಟಿದ್ದವು. ಬೀಜಗಣಿತದಲ್ಲಿ ಅತಿ ಹೆಚ್ಚು ಗುಣಗಳನ್ನು ಗಳಿಸಿದ್ದರಿಂದಲೋ ಏನೋ ತಂದೆಯವರು ಮೃದುವಾದರು. ನನಗೊಂದು ನೀಲ್ ಹಾರ್ವೆ ಹಸ್ತಾಕ್ಷರವಿದ್ದ ಬ್ಯಾಟ್ ಸಿಕ್ಕಿತು. ಅಲ್ಲಿಯವರೆಗೆ ನನ್ನ ಕ್ರಿಕೆಟ್, ಟೆನ್ನಿಸ್ ಚೆಂಡಿಗೆ ಸೀಮಿತವಾಗಿತ್ತು. ನೀಲ್ ಹಾರ್ವೆ ಬ್ಯಾಟಿನೊಂದಿಗೆ ಜಯಿಸಬೇಕಾದ ಇನ್ನೂ ಅನೇಕ ಕ್ಷೇತ್ರಗಳಿದ್ದವು. ಈಗ ಕನಿಷ್ಠ ಪಕ್ಷ ಒಂದು ಕ್ರಿಕೆಟ್ ಚೆಂಡನ್ನು ಎದುರಿಸಬಹುದಾಗಿತ್ತು.

ಆದರೆ ನಿಜವಾದ ಕ್ರಿಕೆಟ್, ಕಾಲೇಜ್ ಮಟ್ಟದ್ದೇ ಇದ್ದರೂ ಟೆನ್ನಿಸ್ ಚೆಂಡಿನ ಜಗತ್ತಿಗಿಂತ ದೂರವಿತ್ತು. ನಾನು ಆ ವ್ಯತ್ಯಾಸವನ್ನು ಚೆನ್ನಾಗಿ ಹೇಳಬಲ್ಲವನಾಗಿದ್ದೆ. ನನ್ನ ಮೊದಲ ಪಾಠಗಳು ಆಶಾದಾಯಕವಾಗಿರಲಿಲ್ಲ ಏನೇ ಇದ್ದರೂ ನಾನು ಬಹಳವಾಗಿ ನಿರಾಶೆಗೊಳ್ಳಲಿಲ್ಲ. ಆಜ್ಞಾಧಾರಕ ಮಗನಾಗಿ, ನಾನು ನನ್ನ ತಂದೆಯ ಇಚ್ಛೆಗನುಗುಣವಾಗಿ ನನ್ನ ಬೀಜಗಣಿತ ಸೂತ್ರಗಳಿಗೆ ಮತ್ತು ಭೌತಶಾಸ್ತ್ರ ಪ್ರಯೋಗಗಳಿಗೆ ಮತ್ತೆ ಶರಣು ಹೋಗಬಹುದಿತ್ತು. ಆದರೆ ಅತ್ಯಂತ ಆಕಸ್ಮಿಕವಾಗಿ ನಾನು ಆಟದಲ್ಲಿ ಎಳೆಯಲ್ಪಟ್ಟೆ. ಎಲ್‌ಫಿನ್‌ಸ್ಟನ್ ಕಾಲೇಜಿನ ತಂಡದಲ್ಲಿ ನಾನು ಭರ್ತಿಯಾದೆ. ನಮ್ಮ ನಾಯಕ ಯತೀನ್‌ರೀತಿಗೆ ಒಬ್ಬ ಹನ್ನೆರಡನೆಯ ಆಟಗಾರ ಬೇಕಿದ್ದ. ಅವನ ಆಯ್ಕೆ ನಾನಾದೆ. ಬಹುಶಃ ನಾನು ವೇಗವಾಗಿ ಓಡಬಲ್ಲೆ ಮತ್ತು ಗುರಿ ತಪ್ಪದೇ ಚೆಂಡೆಸೆಯಬಲ್ಲೆ ಎಂದು ಅವನು ಕೇಳಿರಬೇಕು. ಯಾಕೆಂದರೆ ಹತ್ತಿರದ ಮಾವಿನ ಗಿಡಗಳಿಗೆ ದಾಳಿಯಿಟ್ಟು ರಸ ತುಂಬಿದ ಹಣ್ಣನ್ನು ಕೆಳಗೆ ಉದುರಿಸುವ ಚಿಗುಟುತನ ನನ್ನಲ್ಲಿತ್ತು. ಮುಂದಿನ ವರ್ಷಗಳಲ್ಲಿ ಈ ಅಕ್ಷುಣ್ಣತೆ ನನಗೆ ಸಹಾಯ ಮಾಡಲಿತ್ತು. ನಿರ್ಣಾಯಕ ಓವಲ್ ಪಂದ್ಯದಲ್ಲಿ ನಾನು ಅನುಕೂಲವಲ್ಲದ ಕೋನದಿಂದ [illegible] ರನ್ ಔಟ್ ಮಾಡಿದಾಗ ಅದರ ನೆನಪಾಗಿತ್ತು.

ಆದರೂ ಕಾಲೇಜ್ ಕ್ರಿಕೆಟ್ ಕೇವಲ ಮೋಜಾಗಿರಲಿಲ್ಲ. ಆಗ ನಮ್ಮ ಕೋಚ್ ಆಗಿದ್ದವರು, ಮಾಧವ ಮಂತ್ರಿ. ಆಲಸಿಗಳಿಗೆ ಅವರ ಹೆಸರೇ ಎಚ್ಚರಿಕೆಯಾಗಿತ್ತು. ಆಟಗಾರ, ಮುಂಬಯಿ ತಂಡದ ನಾಯಕ, ಟೆಸ್ಟ್ ಆಯ್ಕೆಗಾರರಾಗಿ ಅವರು ಶಿಸ್ತುಗಾರರೆಂದು ಹೆಸರಾಗಿದ್ದರು. ನಾನು ಒಂದು ಅನರ್ಹತೆಯೊಡನೆ ಪ್ರಾರಂಭಿಸಿದೆ! ಕ್ರೀಡಾ ಹಾಗೂ ಶೈಕ್ಷಣಿಕ ಎರಡೂ ರಂಗಗಳಲ್ಲಿ ಅತ್ಯುತ್ತಮವನ್ನು ಸಾಧಿಸುವ ಪ್ರಯತ್ನದಲ್ಲಿ ನಾನು ಮಂತ್ರಿಯವರು ಹಾಕಿಕೊಟ್ಟ ಮಟ್ಟಕ್ಕೆ ಬರಲಾರದೇ ಹೋದೆ. ಪ್ರಾಕ್ಟೀಸಿಗಾಗಿ ನನ್ನ ಮಧ್ಯಾಹ್ನದ ವಿಜ್ಞಾನ ಪ್ರಯೋಗಗಳನ್ನು ಬೇಗ ಮುಗಿಸಲು ನನಗೆಂದೂ ಆಗುತ್ತಿರಲಿಲ್ಲ. ನಾನು ಅವುಗಳನ್ನು ಮುಂಜಾನೆಗೆ ವರ್ಗಾಯಿಸಲು ನಿರರ್ಥಕವಾಗಿ ಪ್ರಯತ್ನಿಸಿದೆ. ನಾನು ಯಾವಾಗಲೂ ತಡವಾಗಿ ಹೋಗುತ್ತಿದ್ದೆ. ನನ್ನನ್ನು ಶಿಕ್ಷಿಸಲು ಮಂತ್ರಿಯವರು ನನ್ನನ್ನು ಬಯಲಿನ ಸುತ್ತ ಓಡಲು ಹಚ್ಚುತ್ತಿದ್ದರು. ಇದು ನನಗೆ ಮುಂದೆ ಲಾಭದಾಯಕವೇ ಆಯಿತು. ಯಾಕೆಂದರೆ ಚುರುಕಾದ ಕಾಲುಗಳು ಕ್ಷೇತ್ರರಕ್ಷಕನಿಗೆ ನಿಧಿ ಇದ್ದ ಹಾಗೆ. ಇತ್ತೀಚಿನ ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ಪ್ರವಾಸದಲ್ಲಿ ನನ್ನ ಮಾಮೂಲಿನ ಸ್ಲಿಪ್ ಸ್ಥಾನದಿಂದ ಹೊರಬಂದು ಹೊರ–ಕ್ಷೇತ್ರವನ್ನು ಬಲಪಡಿಸುವುದು ನನಗೆ ಶಕ್ಯವಾಯಿತು. ಈಗ ಹೊರ–ಕ್ಷೇತ್ರ ಮತ್ತು ಸ್ಲಿಪ್ ಎರಡರಲ್ಲೂ ಅಷ್ಟೇ ನಿರಾಯಾಸವಾಗಿ ಕ್ಷೇತ್ರರಕ್ಷಣೆ ಮಾಡುತ್ತೇನೆಂದು ಹೇಳಿಕೊಳ್ಳಬಲ್ಲೆ.

ನಾನು ಕ್ರಿಕೆಟ್ಟನ್ನು ಗಂಭೀರವಾಗಿ ಪರಿಗಣಿಸಲಾರಂಭಿಸಿದ ಸನ್ನಿವೇಶ ವಿಡಂಬನಾತ್ಮಕವಾಗಿತ್ತು. ಮಾಮೂಲಿನ ೧೨ನೆಯ ಆಟಗಾರನಿಗೆ ಅನಾರೋಗ್ಯವಾಗಿದ್ದರಿಂದ ಕಾಲೇಜಿಗೆ ಒಬ್ಬ ತಾತ್ಪೂರ್ತಿಕ ಹನ್ನೆರಡನೆಯ ಆಟಗಾರ ಬೇಕಾಗಿದ್ದ. ಕೊನೆಯ ನಿಮಿಷದಲ್ಲಿ ನನಗೆ ಕರೆ

ಬಂದಿತು. ನನ್ನ ಭೌತಶಾಸ್ತ್ರ ಪ್ರಯೋಗಗಳನ್ನು ಮುಗಿಸಿಕೊಂಡು ಊಟದ ವೇಳೆಗೆ ಆಟಕ್ಕೆ ಹೋದೆ. ನಾನು ಊಟ ಮತ್ತು ಪಾಕೆಟ್ ಮನಿಗಾಗಿ ಸರಿಯಾದ ವೇಳೆಗೆ ಬಂದೆನೆಂದು, ಸಧ್ಯಕ್ಕೆ ಟೆಸ್ಟ್ ಆಟಗಾರರಾಗಿರುವ ನನ್ನೊಬ್ಬ ಸಹ-ಆಟಗಾರರು ವ್ಯಂಗ್ಯವಾಗಿ ನುಡಿದರು. ಈ ವ್ಯಂಗ್ಯ ನನ್ನನ್ನು ಬಡಿದೆಬ್ಬಿಸಿತು. ನಾನೂ ಚೆನ್ನಾಗಿ ಆಡಬಲ್ಲೆನೆಂದು ಅವರಿಗೆ ತೋರಿಸಿಯೇ ತೀರುವೆನೆಂದು ಪ್ರತಿಜ್ಞೆ ಮಾಡಿದೆ. ಜೋರಾಗಿ ಅಭ್ಯಾಸ (ಕ್ರಿಕೆಟ್ಟಿನದು) ನಡೆಸಿದೆ. ಆ ವೇಳೆಯಲ್ಲೂ ನನ್ನ ಕಾಲೇಜ್ ಅಭ್ಯಾಸವನ್ನು ಮರೆಯಲಿಲ್ಲ.

ಆದರೂ ಕ್ರಿಕೆಟ್ ನನ್ನ ಮಾರ್ಗದಿಂದ ಬಹಳ ದೂರವಿದೆ ಎಂದೆನಿಸಿತು— ನನ್ನ ಭವಿಷ್ಯವನ್ನು ನಿರ್ಧರಿಸುವ ಸಂಗತಿಯಾಗಲು ಸಾಧ್ಯವಿರದಷ್ಟು ದೂರ. ವಿಜ್ಞಾನದಲ್ಲಿ ಲಕ್ಷ್ಯ ಹಾಕಲು ನಾನು ಎಲ್‌ಫಿನ್‌ಸ್ಟನ್ ಬಿಟ್ಟು ರುಯ್ಯಾ ಕಾಲೇಜನ್ನು ಸೇರಿದೆ. ನಮ್ಮ ಪ್ರಿನ್ಸಿಪಾಲರಿಗೂ ಕ್ರೀಡೆಗಳ ಬಗೆಗೆ ಅಷ್ಟೊಂದು ಉತ್ಸಾಹವಿರಲಿಲ್ಲ. ಆದರೆ ಆ ಚುಚ್ಚು ನುಡಿ ಇನ್ನೂ ನೆನಪಿನಲ್ಲಿತ್ತು. ನಾನೂ ಒಬ್ಬ ಉತ್ತಮ ಕ್ರಿಕೆಟ್ ಆಟಗಾರನಾಗುವೆನೆಂದು ತೋರಿಸಲು ನಾನು ದೃಢ ನಿರ್ಧಾರ ಮಾಡಿದ್ದೆ. ನನ್ನಲ್ಲಿಯೂ ಸ್ವಲ್ಪ ಪ್ರತಿಭೆ ಇದ್ದಿರಲೇಬೇಕು. ಎಷ್ಟೆಂದರೂ ನಾನು ಶಿವಾಜಿ ಪಾರ್ಕಿನಲ್ಲಿ ವಾಸಿಸುವವನಲ್ಲವೆ ?

ಬೇಗನೇ ನಾನು ನಮ್ಮ ಕಾಲೇಜ್ ತಂಡದ ಕಾಯಂ ಸದಸ್ಯನಾದೆ. ಬ್ಯಾಟ್ಸ್‌ಮನ್ನನಾಗಿ ಅಲ್ಲ— ಬೌಲರನಾಗಿ. ನನ್ನ ಎಡಗೈ ಸ್ಪಿನ್ನರುಗಳು ನಮ್ಮ ಮೊದಲನೆಯ ಪಂದ್ಯದಲ್ಲಿ ಆರು ಹುದ್ದರಿಗಳನ್ನು ತೆಗೆದಿದ್ದವು. ಹೋಳ್ಕರರ ಮುಸ್ತಾಕ್ ಅಲಿಯವರೊಬ್ಬರೇ ಈ ವಿಷಯದಲ್ಲಿ ನನ್ನ ಸರಿಸಮರೆಂದು ಕೇಳಿದ್ದೇನೆ. ಬೌಲಿಂಗಿಗಿಂತ ಬ್ಯಾಟಿಂಗ್ ಲಾಭಕಾರಿ ಹಾಗು ಉಲ್ಲಾಸಕಾರಿಯೆಂದು ಎರಡನೇ ವರ್ಷದಲ್ಲಿ ನಾನು ಕಂಡುಕೊಂಡೆ. ೧೯೬೮-೬೯ರ ಋತುವಿನೊಳಗಾಗಿ ನಾನು ಮುಂಬಯಿ ಕ್ರಿಕೆಟ್ಟಿನಲ್ಲಿ ತಳವೂರಿದ್ದೆ. ಬೇಗನೆ ನಾನು ದೊಡ್ಡ ಸ್ಕೋರುಗಳಿಗೆ ಪ್ರಸಿದ್ಧನಾದೆ. ದಿಲ್ಲಿಯ ವಿರುದ್ಧ ನನ್ನ ೩೨೪ ಚಂದ್ರು ಭಾನರ ೨೭೬ನ್ನು ಹಿಂದೆ ಹಾಕಿ ವಿಕ್ರಮವನ್ನು ಸ್ಥಾಪಿಸಿತು. ನಾವು ವೆಸ್ಟ್ ಇಂಡೀಸ್‌ಗೆ ಹೋಗುವ ಮೊದಲು ಗವಾಸ್ಕರ್ ಅವನ್ನು ಮುರಿದರು.

ಮುಂಬಯಿ ಕ್ರಿಕೆಟ್ ಅಧಿಕಾರಿಗಳು ಭರವಸೆ ತೋರುವ ಆಟಗಾರರಿಗಾಗಿ ಯಾವಾಗಲೂ ಎದುರು ನೋಡುತ್ತಾರೆನ್ನುವುದೊಂದು ಹೆಮ್ಮೆಯ ಮಾತು. ವಿಶ್ವವಿದ್ಯಾಲಯದಲ್ಲಿ ನಾನು ಹೆಸರನ್ನು ಗಳಿಸಿದ್ದೇ ತಡ, ಮುಂಬಯಿ ತಂಡದಲ್ಲಿ ನನ್ನನ್ನು ಸೇರಿಸಿಕೊಂಡರು. ಕಲಿಯಲು ಬಹಳ ಕಷ್ಟದ ಶಾಲೆಯಾಗಿತ್ತದು. 'ಕಚ್ಚಾ' ತರುಣನಾಗಿದ್ದ ನಾನು ಟೆಸ್ಟ್ ಕ್ರೀಡಾಪಟುಗಳ ಸಹವಾಸದಲ್ಲಿ ಅಷ್ಟೇನೂ ಸುಖಿಯಾಗಿರಲಿಲ್ಲ. ನನ್ನ ಸ್ಥಾನ ಸುಭದ್ರ ಎಂದು ನಾನೆಂದಿಗೂ ಭಾವಿಸಿರಲಿಲ್ಲ. ಶಕ್ತಿಶಾಲಿ ಸರ್ವೀಸಿಸ್ ಮತ್ತು ಬಂಗಾಲ ತಂಡಗಳ ವಿರುದ್ಧ ೮೦ರ ಸುತ್ತಮುತ್ತ ನನ್ನ ಸ್ಕೋರುಗಳಿದ್ದರೂ ಹೆಚ್ಚಿನ ಸಲ ನಾನು 'ಚಿಲ್ಲರೆ'ಯಾಗಿ ಪರಿಗಣಿಸಲ್ಪಡುತ್ತಿದ್ದೆ. ಪಾಲಿ ಉಮ್ರೀಗಾರರ ನಾಯಕತ್ವದಲ್ಲಿ ಭಾರತವನ್ನೇ ಪ್ರತಿನಿಧಿಸುವಷ್ಟು ಮುಂಬಯಿ ತಂಡ ಉತ್ತಮವಾಗಿದೆಯೆಂದು ನನ್ನ ಉಚ್ಚಾಟನೆಗೆ ಸಮಾಧಾನ ಹೇಳಿಕೊಳ್ಳುತ್ತಿದ್ದೆ. ಕ್ರಿಕೆಟ್ ಆಟಗಾರ ಸಿಹಿ-ಕಹಿ ಎರಡನ್ನೂ ನುಂಗಲು ಕಲಿಯಬೇಕು. ಅದು ಆಟದ ಉಜ್ವಲ ಅನಿಶ್ಚಿತತೆಯ ಒಂದು ಭಾಗ. ಮುಂಬಯಿ ತಂಡದಲ್ಲಿ ನನಗೆ ಸ್ಥಾನ ಸಿಗದಾಗ ನಾನು ಅಂತರ್ ಕಾಲೇಜು ಪಂದ್ಯಗಳಲ್ಲಿ ಸಮಾಧಾನ ಕಂಡುಕೊಂಡೆ. ಇವೂ ಆಟಗಾರನ ಮನೋಧರ್ಮವನ್ನು ಪರೀಕ್ಷಿಸುತ್ತವೆಂದು ನಾನು ಕಂಡಿದ್ದೇನೆ. ಸಿದ್ಧಾರ್ಥ ಮತ್ತು ರುಯ್ಯಾ ಕಾಲೇಜುಗಳ ಕೆಲ ಪಂದ್ಯಗಳನ್ನಂತೂ ನಾನು ಮೊದಲನೇ ದರ್ಜೆಯ ಪಂದ್ಯಗಳಲ್ಲಿ ಪರಿಗಣಿಸುತ್ತೇನೆ. ತನ್ನ ಮಿತ್ರರು, ಗೆಳತಿಯರು

ಮತ್ತು ಪ್ರಾಧ್ಯಾಪಕರ ಮುಂದೆ ಆಟಗಾರನ ಸತ್ವ ಪರೀಕ್ಷೆಯಾಗುತ್ತದೆ. ಸೋತವರನ್ನು ವರ್ಷ ಮುಗಿಯುವವರೆಗೂ ಕುಚೇಷ್ಟೆ ಮಾಡಲಾಗುತ್ತದೆ.

೧೯೬೦ರ ನನ್ನ ಆಟವನ್ನು ನಾನು ನನ್ನ 'ಅತ್ಯುತ್ತಮ'ಗಳಲ್ಲಿ ಹೆಸರಿಸಬಹುದು. ನಾವು 'ಸಿಡ್ನಿ ಹ್ಯಾರ್ಟ್'ಕ್ಕಿಂತ ೩೦ ರನ್ ಹಿಂದಿದ್ದೆವು. ಎರಡನೇ ಇನ್ನಿಂಗ್ಸ್‌ನಲ್ಲಿ ನನ್ನ ಜೊತೆಗಾರ ಕೇವಲ ೧ ರನ್ ಮಾಡಿದ; ನಾನು ೧೨೫ ಮಾಡಿದೆ. ಅತ್ಯಂತ ಅಲ್ಪ ವ್ಯತ್ಯಾಸದಿಂದ ನಾವು ಆಟವನ್ನು ಗೆದ್ದೆವು. ನಾವು ಆ ಆಟವನ್ನು ನನ್ನ ಬ್ಯಾಟಿಂಗಿನ ಕಾರಣದಿಂದಲೇ ಗೆದ್ದದ್ದರಿಂದ ನಾನು ಸಕಾರಣವಾಗಿಯೇ ಅಭಿಮಾನಪಟ್ಟೆ.

ಆದರೆ ಅದಕ್ಕೂ ಮೇಲೇರಲು ಸುಲಭ ಒಳದಾರಿಯಿಲ್ಲವೆನ್ನುವುದು ನನಗೆ ಬೇಗನೇ ತಿಳಿಯಿತು. ಟೆಸ್ಟ್ ಆಟಗಾರರ ಮಾಯಾಜಾಲವನ್ನು ಮುರಿದು ಒಳನುಗ್ಗುವುದು ಸರಳವಿರಲಿಲ್ಲ. ಎಲ್ಲರಿಗಿಂತ ಮೇಲೇರಿದವರು ತಮ್ಮ ಉತ್ಸಾಹಿ ಪ್ರತಿಸ್ಪರ್ಧಿಗಳ ಬಗೆಗೆ ಉತ್ಸುಕರಾಗಿರಲಿಲ್ಲ. ಶಾಲೆ-ಕಾಲೇಜುಗಳಿಂದ ರಾಜ್ಯ ತಂಡಕ್ಕೆ ಸೇರುವುದು ಈಗ ಸುಲಭ.

೧೯೬೨ ರ ಋತುವಿನಲ್ಲಿ ಮಾತ್ರ ನಾನು ಭದ್ರ ಸ್ಥಾನವೊಂದನ್ನು ಪಡೆದೆ. ಮುಂಬಯಿ ತಂಡದ ಹಿರಿಯರೆಲ್ಲ ವೆಸ್ಟ್ ಇಂಡೀಸ್‌ನಲ್ಲಿದ್ದರು. ರಣಜಿ ಟ್ರಾಫಿಯಲ್ಲಿ ಪ್ರತಿಸ್ಪರ್ಧಿಗಳನ್ನು ಎದುರಿಸಲು ಅವರು ಹೊಸ ಆಟಗಾರರನ್ನು ಹುಡುಕಬೇಕಿತ್ತು. ಟ್ರಾಫಿಯನ್ನು ಉಳಿಸಿಕೊಳ್ಳಲು ನಾನು ನನ್ನ ಕಾಣಿಕೆ ಸಲ್ಲಿಸಿದೆ. ಸ್ಲಿಪ್‌ನಲ್ಲಿ ಉಮ್ರೀಗಾರರ ಸ್ಥಾನವನ್ನು ಆಕ್ರಮಿಸಿ ಮೂರು ಉತ್ತಮ ಕ್ಯಾಚ್‌ಗಳನ್ನು ಹಿಡಿದೆ. ಆದೇ ಆಟದಲ್ಲಿ ದಿಲ್ಲಿಯ ವಿರುದ್ಧ ೪೯ ಮಾಡಿದೆ. ಅದು ಸಲೀಸಾಗಿತ್ತು. ರಾಜಸ್ಥಾನದ ವಿರುದ್ಧ ಮಾತ್ರ ನನ್ನ ಸತ್ವಪರೀಕ್ಷೆ ಆಯಿತು. ನಾನು ಆಡಲು ಹೋದಾಗ ೨೦ ರನ್ನಿಗೆ ಎರಡು ವಿಕೆಟ್ ಕಳೆದುಕೊಂಡು ಮುಂಬಯಿ ಬಿಕ್ಕಟ್ಟಿನ ಗಂಡಾಂತರದಲ್ಲಿತ್ತು. ರಾಜಸಿಂಗರಿಂದ ನಾನು ಎದುರಿಸಿದ ಮೊದಲ ಚೆಂಡು ನನ್ನ ಬೇಲ್‌ಗಳ ತೀರ ಸಮೀಪವೇ ಹಾಯ್ದು ಹೋಯಿತು. ಆದರೆ ನಂತರ ನಾನು ತಪ್ಪಲಿಲ್ಲ. ಮಂಕದ, ಗುಪ್ತೆಯವರಿದ್ದ ದಾಳಿಯಲ್ಲಿ ನಾನು ಆಕ್ರಮಣ ಪ್ರವೃತ್ತಿಯ ರಾಮಚಂದರೊಡನೆ ೨೩೪ ಓಟಗಳ ಜೊತೆಯಾಟ ಮಾಡಿದೆ. ನಮ್ಮ ತಂಡದ ೫೫೯ ರ ಮೊತ್ತದಲ್ಲಿ ನನ್ನ ಕಾಣಿಕೆ ೨೩೩ ಆಗಿತ್ತು.

ನಾನು ಹೊಸಬನಾಗಿರುತ್ತಿದ್ದ ಕಾಲ ಮುಗಿಯಿತ್ತು. ನಾನು ವಿಜೇತ ತಂಡದ ಕಾಯಂ ಸದಸ್ಯನಾಗಿದ್ದೆ. ಆದರೆ ಇಂಜಿನೀಯರ್ ಆಗುವ ಕನಸನ್ನು ಬಿಡಬೇಕಿತ್ತು. ಕ್ರಿಕೆಟ್ ನಿಮ್ಮಿಂದ ಬಹಳ ಅಪೇಕ್ಷಿಸುತ್ತದೆ. ಅದರಂತೆ ಇಂಜಿನಿಯರಿಂಗ್ ಕೂಡ. ನನ್ನ ಗಣಿತ ಪರಿಣತಿ ಸ್ಟೇಟ್ ಬ್ಯಾಂಕಿನಲ್ಲಿ ಕೆಲಸ ದೊರಕಿಸಿ ಕೊಟ್ಟಿತ್ತು.

ಟೆಸ್ಟ್ ಆಟಗಾರನಾಗಿ

ನಾನು ಯಾವಾಗಲೂ ಆತ್ಮವಿಶ್ವಾಸವುಳ್ಳವನಾಗಿದ್ದೇನೆ. ಇದು ನನ್ನ ಅತಿ ದೊಡ್ಡ ನಿಧಿಯಾಗಿದೆ. ಚಿಕ್ಕಪುಟ್ಟ ಸ್ಕೋರುಗಳಿಗೆ ಔಟಾದಾಗಲೂ ನಾನು ಅನಾವಶ್ಯಕವಾಗಿ ತಲೆ ಕೆಡಿಸಿಕೊಂಡಿಲ್ಲ. ಮುಂಬಯಿಯಲ್ಲಿ, ವೆಸ್ಟ್ ಇಂಡೀಸ್‌ನ ವಿರುದ್ಧ ೧೯೬೬—೬೭ ರ ನನ್ನ ಮೊದಲ ಪಂದ್ಯದಲ್ಲಿ ನಾನು ವಿಫಲನಾದಾಗ ನನ್ನ 'ಟೆಂಪರ್' ಬಗೆಗೆ ಸಂಶಯಗಳಿದ್ದವು. ನೇರವಾಗಿ ಹೇಳಬೇಕೆಂದರೆ, ನನ್ನ ಟೆಸ್ಟ್ ಪದಾರ್ಪಣವನ್ನು ಬ್ರೆಬೋರ್ನ್ ಸ್ಟೇಡಿಯಂನಲ್ಲಿ ಮಾಡುವುದರಲ್ಲಿ ನನಗೆ ಅಷ್ಟೊಂದು ಸಂತೋಷವಿರಲಿಲ್ಲ. ತಮ್ಮವರ ಗುಂಪಿನ ಎದುರಿಗೆ ಆಡುವಾಗ ಆಟಗಾರನ ಮೇಲೆ ಒತ್ತಡ ಹೆಚ್ಚಾಗುತ್ತದೆ. ನನ್ನ ಟೆಸ್ಟ್ ಜೀವನವನ್ನು ಚೆಪಾಕ್ (ಮದ್ರಾಸ್)ನಲ್ಲಿ ಆರಂಭಿಸಲು ನಾನು ಬಹಳಷ್ಟು ಇಚ್ಛಿಸಿದ್ದೆ. ಟೆಸ್ಟ್ ಕ್ರಿಕೆಟ್ಟಿನಲ್ಲಿ ಪದಾರ್ಪಣ ಮಾಡಲು ಅದಕ್ಕಿಂತ ಉತ್ತಮ ಬಯಲು ಇನ್ನೊಂದಿಲ್ಲ.

ಮದ್ರಾಸ್ ವಿಕೆಟ್ ನನ್ನ ಧಾಟಿಯ ಆಟಕ್ಕೆ

ಹೊಂದುವಂತಿತ್ತು, ಚೆಂಡು ಸರಿಯಾಗಿ ಕಾಣುತ್ತಿತ್ತು.' ಮತ್ತು ಸ್ಕ್ವೇರ್ ಕಟ್ ಅಥವಾ ಹುಕ್‌ಗೆ ಸರಿಯಾಗಿ ಬರುತ್ತಿತ್ತು. ನಾನು ನಾಲ್ಕು ರನ್ನಿನ ಒಂದು ಡ್ರೈವ್‌ನಿಂದ ಪ್ರಾರಂಭಿಸಿದೆ. ಹಾಲ್ ಎಸೆದ ಮುಂದಿನ ಬೌನ್ಸರನ್ನೆ ಸಿಕ್ಸರಾಗಿ ಪರಿವರ್ತಿಸಿದೆ. ವೀಕ್ಷಕರು ಅದನ್ನು 'ಮರಣ ಇಲ್ಲವೇ ಮಹಾಕೀರ್ತಿ'ಯ ಆಟವೆಂದು ಕರೆದರು. ಹತಾಶನಾಗಿ ನಾನು ಆಡಿದ್ದೇನೆಂದು ಅದರ ತಾತ್ಪರ್ಯವಿತ್ತು. ಮುಂಬರುವ ಇಂಗ್ಲೆಂಡ್ ಪಂದ್ಯಮಾಲಿಕೆಯಲ್ಲಿ ಸ್ಥಾನ ಗಳಿಸಲು ನಾನು ಪ್ರಯತ್ನಿಸುತ್ತಿದ್ದೇನೆಂದು ನಂಬಲಾಗಿತ್ತು. ಆದರೆ ನಿಜಕ್ಕೂ ಅದು ಹಾಗಿರಲಿಲ್ಲ. ನಾನು ಮೊದಲಿನಿಂದಲೂ ಚೆಂಡನ್ನು ಸರಿಯಾಗಿ ನೋಡುತ್ತಿದ್ದೆ– ಸಣ್ಣ ಅಂತರದವುಗಳು ಹುಕ್ ಅಥವಾ ಸ್ಕ್ವೇರ್ ಕಟ್‌ಗೆ ಯೋಗ್ಯವಾಗಿದ್ದವು. ೭೭ ಓಟಗಳ ಆ ಆಟ ಖಂಡಿತವಾಗಿ 'ಮರಣ ಇಲ್ಲವೇ ಮಹಾಕೀರ್ತಿ'ಯ ಸ್ಫೂರ್ತಿಯಿಂದ ಆಡಿದ್ದಲ್ಲ. ನಾನು ಸೋತಿದ್ದರೆ, ಇವೆಲ್ಲ ಆಟದಲ್ಲಿ ಇದ್ದದ್ದೇ ಎಂದು ನಾನು ಒಪ್ಪಿಕೊಳ್ಳುತ್ತಿದ್ದೆ.

ವಿಜ್ಞಾನ ಶಿಕ್ಷಣದ ಹಿನ್ನೆಲೆಯಿದ್ದರೂ ನಾನು ಪುಸ್ತಕೀಯ ರೀತಿಯಲ್ಲಿ ಆಡಿದವನಲ್ಲ. ಹಾಗೆ ಹೇಳಿಕೊಂಡರೆ ನಾನು ಅಪಾಢಭೂತಿಯಾದೇನು. ಹೆಚ್ಚಿನ ಸಲ ನಾನು ಚೆಂಡಿನ ದಿಕ್ಕಿನ ಹೊರಗಡೆ ಡ್ರೈವ್ ಮಾಡುತ್ತೇನೆಂದು ನನಗೆ ಗೊತ್ತಿದೆ. ಇದೇ ಕಾರಣದಿಂದ ಆಸ್ಟ್ರೇಲಿಯದ ಪಂಡಿತರು ನನ್ನನ್ನು ತರಾಟೆಗೆ ತೆಗೆದುಕೊಂಡರು. ಆಸ್ಟ್ರೇಲಿಯದ ವಿಕೆಟ್‌ಗಳಲ್ಲಿದ್ದ ಹೆಚ್ಚಿನ ಬೌನ್ಸ್ ನನ್ನ ವಿಫಲತೆಗೆ ಕಾರಣವಾಯಿತು. ಅವಕ್ಕೆ ತಕ್ಕಂತೆ ಆಡುವುದು ನನ್ನ ಸ್ವಭಾವಕ್ಕೆ ಹೊಸದಾಗಿತ್ತು. ಒಂದು ನಿರ್ದಿಷ್ಟ ಹೊಡೆತವನ್ನು ಆಡಬೇಕೆಂಬ ಆಟಗಾರನ ಅಂತಃಪ್ರೇರಣೆಯನ್ನು ತಡೆದುಕೊಳ್ಳುವುದು ಸುಲಭವಲ್ಲ. ಆದರೂ ಅನುಭವದಿಂದ ಕಲಿಯಬೇಕಾಗುತ್ತದೆ. ನನ್ನ ಮೊದಲ ಇಂಗ್ಲೆಂಡ್ ಪ್ರವಾಸದಲ್ಲಿ, ನಿಧಾನದ ವಿಕೆಟ್‌ಗಳ ಮೇಲೆ ಹೊಡೆತಗಳ ಆಟ ಸುಲಭವಾಗಿ ಬಂದಿತು.

ನನ್ನ ಮೊದಲ ಟೆಸ್ಟ್ ಶತಕಕ್ಕಾಗಿ ನಾನು ನ್ಯೂಝಿಲೆಂಡಿನ ಪ್ರವಾಸದ ವರೆಗೆ ಕಾಯಬೇಕಾಯಿತು. ಒಂದು ಅತೀವ ಚಳಿಯ ದಿನ, ನಾನು ಅದಕ್ಕಾಗಿ ಬಹಳ ಶ್ರಮಪಡಬೇಕಾಯಿತು. ಆ ಸಜೀವ ವಿಕೆಟ್ ಮೇಲೆ ನಾವು ಟೇಲರ್, ಮಾಟ್ಸ್, ಬಾರ್ಟ್‌ಲೆಟ್‌ರನ್ನು ಎದುರಿಸಬೇಕಿತ್ತು. ಡಿಕ್ ಬ್ರಿಟೆಂಡನ್ ಅದರ ಕುರಿತು ಅಚ್ಚುಕಟ್ಟಾಗಿ 'ವಿಸ್ಡನ್'ನಲ್ಲಿ ಹೀಗೆ ಬರೆದರು: "ವೆಲ್ಲಿಂಗ್‌ಟನ್‌ನಲ್ಲಿ [ವಾಡೇಕರ ತಮ್ಮ ತಂಡಕ್ಕೆ ಅವಶ್ಯವಾಗಿದ್ದ ಸುದೀರ್ಘ, ಸುವಿಚಾರಿತ ಆಟವನ್ನು ನೀಡಿದರು." ಅದರ ನಂತರ ನನಗೆ ಎರಡೂ ರೀತಿಗಳ ಪರಿಚಯವಾಗಿದೆ— ಪೆವಿಲಿಯನ್ನಿನತ್ತ ದೀರ್ಘ ಏಕಾಕಿ ನಡಿಗೆ, ಅದರಂತೆ ಪ್ರೇಕ್ಷಕರ ಹರ್ಷೋದ್ಗಾರಗಳ ನಡುವೆ ಪೆವಿಲಿಯನ್ನಿನತ್ತ ಹೆಜ್ಜೆ ಹಾಕುವುದು.

*

ನನ್ನ ಅತ್ಯುತ್ತಮ ಆಟ ಯಾವುದೆಂದು ಕೇಳಿದರೆ ನಿಮಗೆ ಆಶ್ಚರ್ಯವಾದೀತು. ನಾನು ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಝಿಲೆಂಡ್‌ಗಳಲ್ಲಿ ಆಡಿದ ಭಾರಿ ಆಟಗಳಲ್ಲಿ ಅದು ಇಲ್ಲ. ಅದು, ಮೈಸೂರಿನ ವಿರುದ್ಧ ನಾನು ಮಾಡಿದ ಒಂದು ಶತಕ. ರಣಜಿ ಟ್ರಾಫಿಯ ಉಪಾಂತ್ಯ ಪಂದ್ಯದಲ್ಲಿ, ಸರಿಯಾಗಿ ಒಣಗಿರದ ವಿಕೆಟ್ಟಿನ ಮೇಲೆ ಮುಂಬಯಿ ತಂಡವನ್ನು ಬಲೆಯಲ್ಲಿ ಕೆಡವಬೇಕೆಂದು ಮೈಸೂರಿನವರು ಆಶಿಸಿದ್ದರು. ಪ್ರಸನ್ನ ಮತ್ತು ಚಂದ್ರಶೇಖರರಲ್ಲಿ ಅವರಿಗೆ ಇಬ್ಬರು ಪಂದ್ಯ ಗೆಲ್ಲಿಸುವ ಚೆಂಡುಗಾರರು ದೊರೆತಿದ್ದರು. ಇಬ್ಬರೂ ಆ ವರ್ಷ ಮೈಕ್ ಸ್ಮಿತ್ ತಂಡದ ವಿರುದ್ಧ ಆಶ್ಚರ್ಯಕರ ರೀತಿಯಲ್ಲಿ ಪದಾರ್ಪಣ ಮಾಡಿದ್ದರು. ಒಂದು ಹಂತದಲ್ಲಿ ಸನ್ನಿವೇಶ ನಿರಾಶಾದಾಯಕವಾಗಿಯೆ ಕಂಡಿತ್ತು. ಮುಂಬಯಿ ೮೩ ಓಟಗಳಿಗೆ ೫ ಹುದ್ದರಿಗಳನ್ನು ಕಳೆದುಕೊಂಡಿತ್ತು. ಆದರೆ ಮಂಕಡ್ ನನಗೆ ಬೇಕಿದ್ದ ಸಹಾಯ ನೀಡಿದರು. ನಾವು ಸ್ಕೋರನ್ನು ಮೈಸೂರಿಗೆ ನಿಲುಕದಷ್ಟು ಏರಿಸಿ

ದೆವು. ನನ್ನ ಈ ಶತಕ ಮತ್ತು ವೆಲ್ಲಿಂಗ್‌ಟನ್ನಿನಲ್ಲಿಯ ಟೆಸ್ಟ್ ಶತಕ ನನಗೆ ಅತೀವ ಸಮಾಧಾನ ನೀಡಿದವುಗಳಾಗಿವೆ.

*

ನಾಯಕ ಪಟ್ಟ

ಕೆಲವೊಂದು ದಿನಗಳು ನನ್ನ ಮನಸ್ಸಿನಲ್ಲಿ ಕೊನೆಯ ವರೆಗೂ ಉಳಿಯುವಂತೆ ಅಚ್ಚೊತ್ತಿವೆ. ಅವುಗಳಲ್ಲಿ ನೆನಪಿಡತಕ್ಕಂಥಾದ್ದು ಆ ಡಿಸೆಂಬರ್ ಸಂಜೆ. ನಾನು, ನನ್ನ ಪತ್ನಿ ರೇಖಾ ನಮ್ಮ ಹೊಸ ಮನೆಯ ಹೊರ ಕೋಣೆಯನ್ನು ಅಲಂಕರಿಸಲು ಚಿತ್ರವಸ್ತುಗಳನ್ನು ಕೊಳ್ಳಲು ಹೋಗಿದ್ದೆವು. ಮುಖ್ಯ ರಸ್ತೆಯಿಂದ ತಿರುಗಿದಾಗ ನಮ್ಮ ಮನೆಯ ಮುಂದೆ ನಿಂತಿದ್ದ ಜನಜಂಗುಳಿಯನ್ನು ಕಂಡು ಆಶ್ಚರ್ಯವಾಯಿತು. ಸ್ಥಾನಿಕ ಪತ್ರಿಕೋದ್ಯಮಿಯೊಬ್ಬ ನನಗೆ ಮಾಲೆ ಹಾಕಿ, ನಾನು ಭಾರತದ ನಾಯಕನಾಗಿದ್ದುದಕ್ಕೆ ಅಭಿನಂದಿಸಿ, ನನ್ನ ಸಂಶಯವನ್ನು ದೂರಮಾಡಿದ.

ನನ್ನ ಪತ್ನಿ ಮತ್ತು ತಂದೆ ತಾಯಂದಿರಿಗೆ ಅತೀವ ಸಂತೋಷವಾಯಿತು. ನಾನೂ ಸಂತೋಷಪಟ್ಟೆ. ಆದರೂ ಮನಸ್ಸಿನಲ್ಲಿ ಕೆಲವು ವಿಚಾರಗಳಿದ್ದವು. ನಮ್ಮ ತಂಡದ ಕೆಲವು ಹಿರಿ ಹುದ್ದರಿಗಳನ್ನು ನಾನು ಚೆನ್ನಾಗಿ ನಡೆಸಿಕೊಳ್ಳಬಲ್ಲೆನೆ? ವೆಸ್ಟ್ ಇಂಡಿಸ್‌ನೊಡನೆ ನಾವು ಸರಿಸಮವಾಗಿ ಹೋರಾಡಬಲ್ಲೆವೆ? ರೇಡಿಯೋದಲ್ಲಿ ಸುದ್ದಿ ಕೇಳಿದ ಜನರು ಬಂದು ಅಭಿನಂದಿಸುತ್ತಿದ್ದಂತೆ ಈ ವಿಚಾರಗಳು ನನ್ನನ್ನು ಪೀಡಿಸುತ್ತಿದ್ದವು. ಎಷ್ಟೋ ಟೆಲಿಫೋನ್ ಕರೆಗಳೂ ಇದ್ದವು. ಬೇಗನೆ ನಾನು ಹೊಸ ಹುದ್ದೆಗೆ ನನ್ನನ್ನು ಅಳವಡಿಸಿಕೊಂಡೆ.

ಮರುದಿನದ ಪತ್ರಿಕಾ ವರದಿಗಳನ್ನು ಆಸಕ್ತಿಯಿಂದ ಓದಿದೆ. ಪಟೌಡಿಯವರನ್ನು ತೆಗೆದದ್ದಕ್ಕೆ ಸ್ವಲ್ಪ ಟೀಕೆಯಿತ್ತಾದರೂ ಸಾಮಾನ್ಯವಾಗಿ ಎಲ್ಲರೂ ಮುಂಬಯಿಗನೊಬ್ಬನನ್ನು ಭಾರತದ ತಂಡವನ್ನು ವಿದೇಶದಲ್ಲಿ ನಡೆಸಲು ಆಯ್ಕೆ ಮಾಡಿದ್ದನ್ನು ಒಪ್ಪಿದ್ದರು. ನಾನು ಆ ಗೌರವಕ್ಕೆ ಅರ್ಹನೆಂದು ತೋರಿಸಲು ಅಂಕೆಸಂಖ್ಯೆಗಳು ಪೂರೈಸಲ್ಪಟ್ಟವು. ನಂತರದಲ್ಲಿ ಪಟೌಡಿ ತಮ್ಮ ಅಲಭ್ಯತೆಯನ್ನು ಘೋಷಿಸಿದಾಗ ನನ್ನ ಆಯ್ಕೆಯ ಬಗೆಗೆ ಯಾವ ಶಬ್ದವೂ ಕೇಳಿ ಬರಲಿಲ್ಲ. ನನಗೆ ಪಟೌಡಿಯವರ ಬಗೆಗೆ ವಿಷಾದವಾಯಿತು. ಅತಿ ಆಪ್ತಮಿತ್ರರಾಗಿರದಿದ್ದರೂ ನಾವು ವಿದೇಶ ಪ್ರವಾಸಗಳಲ್ಲಿ ಮತ್ತು ಇಲ್ಲಿನ ಟೆಸ್ಟ್‌ಗಳಲ್ಲಿ ಚೆನ್ನಾಗಿ ಹೊಂದಿಕೊಂಡಿದ್ದೆವು. ಅವರು ಹಿಂತೆಗೆದಾಗ ನನಗೆ ವ್ಯಸನವಾಯಿತಲ್ಲದೆ ಅವರ ಅನುಪಸ್ಥಿತಿ ನಮಗೆ ತೀವ್ರ ಭಾಸವಾಗುವುದೆಂದೂ ಅನಿಸಿತು.

ನಮ್ಮ ವ್ಯವಸ್ಥಾಪಕರು

ನಮ್ಮ ವೆಸ್ಟ್ ಇಂಡೀಸ್ ಮತ್ತು ಇಂಗ್ಲಂಡ್ ಎರಡೂ ಪ್ರವಾಸಗಳಲ್ಲಿ ನಮಗೆ ದೊರೆತ ವ್ಯವಸ್ಥಾಪಕರ ವಿಷಯದಲ್ಲಿ ನಾವು ನಿಜಕ್ಕೂ ಸುದೈವಿಯೆನ್ನಬೇಕು. ಈ ಇಬ್ಬರೂ ಆ ಕೆಲಸಕ್ಕೆ ಸುಯೋಗ್ಯರಾಗಿದ್ದರಾದರೂ ಇವರಲ್ಲಿ ಸಾಮ್ಯ ಮಾತ್ರ ಯಾವ ವಿಷಯದಲ್ಲೂ ಇರಲಿಲ್ಲ.

ವೆಸ್ಟ್ ಇಂಡೀಸಿನಲ್ಲಿ ನಮ್ಮ ವ್ಯವಸ್ಥಾಪಕರಾಗಿದ್ದ ಕೆ. ಕೆ. ತಾರಾಪುರ ಉಚ್ಚ ಅಭಿರುಚಿಯ ಮನುಷ್ಯ. ಅವರು ಐಹಿಕ ಜಗತ್ತಿನಲ್ಲಿ ಉತ್ತಮವೆಂದು ಪರಿಗಣಿತವಾಗುವುದೆಲ್ಲವನ್ನೂ ಸವಿಯಬಲ್ಲವರು. ತದ್ವಿರುದ್ಧ ಇಂಗ್ಲಂಡಿನಲ್ಲಿ ನಮ್ಮ ವ್ಯವಸ್ಥಾಪಕರಾಗಿದ್ದ ಕರ್ನಲ್ ಹೇಮು ಅಧಿಕಾರಿ ತುಂಬ ಕಟ್ಟುನಿಟ್ಟಿನ ಮನುಷ್ಯ, ನಿರ್ವ್ಯಸನಿ; ಅವರ ವ್ಯಕ್ತಿತ್ವದಲ್ಲೇ ಸೈನ್ಯಾಧಿಕಾರಿಯ ಶಿಸ್ತು ಸಂಯಮಗಳು ಒಡೆದು ಕಾಣುತ್ತವೆ. ಮೂರ್ಖರನ್ನು ಅವರೆಂದೂ ಸಹಿಸಿಕೊಂಡವರಲ್ಲ.

ಆದರೂ ಇವರಿಬ್ಬರಲ್ಲೂ ಒಂದು ಅಂಶ ಮಾತ್ರ ಸಮಾನವಾದುದಾಗಿತ್ತು. ಇಬ್ಬರಲ್ಲೂ ಧಾರ್ಮಿಕ ಪ್ರಜ್ಞೆ ಆಳವಾಗಿತ್ತು. ನಾವಿನ್ನೂ ಏಳುವ ಮುನ್ನವೇ ತಾರಾಪುರ ಸ್ನಾನ ಮುಗಿಸಿ ನಸುಕಿನಲ್ಲಿ ಊದುಬತ್ತಿಗಳ ಪರಿಮಳವಿಡುಗಿದ

ಕೋಣೆಯಲ್ಲಿ ಪ್ರಾರ್ಥನಾಮಗ್ನರಾಗಿರುತ್ತಿದ್ದರು. ಆಗ ಅವರನ್ನು ಯಾರೂ ತಡವುವಂತಿರಲಿಲ್ಲ. ಅವರಂತೆಯೆ ಸಂಜೆ ಆಟ ಮುಗಿಸಿ ನಾವು ನಮ್ಮ ಹೋಟೆಲಿಗೆ ಮರಳಿದ ನಂತರ ಒಂದು ತಾಸು ನಮಗಾರಿಗೂ ಅಧಿಕಾರಿಯವರ ದರ್ಶನಕ್ಕೆ ಅವಕಾಶವಿರಲಿಲ್ಲ. ಆಗ ಅವರು ಸ್ನಾನ ಮುಗಿಸಿ ಸಂಜೆಯ ಪ್ರಾರ್ಥನೆಯಲ್ಲಿ ಮೈಮರೆತಿರುತ್ತಿದ್ದರು. ಅದು ಮುಗಿದ ನಂತರವೇ ಅವರು ಸಂಜೆಯ ಊಟಕ್ಕಾಗಿ ಭಾರತೀಯ ಅಥವಾ ಚೀನಿ ಫಲಾಹಾರ ಮಂದಿರವನ್ನು ಹುಡುಕಲು ಅಣಿಯಾಗುತ್ತಿದ್ದರು.

ಕ್ರಿಕೆಟ್ಟಿನ ತಾಂತ್ರಿಕ ವಿಷಯಗಳಲ್ಲಿ ತಾರಾಪುರ ತಲೆ ಹಾಕುತ್ತಿದ್ದಿಲ್ಲ. ಅದನ್ನು ಸಂಬಂಧಿಸಿದವರಿಗೇ ಬಿಟ್ಟುಕೊಟ್ಟು ತಂದೆಯಂತೆ ಹಿರಿಯರಾಗಿ ಮಕ್ಕಳಲ್ಲಿ ಚಿಕ್ಕ ದೊಡ್ಡ ಎಂಥ ಕಾರಣಗಳಿಗಾಗಿಯೂ ವೈಷಮ್ಯ ಹುಟ್ಟಿ ಗಂಭೀರವಾಗದಂತೆ ಮಾತ್ರ ಸದಾ ಎಚ್ಚರ ವಹಿಸುತ್ತಿದ್ದರು. ಕ್ರಿಕೆಟ್ಟಿನ ತಾಂತ್ರಿಕ ವಿಷಯಗಳಲ್ಲಿ ಅವರು ತಲೆ ಹಾಕುತ್ತಿರಲಿಲ್ಲವಾದರೂ ಪ್ರಸಂಗ ಬಂದಾಗ, ಇಡೀ ತಂಡದ ಹಿತಕ್ಕೆ ಭಂಗ ಬರಬಹುದಾದಂಥ ಪರಿಸ್ಥಿತಿ ಒದಗಿದೆಯೆಂದೆನಿಸಿದರೆ ಅವರು ಸರಿಯಾದ ಸಮಯಕ್ಕೆ ಯೋಗ್ಯ ಸೂಚನೆ, ಎಚ್ಚರಿಕೆ ಕೊಡಲು ಹಿಂಜರಿಯುತ್ತಿರಲಿಲ್ಲ.

ಅಧಿಕಾರಿ ತಾರಾಪುರರಿಗಿಂತ ತೀರ ಭಿನ್ನ ಪ್ರಕೃತಿಯವರು. ಕ್ರಿಕೆಟ್ ಅವರ ಜೀವನದ ಒಂದು ಭಾಗವೇ ಆಗಿದೆ. ಅವರ ಉಸಿರು, ಕನಸು ಎಲ್ಲ ಕ್ರಿಕೆಟ್ಟೆ. ಅವರು ನಮ್ಮ ವ್ಯವಸ್ಥಾಪಕರು ಮಾತ್ರವಲ್ಲ, ನಮ್ಮ ತರಬೇತುಗಾರರೂ ಆಗಿದ್ದರು. ತಮಗೆ ಸಂಬಂಧವಿಲ್ಲದ ವಿಷಯ-ಗಳಲ್ಲಿ ಅಧಿಕಾರಿ ತಲೆ ಹಾಕುತ್ತಾರೆಂದು ನಮ್ಮ ತಂಡದ ಕೆಲ ಹಿರಿಯ ಸದಸ್ಯರು ಮೊದಮೊದಲು ಭಾವಿಸಿದರಾದರೂ ಅಧಿಕಾರಿಯವರು ಮಾತ್ರ ಸಕ್ರಿಯ ಆಸ್ಥೆ ವಹಿಸುವುದನ್ನು ಬಿಡಲಿಲ್ಲ.

ಪ್ರಾರಂಭದಲ್ಲಿ ಅವರ ಈ ವರ್ತನೆಯ ಬಗೆಗೆ ಮೂಡಿದ್ದ ತಪ್ಪು ತಿಳಿವಳಿಕೆ ಮಾಯವಾಗಿ ಅವರ ಸಲಹೆ ಸೂಚನೆಗಳು ನಮಗೆ ಅತ್ಯವಶ್ಯ ಎಂಬ ಅನುಭವ ನಮಗೆ ಬರತೊಡಗಿತು. ಚಂದ್ರಶೇಖರ ಹೆಚ್ಚು ಪರಿಣಾಮಕಾರಿ ಚೆಂಡುಗಾರರಾಗುವಂತೆ ಮಾಡಿದವರವರು. ಗವಾಸ್ಕರರನ್ನು ಬದಲಿ ಚೆಂಡುಗಾರನೆಂದು ಬಳಸಲು ಸೂಚಿಸಿದವರವರು. ಯಾವುದೇ ಆಹ್ವಾನವನ್ನೆದುರಿಸಿ ಗೆಲ್ಲಲೆತ್ನಿಸು-ವುದರಲ್ಲಿ ಸೋತರೆ ನಾಚಬೇಕಾದ್ದಿಲ್ಲವೆಂಬುದನ್ನು ನಮಗೆ ಮನದಟ್ಟು ಮಾಡಿಕೊಟ್ಟವರೂ ಅವರೆ. ನಾವು ಆಟದ ರೂಢಿ ಮಾಡಿಕೊಳ್ಳುತ್ತಿದ್ದಾಗ ತಾವೇ ಇಳಿದು ಬಂದು ನಮ್ಮ ತಪ್ಪುಗಳನ್ನು ತಿದ್ದುತ್ತಿದ್ದರು ಅಧಿಕಾರಿ.

ಕಟ್ಟುನಿಟ್ಟಿನ ಶಿಸ್ತುಗಾರರಾದ ಅಧಿಕಾರಿಯವರಿಗೆ ನಮ್ಮಲ್ಲಿ ಯಾರೂ ಕುಡಿತದಲ್ಲಿ ಮೈಮರೆಯುವುದು ಸೇರುತ್ತಿರಲಿಲ್ಲ. ಆ ಬಗ್ಗೆ ನಮ್ಮನ್ನೆಷ್ಟೋ ಸಲ ಅವರು ಎಚ್ಚರಿಸಿದ್ದೂ ಇದೆ. ತಂಡದ ಯಾವುದೇ ಸದಸ್ಯ ನೇರವಾಗಿ ಯಾವಾಗ ಬೇಕಾದರೂ ಅವರನ್ನು ಕಂಡು ಹೃದಯ ಬಿಚ್ಚಿ ಮಾತಾಡಬಹುದಿತ್ತು. ಆಗೆಲ್ಲ ನಮ್ಮ ನಮ್ಮ ಆಟದಲ್ಲಿಯ ತಪ್ಪು ಒಪ್ಪುಗಳನ್ನವರು ಮುಕ್ತ ಮನಸ್ಸಿನಿಂದ ಚರ್ಚಿಸಿ ಯೋಗ್ಯ ಸಲಹೆ ನೀಡುತ್ತಿದ್ದರು. ಇದರಿಂದಾಗಿ ನಮ್ಮ ಸ್ಥೈರ್ಯವನ್ನು ಕೊನೆಯವರೆಗೂ ಉಳಿಸಿಕೊಂಡು ಬರಲು ನಮಗೆ ಸಾಧ್ಯವಾಯಿತು.

ಇಂದಿನ ಆಟಗಾರರು

ಪಟೌಡಿಯವರ ಕೈಕೆಳಗೆ ಆಡುವುದು ನನಗೆ ಸಂತೋಷದಾಯಕವೆಂದು ನಾನು ಒಪ್ಪಿಕೊಳ್ಳ-ಬೇಕು. ಯಾರೊಬ್ಬರ ಆಟದ ಶೈಲಿಯನ್ನೂ ಅವರು ಕೆಡಿಸುತ್ತಿದ್ದಿಲ್ಲ. ತನ್ನ ಸ್ವಾಭಾವಿಕ ರೀತಿಯಲ್ಲೇ ಪ್ರತಿಯೊಬ್ಬನಿಗೂ ಆಡಲು ಹೇಳುತ್ತಿದ್ದರು. ತಮ್ಮ ಸಂಗಡಿಗರು, ತಮ್ಮಿಂದ ಏನು ಅಪೇಕ್ಷಿಸಲ್ಪಟ್ಟಿದೆಯೆಂದು ತಿಳಿದುಕೊಳ್ಳುವಷ್ಟು ಮತಿಯುಳ್ಳವರೆಂದು ಅವರು ಭಾವಿಸಿ-ದ್ದರು. ತಮ್ಮ ಆಟಗಾರರಲ್ಲಿ ಭರವಸೆಯಿಟ್ಟ

ದ್ದರಲ್ಲದೇ, ಆಟಗಾರರು ತಮ್ಮ ಪರಮಾವಧಿ ಸಾಮರ್ಥ್ಯವನ್ನು ಪ್ರದರ್ಶಿಸಬೇಕೆಂದು ಅಪೇಕ್ಷಿಸುತ್ತಿದ್ದರು. ಆಟಗಾರರ ಪ್ರತಿಕ್ರಿಯೆ ಹೇಗಿರುತ್ತಿತ್ತೆಂಬುದಕ್ಕೆ ನನ್ನ ಸ್ವಂತದ ಉದಾಹರಣೆಯನ್ನೇ ಕೊಡುತ್ತೇನೆ. ೧೯೬೯ ರಲ್ಲಿ ಆಸ್ಟ್ರೇಲಿಯದ ವಿರುದ್ಧ ದಿಲ್ಲಿಯ ಪಂದ್ಯದಲ್ಲಿ ನನ್ನ ಆಯ್ಕೆಯ ಬಗೆಗೆ ಸಂಶಯವಿತ್ತು. ಗಾಯಗೊಂಡ ನನ್ನ ಬೆರಳಿನ ಮೇಲೆ ಪಟ್ಟಿಗಳಿದ್ದಗ್ಯೂ, ಸ್ಥಳಿಕರಾದ ಗಂಡೊತ್ರಾರ ಬದಲು ಪಟೌಡಿ ನನ್ನನ್ನು ಬಯಸಿದರು. ಈ ವಿಶ್ವಾಸವನ್ನು ಸಾರ್ಥಕಗೊಳಿಸುವುದರಲ್ಲೇ ನಾನು ಸಂತೋಷ ಕಂಡುಕೊಂಡೆ. ನಾನು ಅಜೇಯ ೯೪ ಓಟಗಳನ್ನು ಗಳಿಸಿದ್ದಲ್ಲದೇ ವಿಶ್ವನಾಥ, ಬೇದಿಯವರ ಜೊತೆಯಾಟದಲ್ಲಿ ಭಾರತದ ವಿಜಯಕ್ಕೆ ಸಾಕ್ಷಿಯಾದೆ.

ಪ್ರಚಲಿತ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ, ತಂಡದ ಸದಸ್ಯರು ಪಟೌಡಿಯವರನ್ನು ಆದರಿಸುತ್ತಿದ್ದರು. ತಮ್ಮ ಬ್ಯಾಟಿಂಗ್ ಮತ್ತು ಕ್ಷೇತ್ರ ರಕ್ಷಣೆಯಲ್ಲಿ ಪಟೌಡಿ ಉತ್ತಮ ಮಟ್ಟವನ್ನು ಸ್ಥಾಪಿಸಿದ್ದರಲ್ಲದೇ ಇತರರಿಗೂ ತಮ್ಮ ಅತ್ಯುತ್ತಮ ಆಟವನ್ನು ಪ್ರದರ್ಶಿಸಲು ಪ್ರೇರಣೆ ನೀಡುತ್ತಿದ್ದರು. ಅವರ ವೈಫಲ್ಯಗಳಿಂದ ಅವರನ್ನು ಅಳೆಯುವುದು ಸಾಧುವಲ್ಲ. ವಿದೇಶವೊಂದರಲ್ಲಿ ಪಂದ್ಯಮಾಲಿಕೆಯನ್ನು ಗೆದ್ದ ಮೊದಲ ಭಾರತೀಯ ನಾಯಕ ಅವರೆನ್ನುವುದನ್ನು ನೆನಪಿನಲ್ಲಿಡಬೇಕು. ಆಗಿನ ಪರಿಸ್ಥಿತಿ ಈ ವಿಜಯಕ್ಕೆ ವಿಶೇಷ ಕಳೆ ತಂದಿದೆ. ಆಸ್ಟ್ರೇಲಿಯನ್ನರಿಂದ ೪—೦ ಆಟಗಳಿಂದ ಪರಾಜಯ ಅನುಭವಿಸಿದ ನಮ್ಮ ಸ್ಥೈರ್ಯ ತೀರ ಹೀನಾವಸ್ಥೆಯಲ್ಲಿತ್ತು; ಟೇಲರ್, ಮಾಟ್ಜ್, ಕಾಲಿನ್ಸ್ ಮತ್ತು ಇತರರಿಂದ ಹೆಚ್ಚಿನ ಆಘಾತವನ್ನು ನಿರೀಕ್ಷಿಸಿ ನಾವು ಹೆದರಿದ್ದೆವು. ಅವರನ್ನು, ಆಸ್ಟ್ರೇಲಿಯನ್ ಪ್ರತಿಸ್ಪರ್ಧಿಗಳಿಗಿಂತ ಹೆಚ್ಚಿನವರೆಂದು ನಾವು ಗಣಿಸಿದ್ದೆವು. ಆದರೆ ಅಸ್ತವ್ಯಸ್ತವಾಗಿದ್ದ ನಮ್ಮ ತಂಡ ಬಲು ಬೇಗ ಚೇತರಿಸಿಕೊಂಡು ಚೆನ್ನಾಗಿ ಸಂಘಟಿಸಲ್ಪಟ್ಟಿತು. ನಮ್ಮ ಬ್ಯಾಟ್ಸ್‌ಮನ್ ಹಾಗೂ ಸ್ಪಿನ್ನರುಗಳಿಗೆ ನಿಧಾನವಾಗಿದ್ದ ನ್ಯೂಝೀಲೆಂಡ್ ವಿಕೆಟ್ಟುಗಳು ಹಿಡಿಸಿದವು. ಪಂದ್ಯದಿಂದ ಪಂದ್ಯಕ್ಕೆ ನಾವು ಸುಧಾರಿಸುತ್ತ ನಡೆದೆವು. ಪಟೌಡಿಯವರಿಗೆ ತಂಡದ ಹಿರಿಯ ಸದಸ್ಯರೊಡನೆ ಸಮಾಲೋಚಿಸಬಾರದೆಂಬ ಯೋಚನೆಯೇನಿರಲಿಲ್ಲವಾದರೂ ಕೆಲವೇ ಜನರ ಮೇಲೆ ಸಂಪೂರ್ಣ ಅವಲಂಬಿಸಿದ್ದು ಅವರ ಏಕೈಕ ದೋಷವಾಗಿತ್ತೆನ್ನಬೇಕು.

ವೆಂಕಟ್ ಸ್ವಲ್ಪ ನಿಗೂಢ ವ್ಯಕ್ತಿ. ಮೇಲೆ ಮೇಲೆ ಒರಟಾಗಿ ಕಂಡರೂ ಅಂತರ್ಯದಲ್ಲಿ ಬಲು ಸೂಕ್ಷ್ಮಗ್ರಾಹಿ, ತಿಳಿವಳಿಕೆಯುಳ್ಳವರು. ಅವರು

ನೇರ ಹಾಗೂ ಸರಳ ಮಾತುಗಾರರು. ಅವರ ದೃಢವೂ ಯಾರಿಗೂ ಬಗ್ಗದಂಥದೂ ಆದ ನಡವಳಿಕೆಯನ್ನು ಅಪಾರ್ಥ ಮಾಡಿಕೊಳ್ಳಲಾಗಿದೆ. ಉಪಚಾರಕ್ಕಾಗಿಯಾದರೂ ಅವರು ತಮ್ಮ ಯಾವ ತತ್ತ್ವವನ್ನೂ ಸಡಿಲಿಸಲಾರರು. ವೆಸ್ಟ್ ಇಂಡೀಸ್‌ನಲ್ಲಿ ಪುತ್ರೋತ್ಸವವನ್ನು ಆಚರಿಸುತ್ತಿದ್ದ ಸೋಬರ್ಸ್ ನೀಡಿದ ಸಿಗಾರ್ ಪ್ಯಾಕೆಟ್ಟನ್ನು ನಿರಾಕರಿಸಿದ್ದಕ್ಕಾಗಿ ಅವರನ್ನು ತಪ್ಪು ತಿಳಿಯಲಾಯಿತು. ವೆಂಕಟರಾಘವನ್ ಧೂಮಪಾನ ಮಾಡುವುದಿಲ್ಲವಾದ್ದರಿಂದ ಅದನ್ನು ನಿರಾಕರಿಸುವಲ್ಲಿ ಅವರಿಗೆ ತಪ್ಪೇನೂ ಕಾಣಲಿಲ್ಲ. ಅತ್ಯಂತ ಶಿಸ್ತಿನವರಾದ ಅವರು ತಂಡದ 'ಅತಿಯೋಗ್ಯ'ರಲ್ಲಿ ಒಬ್ಬರಾಗಿದ್ದರು. ಅವರದು ಧಾರ್ಮಿಕ ಪ್ರವೃತ್ತಿ. ಆಟದ ಮೈದಾನದಲ್ಲಿ ಅವರ ತುಟಿಗಳ ಚಲನೆಯಿಂದ, ಅವರು ಶ್ಲೋಕಗಳನ್ನು ಹೇಳುತ್ತಿದ್ದಾರೆಂದು ನಾವು ಹೇಳಬಹುದಿತ್ತು. 'ಕ್ಲೋಸ್–ಇನ್'ನಲ್ಲಿ ಅವರು ಅದ್ಭುತ ಕ್ಯಾಚರ್. ಅವರ ಬ್ಯಾಟಿಂಗ್ ಸಹ ಉಪಯುಕ್ತವಾದದ್ದು. ೫೧ ಓಟಗಳ ಅವರ ಆಟ ಐದನೆಯ ಟೆಸ್ಟ್ ಮಾತ್ರವಲ್ಲ, ಇಡೀ ಪಂದ್ಯಮಾಲಿಕೆಯ ಗತಿಯನ್ನೇ ಬದಲಿಸಿತು. ಸ್ವೀಪ್ ಮೇಲೆ ಅವರಿಗಿದ್ದ ಮೋಹ ಅವರ ದೋಷ. ಬ್ಯಾಟ್ ಮಾಡಲು ಹೋದರೆಂದರೆ ಅವರೆಷ್ಟು ಸಲ ಸ್ವೀಪ್ ಮಾಡುತ್ತಾರೆಂದು ನಾವು ನಮ್ಮಲ್ಲೇ ಜಿದ್ದು ಕಟ್ಟುತ್ತಿದ್ದೆವು.

ವೆಸ್ಟ್ ಇಂಡೀಸ್‌ನಲ್ಲಿ ನಮ್ಮ ಅದೃಷ್ಟವನ್ನು ರೂಪಿಸಿದವರು ದಿಲೀಪ ಸರ್ದೇಸಾಯಿ. ವಿಜಯ ಮರ್ಚಂಟ್ ಅವರನ್ನು 'ಭಾರತೀಯ ಕ್ರಿಕೆಟ್ಟಿನ ಪುನರುತ್ಥಾನದ ಕಾರಣ ಪುರುಷ'ರಲ್ಲಿ ಒಬ್ಬರೆಂದಿದ್ದಾರೆ. ವೆಸ್ಟ್ ಇಂಡೀಸ್‌ಗೆ ಅವರ ಆಯ್ಕೆ ಕೊನೆಯ ಗಳಿಗೆಯಲ್ಲೆಂಬಂತೆಯೇ ಆಯಿತು. ನಮ್ಮ ಮೊದಲ ಪಂದ್ಯದಲ್ಲಿ, ಗಾಯಗೊಂಡ ವಿಶ್ವನಾಥರ ಬದಲಿಗೆಂದು ಕೊನೆಯ ಕ್ಷಣದಲ್ಲಿ ಸೇರಿಸಲ್ಪಟ್ಟ ಅವರು ಮುಂದೆ ಇಡೀ ಮಾಲಿಕೆಯಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಆಟದಲ್ಲಿ ಅವರಿಗಿರುವ ಶ್ರ... ತರುಣರಿಗೊಂದು ಪಾಠವಾಗಬೇಕು. ಅವರ... ತುಸು ಅಂಧಶ್ರದ್ಧೆಯ ಛಾಯೆ ಇತ್ತು. ನಮ... ವೆಸ್ಟ್ ಇಂಡೀಸ್ ಪ್ರವಾಸದಲ್ಲಿ, ಒಟ್ಟು ಮೊ... ೮ ಆಗುವಂತಿರುವ ಸಂಖ್ಯೆಯ ಕೋಣೆಗಳಲ್ಲಿಯೆ... ಇಳಿದುಕೊಳ್ಳುತ್ತಿದ್ದರು. ಅವರ ಹುಟ್ಟಿದ ದಿ... ಆಗಸ್ಟ್ ೮ ರೊಂದಿಗೆ, ಇದರದ್ದೇನಾದರ... ಸಂಬಂಧವಿರಬಹುದು. ಆಟಕ್ಕೆ ಮೊದಲ... ತಾಯಿತವನ್ನು ಮುಟ್ಟಿಕೊಂಡು ಹರ... ಕೊಳ್ಳುತ್ತಿದ್ದರು. ಆಟದಲ್ಲಿ ಒಮ್ಮೆ ಅವರಿ... 'ಟಚ್' ಸಿಕ್ಕರೆ ಸಾಕು, ಎದುರಾಳಿ ಚೆಂಡುಗಾ... ರಿಗೆ ತಾವು ಏನೆಲ್ಲ ಮಾಡಬಹುದೆಂದು ಪ್ರಮಾ... ಮಾಡುತ್ತಿದ್ದರು.

ಗವಾಸ್ಕರ್ ಮೊದಲ ದರ್ಜೆಯ ಆಟಗಾ... ರಾಗುವರೆಂದು ನಮಗೆ ತಿಳಿದಿತ್ತು. ಆದ... ವೆಸ್ಟ್ ಇಂಡೀಸ್‌ನಲ್ಲಿ ಅವರು ಆ ಮೊದಲಿ... ವಿಕ್ರಮಗಳನ್ನೆಲ್ಲ ಈ ರೀತಿ ಮುರಿದು ಹಾಕುತ್ತಾ... ರೆಂದು ನಾವು ಯಾರೂ ಊಹಿಸಿರಲಿಲ್ಲ. ಅವರ... ಆಡಲು ಹೊರಟಾಗ ಹೇಳುತ್ತಿದ್ದರು. "Se... you Ajit,'' ಎಂದು. ನಾನು ಉತ್ತರಿಸುತ್ತಿದ್ದೆ... "ಆಟ ಮುಗಿಯುವ ವರೆಗೆ ನಿನ್ನನ್ನು ನೋಡ... ಬಯಸುವುದಿಲ್ಲ." ಅವರು ನನ್ನ ಮಾತನ್ನು... ಶಬ್ದಶಃ ಪಾಲಿಸುತ್ತಿದ್ದರು! ಒಮ್ಮೆ ಒಂದು ತಪ್ಪು... ಹೊಡೆತ ಬಾರಿಸಿದ ಮೇಲೆ, ಸರಿಯಾಗಿ ಸಾಧಿ... ಕೊಂಡ ಹೊರತು ಆ ಹೊಡೆತವನ್ನೇ ಮತ್ತೆ... ಪ್ರಯೋಗಿಸದಷ್ಟು ಲಕ್ಷ್ಯಗೊಟ್ಟು ಅವರು ಆಡ... ತ್ತಿದ್ದರು. ಅವರು ಆಟದಲ್ಲಿ ಹೇಗೆ ಮಗ್ನ... ರಾಗುತ್ತಿದ್ದರೆಂಬುದಕ್ಕೊಂದು ಉದಾಹರಣೆ... ಟ್ರಿನಿಡಾಡಿನ ನಮ್ಮ ಕೊನೆಯ ಟೆಸ್ಟ್. ತಮ್ಮ... ಭಾರೀ ಆಟದಲ್ಲಿ ಅವರು ಅದೇ ಆಗ ಶತಕವನ್ನು... ದಾಟಿದ್ದರು. ಆಬಿದ್ ಅಲಿ ಅವರನ್ನು ಕೂಡಿ... ಕೊಂಡಾಗ ಸೋಬರ್ಸ್ ಹೊಸ ಚೆಂಡನ್ನು... ಪಡೆದು ಆಬಿದರನ್ನು ತಮ್ಮ ಔಟ್ ಸ್ವಿಂಗರ... ಗಳಿಂದ ತೊಂದರೆಪಡಿಸಿದರು. ಪಾನೀಯ... ವಿರಾಮದಲ್ಲಿ ಹನ್ನೆರಡನೆಯ ಆಟಗಾರ...

ಮೂಲಕ ಗವಾಸ್ಕರರಿಗೆ ಆಬಿದರನ್ನು ರಕ್ಷಿಸಲು ಸೂಚಿಸಲಾಯಿತು. ಅನಂತರ ಒಮ್ಮೆಲೇ ಗವಾಸ್ಕರರು ಅಪಾಯಕಾರೀ ಹೊಡೆತಗಳನ್ನು ಬೀಸತೊಡಗಿದರು. ಸುದೈವವಶಾತ್ ಅವರು ಉಳಿದುಕೊಂಡರು. ಚಹದ ವಿರಾಮದಲ್ಲಿ ಆಮೇಲೆ ಅವರು ತಮಗೆ ಕೊಟ್ಟ ಆ ಸೂಚನೆ ತಮ್ಮನ್ನು ಗಡಿಬಿಡಿಗೊಳಿಸಿತೆಂದು ನನಗೆ ಹೇಳಿದರು.

ನಮ್ಮ ಆಯ್ಕೆಗಾರರು ವೆಸ್ಟ್ ಇಂಡೀಸ್‌ನಲ್ಲಿ ನಮಗೆ ಧಾರಾಳವಾಗಿ ಸ್ಪಿನ್ನರುಗಳನ್ನು ಒದಗಿಸಿದ್ದರು. ನಮ್ಮ ಹಿರಿಯ ಬೌಲರ್ ಪ್ರಸನ್ನ. ಗುರಿ ಮತ್ತು ಅಳತೆಗಳ ಮೇಲಿನ ಅವರ ಪ್ರಭುತ್ವ ಅದ್ಭುತವಾಗಿತ್ತು. ಅವರ ನಿಖರತೆ ಎಷ್ಟರ ಮಟ್ಟಿಗಿತ್ತೆಂದರೆ ಅವರಿಗೆ ಕ್ಷೇತ್ರರಕ್ಷಕರನ್ನು ಹೊಂದಿಸುವಾಗ ನನಗೆ ಎಳ್ಳಷ್ಟೂ ತೊಂದರೆಯಾಗುತ್ತಿರಲಿಲ್ಲ. ತಮ್ಮ ಚೆಂಡಿನ ಹಾರಾಟ (flight)ವನ್ನು ಚಾಣಾಕ್ಷತನದಿಂದ ಬದಲಿಸಿ ಅವರು ವೆಸ್ಟ್ ಇಂಡೀಸ್ ಬ್ಯಾಟ್ಸ್‌ಮನ್ನರನ್ನು ಮರುಳು ಮಾಡಿದರು. ಅವರ ದಾಳಿಯ ಬಲೆಯನ್ನು ಹರಿಯಲು ವೆಸ್ಟ್ ಇಂಡೀಸ್‌ನ ಹಿರಿ ಹುದ್ದರಿಗಳಿಗೆ ಬಹಳ ಕಾಲ ಬೇಕಾಯಿತು. ಆದರೆ ಎರಡನೇ ಟೆಸ್ಟ್‌ನಲ್ಲಿ ಆದ ಗಾಯದಿಂದ ಅವರು ಮೊದಲಿನ ಪ್ರಸನ್ನರಾಗಿ ಉಳಿಯಲಿಲ್ಲ. ಇಂಗ್ಲೆಂಡಿನಲ್ಲಂತೂ ಅವರು ಸಂಪೂರ್ಣ ಕಳೆಗುಂದಿದ್ದರು.

ಮೈಸೂರಿನ ಇನ್ನೊಬ್ಬ ಆಟಗಾರ ವಿಶ್ವನಾಥರದು ಇದಕ್ಕೆ ತದ್ವಿರುದ್ಧ ಅನುಭವ. ವೆಸ್ಟ್ ಇಂಡೀಸ್‌ನಲ್ಲಿ ಒಂದು ಬಗೆಯ ಉದಾಸೀನತೆಯಿಂದ ಆಡಿದರೂ ಇಂಗ್ಲೆಂಡಿನಲ್ಲಿ ಅವರು ತಮ್ಮ ನಿಜವಾದ ಮಟ್ಟವನ್ನು ತೋರಿಸಿದರು. ಯಾವಾಗಲೂ ಸೂಚನೆಗಳಿಗೆ ಅನುಸಾರವಾಗಿಯೆ ಅವರು ಆಡುತ್ತಿದ್ದರು. ಅವು ತಮ್ಮ ಆಟದ ಪದ್ಧತಿಯ ವಿರುದ್ಧವಾಗಿದ್ದರೂ ಅವರು ತಮ್ಮನ್ನು ಹಿಡಿತದಲ್ಲಿಟ್ಟುಕೊಳ್ಳುತ್ತಿದ್ದರು. ಓವಲ್‌ನಲ್ಲಿ ನಿಜವಾಗಿಯೂ ವಿಜಯದ ಹೊಡೆತವನ್ನು ಅವರು ಹೊಡೆಯಬೇಕಿತ್ತು. ಆದರೆ ಅವರು ತಮ್ಮದೇ ಆದ, ನಿಸ್ವಾರ್ಥ, ಪ್ರಾಮಾಣಿಕ ರೀತಿಯಲ್ಲಿ ವಿವರಿಸಿದ ಪ್ರಕಾರ, ತಮ್ಮ ಮೈಸೂರಿನ ಸಂಗಾತಿಯಾದ ಚಂದ್ರಶೇಖರ ಸಾಕಷ್ಟು ಕೀರ್ತಿಯನ್ನು ಪಡೆದಿದ್ದರಲ್ಲದೆ ಹೈದರಾಬಾದಿನವರಾರೂ ವಿಶೇಷ ಕಾರ್ಯವನ್ನು ಮಾಡಿದ್ದಿಲ್ಲ; ಆದ್ದರಿಂದ ಅಬೀದ್ ಅಲಿ ವಿಜಯದ ಓಟ ಗಳಿಸಿ ಸಂಭ್ರಮದಲ್ಲಿ ಪಾಲುಗೊಳ್ಳಬೇಕೆಂದು ಅವರಿಗೆ ಅನಿಸಿತಂತೆ. (ಓವಲ್‌ನಲ್ಲಿ ವಿಜಯಕ್ಕಾಗಿ ೧೭೩ ಓಟಗಳನ್ನು ಭಾರತ ಗಳಿಸಬೇಕಿತ್ತು. ಸ್ಕೋರು ೧೭೦ ಆಗಿದ್ದಾಗ ವಿಶ್ವನಾಥ ಔಟಾದರು. ನಂತರ ಬಂದ ಆಬಿದರು

ವಿಜಯದ ಓಟಗಳನ್ನು ಗಳಿಸಿದರು.) ತಪ್ಪುತಪ್ಪಾಗಿದ್ದರೂ ನಿರರ್ಗಳವಾದ ತಮ್ಮ ಹಿಂದಿಯಿಂದ ಅವರು ಎಲ್ಲರನ್ನೂ ನಗಿಸುತ್ತಿದ್ದರು. ಅದರಲ್ಲಿ ನಾಮಪದಗಳಿರಲಿ ಕ್ರಿಯಾಪದಗಳೂ ಕೆಲವೊಮ್ಮೆ ಇರುತ್ತಿರಲಿಲ್ಲ. ಅವರ ಉತ್ತಮ ಹಾಸ್ಯಚಟಾಕಿಯೆಂದರೆ ನಾವು ವಿಮಾನದಲ್ಲಿ ಸಾಗುತ್ತಿದ್ದಾಗ, ಹಿಂದಿನಿಂದ ನಮ್ಮನ್ನು ದಾಟಿ ಹೋಗಲು ಪ್ರಯತ್ನಿಸುತ್ತಿದ್ದ ವಿಮಾನವನ್ನು ಕಂಡು ನಮ್ಮ ಚಾಲಕನಿಗೆ ವೇಗವರ್ಧಕ (accelerator) ಮೇಲೆ ಕಾಲಿಡಲು ಕೇಳಿದ್ದು.

ಇಂಗ್ಲೆಂಡಿಗೆ ಹೊರಡುವ ಮುನ್ನ ಚಂದ್ರಶೇಖರ ತಂಡದಲ್ಲಿ ತಮ್ಮ ಸ್ಥಾನಕ್ಕಾಗಿ ಪರಿಶ್ರಮಿಸಬೇಕಾಗುವುದೆಂದು ನಾವು ತಿಳಿದಿದ್ದೆವು. ೧೯೬೭–೬೮ ರ ಮಾಲಿಕೆಯಲ್ಲಿ ವಿಫಲರಾಗಿದ್ದರೂ ಆ ವರ್ಷ ನಾವು ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ಇದ್ದಾಗ ರಣಜಿ ಟ್ರೋಫಿ ಮತ್ತಿತರ ಪಂದ್ಯಗಳಲ್ಲಿ ಮೈಸೂರಿಗಾಗಿ ಅವರು ಚೆನ್ನಾಗಿ ಆಡಿದ್ದರು. ಆದರೆ ಲಾರ್ಡ್ಸ್ ಪಂದ್ಯದಷ್ಟೊತ್ತಿಗೆ ಅವರು ನಮ್ಮ ದಾಳಿಯ ಯೋಜನೆಯ ಅವಿಭಾಜ್ಯ ಅಂಗವೇ ಆಗಿದ್ದರು. ಇತರ ಆಟಗಳಲ್ಲಿ ಸ್ವಲ್ಪವೇ ಉಪಯೋಗಿಸಿದ್ದರೂ ತಮ್ಮ ನಿಜ ಸ್ವರೂಪವನ್ನು ಓವಲ್ ಪಂದ್ಯದ ನಿರ್ಣಾಯಕ ಗಳಿಗೆಯಲ್ಲಿ ಅವರು ಪ್ರಕಟಿಸಿದರು.

ಇಂಜಿನಿಯರ್ ಇಂಗ್ಲೆಂಡಿನಲ್ಲೇ ಇರಲು ಇಚ್ಛಿಸಿದರೆ ಭಾರತೀಯ ಕ್ರಿಕೆಟ್, ಅವರಷ್ಟೇ ಉತ್ತಮರಾದ ಪಿ. ಕೃಷ್ಣಮೂರ್ತಿಯವರ ಮೇಲೆ ಅವಲಂಬಿಸಬಹುದು. ವೆಸ್ಟ್ ಇಂಡೀಸ್‌ನಲ್ಲಿ ಅವರ ವಿಕೆಟ್ ಕೀಪಿಂಗ್ ಉತ್ತಮವಾಗಿತ್ತು. ಬ್ಯಾಟಿಂಗಿನಲ್ಲಿ ಇಂಜಿನಿಯರರ ರಭಸವಿರದಿದ್ದರೂ ಅವರ ಬ್ಯಾಟಿಂಗ್ ಸಹ ಉಪಯುಕ್ತವಾಗಿತ್ತು.

ರೂಸಿ ಜೀಜೀಭಾಯ್ ಉತ್ತಮ ನಡವಳಿಕೆಯ ಆಕರ್ಷಕ ಆಟಗಾರ. ಅವರ ಸಾಮಾನುಗಳಲ್ಲಿ ಶವಪೆಟ್ಟಿಗೆಯಂತೆ ಕಾಣುತ್ತಿದ್ದ ಭಾರೀ ಕಟ್ಟಿಗೆಯ ಪೆಟ್ಟಿಗೆಯೊಂದು ಇದ್ದುದರಿಂದ ಅವರು ತುಂಬ ಕುಚೋದ್ಯಕ್ಕೆ ಒಳಗಾಗಬೇಕಾಯಿತು. ಅಲ್ಲಿನ ನಡುಗಡ್ಡೆಗಳಲ್ಲಿ ಅವರು ಜನಪ್ರಿಯರಾಗಿದ್ದರು. ಅವರ ಹೆಸರಿನ 'ಜೀಜೀ'ಯನ್ನು ಒತ್ತಿ ಉಚ್ಚರಿಸುವುದು ಜನಕ್ಕೆ ಸೇರುತ್ತಿತ್ತು.

ಮುಂದಿನ ದಿನಗಳಲ್ಲಿ ನಾವು ಭರವಸೆ ಇಡಬಹುದಾದ ಆಟಗಾರರಲ್ಲೊಬ್ಬರು ಏಕನಾಥ ಸೋಳ್ಕರ. ವೆಸ್ಟ್ ಇಂಡೀಸ್‌ನಲ್ಲಿ ಎಷ್ಟೋ ಸಲ ಸರ್ದೆಸಾಯಿಯವರಿಗೆ ಉತ್ತಮ ಸಹಕಾರ ನೀಡಿ ಪರಿಸ್ಥಿತಿಯನ್ನು ಸುಧಾರಿಸಿದ್ದಾರೆ. ಸ್ಪಿನ್‌ಗಿಂತ ವೇಗದ ಚೆಂಡುಗಾರಿಕೆಯನ್ನು ಉತ್ತಮವಾಗಿ ಎದುರಿಸುತ್ತಾರವರು. ನಮ್ಮ ಸುದೈವದಿಂದ, ಹೊಸ ಚೆಂಡು ಬಂದಾಗಲೆಲ್ಲ ಅದನ್ನು ಎದುರಿಸಲು ಅವರು ಸಿದ್ಧರಾಗಿರುತ್ತಾರೆ. ಮುಂಬಯಿಯ ಪರವಾಗಿ ಆಡುವಾಗ ಅವರು ಚೆಂಡು ದಾಳಿಯನ್ನು ಪ್ರಾರಂಭಿಸುವುದಿಲ್ಲವಾದರೂ, ಇಂಗ್ಲೆಂಡಿನಲ್ಲಿ ಆಬಿದರೊಡನೆ ಪ್ರಾರಂಭದ ದಾಳಿಯ ಹೊಣೆಯನ್ನು ಅವರು ಸ್ವೀಕರಿಸಿದರಲ್ಲದೆ ಲಕ್‌ಹರ್ಸ್ಟರನ್ನು ತಮ್ಮ ಬಲಿಪಶು (bunny)ವನ್ನಾಗಿ ಮಾಡಿಕೊಂಡರು. ಯಾವ ಸ್ಥಾನದಲ್ಲೂ ಅವರ ಕ್ಷೇತ್ರರಕ್ಷಣೆ ಅದ್ಭುತವಾಗಿತ್ತು. ವೆಸ್ಟ್ ಇಂಡೀಸ್‌ನಲ್ಲಿ, ಸೋಳ್ಕರ ಮತ್ತು ಲಾಯ್ಡ್ — ಇಬ್ಬರಲ್ಲಿ ಶ್ರೇಷ್ಠ ಕ್ಷೇತ್ರರಕ್ಷಕರು ಯಾರೆಂದು ನಿರ್ಣಯಿಸುವುದು ನಿಜಕ್ಕೂ ಕಷ್ಟವಾಗಿತ್ತು. ಓವಲ್‌ನಲ್ಲಿ ನಾಟ್‌ರನ್ನು ಉಚ್ಚಾಟಿಸಲು ಅವರು ಹಿಡಿದ ಅದ್ಭುತ ಕ್ಯಾಚ್ ನಮಗೆ ಆಟದ ಮೇಲೆ ಹೆಚ್ಚಿನ ಹಿಡಿತವನ್ನು ಕೊಟ್ಟಿತು.

ಯಾವಾಗಲೂ ಆತ್ಮವಿಶ್ವಾಸದಿಂದ ಕೂಡಿದ ಅವರ ವ್ಯಕ್ತಿತ್ವವೇ ಒಂದು ವಿಚಿತ್ರ. ಅವರ ಇಂಗ್ಲಿಷ್ ಸರಾಗವಾಗಿರದಿದ್ದರೂ ಎದುರಾಳಿಗಳೊಡನೆ ಮಾತಿನ ಯುದ್ಧಗಳಿಗೆ ಹಿಂಜರಿಯುತ್ತಿದ್ದಿಲ್ಲ. ಮೊದಲನೆ ಟೆಸ್ಟ್‌ನಲ್ಲಿ ಬೇಗನೆ ಔಟಾದ ಅವರ 'ಬಲಿಪಶು' ಲಕ್‌ಹರ್ಸ್ಟ್, ಸೋಳ್ಕರರ ನಗೆಯನ್ನು ಸಹಿಸದೇ ಹೇಳಿದರು: "ತಾಳು, ಕರಿಮೊಗದವನೇ, ಸೀರೀಸ್ ಇನ್ನೂ ಮುಗಿದಿಲ್ಲ." ಮತ್ತೂ ಎರಡು ಸಲ ಲಕ್‌ಹರ್ಸ್ಟ್

ಸೋಳ್ಕರರಿಗೇ ಬಲಿಬಿದ್ದಾಗ ಅವರು ನಿರ್ವಿಕಾರ ವಾಗಿ ಲರ್ಕ್‌ಹರ್ಸ್ಟರನ್ನು ಕೇಳಿದರು: "ಈಗಾದರೂ ಸೀರೀಸ್ ಮುಗಿಯಿತೆ ?"

೧೯೬೯ರಲ್ಲಿ ಹೈದರಾಬಾದಿನಲ್ಲಿ ಸೋಳ್ಕರ, ನ್ಯೂಝಿಲೆಂಡ್ ವಿರುದ್ಧ 'ಸೊನ್ನೆ'ಯಿಂದ ತಮ್ಮ ಮೊದಲ ನಿರ್ಣಾಯಕ ಆಟ ಪ್ರಾರಂಭಿಸಿದರು. ಕಾನಪುರದಲ್ಲಿ ವಿಶ್ವನಾಥ ಅಷ್ಟೇ ದರಿದ್ರವಾಗಿ ಪ್ರಾರಂಭ ಮಾಡಿದಾಗ, ಅವರ ಸಹವಾಸಿ (roomie) ಆಗಿದ್ದ ಸೋಳ್ಕರ ಅವರನ್ನು ಸಮಾಧಾನ ಪಡಿಸಿದರು. ಓವಲ್‌ನಲ್ಲೂ ಮೊದಲ ಇನ್ನಿಂಗ್ಸಿನಲ್ಲಿ ಸೊನ್ನೆಗೆ ಔಟಾದ ವಿಶ್ವನಾಥರನ್ನು ಸಮಾಧಾನಿಸಿದವರೂ ಅವರೇ.

ಬ್ಯಾಟಿಂಗ್‌ನಲ್ಲಿ ಅಷ್ಟೇನೂ ಯಶಸ್ವಿಯಾಗದಿದ್ದರೂ ಮಂಕಡ್ ಯಾವಾಗಲೂ ಉತ್ಸಾಹಿಯಾಗಿದ್ದರು. ಅತ್ಯಂತ ಸಣ್ಣ ಮೊತ್ತಗಳಿಗೆ ಔಟಾದಾಗಲೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಿರಲಿಲ್ಲ. ನಮ್ಮ ಆಟಗಾರರೆಲ್ಲ ಲಂಡನ್ನಿನಲ್ಲಿ ಒಂದು ಚಲಚ್ಚಿತ್ರ ನೋಡಿದ್ದರು. ಅದರಲ್ಲಿ ಆಗಾಗ ಬರುವ 'ವಾಲ್ಡೀಸ್ ಬರುತ್ತಿದ್ದಾನೆ' ಎಂಬುದನ್ನು ಮಂಕಡ್ ತಮ್ಮ ಘೋಷಣೆಯನ್ನಾಗಿ ಮಾಡಿಕೊಂಡರು. 'ಮಂಕಡ್ ಬರುತ್ತಿದ್ದಾನೆ' ಎಂದು 'ಇಲ್ಲೀ'*ಯನ್ನು ಎಚ್ಚರಿಸಬೇಕೆಂದು ನಮಗೆಲ್ಲ ಹೇಳುತ್ತಿದ್ದರು.

ಬಿಶನ್‌ಸಿಂಗ್ ಬೇದಿಯಂಥವರಂಥ ಎಡಗೈ ಸ್ಪಿನ್ನರನ್ನು ವಿದೇಶದ ಆಟಗಾರರು, ಅದರಲ್ಲೂ ಇಂಗ್ಲೀಷರು ಕಂಡು ಬಹಳ ದಿನಗಳಾಗಿರಬೇಕು. ಅಲ್ಲಿನ ವಿಮರ್ಶಕರಂತೂ ಅವರ ಬಗ್ಗೆ ಕೋಲಾಹಲವನ್ನೆಬ್ಬಿಸುತ್ತಿದ್ದರು. ಅಂಡರ್‌ವುಡ್ಡರೊಡನೆ ಅವರನ್ನು ಹೋಲಿಸಿ, ಬಹಳವಾಗಿ ಪ್ರಶಂಸಿಸುತ್ತಿದ್ದರು. ಬೇದಿಯವರ ಚೆಂಡುಗಾರಿಕೆಯು ವೆಸ್ಟ್ ಇಂಡೀಸ್‌ನಲ್ಲಿ ನಮ್ಮ ಡಬಲ್ ಆಫ್‌ಸ್ಪಿನ್ ದಾಳಿ ಹಾಗೂ ಇಂಗ್ಲಂಡಿನಲ್ಲಿ ಚಂದ್ರಶೇಖರರ ದಾಳಿಯನ್ನು ಹರಿತಗೊಳಿಸಿತು. ಕೆಲವೊಮ್ಮೆ ಅವರು ತಮಗೆ ದೊರೆತ ಪ್ರಶಂಸೆಯಿಂದ ಉಬ್ಬಿ ಹೋದದ್ದೂ ಇದೆ. ಚೆಂಡಿನ ಹಾರಾಟವನ್ನು ಹೆಚ್ಚಿಸಿ ವಿಕೆಟ್‌ಗಳನ್ನು 'ಕೊಳ್ಳುವ' ಪ್ರಯತ್ನವನ್ನು, ರನ್ ಕೊಡದೇ ಬಿಗಿಯಾಗಿ ಚೆಂಡೆಸೆಯಬೇಕಾದ ಸಂದರ್ಭಗಳಲ್ಲಿ ಅವರು ಮಾಡಿದ್ದೂ ಇದೆ. ಓವಲ್‌ನ ಕೊನೆಯ ಘಟ್ಟದಲ್ಲಿ, ದಾಳಿಯಲ್ಲಿ ತಮಗೆ ಪಾಲು ಸಿಗಲಿಲ್ಲವೆಂದು ಅವರು ಕಳವಳಗೊಂಡಿದ್ದರು. ಆದರೆ ಚಂದ್ರಶೇಖರ್ ಮತ್ತು ವೆಂಕಟ್ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದುದರಿಂದ ಅವರನ್ನು ಉಪಯೋಗಿಸುವ ಅವಶ್ಯಕತೆ ನನಗೆ ಕಾಣಲಿಲ್ಲ.

ವೆಸ್ಟ್ ಇಂಡೀಸ್‌ನಲ್ಲಿ

ಕಿಂಗ್‌ಸ್ಟನ್ ಪಂದ್ಯ

ಯಾವುದೇ ಮಾಲಿಕೆಯ ಮೊದಲ ಪಂದ್ಯದಲ್ಲಿ ಎರಡೂ ಪಕ್ಷಗಳು ಒಂದನ್ನೊಂದು, ದೌರ್ಬಲ್ಯಗಳಿಗಾಗಿ ಕೂಲಂಕಷವಾಗಿ ಪರೀಕ್ಷಿಸುತ್ತವೆ. ವೆಸ್ಟ್ ಇಂಡೀಸ್‌ನವರು ತಮ್ಮ ತಂಡವನ್ನು ಪುನಾರಚಿಸುವವರಿದ್ದಾರೆಂದು ನಮಗೆ ಗೊತ್ತಿತ್ತು. ಅಲ್ಲದೇ ನಮ್ಮವರೂ ಅವರಿಗೆ ಹೊಸಬರಾಗಿದ್ದರು. ವೆಂಕಟ್ ನನ್ನ ಉಪನಾಯಕರಾಗಿದ್ದರೂ ಸಲಹೆಗಾಗಿ ನಾನು ಅನುಭವಿಗಳಾದ ಜಯಸಿಂಹ, ಪ್ರಸನ್ನ, ಸರ್ದೇಸಾಯಿ ಅವರನ್ನು ಹೆಚ್ಚಾಗಿ ಅವಲಂಬಿಸಿದ್ದೆ. ನಮ್ಮ 'ಧೋರಣೆ'ಗೆ ನಾನಾಗಲೇ ಒಂದು ರೂಪ ಕೊಟ್ಟಿದ್ದೆ. ಆಸ್ಟ್ರೇಲಿಯ ಮತ್ತು ವೆಸ್ಟ್ ಇಂಡೀಸ್‌ನ ಸಾಹಸೀ ಬ್ಯಾಟ್ಸ್‌ಮನ್ನರನ್ನು 'ಪಿನ್' ಮಾಡಿದರೆ ಅವರು ಖಂಡಿತ ದುಡುಕಿನ ಹೊಡೆತಗಳಿಗೆ ಕೈ ಹಾಕುತ್ತಾರೆ. ಇಂಗ್ಲೀಷರು ಹಾಗಲ್ಲ. ಬೇಕಾದಷ್ಟು ಹೊತ್ತು ಕಾಯಲು ಅವರು ಸಿದ್ಧರು. ಉದಾಹರಣೆಗೆ, ನಾಡಕರ್ಣಿಯವರು ಸತತವಾಗಿ ೧೩ ಮೇಡನ್‌ಗಳನ್ನು ವೆಸ್ಟ್ ಇಂಡಿಯನ್ ಅಥವಾ ಆಸ್ಟ್ರೇಲಿಯನ್

* ಇಂಗ್ಲಂಡ್ ತಂಡದ ನಾಯಕರಾಗಿದ್ದ ರೇ ಇಲಿಂಗ್‌ವರ್ಥ್.

ಬ್ಯಾಟ್ಸ್‌ಮನ್‌ರಿಗೆ ಎಸೆಯುವುದೆಂದರೆ ಅದು ಊಹೆಗೂ ನಿಲುಕಲಾರದ ಮಾತು.

ನಾವು ಕಿಂಗ್‌ಸ್ಟನ್‌ಗೆ ಬರುವಷ್ಟರಲ್ಲಿ ತಂಡ ತಾನೇ ತಯಾರಾಗಿತ್ತು. ಗವಾಸ್ಕರ, ವಿಶ್ವನಾಥರಿಗೆ ಆಡಲು ಸಾಧ್ಯವಿರಲಿಲ್ಲ. ಮಂಕದ್ ಮತ್ತು ಜಯಂತಿಲಾಲರಲ್ಲಿ, ಜಯಂತಿಲಾಲರ ಕ್ಷೇತ್ರರಕ್ಷಣೆಯ ಕಾರಣ ಅವರನ್ನು ಆರಿಸಲಾಯಿತು. ದುರಾನಿ, ಜಯಸಿಂಹ, ಸೋಳ್ಕರರು ಇದ್ದ ಬ್ಯಾಟಿಂಗ್ ಸಾಲಿನ ಕೊನೆ ಅಷ್ಟೇನೂ ಅಶಕ್ತವಾಗಿ ಕಾಣಲಿಲ್ಲ.

ನಮ್ಮ ಸಭೆಯಲ್ಲಿ ನಾನು ಆಟಗಾರರಿಗೆ, ಈ ಪಂದ್ಯವನ್ನು ಸಮನಾಗಿಸುವುದೇ ನಮ್ಮ ಉದ್ದೇಶವೆಂದು ಹೇಳಿದೆ. ವೆಸ್ಟ್ ಇಂಡೀಸ್ ತಂಡದಲ್ಲಿ ಇಬ್ಬರು ಹೊಸಬರ ಸೇರ್ಪಡೆಯಾಗಿತ್ತು—ಬ್ಯಾರೆಟ್ ಮತ್ತು ನೊರೇಗಾ.

ಭಾರೀ ಮಳೆ ಬಂದು ಮೊದಲ ದಿನದ ಆಟ ರದ್ದಾಯಿತಲ್ಲದೇ ಇದರಿಂದಾಗಿ 'ಫಾಲೋ ಆನ್' ವ್ಯತ್ಯಾಸ ೨೦೦ ರಿಂದ ೧೫೦ ಕ್ಕೆ ಇಳಿಯಿತು; ವಿಕೆಟ್ ಹಸಿಯಾಗಿದ್ದುದರಿಂದ ಸೋಬರ್ಸ್ ನಮ್ಮನ್ನು ಬ್ಯಾಟಿಂಗಿಗೆ ಕಳಿಸಿದರು. ಒಂದು ವೇಳೆ ನಾನು ಟಾಸ್ ಗೆದ್ದಿದ್ದರೆ ನಾನೂ ಅದನ್ನೇ ಮಾಡಬೇಕೆಂದು ನಿಶ್ಚಯಿಸಿದ್ದೆ. ವಿಕೆಟ್ಟಿನಲ್ಲಿ ಯಾವ ದೋಷವೂ ಇರಲಿಲ್ಲ. ಅದು ನಾವು ನಿರೀಕ್ಷಿಸಿದ್ದಕ್ಕಿಂತ ನಿಧಾನವಾಗಿತ್ತು. ಉದಾಸೀನದ ಇಲ್ಲವೇ ದುಡುಕಿನ ಹೊಡೆತಗಳೇ ನಮ್ಮ ನಿರಾಶಾದಾಯಕ ಆರಂಭಕ್ಕೆ ಕಾರಣವಾದವು. ಮೊದಲು ಜಯಂತಿಲಾಲ್ ಸ್ಟಂಪಿನ ಹೊರಗೆ ಹೋಗುತ್ತಿದ್ದ ಚೆಂಡೊಂದನ್ನು ಕಸುವುಗೇಡಾಗಿ ಹೊಡೆದಾಗ ಸ್ಲಿಪ್‌ನಲ್ಲಿದ್ದ ಸೋಬರ್ಸ್ ಅದ್ಭುತ ಕ್ಯಾಚ್ ಹಿಡಿದರು. ಆಬಿದ್ ಸಹ ಔಟ್ ಸ್ವಿಂಗರನ್ನು ಎದುರಿಸಲು ಹೋಗಿ ಕಾಮಾಚೋರಿಗೆ ಕ್ಯಾಚ್ ಕೊಟ್ಟು ವಾಪಸಾದರು.

ಚೆಂಡುಗಾರರಲ್ಲಿ ಹೋಲ್ಡರ್ ಶ್ರೇಷ್ಠರಾಗಿದ್ದರು. ನನ್ನ ಆಟವನ್ನು ನಾನು ಅದೇ ಸರಿಯಾಗಿ ಆಡತೊಡಗಿದ್ದೆ. ಸಮಯಕ್ಕೆ ಸರಿಯಾಗಿ ಚೆಂಡನ್ನು ಹೊಡೆಯುತ್ತಿದ್ದೆ. ಆದರೆ ಬದಿಗಳನ್ನು ಬದಲಿಸಿದಾಗ ಅವರು ಒಂದು ಬೌನ್ಸರ್‌ನಿಂದ ನನ್ನನ್ನು ಔಟ್ ಮಾಡಿದರು. ಚೆಂಡು ನಿರೀಕ್ಷಿಸಿದ ವೇಗ, ಎತ್ತರಕ್ಕೆ ಬಾರದ್ದರಿಂದ ನಾನು ಸಾದಾ ಕ್ಯಾಚೊಂದನ್ನು ನೀಡಿದೆ. ದುರಾನಿ ಜಿಗುಟಿನ ಲಕ್ಷಣ ತೋರಿಸಿದರು. ಸರ್ದೇಸಾಯಿಯೊಡನೆ ಅವರು ನಮ್ಮ ಓಟುಗಳ ಮೊತ್ತವನ್ನು ೫೬ ಕ್ಕೆ ತಲಪಿಸಿದರು.

ಸೋಬರ್ಸ್ ಬ್ಯಾರೆಟ್ಟರನ್ನು ಕರೆದಾಗ ವೆಸ್ಟ್ ಇಂಡೀಸ್ ದಾಳಿ ಕುಂಠಿತಗೊಂಡಿದೆಯೆಂದು ಅನಿಸಿತು. ಈ ಮಹತ್ವದ ಗಳಿಗೆಯಲ್ಲಿ ದುರಾನಿ ತಾಳ್ಮೆಗೆಟ್ಟರು. ಬ್ಯಾರೆಟ್ಟರ ಗೂಗ್ಲಿಯೊಂದಕ್ಕೆ ಅವರು ಬ್ಯಾಟನ್ನು ಬಲವಾಗಿ ಬೀಸಿದಾಗ ಔಟಾದರು. ಜಯಸಿಂಹರು ವೇಗದ ಚೆಂಡಿನ ವಿರುದ್ಧ ದುರ್ಬಲರಾಗುತ್ತಾರೆಂದು ಅರಿತಿದ್ದ ಸೋಬರ್ಸ್ ಹೋಲ್ಡರರನ್ನು ಮತ್ತೆ ಕರೆದರು. ಇದೂ ಫಲ ಕೊಟ್ಟಿತು. ೭೫ ಕ್ಕೆ ೫ ಹುದ್ದರಿಗಳನ್ನು ಕಳೆದುಕೊಂಡ ನಮ್ಮನ್ನು ನಿರಾಶೆ ಮುತ್ತಿತ್ತು. ೨೮ ಮಾಡಿದ್ದ ಸರ್ದೇಸಾಯಿಯವರನ್ನು ಸೋಳ್ಕರ ಜತೆಗೂಡಿದಾಗ ಟೆಸ್ಟ್ ಕ್ರಿಕೆಟ್ಟಿನಲ್ಲೇ ಅಭೂತಪೂರ್ವವಾದ ಹಿಂಗಾಪಿನ ಕದನ (rear-guard action) ನಡೆಯಲು ವೇದಿಕೆ ಸಿದ್ಧವಾಗಿತ್ತು. ಮಳೆಯಿಂದಾಗಿ ಆಟ ಎರಡು ಸಲ ನಿಂತರೂ ಈ ಜೊತೆ ಉತ್ಸಾಹದಿಂದ ಆಡಿತು. ಸರ್ದೇಸಾಯಿ ಸರಿಯಾದ ಚೆಂಡಿಗೆ ಸರಿಯಾದ ಹೊಡೆತವನ್ನು ಬಾರಿಸಿದರು. ಸ್ಟಂಪಿನ ಹೊರಗೆ ಹೋಗುತ್ತಿದ್ದವುಗಳನ್ನು ಬಿಟ್ಟುಕೊಟ್ಟು ಹೊಡೆಯಲು ಯೋಗ್ಯವಾದ ಚೆಂಡನ್ನೇ ಹೊಡೆಯುತ್ತಿದ್ದ ಅವರ ರೀತಿ ಬ್ಯಾಟಿಂಗ್ ಕಲೆಯಲ್ಲಿ ಒಂದು ಪಾಠದಂತಿತ್ತು.

ಸಂಜೆಯಾಗುತ್ತಿದ್ದಂತೆ ಸೋಬರ್ಸ್ ಹೊಸ ಚೆಂಡನ್ನು ಪಡೆದರು. ಸೋಳ್ಕರರ ಗಟ್ಟಿ ಅದೃಷ್ಟದಿಂದಾಗಿ ಸೋಬರ್ಸ್ ಸ್ಲಿಪ್‌ನಲ್ಲಿ ಒಂದು 'ಬಿಸಿ' ಅವಕಾಶವನ್ನು ಬಿಟ್ಟುಕೊಟ್ಟರು. ದಿನದ ಕೊನೆಯಲ್ಲಿ, ತಮ್ಮ ಪ್ರಥಮ ೫೦ ನ್ನು ಗಳಿಸಿದ

ಸೋಳ್ಕರ ಮತ್ತು ೮೩ ಮಾಡಿದ ಸರ್ದೇಸಾಯಿ ಸ್ಕೋರನ್ನು ೧೮೩ ಕ್ಕೆ ಒಯ್ದಿದ್ದರು.

ಎರಡನೇ ದಿನ ನಮ್ಮ ನಿರೀಕ್ಷೆಯನ್ನು ಮೀರಿ ಎಲ್ಲವೂ ಸರಿಯಾಗಿಯೇ ನಡೆಯಿತು. ಸೋಳ್ಕರರಿಗೆ ಇನ್ನೊಮ್ಮೆ ಸ್ಲಿಪ್‌ನಲ್ಲಿ ಜೀವ ದಾನವಾಯಿತು. ಅವರನ್ನು ಸೋಲಿಸಲು ಸ್ವತಃ ಸೋಬರ್ಸರೇ ಬರಬೇಕಾಯಿತು. ಕೃಷ್ಣಮೂರ್ತಿ, ವೆಂಕಟ್ ಬೇಗನೇ ಔಟಾದಾಗ ನನಗೆ ಚಿಂತೆಯಾಯಿತು. ಪ್ರಸನ್ನ ಆಡಲು ಹೊರಟು ನಿಂತಾಗ, ಚಹದ ಸಮಯದ ವರೆಗೆ ಔಟಾಗದೆ ಉಳಿದುಕೊಂಡರೆ ಅವರಿಗೆ ಬೇಡಿದ್ದು ಕೊಡುವೆನೆಂದು ಹೇಳಿದೆ. ಅವರು ನನ್ನ ಮಾತನ್ನು ಉಳಿಸಿದರು.

ಊಟದ ವೇಳೆಯಲ್ಲಿ ೨೭೦ ಕ್ಕೆ ೮ ಇತ್ತು. ಸರ್ದೇಸಾಯಿ ಕೇವಲ ಸ್ಕೋರನ್ನು ಏರಿಸುವುದಕ್ಕೆ ಗಮನವಿತ್ತು ಬ್ಯಾರೆಟ್ಟರಿಗೆ ಅಸಾಧ್ಯವಾದ ಕ್ಯಾಚ್ ನೀಡಿದ್ದರು. ಅದೃಷ್ಟವಶಾತ್ ವಿಕೆಟ್ ಕೀಪರ್ ಫಿಂಡ್ಲೆಗೆ ಚೆಂಡು ಒಮ್ಮೆಲೇ ಕಾಣದ್ದರಿಂದ ಸ್ಟಂಪ್ ಮಾಡುವ ಅವಕಾಶ ತಪ್ಪಿಸಿಕೊಂಡರು. ಆದರೆ, ಪ್ರಸನ್ನ ತಾಳುವ ಹಾಗೆ ಕಂಡೊಡನೆ ಸರ್ದೇಸಾಯಿ ಶಾಂತರಾಗಿ, ಮತ್ತೆ ತಮ್ಮ ನೈಜ ಆಟವಾಡುತ್ತ ವೆಸ್ಟ್ ಇಂಡಿಯನ್ ದಾಳಿಯನ್ನು ಮಣ್ಣು ಮುಕ್ಕಿಸಿದರು. ಹೊಡೆತಗಳ ಮೇಲಿನ ಅವರ ಪ್ರಭುತ್ವವೆಷ್ಟಿತ್ತೆಂದರೆ ಚಹದ ವಿರಾಮಕ್ಕೆ ಮೊದಲು ಎರಡು ತಾಸಿನಲ್ಲಿ ೧೧೧ ಓಟಗಳು ಬಂದವು. ಅದರಲ್ಲಿ ಪ್ರಸನ್ನರ ಕಾಣಿಕೆ ೨೨. ಚೆಂಡು ದೃಷ್ಟಿಪಟಲ (Sight screen)ದ ಮೇಲಕ್ಕೆ ಹಾರಿ ಪತ್ರಿಕಾ ಪ್ರತಿನಿಧಿಗಳ ಕೋಣೆಯ ಕಿಡಿಕಿಯನ್ನು ಒಡೆದ ಅವರ ಆ ಡ್ರೈವ್ ಅವರ ಆಯ್ಕೆಯನ್ನು ಪ್ರಶ್ನಿಸಿದವರಿಗೆ ಉತ್ತರವಾಗಿತ್ತು. ಅವರು ೮ ತಾಸುಗಳಲ್ಲಿ, ೧೭ ನಾಲ್ಕುಗಳ ಸಮೇತ ೨೧೨ ಓಟ ಗಳಿಸಿದ್ದರು. ನಮ್ಮ ಒಟ್ಟು ಮೊತ್ತ ೩೮೭ ಕ್ಕೆ ಬಂದು ನಮಗೆ ಧೈರ್ಯ ತಂದಿತು. ದಿನದ ಕೊನೆಯಲ್ಲಿ ಆಬಿದ್ ಮತ್ತು ಸೋಳ್ಕರರಿಂದ ದಾಳಿಯನ್ನು ಪ್ರಾರಂಭಿಸಿ ಬೇಗನೇ ಸ್ಪಿನ್ನರುಗಳನ್ನು ತಂದೆ. ಫ್ರೆಡ್ರಿಕ್ ಮತ್ತು ಕಮಾಚೋರನ್ನು ಅವರು ಹಿಡಿಸಿದ ರೀತಿಯನ್ನು ನೋಡಿದಾಗ ಈ ಪಂದ್ಯ ನಮ್ಮ ಉಡಿಯಲ್ಲಿ ಬಿದ್ದೀತೆಂದು ನನಗನಿಸಿತು. ಆ ರಾತ್ರಿ ಕ್ಲಬ್ಬಿನಲ್ಲಿ, ತಮ್ಮ ಪತ್ನಿಯ ಹುಟ್ಟುಹಬ್ಬಕ್ಕಾಗಿ ಪ್ರಸನ್ನರು ಹಂಚಿದ ಪಾನೀಯಗಳಲ್ಲಿ ವಿಶೇಷ ರುಚಿಯಿತ್ತು. ನಮ್ಮ ಈ ದಂಡಯಾತ್ರೆಯಲ್ಲಿ ಅವರಿಗೂ ವಿಶೇಷ ಪಾತ್ರವಿತ್ತು.

ವೆಸ್ಟ್ ಇಂಡಿಯನ್ನರನ್ನು ಲೆಗ್‌ಸ್ಟಂಪ್ ದಾಳಿಯಿಂದ ತಡೆದುಹಿಡಿಯಲು ನಾವು ಯೋಚಿಸಿದ್ದೆವು. ಸೋಬರ್ಸ್, ಕನ್ಹಾಯಿ, ಲಾಯ್ಡರು



inca/cb/2

200-19

ಇಂಥ ಪರಿಸ್ಥಿತಿಯಲ್ಲಿ ಅಸಹನೆಯಿಂದ ದುಡುಕಿನದೇನಾದರೂ ಮಾಡುವರೆಂಬ ತರ್ಕ ನಮ್ಮದು. ಬ್ಯಾಟಿಂಗ್ ಸಾಲನ್ನು ಮುರಿದು ನುಗ್ಗಲು ಸ್ವಲ್ಪ ಸಮಯ ಬೇಕಾಯಿತು. ನಮ್ಮಲ್ಲಿ ಕ್ಲೋಸ್—ಇನ್ ಕ್ಷೇತ್ರರಕ್ಷಕ ತಜ್ಞರ ಪಡೆಯೇ ಇದ್ದದ್ದರಿಂದ ನಾನು ನನ್ನ ಮಾಮೂಲಿನ ಸ್ಲಿಪ್ ಬಿಟ್ಟು ಮಿಡ್-ವಿಕೆಟ್‌ಗೆ ಹೋಗಿದ್ದೆ. ಅಲ್ಲಿ ಒಂದು ಉತ್ತಮ ಕ್ಯಾಚ್ ಹಿಡಿದು ಕಾಮಾಚೋರನ್ನು ಉಚ್ಚಾಟಿಸಿದೆ. ಫ್ರೆಡ್ರಿಕ್‌ರಿಗೆ ಒಮ್ಮೆ ಜೀವ ಕೊಟ್ಟ ಅಬಿದರೇ ಉತ್ತಮ ಕ್ಯಾಚ್ ಹಿಡಿದು ಅವರ ಆಟವನ್ನು ಕೊನೆಗೊಳಿಸಿದರು.

ಲಾಯ್ಡ್, ಕನ್ಹಾಯಿಯಂತಹ ಇಬ್ಬರು ಚಪಲ ಓಟಗಾರರು ಸೇರಿದಾಗ ತಪ್ಪುಗಂಟಾಗುವ ಸಂಭವ ಇದ್ದೇ ಇದೆ. ಲಾಯ್ಡರ ಕರೆಯನ್ನು ಕನ್ಹಾಯಿ ನಿರಾಕರಿಸುತ್ತಿದ್ದಂತೆ, ಬೇದಿ ಉತ್ತಮವಾಗಿ ಚೆಂಡು ಹಿಡಿದು, ಲಾಯ್ಡರು ಹೊರಗೆ ಇದ್ದಾಗಲೇ ಕೃಷ್ಣಮೂರ್ತಿಗೆ ಎಸೆದರು. ಲಾಯ್ಡರಂಥ ಬಲಶಾಲೀ ಆಟಗಾರನನ್ನು ಔಟು ಮಾಡಿದ್ದು ನಮಗೆಲ್ಲ ಎಷ್ಟು ಸಮಾಧಾನ ನೀಡಿತು! ಆಗ ವೆಸ್ಟ್ ಇಂಡಿಯನ್ನರ ಸ್ಕೋರು ೧೩೩ಕ್ಕೆ ೩ ಇತ್ತು.

ಸೋಬರ್ಸ್ ಮತ್ತು ಕನ್ಹಾಯಿ ೬೦ ನಿಮಿಷಗಳಲ್ಲಿ ೬೪ ಓಟಗಳನ್ನು ಸೇರಿಸಿದಾಗ ದೈವ ಅವರಿಗೊಲಿಯುವ ಲಕ್ಷಣಗಳು ಕಂಡವು. ಆದರೆ ವೆಂಕಟರ ಲೆಗ್‌ಸ್ಟಂಪ್ ದಾಳಿಯನ್ನು ತಪ್ಪಿಸಿಕೊಳ್ಳಲು ಕನ್ಹಾಯಿ ಚೆಂಡನ್ನು ಎತ್ತಿ ಹೊಡೆದಾಗ ಗೋವಿಂದರಾಜ್ ಹಿಡಿದ ಕ್ಯಾಚ್‌ನಿಂದ ಆಟ ನಮ್ಮತ್ತ ತಿರುಗಿತು. ಸೋಬರ್ಸರ ಸುತ್ತಲೂ ಕ್ಷೇತ್ರರಕ್ಷಕರ ಬಲೆಯನ್ನೊಡ್ಡಿದೆವು. ಲೆಗ್ ಟ್ರ್ಯಾಪಿನಲ್ಲಿ ಅವರು ಒಂದು ಸಾದಾ ಹೊಡೆತವನ್ನು ಹೊಡೆಯಲೆತ್ನಿಸಿ ಅಬಿದರಿಗೆ ಕ್ಯಾಚ್ ನೀಡಿದರು. ಮುಂದಿನ ಕುಸಿತ ಅದ್ಭುತವಾಗಿತ್ತು. ಆರು ಹುದ್ದರಿಗಳನ್ನು ಕೇವಲ ೧೫ ಓಟಗಳಲ್ಲಿ ನಮ್ಮ ಸ್ಪಿನ್ನರುಗಳು ಉರುಳಿಸಿದರು.

ವೆಸ್ಟ್ ಇಂಡೀಸ್ ಆಟ ೨೧೭ ಕ್ಕೆ ಮುಗಿದದ್ದರಿಂದ ಭಾರತಕ್ಕೆ ೧೭೦ ಓಟಗಳ ಮುನ್ನಡೆ ಸಿಕ್ಕಿತು. ಮಳೆಯಿಂದಾಗಿ ಒಂದು ದಿನ ಆಟ ಅಸಾಧ್ಯವಾದ್ದರಿಂದ ಫಾಲೋ ಆನ್ ಅಂತರ ೧೫೦ ಕ್ಕೆ ಇಳಿದದ್ದು ಸೋಬರ್ಸರಿಗೆ ಗೊತ್ತಿರಲಿಲ್ಲ. ಯುದ್ಧ ಅಥವಾ ಕ್ರೀಡೆಯಲ್ಲಿ ಜಯದ ಒಂದು ಕಾರಣ ಅನಿರೀಕ್ಷಿತ ಗತ್ತು. ನಮ್ಮಿಬ್ಬರ ನಡುವಣ ಪಂದ್ಯಗಳಲ್ಲಿ ಮೊದಲ ಬಾರಿಗೆ ಅವರಿಗೆ ಫಾಲೋ ಆನ್ ಮಾಡಲು ಹೇಳಿ ಅವರ ಬುಡವನ್ನೇ ಅಲುಗಾಡಿಸಿದ್ದೆವು. ಇದರ ಪರಿಣಾಮಗಳು ಇಡೀ ಮಾಲಿಕೆಯ ಮೇಲೆಯೇ ತಮ್ಮ ಮುದ್ರೆಯನ್ನೊತ್ತಿದವು. ಅದು ನಮ್ಮ ಸ್ಥೈರ್ಯವನ್ನು ಹೆಚ್ಚಿಸಿದ್ದಲ್ಲದೇ, ವೆಸ್ಟ್ ಇಂಡಿಯನ್ ತಂಡದ ದುರ್ಬಲತೆಯನ್ನು ಎತ್ತಿ ತೋರಿತು. ನಮ್ಮ ಸ್ಪಿನ್ನರುಗಳು ತಮ್ಮ ಪ್ರಭುತ್ವವನ್ನು ಸ್ಥಾಪಿಸಿ, ನಡುವೆ ಒಂದೆರಡು ಸಂದರ್ಭಗಳನ್ನು ಬಿಟ್ಟರೆ, ಕೊನೆಯ ವರೆಗೂ ಉಳಿಸಿಕೊಂಡರು.

ನಾನು ಫಾಲೋ ಆನ್ ಮಾಡಲು ಕೇಳಿಕೊಂಡಾಗ, ವೆಸ್ಟ್ ಇಂಡಿಯನ್ನರು ದಿಗ್ಭ್ರಮೆಗೊಂಡರು. ೯೦ ನಿಮಿಷಗಳಲ್ಲಿ ೭೨ ಓಟಗಳಿಗೆ ಫ್ರೆಡ್ರಿಕ್, ಕಾಮಾಚೋ ಇಬ್ಬರೂ ಹೋದಾಗ ಆಟ ನಮ್ಮ ಕೈಯಲ್ಲಿದೆ ಎನಿಸಿತು.

ಆಟ ಮುಂದುವರಿದಂತೆ ಕೆಲವು ವಿಕೆಟ್ಟುಗಳು ನಿಧಾನವಾಗತೊಡಗುತ್ತವೆ. ಕಿಂಗ್‌ಸ್ಟನ್ ವಿಕೆಟ್, ಮಳೆಯಿಂದ 'ತಾಜಾ'ಗೊಂಡ ಮೇಲೆ ಬದಲಾಗಿಬಿಟ್ಟಿತು. ಅದನ್ನು ನೋಡುತ್ತಿದ್ದಂತೆ ನನಗೆ ೧೯೬೭ ರ ಮೆಲ್‌ಬೋರ್ನ್ ಪಂದ್ಯ ನೆನಪಾಯಿತು. ಮೊದಲ ಆಟದಲ್ಲಿ ೧೭೩ ಕ್ಕೆ ಕುಸಿದಿದ್ದ ನಾವು ಎರಡನೆಯದರಲ್ಲಿ ೩೭೨ ಮಾಡಿದೆವು. ನಮ್ಮ ಚೆಂಡುಗಾರರಿಗೆ ಸಹಾಯಕಾರಿಯಾದದ್ದೇನೂ ಪಿಚ್‌ನಲ್ಲಿ ಇಲ್ಲ, ಎಂದು ಖಾತ್ರಿಯಾಯಿತು. ಕನ್ಹಾಯಿ ಎಂದಿನಂತೆ ಅ-ಸಹನೀಯರಾಗಿದ್ದರು. ನಮ್ಮ ದಾಳಿಯನ್ನು ಹುಡಿಗೊಳಿಸಲು ಸೋಬರ್ಸ್ ಮತ್ತು ಲಾಯ್ಡರಿಗೆ ಏನೂ ತೊಂದರೆಯಾಗಲಿಲ್ಲ. ಲಾಯ್ಡ್—ಕನ್ಹಾಯಿ-

ಯವರಲ್ಲಿ ತಪ್ಪುಗಂಟಾಗಿ ಲಾಯ್ಡ್ ಹೋದ ದ್ದೊಂದೇ ನಮಗೆ ಸಿಕ್ಕ ಯಶಸ್ಸಾಗಿತ್ತು. ಚಹದ ವೇಳೆಗೆ ಆಟದಲ್ಲೇನೂ ಉಳಿಯಲಿಲ್ಲ. ಸೋಬರ್ಸ್—ಕನ್ಹಾಯಿ ಆಟವನ್ನು ಸಿಕ್ಕೆ ೩೧೧ ರ ವರೆಗೆ ಒಯ್ದಿದ್ದರು. ಉಳಿದದ್ದು ಕೇವಲ ಅಂಕಿಸಂಖ್ಯೆಯ ಮಾತಾಗಿತ್ತು. ಕನ್ಹಾಯಿ ಅಪ್ಪಟವೃತ್ತಿ– ಆಟಗಾರನಂತೆ ಆಡಿದರು. ತಲೆ ಕೆಳಗೆ ಮಾಡಿ, ಎಲ್ಲಾ ಅಪಾಯಕಾರೀ ಹೊಡೆತ ಗಳನ್ನು ದೂರವಿಟ್ಟರು. ೩ ಗಂಟೆಗಳಲ್ಲಿ ಸೋಬ ರ್ಸರು ೧೪ ನಾಲ್ಕುಗಳ ೯೩ ಓಟ ಗಳಿಸಿದ್ದರೆ, ೧೭ ನಾಲ್ಕುಗಳ ಕನ್ಹಾಯಿಯವರ ೧೫೮, ನಮ್ಮ ವಿರುದ್ಧ ಅವರು ಸಾಧಿಸಿದ ನಾಲ್ಕನೇ ಶತಕವಾ ಗಿತ್ತು.

ವೆಸ್ಟ್ ಇಂಡಿಯನ್ನರು ಮರ್ಯಾದೆ ಉಳಿಸಿ ಕೊಂಡರು. "ಸರ್ದೇಸಾಯಿ, ಪ್ರಸನ್ನ ಮತ್ತು ಇತರ"ರಿಗಾಗಿ ಜನ ಅರಚುತ್ತಿದ್ದಂತೆಯೇ ನಾವು ಸಬೀನಾ ಪಾರ್ಕಿನ ಹಿಂಬಾಗಿಲಿಂದ ಹೊರ ಬಂದೆವು.

ಪೋರ್ಟ್ ಆಫ್ ಸ್ಪೇನಿನ ದ್ವಿತೀಯ ಪಂದ್ಯ

ಈಗ ತಂಡದ ಆಯ್ಕೆ ಸಮಸ್ಯೆಯನ್ನೊಡ್ಡಿತು. ವೆಂಕಟ್ ಹಾಗೂ ಜಯಸಿಂಹರಲ್ಲಿ ಯಾರನ್ನು ಆರಿಸುವುದೆಂದು ನನಗೆ ತಿಳಿಯದಾಯಿತು. ಕೊನೆಗೆ ವೆಂಕಟ್ ತಮ್ಮ ಸ್ಥಾನವನ್ನುಳಿಸಿ-ಕೊಂಡರು. ಜಯಂತಿಲಾಲರನ್ನು ತೆಗೆದು ಗವಾ ಸ್ಕರರಿಗೆ ಸ್ಥಾನ ನೀಡಿದೆವು. ಮಂಕಡ್ ತಮ್ಮ ಸ್ಥಾನಕ್ಕೆ ಮರಳಿದರು. ಈ ಪಂದ್ಯವು ನಮ್ಮ ಭವಿತವ್ಯವನ್ನು ನಿರ್ಧರಿಸುವುದೆಂದು ನಮ್ಮವ ರಿಗೆ ಹೇಳಿದೆ. ಈಗ ಗೆಲ್ಲದಿದ್ದರೆ ಮುಂದೆ ಸಾಧ್ಯವಿರಲಿಲ್ಲ.

ಸುದೈವದಿಂದ ಸೋಬರ್ಸ್ ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದರು. ವಿಕೆಟ್ ಕಾಡು ಪಶು ವಿನಂತೆ ವರ್ತಿಸಿತು. ಚೆಂಡು ಜರಿದುಕೊಂಡು ಹೋಗುತ್ತಿತ್ತು ಇಲ್ಲವೇ ಹೊಡೆಯಲಸಾಧ್ಯವೆನಿ ಸುವಷ್ಟು ಕೆಳಗೆ ಇರುತ್ತಿತ್ತು. ಆಬಿದರಿಗೆ ಇಷ್ಟೇ ಸಾಕಿತ್ತು. ತಾವೆಸೆದ ಮೊದಲ ಚೆಂಡಿಗೇ ಫ್ರೆಡ್ರಿಕ್‌ರನ್ನು ಉರುಳಿಸಿದರು. ಕಾಮಾಚೋ ಬೇದಿಯವರ ಬಲೆಗೆ ಬಿದ್ದರು. ಬೇದಿ ಅವರ ಆಫ್ ಸ್ಟಂಪ್ ಮೇಲೆ ಚೆಂಡನ್ನು 'ಹಾರಿಸಿ' ಕಳಿಸಿದಾಗ, ಅದನ್ನು ಸ್ವೀಪ್ ಮಾಡುವ ಪ್ರಲೋ ಭನೆಯನ್ನು ತಡೆಯದ ಕಾಮಾಚೋ ಸ್ಕ್ವೇರ್-ಲೆಗ್‌ನಲ್ಲಿ ಸೋಳ್ಕರರಿಗೆ ಚೆಂಡಿತ್ತರು. ಲಾಯ್ಡ್ ಬಂದಾಗ, ಅವರ ಲೆಗ್ ಸ್ಟಂಪ್ ಮೇಲೆ ದಾಳಿ ಮಾಡಲು ಪ್ರಸನ್ನರನ್ನು ತಂದೆ. ಆದರೆ ನಿಜ ವಾಗಿ ಬಿದ್ದದ್ದು ಕನ್ಹಾಯಿ. ಆಬಿದರ 'ಶೂಟರ್' ಲಾಯ್ಡರ ಆಫ್ ಸ್ಟಂಪನ್ನು ಹಾರಿಸಿದಾಗ ನಮ್ಮ ದಾಳಿ ತುತ್ತ ತುದಿಗೇರಿತ್ತು.

ವೆಂಕಟ್ ಸಹ ತಮ್ಮ ಪಾತ್ರವನ್ನು ಚೆನ್ನಾ ಗಿಯೇ ನಿರ್ವಹಿಸಿದರು. ವೆಂಕಟರನ್ನು ಸ್ವೀಪ್ ಮಾಡಲು ಸೋಬರ್ಸ್ ಯತ್ನಿಸಿದಾಗ ಅವರ ಕಾಲಿನ ಸುತ್ತ ಬಂದ ಚೆಂಡು ಅವರನ್ನು ಸೋಲಿ ಸಿತು. ಆದರೆ 'ಬಾಲಂಗೋಚಿ'ಗಳು ಡೇವಿಸರಿಗೆ ಬೇಕಾದ ಬೆಂಬಲ ನೀಡಿದರು. ಡೇವಿಸರು ನಮ್ಮ ಜೋಡು ಆಫ್ ಸ್ಪಿನ್ ದಾಳಿಯನ್ನು ನಿಭಾ ಯಿಸಿ ಅಮೂಲ್ಯ ೭೧ ಓಟ ಗಳಿಸಿದರು. ವೆಸ್ಟ್ ಇಂಡೀಸ್ ಸ್ಕೋರು ೨೦೦ ದಾಟಿದಾಗಲೇ ಪ್ರಸ-ನ್ನರು (೫೪ ಕ್ಕೆ ೪) ಅವರ ಆಟವನ್ನು ಮುಕ್ತಾಯಗೊಳಿಸಿದರು. ಚೆಂಡು ಕೆಳಗೇ ಇರುತ್ತಿದ್ದರೂ ವಿಕೆಟ್ ಮುಂಜಾನೆಯಷ್ಟು ಭೀಕರವಿರಲಿಲ್ಲ. ಗವಾಸ್ಕರ ಮತ್ತು ಮಂಕದ್ ೭೮ ಓಟಗಳನ್ನು ಸೇರಿಸಿದ ಮೇಲೆ ಶಿಲ್ಲಿಂಗ್-ಫೋರ್ಡರ ಸುಂದರವಾದ ಬ್ರೇಕ್–ಬ್ಯಾಕ್ ಮಂಕದರನ್ನು ಸೋಲಿಸಿ ಅವರ ಆಫ್‌ಸ್ಟಂಪನ್ನು ಉರುಳಿಸಿತು. ಗವಾಸ್ಕರ, ಪರಿಸ್ಥಿತಿಗೆ ಅನುಗುಣ ವಾದ, ಸರಿಯಾದ ಆಟವನ್ನೇ ಆಡಿದರು. ಈ ಕಷ್ಟದ ವಿಕೆಟ್ ಮೇಲೆ, ನೊರೇಗಾರ ಚೆಂಡಿಗೆ ಬಲಿ ಬೀಳುವರೆಗೂ, ನಾಲ್ಕೂವರೆ ತಾಸಿನಲ್ಲಿ ೭೫ ಓಟ ಗಳಿಸಿದರು. ನಾನೂ ಒಂದು ತಪ್ಪು ಮಾಡಿದೆ. ನನ್ನ ಯಥಾಪ್ರಕಾರದ ಸ್ಥಾನದಲ್ಲಿ

ಹೋಗುವ ಬದಲು ದುರಾನಿಯವರನ್ನು ಕಳಿಸಿದೆ—ಜಮೈಕಾದಲ್ಲಿಯಂತೆ ಈಗಲೂ ಓಟ ಗಳಿಸಬಹುದೆಂದು. ಆದರೆ ಅವರು ಸಾದಾ ಕ್ಯಾಚೊಂದನ್ನು ನೊರೇಗಾರಿಗೆ ನೀಡಿದರು.


ನಮ್ಮನ್ನು ಮತ್ತೆ ಸರ್ದೇಸಾಯಿಯೇ ಮೇಲೆ ಎತ್ತಿದರು. ಕೆಲವೇ ನಿಮಿಷಗಳಲ್ಲಿ ಅವರು ಮಿಡ್ ವಿಕೆಟ್ಟಿಗೆ ಬಲವಾಗಿ ಚೆಂಡು ಬಾರಿಸಿ, ನೊರೇಗಾರ ಲೆಗ್—ಟ್ರಾಪ್ ಚದುರಿಸಿದರು. ಗವಾಸ್ಕರ, ಸರ್ದೇಸಾಯಿ ಮೂರನೆ ಜೊತೆಯಾಟಕ್ಕೆ ೯೬ ಓಟಗಳನ್ನು ಪೇರಿಸಿದಾಗ, ವಿಜಯಕ್ಕೆ ಕಾರಣವಾಬಹುದಾದ ಮೊತ್ತವನ್ನು ಕಟ್ಟಬಹುದೆಂಬ ಆಸೆ ಚಿಗುರಿತು. ಆದರೆ ನಾನು ನೊರೇಗಾರ ಚೆಂಡನ್ನು ಮುಂದೊತ್ತಿ ಕನ್ಹಾಯಿ ಯವರಿಗೆ ಸರಳವಾದ ಕ್ಯಾಚ್ ನೀಡಿದಾಗ, ನನಗೆ ನನ್ನ ಮೇಲೆಯೇ ತಿರಸ್ಕಾರ ಉಂಟಾಯಿತು.

ಮತ್ತೊಮ್ಮೆ ಸುಧಾರಿಸುವ ಭಾರ ಸೋಳ್ಕರ ಮತ್ತು ಸರ್ದೇಸಾಯಿಯವರ ಮೇಲೆಯೇ ಬಿದ್ದಿತು. ೧೮೬ಕ್ಕೆ ೪ರ ಸಮ್ಮ ಮೊತ್ತ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಆದರೆ ೧೧೪ ಓಟಗಳ ಐದನೇ ಜೊತೆಯಾಟದಲ್ಲಿ ಸೋಳ್ಕರ ಸರ್ದೇಸಾಯಿಗೆ ಬೇಕಾಗಿದ್ದ ಬೆಂಬಲ ನೀಡಿದರು. ಸೋಳ್ಕರ ಖಂಡಿತವಾಗಿ ಅದೃಷ್ಟ ಶಾಲಿಯಾಗಿದ್ದರೆನ್ನಬೇಕು. ೩೮ ಮತ್ತು ೪೦ರಲ್ಲಿ ಸೋಬರ್ಸರ ಬೌಲಿಂಗಿನಲ್ಲಿ ಅವರು 'ಜೀವ' ಪಡೆದರು. ಆದರೆ ಅವರಿಗೆ ಈ ಜೀವದಾನಗಳು ಉಪಯುಕ್ತವಾಗಿದ್ದವು. ಓಟ ಗಳಿಸುವ ಒಂದು ಅವಕಾಶವನ್ನೂ ಅವರು ಬಿಟ್ಟುಕೊಡಲಿಲ್ಲ.

ಸರ್ದೇಸಾಯಿ ತಮ್ಮ ಎರಡನೆಯ ಶತಕವನ್ನು ಮುಗಿಸಿ ನೊರೇಗಾರ ಬೌಲಿಂಗಿಗೆ ಔಟಾದಾಗ ಅವರ ೧೧೨ರಲ್ಲಿ ೧೧ ನಾಲ್ಕುಗಳಿದ್ದವು. ಅವರ ನಂತರ ನಮ್ಮ ಆಟ ಕುಸಿದುದನ್ನು ನೋಡಿ, ನಮಗೆ ಅವರ ಆಟದ ಮಹತ್ವದ ಅರಿವಾಯಿತು. ೩೫೨ಕ್ಕೆ ನಮ್ಮ ಆಟ ಮುಗಿಯಿತು. ೯೫ಕ್ಕೆ ೯ ಹುದ್ದರಿಗಳನ್ನು ತೆಗೆದ ನೊರೇಗಾ ಪ್ರೇಕ್ಷಕರ ಹರ್ಷೋದ್ಗಾರಗಳ ನಡುವೆ, ತಮ್ಮ ತಂಡವನ್ನು ಪೆವಿಲಿಯನ್‌ಗೆ ಕರೆದು ತಂದರು.

ಕಾಮಾಚೋರ ಕೈಗೆ ಆದ ಗಾಯದಿಂದಾಗಿ ಅವರ ಬದಲು ಕನ್ಹಾಯಿ, ಫ್ರೆಡ್ರಿಕ್ ಆಟ ಪ್ರಾರಂಭಿಸಿದರು. ಕೇವಲ ನಾಲ್ಕು ಓವರುಗಳ ನಂತರ ನಾನು ಸ್ಪಿನ್ನರುಗಳನ್ನು ತಂದೆ. ಫ್ರೆಡ್ರಿಕ್ ೨೩ ರಲ್ಲಿದ್ದಾಗ ನೀಡಿದ ಕ್ಯಾಚನ್ನು ಪ್ರಸನ್ನ ಹಿಡಿದಿದ್ದರೆ ೮೭ಕ್ಕೆ ಮೊದಲ ಹುದ್ದರಿ ಹೋಗುತ್ತಿತ್ತು. ಅವರಿಬ್ಬರೂ ಮೊದಲ ಆಟದ ಕೊರತೆಯಾದ ೧೩೮ ಓಟಗಳನ್ನು ತುಂಬಿದಾಗ, ಬೇದಿಯವರ ಚೆಂಡು ಕನ್ಹಾಯಿಯವರ ಬ್ಯಾಟಿನ ತುದಿಗೆ ತಾಗಿ ವೆಂಕಟರ ಕಡೆ ಹೋಯಿತು. ೧೫೦ಕ್ಕೆ ೧ ರ ಮೊತ್ತ ನೋಡಿದ ಯಾರಿಗೂ ನಾವು ಗೆಲ್ಲಬಹುದೆಂದು ಅನಿಸಿರಲಿಲ್ಲ. ಫ್ರೆಡ್ರಿಕ್ ಮತ್ತು ಡೆವಿಸ್ ಗಂಡಾಂತರವನ್ನು ಎದುರು ಹಾಕಿಕೊಂಡು ಸ್ಕೋರನ್ನು ಮುಂದೆ ದೂಡಿದರು. ಸುದೈವೀ ಫ್ರೆಡ್ರಿಕ್ ಚೆಂಡನ್ನು ಎತ್ತರಿಸಿ ಡ್ರೈವ್ ಮಾಡಿದಾಗ ಚೆಂಡು ಹಾಕಿದ ಪ್ರಸನ್ನ, ಕೇವಲ ತಮ್ಮ ಬೆರಳ ತುದಿಯನ್ನು ಅದಕ್ಕೆ ತಾಗಿಸಲು ಸಮರ್ಥರಾದರು. ಆದರೆ ಇದು ಅವರ ಕೈಗೆ ಮೊದಲ ಟೆಸ್ಟಿನಲ್ಲಿ ಆದ ಗಾಯವನ್ನು ಹೆಚ್ಚಿಸಿತು.

ವೆಸ್ಟ್ ಇಂಡಿಯನ್ನರಿಗೂ ಅವರ ತೊಂದರೆಗಳಿದ್ದವು. ಆಟದ ಅಭ್ಯಾಸದಲ್ಲಿ ಡೇವಿಸರಿಗೆ ಹೊಡೆತ ಬಿದ್ದು ಕಣ್ಣಿನ ಮೇಲೆ ಏಳು ಹೊಲಿಗೆಗಳಿದ್ದುವು. ಈಗ ನಾವು ಮತ್ತೊಮ್ಮೆ ಅವರ ಆಟವನ್ನು ಮುರಿದೆವು, ರನೌಟ್ ಮೂಲಕ. ಮೂರನೆಯ ಸಲ ಲಾಯ್ಡ್ ಅದರಲ್ಲಿದ್ದರು. ದುರಾನಿಯವರ ಚೆಂಡಿನಲ್ಲಿ ಫ್ರೆಡ್ರಿಕ್ ಒಂದು ಓಟವನ್ನು ಗಳಿಸಲೆತ್ನಿಸಿದಾಗ ಲಾಯ್ಡರು ಅವರನ್ನು ಹಿಮ್ಮೆಟ್ಟಿಸಿದರು. ಜಯಂತಿಲಾಲರ ಅಚ್ಚುಕಟ್ಟಾದ ಕ್ಷೇತ್ರರಕ್ಷಣೆಯ ಫಲವಾಗಿ ಫ್ರೆಡ್ರಿಕ್ ಔಟಾದರು. ಬೇದಿ, ಪ್ರಸನ್ನ ದಣಿಯುತ್ತಿದ್ದರಿಂದ ನಾನು ದುರಾನಿಯವರನ್ನು ತಂದಿದ್ದೆ. ಈ ಆಲ್-ರೌಂಡರನ ಮಾಂತ್ರಿಕ ಚೆಂಡುಗಾರಿಕೆಯಿಂದ ಆಟದ ಬಣ್ಣವೇ ಬದಲಾಯಿತು. ಎರಡು


ಸ್ತ್ರೀ ಸಹಜ ಸೌಂದರ್ಯವೇ
ಮಹಿಳೆಯ ಹೆಗ್ಗಳಿಕೆ
ನಿಮ್ಮ ಸೌಂದರ್ಯಕ್ಕೆ ವಿಶೇಷ ಪಾಲನೆ ಅಗತ್ಯ. ಈ ವಿಷಯದಲ್ಲಿ
ಅನಿತಾ ಸೋಪು ನಿಮ್ಮಷ್ಟೇ ವಿಶೇಷ ಗಮನ ನೀಡುತ್ತದೆ. ನಿಮ್ಮ ಚರ್ಮದಲ್ಲಿನ
ಸ್ವಾಭಾವಿಕ ತೈಲಾಂಶವನ್ನು ಉಳಿಸಿಡುವುದೇ ಅಲ್ಲದೆ,
ಅನಿತಾ ನಿಮ್ಮನ್ನು ಬಿಸಿಲು, ಮಳೆ ಅಥವಾ ಚಳಿಯ ವಾತಾವರಣ
ದಲ್ಲಿಯೂ ಸಹ ನಾವೀನ್ಯತೆಯಿಂದ ಸಳಸಳಿಸುವಂತೆ ಇಟ್ಟಿರುತ್ತದೆ.
ಅನಿತಾ ನಿಮ್ಮ ಸೌಂದರ್ಯವನ್ನು ರಕ್ಷಿಸುತ್ತದೆ
ಟಾಯ್ಲೆಟ್ ಸೋಪ್
ತಯಾರಕರು
ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್
ಮಂಗಳೂರು

ಓವರುಗಳಲ್ಲಿ ಆಟ ಅತ್ಯಂತ ನಾಟಕೀಯವಾಗಿ ನಮ್ಮತ್ತ ತಿರುಗಿತ್ತು. ತಮ್ಮತ್ತ ತಿರುಗಿದ ಚೆಂಡೊಂದನ್ನು ಹೊಡೆಯಲಾಗದೇ ಸೋಬರ್ಸ್ ಸೊನ್ನೆಗೆ ಔಟಾದರು. ಲಾಯ್ಡರು ಚೆಂಡನ್ನು ಮಿಡ್ ವಿಕೆಟ್ಟಿಗೆ ಕಳಿಸುತ್ತಿದ್ದುದನ್ನು ನೋಡಿ ನಾನು ಶಾರ್ಟ್—ಮಿಡ್ ವಿಕೆಟ್ಟಿಗೆ ಹೋಗಿದ್ದೆನಷ್ಟೇ, ಲಾಯ್ಡ್ ಚೆಂಡನ್ನು ಬಾರಿಸಿದರು. ನನ್ನ ಬೆರಳ ತುದಿಗಳಿಂದ ನಾನದನ್ನು ವಶಪಡಿಸಿಕೊಂಡೆ.

ಪ್ರಸನ್ನರ ಸ್ಥಾನವನ್ನು ಯಶಸ್ವಿಯಾಗಿ ತುಂಬಿದ ವೆಂಕಟ್, ಕಾಮಾಚೋರ ಆಫ್ ಸ್ಟಂಪನ್ನು ಉರುಳಿಸಿದಾಗ ವೆಸ್ಟ್ ಇಂಡಿಯನ್ನರು ಪೂರ್ಣ ಪೇಚಿನಲ್ಲಿದ್ದರು. ತಮ್ಮ ಅದೃಷ್ಟವನ್ನು ಪಣಕ್ಕಿಟ್ಟು ಆಡಿದ ಬ್ಯಾರೆಟ್, ಎಷ್ಟೋ ವಿಶ್ವಾಸಪೂರ್ಣ ಎಲ್. ಬಿ. ಡಬ್ಲ್ಯೂ. ವಿನಂತಿಗಳನ್ನು ತಪ್ಪಿಸಿಕೊಂಡಿದ್ದರೂ, ವೆಂಕಟ್ ಕೊನೆಗೆ ನಿಧಾನವಾದ ಚೆಂಡಿನಿಂದ ಅವರನ್ನು ಮೋಸಗೊಳಿಸಿದರು. ಸ್ಕೋರನ್ನು ಏರಿಸಲು ಡೇವಿಸ್ ಪ್ರಯತ್ನಿಸಿದರು. ದೂರ ಭಾಗದಲ್ಲಿದ್ದ ಸೋಲ್ಕರ್ ಎಷ್ಟೋ ಬಲವಾದ ಹೊಡೆತಗಳನ್ನು ತಡೆದು ಹಿಡಿಯುವುದನ್ನು ನೋಡುತ್ತಿದ್ದಂತೆ ಸೋಲ್ಕರ, ಲಾಯ್ಡರಲ್ಲಿ ಯಾರು ಶ್ರೇಷ್ಠ ಕ್ಷೇತ್ರರಕ್ಷಕರೆಂದು ಹೇಳುವುದು ಅಸಾಧ್ಯವಾಗಿತ್ತು. ವೆಂಕಟ್ [illegible] ೫ ಹುದ್ದರಿ ಗಳಿಸಿ ಆಟ ಮುಗಿಸಿದಾಗ ಡೇವಿಸ್ ಧೀರೋದಾತ್ತ ೭೪ ಓಟ ಗಳಿಸಿ ಅಜೇಯರಾಗಿ ಉಳಿದಿದ್ದರು.

ವೆಸ್ಟ್ ಇಂಡೀಸ್ ಆಟ ಮುಗಿಯುತ್ತಿದ್ದಂತೆ, ಜನಜಂಗುಳಿ ಘೋಷಿಸತೊಡಗಿತು, "ನಾವು ಸುಮ್ಮನೇ ಬಿಡುವುದಿಲ್ಲ," ಎಂದು. ಧಾರಾಳವಾಗಿ ಸಮಯವಿದ್ದು, ಕೇವಲ ೧೨೪ ಓಟಗಳನ್ನು ನಾವು ಮಾಡಬೇಕಿತ್ತು. ೭೪ ಓಟಗಳ ಮೊದಲ ಜೊತೆಯಾಟದಲ್ಲಿ ಗವಾಸ್ಕರ, ಮಂಕಡ್ ಭರವಸೆ ನೀಡಿದರು. ಬ್ಯಾರೆಟ್, ತಮ್ಮ ಪ್ರಥಮ ಓವರಿನಲ್ಲಿಯೇ ಮಂಕಡ್, ದುರಾನಿಯವರನ್ನು ತೆಗೆದರು. ಮುಂದೆ ಬೇಗನೇ ಸರ್ದೇಸಾಯಿ ಸಹ ಔಟಾದಾಗ ಕೊಂಚ ಗಡಿಬಿಡಿಯಾಯಿತು. ಆದರೆ ನಂತರ ಧಾರಾಳವಾಗಿ ಓಟಗಳು ಬಂದವು. ಅಜೇಯ ೬೭ನ್ನು ಗಳಿಸಿದ ಗವಾಸ್ಕರ್ ಇತಿಹಾಸವನ್ನೇ ನಿರ್ಮಿಸಿದರು.

ಎಲ್ಲವೂ ಸರಿಯಾಗಿ ನಡೆದಿತ್ತು. ನಮ್ಮ ಬ್ಯಾಟಿಂಗ್ ಸಮರ್ಪಕವಾಗಿತ್ತಲ್ಲದೆ ನಮ್ಮ 'ಕ್ಲೋಸ್ ಇನ್' ಕ್ಷೇತ್ರರಕ್ಷಕರಿಂದಾಗಿ ನಮ್ಮ ದಾಳಿ ಇನ್ನೂ ಹರಿತಗೊಂಡಿತ್ತು. ದುರಾನಿಯವರ ಎರಡು ಉತ್ಕೃಷ್ಟ ಚೆಂಡುಗಳು ಅವರಲ್ಲಿನ ಎರಡು ಹಿರಿ ಹುದ್ದರಿಗಳನ್ನು ಬಲಿ ತೆಗೆದಿದ್ದವು. ವೆಂಕಟ್ ಸಹ ಮೊದಲ ಆಟದಲ್ಲಿ ನಮಗೆ ಸಿಕ್ಕ ಲಾಭವನ್ನು ತಮ್ಮ ಚಾಣಾಕ್ಷ ಚೆಂಡಿಗತನದಿಂದ ಉಳಿಸಿಕೊಂಡು ಬಂದಿದ್ದರು.

ಇಂಗ್ಲಂಡಿನಲ್ಲಿ

ಮೂರನೆ ಟೆಸ್ಟ್—ಓವಲ್

ನಾವು ಮೊದಲಿನ ತಂಡಕ್ಕೇ ಅಂಟಿಕೊಂಡೆವು. ಹೊಸ ಪ್ರಾರಂಭದ ಆಟಗಾರನನ್ನು ಪ್ರಯೋಗಿಸುವ ವಿಚಾರ ಇರಲಿಲ್ಲ. ಟೆಸ್ಟ್‌ಗೆ ಮೊದಲಿನ ಪಂದ್ಯಗಳಲ್ಲಿ ಮಂಕಡ್ ಉತ್ತಮವಾಗಿ ಆಡಿದ್ದರು. ಮ್ಯಾಂಚೆಸ್ಟರ್‌ನಲ್ಲಿ ಒದ್ದೆ ನೆಲದಲ್ಲಿ ಚಂದ್ರಶೇಖರ ಅಷ್ಟು ಪರಿಣಾಮಕಾರಿಯಾಗಿರದಿದ್ದರೂ ಸ್ಪಿನ್ನರುಗಳಿಗೆ ಸಹಾಯಕವಾಗಿದ್ದ ಓವಲ್‌ನಲ್ಲಿ ಅವರನ್ನು ಕೈಬಿಡುವುದು ಮೂರ್ಖತನವೆನಿಸುತಿತ್ತು. ಅಲ್ಲದೇ ಪ್ರಸನ್ನ 'ಫಿಟ್' ಆಗಿರಲಿಲ್ಲ. ನಾಟಿಂಗ್‌ಹ್ಯಾಮ್‌ನಲ್ಲಿ ವೈದ್ಯಕೀಯ ನೆರವು ಅವರಿಗೆ ಬೇಕಾಯಿತು. ತಮ್ಮ ಸ್ಥಾನವನ್ನು ಕಳೆದುಕೊಳ್ಳುವುದರ ಬಗ್ಗೆ ಪ್ರಸನ್ನ ಗೊಂದಲಕ್ಕೀಡಾಗಿದ್ದರು. ಇಂಥ ಅನುಭವ ಸ್ಪರ್ಧಾತ್ಮಕ ಕ್ರಿಕೆಟ್ ಆಡಿದ ಯಾರಿಗೂ ರುಚಿಸಲಾರದು. ಆದರೆ ನಾಲ್ಕನೆಯ ಸ್ಪಿನ್ನರನನ್ನು ಸೇರಿಸಿಕೊಳ್ಳುವುದರಿಂದ ವಿಶ್ವಾಸಾರ್ಹ ಬ್ಯಾಟ್ಸ್‌ಮನ್ ಯಾರನ್ನಾದರೂ ಕೈಬಿಡಬೇಕಾಗುತ್ತಿತ್ತು.


ಯೋಚನೆ


ಮೂರನೇ ಸಲವೂ ನಾನು ಟಾಸ್ ಸೋತೆ. ಮೂರನೇ ಸಲವೂ ಆಟ ಮೊದಲು ನಮ್ಮೆಡೆ ಒಲಿದು ನಂತರ ಅವರ ಕಡೆಗೆ ವಾಲಿತು. ಇಂಗ್ಲಂಡಿನವರು ೩೫೫ ಮಾಡಿದರು. ಅದರಲ್ಲಿ ಜೇಮ್ಸನ್ ಗಳಿಸಿದ್ದ ಓಟಗಳು ೮೨. ತಮ್ಮ ಬಲಿಷ್ಠ ಆಟದಲ್ಲಿ ೧೫ ನಾಲ್ಕುಗಳನ್ನೂ ಎರಡು ಆರುಗಳನ್ನೂ ಅವರು ಹೊಡೆದಿದ್ದರು. ಗಾಯಗೊಂಡ ಬಾಯ್ಕಾಟರಿಗೆ ಅವರು ಉತ್ತಮ ಬದಲಾಟಗಾರರಾಗಿದ್ದರು. ಲಕ್‌ಹರ್ಸ್ಟ್ ತಮ್ಮ ಮಾಮೂಲು ಬೌಲರ್ ಸೋಳ್ಕರರಿಗೆ ಆಹುತಿಯಾದರು. ಶಾಂತವಾದ ರೀತಿಯಲ್ಲಿ ಮಾದರಿ ವೃತ್ತಿ– ಆಟಗಾರನಂತೆ ಎಡ್ರಿಚ್ ೪೧ ಓಟ ಗಳಿಸಿದರು.

ಇಂಗ್ಲಂಡಿನ ಆಟಗಾರರನ್ನು ತಡೆಹಿಡಿಯಲು ಬಹಳ ಶ್ರಮ ಪಡಬೇಕಾದೀತೆಂದು ನನಗನಿಸಿತು. ಮೇಲಿಂದ ಮೇಲೆ ನಾನು ಚೆಂಡಿನ ಹಾರಾಟವನ್ನು ಕುಂಠಿತಗೊಳಿಸಿ ಆಫ್ ಸ್ಟಂಪಿನ ಮೇಲೆ ದಾಳಿ ಮಾಡಬೇಕೆಂದು ಬೇದಿಯರಿಗೆ ಹೇಳಬೇಕಾಯಿತು. ಯಾಕೆಂದರೆ, ತಮ್ಮಲ್ಲಿದ್ದ ಬಲವನ್ನೆಲ್ಲ ಹಾಕಿ ಆಡುತ್ತಿದ್ದ ಜೇಮ್ಸನ್ ಬೇದಿಯವರ ಚೆಂಡನ್ನು ಎರಡು ಸಲ ಬಯಲಿನ ಹೊರಗೆ ಹೊಡೆದಿದ್ದರು. ಆದರೂ ಇಂಗ್ಲಂಡಿನ ಸ್ಕೋರು ಮುಗ್ಗರಿಸುತ್ತ ಸಾಗಿತ್ತು. ಎಡ್ರಿಚ್‌ರನ್ನು ವಿಕೆಟ್ ಹಿಂದೆ ಹಿಡಿಯಲಾಯಿತು. ಡಾಲಿವಿರಾರನ್ನು 'ರಕ್ಷಿಪ'ಲು ಪ್ರಯತ್ನಿಸುತ್ತಿದ್ದ ಜೇಮ್ಸನ್ ಇನ್ನೊಂದು ಬದಿಯನ್ನು ತಲುಪಲು ಅರೆಕ್ಷಣ ತಡಮಾಡಿದಾಗ, ಕವರ್‌ನಿಂದ ನಾನು ಚೆಂಡೆಸೆದು ಅವರನ್ನು ಔಟು ಮಾಡಿದೆ. ಈ ಎರಡೂ ನಿರ್ಣಯಗಳು ಅಂಪಾಯರ್ ಇಲಿಯಟ್ಟರ ಚುರುಕುತನಕ್ಕೆ ನಿದರ್ಶನವಾಗಿದ್ದವು.

ಇಂಗ್ಲಂಡ್ ಮೊದಲು ಭಾರೀ ಮೊತ್ತ ಗಳಿಸಬಹುದಾದಂತೆ ಕಂಡರೂ ಈಗ ಅದೊಂದು ಅವ್ಯವಸ್ಥಿತ ಆಟಗಾರರ ಗುಂಪಾಗಿ ಪರಿಣಮಿಸಿತು. ಮೊದಮೊದಲು ಆಶೆಯನ್ನು ಬಿಟ್ಟುಕೊಟ್ಟಿದ್ದ ನಮ್ಮವರು ಈಗ ಚಾಣಾಕ್ಷತನದಿಂದ ದಾಳಿ ಮಾಡಿದರು. ಬೇದಿಯನ್ನು, ಚಂದ್ರು ಸೇರಿದಾಗಂತೂ ಇಂಗ್ಲಂಡಿನ ಬ್ಯಾಟಿಂಗ್ ಬಲ ಅತ್ಯಂತ ಕುಂಠಿತವಾಯಿತು.

ಫ್ಲೆಚರ್ ಆಫ್ ಸ್ಟಂಪಿನ ಹೊರಗೆ ಬಾರಿಸಿದಾಗ ಗವಾಸ್ಕರರಿಂದ ಹಿಡಿಯಲ್ಪಟ್ಟರು. ಹೆದರಿಕೆಯಿಂದ ಆಡುತ್ತಿದ್ದ ಡಾಲಿವಿರಾ ಚಂದ್ರಶೇಖರರಿಗೆ ಸುಲಭವಾಗಿ ಬಿದ್ದರು. ಆದರೆ ಸಂಜೆ ನಾಟ್ ಮತ್ತು ಹಟನ್ ದಣಿಯುತ್ತಿದ್ದ ನಮ್ಮ ದಾಳಿಗಾರರನ್ನು ಚೆನ್ನಾಗಿ ಥಳಿಸಿದರು. ಏಳನೇ ಜೊತೆಯಾಟದಲ್ಲಿ ೧೦೩ ಓಟಗಳನ್ನು ಅವರು ಪೇರಿಸಿದರು. ಇದು ನಮ್ಮ ವಿರುದ್ಧ ಇಂಗ್ಲಂಡಿನ ಏಳನೆ ವಿಕೆಟ್ಟಿನ ವಿಕ್ರಮವೆನಿಸಿದೆ. ನಾಟರು ಉಪಯೋಗಿಸಿದ ಅ–ಸನಾತನಿ ತಂತ್ರಗಳ ವಿರುದ್ಧ ವಿಕೆಟ್ಟುಗಳನ್ನು ಕೊಳ್ಳುವ ಸಿದ್ಧಾಂತ ಘಾತಕವಾಗಿತ್ತು. ಆದ್ದರಿಂದ ನಾನು ಹೊಸ ಚೆಂಡನ್ನು ಆಶ್ರಯಿಸಿದೆ. ಈ ನಡೆ ಫಲಕೊಟ್ಟಿತು. ಸೋಳ್ಕರ ನಾಟರನ್ನು ೯೦ ಕ್ಕೆ ಕೆಡವಿದರು: ಆದರೆ ಹಟನ್ ಮತ್ತು ಅಂಡರ್‌ವುಡ್ ಒಂಭತ್ತನೇ ಜೊತೆಯಾಟಕ್ಕೆ ೭೮ ಓಟಗಳನ್ನು ಸೇರಿಸಿದರು. ೮೧ ಓಟ ಮಾಡಿದ ಹಟನ್‌ರನ್ನು ವೆಂಕಟ್ ಬಲಿ ತೆಗೆದಾಗ ನಮ್ಮ ಮೂರೂ ಸ್ಪಿನ್ನರುಗಳಿಗೆ ತಲಾ ಎರಡು ಹುದ್ದರಿ ಸಿಕ್ಕಿದ್ದವು. ಚಂದ್ರು ೭೬ ಕ್ಕೆ ಎರಡು ಪಡೆದಿದ್ದರು. ಇದೇ ಆಟದಲ್ಲಿ ಮುಂದೆ ಅವರು ವಹಿಸಲಿದ್ದ ಪಾತ್ರದ ಯಾವ ಮುನ್ಸೂಚನೆಯೂ ಇರಲಿಲ್ಲ.

ಎಲ್ಲವೂ ನಮ್ಮ ವಿರುದ್ಧವಾಗಿಯೇ ಪರಿವರ್ತಿಸುತ್ತಿರುವಂತೆ ಕಂಡಿತು. ಎರಡನೆಯ ದಿನದ ಆಟ ಮಳೆಯಲ್ಲಿ ಕೊಚ್ಚಿಹೋಯಿತು. ನಮ್ಮ ಆಟ ಯಥಾಪ್ರಕಾರ ಏರುತ್ತ ಇಳಿಯುತ್ತ ನಡೆಯಿತು. ಶಿಸ್ತಿನ ಕ್ರಮಕೈಕೊಳ್ಳಗಾಗಿ ಎರಡನೇ ಟೆಸ್ಟಿನಲ್ಲಿ ದೂರವಿಡಲ್ಪಟ್ಟ ಸ್ನೋರನ್ನು ಈಗ ಮತ್ತೆ ಕರೆಸಲಾಗಿತ್ತು. ತಮ್ಮ ಎಲ್ಲಾ ಶಕ್ತಿಯನ್ನುಪಯೋಗಿಸಿ ಅವರು ನಮ್ಮ ಉಜ್ವಲ ಆಟಗಾರ ಗವಾಸ್ಕರರನ್ನು ತೆಗೆದರು. ಮಂಕಡ್


ಇವರಲ್ಲಿ ಯಾರಿಗೆ ಅವನ ತಾಯಿ
ಇನ್‌ಕ್ರಿಮಿನ್* ಕೊಡುತ್ತಾಳೆ?
ನಿಮ್ಮ ಊಹೆ ಸರಿ!
ಬೆಳವಣಿಗೆಯ ವರ್ಷಗಳಿಗೆ ಹೇಳಿಸಿದ ಟಾನಿಕ್‌ಇದು!
ಡ್ರಾಪ್ಸ್— 2 ತಿಂಗಳಿನಿಂದ 2 ವರ್ಷಗಳ ವರೆಗಿನ ಶಿಶುಗಳಿಗೆ
ಸಿರಪ್— 14 ವರ್ಷಗಳ ವರೆಗಿನ ಮಕ್ಕಳಿಗೆ
ಇನ್‌ಕ್ರಿಮಿನ್* ಟಾನಿಕ್
ಹೆಚ್ಚಿನ ಉಣಿಸನ್ನು ಹೆಚ್ಚಿನ ಬೆಳವಣಿಗೆಗೆ ಮಾರ್ಪಡಿಸುತ್ತದೆ.
ಡಾಕ್ಟರರು ನಂಬುವ ಹೆಸರು Lederle
ಸಯಾನಾಮಿಡ್ ಇಂಡಿಯಾ ಲಿಮಿಟೆಡ್ ಅದರ ಒಂದು ವಿಭಾಗ
* ಅಮೇರಿಕನ್ ಸಯಾನಾಮಿಡ್ ಕಂಪೆನಿಯ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್.

ದುರದೃಷ್ಟದಿಂದ ಔಟಾದರು. ಆದರೆ ಸರ್ದೇಸಾಯಿ ನನಗೆ ಕೊಟ್ಟ ಬೆಂಬಲದಿಂದ ನಾವು ಸ್ವಲ್ಪ ಗಂಡಾಂತರದಿಂದ ಪಾರಾದೆವು. ನಿರುತ್ಸಾಹಜನಕ ವಾತಾವರಣದಲ್ಲಿಯೂ ನಾನು ಚೆಂಡನ್ನು ಸರಿಯಾಗಿ ಗುರುತಿಸುತ್ತಿದ್ದೆ. ನಾವು ಸ್ಕೋರನ್ನು ೫೮ ಕ್ಕೆ ೨ ರಿಂದ ೧೧೪ಕ್ಕೆ ಸಾಗಿಸಿದಾಗ ಇಲ್ಲಿಂಗ್‌ವರ್ತ್ ಸ್ವತಃ ಬಂದು ಆಟದ ಬಣ್ಣವನ್ನು ಬದಲಿಸಿದರು.

ದಾಳಿಯ ನಿರ್ವಹಣೆ, ಯೋಗ್ಯ ಸ್ಥಾನದಲ್ಲಿ ಕ್ಷೇತ್ರರಕ್ಷಕರ ನೇಮಕ ಇವುಗಳಲ್ಲಿ ಅವರು ತೋರಿದ ಜಾಣ್ಮೆಯನ್ನು ಕಂಡಾಗ ನಮಗೆ, ಅವರು ನಾಯಕ ಪಟ್ಟವನ್ನು ಭದ್ರವಾಗಿಸಿಕೊಂಡ ಕಾರಣ ಅರ್ಥವಾಯಿತು. ಐದು ಓವರುಗಳಲ್ಲಿ ಅವರು ನಮ್ಮನ್ನು ೧೧೮ ಓಟಗಳಿಗೆ ೪ಕ್ಕೆ ಜಗ್ಗಿದರು. ಮೂರು ಗಂಟೆಗಳ ಕಾಲ ಆಡಿದ ನಾನು, ಓಟಗಳು ಸಿಗಬಹುದಾಗಿದ್ದರೂ ಅಷ್ಟೇನೂ ದೃಢ ನಿರ್ಧಾರವಿಲ್ಲದೇ ಚೆಂಡನ್ನು 'ಕತ್ತರಿಸಿ' ಔಟಾದಾಗ ನನ್ನನ್ನೇ ಶಪಿಸಿಕೊಂಡೆ.

ಇಂಥ ಪರಿಸ್ಥಿತಿಯಲ್ಲೂ ಇಂಜಿನಿಯರ್ ಮತ್ತು ಸೋಳ್ಕರ ರಭಸದಿಂದಲೇ ತಮ್ಮ ಆಟ ಪ್ರಾರಂಭಿಸಿದಾಗ ನಮ್ಮ ಎದೆ ಬಡಿದುಕೊಳ್ಳ ತೊಡಗಿತು. ಕೆಲವು ಆಟಗಾರರಿದ್ದಾರೆ—ಎದುರಾಳಿ ಚೆಂಡುಗಾರರ ಕೀರ್ತಿ ಅಥವಾ ಆಟದಲ್ಲಿನ ತಮ್ಮ ಸ್ಥಿತಿ ಅವರನ್ನೆಂದೂ ವಿಚಲಿತಗೊಳಿಸುವುದಿಲ್ಲ. ಇಂಜಿನಿಯರ್ ಮತ್ತು ಸೋಳ್ಕರ ಈ ಗುಂಪಿಗೆ ಸೇರಿದವರು. ಇಂಜಿನಿಯರ್ ತಮ್ಮೆಡೆ ಬಂದ ಎಲ್ಲ ಚೆಂಡುಗಳತ್ತ ಬ್ಯಾಟನ್ನು ಹಿಂದೆ-ಮುಂದೆ ನೋಡದೇ ಬೀಸಿದರು. ಆದರೆ ಇದು ಯಾವುದೂ, ಸೋಳ್ಕರರೊಡನೆ ಅವರು ಗಳಿಸಿದ ೯೭ ಓಟಗಳ ಜೊತೆಯಾಟದ ಭವ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಸೋಳ್ಕರರನ್ನು ೪೪ ಕ್ಕೆ ಸ್ಲಿಪ್‌ನಲ್ಲಿ ಹಿಡಿದರೆ ಇಂಜಿನಿಯರ್ ಕೊನೆಯ ಓವರಿನಲ್ಲಿ, ನಿರೀಕ್ಷಿಸಿದ್ದಕ್ಕಿಂತಲೂ ನಿಧಾನವಾಗಿ ಬಂದ ಚೆಂಡನ್ನು ಹುಕ್ ಮಾಡಲು ಯತ್ನಿಸಿ ೫೯ ಕ್ಕೆ ಔಟಾದರು. ನಾವು ಮೊದಲೆಲ್ಲಿದ್ದೆವೋ ಅಲ್ಲೇ ಮರಳಿದೆವು. ಸುದೈವದಿಂದ ಕೊನೆಯ ಮೂರು ಹುದ್ದರಿಗಳು ೫೦ ಓಟಗಳನ್ನು ಹೆಚ್ಚಿಸಿ ಇಂಗ್ಲೆಂಡಿನ ಮುನ್ನಡೆಯನ್ನು ೭೧ ಕ್ಕೆ ಸೀಮಿತಗೊಳಿಸಿದವು.

ಎರಡನೇ ಆಟದಲ್ಲಿ, ಚಂದ್ರಶೇಖರರ ಲೆಗ್‌ಬ್ರೇಕ್ ಮತ್ತು ಟಾಪ್-ಸ್ಪಿನ್ನರುಗಳಲ್ಲಿನ ವ್ಯತ್ಯಾಸ ತಿಳಿಯದೇ ಇಂಗ್ಲೆಂಡ್ ಆಟಗಾರರು ಒಬ್ಬೊಬ್ಬರಾಗಿ ಬಂದ ಹಾದೀ ಪೆವಿಲಿಯನ್ನಿಗೆ ಮರಳಿದರು. ಲಕ್‌ಹರ್ಸ್ಟ್ ಒಬ್ಬರೇ ಎರಡು ತಾಸು ಹೋರಾಡಿದರಾದರೂ ಹಟನ್‌ರನ್ನು ರಕ್ಷಿಸುವಾಗ ಅವರೂ ಬಿದ್ದರು.

ಪ್ರಾರಂಭದಲ್ಲೇ ಜೇಮ್ಸನ್ ಮತ್ತೆ ರನ್ ಔಟಾದರು. ಖಂಡಿತವಾಗಿಯೂ ಅವರು ದುರ್ದೈವಿಯಾಗಿದ್ದರು. ನಂತರ ಇಂಗ್ಲೆಂಡ್ ಆಟಗಾರರ ಸುತ್ತಲೂ ನಾವು ಬಲೆಯನ್ನೇ ಹೆಣೆದೆವು. ಬಿಗಿಯಾದ ಕ್ಷೇತ್ರರಕ್ಷಣೆಯಲ್ಲಿ ಚಂದ್ರಶೇಖರ, ವೆಂಕಟ್ ಉತ್ತಮವಾಗಿ ಚೆಂಡೆಸೆದರು. ನಮ್ಮೀ ಬಲೆಯಿಂದ ತಪ್ಪಿಸಿಕೊಂಡವರೂ ಬಹಳ ಕಾಲ ಉಳಿಯುತ್ತಿರಲಿಲ್ಲ. ಸರ್ದೇಸಾಯಿ ತಲೆಯ



ತೋಶಿಬಾ ಜನಪ್ರಿಯತೆ ಸ್ಪರ್ಧೆ

ಪ್ರವೇಶ ಶುಲ್ಕವಿಲ್ಲ-ನೀವು ಬಹುಮಾನ ಗೆಲ್ಲಲೇಬೇಕು

ಮೊದಲನೇ ಬಹುಮಾನ : ಒಂದು ವೆಸ್ಪಾ ಸ್ಕೂಟರ ಅಥವಾ ಆಲ್ವಿನ್ ರೆಫ್ರಿಜರೆಟರ **೨ ನೇ ಬಹುಮಾನ :** ಒಂದು ಟೇಪ ರೆಕಾರ್ಡರ ಅಥವಾ ಆಟೊಮ್ಯಾಟಿಕ್ ಕ್ಯಾಮರಾ ಅಥವಾ ರೇಡಿಯೋ ಗ್ರಾಂ. **೩ ನೇ ಬಹುಮಾನ** (೧೦೦) ತೋಶಿಬಾ ಮೇಡ ಜಪಾನ ೩ ಬ್ಯಾಂಡಿನ ಆಲ್ ವರ್ಲ್ಡ ಟ್ರಾನ್ಸಿಸ್ಟರ- ಬೆಲೆ ರೂ. ೨೭೫/-; **೪ ನೇ ಬಹುಮಾನ** (೧೦) ತೊ ಶಿಬಾ ಜ್ಯೂನಿಯರ್ ಮೇಡ ಜಪಾನ ೩ ಬ್ಯಾಂಡಿನ, ಆಲ್ ವರ್ಲ್ಡ ಟ್ರಾನ್ಸಿಸ್ಟರುಗಳು, ಬೆಲೆ ರೂ. ೨೫೦/-

ನೀವು ಮಾಡಬೇಕಾದ್ದೇನು : ಖಾಲಿ ಚೌಕೋನುಗಳಲ್ಲಿ ೧೧ (ಹನ್ನೊಂದು) ರಿಂದ ೨೬ (ಇಪ್ಪತ್ತಾರು)ರ ವರೆಗಿನ ಅಂಕಿಗಳನ್ನು ಒಂದು ಅಂಕಿಯನ್ನು ಒಂದೇ ಸಲ ಉಪಯೋಗಿಸಿ, ಉದ್ದವಾಗಿ, ಅಡ್ಡವಾಗಿ ಹಾಗೂ ಮೂಲೆಯಿಂದ ಮೂಲೆಗೆ ಹೇಗೆ ಕೂಡಿಸಿದರೂ ಒಟ್ಟು ೭೪ (ಎಪ್ಪತ್ನಾಲ್ಕು) ಆಗುವಂತೆ ತುಂಬಬೇಕು.

ಪ್ರವೇಶ ಶುಲ್ಕ : ಪ್ರವೇಶ ಶುಲ್ಕ ಇಲ್ಲ. ಇದೊಂದು ಮಾರಾಟವರ್ಧಕ ಸ್ಪರ್ಧೆ

ಸಹಾಯದ ನಮೂನೆ ಒಟ್ಟು ೫೪ **ಕಡೇ ತಾರೀಖು :** ೫-೫-೭೩. **ಫಲಿತಾಂಶ :** ೧೦-೫-೭೩.

೧೩	೩	೧೬	೬
೪	೯	೧೫	೪
೧೪	೧೦	೫	೯
೭	೧೭	೨	೧೨

ಸ್ಪರ್ಧೆಯ ನಿಯಮಗಳು : ೧) ಕೋರಾ ಕಾಗದ ಉಪಯೋಗಿಸಿರಿ ೨) ತಿದ್ದಿದ ಕಾಟು ಹಾಕಿದವುಗಳನ್ನು ಸ್ವೀಕರಿಸುವುದಿಲ್ಲ ೩) ಪ್ರಮೋಟರುಗಳ ನಿರ್ಣಯವೇ ಕೊನೆಯದು ಹಾಗೂ ಎಲ್ಲರಿಗೂ ಬಂಧನಕಾರಕ ಮತ್ತು ಈ ಸ್ಪರ್ಧೆಯ ಒಂದು ಸ್ಫುಟಕರಾರು ೪) ನಮ್ಮ ಕಛೇರಿಯಲ್ಲಿಟ್ಟ ಮೋಹರ ಬಂದ ಪರಿಣಾಮಕ್ಕೆ ಹೋಲಿಸಿ ಫಲಿತಾಂಶ ನಿರ್ಣಯಿಸಲಾಗುವದು ೫) ೧ ನೇ ಬಹುಮಾನ (೧) ನಮ್ಮ ಸೀಲು ಮುದ್ರೆಯ ಆಫೀಸಿಯಲ್ ಪರಿಣಾಮಕ್ಕೆ ಸರಿ ಹೋಗುವ ಪ್ರವೇಶಕ್ಕೆ ೬) ೨ ನೇ ಬಹುಮಾನ (೫) ಮೇಲಿನ ೩ ಮೂರು ಅಡ್ಡ ಸಾಲಿಗೆ ಸರಿ ಹೋಗುವ ಪ್ರವೇಶಕ್ಕೆ ೭) ೩ ನೇ ಬಹುಮಾನ: (೧೦೦) ನಮ್ಮ ಆಫೀಸಿಯಲ್, ಫಲಿತಾಂಶಕ್ಕೆ ಯಾವದೇ ಸಾಲು ಯಾವದೇ ಸಂಖ್ಯೆ ಎಲ್ಲಿಯೇ ಆಗಲಿ ಸರಿಹೊಂದುವ ಉತ್ತರಕ್ಕೆ ಕೊಡಲಾಗುವದು. (೮) ೪ ನೇ ಬಹುಮಾನ: ಪ್ರೊಮೋಟರರಿಗೆ ತೃಪ್ತಿಕರವಾಗುವ (೧೦) ಪ್ರವೇಶಗಳಿಗೆ. (೯) ಫಲಿತಾಂಶ ಪ್ರಕಟವಾದಕೂಡಲೇ ವಿಜಯಿಗಳಿಗೆ ಪೋಸ್ಟೇಜ, ಪ್ಯಾಕಿಂಗ್ ಮತ್ತು ಸಲಕರಣೆಗಳ ವೆಚ್ಚ ಭರಿಸುವ ಬಗ್ಗೆ ತಿಳಿಸಲಾಗುವದು. (೧೦) ೩ ಮತ್ತು ೪ ನೇ ಬಹುಮಾನ ಗಳಿಸಿದ ಸ್ಪರ್ಧೆಗಾರರು ಇತರ ವೆಚ್ಚವಲ್ಲದೆ ಟ್ರಾನ್ಸಿಸ್ಟರುಗಳ ಅರ್ಧದಷ್ಟು ಬೆಲೆಯನ್ನು ಕೊಡಬೇಕು. ಹಾಗೂ ನಮ್ಮ ನಿಯಮಗಳಿಗೆ ಬದ್ಧರಿರಬೇಕು. (೧೧) ಫಲಿತಾಂಶಕ್ಕಾಗಿ ೪೫ ಪೈಸೆ ಸ್ಟಾಂಪ ಕಳಿಸಿರಿ ೧೨) ಹಿಂದಿ ಅಥವಾ ಇಂಗ್ಲೀಷಿನಲ್ಲಿ ನಿಮ್ಮ ವಿಳಾಸ ಬರೆಯಿರಿ ೧೩) ಒಂದು ಕುಟುಂಬದಲ್ಲಿ ಒಂದೇ ಪ್ರವೇಶ ಕಳಿಸಬೇಕು. ೧೪) ನಿಯಮಗಳ ಪ್ರತಿ ಅಥವಾ ನಕ್ಕಲು ಮುಂದಿನ ಉಪಯೋಗಕ್ಕಾಗಿ ಕಾಯ್ದಿಡಿರಿ.

Director-Contest Department

PROFIT CIRCLE (M-74)

Post Box 1430, DEHLI-6.

ಮೇಲೆ ಬಂದ ಚೆಂಡನ್ನು ಹಿಡಿದುಬಿಟ್ಟಿದ್ದರೆ, ಡಾಲಿವಿರಾ ಚಂದ್ರಶೇಖರರಿಗೇ ಬಲಿಯಾಗುತ್ತಿದ್ದರು. ಆದರೆ ಇಂಗ್ಲಂಡ್ ಸ್ಕೋರು ೫೦ಕ್ಕೇರುವಷ್ಟರಲ್ಲಿ ವೆಂಕಟ್ ಅವರನ್ನು ತೆಗೆದರು. ಚಂದ್ರಶೇಖರ ಒಂದು ಕಡೆ ಒಂದಾದ ಮೇಲೆ ಒಂದರಂತೆ ವಿಕೆಟ್ ಉರುಳಿಸುತ್ತಿದ್ದಾಗ ಇನ್ನೊಂದು ಕಡೆ ಓಟಗಳನ್ನು ನಿಯಂತ್ರಿಸಲು ನಾನು ವೆಂಕಟರನ್ನು ತಂದಿದ್ದೆ. ಅವರೂ ತಮ್ಮ ಉತ್ತಮ ಗುರಿ, ಅಳತೆಗಳಿಂದ ಇಂಗ್ಲಂಡಿನ ಆಟಗಾರರನ್ನು ಪೀಡಿಸಿದರು. ಮಧ್ಯಾಹ್ನವಾಗುವಷ್ಟರಲ್ಲಿ ಆಟದ ಪರಿಣಾಮವೇನೆಂಬುದು ನಿರ್ಧಾರವಾಗಿ ಹೋದಂತಾಗಿತ್ತು. ಪೋರ್ಟ್ ಆಫ್ ಸ್ಪೇನಿನಲ್ಲಿ ದುರಾನಿ ಸೋಬರ್ಸ್, ಲಾಯ್ಡರನ್ನು ಬಲಿ ತೆಗೆದುಕೊಂಡು ವಿಜಯದ ದಾರಿ ತೋರಿಸಿದ್ದರು. ಓವಲ್‌ನಲ್ಲಿ ಚಂದ್ರಶೇಖರ ಸತತ ಚೆಂಡುಗಳಲ್ಲಿ ಎಡ್ರಿಚ್ ಮತ್ತು ಫ್ಲೆಚರ್‌ರನ್ನು ಸೊನ್ನೆಗೆ ಕೆಡವಿದಾಗ ಈ ಪಂದ್ಯ ನಮ್ಮದಾಯಿತೆಂದು ನನಗನಿಸಿತು.

ಮಾರಕವಾಗಿ ಸ್ಫೋಟಿಸಿದ ಮುಂದಿನ ಮೂರು ಓವರುಗಳಲ್ಲಿ ಒಂದೂ ಓಟವನ್ನೂ ನೀಡದೇ ಚಂದ್ರಶೇಖರರು ಇಲ್ಲಿಂಗ್‌ವರ್ತ್, ಲಕ್‌ಹರ್ಸ್ಟ್ ಮತ್ತು ಸ್ನೋರನ್ನು ಕೆಡವಿದರು. ಮುಂದೆ ವೆಂಕಟರ ಸರದಿಯಲ್ಲಿ ಸೋಳ್ಕರ ನಾಟ್‌ರನ್ನು ಉಚ್ಚಾಟಿಸಿದಾಗ ನಾವು ನಿಶ್ಚಿಂತೆಯ ಉಸಿರು ಬಿಟ್ಟೆವು.

ಅವರ ಬಾಲಂಗೋಚಿಗಳು ಆ ಮೊದಲು ನಮ್ಮನ್ನು ಸಾಕಷ್ಟು ಪೀಡಿಸಿದ್ದರಿಂದ ನಾನು ಅವರಿಗೆ ಯಾವ ಅವಕಾಶವನ್ನೂ ಕೊಡಲು ತಯಾರಿರಲಿಲ್ಲ. ಚಂದ್ರಶೇಖರರಿಗೆ ವಿಶ್ರಮಿಸಲು ಹೇಳಿ ಬೇದಿಯವರನ್ನು ತಂದೆ. ಅಂಡರ್‌ವುಡ್ಡರನ್ನು ಕೆಡವಲು ಅವರಿಗೆ ಒಂದೇ ಓವರ್ ಸಾಕಾಯಿತು. ಆಟವನ್ನು ಮುಗಿಸಲು ಚಂದ್ರಶೇಖರರಿಗೇ ಹೇಳಿದೆ. ಇಲ್ಲದಿದ್ದರೆ ಹಟನ್ ಗಂಡಾಂತರಕಾರಿಯೆನಿಸಬಹುದಿತ್ತು. ೧೮.೧–೩–೩೮–೬ರ ಚಂದ್ರಶೇಖರರ ಅಂಕಿಗಳನ್ನು ಬಂಗಾರದ ಅಕ್ಷರಗಳಲ್ಲಿ ಕೊರೆದಿಡಬೇಕು. ಕೇವಲ ಎರಡೂವರೆ ತಾಸಿನಲ್ಲಿ ಇಂಗ್ಲಂಡ್ ಬ್ಯಾಟಿಂಗನ್ನು ನಾಶಮಾಡಿ ಅವರು ವಿಜಯದ ಆಸೆಗಳನ್ನೇರಿಸಿದರು.

ಆದರೆ ನಮಗಾಗಿ ಒಂದೆರಡು ಆಘಾತಗಳು ಕಾದಿದ್ದವು. ಸ್ನೋರ ಮೂರನೇ ಓವರಿನಲ್ಲಿ ಗವಾಸ್ಕರ ಔಟಾದರು. ನಾನು ಮತ್ತು ಮಂಕಡ್ ಸ್ಕೋರನ್ನು ೩೭ಕ್ಕೆ ಒಯ್ದೆವು. ಸರ್ದೇಸಾಯಿ ಬಂದವರು ಗಟ್ಟಿಯಾಗಿ ನಿಂತು ದಿನದ ಕೊನೆಯವರೆಗೂ ಆಡಿದರು. ನಾವು ನಿಧಾನವಾಗಿ ೭೬ಕ್ಕೆ ೨ರವರೆಗೆ ಸಂಜೆಯಾಗುವಷ್ಟೊತ್ತಿಗೆ ಸಾಗಿದಾಗ ವಿಜಯದ ಬಂಗಾರದ ಬಾಗಿಲುಗಳು ತೆರೆದಿವೆಯೆಂದು ನನಗನಿಸಿತು.


ಕೊನೆಯ ದಿನ ರೋಮಾಂಚಕಾರಿಯಾಗಿತ್ತು. ಇಂಗ್ಲೀಷರು ಸುಮ್ಮನೇ ಬಿಟ್ಟುಕೊಡಲಿಲ್ಲ. ಇಲ್ಲಿಂಗ್‌ವರ್ತ್ ಮತ್ತು ಅಂಡರ್‌ವುಡ್, ಸ್ಪಿನ್ ತೆಗೆದುಕೊಳ್ಳುತ್ತಿದ್ದ ವಿಕೆಟ್ ಮೇಲೆ ಬಿಗಿಯಾಗಿ ಬೌಲಿಂಗ್ ಮಾಡಿದರು. ತಪ್ಪು ತಿಳುವಳಿಕೆಯಿಂದ ನಾನು ಮುಂಜಾನೆಯೇ ರನ್–ಔಟ್ ಆದಾಗ ನಮ್ಮ ಅಭಿಮಾನಿಗಳೆಷ್ಟೋ ಜನರ ಎದೆಯು ಬಡಿತ ಒಂದು ಕ್ಷಣ ನಿಂತಿರಲೂ ಸಾಕು. ಆದರೆ ನನಗೇನೂ ವಿಶೇಷ ಚಿಂತೆಯಾಗಲಿಲ್ಲ. ಯಾಕೆಂದರೆ ವಿಶ್ವನಾಥ, ಸರ್ದೇಸಾಯಿ ಆತ್ಮವಿಶ್ವಾಸದಿಂದ ಆಡಿದರು. ವಿಶೇಷತಃ ಸರ್ದೇಸಾಯಿ ಯಾವಾಗಲೂ ಓಟಗಳ ಕಡೆಗೆ ಲಕ್ಷ್ಯ ಕೊಟ್ಟಿದ್ದರು. ಸರ್ದೇಸಾಯಿ ಚೆಂಡು ವಿಕೆಟ್‌ಹಿಂದೆ ಹಿಡಿಯಲ್ಪಟ್ಟಾಗ ಇನ್ನೂ ೫೦ ಓಟಗಳು ನಮಗೆ ಬೇಕಾಗಿದ್ದವು. ಈಗ ಕಂಗೆಡಿಸುವಂಥ ಕೆಲ ಸೂಚನೆಗಳು ಕಂಡವಾದರೂ ಇಂಜಿನಿಯರ್ ಮತ್ತು ವಿಜಯದ ಓಟವನ್ನು ಗಳಿಸಿದ ಆಬಿದ್ ಅಲಿಯವರು ಧೈರ್ಯದಿಂದ ಆಡಿ ಗೆಲವನ್ನು ತಂದು ಕೊಟ್ಟರು.

ಜನರ ಶುಭಾಕಾಂಕ್ಷೆಗಳನ್ನು ಸ್ವೀಕರಿಸಲು ಬಾಲ್ಕನಿಗೆ ಬಂದಾಗ ನಮ್ಮ ತ್ರಿವರ್ಣ ಧ್ವಜ ಪೆವಿಲಿಯನ್ ಮುಂದೆ ಹಾರಾಡುತ್ತಿದ್ದುದನ್ನು

ನೋಡಿ ಅಭಿಮಾನವೆನಿಸಿತು. ಕೊನೆಗೂ ನಾವ ದನ್ನು ಸಾಧಿಸಿದ್ದೆವು.—ಇಂಗ್ಲಂಡ್ ಮೇಲೆ ಇಂಗ್ಲಂಡಿನಲ್ಲಿಯೇ ವಿಜಯ. ನಮ್ಮ ಬೆಂಬಲಿಗರು ಘೋಷಿಸುತ್ತಿದ್ದಂತೆ ನಾನು ನಮ್ಮ ಉತ್ಸಾಹ ದಲ್ಲಿ ಭಾಗಿಯಾಗುವ ಲಕ್ಷಾಂತರ ಜನರ ಕುರಿತು ಯೋಚಿಸಿದೆ.

ಅತ್ಯಂತ ಸಮಾಧಾನ ಮತ್ತು ಸಂತೃಪ್ತಿಯ ಭಾವನೆ ನಮ್ಮನ್ನಾವರಿಸಿತು. ನಮ್ಮ ಕನಸಿನಲ್ಲೂ ಸಾಧ್ಯವಿರದ್ದನ್ನು ನಾವು ಸಾಧಿಸಿದ್ದೆವು. ನಮ್ಮ ಆಟಗಾರರೆಲ್ಲ ಸ್ವಚ್ಛಂದವಾಗಿ ಕುಡಿದು ತಿಂದಾಗ ಹೇಮು ಅಧಿಕಾರಿ ಸಹ ಅದರಲ್ಲಿ ಭಾಗಿಯಾದರು. ನಮಗೆ ಭಾರತೀಯ ಹೋಟೆಲೊಂದರಲ್ಲಿ ಒದಗಿಸಿದ ರಾಶಿ ರಾಶಿ ಆಹಾರದಲ್ಲಿ ವಾಡೇಕರ ಕಟ್‌ಲೆಟ್, ಗವಾಸ್ಕರ ಸಾರು, ಬೇದಿ ಪಲಾವ್‌ಗಳ ಜೊತೆಗೆ ಇಂಗ್ಲೀಷ್ ಬ್ಯಾಟ್ಸಮನ್‌ಗಳು ಹಿಂದಿನ ದಿನವೇ ಸಿಕ್ಕಿಬಿದ್ದಿದ್ದ ಚಂದ್ರಶೇಖರ ಸೂಪು ಸಹ ಇದ್ದವು. ಸಮುದ್ರದಂಡೆ ಗುಂಟ ಸುತ್ತಾಡಿ ನಾವು ನಮ್ಮ ಹೋಟೆಲನ್ನು ಹುಡುಕಿಕೊಂಡಾಗ ಮಧ್ಯರಾತ್ರಿ ಮೀರಿತ್ತು. ✡

(ಶ್ರೀ ಅಜಿತ ವಾಡೇಕರರ ಈ ಪುಸ್ತಕ ರಿಯಾಯತಿ ದರದಲ್ಲಿ ಬೇಕಿದ್ದವರು ಶ್ರೀ ಸಂಜಯ ಹಾವನೂರ, ೨ ಸ್ಯಾಂಡ್ಹರ್ಸ್ಟ್ ಹೌಸ್, ಮಿಯರ್‌ವೆದರ್ ರೋಡ್, ಮುಂಬಯಿ-೧ ಈ ವಿಳಾಸಕ್ಕೆ ಬರೆಯಬಹುದು.)



"ಎಲ್ಲ ಮುಗಿದು ಹೋಗಿದೆ. ಪಂದ್ಯವನ್ನು ನೀವು ಗೆದ್ದಿದ್ದೀರ. ಅದೇ; ಅಲ್ಲಿ ಬಾಲ್ಕನಿಗೆ ಬರಲು ಜನ ನಿಮ್ಮನ್ನು ಕರೆಯುತ್ತಿದ್ದಾರೆ."–ಓವಲ್ ಪಂದ್ಯದಲ್ಲಿ ಭಾರತ ವಿಜಯಿಯಾಗುತ್ತಿದ್ದ ರೋಮಾಂಚಕಾರಿ ಕ್ಷಣದಲ್ಲಿ ನಾಯಕ ಅಜಿತ ವಾಡೇಕರರು ಡ್ರೆಸ್ಸಿಂಗ್ ರೂಮಿನ ಖುರ್ಚಿಯೊಂದರಲ್ಲಿ ಹಾಯಾಗಿ ನಿದ್ರಿಸುತ್ತಿದ್ದರು. ಆಗ ಅವರನ್ನೆಬ್ಬಿಸಿದವರು ಒಮ್ಮೆ ಇಂಗ್ಲಂಡಿನ ಟೆಸ್ಟ್ ಆಟಗಾರರಾಗಿದ್ದು ಈಗ ಪತ್ರಿಕಾ ವರದಿಗಾರರಾಗಿರುವ ಕೆನ್ ಬ್ಯಾರಿಂಗ್ಟನ್.

ವಾಡೇಕರರ ಈ ಸುಖನಿದ್ರೆಯ ಕುರಿತು 'ಡೇಲಿ ಮೇಲ್'ನಲ್ಲಿ ಅಲೆಕ್ಸ್ ಬ್ಯಾನಿಸ್ಟರು ಬರೆದುದಿಂತು. "ಆಲಾಮೇನ್ ದಾಳಿಗೆ ಮುಂಚೆಯೆ ತಮ್ಮ ಯೋಜನೆಗಳನ್ನೆಲ್ಲ ಪೂರ್ತಿ ಸಿದ್ಧಗೊಳಿಸಿಟ್ಟು ಆತ್ಮವಿಶ್ವಾಸದಿಂದ ಹಾಯಾಗಿ ನಿದ್ರೆ ಹೋಗಿದ್ದ ಜನರಲ್ ಮಾಂಟೇಗ್‌ಮರಿಯವರಂತೆ (ವಾಡೇಕರ) ನಿದ್ರಿಸಿದ್ದರು."

This Magazine owned by the Loka Shikshana Trust, Hubli, is printed & published by. B. G. Guttal at the Samyukta Karnatak Press, Koppikar Road, Hubli.

Representatives: Bombay: V. S. Mani, Phone: 472794; Calcutta: H. Muzamdar 168/Dhakuria Station Road Phone: 46-4238. Madras: P. M. Srinivasan, Phone: 33748; New Dehli P. R. Chopra, Phone: 225130.

KASTURI PRICE : 1-50 Regd. No. BG 131
Registered with the Registrar of Newspapers of India under No. 3633/57